Visit Dwarkadheeshvastu.com For
FREE Vastu Consultancy, Music, Epics, Devotional Videos
Educational Books, Educational Videos, Wallpapers
****
All Music is also available in CD format. CD Cover can also be print with your Firm Name
****
We also provide this whole Music and Data in PENDRIVE and EXTERNAL HARD DISK.
Contact : Ankit Mishra (+91-8010381364, dwarkadheeshvastu@gmail.com)

****

SHREMAD VALMIKI RAMAYAN

(SUNDAR KAND)

(Kannad)

****

ಹೊಳೆಯುತ್ತಿರುವ ಕಣ್ಣುಗಳು, ತೊಂಡೆಯ ಹಣ್ಣಿನಂತೆ ಕಂಗೊಳಿಸುತ್ತಿರುವ ತುಟಿಗಳು, ಇಡೀ ದೇಹವೇ ಸುಂದರ ಸ್ವರ್ಣಪರ್ವತದ ಪ್ರತಿರೂಪ – ಹೀಗೆ ಯೋಗಿಗಳ ಒಳಹೊರ ದೃಷ್ಟಿಗಳಿಗೆ ಉತ್ಸವವಾಗುವ ದಿವ್ಯಸೌಂದರ್ಯದ ರಾಶಿ ಆತನ ಶ್ರೀದೇಹ. 'ಕಾಂಚನಾದ್ರಿ ಕಮನೀಯವಿಗ್ರಹಂ'. ತೋಳುಗಳಿರಡನ್ನೂ ಚಾಚಿಕೊಂಡು ಮಹಾಸಮುದ್ರವನ್ನು ಹಾರುವಾಗಲಂತೂ ಆತನ ಬೃಹದಾಕಾರದ ದೇಹವು ರೆಕ್ಕೆಗಳಿಂದ ಕೂಡಿದ ಮಹಾಪರ್ವತವೋ ಎಂಬಂತೆ ತೋರುತ್ತದೆ. ಸಾಕ್ಷಾತ್ ಗರುಡದೇವರಂತೆಯೇ ಕಾಣುತ್ತನೆ. ಅದೇ ಬೃಹದಾಕಾರ, ಅದೇ ವೇಗ, ಅದೇ ಬಲ. ಬಾಲವೂ ಗರುತ್ಮಂತನು ರಭಸದಿಂದ ಆಕಾಶದಲ್ಲಿ ಒಯ್ಯುತ್ತಿರುವ ಸರ್ಪದಂತೆ ಬಳುಕುತ್ತಿದೆ. ಹೀಗೆಯೇ ಆತನ ಗುಣ-ಶೀಲಗಳೂ ಅಷ್ಟೇ ಸುಂದರವಾಗಿವೆ.

ತನ್ನ ಮಾತಿನ ಜಾಣ್ಮೆಯಿಂದ ಪ್ರಥಮ ಸಂದರ್ಶನದಲ್ಲೇ ಶ್ರೀರಾಮನ ಹೃದಯವನ್ನು ಸೂರೆಗೊಂಡಿದ್ದವನು ಅವನು. ಸೀತಾದೇವಿಗೆ ಶ್ರೀರಾಮನ ಸಮಾಚಾರವನ್ನು ಕೊಟ್ಟುನಂಬಿಕೆಯನ್ನುಂಟುಮಾಡಿ ಸಮಾಧಾನ ಹೇಳುವಾಗಲೂ, ರಾಕ್ಷಸರಿಗೆ ಸವಾಲು ಹಾಕುವಾಗಲೂ, ರಾಕ್ಷಸರಾಜನಿಗೆ ತಿಳಿವಳಿಕೆ ಮತ್ತು ಎಚ್ಚರಿಕೆಯ ಮಾತುಗಳನ್ನು ಆಡುವಾಗಲೂ, ಶ್ರೀರಾಮನಿಗೆ ಸೀತಾದೇವಿಯ ಸಮಾಚಾರ-ಸಂದೇಶಗಳನ್ನು ಮುಟ್ಟಿಸುವಾಗಲೂ – ಇದೇ ಮಾತಿನ ಪಾಟವವನ್ನು ಅವನಲ್ಲಿ ಕಾಣುತ್ತೇವೆ. ಅವನ ಸ್ಮರಣೆಮಾಡಿದರೂ ಮಾತಿನ ಪಾಟವ ಉಂಟಾಗುತ್ತದೆಯಲ್ಲವೇ? **ಅಜಾಡ್ಯಂ ವಾಕ್ಪಟುತ್ವಂ ಚ ಹನೂಮತ್ಸ್ಮರಣಾದ್ಭವೇತ್.**

ಆದಟು, ಉತ್ಸಾಹ, ಧೈರ್ಯ, ಸಮಯಸ್ಫೂರ್ತಿ ಮತ್ತು ಪರಾಕ್ರಮಗಳಲ್ಲಿ ಆತನಿಗೆ ಸರಿಸಮರಾರು? ಎಂತಹ ವಿಷಮ ಪರಿಸ್ಥಿತಿಯಲ್ಲೂ ಆತನು ಮನಸ್ಸಿನ ಹತೋಟಿಯನ್ನು ಕಳೆದುಕೊಳ್ಳುವುದಿಲ್ಲ. ನಿರ್ವೇದವು ಮಿತಿಮೀರಿ ಬಂದಾಗ ಅದಕ್ಕೆ ಸ್ವಲ್ಪ ಅವಕಾಶಕೊಟ್ಟರೂ ಶೀಘ್ರದಲ್ಲಿ ಅದನ್ನು ಓಡಿಸಿ ಉತ್ಸಾಹದಿಂದ ಕಾರ್ಯತತ್ಪರನಾಗುತ್ತಾನೆ. ಭಯವೆಂಬುದನ್ನೇ ಅರಿಯದ ಕಲಿ ಈ ಮಾರುತಿ. ಸುರಸೆಯೋ, ಸಿಂಹಿಕೆಯೋ, ಲಂಕಿಣಿಯೋ, ರಾಕ್ಷಸರಾಜನ ಸೈನಿಕವೀರರೋ ಅಥವಾ ಸ್ವಯಂ ತ್ರಿಲೋಕ್ಯತಲ್ಲಣನಾದ ರಾವಣನೋ – ಯಾರಾದರೇನು? ಯಾರ ಮುಂದೆಯೂ ಆತ ಎದೆಗುಂದುವುದಿಲ್ಲ. ಯಾವ ವಿಘ್ನವೂ ಆತನನ್ನು ಹೆಚ್ಚುಕಾಲ ತಡೆಯಲಾರದು. ಯಾರನ್ನು ಬುದ್ಧಿಬಲದಿಂದ ಗೆಲ್ಲಬೇಕು? ಯಾರನ್ನು ದೇಹಬಲದಿಂದ ಜಯಿಸಬೇಕು? ಯಾರನ್ನು ಇವೆರಡರಿಂದಲೂ ಗೆಲ್ಲಬೇಕು? ಎಂಬುದನ್ನು ಶೀಘ್ರವಾಗಿಯೇ ನಿರ್ಣಯಿಸಿ ಕಾರ್ಯಪ್ರವೃತ್ತನಾಗಿ ಜಯಗಳಿಸಿಬಿಡುತ್ತಾನೆ. ಆತನನ್ನು ಯುದ್ಧದಲ್ಲಿ ಎದುರಾಯಿಸಿ ಬದುಕಿಹೋದವನು ಇಂದ್ರಜಿತುವೊಬ್ಬನೇ. ಬ್ರಹ್ಮದೇವರನ್ನು ಗೌರವಿಸುವುದಕ್ಕೋಸ್ಕರ ಆವನ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದರೂ ಆದನ್ನು ರಾವಣನ ಸಂದರ್ಶನಕ್ಕೆ ಸಾಧನವನ್ನಾಗಿ ಉಪಯೋಗಿಸಿಕೊಳ್ಳುತ್ತಾನೆ.

ಹೊರಗಿನ ಶತ್ರುಗಳನ್ನು ಗೆಲ್ಲುವುದರಲ್ಲಿ ಮಾತ್ರವಲ್ಲ, ಒಳಗಿನ ಮಹಾಶತ್ರುವಾದ ದುಷ್ಟ ಕಾಮವನ್ನು ಗೆಲ್ಲುವುದರಲ್ಲೂ ಆದನು ಅದ್ವಿತೀಯ– **ಶಂಬರವೈರಿರತಿಗಂ ಭೋಗ-ಭಾಗ್ಯಗಳ ಆಗರವಾಗಿದ್ದ ರಾವಣನ ಅಂತಃಪುರದಲ್ಲಿ ಸಾನಾಭಂಗಿಗಳಲ್ಲಿ ನಿದ್ರಿಸುತ್ತಿದ್ದ** ಸುಂದರಿಯರ ಸಮೂಹವನ್ನು ಕಾರ್ಯವಶದಿಂದ ದಿಟ್ಟಿಸಿದಾಗಲೂ ಆತನ ಮನಸ್ಸಿನಲ್ಲಿ ಕಿಂಚಿತ್ತೂ ವಿಕಾರವುಂಟಾಗಲಿಲ್ಲ. ಇದಕ್ಕೆ ಅವನ ಅನುಭವವೇ ಸಾಕ್ಷಿ ಹೇಳುತ್ತದೆ. **ನ ತು ಮೇ ಮನಸಾ ಕಿಂಚಿತ್ ವೈಕೃತ್ಯಮುಪಪದ್ಯತೇ ; ಮನೋ ಹಿ ಹೇತುಃ ಸರ್ವೇಷಾಮಿಂದ್ರಿಯಾಣಾಂ ; ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ ;** 'ವಿಕಾರಗೊಳ್ಳಿಸುವ ಸನ್ನಿವೇಶ-ಸಾಮಗ್ರಿಗಳು ಹೇರಳವಾಗಿದ್ದರೂ ಯಾವನ ಮನಸ್ಸು ವಿಕಾರಕ್ಕೆ ಒಳಗಾಗುವುದಿಲ್ಲವೋ ಆತನೇ ನಿಜವಾಗಿಯೂ ಧೀರನು.' ಇಂತಹ ಧೀರರಿಗೆ ಅದ್ಭುತ ಉದಾಹರಣೆ ಭಗವಂತನಾದ ನಾರಾಯಣಮುನಿ, ಶ್ರೀರುದ್ರದೇವರು ಮತ್ತು ನಮ್ಮ ಈ ಮಾರುತಿ. ಮಾರುತಿಯು ರುದ್ರದೇವರ ಒಂದು ಅಂಶಾವತಾರವೆಂದು ಶಿವಪುರಾಣ ಹೇಳುತ್ತದೆ.

ಆತನು ಮಾಡಿದ ಸಮುದ್ರಲಂಘನ, ಸೀತಾನ್ವೇಷಣವಿಜಯ, ಮಹಾಶಕ್ತುನಿಬರ್ಹಣ ಮತ್ತು ಲಂಕಾದಹನ – ಇವು ಇತರರಿಗೆ ಊಹಿಸಲೂ ಆಗದ ಕೆಲಸ. ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸುಗಳಿಗೆ ಆಯತನನಾದ ಶ್ರೀರಾಮಚಂದ್ರನೇ ಈ ಬಗೆಗೆ ಆತನನ್ನು ಅಭಿನಂದಿಸುತ್ತಾನೆ.

ಕೃತಂ ಹನುಮತಾ ಕಾರ್ಯಂ ಸುಮಹದ್ಭುವಿ ದುರ್ಲಭಮ್ । ಮನಸಾಪಿ ಯದನ್ಯೇನ ನ ಶಕ್ಯಂ ಧರಣೀತಲೇ॥

(ಯುದ್ಧಕಾಂಡ – ಸರ್ಗ ೧)

ಸೀತೆಯು ಇರುವ ಜಾಗವನ್ನು ಪತ್ತೆಮಾಡುವುದು ಮತ್ತು ಆಕೆಗೆ ಶ್ರೀರಾಮನ ಸಂದೇಶ-ಅಭಿಜ್ಞಾನಗಳನ್ನು ಮುಟ್ಟಿಸುವುದು ಇಷ್ಟು ಮಾತ್ರ ಅವನು ಮಾಡಿದ್ದರೆ ಅದು ಸಾಮಾನ್ಯದೂತನ ಕಾರ್ಯವಾಗುತ್ತಿತ್ತು. ಆದರೆ ಈತನ ಸಾಧನೆ ಎಷ್ಟು ದೊಡ್ಡದು! ಮೇಲ್ಕಂಡ ಕೆಲಸಗಳ ಜೊತೆಗೆ ಸೀತೆಗೆ ಸಮಾಧಾನ ಹೇಳಿ ಆಕೆಯು ಪ್ರಾಣಧರಿಸುವಂತೆ ಮಾಡುತ್ತಾನೆ. ರಾವಣೇಶ್ವರನ ಮಹಾಸೇನೆಯನ್ನೂ, ಸೇನಾಪತಿಗಳನ್ನೂ ಬಡಿದುಹಾಕಿ ತನ್ನ ಮಹಾಶಕ್ತಿಯ ಪರಿಚಯವನ್ನು ಶತ್ರುಗಳಿಗೆ ಮಾಡಿಕೊಡುತ್ತಾನೆ. ಲಂಕೆಯ ಆಯಕಟ್ಟಿನ ಸ್ಥಾನಗಳನ್ನೂ ಶತ್ರುಗಳ ಬಲಾಬಲವನ್ನೂ ತಾನು ಪರಿಚಯಮಾಡಿಕೊಳ್ಳುತ್ತಾನೆ. (ಅರಿವಿನಿಂದ ವಿಭೀಷಣನ ಗೃಹ ಮತ್ತು ಅರಿಯದೇ ಸೀತಾದೇವಿಯು ಇದ್ದ ಸ್ಥಾನಗಳನ್ನು ಬಿಟ್ಟು) ಇಡೀ ಲಂಕಾನಗರಿಯನ್ನು ಅಗ್ನಿದೇವರಿಗೆ ಆಹುತಿ ಕೊಟ್ಟುಬಿಡುತ್ತಾನೆ.

ಇಷ್ಟೆಲ್ಲಾ ಬಲದೋರಿದ ತಾನು ಸುಗ್ರೀವರಾಯನ ಸೇನೆಯಲ್ಲಿ ಒಬ್ಬ ಸಾಧಾರಣ ವಾನರ, ತನಗಿಂತ ಪರಾಕ್ರಮಿಗಳು ಆ ಸೇನೆಯಲ್ಲಿ ಲಕ್ಷಾಂತರ ಮಂದಿ ಇದ್ದಾರೆ – ಎಂದು ಘೋಷಣೆಮಾಡಿ ಶತ್ರುಗಳ ಗರ್ವವನ್ನು ಮುರಿದು ಅವರಲ್ಲಿ ಭಯವನ್ನು ತುಂಬಿ, ಮುಂದೆ ನಡೆಯುವ ಯುದ್ಧದಲ್ಲಿ ವಾನರರ ಕೆಲಸವನ್ನು ಸುಲಭಗೊಳಿಸುತ್ತಾನೆ ಮತ್ತು ತನ್ನ ಈ ಎಲ್ಲಸಾಧನೆಗಳನ್ನೂ ತನ್ನ ಮಿತ್ರರಲ್ಲೂ ಮತ್ತು ಪ್ರಭುದೇವರಲ್ಲೂ ಅರಿಕೆಮಾಡಿಕೊಂಡು ಅವರಲ್ಲಿ ಆನಂದ-ಉತ್ಸಾಹಗಳನ್ನು ತುಂಬುತ್ತಾನೆ. ಅವನ ಈ ಆದ್ಯುತವಾದ ದೌತ್ಯ ನಿರ್ವಹಣೆಯ ಆದರ್ಶವನ್ನು ಗುಣಜ್ಞನಾದ ಶ್ರೀರಾಮಚಂದ್ರನೇ ಕೊಂಡಾಡುತ್ತಾನೆ.

ಯೋ ಹಿ ಭೃತ್ಯೋ ನಿಯುಕ್ತಃ ಸಂಭರ್ತ್ಯಾ ಕರ್ಮಣಿ ದುಷ್ಕರೇ। ಕುರ್ಯಾತ್ತದನುರೂಪೇಣ ತಮಾಹುಃ ಪುರುಷೋತ್ತಮಮ್॥

(ಯುದ್ಧಕಾಂಡ – ಸರ್ಗ ೧೭)

ಇಷ್ಟೆಲ್ಲಾ ಮಹತ್ಕಾರ್ಯ ಮಾಡಿದ ತಾನು ಯಾರು? ಎಂದರೆ ರಾಮದೇವರ ಒಬ್ಬ ದಾಸ, ಮತ್ತು ಅವನಿಂದ ಪೋಷಿತನಾದ ಸುಗ್ರೀವರಾಯರ ಬಂಟ ಎಂದು ಹೇಳಿಕೊಳ್ಳುವ ಆತನ ವಿನಯಸಂಪತ್ತೂ ಎಷ್ಟು ಸುಂದರವಾಗಿದೆ!

ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ।
ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ॥

ಕಪಿಮುಖ್ಯನಾದ ಹನುಮಂತನಲ್ಲಿ ಇಷ್ಟೆಲ್ಲಾ ಬಹಿರಂಗ ಮತ್ತು ಅಂತರಂಗ ಸೌಂದರ್ಯವಿದ್ದರೂ ಆತನ ಪಾತ್ರದ ಸೌಂದರ್ಯ – ಅವೆಲ್ಲಕ್ಕಿಂದಲೇ ಈ ಕಾಂಡಕ್ಕೆ ಸುಂದರಕಾಂಡವೆಂದು ಹೆಸರು ಬಂದಿದೆಯೆಂದು ಹೇಳಲಾಗುವುದಿಲ್ಲ. ಹನುಮಂತನು ಸ್ವಭುವ್ಯಾನಾದ ದಾಸಶ್ರೇಷ್ಠ. ತನ್ನ ಪ್ರಭುವಿನ ವೃದ್ಧಿಯಲ್ಲೇ ತನ್ನ ವೃದ್ಧಿಯನ್ನು ಕಾಣುವವನು. **ವರ್ಧಯೇ ರಾಮವೃದ್ಧ್ಯರ್ಥಂ ಸಮುದ್ರ ಇವ ಪರ್ವಸು;** ಅವನ ಹೃದಯನಾಯಕನಾಗಿ ಪುರುಷರಿಗೂ ಮೋಹನರೂಪನಾಗಿ ಸುಂದರತಮನಾಗಿರುವ ಶ್ರೀರಾಮನ ಅಪ್ರತಿಮ ಸೌಂದರ್ಯದ ಭವ್ಯವರ್ಣನೆಯನ್ನೂ ಇಲ್ಲಿ ಕಾಣುತ್ತೇವೆ. ಆವನ ದೇಹಸೌಂದರ್ಯ ಮತ್ತು ಆತ್ಮಸೌಂದರ್ಯ – ಎರಡೂ ಅಪ್ರತಿಮವಾಗಿ ಚಿತ್ರಿತವಾಗಿವೆ. ಮೃತಸಂಜೀವಿನಿಯಾದ ಶ್ರೀರಾಮನ ಕಥೆ ಮರಳಿ-ಮರಳಿ ಇಲ್ಲಿ ವರ್ಣಿತವಾಗಿದೆ. ಅದನ್ನು ಭಕ್ತವರೇಣ್ಯನಾದ ಸುಂದರ ಕಪಿವೀರ ಆಂಜನೇಯನೇ ಕೀರ್ತನೆ ಮಾಡುತ್ತಾನೆ. ಅಂತೆಯೇ ಸೌಂದರ್ಯನಿಧಿಯಾದ ಕಥಾನಾಯಕಿ ಸೀತೆಯ ದೇಹಸೌಂದರ್ಯ ಮತ್ತು ಗುಣಶೀಲಗಳ ಸೌಂದರ್ಯವೂ ಸುಂದರವಾಗಿ ಚಿತ್ರಿತವಾಗಿದೆ.

ಅಂತೆಯೇ ಉತ್ಸಾಹ, ಆನುತ್ಸಾಹ, ಆಸೆ, ನಿರಾಸೆ, ಶೋಕ, ಸಂತೋಷ, ಸಂಭ್ರಮ – ಮುಂತಾದ ಬೇರೆ ಬೇರೆ ಸ್ಥಿತಿಗಳಲ್ಲಿ ಶ್ರೀಆಂಜನೇಯ, ಶ್ರೀಸೀತಾದೇವಿ, ಶ್ರೀರಾಮಚಂದ್ರ ಮುಂತಾದವರ ಮನೋವಿಶ್ಲೇಷಣೆಯೂ ಅತಿಸುಂದರವಾಗಿ ಇಲ್ಲಿ ನಿರೂಪಿತವಾಗಿದೆ.

ಹನುಮದ್ವಿಜಯಂ ಕಾಂಡಂ ಯಃ ಪಾಠಯೇಣ ಮಾಚರೇತ್ ಎಂಬ ಪುರಾಣೋಕ್ತಿಯಂತೆ ಈ ಸುಂದರಕಾಂಡದ ಪಾರಾಯಣೆಯು ಸಕಲ ಸಿದ್ಧಿಗಳ ಆಗರ. ಭಕ್ತಿ-ಶ್ರದ್ಧೆಗಳಿಂದ ಇದನ್ನು ಪಠಿಸಿದರೆ ಮಾರುತಿಯ ಮತ್ತು ಅವನ ಸ್ವಾಮಿಯಾದ ಶ್ರೀರಾಮಪ್ರಭುವಿನ ಕೃಪೆಗೆ ಪಾತ್ರರಾಗುವುದರಲ್ಲಿ ಸಂದೇಹವೇ ಇಲ್ಲ.

ಭಾರತೀಯ ಸಂಸ್ಕೃತಿ ಪ್ರಚಾರಕ್ಕೆ ಕಟಿಬದ್ಧರಾದ ನಾವು ಅನೇಕ ದಶಕಗಳಿಂದ ಪುರಾಣೇತಿಹಾಸಗಳನ್ನು ಭಾರತೀಯ ವಿವಿಧ ಭಾಷೆಗಳಲ್ಲಿ ಪ್ರಕಟಿಸುತ್ತಿದ್ದೇವೆ. ಆದರಂತೆ ಈ ಸುಂದರಕಾಂಡವನ್ನು ಮೂಲಸಂಸ್ಕೃತ ಶ್ಲೋಕಗಳೊಂದಿಗೆ ಅನುವಾದವನ್ನು ಕನ್ನಡದಲ್ಲಿ ಪ್ರಕಟಿಸುತ್ತಿದ್ದೇವೆ. ಭಾವುಕ ಸಾಧಕರು, ಅಧ್ಯಾತ್ಮ ಪ್ರೇಮಿಗಳು ಇದನ್ನು ಸ್ವಾಗತಿಸುವರೆಂಬ ವಿಶ್ವಾಸ ನಮಗಿದೆ. ಆದಿಕಾವ್ಯವಾದ ಶ್ರೀಮದ್ರಾಮಾಯಣದಲ್ಲಿ ಅನೇಕ ಪಾಠಭೇದಗಳು ದೊರೆಯುತ್ತವೆ. ಆದರಲ್ಲಿ ವ್ಯಾಮಾಣಿಕ ಪಾಠವನ್ನೇ ನಾವು ಆರಿಸಿದ್ದೇವೆ. ಅನುವಾದದಲ್ಲಿಯೂ ಗೋವಿಂದರಾಜೀಯ ವ್ಯಾಖ್ಯಾನವನ್ನೇ ಮುಖ್ಯವಾಗಿ ಅನುಸರಿಸಿದ್ದೇವೆ. ಮುಂದೆ ಭಗವತ್‌ಕೃಪೆಯಿಂದ ಸಮಗ್ರ ಶ್ರೀಮದ್ರಾಮಾಯಣವನ್ನು ಕನ್ನಡದ ಜನತೆಗೆ ನೀಡಬೇಕೆಂಬ ಬಯಕೆಯೂ ಇದೆ. ಈ ಸುಂದರಕಾಂಡವನ್ನು ಕನ್ನಡಕ್ಕೆ ಸುಂದರವಾಗಿ ಅನುವಾದಿಸಿದ ಕೀರ್ತನಾಚಾರ್ಯ ಶ್ರೀಲಕ್ಷ್ಮಣದಾಸ ವೇಲಣಕರ್ ಇವರಿಗೆ ಮತ್ತು ಇದನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಆಶೀರ್ವದಿಸಿದ ಶ್ರೀ ಪರಮಪೂಜ್ಯ ಶ್ರೀ ಶ್ರೀ ರಂಗಪ್ರಿಯ ಮಹಾದೇಶಿಕ ಮಹಾಸ್ವಾಮಿಗಳು ಇವರಿಗೂ ನಮ್ಮ ಕೃತಜ್ಞತೆಗಳು. ನಮ್ಮ ಹಿಂದಿನ ಎಲ್ಲ ಪ್ರಕಟಣೆಗಳನ್ನು ಪ್ರೀತ್ಯಾದರಗಳಿಂದ ಸ್ವಾಗತಿಸಿದ ಓದುಗರೂ ಇದನ್ನು ಅಷ್ಟೇ ಆತ್ಮೀಯವಾಗಿ ಸ್ವಾಗತಿಸುವರು ಎಂಬ ನಂಬಿಕೆ ನಮಗಿದೆ.

ಆನಂದವು ನಿಮಗೆ – ಆಶೀರ್ವಾದವು ನಮಗೆ.

– ಪ್ರಕಾಶಕರು
ಗೀತಾಪ್ರೆಸ್, ಗೋರಖಪುರ

ವಿಷಯಾನುಕ್ರಮಣಿಕೆ

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
I)	ಸುಂದರಕಾಂಡ ಪಾರಾಯಣವಿಧಿ	IX
II)	ವಿಶೇಷ ಕಾರ್ಯಸಿದ್ಧಿಗಾಗಿ ಮಂತ್ರಗಳು	XIII
III)	ಸಂಕ್ಷಿಪ್ತ ರಾಮಾಯಣ (ವಾಲ್ಮೀಕಿರಾಮಾಯಣದ ಮೊದಲನೆಯ ಸರ್ಗ)	XIV

ಸುಂದರಕಾಂಡ

ಸರ್ಗ ಸಂಖ್ಯೆ	ವಿಷಯ	ಪುಟ ಸಂಖ್ಯೆ
೧.	ಹನುಮಂತನು ಸಮುದ್ರವನ್ನು ದಾಟಿದ್ದು, ಮಾರ್ಗಮಧ್ಯದಲ್ಲಿ ಮೈನಾಕನಿಂದ ಸ್ವಾಗತ, ಸುರಸೆಯ ಪರಾಜಯ, ಸಿಂಹಿಕೆಯ ವಧೆ, ಲಂಕೆಯ ಸೌಂದರ್ಯ ವೀಕ್ಷಣೆ	1
೨.	ಲಂಕಾಪಟ್ಟಣದ ವರ್ಣನೆ, ಲಂಕೆಯನ್ನು ಪ್ರವೇಶಿಸಲು ಹನುಮಂತನು ಯೋಚಿಸಿ ಸೂಕ್ಷ್ಮರೂಪವನ್ನು ಧರಿಸಿ ಪಟ್ಟಣಕ್ಕೆ ಪ್ರವೇಶ, ಚಂದ್ರೋದಯ ವರ್ಣನೆ	21
೩.	ಹನುಮಂತನು ಲಂಕಾದೇವಿಯನ್ನು ದಂಡಿಸಿದುದು, ಲಂಕೆಯನ್ನು ಪ್ರವೇಶಿಸಿದುದು	27
೪.	ಹನುಮಂತನು ರಾವಣಾಂತಃಪುರವನ್ನು ಪ್ರವೇಶಿಸಿದುದು	32
೫.	ಚಂದ್ರಶೋಭಾವರ್ಣನೆ, ಹನುಮಂತನು ರಾವಣನ ಅಂತಃಪುರದಲ್ಲಿ ಸೀತೆಯನ್ನು ಹುಡುಕಿ ಅವಳು ಸಿಕ್ಕದ ಕಾರಣ ದುಃಖಿತನಾದುದು	35
೬.	ಹನುಮಂತನು ರಾವಣನ ಅರಮನೆಯಲ್ಲಿಯೂ, ಇತರ ರಾಕ್ಷಸರ ಮನೆಗಳಲ್ಲಿಯೂ ಸೀತೆಯನ್ನು ಹುಡುಕಿದುದು	40
೭.	ರಾವಣನ ಅರಮನೆ ಮತ್ತು ಪುಷ್ಪಕವಿಮಾನ ವರ್ಣನೆ	44
೮.	ಹನುಮಂತನು ಪುನಃ ಪುಷ್ಪಕವಿಮಾನವನ್ನು ಸಂದರ್ಶಿಸಿದುದು	46
೯.	ಹನುಮಂತನು ರಾವಣನ ಅಂತಃಪುರದಲ್ಲಿ ಮಲಗಿದ್ದ ಸ್ತ್ರೀಯರನ್ನು ನೋಡಿದುದು	48
೧೦.	ಹನುಮಂತನು ಅಂತಃಪುರದಲ್ಲಿ ಮಲಗಿದ್ದ ರಾವಣನನ್ನು ಮತ್ತು ಅವರ ಪತ್ನಿಯರನ್ನು ನೋಡಿದುದು, ಮಂಡೋದರಿಯನ್ನು ಸೀತೆಯೆಂದು ಭಾವಿಸಿ ಹೃಷ್ಟನಾದುದು	56
೧೧.	ಮಲಗಿರುವವಳು ಸೀತೆಯಲ್ಲವೆಂಬುದನ್ನು ನಿಶ್ಚಯಿಸಿದ ಹನುಮಂತನು ಅಂತಃಪುರದಲ್ಲಿ ಮತ್ತು ಪಾನಗೃಹಗಳಲ್ಲಿ ಸೀತೆಯನ್ನು ಹುಡುಕಲು ಪುನಃ ತೊಡಗುವುದು, ಅವನ ಮನಸ್ಸಿನಲ್ಲಿ ಧರ್ಮಲೋಪದ ಶಂಕೆ ಉಂಟಾಗುವುದು ಅದನ್ನು ತಾನೇ ಪರಿಹರಿಸಿಕೊಳ್ಳುವುದು	62
೧೨.	ಸೀತಾದೇವಿಯು ಮರಣಹೊಂದಿರಬಹುದೆಂದು ಶಂಕಿಸಿ ಹನುಮಂತನು ದುಃಖಿತನಾದುದು, ಪುನಃ ಉತ್ಸಾಹದಿಂದ ಮಡುಕಲು ಹೊರಟದ್ದು, ಎಷ್ಟು ಹುಡುಕಿದರೂ ಸೀತೆಯು ದೊರಕದಿರಲು ಪುನಃ ಚಿಂತಾಮಗ್ನನಾದುದು	67
೧೩.	ಸೀತಾದೇವಿಯು ವಿನಾಶಹೊಂದಿರಬಹುದೆಂದು ಹನುಮಂತನು ಪುನಃ ಶಂಕಿಸಿದುದು, ಸೀತೆಯು ಸಿಗಲಿಲ್ಲವೆಂದು ರಾಮನಿಗೆ ತಿಳಿಸುವುದರಿಂದ ಉಂಟಾಗುವ ಅನರ್ಥವನ್ನು ನೆನೆದು, ಕಿಷ್ಕಿಂಧೆಗೆ ಹಿಂದಿರುಗದಿರಲು ನಿಶ್ಚಯಿಸಿ, ಅಶೋಕವನದಲ್ಲಿ ಸೀತೆಯನ್ನು ಹುಡುಕಲು ಹೊರಟಿದುದು	70
೧೪.	ಹನುಮಂತನು ಅಶೋಕವನವನ್ನು ಪ್ರವೇಶಿಸಿ, ಅದರ ಸೊಬಗನ್ನು ನೋಡಿದುದು, ಅಶೋಕವೃಕ್ಷದ ಮೇಲೆ ಕುಳಿತು ಸೀತೆಯಿರುವ ಸ್ಥಳವನ್ನು ಹುಡುಕಿದುದು	77
೧೫.	ವನಸಿರಿಯನ್ನು ನೋಡುತ್ತಿದ್ದ ಹನುಮಂತನು ಚೈತ್ಯಪ್ರಾಸಾದದ ಬಳಿಯಲ್ಲಿ ದಯನೀಯ ಸ್ಥಿತಿಯಲ್ಲಿದ್ದ ಸೀತಾದೇವಿಯನ್ನು ನೋಡಿದುದು	82

ಸರ್ಗ ಸಂಖ್ಯೆ	ವಿಷಯ	ಪುಟ ಸಂಖ್ಯೆ
೧೬.	ಹನುಮಂತನು ಸೀತಾದೇವಿಯ ಶೀಲ-ಸೌಂದರ್ಯಗಳನ್ನು ಮನಸ್ಸಿನಲ್ಲೇ ಶ್ಲಾಘಿಸುತ್ತಾ ಅವಳ ಕಷ್ಟ ಕೋಟಲೆಗಳಿಗೆ ಮರುಗಿದುದು	88
೧೭.	ಸೀತಾದೇವಿಯನ್ನು ಹನುಮಂತನು ನೋಡಿ ಪ್ರಸನ್ನನಾದುದು	91
೧೮.	ರಾವಣನು ಅಂತಃಪುರದ ಸ್ತ್ರೀಯರಿಂದ ಪರಿವೃತನಾಗಿ ಅಶೋಕವನಕ್ಕೆ ಬಂದುದನ್ನು ಹನುಮಂತನು ನೋಡಿದುದು	94
೧೯.	ರಾವಣನನ್ನು ನೋಡಿ ದುಃಖ, ಭಯ, ಚಿಂತೆಗಳಲ್ಲಿ ಮಗ್ನಳಾದ ಸೀತಾದೇವಿಯ ಸ್ವರೂಪವರ್ಣನೆ	97
೨೦.	ರಾವಣನು ಸೀತಾದೇವಿಯನ್ನು ಪ್ರಲೋಭನಗೊಳಿಸಿದುದು	100
೨೧.	ಸೀತಾದೇವಿಯು ರಾವಣನಿಗೆ ಹಿತವಾಕ್ಯವನ್ನು ಹೇಳಿ ಶ್ರೀರಾಮನ ಮಹಿಮೆಯನ್ನು ಕೊಂಡಾಡಿದುದು	104
೨೨.	ರಾವಣನು ಸೀತೆಗೆ ಎರಡು ತಿಂಗಳ ಗಡುವನ್ನು ನೀಡಿದುದು, ಸೀತೆಯು ನಿರಾಕರಿಸಿದುದು, ರಾವಣನು ಸೀತೆಯನ್ನು ರಾಕ್ಷಸಿಯರ ವಶಕ್ಕೊಪ್ಪಿಸಿ ಅರಮನೆಯನ್ನು ಸೇರಿದುದು	107
೨೩.	ರಾಕ್ಷಸಿಯರು ಸೀತೆಯನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದುದು	112
೨೪.	ಸೀತಾದೇವಿಯು ರಾಕ್ಷಸಿಯರ ಮಾತನ್ನು ತಿರಸ್ಕರಿಸಿದುದು, ರಾಕ್ಷಸಿಯರು ಅವಳನ್ನು ಕೊಲ್ಲುವುದಾಗಿ ಬೆದರಿಸಿದುದು	114
೨೫.	ರಾಕ್ಷಸಿಯರ ಮಾತುಗಳನ್ನು ತಿರಸ್ಕರಿಸುತ್ತಾ ಸೀತಾದೇವಿಯು ಶೋಕಸಂತಪ್ತಳಾಗಿ ವಿಲಪಿಸಿದುದು	118
೨೬.	ಸೀತೆಯ ವಿಲಾಪ, ಪ್ರಾಣತ್ಯಾಗಮಾಡಲು ನಿಶ್ಚಯ	120
೨೭.	ತ್ರಿಜಟೆಯ ಸ್ವಪ್ನ ವೃತ್ತಾಂತ	124
೨೮.	ಸೀತಾದೇವಿಯು ಪ್ರಾಣತೊರೆಯಲು ಸಿದ್ಧಳಾದುದು	129
೨೯.	ಸೀತಾದೇವಿಗೆ ಗೋಚರಿಸಿದ ಶುಭಶಕುನಗಳು	132
೩೦.	ಸೀತೆಯೊಡನೆ ಹೇಗೆ ಮಾತಾಡಬೇಕೆಂಬುದರ ಬಗೆಗೆ ಹನುಮಂತನ ವಿವೇಚನೆ	133
೩೧.	ಹನುಮಂತನು ಸೀತಾದೇವಿಯು ಕೇಳುವಂತೆ ಶ್ರೀರಾಮಕಥೆಯನ್ನು ಸುಮಧುರವಾಗಿ ಹಾಡಿದುದು	138
೩೨.	ಸೀತಾದೇವಿಯ ತರ್ಕ-ವಿತರ್ಕಗಳು	140
೩೩.	ಸೀತೆಯು ಹನುಮಂತನಿಗೆ ತನ್ನ ಪರಿಚಯ ಮಾಡಿಕೊಡುತ್ತಾ ತನ್ನ ವೃತ್ತಾಂತವನ್ನು ತಿಳಿಸಿದುದು	141
೩೪.	ಸೀತಾದೇವಿಯು ಹನುಮಂತನನ್ನು ಸಂದೇಹಿಸಿದುದು, ಹನುಮಂತನು ಸಮಾಧಾನಪಡಿಸುತ್ತಾ ಶ್ರೀರಾಮನ ಗುಣಗಳನ್ನು ವರ್ಣಿಸಿದುದು	144
೩೫.	ಸೀತಾದೇವಿಯ ಪ್ರಶ್ನೆಗಳಿಗೆ ಶ್ರೀರಾಮನ ಶರೀರದಲ್ಲಿದ್ದ ಶುಭಲಕ್ಷಣಗಳನ್ನು ಹನುಮಂತನು ವಿವರಿಸಿ ಹೇಳಿದುದು, ನರ-ವಾನರರ ಮೈತ್ರಿಯ ಪ್ರಸಂಗವನ್ನು ಕೇಳಿದ ನಂತರ ಸೀತಾದೇವಿಗೆ ಹನುಮಂತನ ಮೇಲೆ ವಿಶ್ವಾಸ ಹುಟ್ಟಿದುದು	148
೩೬.	ಹನುಮಂತನು ಸೀತಾದೇವಿಗೆ ಮುದ್ರೆಯುಂಗುರವನ್ನು ಕೊಟ್ಟದ್ದು, ಶ್ರೀರಾಮನಿಗೆ ಸೀತೆಯಲ್ಲಿರುವ ಅನುರಾಗವನ್ನು ವರ್ಣಿಸಿ ಹೇಳಿ ಆಕೆಯನ್ನು ಸಮಾಧಾನಗೊಳಿಸಿದುದು	158
೩೭.	ಸೀತೆಯು ಹನುಮಂತನಿಗೆ ಶ್ರೀರಾಮನನ್ನು ಶೀಘ್ರವಾಗಿ ಕರೆತರಲು ಹೇಳಿದುದು, ಹನುಮಂತನು ಸೀತೆಯನ್ನು ತನ್ನ ಜೊತೆಯಲ್ಲೇ ಬರಲು ಹೇಳಿದುದು, ಸೀತೆಯ ಅಸಮ್ಮತಿ	163
೩೮.	ಸೀತಾದೇವಿಯು ಹನುಮಂತನಿಗೆ ಗುರುತಿಗಾಗಿ ಕಾಕಾಸುರನ ವೃತ್ತಾಂತವನ್ನು ಹೇಳಿ ಚೂಡಾಮಣಿಯನ್ನು ಕೊಟ್ಟದ್ದು	169
೩೯.	ಶ್ರೀರಾಮನಿಗೆ ಸೀತಾಸಂದೇಶ, ಆಂಜನೇಯನು ಆಕೆಯನ್ನು ಸಮಾಧಾನಪಡಿಸಿದ್ದು, ಸಮುದ್ರವನ್ನು ದಾಟಿಕೊಂಡು ಬರುವುದರಲ್ಲಿ ಸಂದೇಹಿಸಿದ ಸೀತಾದೇವಿಗೆ ಮಾರುತಿಯು ವಾನರನಾಯಕರ ಪರಾಕ್ರಮವನ್ನು ವಿವರಿಸಿ ಹೇಳುವುದು	176
೪೦.	ಸೀತಾದೇವಿಯು ಶ್ರೀರಾಮನಿಗೆ ಪುನಃ ಸಂದೇಶ ನೀಡಿದುದು, ಹನುಮಂತನು ಅವಳಿಗೆ ಆಶ್ವಾಸನೆಯನ್ನು ನೀಡಿದುದು	180

ಸರ್ಗ ಸಂಖ್ಯೆ	ವಿಷಯ	ಪುಟ ಸಂಖ್ಯೆ
೪೧.	ಹನುಮಂತನು ಪ್ರಮದಾ ವನವನ್ನು (ಅಶೋಕವನವನ್ನು) ಧ್ವಂಸ ಮಾಡಿದುದು	183
೪೨.	ರಾಕ್ಷಸಿಯರು ಪ್ರಮದಾ ವನದ ನಾಶವನ್ನು ರಾವಣನಿಗೆ ತಿಳಿಸಿದುದು, ರಾವಣನು ಕಿಂಕರರೆಂಬ ರಾಕ್ಷಸರನ್ನು ಕಳಿಸಿಕೊಟ್ಟಿದ್ದು, ಮಾರುತಿಯಿಂದ ಅವರ ಸಂಹಾರ	185
೪೩.	ಹನುಮಂತನು ಚೈತ್ಯಪ್ರಾಸಾದವನ್ನು ವಿನಾಶಗೊಳಿಸಿ, ಅಲ್ಲಿದ್ದ ರಾಕ್ಷಸರನ್ನು ಸಂಹರಿಸಿದುದು	189
೪೪.	ಮಾರುತಿಯು ಪ್ರಹಸ್ತನ ಮಗ ಜಂಬುಮಾಲಿಯನ್ನು ಸಂಪರಿಸಿದುದು	191
೪೫.	ಏಳು ಅಮಾತ್ಯ ಪುತ್ರರ ಸಂಹಾರ	193
೪೬.	ರಾವಣನ ಐದು ಮಂದಿ ಸೇನಾಪತಿಗಳ ಸಂಹಾರ	195
೪೭.	ರಾವಣನ ಮಗನಾದ ಅಕ್ಷಕುಮಾರನ ಪರಾಕ್ರಮದ ವರ್ಣನೆ, ಹನುಮಂತನಿಂದ ಅವನ ಸಂಹಾರ	198
೪೮.	ಇಂದ್ರಜಿತು ಹನುಮಂತರ ಯುದ್ಧ, ಇಂದ್ರಜಿತುವು ಮಾರುತಿಯನ್ನು ಬ್ರಹ್ಮಾಸ್ತ್ರದಿಂದ ಬಂಧಿಸಿ ರಾವಣನ ಬಳಿಗೆ ಒಯ್ದುದು	203
೪೯.	ರಾವಣನ ಪ್ರಭಾವಯುಕ್ತವಾದ ಮುಖವನ್ನು ನೋಡಿ ಹನುಮಂತನು ಆಶ್ಚರ್ಯಪಟ್ಟದ್ದು	210
೫೦.	ರಾವಣನು ಪ್ರಹಸ್ತನ ಮೂಲಕ ಹನುಮಂತನು ಲಂಕೆಗೆ ಬಂದುದರ ಕಾರಣವನ್ನು ಪ್ರಶ್ನಿಸಿದುದು, ತಾನು ಶ್ರೀರಾಮನ ದೂತನೆಂದು ಹನುಮಂತನು ಹೇಳಿದುದು	212
೫೧.	ಹನುಮಂತನು ಶ್ರೀರಾಮನ ಪ್ರಭಾವವನ್ನು ವರ್ಣಿಸುತ್ತಾ ರಾವಣನಿಗೆ ಹಿತೋಪದೇಶವನ್ನು ಮಾಡಿದುದು	214
೫೨.	ದೂತನ ವಧೆಯನ್ನು ನಿಷಿದ್ಧವೆಂದು ವಿಭೀಷಣನು ರಾವಣನಿಗೆ ಸಲಹೆ ನೀಡಿದುದು	218
೫೩.	ರಾಕ್ಷಸರು ಹನುಮಂತನ ಬಾಲಕ್ಕೆ ಬೆಂಕಿಯನ್ನು ಹಚ್ಚಿ ನಗರದಲ್ಲಿ ಮೆರವಣಿಗೆ ಮಾಡಿದುದು	221
೫೪.	ಲಂಕಾದಹನ – ರಾಕ್ಷಸರ ವಿಲಾಪ	225
೫೫.	ಹನುಮಂತನು ಸೀತಾದೇವಿಯ ಬಗ್ಗೆ ಚಿಂತಿಸಿದುದು, ಆದರ ಪರಿಹಾರ	230
೫೬.	ಹನುಮಂತನು ಸೀತೆಯನ್ನು ಸಂದರ್ಶಿಸಿ ಕಿಷ್ಕಿಂಧೆಗೆ ಹಿಂದಿರುಗಿದುದು	234
೫೭.	ಸಮುದ್ರವನ್ನು ದಾಟಬಂದ ಹನುಮಂತನು ಜಾಂಬವಾದಿಗಳೊಡನೆ ಸೇರಿದುದು	237
೫೮.	ಜಾಂಬವಂತರ ಪ್ರಶ್ನೆಗಳಿಗೆ ಹನುಮಂತನು ಲಂಕೆಯ ಯಾತ್ರೆಯನ್ನು ಸಮಗ್ರವಾಗಿ ವರ್ಣಿಸಿದುದು	241
೫೯.	ಹನುಮಂತನು ಸೀತೆಯ ಮರವಸ್ನೆಯನ್ನು ತಿಳಿಸುತ್ತಾ ಲಂಕೆಯ ಆಕ್ರಮಣಕ್ಕಾಗಿ ವಾನರರನ್ನು ಉತ್ತೇಜಿಸಿದುದು	255
೬೦.	ಲಂಕೆಯನ್ನು ಜಯಿಸಿ ಸೀತೆಯನ್ನು ಕರೆತರುವುದರಲ್ಲಿ ಅಂಗದನ ಉತ್ಸಾಹ, ಜಾಂಬವಂತರ ಅಸಮ್ಮತಿ	258
೬೧.	ವಾನರರೆಲ್ಲರೂ ಮಧುವನಕ್ಕೆ ಹೋಗಿ ಯಥೇಚ್ಛವಾಗಿ ಮಧುಪಾನಮಾಡಿ ಫಲಗಳನ್ನು ಭಕ್ಷಿಸಿದುದು	260
೬೨.	ವಾನರಶ್ರೇಷ್ಠರು ಮಧುವನದ ರಕ್ಷಕರನ್ನೂ, ದಧಿಮುಖಿಯನ್ನೂ ಪರಾಭವಗೊಳಿಸಿದ್ದು, ದಧಿಮುಖಿಯು ಸೇವಕರೊಡನೆ ದೂರು ಕೊಡಲು ಸುಗ್ರೀವನ ಬಳಿಗೆ ಹೋದುದು	262
೬೩.	ಅಂಗದಾದಿಗಳು ಮಧುವನವನ್ನು ಧ್ವಂಸಮಾಡಿದ ವಾರ್ತೆಯನ್ನು ದಧಿಮುಖಿಯು ಸುಗ್ರೀವನಿಗೆ ಹೇಳಿದುದು, ಅದರಿಂದ ಅಂಗದಾದಿಗಳು ಕೃತಕೃತ್ಯರಾಗಿ ಬಂದಿರುವರೆಂದು ಸುಗ್ರೀವನು ಊಹಿಸಿದುದು	266
೬೪.	ದಧಿಮುಖಿಯು ಸುಗ್ರೀವನ ಸಂದೇಶವನ್ನು ತಿಳಿಸಿ, ಅಂಗದ ಹನುಮದಾದಿಗಳನ್ನು ಕಿಷ್ಕಿಂಧೆಗೆ ಕಳಿಸಿಕೊಟ್ಟಿದ್ದು, ಹನುಮಂತನು ಶ್ರೀರಾಮನಿಗೆ ಪ್ರಣಾಮಮಾಡಿ ಸೀತಾದರ್ಶನದ ಸಮಾಚಾರವನ್ನು ತಿಳಿಸಿದುದು	269
೬೫.	ಹನುಮಂತನು ಶ್ರೀರಾಮನಿಗೆ ಸೀತೆಯ ಸಮಾಚಾರವನ್ನು ತಿಳಿಸಿದುದು	272
೬೬.	ಚೂಡಾಮಣಿಯನ್ನು ನೋಡಿ, ಸೀತೆಯ ಮಾತನ್ನು ಕೇಳಿ ಶ್ರೀರಾಮನು ವಿಲಪಿಸಿದುದು	275
೬೭.	ಪುನಃ ಹನುಮಂತನು ಸೀತೆಯ ಸಂದೇಶವನ್ನು ಶ್ರೀರಾಮನಿಗೆ ಹೇಳಿದುದು	276
೬೮.	ಸೀತೆಯ ಸಂದೇಶವನ್ನು ನಿವಾರಿಸಿದ ಬಗೆಯನ್ನು ಹನುಮಂತನು ಶ್ರೀರಾಮನಿಗೆ ಹೇಳಿದುದು	280
	ಯುದ್ಧಕಾಂಡ ಮೊದಲನೆಯ ಸರ್ಗ – ಹನುಮಂತನಿಗೆ ಶ್ರೀರಾಮನ ಆಲಿಂಗನದ ಭಾಗ್ಯ	283
	ಶ್ರೀರಾಮಪಟ್ಟಾಭಿಷೇಕ ಘಟ್ಟ:	285
	ಶ್ರೀಹನುಮಾನ್ ಚಾಲೀಸಾ	287

* * *

ಶ್ರೀಸುಂದರಕಾಂಡ ಪಾರಾಯಣ ವಿಧಾನವು

ಶ್ರೀಮದ್ರಾಮಾಯಣಾಂತರ್ಗತ ಸುಂದರಕಾಂಡವನ್ನು ಭಕ್ತಿಶ್ರದ್ಧೆಯಿಂದ, ನಿಷ್ಠೆಯಿಂದ ಪಾರಾಯಣ ಮಾಡಿದರೆ ಭಗವಾನ್ ಶ್ರೀರಾಮಚಂದ್ರನ ಅನುಗ್ರಹವು ತಪ್ಪದೇ ಸಿದ್ಧಿಸುವುದು. ಇದು ಭಗವತ್ಸೇವಾಕಾರ್ಯವು. ಇದಕ್ಕೆ ಸಾಧಾರಣವಾಗಿ ದೇಶ, ಕಾಲ ನಿರ್ಣಯಗಳ ಕೆಲಸವೇ ಇಲ್ಲ. ಆದರೂ ಶೀಘ್ರಫಲ ಸಿದ್ಧಿಗಾಗಿ ಚೈತ್ರ, ವೈಶಾಖ, ಜೇಷ್ಠ, ಶ್ರಾವಣ, ಆಶ್ವಯುಜ, ಕಾರ್ತೀಕ, ಮಾರ್ಗಶಿರ, ಮಾಘ, ಫಾಲ್ಗುಣ ಈ ತಿಂಗಳುಗಳು ಹೇಳಲಾಗಿವೆ. ಬಿದಿಗೆ, ತದಿಗೆ, ಪಂಚಮಿ, ಸಪ್ತಮಿ, ದಶಮಿ, ಏಕಾದಶೀ, ತ್ರಯೋದಶೀ ಈ ತಿಥಿಗಳು ಪ್ರಶಸ್ತ ಭಾನುವಾರ, ಬುಧವಾರ, ಗುರುವಾರ ಶುಕ್ರವಾರ ಈ ವಾರಗಳಲ್ಲಿ ಪಾರಾಯಣವನ್ನು ಪ್ರಾರಂಭಿಸಿದರೆ ಸೂಕ್ತವೆಂದು ಪ್ರಾಮಾಣಿಕ ಅಭಿಪ್ರಾಯ.

ನದೀತೀರ, ಸಾಗರತಟ, ಪವಿತ್ರತೀರ್ಥಕ್ಷೇತ್ರಗಳು, ದೇವಾಲಯ, ಭಕ್ತರಸನ್ನಿಧಿ, ಸ್ವಗೃಹ, ಪ್ರಾರ್ಥನಾಮಂದಿರ, ಕುಲಸೀತೋಟ ಇಂತಹ ಪವಿತ್ರ ಸ್ಥಾನದಲ್ಲಿ ಈ ಪಾರಾಯಣೆಯನ್ನು ಮಾಡಿದರೆ ಫಲಪ್ರದವಾಗುವುದು.

ಶ್ರೀಸುಂದರಕಾಂಡ ಪಾರಾಯಣಕ್ರಮ

ಓಂ ತತ್ಸತ್, ಅದ್ಯ ಶ್ರೀಸೀತಾರಾಮ ಹನುಮದನುಗ್ರಹ ಸಿದ್ಧ್ಯರ್ಥಂ, ಶ್ರೀಸೀತಾರಾಮಚಂದ್ರ ಹನುಮತ್ಪೂಜಾಂ ಕರಿಷ್ಯೇ ಇತಿ ಸಂಕಲ್ಪ್ಯ॥

ಶ್ರೀಸೀತಾರಾಮಾಭ್ಯಾಂ ನಮಃ। ಶ್ರೀರಾಮಭಕ್ತಾಯ ಹನುಮತೇ ನಮಃ। ಶ್ರೀಭರತಾಯ ನಮಃ। ಶ್ರೀಲಕ್ಷ್ಮಣಾಯ ನಮಃ। ಶ್ರೀಶತ್ರುಘ್ನಾಯ ನಮಃ॥ ಧ್ಯಾಯಾಮಿ, ಆವಾಹಯಾಮಿ, ಪೂಜಯಾಮಿ, ಅರ್ಘ್ಯ, ಪಾದ್ಯ, ಆಚಮನೀಯ, ಸ್ನಾನ, ವಸ್ತ್ರ, ಉಪವಸ್ತ್ರ ಯಜ್ಞೋಪವೀತ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ, ನೀರಾಜನಾದಿಕಂ ಸಮರ್ಪಯಾಮಿ – ನಮಸ್ಕರೋಮಿ॥ ಈ ವಿಧವಾಗಿ ಪೂಜಿಸಬೇಕು.

ಪೂಜಾನಂತರ ನಮಸ್ಕರಿಸಿ ಈ ಶ್ಲೋಕಗಳನ್ನು ಹೇಳಬೇಕು –

ವಾಲ್ಮೀಕಿಗಿರಿ ಸಂಭೂತಾ ರಾಮಸಾಗರಗಾಮಿನೀ। ಶ್ರೀಮದ್ರಾಮಾಯಣೇ ಗಂಗಾ ಪುನಾತಿ. ಭುವನತ್ರಯಮ್॥
ಶ್ಲೋಕೌಘ ಸಮತೀರ್ಣಂ ಸರ್ಗಕಲ್ಲೋಲಸಂಕುಲಮ್। ಕಾಂಡಗ್ರಾಹಮಹಾಮೀನಂ ವಂದೇ ರಾಮಾಯಣಾರ್ಣವಮ್॥

ಓಂ ಅಸ್ಯ ಶ್ರೀಸುಂದರಕಾಂಡಮಹಾಮಂತ್ರಸ್ಯ ಭಗವಾನ್ ಹನುಮಾನ್ ಋಷಿಃ। ಅನುಷ್ಟುಪ್ ಛಂದಃ। ಶ್ರೀಜಗನ್ಮಾತಾ ಸೀತಾ ದೇವತಾ। ಶ್ರೀಂ ಬೀಜಂ। ಸ್ವಾಹಾ ಶಕ್ತಿಃ। ಸೀತಾಯೈ ಕೀಲಕಮ್। ಶ್ರೀಸೀತಾಪ್ರಸಾದಸಿದ್ಧ್ಯರ್ಥಂ ಸುಂದರಕಾಂಡ ಪಾರಾಯಣೇ ವಿನಿಯೋಗಃ।

ಋಷ್ಯಾದಿನ್ಯಾಸಃ

ಭಗವದ್ಹನುಮ ಋಷಯೇ ನಮಃ – ಶಿರಸಿ। ಅನುಷ್ಟುಪ್ ಛಂದಸೇ ನಮಃ – ಮುಖೇ। ಶ್ರೀಜಗನ್ಮಾತೃ ಸೀತಾದೇವತಾಯೈ ನಮಃ – ಹೃದಿ। ಶ್ರೀಂ ಬೀಜಾಯ ನಮಃ – ಗುಹ್ಯೇ। ಸ್ವಾಹಾ ಶಕ್ತಯೇ ನಮಃ – ಪಾದಯೋಃ। ಸೀತಾಯೈ ಕೀಲಕಾಯ ನಮಃ – ಸರ್ವಾಂಗೇ॥

ಕರನ್ಯಾಸಃ

ಸೀತಾಯೈ ಅಂಗುಷ್ಠಾಭ್ಯಾಂ ನಮಃ। ವಿದೇಹರಾಜ ಸುತಾಯೈ ತರ್ಜನೀಭ್ಯಾಂ ನಮಃ। ರಾಮಸುಂದರ್ಯೈ ಮಧ್ಯಮಾಭ್ಯಾಂ ನಮಃ। ಹನುಮತಾ ಸಮಾಶ್ರಿತಾಯೈ ಅನಾಮಿಕಾಭ್ಯಾಂ ನಮಃ। ಭೂಮಿಸುತಾಯೈ ಕನಿಷ್ಠಿಕಾಭ್ಯಾಂ ನಮಃ। ಶರಣಂ ಭಜೇ ಕರತಲಕರಪೃಷ್ಠಾಭ್ಯಾಂ ನಮಃ।

ಹೃದಯಾದಿನ್ಯಾಸಃ

ಸೀತಾಯೈ ಹೃದಯಾಯ ನಮಃ। ವಿದೇಹರಾಜಸುತಾಯೈ ಶಿರಸೇ ಸ್ವಾಹಾ। ರಾಮಸುಂದರ್ಯೈ ಶಿಖಾಯೈ ವಷಟ್। ಹನುಮತಾ ಸಮಾಶ್ರಿತಾಯೈ ಕವಚಾಯ ಹುಮ್। ಭೂಮಿಸುತಾಯೈ ನೇತ್ರತ್ರಯಾಯ ವೌಷಟ್। ಶರಣಂ ಭಜೇ ಇತ್ಯಸ್ತ್ರಾಯ ಫಟ್।
ಭೂರ್ಭುವಸ್ಸುವರೋಂ ಇತಿ ದಿಗ್ಬಂಧಃ

ಧ್ಯಾನಮ್ :–

ಸೀತಾಮುದಾರಚರಿತಾಂ ವಿಧಿಸಾಂಬವಿಷ್ಣು ವಂದ್ಯಾಂ ತ್ರಿಲೋಕಜನನೀಂ ಶತಕಲ್ಪವಲ್ಲೀಮ್।
ಹೇಮೈರನೇಕಮಣಿರಂಜಿತಕೋಟಭಾಗೈಃ ಭೂಷಾಚಯೈ ರನುದಿನಂ ಸಹಿತಾಂ ನಮಾಮಿ॥

ಪ್ರಾರ್ಥನಾ ಶ್ಲೋಕಗಳು

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥ ೧ ॥
ವಾಗೀಶಾದ್ಯಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃಸ್ಯುಸ್ತಂ ನಮಾಮಿ ಗಜಾನನಮ್ ॥ ೨ ॥
ಶಾರದಾ ಶಾರದಾಂಭೋಜವದನಾ ವದನಾಂಬುಜೇ ।
ಸರ್ವದಾ ಸರ್ವದಾಸ್ಮಾಕಂ ಸನ್ನಿಧಿಃ ಸನ್ನಿಧಿಂ ಕ್ರಿಯಾತ್ ॥ ೩ ॥
ದೋರ್ಭಿರ್ಯುಕ್ತಾ ಚತುರ್ಭಿಃ ಸ್ಫಟಿಕಮಣಿಮಯೀ
ಮಕ್ಷಮಾಲಾಂ ದಧಾನಾ
ಹಸ್ತೇನೈಕೇನ ಪದ್ಮಂ ಸಿತಮಪಿ ಚ ಶುಕಂ
ಪುಸ್ತಕಂ ಚಾಪರೇಣ ।
ಭಾಸಾ ಕುಂದೇಂದು ಶಂಖಸ್ಫಟಿಕಮಣಿನಿಭಾ
ಭಾಸಮಾನಾಸಮಾನಾ
ಸಾ ಮೇ ವಾಗ್ದೇವತೇಯಂ ನಿವಸತು ವದನೇ
ಸರ್ವದಾ ಸುಪ್ರಸನ್ನಾ ॥ ೪ ॥
ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಮ್ ॥ ೫ ॥
ವಾಲ್ಮೀಕೇರ್ಮುನಿಸಿಂಹಸ್ಯ ಕವಿತಾವನಚಾರಿಣಃ ।
ಶೃಣ್ವನ್ರಾಮಕಥಾನಾದಂ ಕೋ ನ ಯಾತಿ ಪರಾಂ ಗತಿಮ್ ॥ ೬ ॥
ಯಃ ಪಿಬನ್ ಸತತಂ ರಾಮಚರಿತಾಮೃತಸಾಗರಮ್ ।
ಅತೃಪ್ತಸ್ತಂ ಮುನಿಂ ವಂದೇ ಪ್ರಾಚೇತಸಮಕಲ್ಮಷಮ್ ॥ ೭ ॥
ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಮ್ ।
ರಾಮಾಯಣ ಮಹಾಮಾಲಾರತ್ನಂ ವಂದೇಽನಿಲಾತ್ಮಜಮ್ ॥ ೮ ॥
ಅಂಜನಾನಂದನಂ ವೀರಂ ಜಾನಕೀಶೋಕನಾಶನಮ್ ।
ಕಪೀಶಮಕ್ಷಹಂತಾರಂ ವಂದೇ ಲಂಕಾ ಭಯಂಕರಮ್ ॥ ೯ ॥
ಮನೋಜವಂ ಮಾರುತ ತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಶಿರಸಾ ನಮಾಮಿ ॥ ೧೦ ॥
ಉಲ್ಲಂಘ್ಯ ಸಿಂಧೋಃ ಸಲಿಲಂ ಸಲೀಲಂ
ಯಃ ಶೋಕವಹ್ನಿಂ ಜನಕಾತ್ಮಜಾಯಾಃ ।
ಆದಾಯ ತೇನೈವ ದದಾಹ ಲಂಕಾಂ
ನಮಾಮಿ ತಂ ಪ್ರಾಂಜಲಿರಾಂಜನೇಯಮ್ ॥ ೧೧ ॥
ಆಂಜನೇಯಮತಿಪಾಟಲಾನನಂ
ಕಾಂಚನಾದ್ರಿಕಮನೀಯವಿಗ್ರಹಮ್ ।
ಪಾರಿಜಾತತರುಮೂಲವಾಸಿನಂ
ಭಾವಯಾಮಿ ಪವಮಾನನಂದನಮ್ ॥ ೧೨ ॥

ಯತ್ರ ಯತ್ರ ರಘುನಾಥಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಮ್ ।
ಬಾಷ್ಪ ವಾರಿಪರಿಪೂರ್ಣಲೋಚನಂ ಮಾರುತಿಂ ನಮತ ರಾಕ್ಷಸಾಂತಕಮ್ ॥ ೧೩ ॥
ಯಃ ಕರ್ಣಾಂಜಲಿಸಂಪುಟೈರಹರಹಃ ಸಮ್ಯಕ್ಪಿಬತ್ಯಾದರಾತ್
ವಾಲ್ಮೀಕೇರ್ವದನಾರವಿಂದಗಲಿತಂ ರಾಮಾಯಣಾಖ್ಯಂ ಮಧು ।
ಜನ್ಮವ್ಯಾಧಿಜರಾವಿಪತ್ತಿಮರಣೈರತ್ಯಂತಸೋಪದ್ರವಂ
ಸಂಸಾರಂ ಸ ವಿಹಾಯ ಗಚ್ಛತಿ ಪುಮಾನ್ವಿಷ್ಣೋಃ ಪದಂ ಶಾಶ್ವತಮ್ ॥ ೧೪ ॥
ತದುಪಗತಸಮಾಸಸಂಧಿಯೋಗಂ
ಸಮಮಧುರೋಪನತಾರ್ಥವಾಕ್ಯಬದ್ಧಮ್ ।
ರಘುವರಚರಿತಂ ಮುನಿಪ್ರಣೀತಂ
ದಶಶಿರಸಶ್ಚ ವಧಂ ನಿಶಾಮಯಧ್ವಮ್ ॥ ೧೫ ॥
ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ಸಾಕ್ಷಾದ್ರಾಮಾಯಣಾತ್ಮನಾ ॥ ೧೬ ॥
ಶ್ರೀರಾಘವಂ ದಶರಥಾತ್ಮಜಮಪ್ರಮೇಯಂ
ಸೀತಾಪತಿಂ ರಘುಕುಲಾನ್ವಯರತ್ನದೀಪಮ್ ।
ಆಜಾನುಬಾಹುಮ್ ಅರವಿಂದದಳಾಯತಾಕ್ಷಮ್
ರಾಮಂ ನಿಶಾಚರವಿನಾಶಕರಮ್ ನಮಾಮಿ ॥ ೧೭ ॥
ನೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಟಪೇ
ಮಧ್ಯೇಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಮ್ ।
ಅಗ್ರೇ ವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃ ಪರಂ
ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಮ್ ॥ ೧೮ ॥
ವಾಮೇ ಭೂಮಿಸುತಾ ಪುರಶ್ಚ ಹನುಮಾನ್ ಪಶ್ಚಾತ್ ಸುಮಿತ್ರಾಸುತಃ
ಶತ್ರುಘ್ನೋ ಭರತಶ್ಚ ಪಾರ್ಶ್ವದಲಯೋರ್ವಾಯ್ವಾದಿಕೋಣೇಷು ಚ ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ ಶ್ಯಾಮಲಮ್ ॥ ೧೯ ॥
ನಮೋಽಸ್ತು ರಾಮಾಯ ಸಲಕ್ಷ್ಮಣಾಯ
ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ ।
ನಮೋಽಸ್ತು ರುದ್ರೇಂದ್ರಯಮಾನಿಲೇಭ್ಯೋ
ನಮೋಽಸ್ತು ಚಂದ್ರಾರ್ಕಮರುದ್ಗಣೇಭ್ಯಃ ॥ ೨೦ ॥
ರಾಮಂ ರಾಜಾನುಜಂ ಸೀತಾಂ ಭರತಂ ಭರತಾನುಜಮ್ ।
ಸುಗ್ರೀವಂ ವಾಯಸೂನುಂ ಚ ಪ್ರಣಮಾಮಿ ಪುನಃ ಪುನಃ ॥ ೨೧ ॥

ಪಾರಾಯಣ ಬಳಿಕ ಪೂಜೆ ಮಾಡಬೇಕು – ಪಾರಾಯಣದ ನಂತರ ಕೆಳಗಿನ ಶ್ಲೋಕಗಳನ್ನು ಪಠಿಸಬೇಕು

ಸ್ಪೃಷ್ಟಾ ಪ್ರಜಾಭ್ಯಃ ಪರಿಪಾಲಯಂತಾಂ ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ ಲೋಕಾಃ ಸಮಸ್ತಾಃ ಸುಖಿನೋ ಭವಂತು॥
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ। ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸಂತು ನಿರ್ಭಯಾಃ॥
ಅಪುತ್ರಾಃ ಪುತ್ರಿಣಃ ಸಂತು ಪುತ್ರಿಣಃ ಸಂತು ಪೌತ್ರಿಣಃ। ಅಧನಾಃ ಸಧನಾಃ ಸಂತು ಜೀವಂತು ಶರದಾಂ ಶತಮ್॥
ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ಚ ಯದ್ಭವೇತ್। ತತ್ಸರ್ವಂ ಕ್ಷಮ್ಯತಾಂ ದೇವ ಶ್ರೀರಾಘವ ನಮೋಽಸ್ತುತೇ॥
ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಭವಃ। ಯೇಷಾಮಿಂದೀವರಶ್ಯಾಮೋ ಹೃದಯೇ ಸುಪ್ರತಿಷ್ಠಿತಃ॥

ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್।
ಕರೋಮಿ ಯದ್ಯತ್ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ॥

ಚರಿತಂ ರಘುನಾಥಸ್ಯ ಶತಕೋಟಿ ಪ್ರವಿಸ್ತರಮ್ । ಏಕೈಕಮಕ್ಷರಂ ಪುಂಸಾಂ ಮಹಾಪಾತಕನಾಶನಮ್॥
ಶೃಣ್ವನ್ ರಾಮಾಯಣಂ ಭಕ್ತ್ಯಾ ಪಾದಂ ಪಾದಮಥವಾ। ಸ ಯಾತಿ ಬ್ರಹ್ಮಣಃ ಸ್ಥಾನಂ ಬ್ರಹ್ಮಣಾ ಪೂಜ್ಯತೇ ಸದಾ॥
ರಾಮಾಯ ರಾಮ ಭದ್ರಾಯ ರಾಮಚಂದ್ರಾಯ ವೇಧಸೇ । ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ॥

ಶ್ರೀರಾಮಮಂಗಳಾಶಾಸನಮ್

ಮಂಗಲಂ ಕೋಸಲೇಂದ್ರಾಯ ಮಹನೀಯಗುಣಾಬ್ಧಯೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಳಮ್ ॥ ೧ ॥

ವೇದವೇದಾಂತವೇದ್ಯಾಯ ಮೇಘಶ್ಯಾಮಲಮೂರ್ತಯೇ ।
ಪುಂಸಾಂ ಮೋಹನರೂಪಾಯ ಪುಣ್ಯಶ್ಲೋಕಾಯ ಮಂಗಳಮ್ ॥ ೨ ॥

ವಿಶ್ವಾಮಿತ್ರಾಂತರಂಗಾಯ ಮಿಥಿಲಾನಗರೀಪತೇಃ ।
ಭಾಗ್ಯಾನಾಂ ಪರಿಪಾಕಾಯ ಭವ್ಯರೂಪಾಯ ಮಂಗಳಮ್ ॥ ೩ ॥

ಪಿತೃಭಕ್ತಾಯ ಸತತಂ ಭ್ರಾತೃಭಿಃ ಸಹ ಸೀತಯಾ ।
ನಂದಿತಾಖಿಲಲೋಕಾಯ ರಾಮಭದ್ರಾಯ ಮಂಗಳಮ್ ॥ ೪ ॥

ತೃಕ್ಷಕೀತವಾಸಾಯ ಚಿತ್ರಕೂಟವಿಹಾರಿಣೇ ।
ಸೇವ್ಯಾಯ ಸರ್ವಯಮಿನಾಂ ಧೀರೋದಯಾಯ ಮಂಗಳಮ್ ॥ ೫ ॥

ಸೌಮಿತ್ರಿಣಾ ಚ ಜಾನಕ್ಯಾ ಚಾಪಬಾಣಾಸಿಧಾರಿಣೇ ।
ಸಂಸೇವ್ಯಾಯ ಸದಾ ಭಕ್ತ್ಯಾ ಸ್ವಾಮಿನೇ ಮಮ ಮಂಗಳಮ್ ॥ ೬ ॥

ದಂಡಕಾರಣ್ಯವಾಸಾಯ ಖರದೂಷಣಶತ್ರವೇ ।
ಗೃಧ್ರರಾಜಾಯ ಭಕ್ತಾಯ ಮುಕ್ತಿದಾಯಾಸ್ತು ಮಂಗಳಮ್ ॥ ೭ ॥

ಸಾದರಂ ಶಬರೀದತ್ತಫಲಮೂಲಾಭಿಲಾಷಿಣೇ ।
ಸೌಲಭ್ಯಪರಿಪೂರ್ಣಾಯ ಸತ್ಕೃದ್ಭಿಕ್ತಾಯ ಮಂಗಳಮ್ ॥ ೮ ॥

ಹನುಮತ್ಸಮವೇತಾಯ ಹರೀಶಾಭೀಷ್ಟದಾಯಿನೇ ।
ವಾಲಿಪ್ರಮಥನಾಯಾಸ್ತು ಮಹಾಧೀರಾಯ ಮಂಗಳಮ್ ॥ ೯ ॥

ಶ್ರೀಮತೇ ರಘುವೀರಾಯ ಸೇತೂಲ್ಲಂಘಿತಸಿಂಧವೇ ।
ಜಿತರಾಕ್ಷಸರಾಜಾಯ ರಣಧೀರಾಯ ಮಂಗಳಮ್ ॥ ೧೦ ॥

ವಿಭೀಷಣಕೃತೇ ಪ್ರೀತ್ಯಾ ಲಂಕಾಭೀಷ್ಟಪ್ರದಾಯಿನೇ ।
ಸರ್ವಲೋಕಶರಣ್ಯಾಯ ಶ್ರೀರಾಘವಾಯ ಮಂಗಳಮ್ ॥ ೧೧ ॥

ಆಸಾದ್ಯ ನಗರೀಂ ದಿವ್ಯಾಮಭಿಷಿಕ್ತಾಯ ಸೀತಯಾ ।
ರಾಜಾಧಿರಾಜರಾಜಾಯ ರಾಮಭದ್ರಾಯ ಮಂಗಳಮ್ ॥ ೧೨ ॥

ಬ್ರಹ್ಮಾದಿದೇವಸೇವ್ಯಾಯ ಬ್ರಹ್ಮಣ್ಯಾಯ ಮಹಾತ್ಮನೇ ।
ಜಾನಕೀಪ್ರಾಣನಾಥಾಯ ರಘುನಾಥಾಯ ಮಂಗಳಮ್ ॥ ೧೩ ॥

ಶ್ರೀಸೌಮ್ಯಜಾಮಾತೃಮುನೇಃ ಕೃಪಯಾಸ್ಮಾನುಪೇಯುಷೇ ।
ಮಹತೇ ಮಮ ನಾಥಾಯ ರಘುನಾಥಾಯ ಮಂಗಳಮ್ ॥ ೧೪ ॥

ಮಂಗಳಾಶಾಸನಪರೈರ್ಮದಾಚಾರ್ಯಪುರೋಗಮೈಃ ।
ಸರ್ವೈಶ್ಚ ಪೂರ್ವೈರಾಚಾರ್ಯೈಃ ಸತ್ಕೃತಾಯಾಸ್ತು ಮಂಗಳಮ್ ॥ ೧೫ ॥

ರಮ್ಯಜಾಮಾತೃಮುನಿನಾ ಮಂಗಳಾಶಾಸನಂ ಕೃತಮ್ ।
ತ್ರೈಲೋಕ್ಯಾಧಿಪತಿಃ ಶ್ರೀಮಾನ್ ಕರೋತು ಮಂಗಳಂ ಸದಾ ॥ ೧೬ ॥

॥ ಇತಿ ಶ್ರೀವರವರಮುನಿಸ್ವಾಮಿಕೃತ ಶ್ರೀರಾಮಮಂಗಳಾಶಾಸನಮ್ ಸಂಪೂರ್ಣಮ್ ॥

ವಿಶೇಷ ಕಾರ್ಯಸಿದ್ಧಿಗಾಗಿ ಮಂತ್ರಗಳು

ಆಪತ್ತು ತೊಲಗಿ – ಸಂಪತ್ತಿನ ಪ್ರಾಪ್ತಿಗಾಗಿ

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್।
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್॥

ಶತ್ರು ವಿಜಯಕ್ಕಾಗಿ – ಕಾಮಕ್ರೋಧಾದಿ ಜಯಿಸಲು

ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಶರಥಿರ್ಯದಿ।
ಪೌರುಷೇ ಚಾಪ್ರತಿದ್ವಂದ್ವ್ಯಃ ಶರೈನಂ ಜಹಿ ರಾವಣಿಮ್॥

ಕಳೆದುಹೋದ ವಸ್ತುವಿನ ಪುನಃ ಪ್ರಾಪ್ತಿಗಾಗಿ

ತದುನ್ನ ಸಂ ಪಾಂಡು ರದಂತಮವ್ರಣಂ ಶುಚಿಸ್ಮಿತಂ ಪದ್ಮಪಲಾಶಲೋಚನಮ್।
ದ್ರಕ್ಷ್ಯೇ ತದಾರ್ಯಾವದನಂ ಕದಾ ನ್ವಹಂ ಪ್ರಪನ್ನ ತಾರಾಧಿಪತುಲ್ಯ ದರ್ಶನಮ್॥

ವ್ಯಾಧಿ ನಿವಾರಣೆಗಾಗಿ

ರಾಮಭದ್ರ ಮಹೇಷ್ವಾಸ ರಘುವೀರ ನೃಪೋತ್ತಮ।
ಭೋ ದಶಾಸ್ಯಾಂತ ಕಾಸ್ಮಾಕಂ ರಕ್ಷಾಂ ದೇಹಿ ಶ್ರಿಯಂ ಚ ಮೇ॥

ಸರ್ವಾರ್ಥ ಸಿದ್ಧಿಗಾಗಿ

ಸುಪ್ರಸನ್ನಃ ಶಾಂತಮನಾಃ ಸತ್ಯಸಂಧೋ ಜಿತೇಂದ್ರಿಯಃ।
ಧರ್ಮಜ್ಞೋ ನಯಸಾರಜ್ಞೋ ರಾಜಾ ದಾಶರಥಿರ್ಯಥಾ॥

ದುಷ್ಕರ ಕಾರ್ಯಸಿದ್ಧಿಗಾಗಿ

ಸರ್ವಾನ್ ಲೋಕಾನ್ ಸುಸಂಹೃತ್ಯ ಸಭೂತಾನ್ ಸಚರಾಚರಾನ್।
ಪುನರೇವ ತಥಾ ಸ್ರಷ್ಟು ಶಕ್ತೋ ರಾಮೋ ಮಹಾಯಶಾಃ॥

ಭಗವಚ್ಚರಣಾಗತಿ ಪ್ರಾಪ್ತಿಗೆ

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ॥

ಭಗವದನುಗ್ರಹ ಪ್ರಾಪ್ತಿಗೆ

ಇಂದ್ರಕರ್ಮಾ ಮಹೇಂದ್ರಸ್ತ್ವಂ ಪದ್ಮನಾಭೋ ರಣಾಂತಕೃತ್।
ಶರಣ್ಯಂ ಶರಣಂ ಚ ತ್ವಾಮಾಪದರ್ದಿವ್ಯಾ ಮಹರ್ಷಯಃ॥

ಪ್ರಾರಂಭಿಸಿದ ಕಾರ್ಯವು ಸಫಲವಾಗಲು

ನಮೋಸ್ತು ರಾಮಾಯ ಸುಲಕ್ಷ್ಮಣಾಯ ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ।
ನಮೋಸ್ತುರುದ್ರೇಂದ್ರಯಮಾನಿಲೇಭ್ಯೋ ನಮೋಸ್ತುಚಂದ್ರಾರ್ಕಮರುದ್ಗಣೇಭ್ಯಃ॥

ಸರ್ವಕಾರ್ಯ ಸಿದ್ಧಿಗಾಗಿ

ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ॥
ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ।
ಹನುಮಾನ್ ಶತ್ರುಸೈನ್ಯಾನಾಂ ನಿಹಂತಾ ಮಾರುತಾತ್ಮಜಃ॥
ನ ರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್।
ಶಿಲಾಭಿಸ್ತು ಪ್ರಹರತಃ ಪಾದಪೈಶ್ಚ ಸಹಸ್ರಶಃ॥
ಆದಾಯತ್ವಾ ಪುರೀಂ ಲಂಕಾಮಭಿವಾದ್ಯ ಚ ಮೈಥಿಲೀಮ್।
ಸಮೃದ್ಧಾರ್ಥೋ ಗಮಿಷ್ಯಾಮಿ ಮಿಷತಾಂ ಸರ್ವರಕ್ಷಸಾಮ್॥
ಆರ್ಯಸಿದ್ಧಿಂ ತು ವೈದೇಹ್ಯಾ ಪಶ್ಯಾಮ್ಯಹ ಮುಪಸ್ಥಿತಾಮ್।
ರಾಕ್ಷಸೇಂದ್ರ ವಿನಾಶಂ ಚ ವಿಜಯಂ ರಾಘವಸ್ಯ ಚ॥

ಸಂಕ್ಷಿಪ್ತರಾಮಾಯಣ

(ವಾಲ್ಮೀಕಿರಾಮಾಯಣ – ಬಾಲಕಾಂಡ – ಪ್ರಥಮಃ ಸರ್ಗಃ)

ಹರಿಃ ಓಂ

ತಪಃ ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥ ೧ ॥
ಕೋ ನ್ವಸ್ಮಿನ್ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ ೨ ॥
ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ ।
ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥ ೩ ॥
ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ಕೋಽನಸೂಯಕಃ ।
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥ ೪ ॥
ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ।
ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂವಿಧಂ ನರಮ್ ॥
ಶ್ರುತ್ವಾ ಚೈತತ್ತ್ರಿಲೋಕಜ್ಞೋ ವಾಲ್ಮೀಕೇರ್ನಾರದೋ ವಚಃ ।
ಶ್ರೂಯತಾಮಿತಿ ಚಾಮಂತ್ರ್ಯ ಪ್ರಹೃಷ್ಟೋ ವಾಕ್ಯಮಬ್ರವೀತ್ ॥ ೬ ॥
ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕೀರ್ತಿತಾ ಗುಣಾಃ ।
ಮುನೇ ವಕ್ಷ್ಯಾಮ್ಯಹಂ ಬುದ್ಧ್ಯಾ ತೈರ್ಯುಕ್ತಃ ಶ್ರೂಯತಾಂ ನರಃ ॥
ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ ।
ನಿಯತಾತ್ಮಾ ಮಹವೀರ್ಯೋ ದ್ಯುತಿಮಾನ್ ಧೃತಿಮಾನ್ವಶೀ ॥ ೮ ॥
ಬುದ್ಧಿಮಾನ್ನೀತಿಮಾನ್ವಾಗ್ಮೀ ಶ್ರೀಮಾನ್ ಶತ್ರುನಿಬರ್ಹಣಃ ।
ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವೋ ಮಹಾಹನುಃ ॥
ಮಹೋರಸ್ಕೋ ಮಹೇಷ್ವಾಸೋ ಗೂಢಜತ್ರುರರಿಂದಮಃ ।
ಆಜಾನುಬಾಹುಃ ಸುಶಿರಾಃ ಸುಲಲಾಟಃ ಸುವಿಕ್ರಮಃ ॥ ೧೦ ॥
ಸಮಃ ಸಮವಿಭಕ್ತಾಂಗಃ ಸ್ನಿಗ್ಧವರ್ಣಃ ಪ್ರತಾಪವಾನ್ ।
ಪೀನವಕ್ಷಾ ವಿಶಾಲಾಕ್ಷೋ ಲಕ್ಷ್ಮೀವಾನ್ ಶುಭಲಕ್ಷಣಃ ॥ ೧೧ ॥
ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ ।
ಯಶಸ್ವೀ ಜ್ಞಾನಸಂಪನ್ನಃ ಶುಚಿರ್ವಶ್ಯಃ ಸಮಾಧಿಮಾನ್ ॥ ೧೨ ॥
ಪ್ರಜಾಪತಿಸಮಃ ಶ್ರೀಮಾಂಧಾತಾ ರಿಪುನಿಷೂದನಃ ।
ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಪರಿರಕ್ಷಿತಾ ॥ ೧೩ ॥
ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ ।
ವೇದವೇದಾಂಗ ತತ್ತ್ವಜ್ಞೋ ಧನುರ್ವೇದೇ ಚ ನಿಷ್ಠಿತಃ ॥ ೧೪ ॥
ಸರ್ವಶಾಸ್ತ್ರಾರ್ಥತತ್ತ್ವಜ್ಞಃ ಸ್ಮೃತಿಮಾನ್ಪ್ರತಿಭಾನವಾನ್ ।
ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ ॥ ೧೫ ॥
ಸರ್ವದಾಭಿಗತಃ ಸದ್ಭಿಃ ಸಮುದ್ರ ಇವ ಸಿಂಧುಭಿಃ ।
ಆರ್ಯಃ ಸರ್ವಸಮಶ್ಚೈವ ಸದೈವ ಪ್ರಿಯದರ್ಶನಃ ॥ ೧೬ ॥

ಸ ಚ ಸರ್ವಗುಣೋಪೇತಃ ಕೌಸಲ್ಯಾನಂದವರ್ಧನಃ ।
ಸಮುದ್ರ ಇವ ಗಾಂಭೀರ್ಯೇ ಧೈರ್ಯೇಣ ಹಿಮವಾನಿವ ॥ ೧೭ ॥
ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ಪ್ರಿಯದರ್ಶನಃ ।
ಕಾಲಾಗ್ನಿ ಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ ॥ ೧೮ ॥
ಧನದೇನ ಸಮಸ್ತ್ಯಾಗೇ ಸತ್ಯೇ ಧರ್ಮ ಇವಾಪರಃ ।
ತಮೇವಂ ಗುಣಸಂಪನ್ನಂ ರಾಮಂ ಸತ್ಯಪರಾಕ್ರಮಮ್ ॥ ೧೯ ॥
ಜ್ಯೇಷ್ಠಂ ಶ್ರೇಷ್ಠಗುಣೈರ್ಯುಕ್ತಂ ಪ್ರಿಯಂ ದಶರಥಃ ಸುತಮ್ ।
ಪ್ರಕೃತೀನಾಂ ಹಿತೈ ಯುಕ್ತಂ ಪ್ರಕೃತಿಪ್ರಿಯಕಾಮ್ಯಯಾ ॥ ೨೦ ॥
ಯೌವರಾಜ್ಯೇನ ಸಂಯೋಕ್ತುಮ್ ಐಚ್ಛತ್ಪ್ರೀತ್ಯಾ ಮಹೀಪತಿಃ ।
ತಸ್ಯಾಭಿಷೇಕಸಂಭಾರಾಂದೃಷ್ಟ್ವಾ ಭಾರ್ಯಾಥ ಕೈಕಯೀ ॥ ೨೧ ॥
ಪೂರ್ವಂ ದತ್ತವರಾ ದೇವೀ ವರಮೇನಮಯಾಚತ ।
ವಿವಾಸನಂ ಚ ರಾಮಸ್ಯ ಭರತಸ್ಯಾಭಿಷೇಚನಮ್ ॥ ೨೨ ॥
ಸ ಸತ್ಯವಚನಾದ್ರಾಜಾ ಧರ್ಮಪಾಶೇನ ಸಂಯತಃ ।
ವಿವಾಸಯಾಮಾಸ ಸುತಂ ರಾಮಂ ದಶರಥಃ ಪ್ರಿಯಮ್ ॥ ೨೩ ॥
ಸ ಜಗಾಮ ವನಂ ವೀರಃ ಪ್ರತಿಜ್ಞಾಮನುಪಾಲಯನ್ ।
ಪಿತುರ್ವಚನನಿರ್ದೇಶಾತ್ಕೈಕೇಯ್ಯಾಃ ಪ್ರಿಯಕಾರಣಾತ್ ॥ ೨೪ ॥
ತಂ ವ್ರಜಂತಂ ಪ್ರಿಯೋ ಭ್ರಾತಾ ಲಕ್ಷ್ಮಣೋಽನುಜಗಾಮ ಹ ।
ಸ್ನೇಹಾದ್ವಿನಯಸಂಪನ್ನಃ ಸುಮಿತ್ರಾನಂದವರ್ಧನಃ ॥ ೨೫ ॥
ಭ್ರಾತರಂ ದಯಿತೋ ಭ್ರಾತುಃ ಸೌಭ್ರಾತ್ರಮನುದರ್ಶಯನ್ ।
ರಾಮಸ್ಯ ದಯಿತಾ ಭಾರ್ಯಾ ನಿತ್ಯಂ ಪ್ರಾಣಸಮಾ ಹಿತಾ ॥ ೨೬ ॥
ಜನಕಸ್ಯ ಕುಲೇ ಜಾತಾ ದೇವಮಾಯೇವ ನಿರ್ಮಿತಾ ।
ಸರ್ವಲಕ್ಷಣಸಂಪನ್ನಾ ನಾರೀಣಾಮುತ್ತಮಾ ವಧೂಃ ॥ ೨೭ ॥
ಸೀತಾಽನ್ವಗಾದ್ರಾಮಂ ಶಶಿನಂ ರೋಹಿಣೀ ಯಥಾ ।
ಪೌರೈರನುಗತೋ ದೂರಂ ಪಿತ್ರಾ ದಶರಥೇನ ಚ ॥ ೨೮ ॥
ಶೃಂಗಬೇರಪುರೇ ಸೂತಂ ಗಂಗಾಕೂಲೇ ವ್ಯಸರ್ಜಯತ್ ।
ಗುಹಮಾಸಾದ್ಯ ಧರ್ಮಾತ್ಮಾ ನಿಷಾದಾಧಿಪತಿಂ ಪ್ರಿಯಮ್ ॥ ೨೯ ॥
ಗುಹೇನ ಸಹಿತೋ ರಾಮೋ ಲಕ್ಷ್ಮಣೇನ ಚ ಸೀತಯಾ ।
ತೇ ವನೇನ ವನಂ ಗತ್ವಾ ನದೀಸ್ತೀರ್ತ್ವಾ ಬಹೂದಕಾಃ ॥ ೩೦ ॥
ಚಿತ್ರಕೂಟಮನುಪ್ರಾಪ್ಯ ಭರದ್ವಾಜಸ್ಯ ಶಾಸನಾತ್ ।
ರಮ್ಯಮಾವಸಥಂ ಕೃತ್ವಾ ರಮಮಾಣಾ ವನೇ ತ್ರಯಃ ॥ ೩೧ ॥
ದೇವಗಂಧರ್ವಸಂಕಾಶಾಸ್ತತ್ರ ತೇ ನ್ಯವಸನ್ ಸುಖಮ್ ।
ಚಿತ್ರಕೂಟಂ ಗತೇ ರಾಮೇ ಪುತ್ರಶೋಕಾತುರಸ್ತದಾ ॥ ೩೨ ॥

ರಾಜಾ ದಶರಥಃ ಸ್ವರ್ಗಂ ಜಗಾಮ ವಿಲಪನ್ ಸುತಮ್ ।
ಗತೇ ತು ತಸ್ಮಿನ್ಪರತೋ ವಸಿಷ್ಠ ಪ್ರಮುಖೈರ್ದ್ವಿಜೈಃ॥ ೩೩॥
ನಿಯುಜ್ಯಮಾನೋ ರಾಜ್ಯಾಯ ನೈಚ್ಛದ್ರಾಜ್ಯಂ ಮಹಾಬಲಃ ।
ಸ ಜಗಾಮ ವನಂ ವೀರೋ ರಾಮಪಾದಪ್ರಸಾದಕಃ॥ ೩೪॥
ಗತ್ವಾತು ಸಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ಅಯಾಚದ್ ಭ್ರಾತರಂ ರಾಮಮಾರ್ಯಭಾವಪುರಸ್ಕೃತಃ॥ ೩೫॥
ತ್ವಮೇವ ರಾಜಾ ಧರ್ಮಜ್ಞ ಇತಿ ರಾಮಂ ಮಹೋಽಬ್ರವೀತ್ ।
ರಾಮೋಽಪಿ ಪರಮೋದಾರಃ ಸುಮುಖಃ ಸುಮಹಾಯಶಾಃ॥ ೩೬॥
ನ ಚೈಚ್ಛತ್ತಿತ್ತುದಾದೇಶಾದ್ರಾಜ್ಯಂ ರಾಮೋ ಮಹಾಬಲಃ ।
ಪಾದುಕೇ ಚಾಸ್ಯ ರಾಜ್ಯಾಯ ನ್ಯಾಸಂ ದತ್ತ್ವಾ ಪುನಃ ಪುನಃ॥ ೩೭॥
ನಿವರ್ತಯಾಮಾಸ ತತೋ ಭರತಂ ಭರತಾಗ್ರಜಃ ।
ಸ ಕಾಮಮನವಾಪ್ಯೈವ ರಾಮಹಾದಾವುಪಸ್ಪರ್ಶನ್ ॥ ೩೮॥
ನಂದಿಗ್ರಾಮೇಽಕರೋದ್ರಾಜ್ಯಂ ರಾಮಾಗಮನಕಾಂಕ್ಷಯಾ ।
ಗತೇ ತು ಭರತೇ ಶ್ರೀಮಾನ್ಸತ್ಯಸಂಧೋ ಜಿತೇಂದ್ರಿಯಃ॥ ೩೯॥
ರಾಮಸ್ತು ಪುನರಾಲಕ್ಷ್ಯ ನಾಗರಸ್ಯ ಜನಸ್ಯ ಚ ।
ತತ್ಕಾಗಮನಮೇಕಾಗ್ರೋ ದಂಡ ಕಾನ್ಪ್ರವಿವೇಶ ಹ॥ ೪೦॥
ಪ್ರವಿಶ್ಯ ತು ಮಹಾರಣ್ಯಂ ರಾಮೋ ರಾಜೀವಲೋಚನಃ ।
ವಿರಾಧಂ ರಾಕ್ಷಸಂ ಹತ್ವಾ ಶರಭಂಗಂ ದದರ್ಶ ಹ॥ ೪೧॥
ಸುತೀಕ್ಷ್ಣಂ ಚಾಪ್ಯಗಸ್ತ್ಯಂ ಚ ಅಗಸ್ತ್ಯ ಭ್ರಾತರಂ ತಥಾ ।
ಅಗಸ್ತ್ಯ ವಚನಾಚ್ಚೈವ ಜಗ್ರಾಹೈಂದ್ರಂ ಶರಾಸನಮ್ ॥ ೪೨॥
ಖಡ್ಗಂ ಚ ಪರಮಪ್ರೀತಸ್ತೂಣೀ ಚಾಕ್ಷಯಸಾಯಕೌ ।
ವಸತಸ್ತಸ್ಯ ರಾಮಸ್ಯ ವನೇ ವನಚರೈಃ ಸಹ॥ ೪೩॥
ಋಷಯೋಽಭ್ಯಾಗಮನ್ ಸರ್ವೇ ವಧಾಯಾಸುರರಕ್ಷಸಾಮ್ ।
ಸ ತೇಷಾಂ ಪ್ರತಿಶುಶ್ರಾವ ರಾಕ್ಷಸಾನಾಂ ತದಾ ವನೇ॥ ೪೪॥
ಪ್ರತಿಜ್ಞಾತಶ್ಚ ರಾಮೇಣ ವಧಃ ಸಂಯತಿ ರಕ್ಷಸಾಮ್ ।
ಋಷೀಣಾಮಗ್ನಿ ಕಲ್ಪಾನಾಂ ದಂಡಕಾರಣ್ಯ ವಾಸಿನಾಮ್ ॥ ೪೫॥
ತೇನ ತತ್ಪ್ರವ ವಸತಾ ಜನಸ್ಥಾನನಿವಾಸಿನೀ ।
ವಿರೂಪಿತಾ ಶೂರ್ಪಣಖಾ ರಾಕ್ಷಸೀ ಕಾಮರೂಪಿಣೀ॥ ೪೬॥
ತತಃ ಶೂರ್ಪಣಖಾವಾಕ್ಯಾದುದ್ಯುಕ್ತಾನ್ ಸರ್ವರಾಕ್ಷಸಾನ್ ।
ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಮ್ ॥ ೪೭॥
ನಿಜಘಾನ ರಣೇ ರಾಮಸ್ತೇಷಾಂ ಚೈವ ಪದಾನುಗಾನ್ ।
ವನೇ ತಸ್ಮಿನ್ನಿವಸತಾ ಜನಸ್ಥಾನನಿವಾಸಿನಾಮ್ ॥ ೪೮॥
ರಕ್ಷಸಾಂ ನಿಹತಾನ್ಯಾಸನ್ ಸಹಸ್ರಾಣಿ ಚತುರ್ದಶ ।
ತತೋ ಜ್ಞಾತಿವಧಂ ಶ್ರುತ್ವಾ ರಾವಣಃ ಕ್ರೋಧಮೂರ್ಛಿತಃ॥ ೪೯॥
ಸಹಾಯಂ ವರಯಾಮಾಸ ಮಾರೀಚಂ ನಾಮ ರಾಕ್ಷಸಮ್ ।
ವಾರ್ಯಮಾಣಃ ಸುಬಹುಶೋ ಮಾರೀಚೇನ ಸ ರಾವಣಃ॥ ೫೦॥

ನ ವಿರೋಧೋ ಬಲವತಾ ಕ್ಷಮೋ ರಾವಣ ತೇನ ತೇ ।
ಅನಾದೃತ್ಯ ತು ತದ್ವಾಕ್ಯಂ ರಾವಣಃ ಕಾಲಚೋದಿತಃ॥ ೫೧॥
ಜಗಾಮ ಸಹಮಾರೀಚಸ್ತಸ್ಯಾಶ್ರಮಪದಂ ತದಾ ।
ತೇನ ಮಾಯಾವಿನಾ ದೂರಮಪವಾಹ್ಯ ನೃಪಾತ್ಮಜೌ ॥ ೫೨॥
ಜಹಾರ ಭಾರ್ಯಾಂ ರಾಮಸ್ಯ ಗೃಧ್ರಂ ಹತ್ವಾಜಟಾಯುಷಮ್ ।
ಗೃಧ್ರಂ ಚ ನಿಹತಂ ದೃಷ್ಟ್ವಾ ಹೃತಾಂ ಶ್ರುತ್ವಾ ಚ ಮೈಥಿಲೀಮ್॥ ೫೩॥
ರಾಘವಃ ಶೋಕಸಂತಪ್ತೋ ವಿಲಲಾಪಾಕುಲೇಂದ್ರಿಯಃ ।
ತತಸ್ತೇನೈವ ಶೋಕೇನ ಗೃಧ್ರಂ ದಗ್ಧ್ವಾ ಜಟಾಯುಷಮ್ ॥ ೫೪॥
ಮಾರ್ಗಮಾಣೋ ವನೇ ಸೀತಾಂ ರಾಕ್ಷಸಂ ಸಂದದರ್ಶ ಹ ।
ಕಬಂಧಂ ನಾಮ ರೂಪೇಣ ವಿಕೃತಂ ಘೋರದರ್ಶನಮ್ ॥ ೫೫॥
ತಂ ನಿಹತ್ಯ ಮಹಾಬಾಹುರ್ದದಾಹ ಸ್ವರ್ಗತಶ್ಚ ಸಃ ।
ಸ ಚಾಸ್ಯ ಕಥಯಾಮಾಸ ಶಬರೀಂ ಧರ್ಮಚಾರಿಣೀಮ್ ॥ ೫೬॥
ಶ್ರಮಣಾಂ ಧರ್ಮನಿಪುಣಾಮಭಿಗಚ್ಛೇತಿ ರಾಘವ ।
ಸೋಽಭ್ಯಗಚ್ಛನ್ಮಹಾತೇಜಾ ಶಬರೀಂ ಶತ್ರುಸೂದನಃ॥ ೫೭॥
ಶಬರ್ಯಾ ಪೂಜಿತಃ ಸಮ್ಯಗ್ರಾಮೋ ದಶರಥಾತ್ಮಜಃ ।
ಪಂಪಾತೀರೇ ಹನುಮತಾ ಸಂಗತೋ ವಾನರೇಣ ಹ॥ ೫೮॥
ಹನೂಮದ್ವಚನಾಚ್ಚೈವ ಸುಗ್ರೀವೇಣ ಸಮಾಗತಃ ।
ಸುಗ್ರೀವಾಯ ಚ ತತ್ಸರ್ವಂ ಶಂಸದ್ರಾಮೋ ಮಹಾಬಲಃ॥ ೫೯॥
ಆದಿತಸ್ತದ್ಯಥಾವೃತ್ತಂ ಸೀತಾಯಾಶ್ಚ ವಿಶೇಷತಃ ।
ಸುಗ್ರೀವಶ್ಚಾಪಿ ತತ್ಸರ್ವಂ ಶ್ರುತ್ವಾರಾಮಸ್ಯ ವಾನರಃ॥ ೬೦॥
ಚಕಾರ ಸಖ್ಯಂ ರಾಮೇಣ ಪ್ರೀತಶ್ಚೈವಾಗ್ನಿಸಾಕ್ಷಿಕಮ್ ।
ತತೋ ವಾನರರಾಜೇನ ವೈರಾನುಕಥನಂ ಪ್ರತಿ॥೬೧॥
ರಾಮಾಯಾವೇದಿತಂ ಸರ್ವಂ ಪ್ರಣಯಾದ್ದುಃಖಿತೇನ ಚ ।
ಪ್ರತಿಜ್ಞಾತಂ ಚ ರಾಮೇಣ ತದಾ ವಾಲಿವಧಂ ಪ್ರತಿ॥ ೬೨॥
ವಾಲಿನಶ್ಚ ಬಲಂ ತತ್ರ ಕಥಯಾಮಾಸ ವಾನರಃ ।
ಸುಗ್ರೀವಃ ಶಂಕಿತಶ್ಚಾಸೀನ್ನಿತ್ಯಂ ವೀರ್ಯೇಣ ರಾಘವೇ॥ ೬೩॥
ರಾಘವಪ್ರತ್ಯ ಯಾರ್ಥಂ ತು ದುಂದುಭೇಃ ಕಾಯಮುತ್ತಮಮ್ ।
ದರ್ಶಯಾಮಾಸ ಸುಗ್ರೀವೋ ಮಹಾಪರ್ವತಸನ್ನಿಭಮ್ ॥ ೬೪॥
ಉತ್ಸಸ್ಮಯಿತ್ವಾಮಹಾಬಾಹುಃ ಪ್ರೇಕ್ಷ್ಯ ಚಾಸ್ಥಿಮಹಾಬಲಃ ।
ಪಾದಾಂಗುಷ್ಠೇನ ಚಿಕ್ಷೇಪ ಸಂಪೂರ್ಣಂ ದಶಯೋಜನಮ್॥ ೬೫॥
ಬಿಭೇದ ಚ ಪುನಃ ಸಾಲಾನ್ಸಪ್ತೈಕೇನ ಮಹೇಷ್ವಣಾ ।
ಗಿರಿಂ ರಸಾತಲಂ ಚೈವ ಜನಯನ್ ಪ್ರತ್ಯಯಂ ತದಾ ॥೬೬॥
ತತಃ ಪ್ರೀತಮನಾಸ್ತೇನ ವಿಶ್ವಸ್ತಃ ಸ ಮಹಾಕಪಿಃ ।
ಕಿಷ್ಕಿಂಧಾಂ ರಾಮಸಹಿತೋ ಜಗಾಮ ಚ ಗುಹಾಂ ತದಾ॥ ೬೭॥
ತತೋಽಗರ್ಜದ್ವರಿವರಃ ಸುಗ್ರೀವೋ ಹೇಮಪಿಂಗಲಃ ।
ತೇನ ನಾದೇನ ಮಹತಾ ನಿರ್ಜಗಾಮ ಹರೀಶ್ವರಃ॥೬೮॥

ಅನುಮಾನ್ಯ ತದಾ ತಾರಾಂ ಸುಗ್ರೀವೇಣ ಸಮಾಗತಃ।
ನಿಜಘಾನ ಚ ತತ್ಸೈನಂ ತರೇಣೈ ಕೇನ ರಾಘವಃ ॥೬೯॥

ತತಃ ಸುಗ್ರೀವವಚನಾದ್ವಾಲಿನಮಾಹವೇ।
ಸುಗ್ರೀವಮೇವ ತದ್ರಾಜ್ಯೇ ರಾಘವಃ ಪ್ರತ್ಯಪಾದಯತ್ ॥ ೭೦॥

ಸ ಚ ಸರ್ವಾನ್ ಸಮಾನೀಯ ವಾನರಾನ್ವನಗೋಚರಾನ್।
ದಿಶಃ ಪ್ರಸ್ಥಾಪಯಾಮಾಸ ದಿದೃಕ್ಷುರ್ಜನಕಾತ್ಮಜಾಮ್ ॥ ೭೧॥

ತತೋ ಗೃಧ್ರಸ್ಯ ವಚನಾತ್ಸಂಪಾತೇರ್ಹನುಮಾನ್ಬಲೀ।
ಶತಯೋಜನವಿಸ್ತೀರ್ಣಂ ಪುಪ್ಲವೇ ಲವಣಾರ್ಣವಮ್ ॥ ೭೨॥

ತತ್ರ ಲಂಕಾಂ ಸಮಾಸಾದ್ಯ ಪುರೀಂ ರಾವಣಪಾಲಿತಾಮ್।
ದದರ್ಶ ಸೀತಾಂ ಧ್ಯಾಯಂತೀಮಶೋಕವನಿಕಾಂ ಗತಾಮ್ ॥ ೭೩॥

ನಿವೇದಯಿತ್ವಾಭಿಜ್ಞಾನಂ ಪ್ರವೃತ್ತಿಂ ವಿ ನಿವೇದ್ಯ ಚ।
ಸಮಾಸ್ವಸ್ಯ ಚ ವೈದೇಹೀಂ ಮರ್ದಯಾಮಾಸ ತೋರಣಮ್ ॥
ಪಂಚ ಸೇನಾಗ್ರಗಾನ್ಹತ್ವಾ ಸಪ್ತಮಂತ್ರಿ ಸುತಾನಪಿ।
ಶೂರಮಕ್ಷಂ ಚ ನಿಷ್ಪಿಷ್ಯ ಗ್ರಹಣಂ ಸಮುಪಾಗಮತ್ ॥ ೭೪॥

ಅಸ್ತ್ರೇಣೋನ್ಮುಕ್ತಮಾತ್ಮಾನಂ ಜ್ಞಾತ್ವಾಜ್ಞಾಪೈತಾಮಹಾದ್ಬಲಾತ್।
ಮರ್ಷಯನ್ ರಾಕ್ಷಸಾನ್ವೀರೋ ಯಂತ್ರಿಣಸ್ತಾನ್ದದರ್ಶ ಹ ॥ ೭೬॥

ತತೋ ದಗ್ಧ್ವಾ ಪುರೀಂ ಲಂಕಾಮೃತೇ ಸೀತಾಂ ಚ ಮೈಥಿಲೀಮ್।
ರಾಮಾಯ ಪ್ರಿಯಮಾಖ್ಯಾತುಂ ಪುನರಾಯಾನ್ಮಹಾಕಪಿಃ ॥ ೭೭॥

ಸೋಽಭಿಗಮ್ಯ ಮಹಾತ್ಮಾನಂ ಕೃತ್ವಾರಾಮಂ ಪ್ರದಕ್ಷಿಣಮ್।
ನ್ಯವೇದಯದಮೇಯಾತ್ಮಾ ದೃಷ್ಟಾ ಸೀತೇತಿ ತತ್ತ್ವತಃ ॥ ೭೮॥

ತತಃ ಸುಗ್ರೀವಸಹಿತೋ ಗತ್ವಾತೀರಂ ಮಹೋದಧೇಃ।
ಸಮುದ್ರಂ ಕ್ಷೋಭಯಾಮಾಸ ಶರೈರಾದಿತ್ಯ ಸನ್ನಿಭೈಃ ॥ ೭೯॥

ದರ್ಶಯಾಮಾಸ ಚಾತ್ಮಾನಂ ಸಮುದ್ರಃ ಸರಿತಾಂ ಪತಿಃ।
ಸಮುದ್ರವಚನಾಚ್ಚೈವ ನಲಂ ಸೇತುಮಕಾರಯತ್ ॥ ೮೦॥

ತೇನ ಗತ್ವಾಪುರೀಂ ಲಂಕಾಂ ಹತ್ವಾ ರಾವಣಮಾಹವೇ।
ರಾಮಃ ಸೀತಾಮನುಪ್ರಾಪ್ಯ ಪರಾಂ ವ್ರೀಡಾಮುಪಾಗಮತ್ ॥ ೮೧॥

ತಾಮುವಾಚ ತತೋ ರಾಮಃ ಪರುಷಂ ಜನಸಂಸದಿ।
ಅಮೃಷ್ಯಮಾಣಾ ಸಾ ಸೀತಾ ವಿವೇಶ ಜ್ವಲನಂ ಸತೀ ॥ ೮೨॥

ತತೋಽಗ್ನಿವಚನಾತ್ಸೀತಾಂ ಜ್ಞಾತ್ವಾವಿಗತಕಲ್ಮಷಾಮ್।
ಕರ್ಮಣಾ ತೇನ ಮಹತಾ ತ್ರೈಲೋಕ್ಯಂ ಸಚರಾಚರಮ್ ॥ ೮೩॥

ಸದೇವರ್ಷಿಗಣಂ ತುಷ್ಟಂ ರಾಘವಸ್ಯ ಮಹಾತ್ಮನಃ।
ಬಭೌ ರಾಮಃ ಸಂಪ್ರಹೃಷ್ಟಃ ಪೂಜಿತಃ ಸರ್ವದೈವತೈಃ ॥ ೮೪॥

ಅಭಿಷಿಚ್ಯ ಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಮ್।
ಕೃತಕೃತ್ಯಸ್ತದಾ ರಾಮೋ ವಿಜ್ವರಃ ಪ್ರಮುಮೋದ ಹ ॥ ೮೫॥

ದೇವತಾಭ್ಯೋ ವರಂ ಪ್ರಾಪ್ಯ ಸಮುತ್ಥಾಪ್ಯ ಚ ವಾನರಾನ್।
ಅಯೋಧ್ಯಾಂ ಪ್ರಸ್ಥಿತೋ ರಾಮಃ ಪುಷ್ಪಕೇಣ ಸುಹೃದ್ವೃತಃ ॥ ೮೬॥

ಭರದ್ವಾಜಾಶ್ರಮಂ ಗತ್ವಾರಾಮಃ ಸತ್ಯಪರಾಕ್ರಮಃ।
ಭರತಸ್ಯಾಂತಿಕೇ ರಾಮೋ ಹನೂಮಂತಂ ವ್ಯಸರ್ಜಯತ್ ॥ ೮೭॥

ಪುನರಾಖ್ಯಾಯಿಕಾಂ ಜಲ್ಪನ್ ಸುಗ್ರೀವಸಹಿತಸ್ತದಾ।
ಪುಷ್ಪಕಂ ತತ್ಸಮಾರುಹ್ಯ ನಂದಿಗ್ರಾಮಂ ಯಯೌ ತದಾ ॥೮೮॥

ನಂದಿಗ್ರಾಮೇ ಜಟಾಂ ಹಿತ್ವಾಭ್ರಾತೃಭಿಃ ಸಹಿತೋಽನಘಃ।
ರಾಮಃ ಸೀತಾಮನುಪ್ರಾಪ್ಯ ರಾಜ್ಯಂ ಪುನರವಾಪ್ತವಾನ್ ॥೮೯॥

ಪ್ರಹೃಷ್ಟಮುದಿತೋಲೋಕಸ್ತುಷ್ಟಃ ಪುಷ್ಟಃ ಸುಧಾರ್ಮಿಕಃ।
ನಿರಾಮಯೋ ಹ್ಯ ರೋಗಶ್ಚದುರ್ಭಿಕ್ಷ ಭಯವರ್ಜಿತಃ ॥ ೯೦॥

ನ ಪುತ್ರಮರಣಂ ಕೇಚಿದ್ ರಕ್ಷ್ಯಂತಿ ಪುರುಷಾಃ ಕ್ವಚಿತ್।
ನಾರ್ಯಶ್ಚಾವಿಧವಾ ನಿತ್ಯಂ ಭವಿಷ್ಯಂತಿ ಪತಿವ್ರತಾಃ ॥೯೧॥

ನ ಚಾಗ್ನಿಜಂ ಭಯಂ ಕಿಂಚಿನ್ನಾಪ್ಸು ಮಜ್ಜಂತಿ ಜಂತವಃ।
ನ ವಾತಜಂ ಭಯಂ ಕಿಂಚಿನ್ನಾಪಿ ಜ್ವರಕೃತಂ ತಥಾ ॥ ೯೨॥

ನ ಚಾಪಿ ಕ್ಷುದ್ಭಯಂ ತತ್ರ ನ ತಸ್ಕರಭಯಂ ತಥಾ।
ನಗರಾಣಿ ಚ ರಾಷ್ಟ್ರಾಣಿ ಧನಧಾನ್ಯ ಯುತಾನಿ ಚ ॥ ೯೩॥

ನಿತ್ಯಂ ಪ್ರಮುದಿತಾಃ ಸರ್ವೇ ಯಥಾ ಕೃತಯುಗೇ ತಥಾ।
ಅಶ್ವಮೇಧಶತೈರಿಷ್ಟ್ವಾ ತಥಾ ಬಹುಸುವರ್ಣಕೈಃ ॥ ೯೪॥

ಗವಾಂ ಕೋಟ್ಯಯುತಂ ದತ್ತ್ವಾವಿದ್ವದ್ಭ್ಯೋ ವಿಧಿಪೂರ್ವಕಮ್।
ಅಸಂಖ್ಯೇಯಂ ಧನಂ ದತ್ತ್ವಾಬ್ರಾಹ್ಮಣೇಭ್ಯೋ ಮಹಾಯಶಾಃ ॥
ರಾಜವಂಶಾನ್ ಶತಗುಣಾನ್ ಸ್ಥಾಪಯಿಷ್ಯತಿ ರಾಘವಃ।
ಚಾತುರ್ವರ್ಣ್ಯಂ ಚ ಲೋಕೇಽಸ್ಮಿನ್ ಸ್ವೇ ಸ್ವೇ ಧರ್ಮೇ ನಿಯೋಕ್ಷ್ಯತಿ ॥
ದಶ ವರ್ಷಸಹಸ್ರಾಣಿ ದಶ ವರ್ಷ ಶತಾನಿ ಚ।
ರಾಮೋ ರಾಜ್ಯಮುಪಾಸಿತ್ವಾಬ್ರಹ್ಮಲೋಕಂ ಪ್ರಯಾಸ್ಯತಿ ॥ ೯೭॥

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಮಿತಮ್।
ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ ॥೯೮॥

ವಿತದಾಖ್ಯಾನಮಾಯುಷ್ಯಂ ಪಠನ್ ರಾಮಾಯಣಂ ನರಃ।
ಸಪುತ್ರಪೌತ್ರಃ ಸಗಣಃ ಪ್ರೇತ್ಯ ಸ್ವರ್ಗೇ ಮಹೀಯತೇ ॥೯೯॥

ಪಠನ್ ದ್ವಿಜೋ ವಾಗೃಷಭತ್ವಮೀಯಾತ್
ಸ್ಯಾತ್ ಕ್ಷತ್ರಿಯೋ ಭೂಮಿಪತಿತ್ವಮೀಯಾತ್।
ವಣಿಗ್ ಜನಃ ಪಣ್ಯ ಫಲತ್ವಮೀಯಾತ್
ಜನಶ್ಚಶೂದ್ರೋಽಪಿ ಮಹತ್ತ್ವಮೀಯಾತ್ ॥೧೦೦॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಬಾಲಕಾಂಡೇ ರಾಮಾಯಣಕಥಾಸಂಕ್ಷೇಪೋ ನಾಮ ಪ್ರಥಮಃ ಸರ್ಗಃ

* * *

Hanumān—the benevolent



Hanumān—being reminded of his might



Hanumān has located Sītā



Hanumān before Sītā in his true form



Hanumān destroying Aśoka Vana

Hanumān—burning Lanka



Hanumān—receiving Cūḍāmaṇi

Hanumān—the divine couple in his heart

॥ ಶ್ರೀಸೀತಾರಾಮಚಂದ್ರಾಭ್ಯಾಂ ನಮಃ ॥

ಶ್ರೀಮದ್ವಾಲ್ಮೀಕಿ ರಾಮಾಯಣಮ್

ಸುಂದರಕಾಂಡ

ಮೊದಲನೆಯ ಸರ್ಗ

ಹನುಮಂತನು ಸಮುದ್ರವನ್ನು ದಾಟಿದ್ದು, ಮಾರ್ಗಮಧ್ಯದಲ್ಲಿ ಮೈನಾಕನಿಂದ ಸ್ವಾಗತ, ಸುರಸೆಯ ಪರಾಜಯ, ಸಿಂಹಿಕೆಯ ವಧೆ, ಲಂಕೆಯ ಸೌಂದರ್ಯ ವೀಕ್ಷಣೆ –

ತತೋ ರಾವಣನೀತಾಯಾಃ ಸೀತಾಯಾಃ ಶತ್ರುಕರ್ಶನಃ ।
ಇಯೇಷ ಪದಮನ್ವೇಷ್ಟುಂ ಚಾರಣಾಚರಿತೇ ಪಥಿ ॥ ೧॥

ದುಷ್ಕರಂ ನಿಷ್ಪತಿದ್ದುದ್ದಂ ಚಿಕೀರ್ಷನ್ ಕರ್ಮ ವಾನರಃ ।
ಸಮುದಗ್ರಶಿರೋಗ್ರೀವೋ ಗವಾಂ ಪತಿರಿವಾಬಭೌ ॥ ೨॥

ಅಥ ವೈಡೂರ್ಯವರ್ಣೇಷು ಶಾದ್ವಲೇಷು ಮಹಾಬಲಃ ।
ಧೀರಃ ಸಲಿಲಕಲ್ಪೇಷು ವಿಚುಕಾರ ಯಥಾಸುಖಮ್ ॥ ೩॥

ನಿಘ್ನನ್ ವಿತ್ರಾಸಯನ್ ಧೀಮಾನುರಸಾ ಪಾದಪಾನ್ ಹರನ್ ।
ಮೃಗಾಂಶ್ಚ ಸುಬಹೂನ್ನಿಘ್ನನ್ ಪ್ರವವ್ರ ಇವ ಕೇಸರೀ ॥ ೪॥

ನೀಲಲೋಹಿತಮಾಂಜಿಷ್ಠಪತ್ರವರ್ಣೈಃ ಸಿತಾಸಿತೈಃ ।
ಸ್ವಭಾವವಿಹಿತೈಶ್ಚಿತ್ರೈರ್ಧಾತುಭಿಃ ಸಮಲಂಕೃತಮ್ ॥ ೫॥

ಕಾಮರೂಪಿಭಿರಾವಿಷ್ಟಮಭೀಕ್ಷ್ಣಂ ಸಪರಿಚ್ಛದೈಃ ।
ಯಕ್ಷಕಿನ್ನರಗಂಧರ್ವೈರ್ದೇವಕಲ್ಪೈಶ್ಚ ಪನ್ನಗೈಃ ॥ ೬॥

ಸ ತಸ್ಯ ಗಿರಿವರ್ಯಸ್ಯ ತಲೇ ನಾಗವರಾಯುತೇ ।
ತಿಷ್ಠನ್ ಕಪಿವರಸ್ತತ್ರ ಪ್ರಯತೇ ನಾಗ ಇವಾಬಭೌ ॥ ೭॥

ಶತ್ರುಸಂಹಾರಕನಾದ ಹನುಮಂತನು (ಜಾಂಬವಂತರ ಪ್ರೇರಣೆಯಿಂದ) ಅದ್ಭುತವಾದ ಶಕ್ತಿಯನ್ನು ಸ್ಫುರಿಸಿಕೊಂಡು ರಾವಣನಿಂದ ಅಪಹೃತಳಾದ ಸೀತೆಯ ಜಾಡನ್ನು ಹುಡುಕುವ ಸಲುವಾಗಿ, ಚಾರಣಾದಿ ದೇವತೆಗಳು ಸಂಚರಿಸುವ ಆಕಾಶ ಮಾರ್ಗದಿಂದ ಪ್ರಯಾಣ ಮಾಡಲು ಬಯಸಿದನು. ॥೧॥

ಹನುಮಂತನು ಸಾಟಿಯೇ ಇಲ್ಲದ, ಅತ್ಯಂತ ಮಹತ್ತರವಾದ ಕಾರ್ಯವನ್ನು ಮಾಡಲು ನಿರ್ಧರಿಸಿ, ತಲೆ ಮತ್ತು ಕುತ್ತಿಗೆಯನ್ನು ಮೇಲಕ್ಕೆತ್ತಿ ನೆಟ್ಟಿದುನಿಂತಿದ್ದ ಆವನು ಗೂಳಿಗಳ ರಾಜನಂತೆ ವಿರಾಜಿಸುತ್ತಿದ್ದನು. ॥೨॥ ಬಳಿಕ ಅಂತಹ ಧೀರನಾದ, ಮಹಾಬಲನಾದ ಹನುಮಂತನು – ವೈಡೂರ್ಯದಂತೆ ಕೋಭಿಸುತ್ತಿದ್ದು, ಮೃದುವಾದ, ಸ್ವಚ್ಛವಾದ, ವಿಶಾಲ ಜಲರಾಶಿಯ ವಾಯುಸ್ಪರ್ಷದಿಂದ ಏಳುವ ತರಂಗಗಳಿಂದ ಕೋಭಿಸುತ್ತಿರುವ ಆ ಹುಚ್ಚನೆಯ ಹುಲ್ಲುಗಾವಲಿನಲ್ಲಿ (ಮುಂದಿನ ಕಾರ್ಯವನ್ನು ಯೋಚಿಸುತ್ತ) ಆತ್ತಂದಿತ್ತ ಸಂಚರಿಸಿದನು. ॥ ೩॥

ಪ್ರತಿಭಾಶಾಲಿಯಾದ ಆ ಹನುಮಂತನು ಕೊಬ್ಬಿದ ಸಿಂಹದಂತೆ ವಿಜೃಂಭಿಸಿದನು. ಅವನು ತಿರುಗಾಡುತ್ತಿರುವಾಗ ಅವನ ಉಬ್ಬಿದ ಎದೆಗೆ ಎದುರಾಗಿ ಸಿಕ್ಕಿದ ಅನೇಕ ವೃಕ್ಷಗಳು ಮುರಿದು ಬಿದ್ದುವು, ವೇಗವಾಗಿ ಅವನು ಹೋಗುತ್ತಿರುವಾಗ ಪಕ್ಷಿಗಳು ಭಯಗೊಂಡು ಚದುರಿ ಹಾರಿ ಹೋಗುತ್ತಿದ್ದವು. ಅನೇಕ ಮೃಗಗಳು ಕಾಲಿನ ತುಳಿತಕ್ಕೆ ಸಿಕ್ಕಿ ಸತ್ತು ಹೋದುವು. ॥ ೪॥ ಹನುಮಂತನು ಹೋಗುತ್ತಿದ್ದ ಪರ್ವತವು ಸ್ವಭಾವಸಿದ್ಧವಾದ ಕಪ್ಪು, ಕೆಂಪು, ಹಸಿರು, ಎಣ್ಣೆಗೆಂಪು, ಬಳಿ ಹಾಗೂ ನೀಲಿ ಬಣ್ಣಗಳ ಧಾತುಗಳಿಂದ ಅಲಂಕೃತ ವಾಗಿತ್ತು. ॥ ೫॥ ಆಲ್ಲಿ ದೇವತೆಗಳಿಗೆ ಸಮಾನರಾದ ಬೇಕುಬೇಕಾದಂತೆ ರೂಪಗಳನ್ನು ಧರಿಸುವ ಸಾಮರ್ಥ್ಯವುಳ್ಳ, ಯಕ್ಷ ಗಂಧರ್ವ, ಕಿನ್ನರರಿಂದಲೂ, ಪನ್ನಗಗಳಿಂದಲೂ ಹಾಗೂ ಆನೆಗಳಿಂದಲೂ ಕೂಡಿದ್ದ ಆ ಮಹೇಂದ್ರಗಿರಿಯ ತಪ್ಪಲು ಪ್ರದೇಶದಲ್ಲಿ ನಿಂತಿದ್ದ ಹನುಮಂತನು ಜಲರಾಶಿಯ ಮಧ್ಯದಲ್ಲಿರುವ ಒಂದು ಮಹಾಗಜದಂತೆ ಪ್ರಕಾಶಿಸುತ್ತಿದ್ದನು. ॥ ೬-೭॥

ಸ ಸೂರ್ಯಾಯ ಮಹೇಂದ್ರಾಯ ಪವನಾಯ ಸ್ವಯಂಭುವೇ ।
ಭೂತೇಭ್ಯಶ್ಚಾಂಜಲಿಂ ಕೃತ್ವಾ ಚಕಾರ ಗಮನೇ ಮತಿಮ್ ॥ ೮॥

ಅಂಜಲಿಂ ಪ್ರಾಙ್ಮುಖಃ ಕುರ್ವನ್ ಪವನಾಯಾತ್ಮಯೋನಯೇ ।
ತತೋ ಹಿ ವವೃಧೇ ಗಂತುಂ ದಕ್ಷಿಣೋ ದಕ್ಷಿಣಾಂ ದಿಶಮ್ ॥

ಪ್ಲವಂಗಪ್ರವರೈರ್ದೃಷ್ಟಃ ಪ್ಲವನೇ ಕೃತನಿಶ್ಚಯಃ ।
ವವೃಧೇ ರಾಮವೃದ್ಧ್ಯರ್ಥಂ ಸಮುದ್ರ ಇವ ಪರ್ವಸು ॥

ನಿಷ್ಪೀಡಿತಶರೀರಸನ್ ಲಿಲಂಘಯಿಷುರರ್ಣವಮ್ ।
ಬಾಹುಭ್ಯಾಂ ಪೀಡಯಾಮಾಸ ಚರಣಾಭ್ಯಾಂ ಚ ಪರ್ವತಮ್ ॥

ಸ ಚಚಾಲಾಚಲಶ್ಚಾಪಿ ಮುಹೂರ್ತಂ ಕಪಿಪೀಡಿತಃ ।
ತರೂಣಾಂ ಪುಷ್ಪಿತಾಗ್ರಾಣಾಂ ಸರ್ವಂ ಪುಷ್ಪಮಶಾತಯತ್ ॥

ತೇನ ಪಾದಪಮುಕ್ತೇನ ಪುಷ್ಪೌಘೇಣ ಸುಗಂಧಿನಾ ।
ಸರ್ವತಃ ಸಂವೃತಃ ಶೈಲೋ ಬಭೌ ಪುಷ್ಪಮಯೋ ಯಥಾ ॥

ತೇನ ಚೋತ್ತಮವೀರ್ಯೇಣ ಪೀಡ್ಯಮಾನಃ ಸ ಪರ್ವತಃ ।
ಸಲಿಲಂ ಸಂಪ್ರಸುಸ್ರಾವ ಮದಂ ಮತ್ತ ಇವ ದ್ವಿಪಃ ॥ ೧೪॥

ಪೀಡ್ಯಮಾನಸ್ತು ಬಲಿನಾ ಮಹೇಂದ್ರಸ್ತೇನ ಪರ್ವತಃ ।
ರೀತೀರ್ನಿರ್ವರ್ತಯಾಮಾಸ ಕಾಂಚನಾಂ ಜನರಾಜತೀಃ ॥

ಮುಮೋಚ ಚ ಶಿಲಾಃ ಶೈಲೋ ವಿಶಾಲಾಃ ಸುಮನಃಶಿಲಾಃ ।
ಮಧ್ಯಮೇನಾರ್ಚಿಷಾ ಜುಷ್ಟೋ ಧೂಮರಾಜೀರಿವಾನಲಃ ॥

ಬಳಿಕ ಹನುಮಂತನು ಸೂರ್ಯನಿಗೂ, ಮಹೇಂದ್ರನಿಗೂ, ವಾಯುದೇವರಿಗೂ, ಬ್ರಹ್ಮದೇವರಿಗೂ ಹಾಗೂ ಇತರ ದೇವತೆಗಳಿಗೂ, ಭೂತಗಣಗಳಿಗೂ ಕೈಜೋಡಿಸಿ ನಮಸ್ಕರಿಸಿ ಮುಂದೆ ಹೋಗಲು ನಿಶ್ಚಯಿಸಿದನು. ॥ ೮॥ ಸರ್ವಕಾರ್ಯ ಸಮರ್ಥನಾದ ಮಾರುತಿಯು ಪೂರ್ವಾಭಿಮುಖವಾಗಿ ನಿಂತು ತನ್ನ ಹುಟ್ಟಿಗೆ ಕಾರಣನಾದ ವಾಯುದೇವರಿಗೆ ಪುನಃ ನಮಸ್ಕರಿಸಿದನು. ದಕ್ಷಿಣ ದಿಕ್ಕಿನಲ್ಲಿರುವ ಸಮುದ್ರವನ್ನು ಲಂಘಿಸುವ ಸಲುವಾಗಿ ಎತ್ತರವಾಗಿ ಬೆಳೆಯತೊಡಗಿದನು. ॥ ೯॥ ಹಾರಿಕೊಂಡೇ ಸಮುದ್ರವನ್ನು ದಾಟಬೇಕೆಂದು ದೃಢವಾಗಿ ನಿಶ್ಚಯಿಸಿದ್ದ ಹನುಮಂತನು ಶ್ರೀರಾಮನ ಕಾರ್ಯಸಿದ್ಧಿಗಾಗಿ, ಪರ್ವಕಾಲದಲ್ಲಿ ಸಮುದ್ರವು ಉಕ್ಕೇರುವಂತೆ ಪ್ಲವಂಗಶ್ರೇಷ್ಠರೆಲ್ಲರೂ ವೀಕ್ಷಿಸಿದರು. ॥ ೧೦॥ ಸಾಗರವನ್ನು ಲೀಲಾಜಾಲವಾಗಿ ದಾಟಲು ಮಾರುತಿಯು ಅಪರಿಮಿತವಾಗಿ ಬೆಳೆದು ನಿಂತನು. ಹಾರಲು ಉದ್ಯುಕ್ತನಾದ ಅವನು ಮಹೇಂದ್ರ ಗಿರಿಯನ್ನು ಕೈಗಳಿಂದಲೂ ಕಾಲುಗಳಿಂದಲೂ ಬಲವಾಗಿ ಅದುಮಿದನು. ॥ ೧೧॥ ಕಪೀಶ್ವರನು ಆ ಪರ್ವತದನ್ನು ಅದುಮಿದಾಗ ಸ್ವಲ್ಪ ಹೊತ್ತಿನವರೆಗೆ ಅದು ಅಲುಗಾಡುತ್ತಲೇ ಇತ್ತು. ಮರಗಳ ತುದಿಯಲ್ಲಿ ಅರಳಿನಿಂತ ಪುಷ್ಪಗಳೆಲ್ಲ ಕೆಳಗುದುರಿದವು. ॥ ೧೨ ॥ ಕೆಳಕ್ಕುದುರಿದ ಸುಗಂಧ ಯುಕ್ತವಾದ ಪುಷ್ಪರಾಶಿಯಿಂದ ಆ ಪರ್ವತವು ತುಂಬಿ ಹೋಯಿತು. ತತ್ಕಾಲದಲ್ಲಿ ಅದು ಹೂವಿನದೇ ಪರ್ವತವೋ ಎಂಬಂತೆ ಕಾಣುತ್ತಿತ್ತು. ॥ ೧೩॥ ಮಹಾಪರಾಕ್ರಮಿಯಾದ ಹನುಮಂತನಿಂದ ಅದುಮಲ್ಪಟ್ಟ ಆ ಪರ್ವತವು, ಮದಿಸಿದ ಆನೆಯು ತನ್ನ ಗಂಡಸ್ಥಲದಿಂದ ಮದೋದಕವನ್ನು ಸುರಿಸುವಂತೆ, ಎಲ್ಲ ಕಡೆಗಳಿಂದಲೂ ನೀರನ್ನು ಹೊರಚಿಮ್ಮಿಸಿತು. ॥ ೧೪॥ ಮಹಾಬಲಿಷ್ಠನಾದ ಮಾರುತಿಯ ಕೈ-ಕಾಲುಗಳಿಂದ ಅದುಮಲ್ಪಟ್ಟ ಮಹೇಂದ್ರಪರ್ವತವು ತನ್ನಲ್ಲಿ ಅಡಗಿದ್ದ ಭಂಗಾರ, ಬೆಳ್ಳಿ, ಕಬ್ಬಿಣ ಮುಂತಾದ ಧಾತುಗಳನ್ನು ಹೊರಹಾಕಿತು. ॥ ೧೫॥ ಮಹಾ ಅಗ್ನಿಯ ಸಪ್ತಾರ್ಚಿಗಳಲ್ಲಿ 'ಸುಲೋಹಿತ' * ಎಂಬುದು ಮಧ್ಯಮಾರ್ಚಿಯು ಆದರ ಜ್ವಾಲೆಗಳಿಂದ ಹೊಗೆಯು ಹೊರಸೂಸುವಂತೆ ಆಂಜನೇಯ ನಿಂದ ಅದುಮಲ್ಪಟ್ಟ ಆ ಮಹೇಂದ್ರಗಿರಿಯಿಂದ ಮಣಿ ಶಿಲೆಗಳಿಂದ ಯುಕ್ತವಾದ ದೊಡ್ಡ-ದೊಡ್ಡ ಬಂಡೆಗಳು ಸಿಡಿದು ಪುಡಿ-ಪುಡಿಯಾಗಿ ಬಿದ್ದವು. ** ॥ ೧೬॥

ಹನುಮಂತನಿಂದ ಅದುಮಲ್ಪಟ್ಟ ಪರ್ವತವು ಕಂಪಿಸಿದಾಗ, ಪರ್ವತದ ಗುಹೆಗಳಲ್ಲಿದ್ದ ಎಲ್ಲ ಪ್ರಾಣಿಗಳು ತೊಂದರೆಗೊಳಗಾಗಿ ಎಲ್ಲ ಕಡೆಗಳಿಂದಲೂ ವಿಕಾರ ಸ್ವರಗಳಿಂದ

---

* ಕಾಲೀಕರಾಲೀ ಚ ಮನೋಜವಾ ಚ ಸುಲೋಹಿತಾಯಾ ಚ ಸುಧೂಮ್ರವರ್ಣಾ ।
ಸ್ಫುಲಿಂಗಿನೀ ವಿಶ್ವರುಚೀ ಚ ದೇವಿ ಲೇಲಾಯಮಾನಾ ಇತಿ ಸಪ್ತಜಿಹ್ವಾ ॥ (ಮುಂಡಕೋಪನಿಷತ್ತು ೧/೨/೪)
ಇವು ಏಳು ಅಗ್ನಿಜಾಲೆಗಳು (ಸಾಲಿಗೆಗಳು) ಅದರಲ್ಲಿ ಮಧ್ಯದ ಜ್ವಾಲೆಯಾದ 'ಸುಲೋಹಿತ' ದಿಂದ ಧೂಮವು ಹೊರಹೊಮ್ಮುತ್ತದೆ.

** ಪರ್ವತದ ಬಂಡೆಗಳ ಹೊಡೆತದಿಂದ ಉಂಟಾದ ಅಗ್ನಿಯಿಂದ ಬೆಂದ ಆ ಪರ್ವತದಿಂದ ಭಂಗಾರ, ಬೆಳ್ಳಿ ಮೊದಲಾದ ಧಾತುಗಳು ಕರಗಿ ನೀರಾಗಿ ಹರಿಯತೊಡಗಿದವು.

ಗಿರಿಣಾ ಪೀಡ್ಯಮಾನೇನ ಪೀಡ್ಯಮಾನಾನಿ ಸರ್ವತಃ।
ಗುಹಾವಿಷ್ಟಾನಿ ಭೂತಾನಿ ವಿನೇದುರ್ವಿಕೃತೈಃ ಸ್ವರೈಃ ॥ ೧೬॥

ಸ ಮಹಾಸತ್ತ್ವಸಂನಾದಃ ಶೈಲಪೀಡಾನಿಮಿತ್ತಜಃ।
ಪೃಥಿವೀಂ ಪೂರಯಾಮಾಸ ವಿಶಶ್ಚೋಪವನಾನಿ ಚ ॥ ೧೮॥

ತಿರೋಭಿಃ ಪ್ರಹುಭಿಃ ಸರ್ಪಾ ವೃಕ್ಷಸ್ಥಿಕಲಕೃಕ್ಷಕೈಃ।
ವಮಂತಃ ಪಾವಕಂ ಘೋರಂ ದದಂಶುರ್ದಶನೈಃ ಶಿಲಾಃ ॥ ೧೯॥

ತಾಸ್ತದಾ ಸವಿಷೈರ್ದಷ್ಟಾಃ ಕುಪಿತೈಸ್ತೈರ್ಮಹಾಶಿಲಾಃ।
ಜಜ್ವಲುಃ ಪಾವಕೋದ್ದೀಪ್ತಾ ಬಿಭಿದುಶ್ಚ ಸಹಸ್ರಧಾ ॥ ೨೦॥

ಯಾನಿ ಚೌಷಧಜಾಲಾನಿ ತಸ್ಮಿನ್ಜಾತಾನಿ ಪರ್ವತೇ।
ವಿಷಘ್ನಾನ್ಯಪಿ ನಾಗಾನಾಂ ನ ಶೇಕುಃ ಶಮಿತುಂ ವಿಷಮ್ ॥ ೨೧॥

ಭಿದ್ಯತೇಽಯಂ ಗಿರಿರ್ಘೂರ್ತೈರಿತಿ ಮತ್ವಾ ತಪಸ್ವಿನಃ।
ತ್ರಸ್ತಾ ವಿದ್ಯಾಧರಾಸ್ತಸ್ಮಾದುತ್ಪೇತುಃ ಸ್ತ್ರೀಗಣೈಃ ಸಹ ॥ ೨೨॥

ಪಾನಭೂಮಿಗತಂ ಹಿತ್ವಾ ಹೈಮಮಾಸವಭಾಜನಮ್।
ಪಾತ್ರಾಣಿ ಚ ಮಹಾರ್ಹಾಣಿ ಕರ್ಕಾಂಶ್ಚ ಹಿರಣ್ಮಯಾನ್ ॥ ೨೩॥

ಲೇಹ್ಯಾನುಚ್ಚಾವಚಾನ್ ಭಕ್ಷ್ಯಾನ್ ಮಾಂಸಾನಿ ವಿವಿಧಾನಿ ಚ।
ಆರ್ಷಭಾಣಿ ಚ ಚರ್ಮಾಣಿ ವಿಡ್ಗಾಂಶ್ಚ ಕನಕತ್ಸರೂನ್ ॥ ೨೪॥

ಕೃತಕಂಠಗುಣಾಃ ಕ್ಷೀಬಾ ರಕ್ತಮಾಲ್ಯಾನುಲೇಪನಾಃ।
ರಕ್ತಾಕ್ಷಾಃ ಪುಷ್ಕರಾಕ್ಷಾಶ್ಚ ಗಗನಂ ಪ್ರತಿಪೇದಿರೇ ॥ ೨೫॥

ಹಾರನೂಪುರಕೇಯೂರಶಾರಿಹಾರ್ಯಧರಾಃ ಸ್ತ್ರಿಯಃ।
ವಿಸ್ಮಿತಾಃ ಸಸ್ಮಿತಾಸ್ತಸ್ಥುರಾಕಾಶೇ ರಮಣೈಃ ಸಹ ॥ ೨೬॥

ಕೂಗಿಕೊಂಡವು. ಪರ್ವತದ ಕಂಪನದಿಂದ ಗುಹೆಗಳಲ್ಲಿ ವಾಸಮಾಡುತ್ತಿದ್ದ ಎಲ್ಲ ಪ್ರಾಣಿಗಳು ಭಯದಿಂದ ಆರ್ತನಾದಗಳನ್ನು ಮಾಡಿದವು ಆ ಆಕ್ರಂದನ ಧ್ವನಿಯು ಭೂಮಂಡಲವನ್ನು, ಉಪವನಗಳನ್ನು, ಹತ್ತು ದಿಕ್ಕುಗಳನ್ನು ವ್ಯಾಪಿಸಿತು. ॥ ೧೬-೧೮॥ ಸ್ಪಷ್ಟವಾಗಿ ಕಾಣುವ ಸ್ಪಷ್ಟಿಕಲಕ್ಷಣಗಳಿಂದ ಕೂಡಿಕೊಂಡಿದ್ದ ದೊಡ್ಡ-ದೊಡ್ಡ ಹೆಡೆಗಳನ್ನು ಹೊಂದಿದ್ದ ಭಾರೀ ಸರ್ಪಗಳು ಪರ್ವತದ ನೆಹುಗುವಿಕೆಯಿಂದ ಖಿತಿಗೊಂಡು ಮುಖದಿಂದ ಘೋರವಾದ ವಿಷಾಗ್ನಿಯನ್ನು ಕಾರುತ್ತಾ ವಿಷದ ಹಲ್ಲುಗಳಿಂದ ಬಂಡೆಗಳನ್ನೇ ಕಚ್ಚುತ್ತಿದ್ದವು. ॥ ೧೯॥ ಕೋಪಗೊಂಡ ಆ ಮಹಾ ವಿಷಸರ್ಪಗಳಿಂದ ಕಚ್ಚಲ್ಪಟ್ಟ ಮಹೇಂದ್ರಪರ್ವತದ ದೊಡ್ಡ-ದೊಡ್ಡ ಬಂಡೆಗಳು ಆಗ್ನಿ ಯಿಂದ ಉದ್ದೀಪನಗೊಂಡು ಪ್ರಜ್ವಲಿಸುತ್ತಾ ಕ್ಷಣಮಾತ್ರದಲ್ಲಿ ಸಾವಿರಾರು ಚೂರು ಬುರುಗಳಾಗಿ ಒಡೆದು ಹೋದವು. ॥ ೨೦॥ ಆ ಪರ್ವತದಲ್ಲೇ ಹುಟ್ಟಿ ಬೆಳೆದಿದ್ದ ವಿಷವನ್ನು ಹೋಗಲಾಡಿಸಲು ಸಮರ್ಥವಾಗಿದ್ದ ಔಷಧಿಲತೆಗಳ ಸಮೂಹಗಳು ಕೂಡ ಖಿತಿಗೊಂಡ ಸರ್ಪಗಳ ವಿಷವನ್ನು ಉಪಶಮನಗೊಳಿಸಲು ಅಸಮರ್ಥವಾದುವು. ॥ ೨೧॥

ಯಾವುದೋ ಮಹಾಪ್ರಾಣಿಗಳಿಂದ ಈ ಮಹೇಂದ್ರ ಪರ್ವತವು ಭೇದಿಸಲ್ಪಡುತ್ತಿದೆ ಎಂದು ಭಾವಿಸಿ, ಅಲ್ಲಿ ಆಶ್ರಯವನ್ನು ಪಡೆದಿದ್ದ ತಪಸ್ವಿಗಳು ಭಯಗೊಂಡು ಅಲ್ಲಿಂದ ಧಾವಿಸಿದರು. ವಿದ್ಯಾಧರರೂ ಭಯದಿಂದ ತಮ್ಮ ಸ್ತ್ರೀಯರೊಡನೆ ಅಂತರಿಕ್ಷದ ಕಡೆಗೆ ಹಾರಿದರು. ॥ ೨೨॥ ಆ ವಿದ್ಯಾಧರರು ಪಾನಭೂಮಿಯಲ್ಲಿದ್ದ ಮಧುರ ಪಾನೀಯಗಳನ್ನು, ಭಂಗಾರದ ಪಾತ್ರೆಗಳನ್ನು, ಅಮೂಲ್ಯವಾದ ಭೋಜನ ಪಾತ್ರೆಗಳನ್ನು, ಕನಕ ಕಲಶಗಳನ್ನು ಭಯದಿಂದ ಅಲ್ಲೆ ಬಿಟ್ಟುಹೋದರು. ॥ ೨೩॥ ಅವರು ನಾನಾವಿಧವಾದ ಲೇಹ್ಯಗಳನ್ನು, ಬಗೆಬಗೆಯ ಭಕ್ಷ್ಯಗಳನ್ನು, ಚೆನ್ನಾಗಿ ಮಾಗಿದ ವಿವಿಧ ಮಧುರರಸ ಫಲಗಳನ್ನು ಎತ್ತಿನ ಚರ್ಮದಿಂದ ಮಾಡಿದ ಗುರಾಣಿಗಳನ್ನು, ಚಿನ್ನದ ಹಿಡಿಗಳಿಂದ ಕೂಡಿದ ಕತ್ತಿಗಳನ್ನು ಪರಿತ್ಯಜಿಸಿ ಆಕಾಶವನ್ನು ಸೇರಿದರು. ॥ ೨೪॥ ಅವರು ಕಂಠಾಭರಣಗಳನ್ನು, ಕೆಂಪುಹೂವಿನ ಮಾಲೆಗಳನ್ನು ಧರಿಸಿ, ಗಂಧವನ್ನು ಪೂಸಿಕೊಂಡಿದ್ದರು. ಕೆಂಗಣ್ಣರೂ, ಕಮಲಾಕ್ಷರೂ ಆಗಿದ್ದು, ಪಾನಭೂಮಿಯಲ್ಲಿ ಮದ್ಯಾಸವಗಳನ್ನು ಸೇವಿಸುತ್ತಾ ಆನಂದ ತುಂದಿಲರಾಗಿದ್ದ ವಿದ್ಯಾಧರರು ಭಯದಿಂದ ಆಕಾಶಕ್ಕೆ ನೆಗೆದರು. ॥ ೨೫॥ ಹಾರಗಳನ್ನು, ಕಾಲಂದಿಗೆಗಳನ್ನು, ತೋಳಬಂದಿಗೆಗಳನ್ನು, ಬಳೆಗಳನ್ನು ಧರಿಸಿದ್ದ ವಿದ್ಯಾಧರ ಸ್ತ್ರೀಯರು ಹನುಮಂತನ ಬೃಹದಾಕಾರವನ್ನು, ಪರ್ವತವನ್ನು ಅಲ್ಲಾಡಿಸುತ್ತಿದ್ದ ಅವನ ಹೆಜ್ಜೆಗಳ ಸಂಘಟನೆಯನ್ನು ನೋಡುತ್ತಾ, ಸಂಭ್ರಮಾಶ್ಚರ್ಯಗಳಿಂದ, ಮಂದಹಾಸದಿಂದ ತಮ್ಮ ಪ್ರಿಯಕರರೊಡಗೂಡಿ ಅಂತರಿಕ್ಷದಲ್ಲಿ ನಿಂತಿದ್ದರು. ॥ ೨೬॥ ಹೀಗೆ ವಿದ್ಯಾಧರರೂ, ಮಹರ್ಷಿಗಳೂ ನಿರಾಲಂಬರಾಗಿ ಆಕಾಶದಲ್ಲಿ ನಿಂತುಕೊಂಡು, ತಮ್ಮ ವಾಯುಸ್ತಂಭನವೆಂಬ

ದರ್ಶಯಂಶ್ಚೋ ಮಹಾವಿದ್ಯಾಂ ವಿದ್ಯಾಧರಮಹರ್ಷಯಃ ।
ಸಪ್ರಿಯಾಸ್ತಸ್ಯುರಾಕಾಶೇ ವೀಕ್ಷಾಂಚಕ್ರುಶ್ಚ ಪರ್ವತಮ್ ॥ ೨೭॥

ಶುಶ್ರುವುಶ್ಚ ತದಾ ಶಬ್ದ ಮೃಷೀಣಾಂ ಭಾವಿತಾತ್ಮನಾಮ್ ।
ಚಾರಣಾನಾಂ ಚ ಸಿದ್ಧಾನಾಂ ಸ್ಥಿತಾನಾಂ ವಿಮಲೇಽಂಬರೇ ॥ ೨೮॥

ವಿಷ ಪರ್ವತಸಂಕಾಶೋ ಹನೂಮಾನ್ ಮಾರುತಾತ್ಮಜಃ।
ತಿತೀರ್ಷತಿ ಮಹಾವೇಗಃ ಸಾಗರಂ ಮಕರಾಲಯಮ್ ॥ ೨೯॥

ರಾಮಾರ್ಥಂ ವಾನರಾರ್ಥಂ ಚ ಚಿಕೀರ್ಷನ್ ಕರ್ಮ ದುಷ್ಕರಮ್ ।
ಸಮುದ್ರಸ್ಯ ಪರಂ ಪಾರಂ ದುಷ್ಪ್ರಾಪಂ ಪ್ರಾಪ್ತುಮಿಚ್ಛತಿ ॥ ೩೦॥

ಇತಿ ವಿದ್ಯಾಧರಾಃ ಶ್ರುತ್ವಾ ವಚಸ್ತೇಷಾಂ ತಪಸ್ವಿನಾಮ್ ।
ತಮಪ್ರಮೇಯಂ ದದೃಶುಃ ಪರ್ವತೇ ವಾನರರ್ಷಭಮ್ ॥ ೩೧॥

ದುದ್ಧುವೇ ಚ ಸ ರೋಮಾಣಿ ಚಕಂಪೇ ಚಾಚಲೋಪಮಃ ।
ನನಾದ ಸುಮಹಾನಾದಂ ಸ ಮಹಾನಿವ ತೋಯದಃ ॥ ೩೨॥

ಆನುಪೂರ್ವ್ಯೇಣ ವೃತ್ತೌ ಚ ಲಾಂಗೂಲಂ ರೋಮಭಿಶ್ಚಿತಮ್ ।
ಉತ್ಪತಿಷ್ಯನ್ ವಿಚಿಕ್ಷೇಪ ಪಕ್ಷಿರಾಜ ಇವೋರಗಮ್ ॥ ೩೩॥

ತಸ್ಯ ಲಾಂಗೂಲಮಾವಿದ್ಧಮಾತ್ತವೇಗಸ್ಯ ಪೃಷ್ಠತಃ ।
ದದೃಶೇ ಗರುಡೇನೇವ ಹ್ರಿಯಮಾಣೋ ಮಹೋರಗಃ ॥ ೩೪॥

ಬಾಹೂ ಸಂಸ್ತಂಭಯಾಮಾಸ ಮಹಾಪರಿಘಸನ್ನಿಭೌ ।
ಸಸಾದ ಚ ಕಟೀ ಕಟ್ಯಾಂ ಚರಣೌ ಸಂಚುಕೋಚ ಚ ॥ ೩೫॥

ಸಂಪೂಜ್ಯ ಚ ಭೂಸ್ ಶ್ರೀಮಾಂಸ್ತಥೈವ ಚ ಪಿತೃದೇವತಾಮ್ ।
ತೇಜಃ ಸತ್ತ್ವಂ ತಥಾ ವೀರ್ಯಮಾವಿವೇಶ ಸ ವೀರ್ಯವಾನ್ ॥ ೩೬॥

ಮಾರ್ಗಮಾಲೋಕಯನ್ ದೂರಾದೂರ್ಧ್ವಂ ಪ್ರಗಮಿತೇಕ್ಷಣಃ।
ರುರೋಧ ಹೃದಯೇ ಪ್ರಾಣಾನಾಕಾಶಮವಲೋಕಯನ್ ॥ ೩೭॥

ಮಹಾವಿದ್ಯೆಯನ್ನು ಪ್ರದರ್ಶಿಸುತ್ತಾ ಜೊತೆಗೂಡಿನಿಂತು, ತಾವು ಪರಿತ್ಯಜಿಸಿದ ಮಹೇಂದ್ರ ಪರ್ವತವನ್ನು ಕೂತೂಹಲದಿಂದ ವೀಕ್ಷಿಸುತ್ತಿದ್ದರು. ॥ ೨೭॥ ಅವರು ಆಗ ತಮ್ಮಂತೆಯೇ ಆಕಾಶದಲ್ಲಿ ನಿಂತಿದ್ದ ಪವಿತ್ರಾಂತಃಕರಣರಾದ ಮಹರ್ಷಿಗಳೂ, ಸಿದ್ಧ-ಚಾರಣರೂ ಆಡುತ್ತಿದ್ದ ಮಾತುಗಳನ್ನು ಕೇಳಿದರು. ॥ ೨೮॥

"ಪರ್ವತಾಕಾರನಾದ ವಾಯುಪುತ್ರನೂ, ಮಹಾವೇಗ ಶಾಲಿಯೂ ಆದ ಹನುಮಂತನು ವರುಣನ ನಿವಾಸಸ್ಥಾನವಾದ ಈ ಸಮುದ್ರವನ್ನು ದಾಟಲು ಮನಸ್ಸು ಮಾಡಿದ್ದಾನೆ. ॥ ೨೯॥ ಶ್ರೀರಾಮನ ಕಾರ್ಯಸಿದ್ಧಿಗಾಗಿಯೂ, ವಾನರರಾಜನಾದ ಸುಗ್ರೀವನ ಅಪ್ಪಣೆಮೇರೆಗೆ ದುಷ್ಕರವಾದ ಕಾರ್ಯವನ್ನು ಮಾಡಲು ಬಯಸಿರುವನು. ಇವನು ಅತಿಕಷ್ಟಸಾಧ್ಯವಾದ ಈ ಸಮುದ್ರದ ಆಚೆಯ ದಡವನ್ನು ಸೇರಲು ಇಚ್ಛಿಸಿದ್ದಾನೆ." ॥ ೩೦॥

ಹೀಗೆ ನಿರ್ಮಲವಾದ ಆಕಾಶದಲ್ಲಿ ನಿಂತಿದ್ದ ಸಿದ್ಧ-ಚಾರಣರೂ ಮತ್ತು ತಪಸ್ವಿಗಳೂ ಹೇಳುತ್ತಿದ್ದ ಮಾತುಗಳನ್ನು ಕೇಳಿ ವಿದ್ಯಾಧರರು ಕುತೂಹಲಾವಿಷ್ಟರಾಗಿ ಮಹೇಂದ್ರಪರ್ವತ ದಲ್ಲಿದ್ದ ಅಪ್ರಮೇಯನಾದ, ವಾನರಶ್ರೇಷ್ಠನಾದ ಹನುಮಂತ ನನ್ನು ನೋಡುತ್ತಿದ್ದರು. ॥ ೩೧॥

ಆಗ ಆಂಜನೇಯನು ಮಹಾಪರ್ವತದಂತೆ ಕಾಣುತ್ತಿದ್ದನು. ಅವನ ಶರೀರದ ರೋಮ ಕೋಟಗಳು ನಿಮಿರಿನಿಂತಿದ್ದುವು. ಮೈಯಸ್ಸೊಮ್ಮೆ ಒದರಿ, ಪ್ರಳಯಕಾಲದ ಮೇಘವು ಗರ್ಜಿಸು ವಂತೆ ಒಂದು ಮಹಾನಾದವನ್ನು ಮಾಡಿದನು. ॥ ೩೨॥ ಹಾರಲು ಸನ್ನದ್ಧವಾದ ಮಾರುತಿಯು ಕ್ರಮವಸ್ಸನುಸರಿಸಿ ಸುತ್ತಿಕೊಂಡಿದ್ದ ಕೂದಲುಗಳಿಂದ ತುಂಬಿಹೋಗಿದ್ದ ಬಾಲವನ್ನು ಗರುಡನು ಹಾವನ್ನು ಎಸೆಯುವಂತೆ ನೀಲಾಕಾಶದಲ್ಲಿ ಮೇಲಕ್ಕೆ ಚೆಲ್ಲಿದನು. ॥ ೩೩॥ ಆ ಮಾರುತಿಯ ತನ್ನ ಬಾಲವನ್ನು ಜೋರಾಗಿ ಕೊಡಹಿದನು. ಅವನ ಬೆನ್ನಹಿಂದೆ ಸಂಬಂಧವಾಗಿದ್ದ ಮಹಾವೇಗವಾದ ಆ ಬಾಲವು ಗರುಡನಿಂದ ಸೆಳೆಯಲ್ಪಡುತ್ತಿದ್ದ ಮಹಾಸರ್ಪದಂತೆ ಕಾಣುತ್ತಿತ್ತು. ॥ ೩೪॥

ಆ ಕಪಿಶ್ರೇಷ್ಠರನು ಮಹಾ ಪರಿಘದಂತಿರುವ ತನ್ನೆರಡು ತೋಳುಗಳನ್ನು ಬಿಗಿಗೊಳಿಸಿದನು. ಸೊಂಟದ ಮೇಲೆ ಶರೀರದ ಭಾರವನ್ನಿಟ್ಟನು. ಕಾಲುಗಳನ್ನು ಬಗ್ಗಿಸಿಕೊಂಡನು. ॥ ೩೫॥ ಶುಭಲಕ್ಷಣ ಸಂಪನ್ನನಾದ ಆ ಮಾರುತಿಯು ತನ್ನ ತೋಳುಗಳನ್ನು ಸ್ವಲ್ಪ ಮಡಸಿಕೊಂಡು ಕತ್ತನ್ನು ಚಿಕ್ಕದು ಮಾಡಿಕೊಂಡನು. ಹಾರಲು ಮುಬ್ಬಿಸಾಗಿ ಬೇಕಾಗುವ ತೇಜಸ್ಸು, ಸತ್ತ್ವ (ಬಲ)ವನ್ನು, ಪರಾಕ್ರಮವನ್ನು ತನ್ನಲ್ಲಿ ತುಂಬಿಕೊಂಡನು. ॥ ೩೬॥ ಊರ್ಧ್ವದೃಷ್ಟಿಯುಳ್ಳವನಾಗಿದ್ದ ಹನುಮಂತನು ದೂರದಿಂದಲೇ ತಾನು ಸಾಗಬೇಕಾಗಿದ್ದ ಮಾರ್ಗವನ್ನು ಅವಲೋಕಿಸುತ್ತಾ ಮತ್ತೊಮ್ಮೆ ಆಕಾಶದ ಕಡೆಗೂ ವೀಕ್ಷಿಸುತ್ತಾ, ಹಾರುವ ಸಲುವಾಗಿ ಪ್ರಾಣಗಳನ್ನು ಹೃದಯದಲ್ಲಿ ಸ್ತಂಭಿಸಿದನು. (ಉಸುರು ಬಿಗಿ ಹಿಡಿದನು.) ॥ ೩೭॥ ಹೀಗೆ ಹಾರಲು ಸಿದ್ಧವಾಗಿ ನಿಂತ ಕಪಿಶ್ರೇಷ್ಠನಾದ, ಮಹಾಬಲನಾದ ಆಂಜನೇಯನು ಕಾಲುಗಳನ್ನು ನೆಲದಮೇಲೆ ದೃಢವಾಗಿ ಊರಿ,

ಪದ್ಭ್ಯಾಂ ದೃಢಮವಷ್ಟಭ್ಯ ಕೃತ್ವಾ ಸ ಕಪಿಕುಂಜರಃ ।
ನಿಕುಂಚ್ಯ ಕರ್ಣೌ ಹನುಮಾನುತ್ತಿಷ್ಠನ್ ಮಹಾಬಲಃ ॥ ೩೮॥

ವಾನರಾನ್ ವಾನರಶ್ರೇಷ್ಠ ಇದಂ ವಚನಮಬ್ರವೀತ್ ।
ಯಥಾ ರಾಘವನಿರ್ಮುಕ್ತಃ ಶರಃ ಶ್ವಸನವಿಕ್ರಮಃ ॥ ೩೯॥

ಗಚ್ಛೇತ್ತದ್ವದ್ಗಮಿಷ್ಯಾಮಿ ಲಂಕಾಂ ರಾವಣಪಾಲಿತಾಮ್ ।
ನ ಹಿ ದ್ರಕ್ಷ್ಯಾಮಿ ಯದಿ ತಾಂ ಲಂಕಾಯಾಂ ಜನಕಾತ್ಮಜಾಮ್ ॥ ೪೦॥

ಅನೇನೈವ ಹಿ ವೇಗೇನ ಗಮಿಷ್ಯಾಮಿ ಸುರಾಲಯಮ್ ।
ಯದಿ ವಾ ತ್ರಿದಿವೇ ಸೀತಾಂ ನ ದ್ರಕ್ಷ್ಯಾಮಿ ಕೃತಶ್ರಮಃ ॥ ೪೧॥

ಬದ್ಧ್ವಾ ರಾಕ್ಷಸರಾಜಾನಮಾನಯಿಷ್ಯಾಮಿ ರಾವಣಮ್ ।
ಸರ್ವಥಾ ಕೃತಕಾರ್ಯೋಽಹಮೇಷ್ಯಾಮಿ ಸಹ ಸೀತಯಾ ॥ ೪೨॥

ಆನಯಿಷ್ಯಾಮಿ ವಾ ಲಂಕಾಂ ಸಮುತ್ಪಾಟ್ಯ ಸರಾವಣಾಮ್ ।
ಏವಮುಕ್ತ್ವಾ ತು ಹನುಮಾನ್ ವಾನರಾನ್ ವಾನರೋತ್ತಮಃ ॥ ೪೩॥

ಉತ್ಪಪಾತಾಥ ವೇಗೇನ ವೇಗವಾನವಿಚಾರಯನ್ ।
ಸುಪರ್ಣಮಿವ ಚಾತ್ಮಾನಂ ಮೇನೇ ಸ ಕಪಿಕುಂಜರಃ ॥ ೪೪॥

ಸಮುತ್ಪತತಿ ತಸ್ಮಿಂಸ್ತು ವೇಗಾತ್ತೇ ನಗರೋಹಿಣಃ ।
ಸಂಪತ್ಯ ವಿಟಪಾನ್ ಸರ್ವಾನ್ ಸಮುತ್ಪೇತುಃ ಸಮಂತತಃ ॥ ೪೫॥

ಸ ಮತ್ತಕೋಯಷ್ಟಿಬಕಾನ್ ಪಾದಪಾನ್ ಪುಷ್ಪಶಾಲಿನಃ ।
ಉದ್ದಹನ್ನೂರುವೇಗೇನ ಜಗಾಮ ವಿಮಲೇಽಂಬರೇ ॥ ೪೬॥

ಊರುವೇಗೋದ್ಧತಾ ದೃಷ್ಟಾ ಮುಹೂರ್ತಂ ಕಪಿಮನ್ವಯುಃ ।
ಪ್ರಸ್ಥಿತಂ ದೀರ್ಘಮಧ್ವಾನಂ ಸ್ವಬಂಧುಮಿವ ಬಾಂಧವಾಃ ॥ ೪೭॥

ತಮೂರುವೇಗೋನ್ಮಥಿತಾಃ ಸಾಲಾಶ್ಚಾನ್ಯೇ ನಗೋತ್ತಮಾಃ ।
ಅನುಜಗ್ಮುರ್ಹನೂಮಂತಂ ಸೈನ್ಯಾ ಇವ ಮಹೀಪತಿಮ್ ॥ ೪೮॥

ಸುಪ್ರಯುಕ್ತಾಸ್ತೈರ್ಬಹುಭಿಃ ಪಾದಪೈರನ್ವಿತಃ ಕಪಿಃ ।
ತಮಸೀವ ಪರ್ವತಾಕಾರೋ ಬಭೂವಾದ್ಭುತದರ್ಶನಃ ॥ ೪೯॥

ಎರಡೂ ಕಿವಿಗಳನ್ನೂ ಹಿಂದಕ್ಕೆ ಮಡಚಿಕೊಂಡು, ಪರ್ವತದ ಕೆಳಭಾಗದಲ್ಲಿ ನಿಂತಿದ್ದ ಅಂಗದಾದಿ ವಾನರರಿಗೆ ಹೀಗೆ ಹೇಳಿದನು.

"ವಾನರ ಶ್ರೇಷ್ಠರೇ! ಶ್ರೀರಾಘವನು ಬಿಡುವ ವಾಯುಸಮಾನವೇಗವುಳ್ಳ ಬಾಣದಂತೆ, ರಾವಣನಿಂದ ಪಾಲಿಸಲ್ಪಡುವ ಲಂಕಾಪಟ್ಟಣವನ್ನು ವೇಗವಾಗಿ ಹೋಗುತ್ತೇನೆ. ಅಲ್ಲಿ ಜನಕನ ಮಗಳಾದ ಸೀತಾದೇವಿಯನ್ನು ಕಾಣದಿದ್ದರೆ, ನಾನು ಅದೇ ಶರವೇಗದಿಂದಲೇ ಸುರಲೋಕಕ್ಕೆ ಹೋಗುತ್ತೇನೆ. ಅಷ್ಟು ಶ್ರಮಪಟ್ಟು ಸ್ವರ್ಗಕ್ಕೆ ಹೋಗಿ ಅಲ್ಲಿಯೂ ಸೀತೆಯನ್ನು ಕಾಣದಿದ್ದರೆ ನಾನು ಪುನಃ ಲಂಕಾಪಟ್ಟಣಕ್ಕೆ ಹೋಗಿ ರಾಕ್ಷಸರಾಜನಾದ ರಾವಣನನ್ನು ಬಂಧಿಸಿ ಇಲ್ಲಿಗೆ ಕರೆತರುತ್ತೇನೆ. ಆದರೆ ನಾನು ಅಷ್ಟು ನಿರಾಶನಾಗಬೇಕಾಗಿಲ್ಲ, ಎಲ್ಲರೀತಿಯಿಂದ ನಾನು ಕೃತಕೃತ್ಯನಾಗಿ ಸೀತೆಯೊಡನೆ ಇಲ್ಲಿಗೆ ಬರುತ್ತೇನೆ. ಲಂಕಾಪಟ್ಟಣದಲ್ಲಿ ಸೀತೆಯನ್ನು ಹುಡುಕಲು ಸಾಧ್ಯವಾಗದಿದ್ದರೆ ನಾನು ಲಂಕೆಯನ್ನೇ ಕಿತ್ತು ರಾವಣನೊಡನೆ ಇಲ್ಲಿಗೆ ತರುತ್ತೇನೆ. ಆದುದರಿಂದ ನೀವು ನಿಶ್ಚಿಂತರಾಗಿರಿ" ಎಂದು ಹೇಳಿ ವಾನರೋತ್ತಮನಾದ ಹನುಮಂತನು ಕಪಿಗಳಿಗೆ ಆಶ್ವಾಸನೆಯನ್ನು ನೀಡಿದನು. ॥ ೩೮-೪೩॥

ಮಹಾಬಲಶಾಲಿಯಾದ ಹನುಮಂತನು ಮುಂದೆ ಬರಬಹುದಾದ ವಿಘ್ನಗಳನ್ನು ಪರಿಗಣಿಸದೆ ವೇಗದಿಂದ ಮೇಲಕ್ಕೆ ಹಾರಿದನು. ಆಗ ಆ ಕಪಿಶ್ರೇಷ್ಠನು ತನ್ನನ್ನು ಗರುಡನೆಂದೇ ಭಾವಿಸಿಕೊಂಡನು. ॥ ೪೪॥ ಅತನು ವೇಗದಿಂದ ಮೇಲಕ್ಕೆ ಹಾರಿದ ರಭಸಕ್ಕೆ ಪರ್ವತದ ಮೇಲಿದ್ದ ವೃಕ್ಷಗಳೆಲ್ಲವೂ ಬುಡಮೇಲಾಗಿ ಕೊಂಬೆ-ರೆಂಬೆಗಳೊಂದಿಗೆ ಎಲ್ಲ ಕಡೆಗಳಿಂದಲೂ ಹನುಮಂತನನ್ನೆ ಹಿಂಬಾಲಿಸಿದವು. ॥ ೪೫॥ ಮದಿಸಿದ ಕೊಕ್ಕರೆಗಳಿಂದಲೂ, ನೀರ್ಕೋಳಿಗಳಿಂದಲೂ ಪುಷ್ಪಗಳಿಂದಲೂ ಯುಕ್ತವಾದ ವೃಕ್ಷಗಳನ್ನು, ಭಾರೀವೇಗದಿಂದ ಹಾರಿಸಿಕೊಂಡು ಮಾರುತಿಯು ಶುಭ್ರವಾದ ಆಕಾಶದಲ್ಲಿ ಪ್ರಯಾಣಮಾಡಿದನು. ॥ ೪೬॥ ಬಹಳ ದೂರ ಪ್ರಯಾಣ ಹೊರಟಿರುವ ನೆಂಟನೊಬ್ಬನನ್ನು ಅವನ ಬಂಧುಗಳು ಸ್ವಲ್ಪದೂರವರೆಗೆ ಹಿಂಬಾಲಿಸುವಂತೆ ಹನುಮಂತನ ಭಾರೀ ವೇಗದಿಂದ ಬುಡಸಹಿತವಾಗಿ ಕಿತ್ತುಬಂದ ವೃಕ್ಷಗಳು ಸ್ವಲ್ಪ ದೂರದವರೆಗೆ ಕಪಿಶ್ರೇಷ್ಠನಾದ ಹನುಮಂತನನ್ನು ಹಿಂಬಾಲಿಸಿದವು. ॥ ೪೭॥ ಹಾಗೆ ಬುಡಮೇಲಾದ ಔಷಧ ವೃಕ್ಷಗಳೂ ಹಾಗೂ ಇತರ ಎತ್ತರವಾದ ಸಾಲವೃಕ್ಷಗಳೂ ಮಹಾರಾಜನನ್ನು ಅನುಸರಿಸಿ ಸೈನಿಕರು ಹಿಂಬಾಲಿಸಿ ಹೋಗುವಂತೆ ಹಿಂಬಾಲಿಸಲ್ಪಡುತ್ತಿದ್ದ ಹನುಮಂತನು ಪರ್ವತದ ಆಕಾರವನ್ನು ಹೊಂದಿ ಅದ್ಭುತಾಕಾರವಾಗಿ ಕೋಭಿಸಿದನು. ॥ ೪೮-೪೯॥ ಮಹೇಂದ್ರನ ಭಯದಿಂದ ಪರ್ವತಗಳು ಸಮುದ್ರದಲ್ಲಿ ಮುಳುಗಿ ಹೋದಂತೆ, ಹನುಮಂತನನ್ನು ಅನುಸರಿಸಿ ಸಾಗುತ್ತಿದ್ದ ಸಾರವತ್ತಾದ (ಭಾರವಾದ) ವೃಕ್ಷಗಳೆಲ್ಲವು ಸ್ವಲ್ಪ ಹೊತ್ತಿನಲ್ಲೇ

ಸಾರವಂತೋಽಥ ಯೇ ವೃಕ್ಷಾ ನ್ಯಮಜ್ಜನ್ಲವಣಾಂಭಸಿ।
ಭಯಾದಿವ ಮಹೇಂದ್ರಸ್ಯ ಪರ್ವತಾ ವರುಣಾಲಯೇ ॥ ೫೦॥

ಸ ನಾನಾಕುಸುಮೈಃ ಕೀರ್ಣಃ ಕಪಿಃ ಸಾಂಕುರಕೋರಕೈಃ।
ಶುಶುಭೇ ಮೇಘಸಂಕಾಶಃ ಖದ್ಯೋತೈರಿವ ಪರ್ವತಃ ॥ ೫೧॥

ವಿಮುಕ್ತಸ್ಯ ವೇಗೇನ ಮುಕ್ತಾ ಪುಷ್ಪಾಃ ತೇ ದ್ರುಮಾಃ।
ಅವತೀರ್ಯಂತ ಸಲಿಲೇ ನಿವೃತ್ತಾಃ ಸುಹೃದೋ ಯಥಾ।
ತಾರಾಚಿತಮಿವಾಕಾಶಂ ಪ್ರಬಭೌ ಸ ಮಹಾರ್ಣವಃ ॥ ೫೨॥

ಲಘುತ್ವೇನೋಪಪನ್ನಂ ತದ್ದಿವಿತ್ರಂ ಸಾಗರೇಽಪತತ್।
ದ್ರುಮಾಣಾಂ ವಿವಿಧಂ ಪುಷ್ಪಂ ಕಪಿವಾಯುಸಮೀರಿತಮ್ ॥ ೫೩॥

ಪುಷ್ಪೌಘೇನಾನುವಿದ್ಧೇನ ನಾನಾವರ್ಣೇನ ವಾನರಃ।
ಬಭೌ ಮೇಘ ಇವೋದ್ಗಚ್ಛನ್ ವೈ ವಿದ್ಯುದ್ಗಣವಿಭೂಷಿತಃ ॥ ೫೪॥

ತಸ್ಯ ವೇಗಸಮಾಧೂತೈಃ ಪುಷ್ಪೈಸ್ತೋಯಮದೃಶ್ಯತ।
ತಾರಾಧಿರಧಿರಾಮಾಧಿರುದಿತಾಧಿರಿವಾಂಬರಮ್ ॥ ೫೫॥

ತಸ್ಯಾಂಬರಗತೌ ಬಾಹೂ ದದೃಶಾತೇ ಪ್ರಸಾರಿತೌ।
ಪರ್ವತಾಗ್ರಾದ್ವಿನಿಷ್ಕ್ರಾಂತೌ ಪಂಚಾಸ್ಯಾವಿವ ಪನ್ನಗೌ ॥ ೫೬॥

ವಿನಿಗೂಢ ಬಭೌ ಶ್ರೀಮಾನ್ ಸೋರ್ಮಿಮಾಲಃ ಮಹಾಗಲಮ್।
ಪಿಪಾಸುರಿವ ಚಾಕಾಶಂ ದದೃಶೇ ಸ ಮಹಾಕಪಿಃ ॥ ೫೭॥

ತಸ್ಯ ವಿದ್ಯುತ್ಪ್ರಭಾಕಾರೇ ವಾಯುಮಾರ್ಗಾನುಸಾರಿಣಃ।
ನಯನೇ ಸಂಪ್ರಕಾಶೇತೇ ಪರ್ವತಸ್ಥಾವಿವಾನಲೌ ॥ ೫೮॥

ಪಿಂಗೇ ಪಿಂಗಾಕ್ಷಮುಖ್ಯಸ್ಯ ಬೃಹತೀ ಹರಿಮಂಡಲೇ।
ಚಿಕ್ಷಿಪೇ ಸಂಪ್ರಕಾಶೇತೇ ಚಂದ್ರಸೂರ್ಯಾವಿವೋದಿತೌ ॥ ೫೯॥

ಮುಖಂ ನಾಸಿಕಯಾ ತಸ್ಯ ತಾಮ್ರಯಾ ತಾಮ್ರಮಬಭೌ।
ಸಂಧ್ಯಯಾ ಸಮಭಿಸ್ಪೃಷ್ಟಂ ಯಥಾ ಸೂರ್ಯಸ್ಯ ಮಂಡಲಂ ॥ ೬೦॥

ಲವಣ ಸಮುದ್ರದಲ್ಲಿ ಮುಳುಗಿ ಹೋದುವು. ॥ ೫೦॥ ಮೇಘದಂತೆ ವಿಶಾಲಕಾಯನಾದ ಹನುಮಂತನು ತನ್ನ ಭಾರೀ ವೇಗದಿಂದ ತನ್ನನ್ನೇ ಅನುಸರಿಸಿ ಬರುತ್ತಿದ್ದ ವೃಕ್ಷಗಳ ಚಿಗುರುಗಳಿಂದಲೂ, ಮೊಗ್ಗುಗಳಿಂದಲೂ, ಅರಳಿದ ಹೂವುಗಳಿಂದಲೂ ಸಮಾವೃತನಾಗಿ, ರಾತ್ರಿಯಲ್ಲಿ ಮಿಣುಕುಹುಳಗಳಿಂದ ಕೂಡಿದ ಪರ್ವತದಂತೆ ಪ್ರಕಾಶಿಸುತ್ತಿದ್ದನು. ॥ ೫೧॥ ಅವನನ್ನೇ ಅನುಸರಿಸಿ ಹೋಗುತ್ತಿದ್ದ ವೃಕ್ಷಗಳು ತಮ್ಮಲ್ಲಿದ ಪುಷ್ಪಗಳನ್ನು ದಾರಿಯುದ್ದಕ್ಕೂ ಸುರಿಸುತ್ತಾ ಸ್ವಲ್ಪ ದೂರದವರೆಗೆ ಹೋದ ನಂತರ ಸಮುದ್ರದ ನೀರಿನಲ್ಲಿ ಬಿದ್ದುಬಿಟ್ಟವು. ಅದನ್ನು ನೋಡಿದರೆ ಮಿತ್ರರನ್ನು ಕೊಂಚದೂರ ಅನುಸರಿಸಿ ಹಿಂದಿರುಗಿದವರಂತೆ ಕಾಣುತ್ತಿತ್ತು. ॥ ೫೨॥

ಹನುಮಂತನ ಭಾರೀವೇಗದಿಂದ ಹುಟ್ಟಿದ ಬಿರುಗಾಳಿಯಿಂದ ಬುಡಮೇಲಾಗಿ ಜೊತೆಯಲ್ಲೇ ಸಾಗುತ್ತಿದ್ದ ಮಹಾವೃಕ್ಷಗಳ ಹಗುರವಾದ ಕುಸುಮಗಳು ಸಮುದ್ರವನ್ನು ವ್ಯಾಪಿಸಿದವು. ಹೀಗೆ ಹಲವು ಬಣ್ಣಗಳ ಕುಸುಮಗಳಿಂದ ತುಂಬಿಹೋದ ಲವಣ ಸಮುದ್ರವು ನಕ್ಷತ್ರಗಳಿಂದ ವ್ಯಾಪ್ತವಾದ ಆಕಾಶದಂತೆ ಶೋಭಿಸಿತು. ॥ ೫೩॥ ಬಣ್ಣ-ಬಣ್ಣಗಳಿಂದ ಹಾಗೂ ಸುಗಂಧ ಯುಕ್ತವಾಗಿದ್ದ ಪುಷ್ಪಗಳಿಂದ ಮುಚ್ಚಿಹೋಗಿದ್ದ ಹನುಮಂತನು ಆಗ ಆಕಾಶದಲ್ಲಿ ಮಿಂಚಿನ ಸಮೂಹಗಳಿಂದ ಯುಕ್ತವಾದ ಮೇಘದಂತೆ ವಿರಾಜಿಸುತ್ತಿದ್ದನು. ॥ ೫೪॥ ಹನುಮಂತನ ಭಾರೀ ವೇಗದ ಕಾರಣದಿಂದ ಎಲ್ಲ ಕಡೆಗೆ ಚೆಲ್ಲಿಹೋದ ಹೂವುಗಳಿಂದ ಕೂಡಿಹೋದ ಸಮುದ್ರದ ನೀರು ಆಗ ತಾನೇ ಹುಟ್ಟಿದ ಸುಂದರವಾದ ನಕ್ಷತ್ರಗಳಿಂದ ಪ್ರಕಾಶಿಸುವ ಆಕಾಶದಂತೆ ಕಾಣುತ್ತಿತ್ತು. ॥ ೫೫॥ ಆಕಾಶದ ಕಡೆಗೆ ಚಾಚಲ್ಪಟ್ಟಿದ್ದ ಹನುಮಂತನ ಎರಡೂ ತೊಳುಗಳು ಪರ್ವತದ ಶಿಖರದಿಂದ ಹೊರಬಂದಿರುವ ಐದು ಹೆಡೆಗಳ ಸರ್ಪಗಳಂತೆ ಕಾಣುತ್ತಿದ್ದವು. ॥ ೫೬॥ ಗರುಡನಂತೆ ಆಕಾರದಲ್ಲಿ ಹಾರಿ ಹೋಗುತ್ತಿದ್ದ ಹನುಮಂತನು ಉತ್ತುಂಗ ತರಂಗಗಳಿಂದ ಮೆರೆಯುವ ಆ ಸಮುದ್ರವನ್ನು ತನ್ನ ಛಾಯೆಯಿಂದ ಮೂಲಕ ಕುಡಿದು ಬಿಡುವನೋ ಎಂಬಂತಿತ್ತು. ಇದೇ ರೀತಿ ಅವನು ಆಕಾಶವನ್ನು ಕಬಳಿಸಲು ಬಯಸುತ್ತಿರುವನೋ ಎಂಬಂತೆ ಕಾಣುತ್ತಿತ್ತು. ॥ ೫೭॥ ವಾಯುಮಾರ್ಗವನ್ನು ಅನುಸರಿಸಿ ಹಾರಿಕೊಂಡ ಹೋಗುತ್ತಿದ್ದ ಹನುಮಂತನ ಎರಡೂ ಕಣ್ಣುಗಳು ಮಿಂಚಿನಂತೆ ಹೊಳೆಯುತ್ತಿದ್ದು, ಪರ್ವತದಲ್ಲಿನ ಎರಡು ಕಾಡುಗಿಚ್ಚುಗಳಂತೆ ಪ್ರಜ್ವಲಿಸುತ್ತಿದ್ದವು. ॥ ೫೮॥ ಕಪಿಶ್ರೇಷ್ಠನಾದ ಹನುಮಂತನ ಕಂದು ಹಳದೀ ಬಣ್ಣದ, ವಿಶಾಲವಾಗಿದ್ದ, ದುಂಡಾಗಿದ್ದ ಎರಡು ಕಣ್ಣುಗಳು ಆಗ ತಾನೇ ಹುಟ್ಟಿದ ಚಂದ್ರ-ಸೂರ್ಯರಂತೆ ಪ್ರಕಾಶಿಸುತ್ತಿದ್ದವು. ॥ ೫೯॥ ಸಂಧ್ಯಾರಾಗದಿಂದ ಮಿಳಿತವಾದ ಸೂರ್ಯಮಂಡಲವು ಕೆಂಪಾದ ಛಾಯೆಯಿಂದ ಪ್ರಕಾಶಿಸುತ್ತಿರುವ ತಾಮ್ರವರ್ಣದ ಮೂಗಿನಿಂದ ಕೂಡಿದ ಹನುಮಂತ ಮುಖವು ಕೆಂಪು ಛಾಯೆಯಿಂದ ಪ್ರಕಾಶಿಸುತ್ತಿದ್ದಿತು. ॥ ೬೦॥ ಹನುಮಂತನು

ಲಾಂಗೂಲಂ ಚ ಸಮಾವಿದ್ಧಂ ಪ್ಲವಮಾನಸ್ಯ ಶೋಭತೇ ।
ಅಂಬರೇ ವಾಯುಪುತ್ರಸ್ಯ ಶಕ್ರಧ್ವಜ ಇವೋಚ್ಛ್ರಿತಃ ॥ ೬೧॥

ಲಾಂಗೂಲಚಕ್ರೇಣ ಮಹಾನ್ ಪಕ್ಷಿರಾಜೇವ ಲಕ್ಷ್ಯತೇ ।
ವ್ಯರೋಚತ ಮಹಾಪ್ರಾಜ್ಞಃ ಪರಿವೇಷೀವ ಭಾಸ್ಕರಃ ॥ ೬೨॥

ಸ್ಫಿಗ್ದೀಕೃತಾಭಿತಾಮ್ರೇಣ ರರಾಜ ಸ ಮಹಾಕಪಿಃ ।
ಮಹತಾ ದಾರಿತೇನೇವ ಗಿರಿರ್ಗೈರಿಕಧಾತುನಾ ॥ ೬೩॥

ತಸ್ಯ ವಾನರಸಿಂಹಸ್ಯ ಪ್ಲವಮಾನಸ್ಯ ಸಾಗರಮ್ ।
ಕಕ್ಷಾಂತರಗತೋ ವಾಯುರ್ಜೀಮೂತ ಇವ ಗರ್ಜತಿ ॥ ೬೪॥

ಪೀ ಯಥಾ ನಿಪತ ತ್ಯುಲ್ಕಾ ಹ್ಯುತ್ತರಾಂತಾದ್ದಿಶಃಸೃತಾ ।
ದೃಶ್ಯತೇ ಸಾನುಬಂಧಾ ಚ ತಥಾ ಸ ಕಪಿಕುಂಜರಃ ॥ ೬೫॥

ಪತತ್ತತ್ತಂಗಸಂಕಾಶೋ ವ್ಯಾಯತಃ ಶುಶುಭೇ ಕಪಿಃ ।
ಪ್ರವೃದ್ಧ ಇವ ಮಾತಂಗಃ ಕಕ್ಷಯಾ ಬದ್ಧ್ಯಮಾನಯಾ ॥ ೬೬॥

ಉಪರಿಷ್ಟಾಚ್ಛರೀರೇಣಚ್ಛಾಯಯಾ ಚಾವಗಾಢಯಾ ।
ಸಾಗರೇ ಮಾರುತಾವಿಷ್ಟಾ ನೌರಿವಾಸೀತ್ತದಾ ಕಪಿಃ ॥ ೬೭॥

ಯಂ ಯಂ ದೇಶಂ ಸಮುದ್ರಸ್ಯ ಜಗಾಮ ಸ ಮಹಾಕಪಿಃ ।
ಸ ಸ ತಸ್ಯೋರುವೇಗೇನ ಸೋನ್ಮಾದ ಇವ ಲಕ್ಷ್ಯತೇ ॥ ೬೮॥

ನಾಗರಕ್ಷೋಮ್ರ್ಮಿಜಾಲಾನಾಮುರಸಾ ಶೈಲವರ್ಷ್ಮಣಾ ।
ಅಭಿಘ್ನಂಸ್ತು ಮಹಾವೇಗಃ ಪುಪ್ಲುವೇ ಸ ಮಹಾಕಪಿಃ ॥ ೬೯॥

ತನ್ನ ಬಾಲವನ್ನು ಮೇಲಕ್ಕೆತ್ತಿಕೊಂಡು ಹೋಗುತ್ತಿದ್ದನು. ಆ ಬಾಲವು ಆಕಾಶದಲ್ಲಿ ಎತ್ತಿಹಿಡಿದ ಇಂದ್ರನ ಧ್ವಜದಂತೆ ಪ್ರಕಾಶಿಸುತ್ತಿತ್ತು. ॥ ೬೧॥ ಕೆಲವೊಮ್ಮೆ ಹನುಮಂತನು ತನ್ನ ಬಾಲವನ್ನು ಚಕ್ರಾಕಾರವಾಗಿ ತನ್ನ ಸುತ್ತಲೂ ಸುತ್ತಿಕೊಳ್ಳುತ್ತಿದ್ದನು. ವಾಯುಪುತ್ರನಿಗೆ ಬಿಳುಪಾದ ಕೊರೆದಾಡೆಗಳಿದ್ದವು. ಅದರಿಂದ ಮಹಾಪ್ರಾಜ್ಞನಾದ ಹನುಮಂತನು ಪರಿವೇಷ (ಸುತ್ತಲೂ ಇರುವ ಪ್ರಭಾಮಂಡಲ) ದಿಂದ ಯುಕ್ತನಾದ ಸೂರ್ಯದೇವನಂತೆ ಕಾಣುತ್ತಿದ್ದನು. ॥ ೬೨॥ ಕುಂಚಾ ಕೆಂಪಗಾಗಿದ್ದ ಬಾಲದ ಮೂಲಭಾಗವನ್ನು ಹೊಂದಿದ್ದ ಮಹಾಕಪಿಯಾದ ಹನುಮಂತನು ಗೈರಿಕಾದಿ ಧಾತುಗಳಿಂದ ಸೀಳಲ್ಪಟ್ಟ ಪರ್ವತದಂತೆ ಪ್ರಕಾಶಿಸುತ್ತಿದ್ದನು. ॥ ೬೩॥ ಸಮುದ್ರವನ್ನು ಲಂಘಿಸುತ್ತಿದ್ದ ವಾನರಶ್ರೇಷ್ಠನಾದ ಹನುಮಂತನ ಕಂಕುಳಗಳ ಸಂದಿಯಿಂದ ನುಗ್ಗಿ ಹೋಗುತ್ತಿದ್ದ ವಾಯುವು ಮೇಘದಂತೆ ಭಾರೀ ಶಬ್ದ ಮಾಡುತಿತ್ತು. ॥ ೬೪॥

ಆಕಾಶದಲ್ಲಿ ಉತ್ತರದಿಕ್ಕಿನ ಎತ್ತರವಾದ ಪ್ರದೇಶದಿಂದ ಹೊರಟು ಕೆಳಕ್ಕೆ ಬಿಟ್ಟಿದ್ದ ಬಾಲದಿಂದ ಯುಕ್ತನಾದ ಹನುಮಂತನು ಬಾಲದಿಂದ ಕೂಡಿದ ಉಲ್ಕೆಯಂತೆ ದಕ್ಷಿಣ ದಿಕ್ಕಿಗೆ ಹಾರಿಹೋಗುತ್ತಿದ್ದನು. (ಉಲ್ಕಾಪಾತವು ಜನರಿಗೆ, ದೇಶಕ್ಕೆ ಅಶುಭಸೂಚಕವಾಗಿದೆ. ಅದರಂತೆ ಮಾರುತಿಯು ದಕ್ಷಿಣ ದಿಕ್ಕಿಗೆ ಸಾಗುತ್ತಿರುವುದು ಲಂಕೆಗೆ ಅರಿಷ್ಟಸೂಚಕವಾಗಿದೆ.) ॥ ೬೫॥ ಸಾಗಿಹೋಗುತ್ತಿರುವ ಸೂರ್ಯನಿಗೆ ಸದೃಶನಾಗಿದ್ದ, ದೀರ್ಘ ವಾದ ನೀಳವಾದ ಬಾಲವನ್ನು ಹೊಂದಿದ್ದ ಕಪಿಶ್ರೇಷ್ಠನಾದ ಹನುಮಂತನು ದೊಡ್ಡದಾಗಿ ಬೆಳೆದಿರುವ ಕಾರಣ ಹಗ್ಗದಿಂದ ಬಂಧಿಸಲ್ಪಟ್ಟ ಆನೆಯಂತೆ ಗೋಚರಿಸುತ್ತಿದ್ದನು. ॥ ೬೬॥ ಹನುಮಂತನು ಆಕಾಶ ಮಾರ್ಗವಾಗಿ ಸಾಗುತ್ತಿದ್ದನು. ಅವನ ನೆರಳು ಸಮುದ್ರದಲ್ಲಿ ದಟ್ಟವಾಗಿ ಪ್ರತಿಬಿಂಬಿತವಾಗಿ ಬಂದು ಪಡಗಿನಂತೆ ಕಾಣುತ್ತಿತ್ತು. ಅದು ಮಾರುತಿಯಂತೆ ಮುಂದೆ ಸಾಗುತ್ತಿರುವಾಗ, ಸಮುದ್ರದಲ್ಲಿ ಗಾಳಿಯಿಂದ ಪ್ರೇರಿತವಾದ ನೌಕೆಯಂತೆಯೇ ಕಂಡು ಬರುತ್ತಿದ್ದನು. (ಹನುಮಂತನ ಶರೀರವೇ ನೌಕೆಯ ಮೇಲು ಭಾಗ, ಛಾಯೆಯೇ ಕೆಳಭಾಗ ಇದನ್ನೇ ವಾಯುಪ್ರೇರಿತವಾದ ನೌಕೆಯೆಂದು ಹೇಳಿದ್ದಾರೆ.) ॥ ೬೭॥

ಮಹಾಕಪಿಯಾದ ಹನುಮಂತನು ಸಮುದ್ರದ ಯಾವ-ಯಾವ ಭಾಗಗಳಿಂದ ಹಾರಿಹೋಗುತ್ತಿದ್ದನೋ, ಆಯಾ ಭಾಗಗಳು ಅವನ ವೇಗದಿಂದಾಗಿ ಅಲ್ಲೋಲಕಲ್ಲೋಲವಾಗುತ್ತಿತ್ತು. ॥ ೬೮॥ ಮಹಾವೇಗಶಾಲಿಯಾದ, ಕಪಿಶ್ರೇಷ್ಠ ಹನುಮಂತನು ಪರ್ವತೋಪಮವಾದ ಶರೀರದಿಂದಲೂ, ವಕ್ಷಸ್ಥಳದಿಂದಲೂ, ಸಮುದ್ರದ ಅಲೆಗಳನ್ನು ಭೇದಿಸಿಕೊಂಡು ಮುಂದೆ-ಮುಂದೆ ಹಾರಿಕೊಂಡು ಸಾಗಿ ಹೋಗುತ್ತಿದ್ದನು. ॥ ೬೯॥

ಹನುಮಂತನ ಮಹಾವೇಗದಿಂದ ಉಂಟಾದ ಬಲಿಷ್ಠವಾದ ವಾಯು ಮತ್ತು ಮೇಘಮಂಡಲದಿಂದ ಹೊರಹೊಮ್ಮಿದ

ಕಪಿವಾತಶ್ಚ ಬಲವಾನ್ ಮೇಘವಾತಶ್ಚ ನಿಃಸೃತಃ ।
ಸಾಗರಂ ಭೀಮನಿರ್ಘೋಷಂ ಕಂಪಯಾಮಾಸತುರ್ಭೃಶಮ್ ॥ ೭೦॥

ವಿಕರ್ಷನ್ಮೂರ್ಮಿಜಾಲಾನಿ ಬೃಹಂತಿ ಲವಣಾಂಭಸಿ ।
ಪುಪ್ಲುವೇ ಕಪಿಶಾರ್ದೂಲೋ ವಿಕಿರನ್ನಿವ ರೋದಸೀ ॥ ೭೧॥

ಮೇರುಮಂದರ ಸಂಕಾಶಾನುದ್ಗತಾನ್ ಸ ಮಹಾರ್ಣವೇ ।
ಅತ್ಯಕ್ರಾಮನ್ಮಹಾವೇಗಸ್ತರಂಗಾನ್ ಗಣಯನ್ನಿವ ॥ ೭೨॥

ತಸ್ಯ ವೇಗಸಮುದ್ಧೂತಂ ಜಲಂ ಸಜಲದಂ ತದಾ ।
ಅಂಬರಸ್ಥಂ ವಿಬಭ್ರಾಜ ಶಾರದಾಭ್ರಮಿವಾತತಮ್ ॥ ೭೩॥

ತಿಮಿನಕ್ರಝಷಾಃ ಕೂರ್ಮಾ ದೃಶ್ಯಂತೇ ವಿವೃತಾಸ್ತದಾ ।
ದಸ್ಯಾಪಕರ್ಷಣೇನೇವ ಶರೀರಾಣಿ ಶರೀರಿಣಾಮ್ ॥ ೭೪॥

ಪ್ಲವಮಾನಂ ಸಮೀಕ್ಷ್ಯಾಥ ಭುಜಂಗಾಃ ಸಾಗರಾಲಯಾಃ ।
ವ್ಯೋಮ್ನಿ ತಂ ಕಪಿಶಾರ್ದೂಲಂ ಸುಪರ್ಣ ಇತಿ ಮೇನಿರೇ ॥ ೭೫॥

ದಶಯೋಜನವಿಸ್ತೀರ್ಣಾ ತ್ರಿತಂಯೋಜನಮಾಯತಾ ।
ಛಾಯಾ ವಾನರಸಿಂಹಸ್ಯ ಜಲೇ ಚಾರುತರಾಭವತ್ ॥ ೭೬॥

ಶ್ವೇತಾಭ್ರಘನರಾಜೇವ ವಾಯುಪುತ್ರಾನುಗಾಮಿನೀ ।
ತಸ್ಯ ಸಾ ಶುಶುಭೇ ಛಾಯಾ ವಿತತಾ ಲವಣಾಂಭಸಿ ॥ ೭೭॥

ಶುಶುಭೇ ಸ ಮಹಾತೇಜಾ ಮಹಾಕಾಯೋ ಮಹಾಕಪಿಃ ।
ವಾಯುಮಾರ್ಗೇ ನಿರಾಲಂಬೇ ಪಕ್ಷವಾನಿವ ಪರ್ವತಃ ॥ ೭೮॥

ಯೇನಾಸೌ ಯಾತಿ ಬಲವಾನ್ ವೇಗೇನ ಕಪಿಕುಂಜರಃ ।
ತೇನ ಮಾರ್ಗೇಣ ಸಹಸಾ ದ್ರೋಣೀಕೃತ ಇವಾರ್ಣವಃ ॥ ೭೯॥

ವಾಯು ಇವರೆಡೂ ಸೇರಿ, ಮಹಾಭಯಂಕರವಾದ ಧ್ವನಿಯಿಂದ ಗರ್ಜಿಸುತ್ತಿದ್ದ ಸಮುದ್ರವನ್ನು ಇನ್ನು ಹೇಚ್ಚಾಗಿ ಕಂಪನಗೊಳಿಸಿದವು. ॥ ೭೦॥ ಲವಣಸಮುದ್ರದಲ್ಲಿದ್ದ ದೊಡ್ಡ-ದೊಡ್ಡ ಅಲೆಗಳನ್ನು ತನ್ನ ಜೊತೆಯಲ್ಲಿಯೇ ಸೆಳೆದೊಯ್ಯುತ್ತಿದ್ದ ಹನುಮಂತನು ಭೂ-ಆಂತರಿಕ್ಷಗಳನ್ನು ವಿಭಾಗಿಸುತ್ತಿರುವನೋ ಎಂಬಂತೆ ಕಾಣುತ್ತಿದ್ದನು. ॥ ೭೧॥ ಮಹಾವೇಗಯುಕ್ತನಾದ ಹನುಮಂತನು ಮಹಾಸಮುದ್ರದಲ್ಲಿ ಉಕ್ಕೇರಿಬರುತ್ತಿದ್ದ ಮೇರು-ಮಂದರ ಪರ್ವತಗಳಂತೆ ಇದ್ದ ದೊಡ್ಡ-ದೊಡ್ಡ ಅಲೆಗಳನ್ನು ಅತಿಕ್ರಮಿಸಿ ಹೋಗುತ್ತಿದ್ದಾಗ, ಅವುಗಳನ್ನು ಎಣಿಕೆ ಮಾಡುತ್ತಾ ಹೋಗುತ್ತಿರುವನೋ ಎಂದು ಕಾಣುತ್ತಿತ್ತು.॥ ೭೨ ॥

ವಾಯುನಂದನನ ವೇಗದಿಂದ ಮೇಲಕ್ಕೆ ಚಿಮ್ಮಿದ ಸಮುದ್ರದ ನೀರು ಆಕಾಶದಲ್ಲಿದ್ದ ಮೇಘಗಳೊಡನೆ ಸೇರಿಕೊಂಡು ಎಲ್ಲಕಡೆಗಳಲ್ಲಿ ವ್ಯಾಪ್ತವಾದ ಶರತ್ಕಾಲದ ಮೇಘದಂತೆ ಬೆಳುಪಾಗಿ ಕಾಣುತ್ತಿದ್ದೀತು. ॥ ೭೩॥ ಸಮುದ್ರದ ನೀರು ಮೇಲಕ್ಕೆ ಚಿಮ್ಮುತ್ತಿದ್ದುದರಿಂದ ಸಮುದ್ರದಲ್ಲಿರುವ ತಿಮಿಂಗಿಲುಗಳು, ಮೊಸಳೆಗಳು, ಮೀನುಗಳು, ಆಮೆಗಳು, ಬಟ್ಟೆಯನ್ನು ತೆಗೆದುಹಾಕಿದಾಗ ಮನುಷ್ಯನ ಶರೀರವೆಲ್ಲವೂ ಸ್ಪಷ್ಟವಾಗಿ ಕಾಣುವಂತೆ ಬಹಳ ಸ್ಪಷ್ಟವಾಗಿ ಕಾಣುತ್ತಿದ್ದುವು. ॥ ೭೪॥ ಸಮುದ್ರದಲ್ಲಿದ್ದ ಹಾವುಗಳು ಆಕಾಶದಲ್ಲಿ ಹಾರಿಕೊಂಡು ಹೋಗುತ್ತಿದ್ದ ಕಪಿಶಾರ್ದೂಲನನ್ನು ನೋಡಿ, ತಮ್ಮ ಶತ್ರುವಾದ ಗರುಡನೇ ಹಾರಿಹೋಗುತ್ತಿರುವನೋ ಎಂದು ಭಾವಿಸಿ ಭಯಗೊಂಡವು. ॥ ೭೫॥

ವಾನರ ಶ್ರೇಷ್ಠನಾದ ಹನುಮಂತನು ವೇಗವಾಗಿ ಹಾರಿಕೊಂಡು ಹೋಗುತ್ತಿರುವಾಗ ಆವನ ನೆರಳು ಹತ್ತು ಯೋಜನ ವಿಸ್ತಾರವಾಗಿಯೂ, ಮೂವತ್ತು ಯೋಜನಗಳಷ್ಟು ಉದ್ದವಾಗಿಯೂ ಸುಮನೋಹರವಾಗಿ ಕಂಗೊಳಿಸುತ್ತಿತ್ತು.* ॥ ೭೬॥ ವಾಯುಪುತ್ರನನ್ನು ಅನುಸರಿಸಿಕೊಂಡು ಹೋಗುತ್ತಿದ್ದ ಲವಣಾಂಬುಧಿಯಲ್ಲಿ ಬಿದ್ದಿದ್ದ ಆವನ ನೆರಳು ಬಿಳಿಯ ದಟ್ಟವಾದ ಮೋಡಗಳ ಸಾಲಿನಂತೆ ಪ್ರಕಾಶಿಸುತ್ತಿತ್ತು. ॥ ೭೭॥ ಮಹಾತೇಜಸ್ಸಿಯಾದ, ಮಹಾಕಾಯನಾದ, ಮಹಾಕಪಿಯಾದ ಹನುಮಂತನು ಆಲಂಬನವೇ ಇಲ್ಲದ ವಾಯುಮಾರ್ಗದಲ್ಲಿ ರೆಕ್ಕೆಗಳಿಂದ ಕೂಡಿರುವ ಪರ್ವತ ದಂತೆಯೇ ಭಾಸಮಾನವಾಗುತ್ತಿದ್ದನು. ॥ ೭೮॥

ಕಪಿಶ್ರೇಷ್ಠನಾದ, ಬಲಿಷ್ಠನಾದ ಹನುಮಂತನು ಹೆಚ್ಚಾದ ವೇಗದಿಂದ ಹೋಗುತ್ತಿದ್ದ ಮಾರ್ಗದ ಸಮುದ್ರವು ಅದನಿಗೆ ವಿಶಾಲವಾದ ದೋಣಿಯಾಗಿ ಮಾಡಲ್ಪಟ್ಟಿರುವಂತೆ ಕಾಣುತ್ತಿತ್ತು. ॥ ೭೯॥ ಪಕ್ಷಿಗಳ ಸಮೂಹಗಳು ಹಾರಿಕೊಂಡು ಹೋಗುತ್ತಿದ್ದ ಆಕಾಶಮಾರ್ಗದಲ್ಲಿ ವಾಯುಪುತ್ರನು ಪಕ್ಷಿರಾಜ ಗಡನಂತೆ ಹಾರಿಕೊಂಡು ಹೋಗುತ್ತಿದ್ದನು. ಹನುಮಂತನು ಮೇಘಗಳ ಸಮೂಹವನ್ನು ತನ್ನ ಜೊತೆಗೆ ಸೆಳೆದುಕೊಂಡು

* ಹನುಮಂತನು ಸಂಧ್ಯಾಸಮಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹೋಗುತ್ತಿದ್ದನು. ಬೆಳಿಗ್ಗೆ ಮತ್ತು ಸಂಜೆ ಮನುಷ್ಯನ ನೆರಳು ಉದ್ದವಾಗಿ ಕಾಣುವಂತೆ, ಹನುಮಂತನ ನೆರಳೂ ಇಷ್ಟು ವಿಶಾಲವಾಗಿ ಬಿದ್ದಿತ್ತು ಎಂದು ತಿಳಿಯಬೇಕು.

ಆಪತಂತೇ ಪಕ್ಷಿಸಂಘಾನಾಂ ಹಕ್ಷೆರಾಜ ಇವಾಬಭೌ ।
ಹನೂಮನ ಮೇಘಜಾಲಾನಿ ಸ್ವಕರ್ಮಣ ಮಾವಹೋ ಯಥಾ ॥ ೮೦॥

ಪಾಂಡರಾರುಣವರ್ಣಾನಿ ನೀಲಮಾಂಜಿಷ್ಠಕಾನಿ ಚ ।
ಕಪಿನಾ ಕೃಷ್ಯಮಾಣಾನಿ ಮಹಾಭ್ರಾಣಿ ಚಕಾಶಿರೇ ॥ ೮೧॥

ಪ್ರವಿಶನ್ನಭ್ರಜಾಲಾನಿ ನಿಷ್ಪತಂಶ್ಚ ಪುನಃ ಪುನಃ ।
ಪ್ರಚ್ಛನ್ನಶ್ಚ ಪ್ರಕಾಶಶ್ಚ ಚಂದ್ರಮಾ ಇವ ಲಕ್ಷ್ಯತೇ ॥ ೮೨॥

ಪ್ಲವಮಾನಂ ತು ತಂ ದೃಷ್ಟ್ವಾ ಪ್ಲವಗಂ ತ್ವರಿತಂ ತದಾ ।
ವವ್ಯಥುಃ ಪುಷ್ಪವರ್ಷಾಣಿ ದೇವಗಂಧರ್ವದಾನವಾಃ ॥ ೮೩॥

ತತಾಪ ನ ಹಿ ತಂ ಸೂರ್ಯಃ ಪ್ಲವಂತಂ ವಾನರೇಶ್ವರಮ್ ।
ಸಿಷೇವೇ ಚ ತದಾ ವಾಯೂ ರಾಮಕಾರ್ಯಾರ್ಥಸಿದ್ಧಯೇ ॥ ೮೪॥

ಋಷಯಸ್ತುಷ್ಟುವುರ್ಹೃಷ್ಟಂ ಪ್ಲವಮಾನಂ ವಿಹಾಯಸಾ ।
ಜಗೃಶ್ಚ ದೇವಗಂಧರ್ವಾಃ ಪ್ರಶಂಸಂತೋ ಮಹೌಜಸಮ್ ॥ ೮೫॥

ನಾಗಾಶ್ಚ ತುಷ್ಟುವುರ್ಯತ್ನಾ ರಕ್ಷಾಂಸಿ ವಿಬುಧಾಃ ಖಗಾಃ ।
ಶ್ರೇಷ್ಠ್ಯಾಕಾಶೇ ಕಪಿವರಂ ಸಪತಾ ವಿಗತಕ್ಲಮಮ್ ॥ ೮೬॥

ತಸ್ಮಿನ್ ಪ್ಲವಗಶಾರ್ದೂಲೇ ಪ್ಲವಮಾನೇ ಹನೂಮತಿ ।
ಇಕ್ಷ್ವಾಕುಕುಲಮಾನಾರ್ಥೀ ಚಿಂತಯಾಮಾಸ ಸಾಗರಃ ॥ ೮೭॥

ನಾಪಾಯುಂ ವಾನರೇಂದ್ರಸ್ಯ ಯದಿ ನಾಹಂ ಹನೂಮತಃ ।
ಕರಿಷ್ಯಾಮಿ ಭವಿಷ್ಯಾಮಿ ಸರ್ವವಾಹ್ಯೋ ವಿವಕ್ಷತಾಮ್ ॥ ೮೮॥

ಅವಮಿಕ್ಷ್ವಾಕುನಾಥೇನ ಸಗರೇಣ ವಿವರ್ಧಿತಃ ।
ಇಕ್ಷ್ವಾಕುಸುಚಿರಶ್ಯಾಯಂ ನಾವಸೀದಿತುಮರ್ಹತಿ ॥ ೮೯॥

ಹೋಗುವ ವಾಯುವಿನಂತೆ ಒಪ್ಪುತ್ತಿದ್ದನು. ॥ ೮೦॥ ಹನುಮಂತ ನಿಂದ ಹಾಗೆ ಸೆಳೆದೊಯ್ಯಲ್ಪಡುತ್ತಿದ್ದ ಮೇಘಗಳು ಬಿಳಿ, ಎಣ್ಣೆಗೆಂಪು, ನಸುಹಳದಿ ಮುಂತಾದ ವಿಧ-ವಿಧವಾದ ಬಣ್ಣಗಳಿಂದ ಪ್ರಕಾಶಿಸುತ್ತಿದ್ದುವು. ॥ ೮೧॥

ಆಕಾಶದಲ್ಲಿದ್ದ ಮೇಘಗಳ ಸಮೂಹಗಳನ್ನು ಹೊಕ್ಕು ಪುನಃ ಹೊರಬರುತ್ತಲೂ ಇದ್ದ ಹನುಮಂತನು ಮೇಘಾವೃತನಾಗಿ ಮತ್ತು ಮೇಘಗಳಿಂದ ಹೊರಬಂದ ಚಂದ್ರನಂತೆ ಕಾಣುತ್ತಿದ್ದನು. ॥ ೮೨॥ ತ್ವರೆಯಿಂದ ಹಾರಿಕೊಂಡು ಹೋಗುತ್ತಿದ್ದ ಹನುಮಂತನನ್ನು ನೋಡಿ ಅವನ ಮೇಲೆ ದೇವತೆಗಳು, ಗಂಧರ್ವರು, ದಾನವರು ಹೂಗಳ ಮಳೆಗರೆದರು. ॥ ೮೩॥

ಶ್ರೀರಾಮನ ಕಾರ್ಯಸಿದ್ಧಿಗಾಗಿ (ಸೀತಾನ್ವೇಷಣ ಕಾರ್ಯವು ಸಿದ್ಧಿಸಲು) ಆಕಾಶ ಮಾರ್ಗವಾಗಿ ಪಯಣಿಸುತ್ತಿದ್ದ ವಾನರೋತ್ತಮನಿಗೆ ಸೂರ್ಯನು ತಾಪವನ್ನುಂಟುಮಾಡಲಿಲ್ಲ. ಅವನ ಶ್ರಮವನ್ನು ತೊಲಗಿಸಲು ವಾಯುದೇವರೂ ಕೂಡ ಮಂದವಾಗಿ ಬೀಸುತ್ತಾ ಅವನನ್ನು ಸೇವಿಸುತ್ತಿದ್ದನು. (ತಂದೆಯಾದ ವಾಯುದೇವರು ತನ್ನ ಪುತ್ರನನ್ನು ಸೇವಿಸುವುದು (ಪೂಜಿಸುವುದು) ಎಂದರೇನು? ಅವರೆ ರಾಮ ಕಾರ್ಯ ಪ್ರವೃತ್ತನಾದ ರಾಮಭಕ್ತನು ಎಲ್ಲರಿಗೂ ಪೂಜಾರ್ಹನೆ. ಇನ್ನೊಂದು ಭಾವ ರಾಮಕಾರ್ಯವು ತನಗೆ ಸಿಗದೆ ತನ್ನ ಮಗನಿಗೆ ಸಿಕ್ಕಿತಲ್ಲ ಎಂದು ಅನಿಸಿದ ಪಟ್ಟು ಗೌರವಿಸಿದನು.) ॥ ೮೪॥ ಆಕಾಶವ ಮೂಲಕವಾಗಿ ಹಾರಿಕೊಂಡು ಹೋಗುತ್ತಿದ್ದ ತೇಜ ಸ್ವೀಯಾದ ಹನುಮಂತನನ್ನು ಋಷಿಗಳು ಸ್ತುತಿಸಿದರು. ದೇವತೆಗಳೂ, ಗಂಧರ್ವರೂ ಅವನನ್ನು ಶ್ಲಾಘಿಸಿಮಾದುತ್ತಾ ಗುಣಗಾನ ಮಾಡಿದರು. ॥ ೮೫॥ ಇತರರಿಂದ ಮಾಡಲು ಅಸಾಧ್ಯವಾದ ಕಾರ್ಯವನ್ನು ಮಾಡುತ್ತಿದ್ದರೂ ಸ್ವಲ್ಪವೂ ಆಯಾಸಗೊಳ್ಳದಿದ್ದ ಕಪಿವರನನ್ನು ನೋಡಿ ನಾಗಗಳೂ, ಯಕ್ಷರೂ, ರಾಕ್ಷಸರೂ, ದಿಕ್ಪಾಲಕರೂ, ದೇವತೆಗಳೂ ಮುಂತಾದವರೆಲ್ಲರೂ ಪರ-ಪರಿಯಾಗಿ ಸ್ತುತಿಸಿದರು. ಪಕ್ಷಿಗಣ ಸಮೂಹಗಳೂ ಸ್ತುತಿಸಿದವು. ॥ ೮೬॥

ಕಪಿಕುಂಜರನಾದ ಹನುಮಂತನು ಹೀಗೆ ಸಮುದ್ರದ ಮೇಲೆ ಹಾರಿಕೊಂಡು ಹೋಗುತ್ತಿದ್ದಾಗ, ಅವನನ್ನು ನೋಡಿ ಸಮುದ್ರರಾಜನು ತನ್ನ ಹುಟ್ಟಿಗೆ ಕಾರಣವಾದ ಇಕ್ಷ್ವಾಕುವಂಶ ವನ್ನು ಗೌರವಿಸಲು ಬಯಸಿ ಹೀಗೆ ಯೋಚಿಸಿದನು– "ಶ್ರೀರಾಮನ ಕಾರ್ಯಾರ್ಥಿಯಾಗಿ ಹೊರಟಿರುವ ವಾನರೇಂದ್ರನಾದ ಹನುಮಂತನಿಗೆ ಈಗ ನಾನು ಸಹಾಯವನ್ನು ಮಾಡದಿದ್ದರೆ ಎಲ್ಲ ವಿಧದಿಂದ ಎಲ್ಲರ ದೃಷ್ಟಿಯಲ್ಲಿ ನಿಂದಾರ್ಹನಾಗುವೆನು. ನಾನಾದರೋ ಇಕ್ಷ್ವಾಕುವಂಶದ ರಾಜನಾದ ಸಗರನಿಂದ ಸಂವರ್ಧಿತನಾಗಿದ್ದೇನೆ. ಹನುಮಂತನೂ ಅದೇ ಇಕ್ಷ್ವಾಕು ವಂಶದ ಅರಸನಾದ ಶ್ರೀರಾಮನಿಗೆ ಸಚಿವನಾಗಿದ್ದಾನೆ. ಅದುದರಿಂದ ಇವನು ಯಾವುದೇ ಕಷ್ಟವನ್ನು ಅನುಭವಿಸ ಬಾರದು. ಈ ಕಪೀಶ್ವರನು ಸ್ವಲ್ಪ ದೊತ್ತಾದರೂ ಇಲ್ಲಿ

ತಥಾ ಮಯಾ ವಿಧಾತವ್ಯಂ ವಿಶ್ರಮೇತ ಯಥಾ ಕಪಿಃ ।
ಕೇಶಂ ಚ ಮಯಿ ವಿಶ್ರಾಂತಃ ಸುಖೇನಾತಿತರಿಷ್ಯತಿ ॥ ೯೦॥

ಇತಿ ಕೃತ್ವಾ ಮತಿಂ ಸಾಧ್ವೀಂ ಸಮುದ್ರಶ್ಚನ್ನಮುಂಭಸಿ ।
ಹಿರಣ್ಯನಾಭಂ ಮೈನಾಕಮುವಾಚ ಗಿರಿಸತ್ತಮಮ್ ॥ ೯೧॥

ತ್ವಮಿಹಾಸುರಸಂಘಾನಾಂ ಪಾತಾಲತಲವಾಸಿನಾಮ್ ।
ದೇವರಾಜ್ಞಾ ಗಿರಿಶ್ರೇಷ್ಠ ಪರಿಘಃ ಸಂನಿವೇಶಿತಃ ॥ ೯೨॥

ತ್ವದೋಷಾಂ ಜ್ಞಾತವೀರ್ಯಾಣಾಂ ಪುನರೇಷೋತ್ಥಿಷ್ಯತಾಮ್ ।
ಪಾತಾಲಸ್ಯಾಪ್ರಮೇಯಸ್ಯ ದ್ವಾರಮಾವೃತ್ಯ ತಿಷ್ಠಸಿ ॥ ೯೩॥

ತಿರ್ಯಗೂರ್ಧ್ವಮಧಶ್ಚೈವ ಶಕ್ತಿಸ್ತೇ ಶೈಲ ವರ್ಧಿತುಮ್ ।
ತಸ್ಮಾತ್ ಸಂಚೋದಯಾಮಿ ತ್ವಾಮುತ್ತಿಷ್ಠ ನಗಸತ್ತಮ ॥ ೯೪॥

ಸ ಏಷ ಕಪಿತಾರ್ದೂಲಸ್ತ್ವಮುಪೈಷ್ಯತಿ ವೀರ್ಯವಾನ್।
ಹನೂಮಾನ್ ರಾಮಕಾರ್ಯಾರ್ಥಂ ಭೀಮಕರ್ಮಾಖಮಾಪ್ಲುತಃ ॥

ಅಸ್ಯ ಸಾಹ್ಯಂ ಮಯಾ ಕಾರ್ಯಮಿಕ್ಷ್ವಾಕುಹಿತವರ್ತಿನಃ ।
ಮಮ ಹೀಕ್ಷ್ವಾಕವಃ ಪೂಜ್ಯಾಃ ಪರಂ ಪೂಜ್ಯತಮಾಸ್ತವ ॥ ೯೬॥

ಕುರು ಸಾಚಿವ್ಯಮಸ್ಮಾಕಂ ನ ನಃ ಕಾರ್ಯಮತಿಕ್ರಮೇತ್ ।
ಕರ್ತವ್ಯಮಕೃತಂ ಕಾರ್ಯಂ ಸತಾಂ ಮನ್ಯುಮುದೀರಯೇತ್ ॥ ೯೭॥

ಸಲಿಲಾದೂರ್ಧ್ವಮುತ್ತಿಷ್ಠ ತಿಷ್ಠತ್ಯೇಷ ಕಪಿಸ್ತ್ವಯಿ ।
ಅಸ್ಮಾಕಮತಿಥಿಶ್ಚೈವ ಪೂಜ್ಯಶ್ಚ ಪ್ಲವತಾಂ ವರಃ ॥ ೯೮॥

ಜ್ಞಾಮಾಕರಮಹಾನಾಭ ದೇವಗಂಧರ್ವಸೇವಿತ ।
ಹನೂಮಾಂಸ್ತ್ವಯಿ ವಿಶ್ರಾಂತಸ್ತತಃ ಕೇಶಂ ಗಮಿಷ್ಯತಿ ॥ ೯೯॥

ವಿಶ್ರಮಿಸಿಕೊಳ್ಳಲು ನಾನು ವ್ಯವಸ್ಥೆ ಮಾಡಬೇಕಾಗಿದೆ. ವಿಶ್ರಮಿಸಿಕೊಂಡ ಬಳಿಕ ಅವನು ಉಳಿದ ಪ್ರಯಾಣವನ್ನು ಹಾಯಾಗಿ ಮುಂದರಿಸಬಹುದು.'' ॥ ೮೭-೯೦॥

ಹೀಗೆ ಸಮುದ್ರರಾಜನು ಸಮಯೋಚಿತವಾಗಿ ನಿಶ್ಚಯಿಸಿ ತನ್ನಲ್ಲಿಯೇ ಅಡಗಿಕೊಂಡಿದ್ದ ಗಿರಿಶ್ರೇಷ್ಠನಾದ ಹಿರಣ್ಯ ನಾಭನಾದ (ಭಂಗಾರದ ಶಿಖರಗಳುಳ್ಳ) ಮೈನಾಕನಿಗೆ ಹೇಳಿದನು– ''ಎಲ್ಲೆ ಪರ್ವತೋತ್ತಮನೇ! ಪಾತಾಳವಾಸಿಗಳಾದ ರಾಕ್ಷಸರು ಮೇಲೆ ಬರುವುದನ್ನು ತಡೆಯುವ ನಲುವಾಗಿ ದೇವರಾಜ ಇಂದ್ರನು ನಿನ್ನನ್ನು ಆಗಳೆಯ ರೂಪದಲ್ಲಿ ಸ್ಥಾಪಿಸಿರುವನು. ॥ ೯೧-೯೨॥ ಪರಾಕ್ರಮಶಾಲಿಗಳಾದ ಆ ರಾಕ್ಷಸರು ಮರಳಿ ಮೇಲಕ್ಕೆ ಬರಲು ಸಾಧ್ಯವಾಗದಂತೆ ದುರ್ಭೇದ್ಯವಾದ ಈ ಪಾತಾಳದ ಈ ಬಾಗಿಲನ್ನು ಆವರಿಸಿ ನೀನು ನಿಂತಿರುವೆ.* ॥ ೯೩॥ ಓ ಪರ್ವತ ಶ್ರೇಷ್ಠನೇ! ನಿನಗೆ ಆಡ್ಡವಾಗಿಯೂ, ಎತ್ತರವಾಗಿಯೂ ಬೆಳೆಯುವ ಶಕ್ತಿ ಇದೆ. ಆದರಿಂದಲೇ ನಾನು ನಿನ್ನನ್ನು ಮೇಲೆದ್ದು ನಿಲ್ಲುವಂತೆ ಪ್ರಚೋದಿಸುತ್ತಿದ್ದೇನೆ. ಮೈನಾಕನೇ ಎದ್ದು ನಿಲ್ಲು! ॥ ೯೪॥ ಆದೋ ನೋಡು! ಪರಾಕ್ರಮಶಾಲಿಯೂ, ಅಸಹಾಯ ಶೂರನೂ ಕಪಿಪ್ರವರನೂ ಆದ ಹನುಮಂತನು ಶ್ರೀರಾಮಕಾರ್ಯಾರ್ಥಿಯಾಗಿ ನಿನ್ನ ಮೇಲೆಯೇ ಆಕಾಶಮಾರ್ಗವಾಗಿ ಹೋಗುತ್ತಿದ್ದಾನೆ. ॥ ೯೫॥ ಇಕ್ಷ್ವಾಕು ಕುಲಸಂಭೂತನಾದ, ಶ್ರೀರಾಮನ ಆನುಯಾಯಿಯಾಗಿರುವ ಹನುಮಂತನಿಗೆ ಈಗ ಸಹಾಯ ಮಾಡುವುದು ನನ್ನ ಕರ್ತವ್ಯವಾಗಿದೆ. ನನಗೆ ಇಕ್ಷ್ವಾಕು ಕುಲದವರು ಪೂಜ್ಯರು. ನನ್ನಲ್ಲಿ ನೀನು ಇರುವುದರಿಂದ ನಿನಗೂ ಹೆಚ್ಚಿನ ಪೂಜ್ಯರಾಗಿರುವರು. ನಾವು ಮಾಡಬೇಕಾಗಿರುವ ಕಾರ್ಯವು (ಹನುಮಂತನಿಗೆ ವಿಶ್ರಾಂತಿ ಈವುದು) ಸಮಯ ಮೀರುವುದರೊಳಗೆ ಕೈಗೂಡುವಂತೆ ನಾವು ಅವನಿಗೆ ತಕ್ಕ ಸಹಾಯವನ್ನು ಮಾಡಬೇಕು. ಏಕೆಂದರೆ, ಮಾಡಬೇಕಾಗಿರುವ ಕರ್ತವ್ಯವನ್ನು ಸಕಾಲದಲ್ಲಿ ಮಾಡದಿದ್ದರೆ ಹಿರಿಯರು ಕುಪಿತರಾಗುತ್ತಾರೆ.'' ॥ ೯೬-೯೭॥

''ಮೈನಾಕ! ನೀನೀಗಲೇ ನೀರಿನಿಂದ ಮೇಲಕ್ಕೆ ಎದ್ದುನಿಲ್ಲು, ಈ ಕಪಿವೀರನು ನಮಗೆ ಆತಿಥಿಯಾಗಿರುವನು. ಪರಮಪೂಜ್ಯನಾದ ಆಂಜನೇಯನು ನಿನ್ನ ಶಿಖರದಲ್ಲಿ ಸ್ವಲ್ಪ ಹೊತ್ತು ತಂಗಿ ವಿಶ್ರಾಂತಿಪಡೆಯಲಿ. ॥ ೯೮॥ ದೇವಗಂಧರ್ವ ಸೇವಿತನೇ! ಸುವರ್ಣಮಯವಾದ ಮಹಾಶೃಂಗದಿಂದ ಕೋಭಸುತ್ತಿರುವ ಮೈನಾಕನೇ! ಹನುಮಂತನು ನಿನ್ನಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿದ್ದು ಆನಂತರ ಮುಂದೆ ಪಯಣ ಬೆಳೆಸಲಿ. ಪರಾಕ್ರಮ ಶಾಲಿಯಾದ ವಾನರಶ್ರೇಷ್ಠನು ಇದೋ ನಿನ್ನ ಸಮೀಪಕ್ಕೆ ಬರುತ್ತಿದ್ದಾನೆ. ॥ ೯೯॥ ಶ್ರೀರಾಮನ ದಯಾಪರತೆ

* ಹಿಂದೆ ಬಲಿಚಕ್ರವರ್ತಿಯ ಇಂದ್ರನನ್ನು ಪರಾಜಯಗೊಳಿಸಿ ಸ್ವರ್ಗವನ್ನು ವಶಪಡಿಸಿಕೊಂಡನು. ಆದರಿಂದ ದೇವತೆಗಳು ಕಷ್ಟಪಟ್ಟರು. ಆಗ ಶ್ರೀಮಹಾವಿಷ್ಣುವು ವಾಮನನಾಗಿ ಅವತರಿಸಿ ಬಲಿಚಕ್ರವರ್ತಿಯನ್ನು ಪಾತಾಳದಲ್ಲಿರಿಸಿದನು. ಅವನೊಂದಿಗೆ ರಾಕ್ಷಸರೆಲ್ಲರೂ ಪಾತಾಳವನ್ನು ಸೇರಿದರು. ಅವರು ತಿರುಗಿ ಮೇಲೇರಿಬರದಂತೆ ಆ ಬಾಗಿಲಿಗೆ ಇಂದ್ರನು ಮೈನಾಕವನ್ನು ಅಡ್ಡವಾಗಿ ನಿಲ್ಲಿಸಿದನು.

ಕಾಕುತ್ಸ್ಥಾನ್ಯಸಂಶ್ಯಂ ಚ ಮೈಥಿಲ್ಯಾಶ್ಚ ವಿವಾಸನಮ್ ।
ಶ್ರಮಃ ಚ ಪ್ಲವಗೇಂದ್ರಸ್ಯ ಸಮಿಕ್ಷ್ಯೋತ್ಥಾತುಮರ್ಹಸಿ ॥ ೧೦೦॥

ಹಿರಣ್ಯನಾಭೋ ಮೈನಾಕೋ ನಿಶಮ್ಯ ಲವಣಾಂಭಸಃ ।
ಉತ್ಪಪಾತ ಜಲಾತ್ತೂರ್ಣಂ ಮಹಾದ್ರುಮಲತಾಯುತಃ ॥ ೧೦೧॥

ಸ ಸಾಗರಜಲಂ ಭಿತ್ತ್ವಾ ಬಭೂವಾಭ್ಯುತ್ಥಿತಸ್ತದಾ ।
ಯಥಾ ಜಲಧರಂ ಭಿತ್ತ್ವಾ ದೀಪ್ತರಶ್ಮಿರ್ದಿವಾಕರಃ ॥ ೧೦೨॥

ಸ ಮಹಾತ್ಮಾ ಮುಹೂರ್ತೇನ ಪರ್ವತಃ ಸಲಿಲಾವೃತಃ ।
ದರ್ಶಯಾಮಾಸ ಶೃಂಗಾಣಿ ಸಾಗರೇಣ ನಿಯೋಜಿತಃ ॥ ೧೦೩॥

ಶಾತಕುಂಭಮಯೈಃ ಶೃಂಗೈಃ ಸರ್ವತಃ ಸಮಲಂಕೃತೈಃ ।
ಆದಿತ್ಯೋದಯಸಂಕಾಶೈರ್ದಾರಯದ್ಭಿರಿವಾಂಬರಮ್ ॥ ೧೦೪॥

ತಪ್ತಜಾಂಬೂನದೈಃ ಶೃಂಗೈಃ ಪರ್ವತಸ್ಯ ಸಮುತ್ಥಿತೈಃ ।
ಆಕಾಶಂ ಶಸ್ತ್ರಸಂಕಾಶಮಭವತ್ ಕಾಂಚನಪ್ರಭಮ್ ॥ ೧೦೫॥

ಜಾತರೂಪಮಯೈಃ ಶೃಂಗೈರ್ವ್ಯಾಜಘಟ್ಟಿತೈಃ ಸ್ವಯಂಪ್ರಭೈಃ ।
ಆದಿತ್ಯಶತಸಂಕಾಶಃ ಸೋಽಭವದ್ಗಿರಿಸತ್ತಮಃ ॥ ೧೦೬॥

ತಮುತ್ಥಿತಮಸಂಗೇನ ಹನುಮಾನಗ್ರತಃ ಸ್ಥಿತಮ್ ।
ಮಧ್ಯೇ ಲವಣತೋಯಸ್ಯ ವಿಘ್ನೋಽಯಮಿತಿ ನಿಶ್ಚಿತಃ ॥ ೧೦೭॥

ಸ ತಮುತ್ಪತನಮತ್ಯರ್ಥಂ ಮಹಾವೇಗೋ ಮಹಾಕಪಿಃ ।
ಉರಸಾ ಪಾತಯಾಮಾಸ ಜೀಮೂತಮಿವ ಮಾರುತಃ ॥ ೧೦೮॥

ಸ ತಥಾ ಪಾತಿತಸ್ತೇನ ಕಪಿನಾ ಪರ್ವತೋತ್ತಮಃ ।
ಬುದ್ಧ್ವಾ ತಸ್ಯ ಕಪೇರ್ವೇಗಂ ಜಗರ್ಷ ಚ ನನಂದ ಚ ॥ ೧೦೯॥

ತಮಾಕಾಶಗತಂ ವೀರಮಾಕಾಶೇ ಸಮುಪಸ್ಥಿತಃ ।
ಪ್ರೀತಃ ಹೃಷ್ಟಮನಾ ವಾಕ್ಯಮುವಾಚ ಪರ್ವತಃ ಕಪಿಮ್ ॥ ೧೧೦॥

ಯನ್ನು, ರಾಮನಿಂದ ಅಗಲಿದ ಸೀತಾದೇವಿಯ ದುಃಖ್ಖಿತಿಯನ್ನು, ಪ್ಲವಗ ಶ್ರೇಷ್ಠನಾದ ಹನುಮಂತನ ಕಾರ್ಯಭಾರವನ್ನು (ಶ್ರಮವನ್ನು) ಗಮನಿಸಿ, ನೀನು ಬೇಗನೇ ನೀರಿನಿಂದ ಎದ್ದೇಳಿಲ್ಲ.'' ॥ ೧೦೦॥

ಸಮುದ್ರರಾಜನ ಆ ಮಾತುಗಳನ್ನು ಕೇಳಿದೊಡನೆ ಮಹಾವೃಕ್ಷಗಳಿಂದಲೂ, ಲತೆಗಳಿಂದಲೂ, ಸಮಾವೃತನಾಗಿದ್ದ ಹಿರಣ್ಯಶೃಂಗನಾದ ಮೈನಾಕನು ತನ್ನ ಶಿಖರವನ್ನು ಮೇಲಕ್ಕೆ ಚಾಚಿದನು. ॥ ೧೦೧॥ ಮೈನಾಕನು ಸಮುದ್ರವನ್ನು ಭೇದಿಸಿಕೊಂಡು ಹೊರಬಂದು ಪ್ರದೀಪ್ತವಾದ ಕಿರಣಗಳುಳ್ಳ ಸೂರ್ಯದೇವನು ಮೋಡಗಳನ್ನು ಭೇದಿಸಿಕೊಂಡು ಹೊರಬಂದು ಪ್ರಕಾಶಿಸುವಂತೆ ಪ್ರಕಾಶಿಸಿದನು. ॥ ೧೦೨॥ ಸಮುದ್ರರಾಜನಿಂದ ಪ್ರೇರಿತನಾದ ಮಹಾತ್ಮನಾದ ಮೈನಾಕನು ನೀರಿನಿಂದ ಸುತ್ತುವರಿಯಲ್ಪಟ್ಟು ಮೂಹೂರ್ತಮಾತ್ರದಲ್ಲಿ ತನ್ನ ಎಲ್ಲ ಶಿಖರಗಳನ್ನು ಹೊರ ಚಾಚಿದನು. ॥ ೧೦೩॥ ಆ ಮೈನಾಕ ಗಿರಿ ಶಿಖರಗಳು ಭಂಗಾರದ ಕಾಂತಿಯಿಂದ ಶೋಭಿಸುತ್ತಿದ್ದವು. ಅದರಲ್ಲಿ ಕಿನ್ನರರು ವಿಹರಿಸುತ್ತಿದ್ದರು. ಮಹಾಸರ್ಪಗಳು ಹರಿದಾಡುತ್ತಿದ್ದುವು. ಉದಯಿಸಿದ ಸೂರ್ಯನ ಕಾಂತಿಯಂತೆ ಹೊಂದಿದ್ದ ಆಕಾಶದಲ್ಲಿ ಸ್ವರ್ಣರೇಖೆಗಳನ್ನೆಳೆಯಲು ಹೊರಟಿದೆಯೋ ಎಂಬಂತೆ ಆ ಪರ್ವತವು ಅತ್ಯಂತ ಎತ್ತರವಾಗಿ ಶೋಭಿಸುತಿತ್ತು. ॥ ೧೦೪॥ ಸಮುದ್ರ ಜಲದಿಂದ ಮೇಲಕ್ಕೆದ್ದು ನಿಂತ ಮೈನಾಕ ಪರ್ವತ ಶಿವಿರಗಳು ಪುಟಿವಿಟ್ಟ ಚಿನ್ನದಂತೆ ವಿರಾಜಿಸುತ್ತಿದ್ದುವು. ಅವು ನೀಲವರ್ಣದ ಆಕಾಶದಲ್ಲಿ ಕಾಂಚನ ಪ್ರಭೆಯಂತೆ ಒಪ್ಪುತ್ತಿದ್ದವು. ॥ ೧೦೫॥ ಸುವರ್ಣಮಯವಾದ ಶಿಖರಗಳಿಂದ ಕೂಡಿ ಮಹಾಪ್ರಭೆಯಿಂದ ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿದ್ದ ಶ್ರೇಷ್ಠವಾದ ಮೈನಾಕಪರ್ವತವು ನೂರು ಸೂರ್ಯರಿಗೆ ಸದೃಶವಾಗಿತ್ತು. ॥ ೧೦೬॥

ಯಾವುದೇ ಕಾರಣವಿಲ್ಲದೆ ಇದ್ದಕ್ಕಿದ್ದಂತೆ ಲವಣಾಂಬುಧಿಯಿಂದ ಮೇಲೆದ್ದು ಇದಿರ್ಗಡೆ ನಿಂತಿದ್ದ ಮೈನಾಕ ಪರ್ವತದ ಶಿಖರಗಳನ್ನು ನೋಡಿ ಹನುಮಂತನು ಇದೊಂದು ತನಗೆ ವಿಘ್ನಕಾರಿಯೆಂದೇ ಭಾವಿಸಿದನು. ॥ ೧೦೭॥ ಮಹಾವೇಗದಿಂದ ಸಾಗುತ್ತಿದ್ದ ಮಹಾಕಪಿಯಾದ ಹನುಮಂತನು ಬಹಳ ಎತ್ತರವಾಗಿದ್ದ ಮೈನಾಕ ಪರ್ವತದ ಶಿಖರವನ್ನು-ವಾಯುವು ಕಾರ್ಮುಗಿಲನ್ನು ಚದುರಿಸಿಬಿಡುವಂತೆ ಎದೆಯಿಂದಲೇ ಅಪ್ಪಳಿಸಿ ಕೆಳಕ್ಕುರುಳಿಸಿದನು. ॥ ೧೦೮॥ ಕಪಿವೀರನಿಂದ ಲೀಲಾಜಾಲವಾಗಿ ಅಪ್ಪಳಿಸಲ್ಪಟ್ಟ ಗಿರಿವರನು ಅವನ ವೇಗ-ಬಲವನ್ನು ನೋಡಿ ಆಶ್ಚರ್ಯಚಕಿತನಾಗಿ ಅಬ್ಬಾ! ಇವನ ಅಧಟೇ! ಎಂದು ಹರ್ಷದಿಂದ ಪುಲಕಿತನಾಗಿ ಆನಂದದಲ್ಲಿ ಮುಳುಗಿ ಹೋದನು. ॥ ೧೦೯॥ ಆ ಮೈನಾಕ ಪರ್ವತವು ಮಾನವ ರೂಪವನ್ನು ಧರಿಸಿ, ಶಿಖರದ ಮೇಲೆ ನಿಂತು ಆಕಾಶಮಾರ್ಗವಾಗಿ ಹೋಗುತ್ತಿದ್ದ ಆ ಕಪಿವೀರನನ್ನು ಪ್ರೇಮದಿಂದ, ಸಂತೋಷಗೊಂಡ ಮನಸ್ಸಿನಿಂದ ನಮಿಸಿ ಇಂತೆಂದನು – ॥ ೧೧೦॥

ಮಾನುಷಂ ಧಾರಯನ್ ರೂಪಮಾತ್ಮನಃ ಶಿವಿರೇ ಸ್ಥಿತಃ ।
ದುಷ್ಕರಂ ಕೃತವಾನ್ ಕರ್ಮ ತ್ವದಿದಂ ವಾನರೋತ್ತಮ ॥ ೧೧೧॥

ನಿಪತ್ಯ ಮಮ ಶೃಂಗೇಷು ವಿಶ್ರಮಸ್ವ ಯಥಾಸುಖಮ್ ।
ರಾಘವಸ್ಯ ಕುಲೇ ಜಾತೈರುದಧಿಃ ಪರಿವರ್ಧಿತಃ ॥ ೧೧೨॥

ಸ ತ್ವಾಂ ರಾಮಹಿತೇ ಯುಕ್ತಂ ಪ್ರತ್ಯರ್ಚಯತಿ ಸಾಗರಃ ।
ಕೃತೇ ಚ ಪ್ರತಿಕರ್ತವ್ಯಮೇಷ ಧರ್ಮಃ ಸನಾತನಃ ॥ ೧೧೩॥

ಸೋಽಯಂ ತತ್ಪ್ರತಿಕಾರಾರ್ಥೀ ತ್ವತ್ತಃ ಸಂಮಾನಮರ್ಹತಿ ।
ತ್ವನ್ನಿಮಿತ್ತಮನೇನಾಹಂ ಬಹುಮಾನಾತ್ಪಚೋದಿತಃ ॥ ೧೧೪॥

ಯೋಜನಾನಾಂ ಶತಂ ಚಾಪಿ ಕಪಿರೇಷ ಖಮಾಪ್ಲುತಃ ।
ತವ ಸಾನುಷು ವಿಶ್ರಾಂತಃ ಶೇಷಂ ಪ್ರಕ್ರಮತಾಮಿತಿ ॥ ೧೧೫॥

ತಿಷ್ಠ ತ್ವಂ ಹರಿಶಾರ್ದೂಲ ಮಯಿ ವಿಶ್ರಮ್ಯ ಗಮ್ಯತಾಮ್ ।
ತದಿದಂ ಗಂಧವತ್ ಸ್ವಾದು ಕಂದಮೂಲಫಲಂ ಬಹು ।
ತದಾಸ್ವಾದ್ಯ ಹರಿಶ್ರೇಷ್ಠ ವಿಶ್ರಾಂತೋಽನುಗಮಿಷ್ಯಸಿ ॥ ೧೧೬॥

ಅಸ್ಮಾಕಮಪಿ ಸಂಬಂಧಃ ಕಪಿಮುಖ್ಯ ತ್ವಯಾಽಸ್ತಿ ವೈ ।
ಪ್ರಖ್ಯಾತಸ್ತ್ರಿಷು ಲೋಕೇಷು ಮಹಾಗುಣಪರಿಗ್ರಹಃ ॥ ೧೧೭॥

ವೇಗವಂತಃ ಪ್ಲವಂತೋ ಯೇ ಪ್ಲವಗಾ ಮಾರುತಾತ್ಮಜ ।
ತೇಷಾಂ ಮುಖ್ಯತಮಂ ಮನ್ಯೇ ತ್ವಾಮಹಂ ಕಪಿಕುಂಜರ ॥ ೧೧೮॥

ಅತಿಥಿಃ ಕಿಲ ಪೂಜಾರ್ಹಃ ಪ್ರಾಕೃತೋಽಪಿ ವಿಜಾನತಾ ।
ಧರ್ಮಂ ಜಿಜ್ಞಾಸಮಾನೇನ ಕಿಂ ಪುನರ್ಯಾದೃಶೋ ಮಹಾನ್ ॥

ತ್ವಂ ಹಿ ದೇವವರಿಷ್ಠಸ್ಯ ಮಾರುತಸ್ಯ ಮಹಾತ್ಮನಃ ।
ಪುತ್ರಸ್ತ್ಯೈವ ವೇಗೇನ ಸದೃಶಃ ಕಪಿಕುಂಜರ ॥ ೧೨೦॥

"ಓ ವಾನರಾತ್ತೋಮಾ! ನೀನು ಅತ್ಯಂತ ದುಷ್ಕರವಾದ ಕಾರ್ಯವನ್ನು ಮಾಡಿರುವೆ. ನನ್ನ ಶಿಖರದ ಮೇಲೆ ಇಳಿದು ಸ್ವಲ್ಪಹೊತ್ತು ವಿಶ್ರಮಿಸಿಕೊಂಡು ಆನಂತರ ಮುಂದಕ್ಕೆ ಪಯಣಿಸು. ॥ ೧೧೧॥ ರಾಘವನ ವಂಶದಲ್ಲಿ ಹುಟ್ಟಿದವರಿಂದಲೇ ಸಮುದ್ರರಾಜನು ಅಭಿವೃದ್ಧಿಯನ್ನು ಹೊಂದಿದ್ದಾನೆ. ಈ ಕಾರಣದಿಂದ ಸಮುದ್ರರಾಜನು ರಾಮನ ಕಾರ್ಯದಲ್ಲಿಯೇ ಆಸಕ್ತನಾಗಿರುವ ನಿನ್ನನ್ನು ಗೌರವಿಸಲು ಬಯಸಿದ್ದಾನೆ. ॥ ೧೧೨॥ ಉಪಕಾರವನ್ನು ಮಾಡಿದವರಿಗೆ ಪ್ರತ್ಯುಪಕಾರ ಮಾಡುವುದು ಸನಾತನ ಧರ್ಮವಾಗಿದೆ. ಆದುದರಿಂದ ರಘುವಂಶೀಯರು ತನಗೆ ಮಾಡಿರುವ ಉಪಕಾರಕ್ಕೆ ಈ ರೀತಿಯಲ್ಲಿ ಪ್ರತ್ಯುಪಕಾರ ಮಾಡಲು ಸಮುದ್ರರಾಜನು ಬಯಸಿದ್ದಾನೆ. ಅವನ ಆತಿಥ್ಯವನ್ನು ಅಂಗೀಕರಿಸು. ನೀನು ಸನ್ಮಾನಕ್ಕೆ ಯೋಗ್ಯನಾಗಿರುವೆ. ॥ ೧೧೩॥ ನಿನ್ನ ನಲುವಾಗಿಯೇ ಸಮುದ್ರರಾಜನು ಬಹುಮಾನ ಪೂರ್ವಕವಾಗಿ ನನಗೆ ಹೀಗೆ ಹೇಳಿರುವನು "ಆಕಾಶ ಮಾರ್ಗದಲ್ಲಿ ಹಾರಿ ಬರುತ್ತಿರುವ ಕಪೀಶ್ವರನು ನೂರು ಯೋಜನಗಳನ್ನಾದರೂ ಒಂದೇ ನೆಗೆತದಲ್ಲಿ ಹಾರಬಲ್ಲನು. ಆದರೂ ಅವನು ನಿನ್ನ ಶಿಖರದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಆನಂತರ ಉಳಿದ ಭಾಗವನ್ನು ಲಂಘಿಸಲಿ. ಓ ಕಪಿವರಾ! ನಾನು ನಿನ್ನಲ್ಲಿ ಪ್ರಾರ್ಥಿಸುತ್ತೇನೆ. ಇಲ್ಲಿಯೇ ಕೊಂಚ ಹೊತ್ತು ನನ್ನ ಮೇಲೆ ವಿಶ್ರಮಿಸಿ ಮುಂದಕ್ಕೆ ಪ್ರಯಾಣಮಾಡು. ॥ ೧೧೪-೧೧೫॥

"ಓ ಹರಿವೀರಾ! ಇಲ್ಲಿ ಸುಗಂಧಯುಕ್ತವಾಗಿರುವ ಗೆಡ್ಡೆ-ಗೆಣಸುಗಳು ಮತ್ತು ಫಲಗಳು ಹೇರಳವಾಗಿದ್ದು ತುಂಬಾ ರುಚಿಕರವಾಗಿವೆ. ಇವೆಲ್ಲವನ್ನು ಆಸ್ವಾದಿಸಿ, ವಿಶ್ರಾಂತಿಯನ್ನು ಪಡೆದು ಆನಂತರ ಹೋಗುವೆಯಂತೆ. ॥ ೧೧೬॥ ಕಪಿಮುಖ್ಯನೇ! ನೀನು ಮಹಾಗುಣಗಳನ್ನು ಮೈಗೂಡಿಸಿಕೊಂಡಿರುವೆ. ಈ ಕಾರಣದಿಂದ ಮೂರು ಲೋಕಗಳಲ್ಲಿ ಖ್ಯಾತನಾಗಿರುವೆ. ಮೇಲಾಗಿ ನೀನು ನಮಗೆ ಸಂಬಂಧಿಯೂ ಆಗಬೇಕು. ॥ ೧೧೭॥ ಓ ಕಪಿಕುಂಜರಾ! ಬಹಳ ವೇಗವಾಗಿ ಹಾರುವ ಸಾಮರ್ಥ್ಯವಿರುವ ಕಪಿಗಳೆಲ್ಲರಿಗೂ ನೀನು ಮುಖ್ಯನಾದವನು ಎಂದು ನಾನು ಭಾವಿಸುತ್ತೇನೆ. ॥ ೧೧೮॥ ಧರ್ಮಾತ್ಮನಾದ ಬುದ್ಧಿವಂತನು ತನ್ನ ಮನೆಗೆ ಬಂದ ಅತಿಥಿಯು ಸಾಮಾನ್ಯನಾಗಿದ್ದರೂ ಅವನನ್ನು ಪೂಜಾರ್ಹನೆಂದೇ ತಿಳಿಯುತ್ತಾನೆ. ಹೀಗಿರುವಾಗ ನಿನ್ನಂತಹ ಮಹಾತ್ಮನಾದ ಅತಿಥಿಯು ಬಂದಾಗ ಪೂಜಿಸುವ ವಿಷಯದಲ್ಲಿ ಹೇಳುವುದೇನಿದೆ? ॥ ೧೧೯॥ ಓ ಕಪೀಶ್ವರಾ! ನೀನಾದರೋ ದೇವಶ್ರೇಷ್ಠನಾದ, ಮಹಾತ್ಮನಾದ ವಾಯುದೇವರ ಪುತ್ರನು; ವೇಗದಲ್ಲಿಯೂ ಅವನಿಗೆ ಸಮಾನನೇ ಆಗಿರುವೆ. ॥ ೧೨೦॥ ಓ ಧರ್ಮಜ್ಞಾ! ನಿನ್ನನ್ನು ಸತ್ಕರಿಸಿದರೆ ವಾಯುದೇವರನ್ನೇ ಸತ್ಕರಿಸಿದಂತಾಗುತ್ತದೆ. ನಿನಗೆ ಮಾಡಿದ ಸತ್ಕಾರವನ್ನು ವಾಯುದೇವರು ಪಡೆದುಕೊಳ್ಳುತ್ತಾನೆ. ಆದುದರಿಂದ ನೀನು

ಪೂಜಿತೇ ತ್ವಯಿ ಧರ್ಮಜ್ಞ ಪೂಜಾಂ ಪ್ರಾಪ್ನೋತಿ ಮಾರುತಃ ।
ತಸ್ಮಾತ್ತ್ವಂ ಪೂಜನೀಯೋ ಮೇ ಶೃಣು ಚಾಪ್ಯತ್ರ ಕಾರಣಮ್ ॥ ೧೨೧॥

ಪೂರ್ವಂ ಕೃತಯುಗೇ ತಾತ ಪರ್ವತಾಃ ಪಕ್ಷಿಣೋಽಭವನ್ ।
ತೇ ಹಿ ಜಗ್ಮುರ್ದಿಶಃ ಸರ್ವಾ ಗರುಡಾನಿಲವೇಗಿನಃ ॥ ೧೨೨॥

ತತಸ್ತೇಷು ಪ್ರಯಾತೇಷು ದೇವಸಂಘಾಃ ಸಹರ್ಷಿಭಿಃ ।
ಭೂತಾನಿ ಚ ಭಯಂ ಜಗ್ಮುಸ್ತೇಷಾಂ ಪತನಶಂಕಯಾ ॥ ೧೨೩॥

ತತಃ ಕ್ರುದ್ಧಃ ಸಹಸ್ರಾಕ್ಷಃ ಪರ್ವತಾನಾಂ ಶತಕ್ರತುಃ ।
ಪಕ್ಷಾಂಶ್ಚಿಚ್ಛೇದ ವಜ್ರೇಣ ತತ್ರ ತತ್ರ ಸಹಸ್ರಶಃ ॥ ೧೨೪॥

ಸ ಮಾಮುಪಗತಃ ಕ್ರುದ್ಧೋ ವಜ್ರಮುದ್ಯಮ್ಯ ದೇವರಾಟ್ ।
ತತೋಽಹಂ ಸಹಸಾ ಕ್ಷಿಪ್ತಃ ಶ್ವಸನೇನ ಮಹಾತ್ಮನಾ ॥ ೧೨೫॥

ಅಸ್ಮಿನ್ ಲವಣತೋಯೇ ಚ ಪ್ರಕ್ಷಿಪ್ತಃ ಪ್ಲವಗೋತ್ತಮ ।
ಗುಪ್ತಪಕ್ಷಸಮಗ್ರಶ್ಚ ತವ ಪಿತ್ರಾಭಿರಕ್ಷಿತಃ ॥ ೧೨೬॥

ತತೋಽಹಂ ಮಾನಯಾಮಿ ತ್ವಾಂ ಮಾನ್ಯೋ ಹಿ ಮಮ ಮಾರುತಃ ।
ತ್ವಯಾ ಮೇ ಹ್ಯೇಷ ಸಂಬಂಧಃ ಕಪಿಮುಖ್ಯ ಮಹಾಗುಣಃ ॥ ೧೨೭॥

ಅಸ್ಮಿನ್ನೇವಂ ಗತೇ ಕಾರ್ಯೇ ಸಾಗರಸ್ಯ ಮಮೈವ ಚ ।
ಪ್ರೀತಿಂ ಪ್ರೀತಮನಾಃ ಕರ್ತುಂ ತ್ವಮರ್ಹಸಿ ಮಹಾಕಪೇ ॥ ೧೨೮॥

ಶ್ರಮಂ ಮೋಕ್ಷಯ ಪೂಜಾಂ ಚ ಗೃಹಾಣ ಕಪಿಸತ್ತಮ ।
ಪ್ರೀತಿಂ ಚ ಬಹು ಮನ್ಯಸ್ವ ಪ್ರೀತೋಽಸ್ಮಿ ತವ ದರ್ಶನಾತ್ ॥ ೧೨೯॥

ಏವಮುಕ್ತಃ ಕಪಿಶ್ರೇಷ್ಠಸ್ತಂ ನಗೋತ್ತಮಮಬ್ರವೀತ್ ।
ಪ್ರೀತೋಽಸಿ ಕೃತಮಾತಿಥ್ಯಂ ಮನ್ಯುರೇಷೋಽಪನೀಯತಾಮ್ ॥

ತ್ವರತೇ ಕಾರ್ಯಕಾಲೋ ಮೇ ಹ್ಯಹಶ್ಚ ವ್ಯತಿವರ್ತತೇ ।
ಪ್ರತಿಜ್ಞಾ ಚ ಮಯಾ ದತ್ತಾನ ಸ್ಥಾತವ್ಯಮಿಹಾಂತರೇ ॥ ೧೩೧॥

ನನಗೆ ಪೂಜನೀಯನಾಗಿರುವೆ. ಇದರ ಕಾರಣವನ್ನು ಹೇಳುತ್ತೇನೆ, ಆಲಿಸು. ॥ ೧೨೧॥

ಓ ಪೂಜ್ಯನೇ! ಹಿಂದೆ ಕೃತಯುಗದಲ್ಲಿ ಪರ್ವತಗಳಿಗೆ ರೆಕ್ಕೆಗಳಿದ್ದವು. ಅವು ಗರುಡ ಪಕ್ಷಿಯಂತೆ ವೇಗಶಾಲಿಗಳಾಗಿ ಎಲ್ಲ ದಿಕ್ಕುಗಳಿಗೂ ಹಾರಿಕೊಂಡು ಹೋಗುತ್ತಿದ್ದುವು. ॥ ೧೨೨॥ ಹಾಗೆ ಸ್ವೆಚ್ಛೆಯಿಂದ ಹಾರಿಕೊಂಡು ಹೋಗುತ್ತಿರುವಾಗ ಎಂದಾದರು ಇವು ನಮ್ಮ ಮೇಲೆ ಬೀಳಬಹುದೆಂಬ ಸಂದೇಹದಿಂದ ದೇವತೆಗಳೂ, ಋಷಿಗಳೂ, ಸಕಲ ಪ್ರಾಣಿಗಳೂ ಭಯಪೀಡಿತರಾದರು. ॥ ೧೨೩॥ ಪರ್ವತಗಳ ಈ ಹಾರಾಟವನ್ನು ಕಂಡ ಇಂದ್ರನು ಕ್ರುದ್ಧನಾದನು. ಅವುಗಳ ರೆಕ್ಕೆಗಳನ್ನು ವಜ್ರಾಯುಧದಿಂದ ಅವುಗಳಿದ್ದಲ್ಲೇ ಸಾವಿರಾರು ಸಂಖ್ಯೆಯಲ್ಲಿ ಕತ್ತರಿಸಿದನು. ॥ ೧೨೪॥ ಕುದ್ಧನಾದ ದೇವೇಂದ್ರನು ವಜ್ರಾಯುಧವನ್ನೇತ್ತಿಕೊಂಡು ನನ್ನ ರೆಕ್ಕೆಗಳನ್ನು ಕತ್ತರಿಸಲು ಬಳಿಗೆ ಬಂದನು. ಆ ಸಮಯಕ್ಕೆ ಸರಿಯಾಗಿ ಮಹಾತ್ಮನಾದ ನಿನ್ನ ತಂದೆ ವಾಯುದೇವರು ನನ್ನನ್ನು ಹಾರಿಸಿಕೊಂಡು ಹೋಗಿ ಸಮುದ್ರದಲ್ಲಿ ಇರಿಸಿದನು. ॥ ೧೨೫॥ ಓ ವಾನರೋತ್ತಮಾ! ನಿನ್ನ ತಂದೆಯಾದ ವಾಯುದೇವರು ನನ್ನನ್ನು ಸಮುದ್ರದಲ್ಲಿರಿಸಿ, ನನ್ನನ್ನ ಮಾತ್ರವಲ್ಲದೆ, ನನ್ನ ಸಮಗ್ರವಾದ ರೆಕ್ಕೆಗಳನ್ನು ಸಂರಕ್ಷಿಸಿದನು. ಅವನಿಂದಾಗಿ ನಾನು ಈ ಲವಣಸಮುದ್ರದಲ್ಲಿ ಭದ್ರವಾಗಿದ್ದೇನೆ. ॥ ೧೨೬॥ ಓ ಕಪಿಮುಖ್ಯನಾದ ಮಾರುತಿಯೇ! ನಿನ್ನೊಡನೆ ನನಗೆ ನಿನ್ನ ತಂದೆಯ ಉಪಕಾರರೂಪವಾದ ಮಹಾಗುಣಯುಕ್ತವಾದ ಈ ಸಂಬಂಧವಿದೆ. ಆದರಿಂದಲೇ ನಾನು ನಿನ್ನನ್ನು ಸನ್ಮಾನಿಸುತ್ತಿದ್ದೇನೆ. ನಿನ್ನ ತಂದೆಯಂತೆ ನೀನೂ ನನಗೆ ಮಾನ್ಯನಾಗಿರುವೆ. ಓ ಮಹಾಮತಿಯಾದ ಕಪೀಶ್ವರಾ! ಇಂತಹ ಸುವರ್ಣಾವಕಾಶ ದಿಂದ ನೀವು ಸಂತೋಷಮನದಿಂದ ಆತಿಥ್ಯವನ್ನು ಸ್ವೀಕರಿಸಿ ನನಗೂ, ಸಮುದ್ರನಿಗೂ ಆನಂದಗೊಳಿಸು. ॥ ೧೨೭-೧೨೮॥ ಓ ಕಪಿಸತ್ತಮಾ! ನಿನ್ನ ದರ್ಶನದಿಂದಲೇ ನಾನು ಪರಮಪ್ರೀತನಾಗಿದ್ದೇನೆ. ಇಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ಶ್ರಮವನ್ನು ಪರಿಹರಿಸಿಕೊ; ನಮ್ಮ ಸತ್ಕಾರವನ್ನು ಸ್ವೀಕರಿಸು. ನಿನ್ನ ಮೇಲೆ ನನಗುಂಟಾಗಿರುವ ವಿಶ್ವಾಸವನ್ನು ಪುರಸ್ಕರಿಸು.'' ॥ ೧೨೯॥

ಹೀಗೆ ಮೈನಾಕನು ವಿನೀತನಾಗಿ ಹೇಳಲು ಕಪಿಶ್ರೇಷ್ಠನಾದ ಹನುಮಂತನು ಯಥೋಚಿತವಾಗಿ ಹೀಗೆ ನುಡಿದನು – ''ಎಲೈ ಮೈನಾಕನೇ! ನಿನ್ನ ಮಾತುಗಳಿಂದಲೇ ನಾನು ಸುಪ್ರಿತನಾಗಿದ್ದೇನೆ. ನಿನ್ನ ಈ ಸವಿನುಡಿಗಳಿಂದ ನೀನು ಆತಿಥ್ಯವನ್ನು ಮಾಡಿದಂತೆ ಆಗಿದೆ. 'ಇಷ್ಟು ಪ್ರಾರ್ಥಿಸಿಕೊಂಡರೂ ಆತಿಥ್ಯವನ್ನು ಸ್ವೀಕರಿಸಲಿಲ್ಲವಲ್ಲ' ಎಂಬ ಬೇಸರವನ್ನು ಬಿಟ್ಟುಬಿಡು. ಅನ್ಯಥಾ ಭಾವಿಸಬೇಡ. ॥ ೧೩೦॥ ಕಾರ್ಯದ ಸಮಯವು ನನ್ನನ್ನು ಆತುರಗೊಳಿಸುತ್ತದೆ. ಹಗಲು ಕಳೆದು ಹೋಗುತ್ತಿದೆ. ಮಾರ್ಗ ಮಧ್ಯದಲ್ಲಿ ಎಲ್ಲಿಯೂ ನಿಲ್ಲುವುದಿಲ್ಲ' ಎಂದು ಮಿತ್ರರ ಮುಂದೆ ಪ್ರತಿಜ್ಞೆ ಮಾಡಿರುವೆನು.'' ॥ ೧೩೧॥ ಕಪಿಶ್ರೇಷ್ಠನಾದ,

ಇತ್ಯುಕ್ತ್ವಾ ಪಾಣಿನಾ ಶೈಲಮಾಲಭ್ಯ ಹರಿಪುಂಗವಃ ।
ಜಗಾಮಾಕಾಶಮಾವಿಶ್ಯ ವೀರ್ಯವಾನ್ ಪ್ರಹಸನ್ನಿವ ॥ ೧೩.೨॥

ಸ ಪರ್ವತಸಮುದ್ರಾಭ್ಯಾಂ ಬಹುಮಾನಾದವೇಕ್ಷಿತಃ ।
ಪೂಜಿತಶ್ಚೋಪಹನ್ಮಾಭಿರಾಶೀರ್ಭಿರನಿಲಾತ್ಮಜಃ ॥ ೧೩.೩॥

ಆಕ್ಷೇಪ್ತಾರಂ ದೂರಮುತ್ಪತ್ಯ ಹಿತ್ವಾ ಶೈಲಮಹಾರ್ಣವೌ ।
ಪಿತುಃ ಪಂಥಾನಮಾಸ್ಥಾಯ ಜಗಾಮ ವಿಮಲೇಽಂಬರೇ ॥ ೧೩.೪॥

ತತಶ್ಚೋರ್ಧ್ವಗತಿಂ ಪ್ರಾಪ್ಯ ಗಿರಿಂ ತಮವಲೋಕಯನ್ ।
ವಾಯುಸೂನುರ್ನಿರಾಲಂಬೇ ಜಗಾಮ ವಿಮಲೇಽಂಬರೇ ॥ ೧೩.೫॥

ತದ್ವಿತೀಯಂ ಹನುಮತೋ ದೃಷ್ಟ್ವಾ ಕರ್ಮ ಸುದುಷ್ಕರಮ್ ।
ಪ್ರಶಶಂಸುಃ ಸುರಾಃ ಸರ್ವೇ ಸಿದ್ಧಾಶ್ಚ ಪರಮರ್ಷಯಃ ॥ ೧೩.೬॥

ದೇವತಾಶ್ಚಾಭ್ಯವನ್ ಹೃಷ್ಟಾಸ್ತತ್ರಸ್ಥಾಸ್ತಸ್ಯ ಕರ್ಮಣಾ ।
ಕಾಂಚನಸ್ಯ ಸುನಾಭಸ್ಯ ಸಹಸ್ರಾಕ್ಷಶ್ಚ ವಾಸವಃ ॥ ೧೩.೭॥

ಉವಾಚ ವಚನಂ ಶ್ರೀಮಾನ್ ಪರಿತೋಷಾತ್ ಸಗದ್ಗದಮ್ ।
ಸುನಾಭಂ ಪರ್ವತಶ್ರೇಷ್ಠಂ ಸ್ವಯಮೇವ ಶಚೀಪತಿಃ ॥ ೧೩.೮॥

ಹಿರಣ್ಯನಾಭ ಶೈಲೇಂದ್ರ ಪರಿತುಷ್ಟೋಽಸ್ಮಿ ತೇ ಭೃಶಮ್ ।
ಅಭಯಂ ತೇ ಪ್ರಯಚ್ಛಾಮಿ ತಿಷ್ಠ ಸೌಮ್ಯ ಯಥಾಸುಖಮ್ ॥ ೧೩.೯॥

ಸಾಹ್ಯಂ ಕೃತಂ ತ್ವಯಾ ಸೌಮ್ಯ ವಿಶ್ರಾಂತಸ್ಯ ಹನೂಮತಃ ।
ಕ್ರಮತೋ ಯೋಜನಶತಂ ನಿರ್ಭಯಸ್ಯ ಭಯೇ ಸತಿ ॥ ೧೪.೦॥

ವೀರ್ಯವಂತನಾದ ಹನುಮಂತನು ಮೈನಾಕನಿಗೆ ಹೀಗೆ ಸಮಾಧಾನ ಹೇಳಿ, ಅವನ ಮೈ ದಡವಿ ಅವನ ಆತಿಥ್ಯವನ್ನು ಸ್ವೀಕರಿಸಿ ನಗು-ನಗುತ್ತಲೇ ಆಕಾಶಮಾರ್ಗವಾಗಿ ಮುಂದಕ್ಕೆ ಹೊರಟನು. ॥ ೧೩.೨॥

ಆಗ ಸಮುದ್ರರಾಜನೂ, ಮೈನಾಕನೂ ವಾಯುಸೂನುವನ್ನು ಮಾರುತಿಯನ್ನು ಹೆಚ್ಚಿನ ಆದರ ಅಭಿಮಾನದಿಂದ ವೀಕ್ಷಿಸುತ್ತಿದ್ದರು. ಭಕ್ತಿತತ್ಪರರಾಗಿ ಪೂಜಿಸಿದರು. ರಾಮಕಾರ್ಯ ಸಿದ್ಧಿಯಾಗಿ ಕಾಲೋಚಿತವಾದ ಆಶೀರ್ವಾದಗಳಿಂದ ಕಾರ್ಯಸಿದ್ಧಿಯಾಗುವಂತೆ ಹರಸಿದರು. ॥ ೧೩.೩॥

ಬಳಿಕ ಮಾರುತಿಯು ಪರ್ವತ-ಸಮುದ್ರ ಇಬ್ಬರಿಂದಲೂ ಬೀಳ್ಕೊಂಡು, ಮೇಲ್ಮುಖವಾಗಿ ಬಹಳ ಎತ್ತರಕ್ಕೆ ಹಾರಿ ವಾಯುಮಾರ್ಗವನ್ನು ಸೇರಿ ಆಕಾಶದಲ್ಲಿ ಪ್ರಯಾಣವನ್ನು ಮುಂದರಿಸಿದನು. ॥ ೧೩.೪॥ ಮುಂದೆ-ಮುಂದೆ ಇನ್ನು ಎತ್ತರಕ್ಕೆ ಹಾರಿ ಮೈನಾಕಪರ್ವತವನ್ನೆ ವೀಕ್ಷಿಸುತ್ತಾ ಯಾವ ಆವಲಂಬನೆಯೂ ಇಲ್ಲದೆ ನಿರ್ಮಲಾಕಾಶದಲ್ಲಿ ಹಾರಿಕೊಂಡು ಹೋಗುತ್ತಿದ್ದನು. ॥ ೧೩.೫॥

ಹನುಮಂತನ ಆತಿದುಷ್ಕರವಾದ ಎರಡನೆಯ ಆ ಕಾರ್ಯವನ್ನು ನೋಡಿ ದೇವತೆಗಳೂ, ಮಹರ್ಷಿಗಳೂ ಮತ್ತು ಸಿದ್ಧರೂ ಮಾರುತಿಯನ್ನು ಬಹಳವಾಗಿ ಶ್ಲಾಘಿಸಿದರು. (ಮೊದಲನೆಯ ಕರ್ಮ ಪರ್ವತದ ತುದಿಯಿಂದ ಆಗಸಕ್ಕೆ ಹಾರಿದುದು. ಎರಡನೆಯದು ಮೈನಾಕನನ್ನು ಜಯಿಸಿದುದು. ಆಗಸದಲ್ಲೇ ನಿಂತು ಮೈನಾಕನನ್ನು ಮುಟ್ಟಿ, ಪರ್ವತದ ಮೇಲೆ ಇಳಿಯದೆ ಪುನಃ ತನ್ನ ವೇಗವನ್ನು ಹೆಚ್ಚಿಸಿಕೊಂಡಿದ್ದು. ಇದು ಪಕ್ಷಿಗಳಿಗೂ ಸಾಧ್ಯವಾಗದ ಕಾರ್ಯವನ್ನು ಪಕ್ಷಗಳಿಲ್ಲದವನಾದ ಹನುಮಂತನು ಮಾಡಿದುದು ನಿಜವಾಗಿ ಮಹತ್ಕಾರ್ಯವೇ ಆಗಿದೆ.) ॥ ೧೩.೬॥

ಸುವರ್ಣನಾಭನಾದ ಮೈನಾಕನು ಸಮುದ್ರದಿಂದ ಮೇಲೆದ್ದು ಹನುಮಂತನನ್ನು ಸತ್ಕರಿಸಲು ಆಜ್ಞಾನಿಸಿದ್ದಕ್ಕಾಗಿ ಆ ಪ್ರದೇಶದಲ್ಲಿದ್ದ ದೇವತೆಗಳೂ ಹಾಗೂ ಸಾವಿರ ಕಣ್ಣುಗಳುಳ್ಳ ದೇವೇಂದ್ರನೂ ಪರಮ ಸಂತೋಷಗೊಂಡರು. ಧೀಮಂತನಾದ ಶಚೀಪತಿಯು ಅತಿಸಂತೋಷದಿಂದ ತಾನಾಗಿ ಗದ್ಗದ ದ್ವನಿಯಿಂದ ಕಾಂಚನ ಶಿಖರವುಳ್ಳ ಮೈನಾಕನಿಗೆ ಹೀಗೆ ಹೇಳಿದನು – ॥ ೧೩.೭-೧೩.೮॥

''ಹಿರಣ್ಯನಾಭನೇ! ಶೈಲಶ್ರೇಷ್ಠನೇ! ನಿನ್ನ ಈ ಕಾರ್ಯದಿಂದ ನಾನು ಹೆಚ್ಚು ಪ್ರೀತನಾಗಿದ್ದೇನೆ. ನಿನಗೆ ಅಭಯವನ್ನು ಇತ್ತಿರುವೆನು. ನನ್ನಿಂದ ನಿನಗೆ ಮುಂದೆ ಯಾವ ಭಯವೂ ಇರದು. ಈ ಸ್ಥಾನದಲ್ಲೇ ನೀನು ಸುಖವಾಗಿರು. ॥ ೧೩.೯॥ ಭಯಪಡುವ ಸಂದರ್ಭವಿದ್ದರೂ ಭಯವಿಲ್ಲದೆ ನೂರು ಯೋಜನಗಳನ್ನು ಹಾರಲು ಹೊರಟಿರುವ ಭಯರಹಿತನಾದ, ಮಹಾಪರಾಕ್ರಮಿಯಾದ ಹನುಮಂತನಿಗೆ ನೀನು ಸಹಾಯವನ್ನೆಗಲು ಮುಂದೆ ಬಂದಿರುವೆ. ದಶರಥ ನಂದನನಾದ ಶ್ರೀರಾಮನ ಹಿತಕ್ಕಾಗಿಯೇ ಈ ಮಾರುತಿಯು ಲಂಕೆಗೆ ಹೋಗುತ್ತಿದ್ದಾನೆ.

ರಾಮಸ್ಯೈಷ ಹಿದೂತ್ಯೇನ ಯಾತಿ ದಾಶರಥೇರ್ಹರಿಃ ।
ಸತ್ಕ್ರಿಯಾಂ ಕುರ್ವತಾ ತಸ್ಯ ತೋಷಿತೋಽಸ್ಮಿ ಭೃಶಂ ತ್ವಯಾ ॥ ೧೪೧॥

ತತಃ ಪ್ರಹರ್ಷಮಗಮದ್ವಿಪುಲಂ ಪರ್ವತೋತ್ತಮಃ ।
ದೇವತಾನಾಂ ಪತಿಂ ದೃಷ್ಟ್ವಾ ಪರಿತುಷ್ಟಂ ಶತಕ್ರತುಮ್ ॥ ೧೪೨॥

ಸ ವೈ ದತ್ತವರಃ ಶೈಲೋ ಬಭೂವಾವಸ್ಥಿತಸ್ತದಾ ।
ಹನೂಮಾಂಶ್ಚ ಮುಹೂರ್ತೇನ ವ್ಯತಿಚಕ್ರಾಮ ಸಾಗರಮ್ ॥ ೧೪೩॥

ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಅಬ್ರುವನ್ ಸೂರ್ಯಸಂಕಾಶಾಂ ಸುರಸಾಂ ನಾಗಮಾತರಮ್ ॥ ೧೪೪॥

ಅಯಂ ವಾತಾತ್ಮಜಃ ಶ್ರೀಮಾನ್ ಪ್ಲವತೇ ಸಾಗರೋಪರಿ ।
ಹನೂಮಾನ್ನಾಮ ತಸ್ಯ ತ್ವಂ ಮುಹೂರ್ತಂ ವಿಘ್ನಮಾಚರ ॥ ೧೪೫॥

ರಾಕ್ಷಸಂ ರೂಪಮಾಸ್ಥಾಯ ಸುಘೋರಂ ಪರ್ವತೋಪಮಮ್ ।
ದಂಷ್ಟ್ರಾಕರಾಲಂ ಪಿಂಗಾಕ್ಷಂ ವಕ್ತ್ರಂ ಕೃತ್ವಾ ನಭಃಸ್ಪೃಶಮ್ ॥ ೧೪೬॥

ಬಲಮಿಚ್ಛಾಮಹೇ ಜ್ಞಾತುಂ ಭೂಯಶ್ಚಾಸ್ಯ ಪರಾಕ್ರಮಮ್ ।
ತ್ವಾಂ ವಿಜೇಷ್ಯತ್ಯುಪಾಯೇನ ವಿಷಾದಂ ವಾ ಗಮಿಷ್ಯತಿ ॥ ೧೪೭॥

ಏವಮುಕ್ತಾ ತು ಸಾ ದೇವಿ ದೈವತೈರಭಿಸತ್ಕೃತಾ ।
ಸಮುದ್ರಮಧ್ಯೇ ಸುರಸಾ ಬಿಭ್ರತೀ ರಾಕ್ಷಸಂ ವಪುಃ ॥ ೧೪೮॥

ವಿಕೃತಂ ಚ ವಿರೂಪಂ ಚ ಸರ್ವಸ್ಯ ಚ ಭಯಾವಹಮ್ ।
ಪ್ಲವಮಾನಂ ಹನೂಮಂತಮಾವೃತ್ಯೇದಮುವಾಚ ಹ ॥ ೧೪೯॥

ಮಮ ಭಕ್ಷ್ಯಃ ಪ್ರದಿಷ್ಟಸ್ತ್ವಮೀಶ್ವರೈರ್ವಾನರರ್ಷಭ ।
ಅತಃ ತ್ವಾಂ ಭಕ್ಷಯಿಷ್ಯಾಮಿ ಪ್ರವಿಶೇದಂ ಮಮಾನನಮ್ ॥ ೧೫೦॥

ಏವಮುಕ್ತಃ ಸುರಸಯಾ ಪ್ರಾಂಜಲಿರ್ವಾನರರ್ಷಭಃ ।
ಪ್ರಹೃಷ್ಟವದನಃ ಶ್ರೀಮಾನ್ ಇದಂ ವಚನಮಬ್ರವೀತ್ ॥ ೧೫೧॥

ರಾಮೋ ದಾಶರಥಿಃ ಶ್ರೀಮಾನ್ ಪ್ರವಿಷ್ಟೋ ದಂಡಕಾವನಮ್ ।
ಲಕ್ಷ್ಮಣೇನ ಸಹ ಭ್ರಾತ್ರಾ ವೈದೇಹ್ಯಾ ಚಾಪಿ ಭಾರ್ಯಯಾ ॥ ೧೫೨॥

ಅಂತಹವನನ್ನು ನೀನು ಸತ್ಕರಿಸಲು ಮುಂದೆ ಬಂದುದಕ್ಕಾಗಿ ನಾನು ಪರಮ ಸಂತುಷ್ಟನಾಗಿರು ವೆನು.'' ॥ ೧೪೦-೧೪೧॥ ಸಮುದ್ರವಾಸಕ್ಕೆ ಕಾರಣನಾದ ದೇವತೆಗಳ ಒಡೆಯನಾದ ದೇವೇಂದ್ರನು ತನ್ನ ವಿಷಯದಲ್ಲಿ ಪರಿತುಷ್ಟನಾದನೆಂದು ತಿಳಿದು ಮೈನಾಕನು ಪರಮಹೃಷ್ಟನಾದನು. ದೇವೇಂದ್ರನಿಂದ ಅಭಯವನ್ನು ಪಡೆದುಕೊಂಡು ಮೈನಾಕನು ಯಾವುದೇ ಭಯವಿಲ್ಲದೆ ತಾನು ಹಿಂದಿದ್ದ ಸ್ಥಳದಲ್ಲಿಯೇ ಸುಸ್ಥಿರವಾಗಿ ನಿಂತನು. ಇತ್ತ ಹನುಮಂತನು ಆ ಸಾಗರ ಪ್ರದೇಶವನ್ನು ಒಂದು ಕ್ಷಣ ಕಾಲದಲ್ಲಿ ಅತಿಕ್ರಮಿಸಿ ಮುಂದೆ ಸಾಗಿದನು. ॥ ೧೪೨-೧೪೩॥

ಬಳಿಕ ಗಂಧರ್ವರೂ, ದೇವತೆಗಳೂ, ಸಿದ್ಧರೂ, ಮಹರ್ಷಿಗಳೂ, ಸೂರ್ಯಸದೃಶಳಾದ ನಾಗಮಾತೆಯಾದ ಸುರಸೆಯನ್ನು ಕಂಡು ಹೇಳಿದರು – ''ವಾಯುನಂದನನೂ ತೇಜಸ್ವಿಯೂ ಆದ ಕಪಿಶ್ರೇಷ್ಠ ಹನುಮಂತನು ಸಮುದ್ರದ ಮೇಲೆ ಹಾರಿಹೋಗುತ್ತಿದ್ದಾನೆ. ಅವನಿಗೆ ನೀನು ಕ್ಷಣಕಾಲ ವಿಘ್ನವನ್ನುಂಟುಮಾಡು. ಪರ್ವತೋಪಮವಾದ ಘೋರವಾದ ರಾಕ್ಷಸಿಯ ರೂಪವನ್ನು ಧರಿಸಿ, ಕೊರೆದಾಡೆಗಳಿಂದ ಭಯಂಕರವಾಗಿ ಕಾಣುವ, ಕಂದು-ಹಳದಿ ಬಣ್ಣದ ಕಣ್ಣುಗಳಿಂದ ಕೂಡಿರುವ, ಆಕಾಶವನ್ನು ಮುಟ್ಟುವ ಮುಖದಿಂದ ಕೂಡಿ ಅವನ ಗಮನಕ್ಕೆ ವಿಘ್ನವನ್ನುಂಟುಮಾಡು. ॥ ೧೪೪-೧೪೬॥ ಈ ಕಪೀಶ್ವರನ ಬಲವನ್ನು ಪರಾಕ್ರಮವನ್ನು ತಿಳಿಯ ಬಯಸಿದ್ದೇವೆ. ಇವನು ಉಪಾಯಾಂತರಗಳಿಂದ ನಿನ್ನನ್ನು ಜಯಿಸುತ್ತಾನೋ ಅಥವಾ ವಿಷಾದ ಪಡುತ್ತಾನೋ ನೋಡೋಣ.'' ॥ ೧೪೭॥ ಈ ವಿಧವಾಗಿ ದೇವತೆಗಳಿಂದ ಸತ್ಕೃತಳಾದ ಸುರಸೆಯು ಅವರು ಹೇಳಿದಂತೆ, ಸಮುದ್ರ ಮಧ್ಯದಲ್ಲಿ ವಿಕೃತವಾದ ರಾಕ್ಷಸಿಯ ರೂಪವನ್ನಾಂತು ನಿಂತುಕೊಂಡಳು. ॥ ೧೪೮॥

ಎಲ್ಲರಿಗೂ ಭಯವನ್ನುಂಟುಮಾಡುವ ವಿಕಾರವಾದ, ಘೋರ ರಾಕ್ಷಸಿಯಾಗಿ ಸುರಸಾದೇವಿಯು ಆಕಾಶಮಾರ್ಗವಾಗಿ ಹಾರಿಹೋಗುತ್ತಿದ್ದ ಹನುಮಂತನ ಮಾರ್ಗವನ್ನು ಅಡ್ಡಗಟ್ಟಿ ಇಂತೆಂದಳು – ''ವಾನರ ಶ್ರೇಷ್ಠನೇ! ದೇವತೆಗಳು ನಿನ್ನನ್ನು ನನಗೆ ಆಹಾರವನ್ನಾಗಿ ಕಳಿಸಿಕೊಟ್ಟಿರುತ್ತಾರೆ. ನಾನು ನಿನ್ನನ್ನು ಭಕ್ಷಿಸುವೆನು. ಈ ನನ್ನ ಮುಖದಲ್ಲಿ ಈಗಲೇ ಪ್ರವೇಶಿಸು. ಬ್ರಹ್ಮನೇ ಹಿಂದೆ ನನಗೆ ಈ ವರವನ್ನು ದಯಪಾಲಿಸಿರುವನು.'' ॥ ೧೪೯-೧೫೦॥ ಹೀಗೆ ಹೇಳಿ ಆಹಾರಕ್ಕಾಗಿ ಅವಸರಿಸುತ್ತಿದ್ದ ಸುರಸೆಯು ಬಾಯನ್ನು ಅಗಲವಾಗಿ ತೆರೆದುಕೊಂಡು ಹನುಮಂತನ ಮುಂಭಾಗದಲ್ಲಿ ನಿಂತಳು. ಆಗ ದಿವ್ಯ ಶೋಭೆಯಿಂದ ಕಂಗೊಳಿಸುವ ಕಪಿಶ್ರೇಷ್ಠ ಹನುಮಂತನು ಪ್ರಸನ್ನಮುಖಭಾವದಿಂದ ಕೈಜೋಡಿಸಿಕೊಂಡು ಆಕೆಗೆ ಹೇಳಿದನು – ॥ ೧೫೧॥

'ತಾಯೇ! ದಶರಥಮಹಾರಾಜನ ಕುಮಾರನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣ ಹಾಗೂ ಭಾರ್ಯೆಯಾದ ಸೀತಾದೇವಿಯೊಂದಿಗೆ ದಂಡಕಾರಣ್ಯಕ್ಕೆ ಬಂದನು. ॥ ೧೫೨॥ ಶ್ರೀರಾಮನ ಭಾರ್ಯೆಯಾದ, ಯಶಸ್ವಿನಿಯಾದ ಸೀತಾದೇವಿ

ಅನ್ಯಕಾರ್ಯವಿಷಕ್ತಸ್ಯ ಬದ್ಧವೈರಸ್ಯ ರಾಕ್ಷಸೈಃ ।
ತಸ್ಯ ಸೀತಾ ಹೃತಾ ಭಾರ್ಯಾ ರಾವಣೇನ ಯಶಸ್ವಿನೀ ॥ ೧೫೩॥

ತಸ್ಯಾಃ ಸಕಾಶಂ ದೂತೋಽಹಂ ಗಮಿಷ್ಯೇ ರಾಮಶಾಸನಾತ್ ।
ಕರ್ತುಮರ್ಹಸಿ ರಾಮಸ್ಯ ಸಾಹ್ಯಂ ವಿಷಯವಾಸಿನೀ ॥ ೧೫೪॥

ಅಥವಾ ಮೈಥಿಲೀಂ ದೃಷ್ಟ್ವಾರಾಮಂ ಚಾಕ್ಲಿಷ್ಟ ಕಾರಿಣಮ್ ।
ಆಗಮಿಷ್ಯಾಮಿ ತೇ ವಕ್ತ್ರಂ ಸತ್ಯಂ ಪ್ರತಿಶೃಣೋಮಿ ತೇ ॥ ೧೫೫॥

ಏವಮುಕ್ತಾ ಹನುಮತಾ ಸುರಸಾ ಕಾಮರೂಪಿಣೀ ।
ಅಬ್ರವೀನ್ನಾತಿವರ್ತೇನ್ಮಾಂ ಕಶ್ಚಿದೇಷ ವರೋ ಮಮ ॥ ೧೫೬॥

ತಂ ಪ್ರಯಾಂತಂ ಸಮುದ್ವೀಕ್ಷ್ಯ ಸುರಸಾ ವಾಕ್ಯಮಬ್ರವೀತ್ ।
ಬಲಂ ಜಿಜ್ಞಾಸಮಾನಾ ವೈ ನಾಗಮಾತಾ ಹನೂಮತಃ ॥ ೧೫೭॥

ಪ್ರವಿಶ್ಯ ವದನಂ ಮೇಽದ್ಯ ಗಂತವ್ಯಂ ವಾನರೋತ್ತಮ ।
ವರ ಏಷ ಪುರಾ ದತ್ತೋ ಮಮ ಧಾತ್ರೇತಿ ಸತ್ವರಾ ॥ ೧೫೮॥

ವ್ಯಾದಾಯ ವಿಪುಲಂ ವಕ್ತ್ರಂ ಸ್ಥಿತಾ ತಾ ಮಾರುತೇಃ ಪುರಃ ।
ಏವಮುಕ್ತಃ ಸುರಸಯಾ ಕ್ರುದ್ಧೋ ವಾನರಪುಂಗವಃ ॥ ೧೫೯॥

ಅಬ್ರವೀತ್ ಕುರು ವೈ ವಕ್ತ್ರಂ ಯೇನ ಮಾಂ ವಿಷಹಿಷ್ಯಸೇ ।
ಇತ್ಯುಕ್ತ್ವಾ ಸುರಸಾಂ ಕ್ರುದ್ಧೋ ದಶಯೋಜನಮಾಯತಃ ॥

ದಶಯೋಜನವಿಸ್ತಾರೋ ಬಭೂವ ಹನುಮಾಂಸ್ತದಾ ।
ತಂ ದೃಷ್ಟ್ವಾ ಮೇಘಸಂಕಾಶಂ ದಶಯೋಜನಮಾಯತಮ್ ॥

ಹನೂಮಾಂಸ್ತುತತಃ ಕ್ರುದ್ಧಃ ತ್ರಿಂಶದ್ಯೋಜನಮಾಯತಃ ।
ಚಕಾರ ಸುರಸಾ ವಕ್ತ್ರಂ ಚತ್ವಾರಿಂಶತ್ತಥಾಯತಮ್ ॥ ೧೬೨॥

ಬಭೂವ ಹನುಮಾನ್ವೀರಃ ಪಂಚಾಶದ್ಯೋಜನೋಚ್ಛ್ರಿತಃ ।
ಚಕಾರ ಸುರಸಾ ವಕ್ತ್ರಂ ಷಷ್ಟಿ ಯೋಜನಮಾಯತಮ್ ॥ ೧೬೩॥

ಯನ್ನು ರಾವಣನೆಂಬ ರಾಕ್ಷಸನು ಅಪಹರಿಸಿಕೊಂಡು ಹೋಗಿದ್ದಾನೆ. ॥ ೧೫೩॥ ನಾನು ಶ್ರೀರಾಮನ ದೂತನು. ನನ್ನ ಸ್ವಾಮಿಯಾದ ಶ್ರೀರಾಮನ ಆಜ್ಞಾನುಸಾರವಾಗಿ ಸೀತಾದೇವಿಯ ಬಳಿಗೆ ಹೋಗುತ್ತಿದ್ದೇನೆ. ಧರ್ಮಾತ್ಮನಾದ ಶ್ರೀರಾಮನ ಅಳ್ವಿಕೆಯಲ್ಲಿ ವಾಸಿಸುತ್ತಿರುವ ನೀನು ಈ ಸಮಯದಲ್ಲಿ ಅವನ ಕಾರ್ಯಕ್ಕೆ ಸಹಕಾರವನ್ನು ನೀಡಬೇಕು. ॥ ೧೫೪॥ ಬ್ರಹ್ಮನಿತ್ತಿರುವ ವರದಂತೆ ನಾನು ನಿನಗೆ ಆಹಾರವಾಗಬೇಕನ್ನುವುದಾದರೆ, ಸೀತಾದೇವಿಯನ್ನು ನೋಡಿ, ಆಕೆಯ ಕುಲಶವಾರ್ತೆಯನ್ನು ಕಾರ್ಯ ನಿರ್ವಹಣಾದಕ್ಷನಾದ ಶ್ರೀರಾಮನಿಗೆ ತಿಳಿಸಿ, ಬಳಿಕ ನಾನು ನಿನ್ನ ಬಾಯಿಗೆ ಬೀಳುತ್ತೇನೆ. ಈ ಮಾತನ್ನು ನಾನು ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ.'' ॥ ೧೫೪-೧೫೫॥ ಹನುಮಂತನು ಹೀಗೆ ಹೇಳಲು ಕಾಮರೂಪಿಣಿಯಾದ ಸುರಸೆಯು ಪುನಃ ಇಂತೆಂದಳು –

''ವಾನರೇಶ್ವರನೇ! ನನ್ನನ್ನು ಅತಿಕ್ರಮಿಸಿ ಯಾರೂ ಹೋಗಲಾರರು. ಇಂತಹ ಅಮೋಘವಾದ ವರವನ್ನು ನಾನು ಪಡೆದಿರುವೆನು.'' ॥ ೧೫೬॥ ಹೀಗೆ ಹೇಳಿದರೂ ಲಕ್ಷ್ಯವಿಲ್ಲದೆ ಮುನ್ನಡೆಯುತ್ತಿದ್ದ ಹನುಮಂತನನ್ನು ನೋಡಿ, ಅವನ ಬಲ ಎಷ್ಟಿರಬಹುದೆಂದು ತಿಳಿಯುವ ಬಯಕೆಯಿಂದ ನಾಗಮಾತೆಯಾದ ಸುರಸೆಯು ಮರಳಿ ಹೀಗೆ ಹೇಳಿದಳು. ॥ ೧೫೭॥

ಓ ವಾನರೋತ್ತಮಾ! ನನ್ನ ಮುಖವನ್ನು ಪ್ರವೇಶಿಸಿಯೇ ನೀನು ಮುಂದೆ ಹೋಗಬೇಕು. ಹಿಂದೆ ಬ್ರಹ್ಮದೇವರು ನನಗೆ ವರ ಕೊಟ್ಟಿರುವನು. ಹೀಗೆ ಹೇಳಿ ಸುರಸೆಯು ಅವಸರದಿಂದ ತನ್ನ ಬಾಯನ್ನು ಅಗಲವಾಗಿ ತೆರೆದುಕೊಂಡು ಮಾರುತಿಯ ಸಮ್ಮುಖದಲ್ಲಿ ನಿಂತುಕೊಂಡಳು. ಅದರಿಂದ ಕ್ರುದ್ಧನಾದ ಹನುಮಂತನು ಇಂತೆಂದನು – ॥ ೧೫೮-೧೫೯॥

'ಎಲೈ ಸುರಸಾ! ಹಾಗಾದರೆ ನನ್ನ ಭಾರವನ್ನು ಸಹಿಸಲು ಶಕ್ಯವಾಗುವಂತೆ ಹಾಗೂ ನನ್ನನ್ನು ನುಂಗಲು ಸಾಧ್ಯವಾಗುವಂತೆ ನಿನ್ನ ಬಾಯನ್ನು ಅಗಲವಾಗಿ ತೆರೆದುಕೋ.'' ಒಡನೆಯೇ ಸುರಸೆಯು ತನ್ನ ಬಾಯನ್ನು ಅಗಲವಾಗಿ ತೆರೆದುಕೊಂಡಳು. ಕಪಿಶ್ರೇಷ್ಠನಾದ ಹನುಮಂತನು ಕುಪಿತನಾಗಿ ಹತ್ತುಯೋಜನಗಳಷ್ಟು ವಿಸ್ತಾರವಾಗಿ ಬೆಳೆದನು. ಮೇಘಸದೃಶನಾದ ಹನುಮಂತನು ಹತ್ತು ಯೋಜನಗಳಷ್ಟು ವಿಸ್ತಾರವಾಗಿ ಬೆಳೆದಿರುವುದನ್ನು ಕಂಡು ಸುರಸೆಯು ಇಪ್ಪತ್ತು ಯೋಜನಗಳಷ್ಟು ಅಗಲವಾಗಿ ಬಾಯಿತೆರೆದಳು. ಒಡನೆಯೇ ಹನುಮಂತನು ಮೂವತ್ತು ಯೋಜನಗಳಷ್ಟು ಬೆಳೆದನು. ಅದನ್ನು ನೋಡಿ ಸುರಸೆಯು ತನ್ನ ಮುಖವನ್ನು ನಲವತ್ತು ಯೋಜನ ವಿಸ್ತಾರವಾಗಿ ತೆರೆದುಕೊಂಡಳು. ॥ ೧೬೦-೧೬೨॥ ಆಗ ವೀರನಾದ ಹನುಮಂತನು ಐವತ್ತು ಯೋಜನಗಳಷ್ಟು ವಿಶಾಲವಾಗಿ ತನ್ನ ಶರೀರವನ್ನು ಬೆಳೆಸಿದನು. ಮರುಕ್ಷಣದಲ್ಲೇ ಸುರಸೆಯ ಬಾಯಿ ಅರವತ್ತು ಯೋಜನಗಳಷ್ಟು ವಿಸ್ತಾರವಾಯಿತು. ॥ ೧೬೩॥ ಪುನಃ ಮಾರುತಿಯು ತನ್ನ

ತಥೈವ ಹನುಮಾನ್ವೀರಃ ಸಪ್ತತೀಯೋಜನೋಚ್ಛ್ರಿತಃ ।
ಚಕಾರ ಸುರಸಾ ವಕ್ತ್ರಂ ಮಶೀತಿಯೋಜನಾಯತಮ್ ॥ ೧೬೪॥

ಹನೂಮಾನಚಲಪ್ರಖ್ಯೋ ನವತಿಯೋಜನೋಚ್ಛ್ರಿತಃ ।
ಚಕಾರ ಸುರಸಾ ವಕ್ತ್ರಂ ಶತಯೋಜನಮಾಯತಮ್ ॥ ೧೬೫॥

ತದ್ದೃಷ್ಟ್ವಾ ವ್ಯಾದಿತಂ ತ್ವಾಸ್ಯಂ ವಾಯುಪುತ್ರಃ ಸುಬುದ್ಧಿಮಾನ್ ।
ವೀರ್ಯಜಿಜ್ಞಾಸುರಸಯಾ ಸುಭೀಮಂ ನರಕೋಪಮಮ್ ॥ ೧೬೬॥

ಸ ಸಂಕ್ಷಿಪ್ಯಾತ್ಮನಃ ಕಾಯಂ ಜೀಮೂತ ಇವ ಮಾರುತಿಃ ।
ತಸ್ಮಿನ್ಮುಹೂರ್ತೇ ಹನೂಮಾನ್ಬಭೂವಾಙ್ಗುಷ್ಠ ಮಾತ್ರಕಃ॥ ೧೬೭॥

ಸೋಽಭಿಪತ್ಯಾತು ತದ್ವಕ್ತ್ರಂ ನಿಷ್ಪತ್ಯ ಚ ಮಹಾಜವಃ ।
ಅಂತರಿಕ್ಷೇ ಸ್ಥಿತಃ ಶ್ರೀಮಾನಿದಂ ವಚನಮಬ್ರವೀತ್ ॥ ೧೬೮॥

ಪ್ರವಿಷ್ಟೋಽಸ್ಮಿ ಹಿ ತೇ ವಕ್ತ್ರಂ ದಾಕ್ಷಾಯಣಿ ನಮೋಽಸ್ತು ತೇ ।
ಗಮಿಷ್ಯೇ ಯತ್ರ ವೈದೇಹೀ ಸತ್ಯಂ ಚಾಪೀದ್ದರ್ಶಿತಂ ತ್ವಯಾ ॥ ೧೬೯॥

ತಂ ದೃಷ್ಟ್ವಾ ವದನಾನ್ನಿರ್ಯಂ ಚಂದ್ರಂ ರಾಹುಮುಖಾನಿವ ।
ಅಬ್ರವೀತ್ ಸುರಸಾ ದೇವೀ ಸ್ವೇನ ರೂಪೇಣ ವಾನರಮ್ ॥ ೧೭೦॥

ಅರ್ಥಸಿದ್ಧ್ಯೈ ಹರಿಶ್ರೇಷ್ಠ ಗಚ್ಛ ಸೌಮ್ಯ ಯಥಾಸುಖಮ್ ।
ಸಮಾನಯಸ್ವ ವೈದೇಹೀಂ ರಾಘವೇಣ ಮಹಾತ್ಮನಾ ॥ ೧೭೧॥

ಇತ್ಯೇವಂ ತೃತೀಯಂ ಹನುಮತೋ ದೃಷ್ಟ್ವಾ ಕರ್ಮ ಸುದುಷ್ಕರಮ್ ।
ಸಾಧು ಸಾಧ್ವಿತಿ ಭೂತಾನಿ ಪ್ರಶಶಂಸುಸ್ತದಾ ಹರಿಮ್ ॥ ೧೭೨॥

ಸ ಸಾಗರ ಮನಾಧೃಷ್ಯಂ ಆಧೇತ್ಯು ವರುಣಾಲಯಮ್ ।
ಜಗಾಮಾಕಾಶಮಾವಿಶ್ಯ ವೇಗೇನ ಗರುಡೋಪಮಃ ॥ ೧೭೩॥

ಸೇವಿತೇ ವಾರಿಧಾರಾಭಿಃ ಪತಗೈಶ್ಚ ನಿಷೇವಿತೇ ।
ಚರಿತೇ ಕೈರಿಕಾಚಾರ್ಯೈ ರೈರಾವತನಿಷೇವಿತೇ ॥ ೧೭೪॥

ಸಿಂಹ ಕುಂಜರ ಶಾರ್ದೂಲ ಪತಗೋರಗವಾಹನೈಃ ।
ವಿಮಾನೈಃ ಸಂಪತದ್ಭಿಶ್ಚ ವಿಮಲೈಃ ಸಮಲಂಕೃತೇ ॥ ೧೭೫॥

ಶರೀರವನ್ನು ಎಪ್ಪತ್ತು ಯೋಜನಗಳಷ್ಟು ಆಗಲವಾಗಿಸಿದನು. ಸುರಸೆಯು ತನ್ನ ಮುಖವನ್ನು ಎಂಭತ್ತು ಯೋಜನಗಳಷ್ಟು ಆಗಲವಾಗಿಸಿದಳು. ॥ ೧೬೪॥ ಆಗ ಹನುಮಂತನ ಶರೀರವು ತೊಂಭತ್ತು ಯೋಜನಗಳಷ್ಟು ದೊಡ್ಡದಾಯಿತು. ಅದಕ್ಕೆ ಆನುಗುಣವಾಗಿ ಸುರಸೆಯ ಆಸ್ಯವು ನೂರು ಯೋಜನಗಳಷ್ಟು ವಿಸ್ತಾರವಾಯಿತು. ॥ ೧೬೫॥ ನೀಳವಾದ ನಾಲಿಗೆಯಿಂದ ಕೂಡಿದ್ದ, ನರಕ ಸದೃಶವಾಗಿದ್ದ, ಅತ್ಯಂತ ಭಯಂಕರವಾಗಿದ್ದ ನೂರು ಯೋಜನಗಳಷ್ಟು ಆಗಲವಾಗಿದ್ದ ಸುರಸೆಯ ಮುಖವನ್ನು ನೋಡಿ, ಬುದ್ಧಿವಂತನಾದ ಮಾರುತಿಯು ಮೇಘ ದಷ್ಟು ವಿಶಾಲವಾಗಿದ್ದ ತನ್ನ ದೊಡ್ಡದಾದ ಶರೀರವನ್ನು ತುಂಬಾ ಸಣ್ಣದಾಗಿಸಿ, ಹೆಬ್ಬೆರಳಷ್ಟು ಗಾತ್ರದವನಾದನು. ॥ ೧೬೬-೧೬೭॥ ಮಹಾಬಲಸಂಪನ್ನನಾದ ಆಂಜನೇಯನು ಕ್ಷಣಮಾತ್ರದಲ್ಲಿ ಸುರಸೆಯ ಬಾಯನ್ನು ಹೊಕ್ಕು ಮರುಕ್ಷಣದಲ್ಲಿ ಹೊರಬಂದು ಅಂತರಿಕ್ಷದಲ್ಲಿ ನಿಂತು ಆಕೆಗೆ ಹೇಳಿದನು - ॥ ೧೬೮॥

''ಎಲೈ ದಾಕ್ಷಾಯಿಣಿ! ನಿನಗೆ ನಮಸ್ಕರಿಸುತ್ತೇನೆ. ನಿನ್ನ ಮಾತಿನಂತೆ ನಾನು ನಿನ್ನ ಮುಖವನ್ನು ಪ್ರವೇಶಿಸಿದೆನಲ್ಲ! ವೈದೇಹಿಯಿರುವ ಸ್ಥಳಕ್ಕೆ ನಾನಿನ್ನು ಹೋಗುತ್ತೇನೆ. ನಾನು ಹೀಗೆ ಮಾಡಿದುದರಿಂದ ಬ್ರಹ್ಮನ ವರವು ನೆರವೇರಿ ಸತ್ಯವಾಯಿತಲ್ಲ!'' ॥ ೧೬೯॥ ರಾಹುವಿನಿಂದ ಮುಕ್ತನಾದ ಚಂದ್ರನಂತೆ, ತನ್ನ ಬಾಯಿಂದ ಹೊರಬಂದು ಆಕಾಶದಲ್ಲಿ ಪ್ರಕಾಶಮಾನವಾಗಿ ನಿಂತಿದ್ದ ಮಾರುತಿಯನ್ನು ನೋಡಿ ಸುರಸೆಯು ನಿಜರೂಪವನ್ನು ತಾಳಿ ಹನುಮಂತನ ಬಳಿ ಇಂತೆಂದಳು – ॥ ೧೭೦॥

''ಸೌಮ್ಯನಾದ ಓ ಹರಿಶ್ರೇಷ್ಠಾ! ಕಾರ್ಯಸಿದ್ಧಿಗಾಗಿ ಮುಂದೆ ಸುಖಿವಾಗಿ ಪ್ರಯಾಣ ಮಾಡು. ಮಹಾತ್ಮನಾದ ಶ್ರೀರಾಮ ನೊಡನೆ ಸೀತಾದೇವಿಯನ್ನು ಸೇರಿಸು.'' ॥ ೧೭೧॥

ಆಗ ಹನುಮಂತನ ಕಷ್ಟಸಾಧ್ಯವಾದ ಈ ಮೂರನೆಯ ಸಾಹಸ ಕಾರ್ಯವನ್ನು ನೋಡಿ ಎಲ್ಲ ಪ್ರಾಣಿಗಳು 'ಸಾಧು! ಸಾಧು!!' ಎಂದು ಹೇಳುತ್ತಾ ಪ್ರಶಂಸಿಸಿದವು. ॥ ೧೭೨॥

ಅನಂತರ ಗರುಡಸದೃಶನಾದ ಹನುಮಂತನು ಸಾಮಾನ್ಯ ರಿಂದ ದಾಟಲು ಅಸಾಧ್ಯವಾದ ವರುಣಾಲಯವಾದ ಸಾಗರದ ಮೇಲ್ಭಾಗಕ್ಕೆ ಜಿಗಿದು ಆಕಾಶವನ್ನು ಸೇರಿ ದಕ್ಷಿಣದ ಕಡೆಗೆ ವೇಗವಾಗಿ ಪಯಣವನ್ನು ಬೆಳೆಸಿದನು. ॥ ೧೭೩॥

ವಾಯುಪುತ್ರ ಮಾರುತಿಯು ಪಯಣಿಸುತ್ತಿದ್ದ ಆ ವಾಯು ಮಾರ್ಗವು ನೀರಿನ ಧಾರೆಗಳಿಂದ ವ್ಯಾಪ್ತವಾಗಿದ್ದು, ನಾನಾ ವಿಧವಾದ ಪಕ್ಷಿಗಳಿಂದ ಸೇವಿಸಲ್ಪಡುತ್ತಿತ್ತು. ಗಾನ-ನೃತ್ಯಾದಿಗಳಿಗೆ ಆಚಾರ್ಯರಾದ ತುಂಬುರು ಮೊದಲಾದ ಗಂಧರ್ವರಿಂದ ತುಂಬಿಹೋಗಿತ್ತು. ಐರಾವತವೆಂಬ ಇಂದ್ರನ ಆನೆಯಿಂದ ಸೇವಿಸಲ್ಪಡುತ್ತಿತ್ತು. ಸಿಂಹ, ಗಜ, ಶಾರ್ದೂಲ, ಪಕ್ಷಿ, ಸರ್ಪ, ಮುಂತಾದ ದೇವತೆಗಳ ವಾಹನಗಳಿಂದಲೂ, ಹಾರಾಡುತ್ತಿದ್ದ ನಿರ್ಮಲ ವಿಮಾನಗಳಿಂದಲೂ ಸಮಲಂಕೃತವಾಗಿತ್ತು. ವಜ್ರಾಯುಧದ ಪ್ರಹಾರಗಳಿಂದಲೂ, ಸಿಡಿಲುಗಳ ಸಿಡಿತದಿಂದ ಹುಟ್ಟಿದ ಅಗ್ನಿಯಿಂದ ಪ್ರಕಾಶಮಾನವಾಗಿ ಕಾಣುತಿತ್ತು.

ವಜ್ರಾಶನಿಸಮಾಘಾತೈಃ ಪಾವಕೈರುಪಶೋಭಿತೇ ।
ಕೃತಪುಣ್ಯೈರ್ಮಹಾಭಾಗೈಃ ಸ್ವರ್ಗಜಿದ್ಭಿರಲಂಕೃತೇ ॥ ೧೭೬॥

ವಹತಾ ಹವ್ಯಮತ್ಯರ್ಥಂ ಸೇವಿತೇ ಚಿತ್ರಭಾನುನಾ ।
ಗ್ರಹನಕ್ಷತ್ರ ಚಂದ್ರಾರ್ಕತಾರಾಗಣವಿಭೂಷಿತೇ ॥ ೧೭೭॥

ಮಹರ್ಷಿಗಣಗಂಧರ್ವನಾಗಯಕ್ಷ ಸಮಾಕುಲೇ ।
ವಿವಿಕ್ತೇ ವಿಮಲೇ ವಿಶ್ವೇ ವಿಶ್ವಾವಸುನಿಷೇವಿತೇ ॥ ೧೭೮॥

ದೇವರಾಜಗುಣಾಕ್ರಾಂತೇ ಚಂದ್ರಸೂರ್ಯಪಥೇ ಶಿವೇ ।
ವಿತಾನೇ ಜೀವಲೋಕಸ್ಯ ವಿತತೇ ಬ್ರಹ್ಮನಿರ್ಮಿತೇ ॥ ೧೭೯॥

ಬಹುಶಃ ಸೇವಿತೇ ವೀರೈರ್ವಿದ್ಯಾಧರಗಣೈರ್ವರೈಃ ।
ಜಗಾಮ ವಾಯುಮಾರ್ಗೇ ಚ ಗರುತ್ಮಾನಿವ ಮಾರುತಿಃ ॥ ೧೮೦॥

ಹನೂಮಾನ್ ಮೇಘಜಾಲಾನಿ ಪ್ರಕರ್ಷನ್ ಮಾರುತೋ ಯಥಾ।
ಕಾಲಾಗರುಸವರ್ಣಾನಿ ರಕ್ತಪೀತಸಿತಾನಿ ಚ ॥ ೧೮೧॥

ಕಪಿನಾ ಕೃಷ್ಣಮೇಘಾನಿ ಮಹಾಭ್ರಾಣಿ ಚಕಾಶಿರೇ ।
ಪ್ರವಿಶನ್ನಭ್ರಜಾಲಾನಿ ನಿಷ್ಪತಂಶ್ಚ ಪುನಃ ಪುನಃ ॥ ೧೮೨॥

ಪ್ಲಾವ್ಯಷೀಂದುರಿವಾಭಾತಿ ನಿಷ್ಪತನ್ ಪ್ರವಿಶಂಸ್ತದಾ ।
ಪ್ರದೃಶ್ಯಮಾನಃ ಸರ್ವತ್ರ ಹನುಮಾನ್ ಮಾರುತಾತ್ಮಜಃ।
ಭೇಚೇಽಂಬರಂ ನಿರಾಲಂಬಂ ಲಂಬಪಕ್ಷ ಇವಾದ್ರಿರಾಟ್ ॥ ೧೮೩॥

ಪ್ಲವಮಾನಂ ತು ತಂ ದೃಷ್ಟ್ವಾ ಸಿಂಹಿಕಾ ನಾಮ ರಾಕ್ಷಸೀ ।
ಮನಸಾ ಚಿಂತಯಾಮಾಸ ಪ್ರವೃದ್ಧಾ ಕಾಮರೂಪಿಣೀ ॥ ೧೮೪॥

ಅದ್ಯ ದೀರ್ಘಸ್ಯ ಕಾಲಸ್ಯ ಭವಿಷ್ಯಾಮ್ಯಹಮಾಪಿತಾ ।
ಇದಂ ಹಿ ಮೇ ಮಹತ್ತ್ವೃಷ್ಟಿ ಚಿರಸ್ಯ ಬಲಮಾಗತಮ್ ॥ ೧೮೫॥

ಇತಿ ಸಂಚಿಂತ್ಯ ಮನಸಾ ಛಾಯಾಮಸ್ಯ ಸಮಾಕ್ಷಿಪತ್ ।
ಛಾಯಾಯಾಂ ಗೃಹ್ಯಮಾಣಾಯಾಂ ಚಿಂತಯಾಮಾಸ ವಾನರಃ ॥

ಹನುಮಂತನು ಪಯಣಿಸುತ್ತಿದ್ದ ವಾಯುಮಾರ್ಗವನ್ನು ಪುಣ್ಯಾತ್ಮರಾದ, ಮಹಾಭಾಗ್ಯಶಾಲಿಗಳಾದ, ಸ್ವರ್ಗವನ್ನು ಜಯಿಸಿರುವ ಮಹಾಪುರುಷರು ಆಶ್ರಯಿಸಿದ್ದರು. ಅದು ದೇವತೆಗಳಿಗೆ ಅರ್ಪಿಸಿದ ಹವಿಸ್ಸನ್ನು ಹೊತ್ತುಕೊಂಡು ಹೋಗುತ್ತಿರುವ ಹವ್ಯವಾಹನಿಗೆ ಮಾರ್ಗವಾಗಿತ್ತು. ಗ್ರಹ-ನಕ್ಷತ್ರಗಳಿಂದಲೂ, ಸೂರ್ಯ-ಚಂದ್ರರಿಂದಲೂ, ತಾರಾಗಣಗಳಿಂದಲೂ ವಿಭೂಷಿತವಾಗಿತ್ತು. ಮಹರ್ಷಿಗಣಗಳಿಂದಲೂ ಗಂಧರ್ವ-ನಾಗ-ಯಕ್ಷರಿಂದಲೂ ವ್ಯಾಪ್ತವಾಗಿತ್ತು. ಅದು ವಿಲಕ್ಷಣವಾಗಿಯೂ, ವಿಶಾಲವಾಗಿಯೂ, ಶುಭ್ರವಾಗಿಯೂ ಇತ್ತು. ವಿಶ್ವಾವಸುವೆಂಬ ಗಂಧರ್ವ ರಾಜನು ಅದನ್ನು ಆಶ್ರಯಿಸಿದ್ದನು. ದೇವರಾಜನ ಆನೆಗಳಿಂದ ಆಕ್ರಮಿಸಲ್ಪಟ್ಟ ಆ ವಾಯುಮಾರ್ಗವು ಚಂದ್ರ-ಸೂರ್ಯರು ಸಂಚರಿಸುವ ಪಥವಾಗಿತ್ತು. ಅದು ಶುಭಕರವಾಗಿದ್ದು, ಜೀವಲೋಕಕ್ಕೆ ಮೇಲುಛಾವಣಿಯಂತಿತ್ತು. ಬ್ರಹ್ಮನಿಂದಲೇ ನಿರ್ಮಿಲಸ್ಪಟ್ಟ ಆ ವಾಯುಮಾರ್ಗವು ಮಲರಹಿತವಾಗಿತ್ತು. ಅನೇಕ ವೀರರಿಂದ ಸೇವಿಸಲ್ಪಟ್ಟು, ವಿದ್ಯಾಧರರಿಂದ ವ್ಯಾಪ್ತವಾಗಿತ್ತು. ಅಂತಹ ಮನೋಹರವಾದ ವಾಯುಮಾರ್ಗದಲ್ಲಿ ಗರುಡನಂತೆ ವಾಯುನಂದನನು ಹಾರಿಕೊಂಡು ಹೋಗುತ್ತಿದ್ದನು. ॥ ೧೭೪-೧೮೦॥

ವಾಯುದೇವರಂತೆ ಆಂಜನೇಯನು ಕಪ್ಪಾಗಿಯೂ, ಬಿಳುಪಾಗಿಯೂ, ಕೆಂಪಾಗಿಯೂ, ಹಳದಿಯಾಗಿಯೂ ಇದ್ದ ಮೇಘಸಮೂಹಗಳನ್ನು ತನ್ನೊಡನೆ ಸೆಳೆದುಕೊಂಡು ಹೋಗುತ್ತಿದ್ದನು. ಕಪೀಶ್ವರನಿಂದ ಸೆಳೆಯಲ್ಪಡುತ್ತಿದ್ದ ಆ ಮೇಘಗಳು ಅತ್ಯಂತ ಪ್ರಕಾಶಮಾನವಾಗಿ ಕಾಣುತ್ತಿದ್ದವು. ಕ್ಷಣ-ಕ್ಷಣಕ್ಕೂ ಮೇಘಗಳಲ್ಲಿ ಅಡಗಿ-ಹೊರ ಬರುತ್ತಿದ್ದ ಹನುಮಂತನು ವರ್ಷಾಕಾಲದಲ್ಲಿ ಮೇಘಗಳೆಡೆಯಲ್ಲಿ ಸಂಚರಿಸುವ ಚಂದ್ರನಂತೆ ಪ್ರಕಾಶಿಸುತ್ತಿದ್ದನು. ॥ ೧೮೧-೧೮೨॥ ವಾಯುಪುತ್ರನಾದ ಹನುಮಂತನು ರೆಕ್ಕೆಗಳನ್ನು ಹೊಂದಿರವ ಪರ್ವತರಾಜನಂತೆ, ನಿರಾಲಂಬನಾಗಿ ಆಕಾಶದಲ್ಲಿ ಹಾರಿಹೋಗುತ್ತಿರುವಾಗ ಎಲ್ಲೆಡೆಗಳಲ್ಲಿ ಅವನೇ ಗೋಚರಿಸಿದನು. ॥ ೧೮೩॥

ಹೀಗೆ ಹಾರಿಕೊಂಡು ದಕ್ಷಿಣ ದಿಕ್ಕಿಗೆ ಹೋಗುತ್ತಿದ್ದ ಹನುಮಂತನನ್ನು ಕಾಮರೂಪಿಣಿಯಾದ, ಬೃಹದಾಕಾರವಾಗಿದ್ದ 'ಸಿಂಹಿಕೆ' ಎಂಬ ರಾಕ್ಷಸಿಯು ನೋಡಿ ಮನಸ್ಸಿನಲ್ಲೇ ಯೋಚಿಸಿದಳು. ॥ ೧೮೪॥ ಬಹಳ ಕಾಲದ ಮೇಲೆ ನನಗಿಂದು ಒಳ್ಳೆಯ ಭೋಜನವು ದೊರಕಿದೆ. ಬಹಳಕಾಲಾನಂತರ ಇದೊಂದು ಮಹಾವ್ಯಾಣಿಯು ನನಗೆ ದಕ್ಕಲಿದೆ.' ॥ ೧೮೫॥ ಹೀಗೆ ಯೋಚಿಸಿದ ಸಿಂಹಕೆಯು ಸಮುದ್ರದ ಮೇಲೆ ಬಿದ್ದದ್ದ ಹನುಮಂತನ ನೆಳಲನ್ನು ಹಿಡಿದುಕೊಂಡಳು. ಆ ಛಾಯಾಗ್ರಹಣದಿಂದ ನಡೆಕುಗ್ಗಿದ ಹನುಮಂತನು ಯೋಚಿಸತೊಡಗಿದನು. ॥ ೧೮೬॥

''ಎದುರುಗಾಳಿಯಿಂದ ಸಮುದ್ರದಲ್ಲಿ ದೊಡ್ಡ ಹಡಗಿನ ವೇಗವೂ ಕಡಿಮೆಯಾಗುವಂತೆ-ನನ್ನ ಪರಾಕ್ರಮವೂ ಕಡಿಮೆ

ಸಮಾಕ್ಷಿಪ್ತೋಽಸ್ಮಿ ಸಹಸಾ ಪಂಗೂಕೃತಪರಾಕ್ರಮಃ ।
ಪ್ರತಿಲೋಮೇನ ವಾತೇನ ಮಹಾನೌರಿವ ಸಾಗರೇ ॥ ೧೮೭॥

ತಿರ್ಯಗೂರ್ಧ್ವಮಧಶ್ಚೈವ ವೀಕ್ಷಮಾಣಸ್ತತಃ ಕಪಿಃ ।
ದದರ್ಶ ಸ ಮಹತ್ ಸತ್ತ್ವಮುತ್ಥಿತಂ ಲವಣಾಂಭಸಿ ॥ ೧೮೮॥

ತದ್ದೃಷ್ಟ್ವಾ ಚಿಂತಯಾಮಾಸ ಮಾರುತಿರ್ವಿಕೃತಾನನಮ್ ।
ಕಪಿರಾಜೇನ ಕಥಿತಂ ಸತ್ತ್ವಮದ್ಭುತದರ್ಶನಮ್ ॥ ೧೮೯॥

ಛಾಯಾಗ್ರಾಹಿ ಮಹಾವೀರ್ಯಂ ತದಿದಂ ನಾತ್ರ ಸಂಶಯಃ ।
ಸ ತಾಂ ಬುದ್ಧ್ಯಾರ್ಥತತ್ತ್ವೇನ ಸಿಂಹಿಕಾಂ ಮತಿಮಾನ್ ಕಪಿಃ ॥ ೧೯೦॥

ವ್ಯವರ್ಧತ ಮಹಾಕಾಯಃ ಪ್ರಾವೃಷೀವ ಬಲಾಹಕಃ ।
ತಸ್ಯ ಸಾ ಕಾಯಮುದ್ದಿಶ್ಯ ವರ್ಧತೇ ಮಹಾಕಪೇಃ ॥ ೧೯೧॥

ವಕ್ತ್ರಂ ಪ್ರಸಾರಯಾಮಾಸ ಪಾತಾಲಾಂತರಸಂನಿಭಮ್ ।
ಘನರಾಜೀವ ಗರ್ಜಂತೀ ವಾನರಂ ಸಮಭಿದ್ರವತ್ ॥ ೧೯೨॥

ಸ ದದರ್ಶ ತತಸ್ತಸ್ಯಾ ವಿವೃತಂ ಸುಮಹನ್ಮುಖಮ್ ।
ಕಾಯಮಾತ್ರಂ ಚ ಮೇಧಾವೀ ನರ್ಮಾಣಿ ಚ ಮಹಾಕಪಿಃ ॥ ೧೯೩॥

ಸ ತಸ್ಯಾ ವಿವೃತೇ ವಕ್ತ್ರೇ ವಜ್ರಸಂಹನನಃ ಕಪಿಃ ।
ಸಂಕ್ಷಿಪ್ಯ ಮುಹುರಾತ್ಮಾನಂ ನಿಪಪಾತ ಮಹಾಬಲಃ ॥ ೧೯೪॥

ಆಸ್ಯೇ ತಸ್ಯಾ ನಿಮಜ್ಜಂತಂ ದದೃಶುಃ ಸಿದ್ಧಚಾರಣಾಃ ।
ಗ್ರಸ್ಯಮಾನಂ ಯಥಾ ಚಂದ್ರಂ ಪೂರ್ಣಂ ಪರ್ವಣಿ ರಾಹುಣಾ ॥ ೧೯೫॥

ತತಸ್ತಸ್ಯಾ ನಖೈಸ್ತೀಕ್ಷ್ಣೈರ್ಮರ್ಮಾಣ್ಯುತ್ಪತ್ಯ ವಾನರಃ ।
ಉತ್ಪಪಾತಾಥ ವೇಗೇನ ಮನಃಸಂಪಾತವಿಕ್ರಮಃ ॥ ೧೯೬॥

ತಾಂ ತು ದೃಷ್ಟ್ವಾ ಚ ಧೃತ್ವಾ ಚ ದಾಕ್ಷಿಣ್ಯೇನ ನಿಪಾತ್ಯ ಹಿ ।
ಸ ಕಪಿಪ್ರವರೋ ವೇಗಾದ್ವವ್ಯಥೇ ಪುನರಾತ್ಮವಾನ್ ॥ ೧೯೭॥

ಯಾಗುತ್ತಿದೆಯಲ್ಲ!'' ॥ ೧೮೭॥ ಹೀಗೆ ಯೋಚಿಸಿ ತನ್ನನ್ನು ಹಿಂದಕ್ಕೆ ಸೆಳೆಯುತ್ತಿರುವ ಪ್ರಾಣಿಯು ಯಾವುದು ಎಂದು ತಿಳಿಯಲು ಅಕ್ಕ-ಪಕ್ಕಗಳಲ್ಲಿ, ಮೇಲೆ-ಕೆಳಗೆ ಎಲ್ಲೆಡೆ ದೃಷ್ಟಿಯನ್ನು ಹಾಯಿಸಿದನು. ಸಮುದ್ರದ ಕಡೆಗೆ ನೋಡಿದಾಗ ಸಮುದ್ರಮಧ್ಯದಿಂದ ಮೇಲೆದ್ದು ಬಂದ ಒಂದು ಮಹಾಪ್ರಾಣಿಯನ್ನು ವೀಕ್ಷಿಸಿದನು. ॥ ೧೮೮॥ ವಿಕಾರವಾದ ಮುಖವುಳ್ಳ ಆ ಪ್ರಾಣಿಯನ್ನು ನೋಡಿ ಮಾರುತಿಯು ತನ್ನಲ್ಲಿ ಹೀಗೆ ಚಿಂತಿಸಿದನು – 'ಕಪಿರಾಜ ಸುಗ್ರೀವನು ಹೇಳಿದ್ದಂತೆ,* ಪರಮಾದ್ಭುತವಾಗಿ ಕಾಣುವ, ಮಹಾಶಕ್ತಿಯಿಂದ ಕೂಡಿದ, ಛಾಯೆಯ ಮೂಲಕ ಪ್ರಾಣಿಗಳನ್ನು ಸೆಳೆದುಕೊಳ್ಳುವ ಸಾಮರ್ಥ್ಯವುಳ್ಳ ಮಹಾಸತ್ತ್ವವು ಇದೇ ಆಗಿರಬೇಕು. ಇದರಲ್ಲಿ ಸಂಶಯವೇ ಇಲ್ಲ.' ಪ್ರಜ್ಞಾಶಾಲಿಯಾದ ಹನುಮಂತನು ಆದನ್ನು ಸಿಂಹಿಕೆಯೇ ಎಂದು ಗುರುತಿಸಿದನು. ॥ ೧೮೯-೧೯೦॥ ಆಗ ಅವನು ವರ್ಷಾಕಾಲದ ಮೇಘದಂತೆ ತನ್ನ ಶರೀರವನ್ನು ಹಿಗ್ಗಿಸಿದನು. ಸಿಂಹಿಕೆಯು ಬೆಳೆಯುತ್ತಿದ್ದ ಮಹಾಕಪಿಯ ಶರೀರವನ್ನು ನೋಡಿ ಆಕಾಶ-ಪಾತಾಳ ವ್ಯಾಪಿಸುವಷ್ಟು ವಿಶಾಲವಾದ ತನ್ನ ಬಾಯನ್ನ ತೆರೆದುಕೊಂಡು ಮೇಘಗಳಂತೆ ಗರ್ಜಿಸುತ್ತಾ ಹನುಮಂತನ ಕಡೆಗೆ ಧಾವಿಸಿದಳು. ॥ ೧೯೧-೧೯೨॥

ಆಗ ಮೇಧಾವಿಯಾದ ಹನುಮಂತನು ತನ್ನನ್ನು ನುಂಗಲು ದೊಡ್ಡದಾಗಿ ತೆರೆದುಕೊಂಡಿದ್ದ ಅವಳ ವಿಶಾಲವಾದ ಮುಖವನ್ನು, ಅವಳ ದೇಹ ಪ್ರಮಾಣವನ್ನು ವೀಕ್ಷಿಸಿದನು. ಮರ್ಮಸ್ಥಳಗಳನ್ನು ಸಂಕ್ಷೇಪಗೊಳಿಸಿ ವಜ್ರದೇಹಿಯಾದ ಮಹಾಬಲನಾದ ಹನುಮಂತನು ತನ್ನ ಶರೀರವನ್ನು ಕಿರಿದಾಗಿಸಿಕೊಂಡು ದೊಡ್ಡದಾಗಿ ತೆರೆದುಕೊಂಡಿದ್ದ ರಾಕ್ಷಸಿಯ ಬಾಯೊಳಗೆ ವೇಗವಾಗಿ ಧುಮುಕಿದನು. ॥ ೧೯೩-೧೯೪॥ ಹುಣ್ಣಿಮೆಯಂದು ಗ್ರಹಣಕಾಲ ದಲ್ಲಿ ನುಂಗಲ್ಪಡುತ್ತಿದ್ದ ಚಂದ್ರನಂತೆ ಸಿಂಹಿಕೆಯ ಬಾಯೊಳಗೆ ಬಿದ್ದ ಹನುಮಂತನನ್ನು ಸಿದ್ಧ-ಚಾರಣರೇ ಆದಿ ಎಲ್ಲರೂ ನೋಡುತ್ತಿದ್ದರು. ॥ ೧೯೫॥ ಮನೋವೇಗಕ್ಕೆ ಸಮಾನವಾದ ವೇಗವುಳ್ಳ ಹನುಮಂತನು ಸಿಂಹಿಕೆಯ ಬಾಯನ್ನು ಪ್ರವೇಶಿಸಿ, ತೀಕ್ಷ್ಣವಾದ ಉಗುರುಗಳಿಂದ ಅವಳ ಮರ್ಮಸ್ಥಾನಗಳನ್ನು ಛಾತಿಸಿ, ಅವಳ ಎದೆಯನ್ನು ಸೀಳಿ ಅತ್ಯಂತವೇಗದಿಂದ ಹೊರಬಂದನು. ಹೀಗೆ ಕಪಿಶ್ರೇಷ್ಠನಾದ, ಜಿತೇಂದ್ರಿಯನಾದ ಹನುಮಂತನು ಸಮಯಸ್ಫೂರ್ತಿಯಿಂದಲೂ, ಧೈರ್ಯದಿಂದಲೂ, ಚತುರತೆಯಿಂದಲೂ ಸಿಂಹಿಕೆಯನ್ನು ಸಂಹರಿಸಿ ಪುನಃ ವೃದ್ಧಿಹೊಂದಿದನು. ॥ ೧೯೬-೧೯೭॥ ಹನುಮಂತನು ಎದೆಯನ್ನು ಸೀಳಿಕೊಂಡು ಹೊರಬಂದನಂತರ ಸಿಂಹಿಕೆಯು ಆರ್ತನಾದ ಮಾಡುತ್ತಾ ಸಮುದ್ರದ ನೀರಿನಲ್ಲಿ ಬಿದ್ದು ಹೋದಳು. ಅವಳನ್ನು

---

* ಸುಗ್ರೀವನು ದಕ್ಷಿಣ ದಿಕ್ಕಿಗೆ ಹೋಗುವ ವಾನರನಾಯಕರಿಗೆ ಆ ಪ್ರದೇಶವನ್ನು ಪರಿಚಯಿಸುವಾಗ ಹೀಗೆ ಹೇಳಿದ್ದನು –

ದಕ್ಷಿಣಸ್ಯ ಸಮುದ್ರಸ್ಯ ಮಧ್ಯೇ ತಸ್ಯ ತು ರಾಕ್ಷಸೀ ।
ಅಂಗಾರಕೇತಿ ವಿಖ್ಯಾತಾ ಛಾಯಾಮಾಕ್ಷಿಪ್ಯ ಭೋಜನೇ ॥ ೨೬ ॥ (ಕಿಷ್ಕಿಂಧಾಕಾಂಡ. ಸ-೪೧)

ಹೃತಹೃತ್ ಸಾ ಹನುಮತಾ ಪಪಾತ ವಿಧುರಾಂಭಸಿ ।
ಸ್ವಯಂಭುವೈವ ಹನುಮಾನ್ ಸೃಷ್ಟಸ್ತಸ್ಯಾ ನಿಪಾತನೇ ॥ ೧೯೮॥

ತಾಂ ಹತಾಂ ವಾನರೇಣಾಶು ಪತಿತಾಂ ವೀಕ್ಷ್ಯ ಸಿಂಹಿಕಾಂ ।
ಭೂತಾನ್ಯಾಕಾಶಚಾರೀಣಿ ತಮೂಚುಃ ಪ್ಲವಗೋತ್ತಮಮ್ ॥ ೧೯೯॥

ಭೀಮಮದ್ಯ ಕೃತಂ ಕರ್ಮ ಮಹತ್ ಸತ್ತ್ವಂ ತ್ವಯಾ ಹತಮ್ ।
ಸಾಧಯಾರ್ಥಮಭಿಪ್ರೇತಮರಿಷ್ಟಂ ಪ್ಲವತಾಂ ವರ ॥ ೨೦೦॥

ಯಸ್ಯ ತ್ವೇತಾನಿ ಚತ್ವಾರಿ ವಾನರೇಂದ್ರ ಯಥಾ ತವ ।
ಧೃತಿರ್ದೃಷ್ಟಿರ್ಮತಿರ್ದಾಕ್ಷ್ಯಂ ಸ ಕರ್ಮಸು ನ ಸೀದತಿ ॥ ೨೦೧॥

ಸ ತೈಃ ಸಂಭಾವಿತಃ ಪೂಜ್ಯೈಃ ಪ್ರತಿಪನ್ನಪ್ರಯೋಜನಃ ।
ಜಗಾಮಾಕಾಶಮಾವಿಶ್ಯ ಪನ್ನಗಾಶನವತ್ ಕಪಿಃ ॥ ೨೦೨॥

ಪ್ರಾಪ್ತಭೂಯಿಷ್ಠಪಾರಸ್ತು ಸರ್ವತಃ ಪ್ರತಿಲೋಕಯನ್ ।
ಯೋಜನಾನಾಂ ಶತಸ್ಯಾಂತೇ ವನರಾಜಿಂ ದದರ್ಶ ಸಃ ॥ ೨೦೩॥

ದದರ್ಶ ಚ ಪತನ್ನೇವ ವಿವಿಧದ್ರುಮ ಭೂಷಿತಮ್ ।
ದ್ವೀಪಂ ಶಾಖಾಮೃಗಶ್ರೇಷ್ಠೋ ಮಲಯೋಪವನಾನಿ ಚ ॥ ೨೦೪॥

ಸಾಗರಂ ಸಾಗರಾನೂಪಂ ಸಾಗರಾನೂಪಜಾನ್ ದ್ರುಮಾನ್ ।
ಸಾಗರಸ್ಯ ಚ ಪತ್ನೀನಾಂ ಮುಖಾನ್ಯಪಿ ವಿಲೋಕಯನ್ ॥ ೨೦೫॥

ಸ ಮಹಾಮೇಘಸಂಕಾಶಂ ಸಮೀಕ್ಷ್ಯಾತ್ಮಾನಮಾತ್ಮವಾನ್ ।
ನಿರುಂಧಂತಮಿವಾಕಾಶಂ ಚಕಾರ ಮತಿಮಾನ್ ಮತಿಮ್ ॥ ೨೦೬॥

ಕಾಯವೃದ್ಧಿಂ ಪ್ರವೇಗಂ ಚ ಮಮ ದೃಷ್ಟ್ವೈವ ರಾಕ್ಷಸಾಃ ।
ಮಯಿ ಕೌತೂಹಲಂ ಕುರ್ಯುರಿತಿ ಮೇನೇ ಮಹಾಕಪಿಃ ॥ ೨೦೭॥

ತತಃ ಶರೀರಂ ಸಂಕ್ಷಿಪ್ಯ ತನ್ಮಹೀಧರಸಂನಿಭಮ್ ।
ಪುನಃ ಪ್ರಕೃತಿಮಾಪೇದೇ ವೀತಮೋಹ ಇವಾತ್ಮವಾನ್ ॥ ೨೦೮॥

ತದ್ರೂಪಮತಿಸಂಕ್ಷಿಪ್ಯ ಹನೂಮಾನ್ ಪ್ರಕೃತೌ ಸ್ಥಿತಃ ।
ತ್ರೀನ್ ಕ್ರಮಾನಿವ ವಿಕ್ರಮ್ಯ ಬಲಿವೀರ್ಯಹರೋ ಹರಿಃ ॥ ೨೦೯॥

ಕೊಲ್ಲಲೆಂದೇ ಬ್ರಹ್ಮನು ಹನುಮಂತನನ್ನು ಸೃಷ್ಟಿಸಿದ್ದನು. ಅಷ್ಟು ಶೀಘ್ರವಾಗಿ ಹನುಮಂತನು ಸಿಂಹಿಕೆಯನ್ನು ಸಂಹರಿಸಿದುದನ್ನು ನೋಡಿ ಆಕಾಶದಲ್ಲಿ ಸಂಚರಿಸುತ್ತಿದ್ದವರೆಲ್ಲರೂ ಏಕಕಂಠದಿಂದ ಮಾರುತಿಯನ್ನು ಕೊಂಡಾಡಿದರು – ''ಕಪಿ ಶ್ರೇಷ್ಠನೇ! ಬಲುದೊಡ್ಡ ಪ್ರಾಣಿಯನ್ನು ಸಂಹರಿಸಿ ಭಯಂಕರ ಕಾರ್ಯವನ್ನು ಮಾಡಿರುವೆ. ॥ ೧೯೮-೧೯೯॥ ಈಗ ನೀನು ಬಯಸಿದ ಸೀತಾನ್ವೇಷಣೆಯ ಕಾರ್ಯವನ್ನು ಯಾವುದೇ ಎಡರು- ತೊಡರುಗಳಿಲ್ಲದೆ ಸಾಧಿಸು. ನಿನ್ನಲ್ಲಿರುವಂತೆ ಧೈರ್ಯ, ದೂರದೃಷ್ಟಿ, ಬುದ್ಧಿ ಮತ್ತು ಕಾರ್ಯಕುಶಲತೆ ಈ ನಾಲ್ಕು ಗುಣಗಳಿರುವವನು ಕಾರ್ಯಸಿದ್ಧಿಯಲ್ಲಿ ಎಂದಿಗೂ ವೈಫಲ್ಯವನ್ನು ಹೊಂದಲಾರರು.'' ಹೀಗೆ ಕಾರ್ಯಸಿದ್ಧಿಯನ್ನು ಪಡೆದ ಪೂಜ್ಯನಾದ ಹನುಮಂತನು ಆಕಾಶಚಾರಿಗಳಿಂದ ಗೌರವಿಸಲ್ಪಟ್ಟು ಪುನಃ ವಾಯುಮಾರ್ಗವನ್ನು ಹಿಡಿದು ಗರುಡನಂತೆ ಹಾರಿಕೊಂಡು ಸಮುದ್ರದ ದಕ್ಷಿಣ ತೀರದ ಕಡೆಗೆ ಸಾಗಿದನು. ॥ ೨೦೦-೨೦೨॥

ನೂರು ಯೋಜನಗಳಷ್ಟು ಪ್ರಯಾಣಮಾಡಿದ ನಂತರ 'ಇನ್ನೇನು ದಡವು ಸಿಕ್ಕಿತು' ಎನ್ನುವಷ್ಟು ಸಮೀಪಕ್ಕೆ ಹೋದ ಹನುಮಂತನು ಎಲ್ಲ ಕಡೆಗಳಲ್ಲಿಯೂ ನೋಡುತ್ತಾ ಅಲ್ಲಿದ್ದ ವನರಾಜಿಯನ್ನು ವೀಕ್ಷಿಸಿದನು. ಆಕಾಶದಿಂದ ಭೂಮಿಗೆ ಇಳಿಯುತ್ತಿರುವಂತೆ ವಿಧ-ವಿಧವಾದ ವೃಕ್ಷಗಳಿಂದ ಅಲಂಕೃತವಾಗಿದ್ದ ಲಂಕಾದ್ವೀಪವನ್ನು, ಮಲಯಪರ್ವತದ ಉಪವನಗಳನ್ನು ನೋಡಿದನು. ಸಮುದ್ರವನ್ನು, ಸಮುದ್ರ ಸಮೀಪದ ಜೌಗು ಪ್ರದೇಶವನ್ನು, ಸಮುದ್ರತೀರದಲ್ಲಿ ಬೆಳೆದಿದ್ದ ಮಹಾವೃಕ್ಷಗಳನ್ನು, ತ್ರಿಕೂಟ ಪರ್ವತದಲ್ಲಿ ಹುಟ್ಟಿ ಹರಿಯುತ್ತಿರುವ ಸಾಗರನ ಪತ್ನಿಯರಾದ ನದಿಗಳು ಸಮುದ್ರಕ್ಕೆ ಸೇರುವ ಸ್ಥಳಗಳನ್ನು ನೋಡಿದನು. ಆಕಾಶವನ್ನೇ ತಡೆಗಟ್ಟುತ್ತಿರುವುದೋ ಎಂಬಂತೆ ಕಾಣುತ್ತಿದ್ದ, ಮಹಾಮೇಘ ಸದೃಶವಾಗಿದ್ದ ಆಗಿನ ತನ್ನ ಬೃಹದಾಕಾರ ಶರೀರವನ್ನು ನೋಡಿಕೊಂಡು, ಬುದ್ಧಿವಂತನೂ, ಜಿತೇಂದ್ರಿಯನೂ ಆದ ಆಂಜನೇಯನು ಹೀಗೆ ನಿಶ್ಚಯಿಸಿದನು. ದೊಡ್ಡದಾಗಿ ಬೆಳೆದಿರುವ ಈ ನನ್ನ ಶರೀರವನ್ನೂ, ಅಮಿತ ವೇಗವನ್ನು ನೋಡಿದೊಡನೆ ಇಲ್ಲಿರುವ ರಾಕ್ಷಸರು ನನ್ನ ವಿಷಯದಲ್ಲಿ ಕುತೂಹಲವುಳ್ಳವರಾಗುತ್ತಾರೆ. ಆದುದರಿಂದ ಇದೇ ಶರೀರವನ್ನು ಧರಿಸಿ ಲಂಕೆಯನ್ನು ಪ್ರವೇಶಿಸುವುದು ಸೂಕ್ತವಲ್ಲ'' ಹೀಗೆ ಯೋಚಿಸಿದ ಹನುಮಂತನು – ಜಿತೇಂದ್ರಿಯನಾದ ಯೋಗಿಯು ಮೋಹರಹಿತನಾಗಿ ತನ್ನ ಸ್ವಪ್ನರೂಪದಲ್ಲಿ ಸ್ಥಿರನಾಗುವಂತೆ, ಪರ್ವತೋಪಮವಾಗಿದ್ದ ತನ್ನ ಶರೀರವನ್ನು ಸಂಕ್ಷೇಪಿಸಿಕೊಂಡು ಆತ್ಮಜ್ಞಾನದಿಂದ ಸಂಪನ್ನವಾದ ತನ್ನ ಸಹಜ ಶರೀರವನ್ನೇ ಹೊಂದಿದನು. ॥ ೨೦೩-೨೦೮॥ ಬಲಿಚಕ್ರವರ್ತಿಯ ಸಂಪತ್ತನ್ನು ಜಯಿಸಲು ಹೋದ ವಿಷ್ಣುವು ತ್ರಿವಿಕ್ರಮನಾಗಿ ಬೆಳೆದನು. ಬಳಿಕ ಯಥಾಸ್ಥಿತಿ ವಾಮನ ನಾದಂತೆ, ಹನುಮಂತನು ತನ್ನ ಬೃಹದಾಕಾರ ಶರೀರವನ್ನು

ಸ ಚಾರು ನಾನಾವಿಧರೂಪಧಾರೀ
ಪರಂ ಸಮಾಸಾದ್ಯ ಸಮುದ್ರತೀರಮ್ ।
ಪರೈರಶಕ್ಯಂ ಪ್ರತಿಪನ್ನರೂಪಃ
ಸಮೀಕ್ಷತಾತ್ಮಾ ಸಮವೇಕ್ಷಿತಾರ್ಥಃ ॥ ೨೧೦॥

ತತಃ ಸ ಲಂಬಸ್ಯ ಗಿರೇಃ ಸಮೃದ್ಧೇ
ವಿಚಿತ್ರಕೂಟೇ ನಿಪಪಾತ ಕೂಟೇ ।
ಸಕೇತಕೋದ್ದಾಲಕನಾರಿಕೇಲೇ
ಮಹಾದ್ರಿಕೂಟಪ್ರತಿಮೋ ಮಹಾತ್ಮಾ ॥ ೨೧೧॥

ತತಸ್ತು ಸಂಪ್ರಾಪ್ಯ ಸಮುದ್ರತೀರಂ
ಸಮೀಕ್ಷ್ಯ ಲಂಕಾಂ ಗಿರಿರಾಜಮೂರ್ಧ್ನಿ ।
ಕಪಿಸ್ತು ತಸ್ಮಿನ್ನಿಪಪಾತ ಪರ್ವತೇ
ವಿಧೂಯ ರೂಪಂ ವ್ಯಥಯನ್ ಮೃಗದ್ವಿಜಾನ್ ॥ ೨೧೨॥

ಸ ಸಾಗರಂ ದಾನವಪನ್ನಗಾಯುತಂ
ಬಲೇನ ವಿಕ್ರಮ್ಯ ಮಹೋರ್ಮಿಮಾಲಿನಂ ।
ನಿಪತ್ಯ ತೀರೇ ಚ ಮಹೋದಧೇಸ್ತದಾ
ದದರ್ಶ ಲಂಕಾಮಮರಾವತೀಮಿವ ॥ ೨೧೩॥

ಸಂಕುಚಿತವಾಗಿಸಿ ನಿಜಸ್ವರೂಪವನ್ನು ತಾಳಿದನು. ॥ ೨೦೯॥ ಸುಂದರವಾದ ನಾನಾರೂಪಗಳನ್ನು ಧರಿಸುವ ಸಾಮರ್ಥ್ಯವಿದ್ದ ಹನುಮಂತನು ಇತರರಿಂದ ಹೊಂದಲು ಅಶಕ್ಯವಾದ ಸಮುದ್ರದ ದಕ್ಷಿಣತೀರವನ್ನು ಸೇರಿ, ದೊಡ್ಡದಾದ ತನ್ನ ಶರೀರವನ್ನು ನೋಡಿಕೊಂಡು ಮುಂದೆ ಮಾಡಬೇಕಾದ ಕಾರ್ಯದ ಬಗ್ಗೆ ಸಮಾಲೋಚಿಸಿ ವಿಶಾಲವಾಗಿದ್ದ ತನ್ನ ಆ ರೂಪವನ್ನು ತೊರೆದು ಹಿಂದಿನಂತೆ ಸಹಜವಾದ ರೂಪವನ್ನು ಹೊಂದಿದನು. ॥ ೨೧೦॥

ವಿಶಾಲವಾದ ಮೇಘಮಂಡಲ ಸದೃಶನಾಗಿದ್ದ ಮಹಾತ್ಮನಾದ ಹನುಮಂತನು ಫಲ-ಪುಷ್ಪಾದಿಗಳಿಂದಲೂ, ಕೇದಗೆ, ಚಳ್ಳೆ, ತೆಂಗು ಮೊದಲಾದ ವೃಕ್ಷಗಳಿಂದಲೂ ಸಮೃದ್ಧವಾಗಿದ್ದ ವಿಚಿತ್ರ ಶಿಖರಗಳನ್ನು ಹೊಂದಿದ್ದ ಲಂಬವೆಂಬ ಪರ್ವತದ ಪ್ರಧಾನ ಶಿಖರದಲ್ಲಿ ಇಳಿದನು. ॥ ೨೧೧॥

ಹನುಮಂತನು ಸಮುದ್ರತೀರಕ್ಕೆ ಬರುತ್ತಲೇ ಶ್ರೇಷ್ಠವಾದ ತ್ರಿಕೂಟ ಪರ್ವತದ ಶಿಖರದಲ್ಲಿದ್ದ ಲಂಕೆಯನ್ನು ನೋಡಿದನು. ತನ್ನ ದೊಡ್ಡದಾದ ರೂಪವನ್ನು ಪರಿತ್ಯಜಿಸಿ ಹಿಂದಿನರೂಪವನ್ನು ಹೊಂದಿ, ಆ ಗಿರಿಯ ಮೇಲೆ ಇಳಿದನು. ಅವನು ಇಳಿಯುತ್ತಲೇ ಮೃಗಗಳು, ಪಕ್ಷಿಗಳು ಭಯಗೊಂಡವು. ॥ ೨೧೨॥

ದಾನವರಿಂದಲೂ, ಸರ್ಪಗಳಿಂದಲೂ ವ್ಯಾಪ್ತವಾಗಿದ್ದ ದೊಡ್ಡ-ದೊಡ್ಡ ಅಲೆಗಳಿಂದ ಕೂಡಿದ್ದ ಸಮುದ್ರವನ್ನು ಹನುಮಂತನು ತನ್ನ ಬಲಾತಿಶಯದಿಂದ ದಾಟಿ ಮಹೋದಧಿಯ ತೀರದಲ್ಲಿಳಿದು ಇಂದ್ರನ ಅಮರಾವತಿಯಂತಿದ್ದ ಲಂಕಾಪಟ್ಟಣವನ್ನು ನೋಡಿದನು. ॥ ೨೧೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಪ್ರಥಮಃ ಸರ್ಗಃ ॥ ೧ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೊದಲನೆಯ ಸರ್ಗವು ಮುಗಿಯಿತು.

* * *

ಎರಡನೆಯ ಸರ್ಗ

ಲಂಕಾಪಟ್ಟಣದ ವರ್ಣನೆ, ಲಂಕೆಯನ್ನು ಪ್ರವೇಶಿಸಲು ಹನುಮಂತನು ಯೋಚಿಸಿ, ಸೂಕ್ಷ್ಮರೂಪವನ್ನು ಧರಿಸಿ ಪಟ್ಟಣಕ್ಕೆ ಪ್ರವೇಶ, ಚಂದ್ರೋದಯ ವರ್ಣನೆ–

ಸ ಸಾಗರಮನಾದ್ಯಮತಿಕ್ರಮ್ಯ ಮಹಾಬಲಃ ।
ತ್ರಿಕೂಟಶಿಖರೇ ಲಂಕಾಂ ಸ್ಥಿತಾಂ ಸ್ವಸ್ಥೋ ದದರ್ಶ ಹ ॥ ೧॥

ತತಃ ಪಾದಪಮುಕ್ತೇನ ಪುಷ್ಪವರ್ಷೇಣ ವೀರ್ಯವಾನ್ ।
ಅಭಿವ್ಯಕ್ತಃ ಸ್ಥಿತಸ್ತತ್ರ ಬಭೌ ಪುಷ್ಪಮಯೋ ಯಥಾ ॥ ೨॥

ಮಹಾಬಲನಾದ ಹನುಮಂತನು ಎದುರಿಸಲು ಅಸಾಧ್ಯವಾದ, ಸಾಮಾನ್ಯರಿಂದ ದಾಟಲು ಅಸಾಧ್ಯವಾದ ಸಮುದ್ರವನ್ನು ಲಂಘಿಸಿ ನಿಶ್ಚಿಂತನಾಗಿ ತ್ರಿಕೂಟ ಪರ್ವತದ ಶಿಖರದಲ್ಲಿದ್ದ ಲಂಕಾನಗರವನ್ನು ನೋಡಿದನು. ॥ ೧॥

ಪರಾಕ್ರಮಶಾಲಿಯಾದ ಹನುಮಂತನು ಆ ಪರ್ವತವನ್ನು ನೋಡುತ್ತಾ ನಿಂತಾಗ ಪುಷ್ಪವೃಕ್ಷಗಳು ಅವನ ಮೇಲೆ ಹೂವುಗಳ ಮಳೆಯನ್ನೇ ಸುರಿಸಿದವು. ಆದರಿಂದ ಹನುಮಂತನು ಪುಷ್ಪಮಯನಾಗಿರುವಂತೆ ಪ್ರಕಾಶಿಸಿದನು. ॥ ೨॥ ಹೆಚ್ಚಿನ

ಯೋಜನಾನಾಂ ಶತಂ ಶ್ರೀಮಾನ್ವಿಸ್ತೀರ್ಣಮಿಕ್ಷುಮತೀ ।
ಅನಿಶ್ಚನ್ನನ್ ಕಪಿಸ್ತತ್ರ ನ ಗ್ಲಾನಿಮಧಿಗಚ್ಛತಿ ॥ ೩॥

ಶತಾನ್ಯಹಂ ಯೋಜನಾನಾಂ ಕ್ರಮೇಯಂ ಸುಬಹೂನ್ಯಪಿ ।
ಕಿಂ ಪುನಃ ಸಾಗರಸ್ಯಾಂತಂ ಸಂಖ್ಯಾತಂ ಶತಯೋಜನಮ್ ॥ ೪॥

ಸ ತು ವೀರ್ಯವತಾಂ ಶ್ರೇಷ್ಠಃ ಪ್ಲವತಾಮಪಿ ಚೋತ್ತಮಃ ।
ಜಗಾಮ ವೇಗವಾನ್ ಲಂಕಾಂ ಲಂಘಯಿತ್ವಾ ಮಹೋದಧಿಮ್ ॥ ೫॥

ಶಾದ್ವಲಾನಿ ಚ ನೀಲಾನಿ ಗಂಧವಂತಿ ವನಾನಿ ಚ ।
ಗಂಡವಂತಿ ಚ ಮಧ್ಯೇನ ಜಗಾಮ ನಗವಂತಿ ಚ ॥ ೬॥

ಶೈಲಾಂಶ್ಚ ತರುಸಂಶ್ಛನ್ನಾನ್ ವನರಾಜೀಶ್ಚ ಪುಷ್ಪಿತಾಃ ।
ಅಭಿಚಕ್ರಾಮ ತೇಜಸ್ವೀ ಹನೂಮಾನ್ ಪ್ಲವಗರ್ಷಭಃ ॥ ೭॥

ಸ ತಸ್ಮಿನ್ನಚಲೇ ತಿಷ್ಠನ್ ವನಾನ್ಯುಪವನಾನಿ ಚ ।
ಸ ನಗಾಗ್ರೇ ಸ್ಥಿತಾಂ ಲಂಕಾಂ ದದರ್ಶ ಪವನಾತ್ಮಜಃ ॥ ೮॥

ಸರಲಾನ್ ಕರ್ಣಿಕಾರಾಂಶ್ಚ ವಿರ್ಜುರಾಂಶ್ಚ ಸುಪುಷ್ಪಿತಾನ್ ।
ಪ್ರಿಯಾಲಾನ್ ಮುಚುಲಿಂದಾಂಶ್ಚ ಕುಟಜಾನ್ ಕೇತಕಾನಪಿ ॥ ೯॥

ಪ್ರಿಯಂಗೂನ್ ಗಂಧಪೂರ್ಣಾಂಶ್ಚ ನೀಪಾನ್ ಸಪ್ತಚ್ಛದಾಂ ಸ್ಥಾ ।
ಅಸನಾನ್ ಕೋವಿದಾರಾಂಶ್ಚ ಕರವೀರಾಂಶ್ಚ ಪುಷ್ಪಿತಾನ್ ॥ ೧೦॥

ಪುಷ್ಪಭಾರನಿಬದ್ಧಾಂಶ್ಚ ತಥಾ ಮುಕುಲಿತಾನಪಿ ।
ಪಾದಪಾನ್ ವಿಹಗಾಕೀರ್ಣಾನ್ ಪವನಧೂತಮಸ್ತಕಾನ್ ॥ ೧೧॥

ಹಂಸಕಾರಂಡವಾಕೀರ್ಣಾ ವಾಪೀಃ ಪದ್ಮೋತ್ಪಲಾಯುತಾಃ ।
ಚಕ್ರೋಪಾನ್ ವಿವಿಧಾನ್ ರಮ್ಯಾನ್ ವಿವಿಧಾಂಶ್ಚ ಜಲಾಶಯಾನ್ ॥ ೧೨॥

ಸಂತತಾನ್ ವಿವಿಧೈರ್ವೃಕ್ಷೈಃ ಸರ್ವರ್ತುಫಲಪುಷ್ಪಿತೈಃ ।
ಉದ್ಯಾನಾನಿ ಚ ರಮ್ಯಾಣಿ ದದರ್ಶ ಕಪಿಕುಂಜರಃ ॥ ೧೩॥

ಸಮಾಸಾದ್ಯ ಚ ಲಕ್ಷ್ಮೀವಾನ್ ಲಂಕಾಂ ರಾವಣಪಾಲಿತಾಮ್ ।
ಪರಿಖಾಭಿಃ ಸಪದ್ಮಾಭಿಃ ಸೋತ್ಪಲಾಭಿರಲಂಕೃತಾಮ್ ॥ ೧೪॥

ಪ್ರದಕ್ಷಿಣಮಿಯೂ, ಪ್ರಜ್ಞಾಶಾಲಿಯೂ ಆದ ಹನುಮಂತನು ನೂರು ಯೋಜನ ಸಮುದ್ರವನ್ನು ಲಂಘಿಸಿ ಬಂದಿದ್ದರೂ ಅವನಿಗೆ ಸ್ವಲ್ಪವೂ ಆಯಾಸವೇ ಆಗಿರಲಿಲ್ಲ. ರಾಮದೂತನಾದ ಜಗತ್ಕಾಣನಿಗೆ ಎಲ್ಲಿಯ ಆಯಾಸ! ॥ ೩॥ ಸಮುದ್ರವನ್ನು ದಾಟಿದ ಬಳಿಕ ಹನುಮಂತನಿಗನಿಸಿತು – "ಆನೇಕ ಶತಯೋಜನಗಳನ್ನಾದರೂ ನಾನು ಲಂಘಿಸಲು ಸಮರ್ಥ ನಾಗಿರುವೆನು. ಹೀಗಿರುವಾಗ ನೂರುಯೋಜನ ಪರಿಮಿತವಾದ ಈ ಸಮುದ್ರವನ್ನು ದಾಟುವುದು ನನಗೆ ಲೆಕ್ಕವೆ?" ॥ ೪॥

ವೀರ್ಯವಂತರಲ್ಲಿ ಶ್ರೇಷ್ಠನೂ, ಹಾರುವವರಲ್ಲಿ ಉತ್ತಮನೂ, ಮಹಾವೇಗವಂತನೂ ಆದ ಹನುಮಂತನು ಹೀಗೆ ಮಹೋದಧಿಯನ್ನು ಲಂಘಿಸಿ ಲಂಕೆಗೆ ಹೊರಟನು. ॥ ೫॥ ಅವನು ಹೋಗುತ್ತಿದ್ದ ವನಪ್ರದೇಶವು ಹಚ್ಚ ಹಸಿರಾದ ಗರಿಕೆಯ ಹುಲ್ಲಿನಿಂದ ವಾಪ್ತವಾಗಿ ನೀಲವರ್ಣದ್ದಾಗಿಯೂ ಸುಗಂಧ ಯುಕ್ತವಾಗಿತ್ತು. ಆ ವನದಲ್ಲಿ ಮಧುವಿಶಿಷ್ಟವಾದ ವೃಕ್ಷಗಳಿದ್ದುವು. ಅಲ್ಲಲ್ಲಿ ದಿಬ್ಬಗಳಿಂದ ಕೂಡಿದ ಆ ಸುಂದರವಾದ ಆರಣ್ಯ ದಲ್ಲಿ ಹನುಮಂತನು ನಡೆದು ಹೋಗುತ್ತಿದ್ದನು. ॥ ೬॥ ವಾನರೋತ್ತಮನೂ, ಮಹಾ ತೇಜಸ್ವಿಯಾದ ಹನುಮಂತನು ವೃಕ್ಷಗಳಿಂದ ಕುಂಬಿಹೋದ ಪರ್ವತಗಳನ್ನು, ಪುಷ್ಪಿತವಾದ ಆರಣ್ಯದ ಸಾಲುಗಳನ್ನು ದಾಟಿ ಮುಂದೆ ನಡೆದನು. ॥ ೭॥

ಪವನನಂದನನು ಆ ಪರ್ವತದ ಮೇಲೆ ನಿಂತು ವನಗಳನ್ನು, ಉಪವನಗಳನ್ನು, ತ್ರಿಕೂಟಪರ್ವತದ ಮೆಲ್ಭಾಗದಲ್ಲಿದ್ದ ಲಂಕಾಪಟ್ಟಣವನ್ನು ನೋಡಿದನು. ॥ ೮॥ ಅಲ್ಲಿಂದಲೇ ಸರಳ (ದೇವದಾರು), ಕರ್ಣಿಕಾರ ವೃಕ್ಷಗಳನ್ನೂ, ಪುಷ್ಪಗಳಿಂದ ಯುಕ್ತವಾದ ವಿರ್ಜುರ ವೃಕ್ಷಗಳನ್ನೂ, ಪ್ರಿಯಾಲ, ಮುಚುಲಿಂದ, ಕುಟಜ (ಬೆಟ್ಟದಮಲ್ಲಿಗೆ), ಕೇದಗೆ ವೃಕ್ಷಗಳನ್ನು, ಸುಗಂಧಯುಕ್ತವಾದ ಓಪ್ಪಲಿ ಗಿಡಗಳನ್ನು, ಕದಂಬ ಸಪ್ತಗುಚ್ಛ (ಎಳೆಲೆ ಬಾಳೆ) ಹೊನ್ನೆ, ಕೋವಿದಾರ ವೃಕ್ಷಗಳನ್ನು, ಪುಷ್ಪಿತವಾದ ಕರವೀರ ವೃಕ್ಷಗಳನ್ನು, ನಾನಾಬಗೆಯ ಹೂವಿನ ಗಿಡಗಳನ್ನು ನೋಡಿದನು. ಪುಷ್ಪಭಾರದಿಂದ ಬಾಗಿದ ಹಾಗೂ ಮೊಗ್ಗುಗಳಿಂದ ಕೂಡಿದ ಪಕ್ಷಿಗಳಿಂದ ವ್ಯಾಪ್ತವಾಗಿದ್ದ, ಗಾಳಿಯಿಂದ ಬಗ್ಗಿದ ಅಗ್ರಭಾಗಗಳುಳ್ಳ, ನಾನಾವಿಧವಾದ ವೃಕ್ಷಗಳನ್ನು ನೋಡಿದನು. ॥ ೯-೧೧॥ ಹಂಸ, ಕಾರಂಡವ ಪಕ್ಷಿಗಳಿಂದಲೂ, ಸಾವಿರಾರು ಕಮಲಗಳಿಂದಲೂ ಕೂಡಿಸಿ ತ್ತಿದ್ದ ಅನೇಕ ಸರೋವರಗಳನ್ನು ವಿವಿಧ ಕ್ರೀಡಾಸ್ಥಾನಗಳನ್ನು, ಜಲಾಶಯಗಳನ್ನು ನೋಡಿದನು. ॥ ೧೨॥ ಸುತ್ತಲೂ ಹಚ್ಚಹಸಿರಾಗಿದ್ದ ಪ್ರದೇಶಗಳನ್ನು, ಎಲ್ಲ ಋತುಗಳಲ್ಲಿಯೂ ಫಲ-ಪುಷ್ಪಭರಿತವಾದ ನಾನಾವಿಧ ವೃಕ್ಷಗಳಿಂದ ನಿಬಿಡವಾಗಿದ್ದ ರಮ್ಯವಾದ ಉದ್ಯಾನವನಗಳನ್ನು ವೀಕ್ಷಿಸಿದನು. ॥ ೧೩॥

ಸರ್ವಶುಭ ಲಕ್ಷಣ ಸಂಪನ್ನನಾದ ಹನುಮಂತನು ಇನ್ನು ಮುಂದೆ ಹೋಗಿ, ಕಮಲಗಳಿಂದಲೂ, ಕನ್ನೈದಿಲೆ ಗಳಿಂದಲೂ ಸಮಲಂಕೃತವಾಗಿದ್ದು, ಕಂದಕಗಳಿಂದ ಸುತ್ತುವರಿಯಲ್ಪಟ್ಟ ರಾವಣನಿಂದ ಪಾಲಿತವಾದ ಲಂಕಾಪಟ್ಟಣ

ಸೀತಾಪಹರಣಾರ್ಥೇನ ರಾವಣೇನ ಸುರಕ್ಷಿತಾಮ್ ।
ಸಮಂತಾದ್ವಿಚರದ್ಭಿಶ್ಚ ರಾಕ್ಷಸೈಃ ಉಗ್ರಧನ್ವಭಿಃ ॥ ೧೫॥

ಕಾಂಚನೇನಾವೃತಾಂ ರಮ್ಯಾಂ ಪ್ರಾಕಾರೇಣ ಮಹಾಪುರೀಮ್ ।
ಗೃಹೈಶ್ಚ ಗೃಹಸಂಕಾಶೈಃ ಶಾರದಾಂಬುದಸನ್ನಿಭೈಃ ॥ ೧೬॥

ಪಾಂಡರಾಭಿಃ ಪ್ರತೋಲೀಭಿರುಚ್ಚಾಭಿರಭಿಸಂವೃತಾಮ್ ।
ಅಟ್ಟಾಲಕಶತಾಕೀರ್ಣಾಂ ಪತಾಕಾಧ್ವಜಶೋಭಿತಾಮ್ ॥ ೧೭॥

ತೋರಣೈಃ ಕಾಂಚನೈರ್ದಿವ್ಯಾಂ ಲತಾಪಂಕ್ತಿವಿಚಿತ್ರಿತೈಃ ।
ದದರ್ಶ ಹನುಮಾನ್ ಲಂಕಾಂ ದಿವಿ ದೇವಪುರೀಮಿವ ॥ ೧೮॥

ಗಿರಿಮೂರ್ಧ್ನಿ ಸ್ಥಿತಾಂ ಲಂಕಾಂ ಪಾಂಡರೈರ್ಭವನೈಃ ಶುಭೈಃ।
ಸ ದದರ್ಶ ಕಪಿಃ ಶ್ರೀಮಾನ್‌ಪುರಮಾಕಾಶಗಂ ಯಥಾ ॥ ೧೯॥

ಪಾಲಿತಾಂ ರಾಕ್ಷಸೇಂದ್ರೇಣ ನಿರ್ಮಿತಾಂ ವಿಶ್ವಕರ್ಮಣಾ।
ಪ್ಲವಮಾನಮಿವಾಕಾಶೇ ದದರ್ಶ ಹನುಮಾನ್ ಪುರೀಮ್ ॥ ೨೦॥

ದಪ್ರಪ್ರಾಕಾರಜಘನಾಂ ವಿಪುಲಾಂಬುವನಾಂಬರಾಮ್ ।
ರತಕ್ಷ್ಮೋ ಶೂಲಕೇಶಾಂತಾಮಟ್ಟಾಲಕವತಂಸಕಾಮ್ ॥ ೨೧॥

ಮನಸೇವ ಕೃತಾಂ ಲಂಕಾಂ ನಿರ್ಮಿತಾಂ ವಿಶ್ವಕರ್ಮಣಾ ।
ದ್ವಾರಮುತ್ತರಮಾಸಾದ್ಯ ಚಿಂತಯಾಮಾಸ ವಾನರಃ ॥ ೨೨॥

ಕೈಲಾಸನಿಲಯ ಪ್ರಖ್ಯಮಾಲಿಖಂತಮಿವಾಂಬರಮ್ ।
ಡೀಯಮಾಣಮಿವಾಕಾಶಮುಚ್ಚೈರ್ಭವನಮೋತ್ತಮೈಃ ॥ ೨೩॥

ಸಂಪೂರ್ಣಾಂ ರಾಕ್ಷಸೈಶ್ವರ್ಯೈರ್ನಾಗೈರ್ಭೋಗವತೀಮಿವ ।
ಅಚಂಚ್ಯಾಂ ಸುಕೃತಾಂ ಸೃಷ್ಟಾಂ ಕುಬೇರಾಧ್ಯುಷಿತಾಂ ಪುರಾ ॥ ೨೪॥

ವನ್ನು ನೋಡಿದನು. ॥ ೧೪॥ ಸೀತಾಪಹರಣ ಕಾರಣದಿಂದ ಶ್ರೀರಾಮನಿಗೆ ಹೆದರಿದ್ದ ರಾವಣನಿಂದ ನಿಯುಕ್ತರಾದ ರಾಕ್ಷಸರು ಭಯಂಕರ ಧನುಸ್ಸುಗಳನ್ನು ಹಿಡಿದು ಸುತ್ತಲೂ ತಿರುಗುತ್ತಿದ್ದರು. ಹೀಗೆ ನಿರಂತರ ರಕ್ಷಿತವಾದ ಲಂಕೆಯನ್ನು ಹನುಮಂತನು ವೀಕ್ಷಿಸಿದನು. ॥ ೧೫॥ ಸುವರ್ಣಮಯವಾದ ಪ್ರಾಕಾರದಿಂದ ಸಮಾವೃತವಾಗಿದ್ದ ಮಹಾಪುರಿಯಾದ ಲಂಕೆಯಲ್ಲಿ ಶರತ್ಕಾಲದ ಬಿಳಿಯ ಮೇಘಗಳಂತೆ ಹಾಗೂ ಪರ್ವತಗಳಂತೆ ಅತಿ ದೊಡ್ಡದಾದ ಸೌಧಗಳಿದ್ದವು. ॥ ೧೬॥ ಆ ಲಂಕಾಪಟ್ಟಣದಲ್ಲಿ ಸ್ವಚ್ಛವಾದ, ವಿಶಾಲವಾದ, ಉದ್ದುದ್ದವಾಗಿದ್ದ ರಾಜಬೀದಿಗಳಿದ್ದವು. ಅಲ್ಲೆಡೆಗಳಲ್ಲಿಯೂ ಧ್ವಜಗಳೂ, ಪತಾಕೆಗಳೂ ಹಾರಾಡುತ್ತಿದ್ದುವು. ದಿವ್ಯವಾದ ಭಂಗಾರದ ತೋರಣಗಳಿಂದ ಶೋಭಾಯಮಾನವಾಗಿ ಕಾಣುತ್ತಿತ್ತು. ವಿಚಿತ್ರವಾದ ಲತೆಗಳ ಸಾಲುಗಳಿಂದ ಕೂಡಿದ್ದು ಸುಮನೋಹರವಾಗಿತ್ತು. ಆ ಲಂಕೆಯು ಸ್ವರ್ಗದ ಅಮರಾವತಿಯಂತೆ ಭಾಸವಾಗುತ್ತಿತ್ತು. ಅಂತಹ ಲಂಕೆಯನ್ನು ಆ ಕಪಿಶ್ರೇಷ್ಠನು ನೋಡಿದನು. ॥ ೧೭-೧೮॥ ತ್ರಿಕೂಟಪರ್ವತದ ಶಿವಿರದಲ್ಲಿದ್ದ ಶುಭಾವಹವಾದ, ಬಿಳಿಯ ಬಣ್ಣದ ಸೌಧಗಳಿಂದ ಸಮಾಕುಲವಾಗಿದ್ದ, ಆಕಾಶಗಗಿಯಂತೆ ಕಾಣುತ್ತಿದ್ದ ಸುಂದರ ವಾದ ಲಂಕಾನಗರವನ್ನು ಮಾರುತಿಯು ನೋಡಿದನು. ॥ ೧೯॥ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟದ್ದು, ರಾಕ್ಷಸರಾಜನಾದ ರಾವಣನಿಂದ ಪರಿಪಾಲಿಸಲ್ಪಡುತ್ತಿದ್ದು, ಆಕಾಶದಲ್ಲಿ ತೇಲುತ್ತಿರು ವುದೋ ಎಂಬಂತೆ ಕಾಣುತ್ತಿತ್ತು. ॥ ೨೦॥ ಆ ಲಂಕೆಯು ಕೋಟಿ-ಪ್ರಾಕಾರಗಳೇ ಕಟಿಪ್ರದೇಶ, ಸಾಗರ ಮತ್ತು ವನೋಪವನಗಳೇ ವಸ್ತ್ರರೂಪದಲ್ಲಿದ್ದು, ಶತಘ್ನಿ ಶೂಲಗಳೇ ಕೇಶಪಾಶಗಳು, ಉಪ್ಪರಿಗೆಗಳು ಕರ್ಣಾಧರಣಗಳಂತಿದ್ದ ಓರ್ವ ಸುಂದರಿಯಂತೆ ಭಾಸವಾಗಿತ್ತು. ವಿಶ್ವಕರ್ಮನು ಪೂರ್ಣ ಮನಸ್ಸಿಟ್ಟು ಆದನ್ನು ನಿರ್ಮಿಸಿದ್ದನು. ಹನುಮಂತನು ಅಂತಹ ಲಂಕಾಪಟ್ಟಣದ ಉತ್ತರದಿಕ್ಕಿನ ಮಹಾದ್ವಾರವನ್ನು ಸೇರಿ ಪೈದೇಹಿಯನ್ನು ನೋಡುವುದು ಹೇಗೆಂದು ಆಲೋಚಿಸ ತೊಡಗಿದನು. ॥ ೨೧-೨೨॥

ಲಂಕೆಯು ಕೈಲಾಸಶಿವಿರಕ್ಕೆ ಸಮಾನವಾಗಿದ್ದು ಆಕಾಶದಲ್ಲಿ ರೇಖೆಯನ್ನು ಎಳೆಯುತ್ತಿದ್ದೆಯೋ ಎಂಬಂತೆ ಕಾಣುತ್ತಿತ್ತು. ಎತ್ತರವಾದ ಶ್ರೇಷ್ಠಭವನಗಳನ್ನು ಹೊಂದಿದ್ದು ಆಕಾಶವನ್ನೇ ಎತ್ತಿಕೊಂಡು ಹೋಗುತ್ತಿರುವುದೋ ಎಂಬಂತೆ ಕೋಭಸುತ್ತಿತ್ತು. ॥ ೨೩॥ ಭೋಗವತಿ (ಪಾತಾಳಲೋಕ)ಯು ನಾಗಗಳಿಂದ ತುಂಬಿರುವಂತೆ, ಲಂಕಾಪಟ್ಟಣವು ಘೋರರೂಪಿಗಳಾದ ರಾಕ್ಷಸರಿಂದ ನಿಬಿಡವಾಗಿತ್ತು. ಅದು ವಿಶ್ವಕರ್ಮನಿಂದ ಸುಂದರವಾಗಿ ನಿರ್ಮಿಸಲ್ಪಟ್ಟು ಊಹೆಗೂ ನಿಲುಕದಷ್ಟು ಚೆಲುವಾಗಿತ್ತು. ಹಿಂದೆ ಆ ಪಟ್ಟಣವು ಕುಬೇರನವಾಸಸ್ಥಾನವಾಗಿತ್ತು. ॥ ೨೪॥ ವಿಷ ಸರ್ಪಗಳು ಗುಹೆಯನ್ನು ರಕ್ಷಿಸುವಂತೆ ಶೂಲ, ಪಟ್ಟಶಪಾಣಿಗಳಾದ, ಕೋರೆದಾಡೆಗಳುಳ್ಳ, ಶೂರರಾದ, ಘೋರ-ರೂಪಿಗಳಾದ

ದಂಷ್ಟ್ರಿಭಿರ್ಬಹುಭಿಃ ಶೂರೈಃ ಶೂಲಪಟ್ಟಿಶಪಾಣಿಭಿಃ।
ರಕ್ಷಿತಾಂ ರಾಕ್ಷಸೈರ್ಘೋರೈರ್ಗುಹಾಮಾಶೀವಿಷೈರಿವ ॥ ೨೫॥

ತಸ್ಯಾಶ್ಚ ಮಹತೀಂ ಗುಪ್ತಿಂ ಸಾಗರಂ ಚ ಸಮೀಕ್ಷ್ಯ ಸಃ।
ರಾವಣಂ ಚ ರಿಪುಂ ಘೋರಂ ಚಿಂತಯಾಮಾಸ ವಾನರಃ॥ ೨೬॥

ಆಗತ್ಯಾಪೀಹ ಹರಯೋ ಭವಿಷ್ಯಂತಿ ನಿರರ್ಥಕಾಃ।
ನ ಹಿ ಯುದ್ಧೇನ ವೈ ಲಂಕಾ ಶಕ್ಯಾ ಜೇತುಂ ಸುರೈರಪಿ ॥ ೨೭॥

ಇಮೇ ತು ವಿಷಮೇ ಮಗ್ನಾಃ ಲಂಕಾಂ ರಾವಣಪಾಲಿತಾಮ್।
ಪ್ರಾಪ್ತಾಪಿ ಸ ಮಹಾಬಾಹುಃ ಕಿಂ ಕರಿಷ್ಯತಿ ರಾಘವಃ ॥ ೨೮॥

ಅವಕಾಶೋ ನ ಸಾನ್ತ್ವಸ್ಯ ರಾಕ್ಷಸೇಷ್ವಭಿಗಮ್ಯತೇ।
ನ ದಾನಸ್ಯ ನ ಭೇದಸ್ಯ ನೈವ ಯುದ್ಧಸ್ಯ ದೃಶ್ಯತೇ ॥ ೨೯॥

ಚತುರ್ಣಾಮೇವ ಹಿ ಗತಿರ್ವಾನರಾಣಾಂ ಮಹಾತ್ಮನಾಮ್।
ವಾಲಿಪುತ್ರಸ್ಯ ನೀಲಸ್ಯ ಮಮ ರಾಜ್ಞಶ್ಚ ಧೀಮತಃ ॥ ೩೦॥

ಯಾವಜ್ಜಾನಾಮಿ ವೈದೇಹೀಂ ಯದಿ ಜೀವತಿ ವಾ ನ ವಾ।
ತತ್ಕೃತ ಚಿಂತಯಿಷ್ಯಾಮಿ ದೃಷ್ಟ್ವಾ ತಾಂ ಜನಕಾತ್ಮಜಾಮ್ ॥ ೩೧॥

ತತಃ ಸ ಚಿಂತಯಾಮಾಸ ಮುಹೂರ್ತಂ ಕಪಿಕುಂಜರಃ।
ಗಿರಿಶೃಂಗೇ ಸ್ಥಿತಸ್ತಸ್ಮಿನ್ ರಾಮಸ್ಯಾಭ್ಯುದಯೇ ರತಃ ॥ ೩೨॥

ಅನೇನ ರೂಪೇಣ ಮಯಾ ನ ಶಕ್ಯಾ ರಕ್ಷಸಾಂ ಪುರೀ।
ಪ್ರವೇಷ್ಟುಂ ರಾಕ್ಷಸೈರ್ಗುಪ್ತಾ ಕ್ರೂರೈರ್ಬಲಸಮನ್ವಿತೈಃ ॥ ೩೩॥

ಉಗ್ರೌಜಸೋ ಮಹಾವೀರ್ಯಾ ಬಲವಂತಶ್ಚ ರಾಕ್ಷಸಾಃ।
ವಂಚನೀಯಾ ಮಯಾ ಸರ್ವೇ ಜಾನಕೀಂ ಪರಿಮಾರ್ಗತಾ॥ ೩೪॥

ಲಕ್ಷ್ಯಾಲಕ್ಷ್ಯೇಣ ರೂಪೇಣ ರಾತ್ರೌ ಲಂಕಾಪುರೀ ಮಯಾ।
ಪ್ರವೇಷ್ಟುಂ ಪ್ರಾಪ್ತಕಾಲೋ ಮೇ ಕೃತ್ಯಂ ಸಾಧಯಿತುಂ ಮಹತ್ ॥ ೩೫॥

ರಾಕ್ಷಸರು ಆ ಪಟ್ಟಣವನ್ನು ರಕ್ಷಿಸುತ್ತಿದ್ದರು. ॥ ೨೫॥ ಅಂತಹ ಸುಭದ್ರವಾದ ರಕ್ಷಣೆಯನ್ನು ಪಟ್ಟಣದ ಸುತ್ತಲೂ ಇದ್ದ ಸಮುದ್ರವನ್ನು ವೀಕ್ಷಿಸುತ್ತಾ ಕಪಿವರನು ರಾವಣನು ಓರ್ವ ಭಯಂಕರ ಶತ್ರುವೆಂದು ಗಮನಿಸಿ ಹೀಗೆ ಆಲೋಚಿಸತೊಡಗಿದನು. ॥ ೨೬॥

''ಕಪಿವೀರರು ಕಷ್ಟಪಟ್ಟುಕೊಂಡು ಇಲ್ಲಿಗೆ ಬಂದರೂ ಪ್ರಯೋಜನವಾಗಲಾರದು. ಏಕೆಂದರೆ, ಯುದ್ಧಮಾಡಿ ಲಂಕೆಯನ್ನು ಗೆಲ್ಲುವುದು ದೇವತೆಗಳಿಗೂ ಸಾಧ್ಯವಾಗ ಲಾರದು. ॥ ೨೭॥ ಈ ನಗರಿಯ ಸಮತಟ್ಟಾದ ಸ್ಥಾನದಲ್ಲಿವೆ. ಅತ್ಯಂತ ದುರ್ಗಮವಾಗಿದೆ. ಮಹಾವೀರನಾದ ರಾವಣನೇ ಇದನ್ನು ರಕ್ಷಿಸುತ್ತಿದ್ದಾನೆ. ಇಂತಹ ಅಭೇದ್ಯವಾದ, ಅತ್ಯಂತ ದುರ್ಗಮವಾದ ಸ್ಥಳಕ್ಕೆ ಬಂದರೂ ಮಹಾಬಾಹುವಾದ ಶ್ರೀರಾಮನೂ ಸಹ ಏನು ಮಾಡಬಲ್ಲನು? ॥ ೨೮॥ ಈ ರಾಕ್ಷಸರನ್ನು ಜಯಿಸುವ ವಿಷಯದಲ್ಲಿ ಇವರು ಅಸುರೀ ಪ್ರಕೃತಿಯ ಕಾರಣ ಸಾಮೋಪಾಯನಡೆಯದು. ಇವರು ಅತುಲ ಸಂಪತ್ತನ್ನು ಪಡೆದವರಾದ ಕಾರಣ ದಾನೋಪಾಯವು ಸಾಗದು. ಬಲದರ್ಪಿತರಾದ ಇವರೊಡನೆ ಭೇದೋಪಾಯಕ್ಕೂ ಅವಕಾಶ ವಿಲ್ಲ. ಪರಾಕ್ರಮಶಾಲಿಗಳಾದ ಇವರೊಡನೆ ಯುದ್ಧಮಾಡಿ ಗೆಲ್ಲುವುದಂತೂ ಸಾಧ್ಯವಾಗದ ವಿಷಯ (ಹಾಗಿರುವಾಗ ಚತುರೋಪಾಯಗಳು ಇವರಲ್ಲಿ ನಿರರ್ಥಕವೇ). ॥ ೨೯॥ ವಾಲಿಪುತ್ರನಾದ ಅಂಗದ, ನೀಲ, ನಮ್ಮ ರಾಜನಾದ ಧೀಮಂತ ಸುಗ್ರೀವ ಮತ್ತು ನಾನು, ಹೀಗೆ ಬಲಿಷ್ಠರಾದ ವೇಗವುಳ್ಳ ನಾಲ್ವರಿಗೆ ಮಾತ್ರ ಇಲ್ಲಿಗೆ ಬರಲು ಸಾಧ್ಯವಾದೀತು. ಆದುದರಿಂದ ಸೈನ್ಯವನ್ನು ಇಲ್ಲಿಗೆ ಕರತರುವ ಸಾಧ್ಯತೆಯೇ ಇಲ್ಲ. ॥ ೩೦॥ ಹೇಗಾದರೂ ಮಾಡಿ ವೈದೇಹಿಯು ಜೀವಿಸಿರುವಳೇ? ಇಲ್ಲವೇ? ಎಂಬುದನ್ನು ಮೊದಲಿಗೆ ತಿಳಿಯ ಬೇಕು. ಸೀತಾದೇವಿಯನ್ನು ಕಂಡಬಳಿಕ ಮುಂದೇನು ಮಾಡಬೇಕೆಂಬುದನ್ನು ಆಲೋಚಿಸುವುದು ಯಕ್ತವು.'' ॥ ೩೧॥

ಬಳಿಕ ಶ್ರೀರಾಮನ ಅಭ್ಯುದಯ ಕಾರ್ಯಸಾಧನೆಯಲ್ಲಿ ನಿರತನಾದ ಕಪಿಶ್ರೇಷ್ಠನಾದ ಹನುಮಂತನು ಆ ಪರ್ವತ ಶಿಖರದಲ್ಲಿ ನಿಂತು ಮುಹೂರ್ತಕಾಲದವರೆಗೆ ನಾನಾ ರೀತಿಯಿಂದ ಯೋಚಿಸುತ್ತಲೇ ಇದ್ದನು. ॥ ೩೨॥

''ಮಹಾಕ್ರೂರಿಗಳಾದ, ಬಲಿಷ್ಠರಾದ ರಾಕ್ಷಸರಿಂದ ರಕ್ಷಿತವಾದ ಈ ರಾಕ್ಷಸನಗರಿಯನ್ನು ಈಗ ನಾನು ತಾಳಿರುವ ಆಕಾರದಿಂದಲೇ ಪ್ರವೇಶಿಸುವುದು ಅಸಾಧ್ಯವು. ॥ ೩೩॥ ಜಾನಕಿಯನ್ನು ಹುಡುಕಲು ಹೊರಟಿರುವ ನಾನು ಭಯಂಕರ ವಾದ ತೇಜಸ್ಸಿನಿಂದ ಕೂಡಿರುವ, ಮಹಾಪರಾಕ್ರಮಿಗಳಾದ, ಬಲಿಷ್ಠರಾದ ರಾಕ್ಷಸರ ಕಣ್ಣುತಪ್ಪಿಸಿ ಮುಂದರಿಯ ಬೇಕು. ॥ ೩೪॥ ಲಕ್ಷ್ಯ (ಕಂಡು ಬರುವ) ರೂಪದಿಂದ ಹೊದರೆ ನನ್ನನ್ನು ರಾಕ್ಷಸರು ಮುತ್ತುವರು. ಅಲಕ್ಷ್ಯ (ಕಾಣದಿರುವ) ರೂಪದಿಂದ ಸೀತಾನ್ವೇಷಣೆ ಮಾಡಲು ಸಾಧ್ಯವಾಗದು. ಅದರಿಂದ ಕಂಡು-ಕಾಣದಂತಹ ಸೂಕ್ಷ್ಮರೂಪವನ್ನು

ತಾಂ ಪುರೀಂ ತಾದೃಶೀಂ ದೃಷ್ಟ್ವಾ ದುರಾಧರ್ಷಾಂ ಸುರಾಸುರೈಃ ।
ಹನೂಮಾಂಶ್ಚಿಂತಯಾಮಾಸ ವಿನಿಷ್ಪತ್ಯ ಮುಹುರ್ಮುಹುಃ ॥ ೩೬॥

ಕೇನೋಪಾಯೇನ ಪಶ್ಯೇಯಂ ಮೈಥಿಲೀಂ ಜನಕಾತ್ಮಜಾಮ್ ।
ಅದೃಷ್ಟೋ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ ॥ ೩೭॥

ನ ವಿನಶ್ಯೇತ್ ಕಥಂ ಕಾರ್ಯಂ ರಾಮಸ್ಯ ವಿದಿತಾತ್ಮನಃ ।
ವಿಕ್ರಮೇಕಶ್ಚ ಪಶ್ಯೇಯಂ ರಹಿತೇ ಜನಕಾತ್ಮಜಾಮ್ ॥ ೩೮॥

ಭೂತಾಶ್ಚಾರ್ಥಾ ವಿಪದ್ಯಂತೇ ದೇಶಕಾಲವಿರೋಧಿತಾಃ ।
ವಿಕ್ಲವಂ ದೂತಮಾಸಾದ್ಯ ತಮಃ ಸೂರ್ಯೋದಯೇ ಯಥಾ ॥ ೩೯॥

ಅರ್ಥಾನರ್ಥಾಂತರೇ ಬುದ್ಧಿರ್ನಿಶ್ಚಿತಾಪಿ ನ ಶೋಭತೇ ।
ಘಾತಯಂತಿ ಹಿ ಕಾರ್ಯಾಣಿ ದೂತಾಃ ಪಂಡಿತಮಾನಿನಃ ॥ ೪೦॥

ನ ವಿನಶ್ಯೇತ್ ಕಥಂ ಕಾರ್ಯಂ ವೈಕ್ಲವ್ಯಂ ನ ಕಥಂ ಭವೇತ್ ।
ಲಂಘನಂ ಚ ಸಮುದ್ರಸ್ಯ ಕಥಂ ನು ನ ಭವೇದ್ವೃಥಾ ॥ ೪೧॥

ಮಯಿ ದೃಷ್ಟೇ ತು ರಕ್ಷೋಭೀ ರಾಮಸ್ಯ ವಿದಿತಾತ್ಮನಃ ।
ಭವೇದ್ವ್ಯರ್ಥಮಿದಂ ಕಾರ್ಯಂ ರಾವಣಾನರ್ಥಮಿಚ್ಛತಃ ॥ ೪೨॥

ನ ಹಿ ಶಕ್ಯಂ ಕ್ವಚಿತ್ ಸ್ಥಾತುಮವಿಜ್ಞಾತೇನ ರಾಕ್ಷಸೈಃ ।
ಅಪಿ ರಾಕ್ಷಸರೂಪೇಣ ಕಿಮುತಾನ್ಯೇನ ಕೇನಚಿತ್ ॥ ೪೩॥

ವಾಯುರಪ್ಯತ್ರ ನಾಜ್ಞಾತಶ್ಚರೇದಿತಿ ಮತಿರ್ಮಮ ।
ನ ಹ್ಯಸ್ಯವಿದಿತಂ ಕಿಂಚಿದ್ರಾಕ್ಷಸಾನಾಂ ಬಲೀಯಸಾಮ್ ॥ ೪೪॥

ಇಹಾಹಂ ಯದಿ ತಿಷ್ಠಾಮಿ ಸ್ವೇನ ರೂಪೇಣ ಸಂವೃತಃ ।
ವಿನಾಶಮುಪಯಾಸ್ಯಾಮಿ ಭರ್ತುರರ್ಥಶ್ಚ ಹೀಯತೇ ॥ ೪೫॥

ತದಹಂ ಸ್ವೇನ ರೂಪೇಣ ರಜನ್ಯಾಂ ಹ್ರಸ್ವತಾಂ ಗತಃ ।
ಲಂಕಾಮಭಿಗಮಿಷ್ಯಾಮಿ ರಾಘವಸ್ಯಾರ್ಥಸಿದ್ಧಯೇ ॥ ೪೬॥

ಧರಿಸಿದರೆ ರಾತ್ರಿಯಲ್ಲಿ ಲಂಕಾಪಟ್ಟಣವನ್ನು ಪ್ರವೇಶಿಸಲು ಸಾಧ್ಯವಾಗಬಹುದು. ಸೀತಾನ್ವೇಷಣೆಯ ಮಹಾಕಾರ್ಯವನ್ನು ಸಾಧಿಸಲು ಮುಂದಿರುವ ರಾತ್ರಿಕಾಲವೇ ಪ್ರಶಸ್ತವಾಗಿದೆ.'' ॥ ೩೫॥

ಸುರಾಸುರರಿಂದಲೂ ಜಯಿಸಲು ಆಸಾಧ್ಯವಾಗಿದ್ದ, ಅತ್ಯಂತ ದುರ್ಭೇದ್ಯವಾದ ಲಂಕೆಯನ್ನು ನೋಡಿ ಹನುಮಂತನು ಬಾರಿ- ಬಾರಿಗೂ ನಿಟ್ಟುಸಿರುಬಿಡುತ್ತಾ ಹೀಗೆ ಆಲೋಚಿಸ ತೊಡಗಿ ದನು. ॥ ೩೬॥'' ದುರಾತ್ಮನಾದ ರಾಕ್ಷಸೇಂದ್ರನಾದ ರಾವಣನ ಕಣ್ಣಿಗೆ ಬೀಳದಂತೆ ಜನಕನ ಮಗಳಾದ ಜಾನಕಿಯನ್ನು ನಾನು ಯಾವ ಉಪಾಯದಿಂದ ಹುಡುಕಲಿ? ॥ ೩೭॥ ಅತ್ಯವಿದನಾದ ಶ್ರೀರಾಮನ ಕಾರ್ಯವು ಕೆಟ್ಟು ಹೋಗದ ರೀತಿಯಲ್ಲಿ ನಾನು ಹೇಗೆ ನಡೆದುಕೊಳ್ಳಲಿ? ನಾನೊಬ್ಬನೇ ವಿಕಾಂತದಲ್ಲಿ ಜನಕನ ಮಗಳಾದ ಸೀತಾದೇವಿಯೊಬ್ಬಳನ್ನೇ ಹೇಗೆ ಸಂಧಿಸಲಿ? ॥ ೩೮॥

ಸೂರ್ಯೋದಯವಾದೊಡನೆಯೇ ವಿನಾಶಹೊಂದುವ ಕತ್ತಲೆಯಂತೆ, ವಿವೇಚನಾ ರಹಿತನಾದ ದೂತನಿಗೊಪ್ಪಿಸಿದ ಕಾರ್ಯವು ಸಿದ್ಧಿಸುವುದರಲ್ಲಿದ್ದರೂ, ದೇಶ-ಕಾಲಕ್ಕೆ ವಿಪರೀತ ವಾಗಿ ವ್ಯವಹರಿಸುವುದರಿಂದ ಕೆಟ್ಟುಹೋಗುತ್ತದೆ. ॥ ೩೯॥ ಕಾರ್ಯಾಕಾರ್ಯಗಳ ವಿಷಯದಲ್ಲಿ ರಾಜನು ಮಂತ್ರಿಗಳೊಡನೆ ಸಮಾಲೋಚಿಸಿ ನಿರ್ಣಯಿಸಿದ ಬುದ್ಧಿಯೂ ಆವಿವೇಕಿಯಾದ ದೂತನಲ್ಲಿ ಶೋಭಿಸುವುದಿಲ್ಲ (ಪರಿಣಾಮಕಾರಿಯಾಗುವುದಿಲ್ಲ). ತಾನೇ ಮಹಾಪಂಡಿತ ನೆಂದು ಭಾವಿಸಿ ಸ್ವೆಚ್ಛೆಯಿಂದ ಕಾರ್ಯಮಾಡುವ ದೂತನು ಒಡೆಯನ ಕಾರ್ಯವನ್ನು ಹಾಳುಮಾಡುತ್ತಾನೆ. ॥ ೪೦॥

ಶ್ರೀರಾಮನ ಕಾರ್ಯವು ಹಾಳಾಗದ ರೀತಿಯಿಂದ ವರ್ತಿಸಬೇಕು. ಇಂತಹ ಸಂದರ್ಭದಲ್ಲಿ ನನಗೆ ಭ್ರಮೆ ಉಂಟಾಗಬಾರದು. ನಾನು ಸಮುದ್ರವನ್ನು ಠಾಟ ಬಂದುದು ವ್ಯರ್ಥವಾಗಬಾರದು. ॥ ೪೧॥ ನನ್ನನ್ನೇನಾದರೂ ರಾಕ್ಷಸರು ನೋಡಿಬಿಟ್ಟರೆ ರಾವಣನ ವಿನಾಶವನ್ನೆ ಬಯಸಿರುವ ಪ್ರಜ್ಞಾಶಾಲಿಯಾದ ಶ್ರೀರಾಮನ ಸೀತಾನ್ವೇಷಣೆಯ ಕಾರ್ಯವು ವ್ಯರ್ಥವಾದೀತು. ರಾಕ್ಷಸರಿಗೆ ತಿಳಿಯದಂತೆ ಈ ಲಂಕೆಯಲ್ಲಿ ಎಲ್ಲಿಯೂ ಇರಲು ಸಾಧ್ಯವಿಲ್ಲ. ರಾಕ್ಷಸರ ರೂಪವನ್ನೇ ಧರಿಸಿದರೂ ಇಲ್ಲಿರಲು ಸಾಧ್ಯವಾಗದಿದ್ದಾಗ ಬೇರೆಯ ರೂಪದಿಂದ ನಾನಿಲ್ಲಿ ಇರಲು ಹೇಗೆ ಸಾಧ್ಯವಾದೀತು? ॥ ೪೨-೪೩॥ ಇಲ್ಲಿ ವಾಯುವೂ ಕೂಡ ರಾಕ್ಷಸರಿಗೆ ತಿಳಿಯದಂತೆ ಚಲಿಸಲು ಸಾಧ್ಯವಿಲ್ಲ. ಈ ಲಂಕಾಪಟ್ಟಣದಲ್ಲಿ ಭಯಂಕರರಾದ ರಾಕ್ಷಸರಿಗೆ ತಿಳಿಯದೇ ಇರುವ ಯಾವ ಸ್ಥಾನವೂ ಇಲ್ಲ ಎಂದು ನಾನು ತಿಳಿಯುತ್ತೇನೆ. ನಾನು ಈ ನನ್ನ ರೂಪದಿಂದಲೇ ಇದ್ದರೆ ಖಂಡಿತವಾಗಿ ವಿನಾಶಹೊಂದ ಬಹುದು. ನನಗಿಂತಲೂ ಹೆಚ್ಚಾದ ಸ್ವಾಮಿಕಾರ್ಯವೂ ಹಾಳಾಗಬಹುದು. ॥ ೪೪-೪೫॥ ಆದುದರಿಂದ ಈ ರಾತ್ರಿಯಲ್ಲಿ ಚಿಕ್ಕದಾದ ಆಕಾರವನ್ನು ತಳೆದು ಈ ಕಪಿರೂಪದಿಂದಲೇ ಶ್ರೀರಾಮನ ಕಾರ್ಯಸಿದ್ಧಿಗಾಗಿ ಲಂಕೆಯನ್ನು ಪ್ರವೇಶಿಸುತ್ತೇನೆ. ॥ ೪೬॥ ಯಾರಿಂದಲೂ ಪ್ರವೇಶಿಸಲು ಅಶಕ್ಯವಾದ ರಾವಣನ ಈ ಪಟ್ಟಣವನ್ನು ನಾನು

ರಾವಣಸ್ಯ ಪುರೀಂ ರಾತ್ರೌ ಪ್ರವಿಶ್ಯ ಸುದುರಾಸದಾಮ್ ।
ವಿಚಿನ್ವನ್ ಭವನಂ ಸರ್ವಂ ದ್ರಕ್ಷ್ಯಾಮಿ ಜನಕಾತ್ಮಜಾಮ್ ॥ ೪೭॥

ಇತಿ ಸಂಚಿಂತ್ಯ ಹನುಮಾನ್ ಸೂರ್ಯಸ್ಯಾಸ್ತಮಯಂ ಕಪಿಃ ।
ಅಚಕಾಂಕ್ಷೇ ತದಾ ವೀರೋ ವೈದೇಹ್ಯಾ ದರ್ಶನೋತ್ಸುಕಃ ॥ ೪೮॥

ಸೂರ್ಯೇ ಚಾಸ್ತಂ ಗತೇ ರಾತ್ರೌ ದೇಹಂ ಸಂಕ್ಷಿಪ್ಯ ಮಾರುತಿಃ ।
ದೃಷ್ಟದಂಶಕಮಾತ್ರಃ ಸನ್ ಬಭೂವಾದ್ಭುತದರ್ಶನಃ ॥ ೪೯॥

ಪ್ರದೋಷಕಾಲೇ ಹನುಮಾನ್ನುರ್ಗಮುತ್ಸೃಜ್ಯ ವೀರ್ಯವಾನ್ ।
ಪ್ರವಿವೇಶ ಪುರೀಂ ರಮ್ಯಾಂ ಸುವಿಭಕ್ತಮಹಾಪಥಾಮ್ ॥ ೫೦॥

ಪ್ರಾಸಾದಮಾಲಾವಿತತಾಂ ಸ್ತಂಭೈಃ ಕಾಂಚನರಾಜತೈಃ ।
ಶಾತಕುಂಭಪಟೈರ್ಜಾಲೈರ್ಗಂಧರ್ವನಗರೋಪಮಾಮ್ ॥ ೫೧॥

ಸಪ್ತಭೌಮಾಷ್ಟಭೌಮೈಶ್ಚ ಸ ದದರ್ಶ ಮಹಾಪುರೀಂ ।
ತಲೈಃ ಸ್ಫಟಿಕಸಂಕೀರ್ಣೈಃ ಕಾರ್ತಸ್ವರವಿಭೂಷಿತೈಃ ॥ ೫೨॥

ವೈಡೂರ್ಯಮಣಿಚಿತ್ರೈಶ್ಚ ಮುಕ್ತಾಜಾಲವಿರಾಜಿತೈಃ ।
ತಲೈಃ ಶುಕುಭಿರೇ ತಾನಿ ಭವನಾನ್ಯತ್ರ ರಕ್ಷಸಾಮ್ ॥ ೫೩॥

ಕಾಂಚನಾನಿ ವಿಚಿತ್ರಾಣಿ ತೋರಣಾನಿ ಚ ರಕ್ಷಸಾಮ್ ।
ಲಂಕಾಮುದ್ಯೋತಯಾಮಾಸುಃ ಸರ್ವತಃ ಸಮಲಂಕೃತಾಮ್ ॥ ೫೪॥

ಆಚಿತ್ಯಾಮಮೃತಾಕಾರಾಂ ದೃಷ್ಟ್ವಾ ಲಂಕಾಂ ಮಹಾಕಪಿಃ ।
ಆಸೀದ್ವಿಷಣ್ಣೋ ಹೃಷ್ಟಶ್ಚ ವೈದೇಹ್ಯಾ ದರ್ಶನೋತ್ಸುಕಃ ॥ ೫೫॥

ಸ ಪಾಂಡರೋದ್ದಿದ್ಧ ವಿಮಾನ ಮಾಲಿನೀಂ
ಮಹಾರ್ಹಜಾಂಬೂನದಜಾಲತೋರಣಾಂ ।
ಯಶಸ್ವಿನೀಂ ರಾವಣಬಾಹುಪಾಲಿತಾಂ
ಕ್ಷಪಾಚರೈರ್ಭೀಮಬಲೈಃ ಸಮಾವೃತಾಮ್ ॥ ೫೬॥

ಚಂದ್ರೋಽಪಿ ಸಾಚಿವ್ಯಮಿವಾಸ್ಯ ಕುರ್ವನ್
ತಾರಾಗಣೈರ್ಮಧ್ಯಗತೋ ವಿರಾಜನ್ ।
ಜ್ಯೋತ್ಸ್ನಾವಿತಾನೇನ ವಿತತ್ಯ ಲೋಕಮ್
ಉತ್ತಿಷ್ಠತೇ ನೈಕಸಹಸ್ರರಶ್ಮಿಃ ॥ ೫೭॥

ರಾತ್ರಿಯಲ್ಲಿ ಪ್ರವೇಶಿಸಿ, ಇಲ್ಲಿರುವ ಎಲ್ಲ ಭವನಗಳನ್ನು ಒಳಹೊಕ್ಕು ಸೀತಾದೇವಿಯನ್ನು ಹುಡುಕುತ್ತೇನೆ.'' ॥ ೪೭॥

ವೀರನಾದ, ಕಪಿಶ್ರೇಷ್ಠನಾದ ಹನುಮಂತನು ಹೀಗೆ ನಿಶ್ಚಯಿಸಿ, ವೈದೇಹಿಯನ್ನು ನೋಡಬೇಕೆನ್ನುವ ಉತ್ಸುಕತೆಯಿಂದ ಸೂರ್ಯನು ಅಸ್ತನಾಗುವುದನ್ನೇ ನಿರೀಕ್ಷಿಸುತ್ತಿದ್ದನು. ಸೂರ್ಯನು ಅಸ್ತಮಿಸುತ್ತಲೇ ಮಾರುತಿಯು ಆ ರಾತ್ರಿಯಲ್ಲಿ ತನ್ನ ದೇಹವನ್ನು ಸಂಕ್ಷೇಪಿಸಿಕೊಂಡು ಬೆಕ್ಕಿನಷ್ಟು ಸಣ್ಣಗಾತ್ರನಾದನು. ಆಷ್ಟು ಚಿಕ್ಕವನಾಗಿದ್ದರೂ ಅವನು ಪರಮಾದ್ಭುತವಾಗಿ ಕಾಣುತ್ತಿದ್ದನು. ॥ ೪೮-೪೯॥ ಪ್ರದೋಷಕಾಲವಾಗುತ್ತಲೇ ವೀರ್ಯವಂತನಾದ ಹನುಮಂತನು ಶೀಘ್ರವಾಗಿ ಮೇಲಕ್ಕೆ ನೆಗೆದು, ಸರಿಯಾಗಿ ವಿಂಗಡಿಸಲ್ಪಟ್ಟ ರಾಜಮಾರ್ಗಗಳುಳ್ಳ ಲಂಕಾಪಟ್ಟಣವನ್ನು ಪ್ರವೇಶಿಸಿದನು. ॥ ೫೦ ॥

ಆ ಲಂಕಾಪಟ್ಟಣದಲ್ಲಿ ಪ್ರಾಸಾದಗಳು ಸಾಲು-ಸಾಲಾಗಿ ಶೋಭಿಸುತ್ತಿದ್ದವು. ಆ ಪ್ರಾಸಾದಗಳು ಚಿನ್ನದ ಮತ್ತು ಬೆಳ್ಳಿಯ ಕಂಬಗಳಿಂದಲೂ, ಸುವರ್ಣಮಯವಾದ ಜಾಲರಿಗಳಿಂದಲೂ ಅಲಂಕೃತವಾಗಿದ್ದು, ಗಂಧರ್ವ ನಗರದಂತೆ ಆದ್ಭುತವಾಗಿತ್ತು. ॥ ೫೧॥ ಆ ನಗರದ ಭವನಗಳು ಸುವರ್ಣಭೂಷಿತವಾಗಿದ್ದು, ವಿಳೆಂಟು ಅಂತಸ್ತುಗಳಿಂದ ಶೋಭಿಸುತ್ತಿದ್ದುವು. ಆ ಮಹಾಸೌಧಗಳ ಹೊರಾಂಗಣಗಳು ಸ್ಫಟಿಕಮಣಿಗಳಿಂದಲೂ, ಚಿನ್ನದಿಂದಲೂ ವ್ಯಾಪ್ತವಾಗಿದ್ದುವು. ಅಂತಹ ಮಹಾ ನಗರವನ್ನು ಹನುಮಂತನು ನೋಡಿದನು. ॥ ೫೨॥ ಆ ಲಂಕಾಪುರಿಯಲ್ಲಿ ರಾಕ್ಷಸರ ಭವನಗಳ ಭೂ ಭಾಗವು ವೈಡೂರ್ಯ ಮಣಿಗಳಿಂದ ಚಿತ್ರಿತವಾಗಿತ್ತು. ಮುತ್ತಿನ ಜಾಲರಿಗಳಿಂದ ವಿಭೂಷಿತವಾಗಿತ್ತು. ॥ ೫೩॥ ರಾಕ್ಷಸರು ವಾಸಿಸುತ್ತಿದ್ದ ಲಂಕೆಯಲ್ಲಿ ಗೋಪುರಗಳು ಭಂಗಾರದಿಂದ ರಚಿತವಾಗಿದ್ದುವು. ಚಿತ್ರ-ವಿಚಿತ್ರವಾದ ಅಲಂಕೃತವಾದ ಮುಂಬಾಗಿಲುಗಳು ಲಂಕಾಪಟ್ಟಣವನ್ನೇ ಬೆಳಗುತ್ತಿದ್ದುವು. ॥ ೫೪॥ ಊಹಿಸಲು ಅಸಾಧ್ಯವಾದ, ಅದ್ಭುತಾಕಾರವಾಗಿದ್ದ ಲಂಕೆಯನ್ನು ನೋಡಿ ಹನುಮಂತನು ವಿಷಾದಗೊಳಗಾದನು. ಆದರೆ ವೈದೇಹಿ ದರ್ಶನದ ಕೂತಹಲಿಯಾದ ಅವನು ಹೆಚ್ಚಾಗಿ ಹರ್ಷಿತನಾದನು. ॥ ೫೫॥ ರಾವಣೇಶ್ವರನ ಭುಜಬಲದಿಂದ ಪಾಲಿಸಲ್ಪಡುತ್ತಿದ್ದ ಆ ಲಂಕೆಯು ವಿಳೆಂಟು ಅಂತಸ್ತುಗಳಿಂದ ಕೂಡಿದ್ದು, ಬೆಳುಪಾದ ಭವನಗಳ ಸಾಲುಗಳಿಂದ ಯುಕ್ತವಾಗಿತ್ತು. ಸುವರ್ಣಮಯ ತೋರಣಗಳಿಂದಲೂ, ಜಾಲರಿಗಳಿಂದಲೂ ಸಮಲಂಕೃತವಾಗಿತ್ತು. ಭೀಮಬಲರಾದ ರಾಕ್ಷಸರಿಂದ ಸಮಾವೃತವಾಗಿದ್ದ ಆ ಯಶೋವರ್ಧಕವಾದ ಲಂಕೆಯನ್ನು ಹನುಮಂತನು ನೋಡಿದನು. ॥ ೫೬॥ ನಕ್ಷತ್ರಗಳ ಸಮೂಹಗಳೊಡನೆ ಹುಟ್ಟಿ ಅವುಗಳ ಮಧ್ಯದಲ್ಲಿ ವಿರಾಜಿಸುತ್ತಿದ್ದ, ಅನೇಕ ಸಹಸ್ರ ರಶ್ಮಿಗಳಿಂದ ಯುಕ್ತನಾದ ಚಂದ್ರನು ಕೂಡ ಹನುಮಂತನಿಗೆ ಸಹಾಯ ಮಾಡುವ ಇಚ್ಛೆಯಿಂದ ಎಲ್ಲೆಡೆಗಳಲ್ಲಿಯೂ ಬೆಳದಿಂಗಳನ್ನು ಹೊರ

ಶಂಖಪ್ರಭಂ ಕ್ಷೀರಮೃಣಾಲವರ್ಣಮ್
ಉದ್ಗಚ್ಛಮಾನಂ ವ್ಯವಭಾಸಮಾನಮ್ ।
ದದರ್ಶ ಚಂದ್ರಂ ಸ ಕಪಿಪ್ರವೀರಃ
ಪೋಪ್ಲೂಯಮಾನಂ ಸರಸೀವ ಹಂಸಮ್ ॥ ೫೮॥

ಚೆಲ್ಲುತ್ತಾ ಉದಯಿಸಿದನು. ॥ ೫೭॥ ಆಗ ತಾನೇ ಉದಯಿಸಿದ್ದ ಚಂದ್ರನು ಶಂಖದ ಪ್ರಭೆಯಂತೆ ಪ್ರಭಾಯುಕ್ತವಾಗಿದ್ದು, ಹಾಲಿನಂತೆ ಬೆಳ್ಳಗಿದ್ದು, ತಾವರೆದಂಟಿನ ಬಣ್ಣದಿಂದ ಪ್ರಕಾಶಿಸುತ್ತಿದ್ದನು. ಸರೋವರದಲ್ಲಿ ಹಂಸಪಕ್ಷಿಯು ತೇಲಿಕೊಂಡು ಹೋಗುವಂತೆ, ನಿರ್ಮಲವಾದ ಆಕಾಶದಲ್ಲಿ ತೇಲಿಕೊಂಡು ಹೋಗುತ್ತಿದ್ದನು. ಅಂತಹ ನಯನ ಮನೋಹರನಾದ ಚಂದ್ರನನ್ನು ಹನುಮಂತನು ನೋಡಿದನು. ॥ ೫೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ದ್ವಿತೀಯಃ ಸರ್ಗಃ ॥ ೨ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಎರಡನೇ ಸರ್ಗವು ಮುಗಿಯಿತು.

* * *

ಮೂರನೆಯ ಸರ್ಗ

ಹನುಮಂತನು ಲಂಕಾಧಿದೇವತೆಯನ್ನು ದಂಡಿಸಿದುದು, ಲಂಕೆಯನ್ನು ಪ್ರವೇಶಿಸಿದುದು–

ಸ ಲಂಬಶಿಖರೇ ಲಂಬೇ ಲಂಬತೋಯದಸಂನಿಭೇ ।
ಸತ್ತ್ವಮಾಶ್ರಾಯ ಮೇಧಾವೀ ಹನುಮಾನ್ ಮಾರುತಾತ್ಮಜಃ ॥ ೧॥

ನಿಶಿ ಲಂಕಾಂ ಮಹಾಪತ್ತ್ರೋ ವಿವೇಶ ಕಪಿಕುಂಜರಃ ।
ರಮ್ಯಕಾನನತೋಯಾಢ್ಯಾಂ ಪುರೀಂ ರಾವಣಪಾಲಿತಾಮ್ ॥ ೨॥

ಶಾರದಾಂಬುಧರಪ್ರಖ್ಯೈರ್ಭವನೈರುಪಶೋಭಿತಾಮ್ ।
ಸಾಗರೋಪಮನಿರ್ಘೋಷಾಂ ಸಾಗರಾನಿಲಸೇವಿತಾಮ್ ॥ ೩॥

ಸುಪುಷ್ಟಬಲಸಂಘುಷ್ಟಾಂ ಯಥೈವ ವಿಟಪಾವತೀಮ್ ।
ಚಾರುತೋರಣನಿರ್ಯೂಹಾಂ ಪಾಂಡರದ್ವಾರತೋರಣಾಮ್ ॥ ೪॥

ಭುಜಗಾಚರಿತಾಂ ಗುಪ್ತಾಂ ಶುಭಾಂ ಭೋಗವತೀಮಿವ ।
ತಾಂ ಸವಿದ್ಯುತ್ಸನಾರ್ಜಾಂ ಜ್ಯೋತಿರ್ಗಣನಿಷೇವಿತಾಮ್ ॥ ೫॥

ಮಂದಮಾರುತಸಂಚಾರಾಂ ಯಥಾ ಚಾಪ್ಸರಸಾಲಯೀಮ್ ।
ಶಾತಕುಂಭೇನ ಮಹತಾ ಪ್ರಾಕಾರೇಣಾಭಿಸಂವೃತಾಮ್ ॥ ೬॥

ಹೆಚ್ಚಿನ ಪ್ರಜ್ಞಾಶಾಲಿಯೂ, ವಾಯುಸುತನೂ, ಮಹಾಬಲಸಂಪನ್ನನಾದ ಕಪಿಶ್ರೇಷ್ಠನು ಎತ್ತರವಾದ ಶಿಖರದಿಂದ ಇಳಿದು, ಜೋಲಾಡುತ್ತಿರುವ ಮೇಘದೋಪಾದಿಯಲ್ಲಿದ್ದ ವಿಸ್ತೀರ್ಣವಾದ ಲಂಬ (ತ್ರಿಕೂಟ) ಪರ್ವತದ ಶಿಖರದಲ್ಲಿ, ರಮ್ಯವಾದ ಆರಣ್ಯಗಳಿಂದ ಸಮಾವೃತವಾಗಿದ್ದ, ಜಲಸಮೃದ್ಧಿಯಿಂದ ಕೂಡಿದ, ರಾವಣನಿಂದ ಪಾಲಿತವಾದ ಲಂಕಾಪಟ್ಟಣ ವನ್ನು ಧೈರ್ಯದಿಂದ ರಾತ್ರಿಯಲ್ಲಿ ಪ್ರವೇಶಿಸಿದನು. ॥ ೧-೨॥ ಆ ಲಂಕಾನಗರವು ಶರತ್ಕಾಲದ ಮೇಘಗಳಂತೆ ಶ್ವೇತಭವನಗಳಿಂದ ಕೋಭಾಯಮಾನವಾಗಿತ್ತು. ಸಮುದ್ರಘೋಷವನ್ನು ಮೀರಿ ರಾಕ್ಷಸರ ಭಯಂಕರ ಧ್ವನಿಗಳಿಂದ ತುಂಬಿಹೋಗಿತ್ತು. ಸಮುದ್ರದ ಮೇಲಿನಿಂದ ಬೀಸುವಂತಹ ಗಾಳಿಯು ಎಲ್ಲೆಡೆ ಬೀಸುತ್ತಿತ್ತು. ॥ ೩॥ ಅಲ್ಲಿ ಪುಷ್ಟರಾದ ಸೈನಿಕರ ಜಯಘೋಷಗಳು ಕೇಳಿಬರುತ್ತಿದ್ದುವು. ಸುಂದರವಾದ ತೋರಣಗಳಿಂದ ಕೂಡಿದ ಗೋಪುರಗಳಿದ್ದುವು. ಮಹಾದ್ವಾರದಲ್ಲಿ ಬಿಳುಪಾದ ತೋರಣ ವನ್ನು ಹೊಂದಿದ್ದು, ಅಲಕಾಪುರಿಗೆ ಸಮಾನವಾಗಿದ್ದ ಲಂಕಾಪಟ್ಟಣವನ್ನು ಹನುಮಂತನು ಸುತ್ತಲೂ ನೋಡಿದನು. ॥ ೪॥ ಸರ್ಪಗಳ ಸಂಚಾರವಿಲ್ಲ ಹಾಗೂ ಸರ್ಪಗಳ ಪಟ್ಟಣವಾದ ಭೋಗವತಿ (ಪಾತಾಳ) ಯಂತೆಯೇ ಲಂಕಾಪಟ್ಟಣವು ರಾಕ್ಷಸ ರಿಂದ ರಕ್ಷಿತವಾಗಿತ್ತು. ಅದು ಇಂದ್ರನ ಅಮರಾವತಿಯಂತೆ, ಮಿಂಚಿನಿಂದ ಕೂಡಿದ ಮೇಘಗಳಿಂದ ವ್ಯಾಪ್ತವಾದ ನಕ್ಷತ್ರ ಮಂಡಲದಂತೆ ಶೋಭಿಸುತಿತ್ತು. ಅಲ್ಲಿ ತಂಗಾಳಿಯು ಬೀಸುತಿದ್ದು, ಸಕಲ ವೈಭವದಿಂದ ವಿರಾಜಮಾನ ವಾಗಿತ್ತು. ॥ ೫॥ ಆ ಲಂಕಾಪುರಿಯು ಎತ್ತರವಾದ ಸುವರ್ಣಮಯ ಪ್ರಾಕಾರಗಳಿಂದ ಸುತ್ತುವರಿಯಲ್ಪಟ್ಟಿತ್ತು. ಶಬ್ದ ಮಾಡುತ್ತಿದ್ದ ಕಿರುಗಂಟೆಗಳಿಂದ ಕೂಡಿದ್ದ ಪತಾಕೆಗಳಿಂದ

ಕಿಂಕಿಣೀಜಾಲಘೋಷಾಭಿಃ ಪತಾಕಾಭಿರಲಂಕೃತಾಮ್ ।
ಆಸಾದ್ಯ ಸಹಸಾ ಹೃಷ್ಟಃ ಪ್ರಾಕಾರಮಭಿಪೇದಿವಾನ್ ॥ ೬॥

ವಿಸ್ಮಯಾವಿಷ್ಟಹೃದಯಃ ಪುರೀಮಾಲೋಕ್ಯ ಸರ್ವತಃ ।
ಜಾಂಬೂನದಮಯೈರ್ದ್ವಾರೈರ್ವೈಡೂರ್ಯಕೃತವೇದಿಕೈಃ ॥ ೮॥

ವಜ್ರಸ್ಫಟಿಕಮುಕ್ತಾಭಿರ್ಮಣಿಕುಟ್ಟಿಮ ಭೂಷಿತೈಃ ।
ತಪ್ತಹಾಟಕನಿರ್ಯೂಹೈ ರಾಜತಾಮಲಪಾಂಡರೈಃ ॥ ೯॥

ವೈಡೂರ್ಯತಲಸೋಪಾನೈಃ ಸ್ಫಾಟಿಕಾಂತರಪಾಂಸುಭಿಃ ।
ಚಾರುಸಂಜವನೋಪೇತೈಃ ಖಮಿವೋತ್ಪತಿತೈಃ ಶುಭೈಃ ॥ ೧೦॥

ಕ್ರೌಂಚಬರ್ಹಿಣಸಂಘುಷ್ಟೈ ರಾಜಹಂಸನಿಷೇವಿತೈಃ ।
ತೂರ್ಯಾಭರಣನಿರ್ಘೋಷೈಃ ಸರ್ವತಃ ಪ್ರತಿನಾದಿತಾಮ್ ॥ ೧೧॥

ಸಮ್ಯೋಕಸಾರಾಪ್ರತಿಮಾಂ ಸಮೀಕ್ಷ್ಯ ನಗರೀಂ ತತಃ ।
ಖಮಿವೋತ್ಪತಿತಾಂ ಲಂಕಾಂ ಜಹರ್ಷ ಹನುಮಾನ್ ಕಪಿಃ ॥ ೧೨॥

ತಾಂ ಸಮೀಕ್ಷ್ಯ ಪುರೀಂ ಲಂಕಾಂ ರಾಕ್ಷಸಾಧಿಪತೇಃ ಶುಭಾಮ್ ।
ಅನುತ್ತಮಾಮೃದ್ಧಿಮತೀಂ ಚಿಂತಯಾಮಾಸ ವೀರ್ಯವಾನ್ ॥ ೧೩॥

ನೇಯಮನ್ಯೇನ ನಗರೀ ಶಕ್ಯಾ ಧರ್ಷಯಿತುಂ ಬಲಾತ್ ।
ರಕ್ಷಿತಾ ರಾವಣಬಲೈರುದ್ಯತಾಯುಧಧಾರಿಭಿಃ ॥ ೧೪॥

ಕುಮುದಾಂಗದಯೋರ್ವಾಪಿ ಸುಷೇಣಸ್ಯ ಮಹಾಕಪೇಃ ।
ಪ್ರವಿದ್ಧೇಯಂ ಭವೇದ್ಬುದ್ಧಿರ್ಮೈಂದದ್ವಿವಿದಯೋರಪಿ ॥ ೧೫॥

ವಿವಸ್ವತಸ್ತನೂಜಸ್ಯ ಹರೇಶ್ಚ ಕುಶಪರ್ವಣಃ ।
ಋಕ್ಷಸ್ಯ ಕೇತುಮಾಲಸ್ಯ ಮಮ ಚೈವ ಗತಿರ್ಭವೇತ್ ॥ ೧೬॥

ಸಮೀಕ್ಷ್ಯ ಚ ಮಹಾಬಾಹೋ ರಾಘವಸ್ಯ ಪರಾಕ್ರಮಮ್ ।
ಲಕ್ಷ್ಮಣಸ್ಯ ಚ ವಿಕ್ರಾಂತಮಭವತ್ ಪ್ರೀತಿಮಾನ್ ಕಪಿಃ ॥ ೧೭॥

ಸಮಲಂಕೃತವಾಗಿತ್ತು. ॥ ೬॥ ಅಂತಹ ಲಂಕಾಪಟ್ಟಣದ ಪ್ರಾಕಾರವನ್ನು ನೇರಿ ಹನುಮಂತನು ಪರಮಹೃಷ್ಟನಾಗಿ ಹಾರಿ ಮೇಲೆ ಕುಳಿತನು. ಅಲ್ಲಿಂದ ನಗರದ ಎಲ್ಲ ಭಾಗಗಳನ್ನು ನೋಡಿ ಅತ್ಯಂತ ವಿಸ್ಮಿತನಾದನು. ॥ ೭॥

ಲಂಕಾನಗರಿಯ ಸೌಧಗಳ ಬಾಗಿಲುಗಳೆಲ್ಲವೂ ಸುವರ್ಣಮಯವಾಗಿದ್ದುವು. ವೈಡೂರ್ಯದಿಂದಲೇ ನಿರ್ಮಿತವಾದ ಜಗುಲಿಗಳಿದ್ದವು. ವಜ್ರಗಳಿಂದಲೂ, ಸ್ಫಟಿಕಗಳಿಂದಲೂ, ಮುತ್ತುಗಳಿಂದಲೂ, ಮಣಿಗಳಿಂದಲೂ ಕೂಡಿದ ನೆಲಗಳಿಂದ ಸಮಲಂಕೃತವಾಗಿದ್ದುವು. ಸೌಧಗಳು ಪುಟವಿಟ್ಟ ಭಂಗಾರದಿಂದ ನಿರ್ಮಿತವಾದ ಗೋಪುರಗಳಿಂದ ಕೂಡಿದ್ದು, ಹೊರಭಾಗವು ಪರಿಶುದ್ಧವಾದ ಬೆಳ್ಳಿಯಂತೆ ಬಿಳುಪಾಗಿದ್ದವು. ವೈಡೂರ್ಯದಿಂದಲೇ ನಿರ್ಮಿತವಾದ ಸೋಪಾನಗಳಿಂದ (ಮಹಡಿ ಮೆಟ್ಟಲು) ಕೂಡಿದ್ದವು. ಸ್ಫಟಿಕಮಯವಾದ ಒಳ ಅಂಗಣಗಳು ಧೂಳುರಹಿತವಾಗಿದ್ದುವು. ರಮಣೀಯವಾದ ಚತುಃಶಾಲಗಳಿಂದ (ಸಭಾಭವನಗಳು) ಪರಿಶೋಭಿಸುತ್ತಿದ್ದುವು. ಅವುಗಳು ಹೆಚ್ಚು ಎತ್ತರವಾಗಿದ್ದು ಅಂಬರವನ್ನು ಚುಂಬಿಸುತ್ತಿರುವಂತೆ ಕಾಣುತ್ತಿದ್ದು ಶುಭಾವಹಗಳಾಗಿದ್ದವು. ॥ ೮-೧೦॥ ಅಲ್ಲಿಯ ಉದ್ಯಾನವನಗಳಲ್ಲಿ ಕ್ರೌಂಚಪಕ್ಷಿಗಳೂ, ನವಿಲುಗಳೂ ನಿನಾದ ಮಾಡುತ್ತಿದ್ದುವು. ಸರೋವರಗಳಲ್ಲಿ ರಾಜಹಂಸಗಳು ವಾಸವಾಗಿದ್ದುವು. ಮಂಗಳವಾದ್ಯಗಳ ಘೋಷಗಳೂ, ಆಭರಣಗಳ ಕಿಣಿ-ಕಿಣಿದ್ವನಿಗಳೂ ನಗರದ ಎಲ್ಲೆಡೆ ಕೇಳಿಬರುತ್ತಿದ್ದುವು. ಕುಬೇರನ ಅಲಕಾಪುರಿಗೆ ಸಮಾನವಾಗಿ ಶೋಭಿಸುತ್ತಾ ತ್ರಿಕೂಟ ಪರ್ವತದ ಶಿಖರದಲ್ಲಿದ್ದುದರಿಂದ ಆ ಪಟ್ಟಣವು ಆಕಾಶಕ್ಕೆ ನೆಗೆಯಲು ಸಿದ್ಧವಾಗಿದೆಯೋ ಎಂಬಂತೆ ಎದ್ದು ಕಾಣುತ್ತಿತ್ತು. ಅಂತಹ ಅತ್ಯಂತ ಸುಂದರವಾದ ಲಂಕೆಯನ್ನು ನೋಡಿ ಹನುಮಂತನು ಹೆಚ್ಚಿನ ಸಂತಸಗೊಂಡನು. ॥ ೧೧-೧೨॥ ಅತ್ಯುತ್ತಮವಾದ, ಸಕಲ ಸಂಪತ್ತಿನಿಂದ ಸಮೃದ್ಧವಾದ, ಸುಂದರವೂ, ಮಂಗಳಪ್ರದವೂ ಆದ ರಾಕ್ಷಸಾಧಿಪತಿ ರಾವಣನ ಆ ಪಟ್ಟಣವನ್ನು ನೋಡಿ ಮಹಾಪರಾಕ್ರಮಿಯಾದ ಮಾರುತಿಯು ಆಲೋಚಿಸತೊಡಗಿದನು. ॥ ೧೩॥

''ಆಯುಧಗಳನ್ನು ಮೇಲೆತ್ತಿ ಹಿಡಿದು ಯುದ್ಧಕ್ಕೆ ಸಜ್ಜಾಗಿ ನಿಂತಿರುವ ರಾವಣನ ಸೈನಿಕರಿಂದ ಎಲ್ಲ ಕಾಲದಲ್ಲಿಯೂ ರಕ್ಷಿಸುತ್ತಿರುವ ಈ ಲಂಕಾಪಟ್ಟಣವನ್ನು ಬೇರೆ ಯಾರಿಂದಲೂ ಬಲಪೂರ್ವಕವಾಗಿ ಆಕ್ರಮಿಸಲು ಸಾಧ್ಯವಾಗದು. ॥ ೧೪॥ ಇದನ್ನು – ಕುಮುದ, ವಾಲೀಪುತ್ರ ಅಂಗದ, ಮಹಾಕಪಿಯಾದ ಸುಷೇಣ, ಮೈಂದ, ದ್ವಿವಿದ, ಸೂರ್ಯಪುತ್ರನಾದ ಸುಗ್ರೀವ, ಕುಶಪರ್ವ, ಋಕ್ಷರಾಜ ಜಾಂಬವಂತ, ಕೇತುಮಾಲಿ ಮತ್ತು ನಾನು ಇಷ್ಟು ಮಂದಿಗೆ ಮಾತ್ರ ಪ್ರವೇಶಿಸಲು ಸಾಧ್ಯವಾಗಬಹುದು.'' ॥ ೧೫-೧೬॥ ಬಳಿಕ ಹನುಮಂತನು ಸ್ವಲ್ಪ ಹೊತ್ತು ಹಾಗೆಯೇ ಯೋಚಿಸುತ್ತಿದ್ದು ಮಹಾಬಾಹುವಾದ ಶ್ರೀರಾಮನ ಮತ್ತು ಲಕ್ಷ್ಮಣನ ಅತುಲ ಪರಾಕ್ರಮಗಳನ್ನು ನೆನೆದು (ಲಂಕೆಯು ಎಂತಹುದೇ ಇರಲಿ ರಾಮ-ಲಕ್ಷ್ಮಣನ ಅತುಲ ಪರಾಕ್ರಮದ

ತಾಂ ರತ್ನವಸನೋಪೇತಾಂ ಕೋಷ್ಠಾಗಾರಾವತಂಸಕಾಮ್ ।
ಯಂತ್ರಾಗಾರಸ್ತನೀಮೃದ್ಧಾಂ ಪ್ರಮದಾಮಿವ ಭೂಷಿತಾಮ್ ॥ ೧೮॥

ತಾಂ ನಷ್ಟ ತಿಮಿರಾಂ ದೀಪೈರ್ಭಾಸ್ವದ್ಭಿಶ್ಚ ಮಹಾಗೃಹೈಃ ।
ನಗರೀಂ ರಾಕ್ಷಸೇಂದ್ರಸ್ಯ ದದರ್ಶ ಸ ಮಹಾಕಪಿಃ ॥ ೧೯॥

ಅಥ ಸಾ ಹರಿಶಾರ್ದೂಲಂ ಪ್ರವಿಶಂತಂ ಮಹಾಬಲಮ್ ।
ನಗರೀ ಸ್ವೇನ ರೂಪೇಣ ದದರ್ಶ ಪವನಾತ್ಮಜಮ್ ॥ ೨೦॥

ಸಾ ತಂ ಹರಿವರಂ ದೃಷ್ಟ್ವಾ ಲಂಕಾ ರಾವಣಪಾಲಿತಾ ।
ಸ್ವಯಮೇವೋತ್ಥಿತಾ ತತ್ರ ವಿಕೃತಾನನದರ್ಶನಾ ॥ ೨೧॥

ಪುರಸ್ತಾತ್ತ ಕಪಿವರ್ಯಸ್ಯ ವಾಯುಸೂನೋರತಿಷ್ಠತ ।
ಮುಂಚಮಾನಾ ಮಹಾನಾದಮುಲ್ಬಣಂ ಪವನಾತ್ಮಜಮ್ ॥ ೨೨॥

ಕಸ್ತ್ವಂ ಕೇನ ಚ ಕಾರ್ಯೇಣ ಇಹ ಪ್ರಾಪ್ತೋಽ ವನಾಲಯಮ್ ।
ಕ್ಷಯಯನ್ನೇಷ ಯತ್ತ್ವಂ ಯಾವತ್ ಪ್ರಾಣಾ ಧರಂತಿ ತೇ ॥ ೨೩॥

ನ ಶಕ್ಯಂ ಖಲ್ವಿಯಂ ಲಂಕಾ ಪ್ರವೇಷ್ಟುಂ ವಾನರ ತ್ವಯಾ ।
ರಕ್ಷಿತಾ ರಾವಣಬಲೈರಭಿಗುಪ್ತಾ ಸಮಂತತಃ ॥ ೨೪॥

ಅಥ ತಾಮಬ್ರವೀದ್ವೀರೋ ಹನುಮಾನಗ್ರತಃ ಸ್ಥಿತಾಮ್ ।
ಕಥಯಿಷ್ಯಾಮಿ ತೇ ತತ್ತ್ವಂ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೨೫॥

ಕಾ ತ್ವಂ ವಿರೂಪನಯನಾ ಪುರದ್ವಾರೇಽವತಿಷ್ಠಸೇ ।
ನಿರ್ಭಯಂ ಚಾಪಿ ಮಾಂ ರುದ್ಧ್ವಾ ನಿರ್ಭರ್ತ್ಸಯಸಿ ದಾರುಣಾ ॥ ೨೬॥

ಪನೂಮದ್ವಚನಂ ಶ್ರುತ್ವಾ ಲಂಕಾ ಸಾ ಕಾಮರೂಪಿಣೀ ।
ಉವಾಚ ವಚನಂ ಕ್ರುದ್ಧಾ ಪರುಷಂ ಪವನಾತ್ಮಜಮ್ ॥ ೨೭॥

ಅಹಂ ರಾಕ್ಷಸರಾಜಸ್ಯ ರಾವಣಸ್ಯ ಮಹಾತ್ಮನಃ ।
ಆಜ್ಞಾ ಪ್ರತೀಕ್ಷಾ ದುರ್ಧರ್ಷಾ ರಕ್ಷಾಮಿ ನಗರೀಮಿಮಾಂ ॥ ೨೮॥

ನ ಶಕ್ಯಾ ಮಾಮವಜ್ಞಾಯ ಪ್ರವೇಷ್ಟುಂ ನಗರೀ ತ್ವಯಾ ।
ಅದ್ಯ ಪ್ರಾಣೈಃ ಪರಿತ್ಯಕ್ತಃ ಸ್ವಪ್ಸ್ಯಸೇ ನಿಹತೋ ಮಯಾ ॥ ೨೯॥

ಮುಂದೆ ಅದು ನಿಲ್ಲಲಾರದು.) ಹೆಚ್ಚಿನ ಸಂತಸ ಗೊಂಡನು. ॥ ೧೭॥ ಆಗ ಹನುಮಂತನಿಗೆ ಕ್ಷಣಕಾಲ ಲಂಕಾನಗರವು ಸರ್ವಾಲಂಕಾರ ಯುಕ್ತ ಸುಂದರಿಯಂತೆ ಕಂಡಿತು. ರತ್ನಮಯವಾದ ಕೋಟೆಯು ಲಂಕಾಸುಂದರಿಯ ವಸ್ತ್ರವೂ, ಗಗನಚುಂಬಿಯಾದ ಸಭಾಭವನಗಳೇ ಅವಳ ಶಿರೋಭೂಷಣ, ಪ್ರಾಕಾರದ ಮೇಲಿದ್ದ ಯಂತ್ರಾಗಾರಗಳೇ ಯುವತಿಯ ಸ್ತನಗಳು. ಕಡುಚೆಲುವೆಯಾದ ಲಂಕಾಯುವತಿಯು ದೊಡ್ಡ-ದೊಡ್ಡ ಸೌಧಗಳ ಪ್ರಕಾಶಮಾನವಾದ ದೀಪಗಳಿಂದ ಕತ್ತಲೆಯನ್ನು ದೂರಮಾಡಿ ದೇದಿಪ್ಯಮಾನಳಾಗಿ ಬೆಳಗುತ್ತಿದ್ದಳು. ರಾಕ್ಷಸೇಂದ್ರನ ಮಡದಿಯಾದ ಅಂತಹ ಲಂಕಾಯುವತಿಯನ್ನು ಹನುಮಂತನು ನೋಡಿದನು. ॥ ೧೮-೧೯॥

ಸುಂದರವಾದ ಲಂಕಾನಗರಿಯು ಸೊಬಗನ್ನು ನೋಡುತ್ತಾ ಪ್ರವೇಶಿಸುವುದರಲ್ಲಿದ್ದ ಮಹಾಬಲಶಾಲಿಯಾದ ವಾನರ ಶ್ರೇಷ್ಠನಾದ ಮಾರುತಿಯನ್ನು ಲಂಕೆಯ ಅಧಿದೇವತೆಯು ಸ್ವಸ್ವರೂಪದಿಂದ ನೋಡಿದಳು. ॥ ೨೦॥ ಹನುಮಂತನನ್ನು ನೋಡುತ್ತಲೇ ಇವ್ವ ಬಂದ ರೂಪವನ್ನು ಧರಿಸುವ ಲಂಕಾಧಿದೇವತೆಯಾದ ಲಂಕಿಣಿಯು ವಿಕಾರವಾದ ಮುಖವುಳ್ಳ ರೂಪವನ್ನ ಧರಿಸಿ ಕಾನಾಗಿಯೇ ಎದ್ದು ನಿಂತಳು. ಬಳಿಕ ವೀರನಾದ ವಾಯುಕುಮಾರನ ಬಳಿಗೆ ಹೋಗಿ ಎದುರಾಗಿ ನಿಂತು ಗಟ್ಟಿಯಾಗಿ ಗರ್ಜಿಸಿ ಕೇಳಿದಳು – ॥ ೨೧-೨೨॥

ಎಲೈ ವನಚರನೇ! ನೀನು ಯಾರು? ಯಾವ ಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವೆ? ನನ್ನ ಕೈಯಿಂದ ನೀನು ಸಾಯುವ ಮೊದಲು ಎಲ್ಲ ವಿಷಯಗಳನ್ನು ಯಥಾವತ್ತಾಗಿ ಹೇಳು. ॥ ೨೩॥ ಎಲೈ ವಾನರಾ! ರಾವಣನ ಸೈನಿಕರಿಂದ ಸುತ್ತಲೂ ಸಂರಕ್ಷಿತವಾದ ಈ ಲಂಕೆಯನ್ನು ಪ್ರವೇಶಿಸುವುದು ನಿನ್ನಿಂದ ಸಾಧ್ಯವಿಲ್ಲ. ಲಂಕಾಧಿದೇವತೆಯ ಆ ಮಾತನ್ನು ಕೇಳಿ ಹನುಮಂತನು ಯಥೋಚಿತವಾಗಿ ಉತ್ತರಿಸಿದನು – "ಎಲೈ ಭಯಂಕರ ಸ್ವರೂಪಳೇ! ನೀನು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ನಾನು ಯಥಾವತ್ತಾಗಿ ಉತ್ತರಿಸುವೆನು. ಆದರೆ ಮೊದಲು ನೀನಾರೆಂಬುದನ್ನು ನನಗೆ ಹೇಳು. ॥ ೨೪-೨೫॥ ವಿಕಾರವಾದ ಕಣ್ಣುಗಳನ್ನೂ, ಆಕಾರವನ್ನೂ ಹೊಂದಿರುವ ನೀನಾರು? ವಿಕಟ್ಟಾಗಿ ಪಟ್ಟಣದ ಬಾಗಿಲಲ್ಲಿ ನಿಂತಿರುವೆ? ಭಯಂಕರ ಸ್ವರೂಪಳೇ! ಯಾವ ಕಾರಣದಿಂದ ನೀನು ನನ್ನನ್ನು ತಡೆದು ಭಯಪಡಿಸುತ್ತಿರುವೆ?" ॥ ೨೬॥ ಕಾಮರೂಪಿಣಿಯಾದ ಆ ಲಂಕಾಧಿದೇವತೆಯು ಹನುಮಂತನ ಮಾತನ್ನು ಕೇಳಿ ಕೋಪದಿಂದ ಕಿಡಿಕಿಡಿಯಾದಳು. ವಾಯುಪುತ್ರನನ್ನು ಕುರಿತು ಅತಿಕಠೋರವಾದ ಮಾತುಗಳನ್ನು ಹೇಳಿದಳು. ॥ ೨೭॥ ಇತರರಿಂದ ಎದುರಿಸಲು ಅಸಾಧ್ಯಳಾದ ನಾನು-ರಾಕ್ಷಸರ ರಾಜನಾದ ಮಹಾತ್ಮನಾದ ರಾವಣನ ಆಜ್ಞಾಧಾರಳಾಗಿ ಈ ನಗರವನ್ನು ರಕ್ಷಿಸುತ್ತಿರುವೆನು. ॥ ೨೮॥ ನನ್ನನ್ನು ಅನಾದರಣೆ ಮಾಡಿ ಈ ನಗರವನ್ನು ಪ್ರವೇಶಿಸಲು ನಿನ್ನಿಂದಾಗದು. ಈಗ ನಿನಗೆ ನನ್ನ ಕೈಯಿಂದ ಸಾವು ತಪ್ಪದು. ನೀನು ಅಸುನೀಗಿ ದೀರ್ಘನಿದ್ರೆಯಲ್ಲಿ ಮಲಗುವೆ. ॥ ೨೯॥ ಎಲೈ ಕಪೀಶ್ವರಾ!

ಅಹಂ ಹಿ ನಗರೀಂ ಲಂಕಾಂ ಸ್ವಯಮೇವ ಪ್ಲವಂಗಮ।
ಸರ್ವತಃ ಪರಿರಕ್ಷಾಮಿ ಹ್ಯೇತತ್ತೇ ಕಥಿತಂ ಮಯಾ ॥ ೩೦॥

ಲಂಕಾಯಾ ವಚನಂ ಶ್ರುತ್ವಾ ಪವನಸ್ಯಾತ್ಮಜಃ ।
ಯತ್ನವಾನ್ ಸ ಹರಿಶ್ರೇಷ್ಠಃ ಸ್ಥಿತಃ ಶೈಲ ಇವಾಪರಃ ॥ ೩೧॥

ಸ ತಾಂ ಸ್ತ್ರೀರೂಪವಿಕೃತಾಂ ದೃಷ್ಟ್ವಾ ವಾನರಪುಂಗವಃ ।
ಅಬಭಾಷೇಽಥ ಮೇಧಾವೀ ಸತ್ತ್ವವಾನ್ ಪ್ಲವಗರ್ಷಭಃ ॥ ೩೨॥

ದ್ರಕ್ಷ್ಯಾಮಿ ನಗರೀಂ ಲಂಕಾಂ ಸಾಟ್ಟಪ್ರಾಕಾರತೋರಣಾಮ್ ।
ಅತ್ಯರ್ಥಮಿಹ ಸಂಪ್ರಾಪ್ತಃ ಪರಂ ಕೌತೂಹಲಂ ಹಿ ಮೇ ॥ ೩೩॥

ವನಾನ್ಯುಪವನಾನೀಹ ಲಂಕಾಯಾಃ ಕಾನನಾನಿ ಚ ।
ಸರ್ವತೋ ಗೃಹಮುಖ್ಯಾನಿ ದ್ರಷ್ಟುಮಾಗಮನಂ ಹಿ ಮೇ ॥ ೩೪॥

ತಸ್ಯ ತದ್ವಚನಂ ಶ್ರುತ್ವಾ ಲಂಕಾ ಸಾ ಕಾಮರೂಪಿಣೀ ।
ಭೂಯಃ ಏವ ಪುನರ್ವಾಕ್ಯಂ ಬಭಾಷೇ ಪರುಷಾಕ್ಷರಮ್ ॥ ೩೫॥

ಮಾಮನಿರ್ಜಿತ್ಯ ದುರ್ಬುದ್ಧೇ ರಾಕ್ಷಸೇಶ್ವರಪಾಲಿತಾಮ್ ।
ನ ಶಕ್ಯಮದ್ಯ ತೇ ದ್ರಷ್ಟುಂ ಪುರೀಯಂ ವಾನರಾಧಮ ॥ ೩೬॥

ತತಃ ಸ ಹರಿಶಾರ್ದೂಲಸ್ತಾಮುವಾಚ ನಿಶಾಚರೀಮ್ ।
ದೃಷ್ಟ್ವಾ ಪುರೀಮಿಮಾಂ ಭದ್ರೇ ಪುನರ್ಯಾಸ್ಯೇ ಯಥಾಗತಮ್ ॥ ೩೭॥

ತತಃ ಕೃತ್ವಾ ಮಹಾನಾದಂ ಸಾ ವೈ ಲಂಕಾ ಭಯಾವಹಮ್।
ತಲೇನ ವಾನರಶ್ರೇಷ್ಠಂ ತಾಡಯಾಮಾಸ ವೇಗಿತಾ ॥ ೩೮॥

ತತಃ ಸ ಕಪಿಶಾರ್ದೂಲೋ ಲಂಕಯಾ ತಾಡಿತೋ ಭೃಶಮ್।
ನನಾದ ಸುಮಹಾನಾದಂ ವೀರ್ಯವಾನ್ ಪವನಾತ್ಮಜಃ ॥ ೩೯॥

ತತಃ ಸಂವರ್ತಯಾಮಾಸ ವಾಮಹಸ್ತಸ್ಯ ಸೋಽಂಗುಲೀಃ ।
ಮುಷ್ಟಿನಾಭಿಜಘಾನೈನಾಂ ಪವನಾತ್ಮಜಃ ಕ್ರೋಧಮೂರ್ಛಿತಃ ॥ ೪೦॥

ಸ್ತ್ರೀ ಚೇತಿ ಮನ್ಯಮಾನೇನ ನಾತಿಕ್ರೋಧಃ ಸ್ವಯಂ ಕೃತಃ ।
ಸಾ ತು ತೇನ ಪ್ರಹಾರೇಣ ವಿಹ್ವಲಾಂಗೀ ನಿಶಾಚರೀ ॥ ೪೧॥

ನಾನೇ ಈ ಲಂಕೆಗೆ ಅಧಿದೇವತೆಯಾಗಿರುವೆನು. ಎಲ್ಲ ವಿಧದಿಂದ ನಾನೇ ಸಾಕ್ಷಾತ್ತಾಗಿ ಈ ನಗರವನ್ನು ರಕ್ಷಿಸುತ್ತಿರುವೆನು. ಈ ಕಾರಣದಿಂದ ನಾನು ನಿನಗೆ ನಗರವನ್ನು ಪ್ರವೇಶಿಸಬಾರದು ಎಂದು ಹೇಳುತ್ತಿದ್ದೇನೆ.'' ॥ ೩೦॥

ಲಂಕಾಧಿದೇವತೆಯ ಆ ಮಾತನ್ನು ಕೇಳಿ ವಾಯುಪುತ್ರನೂ, ಹರಿಶ್ರೇಷ್ಠನೂ, ಪ್ರಯತ್ನಶೀಲನೂ ಆದ ಹನುಮಂತನು ಅವಳ ಮುಂದೆ ಮತ್ತೊಂದು ಪರ್ವತದಂತೆಯೇ ಅಚಲವಾಗಿ ನಿಂತನು. ॥ ೩೧॥ ಬಳಿಕ ವಾನರೋತ್ತಮನೂ, ಹೆಚ್ಚಿನ ಪ್ರಜ್ಞಾಶಾಲಿಯೂ, ಮಹಾಬಲಸಂಪನ್ನನಾದ ಹನುಮಂತನು ವಿಕಾರವಾದ ಸ್ತ್ರೀರೂಪವನ್ನು ಧರಿಸಿದ ಲಂಕಾಧಿದೇವತೆಯನ್ನು ನೋಡಿ ಅವಳಲ್ಲಿ ಹೀಗೆ ಮಾತಾಡಿದನು. ॥ ೩೨॥

''ಲಂಕಾಧಿದೇವತೆಯೇ! ಉಪ್ಪರಿಗೆಗಳಿಂದಲೂ, ಕೋಟಿ-ಕೊತ್ತಲುಗಳಿಂದಲೂ, ತೋರಣಗಳಿಂದಲೂ, ಒಪ್ಪುವ ಮನೋಹರವಾದ ಲಂಕಾನಗರವನ್ನು ನೋಡುವ ಸಲುವಾಗಿ ನಾಲ್ಗೆಗೆ ಬಂದಿರುವೆನು. ಇದನ್ನು ನೋಡುವ ಕೂತೂಹಲ ನನಗೆ ಹೆಚ್ಚಾಗಿದೆ. ॥ ೩೩॥ ಇಲ್ಲಿಯ ವನಗಳನ್ನು, ಉಪವನಗಳನ್ನು, ಅರಣ್ಯಗಳನ್ನು ಎಲ್ಲ ಕಡೆಗಳಲ್ಲಿಯೂ ಇರುವ ಶ್ರೇಷ್ಠವಾದ ಸೌಧಗಳನ್ನು ನೋಡುವುದೇ ನನ್ನ ಆಗಮನದ ಉದ್ದೇಶವಾಗಿದೆ.'' ॥ ೩೪॥

ಹನುಮಂತನ ಈ ಮಾತುಗಳನ್ನು ಕೇಳಿ, ಕಾಮರೂಪಿಣಿಯಾದ ಲಂಕಿಣಿಯು ಅತಿ ಕಠೋರವಾದ ಅಕ್ಷರಗಳಿಂದ ಕೂಡಿರುವ ವಾಕ್ಯವನ್ನು ಹೇಳಿದಳು – ''ದುಷ್ಟಬುದ್ಧಿಯ ವಾನರಾಧಮನೇ! ನನ್ನನ್ನು ಜಯಿಸದೆ ರಾಕ್ಷಸೇಶ್ವರ ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಈ ಲಂಕೆಯನ್ನು ನೀನು ನೋಡಲಾರೆ'' ॥ ೩೫-೩೬॥

ಆದಕ್ಕೆ ಹನುಮಂತನು ರಾಕ್ಷಸಿಗೆ ಪುನಃ ಹೇಳಿದನು –''ಎಲೈ ಶುಭಾಂಗಿಯೇ! ಈ ಪಟ್ಟಣವನ್ನು ಒಮ್ಮೆ ನೋಡಿ, ನಾನು ಎಲ್ಲಿಂದ ಬಂದಿರುವನೋ ಅಲ್ಲಿಗೆ ಮರಳಿ ಹೋಗುತ್ತೇನೆ'' ಎಂದು ವಿನಮ್ರನಾಗಿ ನುಡಿದನು. ॥ ೩೭॥

ಹನುಮಂತನು ಹೀಗೆ ಹೇಳಲು ಲಂಕಾಧಿದೇವತೆಯು ಪರಮಕ್ರುದ್ಧಳಾಗಿ ಭಯಂಕರವಾಗಿ ಗರ್ಜನೆಯನ್ನು ಮಾಡುತ್ತಾ ಅಂಗೈನಿಂದ ವಾನರಶ್ರೇಷ್ಠನನ್ನು ವೇಗವಾಗಿ ಪ್ರಹರಿಸಿದಳು. ॥ ೩೮॥ ರಾಕ್ಷಸಿಯಿಂದ ಬಲವಾಗಿ ಪ್ರಹರಿಸಲ್ಪಟ್ಟ ವೀರ್ಯವಂತನಾದ, ವಾಯುಪುತ್ರನಾದ ಹರಿಶ್ರೇಷ್ಠ ಹನುಮಂತನು ಅತ್ಯಂತ ಬಿಯಸಾಗಿ ಗರ್ಜಿಸಿದನು. ॥ ೩೯॥ ಕ್ರೋಧದಿಂದ ಮೈಮರೆತಿದ್ದರೂ ಹನುಮಂತನು ಎಡಗೈಯ ಮುಷ್ಠಿಯಿಗಿದುಕೊಂಡು ರಾಕ್ಷಸಿಯನ್ನು ಮೆಲ್ಲಗೆ ಮುಷ್ಠಿಯಿಂದ ಹೊಡೆದನು. ॥ ೪೦॥ ಲಂಕಾಧಿದೇವತೆಯನ್ನು ಸ್ತ್ರೀಯೆಂದು ಭಾವಿಸಿ ಹನುಮಂತನು ಅವಳ ಮೇಲೆ ಹೆಚ್ಚು ಕೋಪಗೊಳ್ಳಲಿಲ್ಲ. ಸಾಧಾರಣವಾದ ರೀತಿಯಲ್ಲಿ ಅದೂ ಎಡಗೈಯ ಮುಷ್ಠಿಯಿಂದ ಹೊಡೆದಿದ್ದನು. ಆ ಅಲ್ಪ ಪ್ರಹಾರದಿಂದಲೇ ಅವಳ ಶರೀರವು ಜರ್ಝರಿತವಾಯಿತು. ವಿಕಾರವಾದ

ಪಪಾತ ಸಹಸಾ ಭೂಮೌ ವಿಕೃತಾನನದರ್ಶನಾ ।
ತಚ್ಚ ಪನುಮಾನ್ ಪ್ರಾಪ್ತಕಾಲಂ ದೃಷ್ಟ್ವಾ ವಿನಿಪಾತಿತಾಮ್ ॥ ೪೨॥

ಕ್ಷಾಂ ಚಕಾರ ತೇಜಸ್ವೀ ಮನ್ಯಮಾನಃ ಸ್ತ್ರಿಯಂ ತು ತಾಮ್ ।
ತತೋ ವೈ ಧ್ವನಿಸಂದಿಗ್ಧಾ ಲಂಕಾ ಸಾ ಗದ್ಗದಾಕ್ಷರಮ್ ॥ ೪೩॥

ಉವಾಚಾರ್ಥಗತಿಜ್ಞಂ ವಾಕ್ಯಂ ಹನೂಮಂತಂ ಪ್ಲವಂಗಮಮ್ ।
ಪ್ರಸೀದ ಸುಮಹಾಬಾಹೋ ತ್ರಾಯಸ್ವ ಹರಿಸತ್ತಮ ॥ ೪೪॥

ಸಮಯೇ ಸೌಮ್ಯ ತಿಷ್ಠಂತಿ ಸತ್ತ್ವಮತೋ ಮಹಾಬಲಾಃ ।
ಅಹಂ ತು ನಗರೀ ಲಂಕಾ ಸ್ವಯಮೇವ ಪ್ಲವಂಗಮ ॥ ೪೫॥

ನಿರ್ಜಿತಾಹಂ ತ್ವಯಾ ವೀರ ವಿಕ್ರಮೇಣ ಮಹಾಬಲ ।
ಇದಂ ಚ ತಥ್ಯಂ ಶೃಣು ಮೈ ಬ್ರುವಂತ್ಯಾ ಮೇ ಹರೀಶ್ವರ ॥ ೪೬॥

ಸ್ವಯಂಭುವಾ ಪುರಾ ದತ್ತಂ ವರದಾನಂ ಯಥಾ ಮಮ ।
ಯದಾ ತ್ವಾಂ ವಾನರಃ ಕಶ್ಚಿದ್ವಿಕ್ರಮಾದ್ವಶಮಾನಯೇತ್ ॥ ೪೭॥

ತದಾ ತ್ವಯಾ ಹಿ ವಿಜ್ಞೇಯಂ ರಕ್ಷಣಾಂ ಭಯಮಾಗತಮ್ ।
ನ ಹಿ ಮೇ ಸಮಯಃ ಸೌಮ್ಯ ಪ್ರಾಪ್ತೋಽದ್ಯ ತವ ದರ್ಶನಾತ್ ॥ ೪೮॥

ಸ್ವಯಂಭುವಿಹಿತಃ ಸತ್ಯೋ ನ ತಸ್ಯಾಸ್ತಿ ವ್ಯತಿಕ್ರಮಃ ।
ಸೀತಾನಿಮಿತ್ತಂ ರಾಜ್ಞಸ್ತು ರಾವಣಸ್ಯ ದುರಾತ್ಮನಃ ॥ ೪೯॥

ರಕ್ಷಸಾಂ ಚೈವ ಸರ್ವೇಷಾಂ ವಿನಾಶಃ ಸಮುಪಸ್ಥಿತಃ ।
ತತ್ ಪ್ರವಿಶ್ಯ ಹರಿಶ್ರೇಷ್ಠ ಪುರೀಂ ರಾವಣಪಾಲಿತಾಮ್ ।
ವಿಧತ್ಸ್ವ ಸರ್ವಕಾರ್ಯಾಣಿ ಯಾನಿ ಯಾನೀಹ ವಾಂಛಸಿ ॥ ೫೦॥

ಪ್ರವಿಶ್ಯ ತಾಪೋಪಹತಾಂ ಹರೀಶ್ವರ
ಪುರೀಂ ಶುಭಾಂ ರಾಕ್ಷಸಮುಖ್ಯಪಾಲಿತಾಮ್ ।
ಯದೃಚ್ಛಯಾ ತ್ವಂ ಜನಕಾತ್ಮಜಾಂ ಸತೀಂ
ವಿಮಾರ್ಗ ಸರ್ವತ್ರ ಗತೋ ಯಥಾಸುಖಮ್ ॥ ೫೧॥

ಮುಖದಿಂದ ಭೂಮಿಯ ಮೇಲೆ ಬಿದ್ದಳು. ಬಳಿಕ ತೇಜಸ್ವಿಯಾದ, ಪ್ರಾಜ್ಞನಾದ ಹನುಮಂತನು ಲಂಕಾಧಿದೇವತೆಯು ಬಿದ್ದುದನ್ನು ನೋಡಿ ಸ್ತ್ರೀಯೆಂದು ಭಾವಿಸಿ ಅವಳ ಮೇಲೆ ಕೃಪೆದೋರಿದನು. ಪೆಟ್ಟು ತಿಂದು ಉದ್ದಿಗ್ನಗೊಳಿಗಿದ್ದ ರಾಕ್ಷಸಿಯು ಹನುಮಂತನಿಗೆ ಗರ್ವರಹಿತಳಾಗಿ ಗದ್ಗದಧ್ವನಿಯಿಂದ ಹೀಗೆ ಹೇಳಿದಳು – ಓ ಮಹಾಪುರುಷಾ! ಪ್ರಸನ್ನಳಾಗು. ಹರಿಶ್ರೇಷ್ಠನೇ! ಸೌಮ್ಯನೇ! ನನ್ನನ್ನು ಕಾಪಾಡು. ಮಹಾಬಲರಾದ ಧೈರ್ಯವಂತರಾದ ಪುರುಷರು ಎಂದಿಗೂ ಶಾಸ್ತ್ರ ಮರ್ಯಾದೆಯನ್ನು ಮೀರಿ ನಡೆದುಕೊಳ್ಳುವುದಿಲ್ಲ. ಧರ್ಮಮಾರ್ಗದಲ್ಲಿಯೇ ಸ್ಥಿರವಾಗಿರುತ್ತಾರೆ. ಶಾಸ್ತ್ರಗಳಲ್ಲಿ ಸ್ತ್ರೀಯ ಅವಧ್ಯಳೆಂದು ಹೇಳಿದೆ. ಅದುದರಿಂದ ನೀನು ನನ್ನ ಪ್ರಾಣಹರಣ ಮಾಡಬೇಡ. ಓ ವಾನರೋತ್ತಮಾ! ನಾನು ಮೂರ್ತಸ್ವರೂಪಳಾದ ಲಂಕಾಧಿದೇವತೆಯು. ಮಹಾ ಬಲಶಾಲಿಯಾದ ಓ ವೀರನೇ! ಪರಾಕ್ರಮದಿಂದ ನೀನಿಂದು ನನ್ನನ್ನು ಜಯಿಸಿರುವೆ. ನಾನು ಹೇಳಲಿರುವ ಸತ್ಯವಾಕ್ಯವನ್ನು ಕೇಳು – ॥ ೪೧-೪೬॥ "ಹಿಂದೆ ನನಗೆ ಬ್ರಹ್ಮದೇವರು ಒಂದು ವರವನ್ನು ಅನುಗ್ರಹಿಸಿದ್ದರು– ವಾನರನೊಬ್ಬನು ನಿನ್ನ ಬಳಿಗೆ ಬಂದು ಪರಾಕ್ರಮದಿಂದ ನಿನ್ನನ್ನು ಜಯಿಸಿದಾಗ ರಾಕ್ಷಸರಿಗೆ ಭಯವು ಒದಗಿಬಂದಿತೆಂದು ತಿಳಿಯಬೇಕು" ಬ್ರಹ್ಮದೇವರ ವರದಂತೆ ಇಂದು ನಿನ್ನ ದರ್ಶನದಿಂದ ಆ ಸಮಯವು ಒದಗಿತೆಂದು ತಿಳಿಯುತ್ತೇನೆ. ॥ ೪೭-೪೯॥ ಬ್ರಹ್ಮದೇವರು ಹೇಳಿದ ಮಾತು ಸತ್ಯವಾಗಿ ಪರಿಣಮಿಸಿದೆ. ಅವರು ಹೇಳಿದ ಮಾತು ಬದಲಾಗದು. ಸೀತಾನಿಮಿತ್ತವಾಗಿ ದುರಾತ್ಮನಾದ ರಾವಣನಿಗೂ ಎಲ್ಲ ರಾಕ್ಷಸರಿಗೂ ವಿನಾಶವು ಸನ್ನಿಹಿತವಾಗಿದೆ. ಹರಿ ಶ್ರೇಷ್ಠನೇ! ನೀನೀಗ ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಈ ಲಂಕಾಪಟ್ಟಣವನ್ನು ಪ್ರವೇಶಿಸಿ, ನೀನು ಆಪೇಕ್ಷಿಸಿದ ಎಲ್ಲ ಕಾರ್ಯವನ್ನು ನಿರ್ವಹಿಸು. ॥ ೪೯-೫೦॥

ಪರೀಶ್ವರನೇ! "ರಾಕ್ಷಸರಾಜನಾದ ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಸುಂದರವಾದ ಈ ಲಂಕಾನಗರಿಯು ಆಗಲೇ ಶಾಪದಿಂದ ವಿನಾಶಹೊಂದಿದೆ. ಶುಭಕರವಾದ ಈ ಲಂಕೆಯನ್ನು ಪ್ರವೇಶಿಸಿ, ಸ್ವೇಚ್ಛೆಯಿಂದ ಎಲ್ಲ ಕಡೆಗಳಲ್ಲಿಯೂ ಸುಖವಾಗಿ ಸಂಚರಿಸುತ್ತಾ ನಿರಾತಂಕವಾಗಿ ಸಾಧ್ವಿಯಾದ ಜನಕನ ಮಗಳನ್ನು ಹುಡುಕು." ॥ ೫೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ತೃತೀಯಃ ಸರ್ಗಃ ॥ ೩ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂರನೇ ಸರ್ಗವು ಮುಗಿಯಿತು.

* * *

ನಾಲ್ಕನೆಯ ಸರ್ಗ

ಹನುಮಂತನು ರಾವಣಕಾಂತಃಪುರವನ್ನು ಪ್ರವೇಶಿಸಿದುದು–

ಸ ನಿರ್ಮಥ್ಯ ಪುರೀಂ ಶ್ರೇಷ್ಠಾಂ ಲಂಕಾಂ ತಾಂ ಕಾಮರೂಪಿಣೀಂ ।
ವಿಕ್ರಮೇಣ ಮಹಾತೇಜಾ ಹನೂಮಾನ್ ಕಪಿಸತ್ತಮಃ ॥ ೧॥

ಅದ್ವಾರೇಣ ಮಹಾಬಾಹುಃ ಪ್ರಾಕಾರಮಭಿಪುಪ್ಲುವೇ ।
ನಿಶಿ ಲಂಕಾಂ ಮಹಾಸತ್ತ್ವೋ ವಿವೇಶ ಕಪಿಕುಂಜರಃ ॥ ೨॥

ಪ್ರವಿಶ್ಯ ನಗರೀಂ ಲಂಕಾಂ ಕಪಿರಾಜಹಿತಂಕರಃ ।
ಚಕ್ಷೇಽಥ ಖಾದಂ ಸಮ್ಮಂ ಚ ಶತ್ರೂಣಾಂ ಸ ತು ಮೂರ್ಧನಿ ॥ ೩॥

ಪ್ರವಿಷ್ಟಃ ಸತ್ತ್ವಸಂಪನ್ನೋ ನಿಶಾಯಾಂ ಮಾರುತಾತ್ಮಜಃ ।
ಸ ಮಹಾಪಥಮಾಸ್ಥಾಯ ಮುಕ್ತಪುಷ್ಪವಿರಾಜಿತಮ್ ॥ ೪॥

ತತಸ್ತು ತಾಂ ಪುರೀಂ ಲಂಕಾಂ ರಮ್ಯಾಮಭಿಯಯೌ ಕಪಿಃ ।
ಹನಿತೋತ್ಪಷ್ಟನಿನದೈಸ್ತೂರ್ಯಘೋಷಪುರಃಸರೈಃ ॥ ೫॥

ವಜ್ರಾಂಕುಶನಿಕಾಶೈಶ್ಚ ವಜ್ರಜಾಲವಿಭೂಷಿತೈಃ ।
ಗೃಹಮುಖ್ಯೈಃ ಪುರೀ ರಮ್ಯಾ ಬಭಾಸೇ ದ್ಯೌರಿವಾಂಬುದೈಃ ॥ ೬॥

ಮಹಾತೇಜಸ್ವಿಯಾದ, ಮಹಾಸತ್ತ್ವನಾದ, ಮಹಾವೀರ್ಯನಾದ, ಕಪಿಶ್ರೇಷ್ಠನಾದ ಹನುಮಂತನು ಕಾಮರೂಪಿಣಿಯಾದ, ಶ್ರೇಷ್ಠರಾಕ್ಷಸಿಯಾದ ಲಂಕೆಯ ಅಧಿದೇವತೆಯನ್ನು ಪರಾಕ್ರಮ ದಿಂದ ಜಯಿಸಿದನು. ॥ ೧॥ ಸುಗ್ರೀವನಿಗೆ ಹಿತವನ್ನುಂಟು ಮಾಡುವ ಮಹಾಬಾಹುವಾದ ಆ ಹನುಮಂತನು ಮುಖ್ಯದ್ವಾರ ವನ್ನು ಬಿಟ್ಟು ಅದ್ವಾರದಿಂದ * ಕೋಟೆಯನ್ನು ಹಾರಿ ಲಂಕಾನಗರವನ್ನು ಪ್ರವೇಶಿಸಿದನು. ॥ ೨॥ ಸತ್ತ್ವಸಂಪನ್ನನಾದ ಆ ಮಾರುತಿಯು ಲಂಕಾಪಟ್ಟಣವನ್ನು ಪ್ರವೇಶಿಸುವಾಗ ಎಡಗಾಲನ್ನು ಮುಂದಿಟ್ಟನು. ಹಾಗೆಯೇ ಶತ್ರುಗಳ ತಲೆಯನ್ನೇ ಎಡಗಾಲಿನಿಂದ ಮೆಟ್ಟದನೋ ** ಎಂಬಂತೆ ರಾತ್ರಿಯಲ್ಲಿ ನಗರವನ್ನು ಪ್ರವೇಶಿಸಿದನು. ॥ ೩॥

ಆ ಮಹಾಕಪಿಯು ಮುತ್ತುಗಳಿಂದಲೂ, ಪುಷ್ಪಗಳಿಂದಲೂ ಅಲಂಕರಿಸಲ್ಪಟ್ಟು ರಾರಾಜಿಸುತ್ತಿದ್ದ ರಾಜಮಾರ್ಗವನ್ನು ಅನುಸರಿಸಿ ರಮ್ಯವಾದ ಲಂಕಾಪಟ್ಟಣಕ್ಕೆ ಅಭಿಮುಖನಾಗಿ ಪಯಣಿಸುತ್ತಿದ್ದನು. ॥ ೪॥ ಅಲ್ಲಿಯ ಗೃಹಗಳು ಉತ್ಕೃಷ್ಟವಾದ ನಗು-ಅಟ್ಟಹಾಸಗಳಿಂದಲೂ ಮಂಗಳವಾದ್ಯ ಘೋಷ ಗಳಿಂದಲೂ ನಿನಾದಿತವಾಗಿದ್ದವು. ಆ ಸೌಧಗಳು ಐರಾವತ ದಂತೆ ಬೆಳ್ಳಗಿದ್ದು ಉನ್ನತವಾಗಿದ್ದವು. ಅವುಗಳ ಕಿಟಕಿಗಳು ವಜ್ರಖಚಿತ ಬಲೆಗಳಿಂದ ಕೂಡಿದ್ದು ಅತ್ಯಂತ ಶೋಭಾಯಮಾನಮಾಗಿ ಕಾಣುತ್ತಿದ್ದವು. ಇಂತಹ ಸುಂದರ ಸೌಧಗಳಿಂದ ಲಂಕಾಪಟ್ಟಣವು ರಾರಾಜಿಸುತ್ತಿತ್ತು. ಆ ಸಮಯದಲ್ಲಿ ಲಂಕಾಪಟ್ಟಣವು ಬಿಳಿಯ ಮೋಡಕ್ಕೆ ಸದೃಶವಾಗಿದ್ದು, ಶುಭಪ್ರದವಾಗಿದ್ದ ಪದ್ಮ-ಸ್ವಸ್ತಿಕ ಮತ್ತು

---

* ಗ್ರಾಮಂವಾ ನಗರಂವಾಪಿ ಪತ್ತನಂ ವಾ ಪರಸ್ಯ ಹಿ । ವಿಶೇಷಾತ್ ಸಮಯೇ ಸೌಮ್ಯ ನದ್ವಾರೇಣ ವಿಹೇನ್ನೃಪಃ ॥ (ನೀತಿಶಾಸ್ತ್ರ)

ಎಲೈ ಸೌಮ್ಯ! ಶತ್ರುಗಳ ಗ್ರಾಮವನ್ನಾಗಲೀ, ನಗರವಾಗಲೀ, ಪಟ್ಟಣವಾಗಲೀ, ವಿಶೇಷ ಸಮಯದಲ್ಲಿ ರಾಜನು ಮುಖ್ಯದ್ವಾರದಿಂದ ಪ್ರವೇಶಿಸಬಾರದು.

'ಅದ್ವಾರೇಣ ಪ್ರವಿಶೇಚ್ಛತ್ರುವಿನಾಶಾಯ'' – ಶತ್ರುವಿನ ವಿನಾಶವನ್ನು ಬಯಸುವವನು ಹೆಬ್ಬಾಗಿಲಿನ ಮೂಲಕ ನಗರವನ್ನು ಪ್ರವೇಶಿಸಬಾರದು. ಎಂಬ ನೀತಿಯನ್ನು ಅನುಸರಿಸಿ ಹನುಮಂತನು ಹೆಬ್ಬಾಗಿಲಿನಿಂದ ಲಂಕೆಯನ್ನು ಪ್ರವೇಶಿಸಲಿಲ್ಲ.

** ''ಪ್ರಯಾಣಕಾಲೇ ಸ್ವಗೃಹ ಪ್ರವೇಶೇ ವಿವಾಹ ಕಾಲೇಽಪಿ ಚ ದಕ್ಷಿಣಾಂಘ್ರಿಮ್ ।
ಕೃತ್ವಾಗ್ರತಃ ಶತ್ರುಪುರಪ್ರವೇಶೇ ವಾಮಂ ನಿಧಧ್ಯಾಚ್ಚರಣಂ ನೃಪಾಲಃ ॥

ಪ್ರಯಾಣ ಕಾಲದಲ್ಲಿಯೂ, ತನ್ನ ಮನೆಯನ್ನು ಪ್ರವೇಶಿಸಲುವಾಗಲೂ, ವಿವಾಹಕಾಲದಲ್ಲಿಯೂ, ಬಲಗಾಲನ್ನು ಮುಂದಿಡಬೇಕು. ರಾಜನಾದವನು (ಅಥವಾ ರಾಜದೂತನು) ಶತ್ರುಪುರ ಪ್ರವೇಶಕಾಲದಲ್ಲಿ ಎಡಗಾಲನ್ನೇ ಮುಂದಿಟ್ಟು ಪ್ರವೇಶಿಸಬೇಕು.

ಪ್ರಜ್ವಾಲ ತದಾ ಲಂಕಾ ರಕ್ಷೋಗಣಗೃಹೈಃ ಶುಭೈಃ।
ಸಿತಾಭ್ರಸದೃಶೈರ್ಹೈಮೈಃ ಪದ್ಮಸ್ವಸ್ತಿಕಸಂಜ್ಞಿತೈಃ ॥ ೭॥

ವರ್ಧಮಾನಗೃಹೈಶ್ಚಾಪಿ ಸರ್ವತಃ ಸುವಿಭೂಷಿತೈಃ।
ತಾಂ ಚಿತ್ರಮಾಲ್ಯಾಭರಣಾಂ ಕಪಿರಾಜಹಿತಂಕರಃ ॥ ೮॥

ರಾಘವಾರ್ಥಂ ಚರನ್ ಶ್ರೀಮಾನ್ ದದರ್ಶ ಚ ನನಂದ ಚ।
ಭವನಾದ್ಭವನಂ ಗಚ್ಛನ್ ದದರ್ಶ ಪವನಾತ್ಮಜಃ ॥ ೯॥

ವಿವಿಧಾಕೃತಿರೂಪಾಣಿ ಭವನಾನಿ ತತಸ್ತತಃ।
ಶುಶ್ರಾವ ಮಧುರಂ ಗೀತಂ ತ್ರಿಸ್ಥಾನಸ್ವರಭೂಷಿತಮ್ ॥ ೧೦॥

ಸ್ತ್ರೀಣಾಂ ಮದಸಮೃದ್ಧಾನಾಂ ದಿವಿ ಚಾಪ್ಸರಸಾಮಿವ।
ಶುಶ್ರಾವ ಕಾಂಚೀನಿನದಂ ನೂಪುರಾಣಾಂ ಚ ನಿಃಸ್ವನಮ್ ॥ ೧೧॥

ಸೋಪಾನನಿನದಾಂಶ್ಚೈವ ಭವನೇಷು ಮಹಾತ್ಮನಾಮ್।
ಆಸ್ಫೋಟಿತನಿನಾದಾಂಶ್ಚ ಕ್ಷ್ವೇಲಿತಾಂಶ್ಚ ತತಸ್ತತಃ ॥ ೧೨॥

ಶುಶ್ರಾವ ಜಪತಾಂ ತತ್ರ ಮಂತ್ರಾನ್ ರಕ್ಷೋಗೃಹೇಷು ವೈ।
ಸ್ವಾಧ್ಯಾಯನಿರತಾಂಶ್ಚೈವ ಯಾತುಧಾನಾನ್ ದದರ್ಶ ಸಃ ॥ ೧೩॥

ರಾವಣಸ್ತವಸಂಯುಕ್ತಾನ್ ಗರ್ಜತೋ ರಾಕ್ಷಸಾನಪಿ।
ರಾಜಮಾರ್ಗಂ ಸಮಾವೃತ್ಯ ಸ್ಥಿತಂ ರಕ್ಷೋಗಣಂ ಮಹತ್ ॥ ೧೪॥

ದದರ್ಶ ಮಧ್ಯಮೇ ಗುಲ್ಮೇ ರಾಕ್ಷಸಸ್ಯ ಚರಾನ್ ಬಹೂನ್।
ದೀಕ್ಷಿತಾನ್ ಜಟಿಲಾನ್ ಮುಂಡಾನ್ ಗೋಽಜಿನಾಂಬರವಾಸಸಃ ॥

ವರ್ಧಮಾನಗಳೆಂಬ * ಆಕೃತಿಗಳಿಂದ ಕೂಡಿದ್ದ ಸರ್ವತ್ರ ಶೃಂಗರಿಸಿದ್ದ ರಾಕ್ಷಸರ ಮನೆಗಳಿಂದ ಪ್ರಜ್ವಲಿಸುತ್ತಿದ್ದಿತು. ॥ ೫-೭॥

ಕಪಿರಾಜನಾದ ಸುಗ್ರೀವನಿಗೆ ಸಚಿವನಾದ, ಸ್ವಾಮಿ ಕಾರ್ಯಸಾಧಕ ದಕ್ಷನಾದ ಹನುಮಂತನು ಶ್ರೀರಾಘವನ ಕಾರ್ಯಾರ್ಥವಾಗಿ ಸಂಚರಿಸುತ್ತಾ ವಿಚಿತ್ರವಾದ ಮಾಲೆಗಳಿಂದಲೂ, ಆಭರಣಗಳಿಂದಲೂ ಸಮಲಂಕೃತವಾಗಿದ್ದ ಲಂಕೆಯನ್ನು ನೋಡಿ ಆನಂದಿಸಿದನು. ॥ ೮॥ ರಾಜಮಾರ್ಗದಲ್ಲಿ ನಡೆದು ಹೋಗುತ್ತಿದ್ದಾಗ ಒಂದೊಂದು ಭವನವನ್ನು ನೋಡುತ್ತಾ ಹೋಗುತ್ತಿದ್ದ ವಾಯುನಂದನನು ಪದ್ಮ-ಸ್ವಸ್ತಿಕ ಮೊದಲಾದ ಆಕಾರಗಳಿಂದಲೂ, ವರ್ಣಗಳಿಂದಲೂ ಕೂಡಿದ್ದ ಭವನಗಳನ್ನು ನೋಡಿದನು. ॥ ೯॥ ಹಾಗೆಯೇ ಹೋಗುತ್ತಿದ್ದಾಗ ಮದನ ಪರವಶರಾಗಿದ್ದ ಸ್ವರ್ಗದ ಅಪ್ಸರೆಯರಂತೆ ಇದ್ದ ಸ್ತ್ರೀಯರ ಎದೆ-ಕತ್ತು-ಶಿರಸ್ಸು ಎಂಬ ಮೂರು ಸ್ಥಾನಗಳಲ್ಲಿ ಹುಟ್ಟುವ ಮಂದ್ರ-ಮಧ್ಯಮ-ತಾರ ಸ್ವರಗಳಿಂದ ಕೂಡಿದ್ದ ಸುಮಧುರ ಸಂಗೀತ ಗೀತೆಗಳನ್ನು ಕೇಳಿದನು. ॥ ೧೦॥ ಹೆಚ್ಚಿನ ಸಂಪನ್ನರಾದ ರಾಕ್ಷಸರ ಭವನಗಳಲ್ಲಿ ಸ್ತ್ರೀಯರು ತೊಟ್ಟಿದ್ದ ಒಡ್ಯಾಣಗಳ ಧ್ವನಿಯನ್ನೂ, ಕಾಲಂದುಗೆಗಳ ಧ್ವನಿಯನ್ನೂ, ಅವರು ಮಹಡಿಯಿಂದ ಇಳಿದು ಬರುತ್ತಿದ್ದಾಗ ಆಗುವ ಕಾಲುಗಳ ಸಪ್ಪಳವನ್ನು ಹನುಮಂತನು ಕೇಳಿದನು. ॥ ೧೧॥ ಅಲಲ್ಲಿ ರಾಕ್ಷಸರ ಮನೆಗಳಲ್ಲಿ ಯೋಧರು ಭುಜಗಳನ್ನು ತಟ್ಟಿಕೊಳ್ಳುತ್ತಿದ್ದ ಶಬ್ದಗಳೂ, ಅವರ ಸಿಂಹಗರ್ಜನೆಗಳೂ ಕೆಲವರು ಮಾಡುತ್ತಿದ್ದ ಜಪದ ಮಂತ್ರಗಳ ಧ್ವನಿಗಳೂ ಮಾರುತಿಗೆ ಕೇಳಿಬಂದುವು. ॥ ೧೨॥ ಅಧ್ಯಯನದಲ್ಲಿ ನಿರತರಾದ ರಾಕ್ಷಸರನ್ನೂ, ರಾವಣನನ್ನೇ ಸ್ತುತಿಸ್ತುತಿರುವವರನ್ನು, ಗರ್ಜಿಸುತ್ತಿರುವ ರಾಕ್ಷಸರನ್ನು ನೋಡಿದನು. ॥ ೧೩॥ ರಾಜಮಾರ್ಗವನ್ನು ಆವರಿಸಿ ನಿಂತಿದ್ದ ರಾಕ್ಷಸರ ಸಮೂಹಗಳನ್ನು ನೋಡುತ್ತಾ ಮಾರುತಿಯು ಮುನ್ನಡೆದನು. ಲಂಕೆಯ ಮಧ್ಯಮಕಕ್ಷೆಯಲ್ಲಿ ಸೇನಾನಿವೇಶನದಲ್ಲಿ ರಾಕ್ಷಸನಾಜನ ಅನೇಕ ಗೂಢಚಾರರನ್ನೂ ನೋಡಿದನು. ॥ ೧೪॥ ಅವರಲ್ಲಿ ಕೆಲವರು ಯಜ್ಞದೀಕ್ಷಿತರಾಗಿದ್ದರು. ಕೆಲವರು ಜಟೆಗಳನ್ನು ಧರಿಸಿದ್ದರು. ಕೆಲವರು ಆಯುಧಗಳ ರೂಪದಲ್ಲಿ ದರ್ಭೆಗಳನ್ನೇ ಮುಷ್ಟಿಯಲ್ಲಿ

---

* ಪದ್ಮ-ಸ್ವಸ್ತಿಕ-ವರ್ಧಮಾನಗಳು ಆಯಾ ಲಕ್ಷಣಗಳಿಂದ ಕೂಡಿದ ಗೃಹಗಳ ಪ್ರಭೇದಗಳು

ಚತುಃ ಶಾಲಂ ಚತುರ್ದ್ವಾರಂ ಸರ್ವತೋಭದ್ರಸಂಜ್ಞಕಮ್ ।
ಪಶ್ಚಿಮದ್ವಾರರಹಿತಂ ನಂದ್ಯಾವರ್ತಾಹ್ವಯಂ ತು ತತ್ ॥
ದಕ್ಷಿಣದ್ವಾರರಹಿತಂ ವರ್ಧಮಾನಂ ಧನಪ್ರದಮ್ ।
ಪ್ರಾಗ್ದ್ವಾರರಹಿತಂ ಸ್ವಸ್ತಿಕಾಖ್ಯಂ ಪುತ್ರಧನಪ್ರದಮ್ ॥
(ವರಾಹಮಿಹಿರ ಸಂಹಿತಾ)

ನಾಲ್ಕು ಪ್ರಾಂಗಣಗಳುಳ್ಳ ಮತ್ತು ನಾಲ್ಕು ಬಾಗಿಲುಗಳುಳ್ಳ ಮನೆಗೆ ಸರ್ವತೋಭದ್ರವೆಂದು ಹೆಸರು. ಪಶ್ಚಿಮದಲ್ಲಿ ಬಾಗಿಲು ಇಲ್ಲದಿರುವುದಕ್ಕೆ ನಂದ್ಯಾವರ್ತವೆಂದು ಹೆಸರು. ದಕ್ಷಿಣದಲ್ಲಿ ಬಾಗಿಲು ಇಲ್ಲದಿರುವುದಕ್ಕೆ ವರ್ಧಮಾನವೆಂದು ಹೆಸರು. ಇದು ಧನಪ್ರದವಾಗಿದೆ. ಪೂರ್ವದಿಕ್ಕಿಗೆ ಬಾಗಿಲು ಇಲ್ಲದಿರುವುದಕ್ಕೆ ಸ್ವಸ್ತಿಕವೆಂದು ಹೆಸರು. ಇಂತಹ ಮನೆಯಲ್ಲಿರುವುದರಿಂದ ಪುತ್ರಾಭಿವೃದ್ಧಿಯೂ, ಧನಾಭಿವೃದ್ಧಿಯೂ ಆಗುವುದು.

ದರ್ಭಮುಷ್ಟಿಪ್ರಹರಣಾನಗ್ನಿಕುಂಡಾಯುಧಾಂಸ್ತಥಾ ।
ಕೂಟಮುದ್ಗರಪಾಣೀಂಶ್ಚ ದಂಡಾಯುಧಧರಾನಪಿ ॥ ೧೬॥

ವಿಕಾಕ್ಷಾನೇಕಕರ್ಣಾಂಶ್ಚ ಲಂಬೋದರಪಯೋಧರಾನ್ ।
ಕರಾಲಾನ್ ಭುಗ್ನವಕ್ತ್ರಾಂಶ್ಚ ವಿಕಟಾನ್ ವಾಮನಾಂಸ್ತಥಾ ॥ ೧೭॥

ಧನ್ವಿನಃ ಖಡ್ಗಿನಶ್ಚೈವ ಶತಘ್ನೀಮುಸಲಾಯುಧಾನ್ ।
ಪರಿಘೋತ್ತಮಹಸ್ತಾಂಶ್ಚ ವಿಚಿತ್ರಕವಚೋಜ್ಜ್ವಲಾನ್ ॥ ೧೮॥

ನಾತಿಸ್ಥೂಲಾನ್ನಾತಿಕೃಶಾನ್ನಾತಿದಿರ್ಘಾತಿಹ್ರಸ್ವಕಾನ್ ।
ನಾತಿಗೌರಾನ್ನಾತಿಕೃಷ್ಣಾನ್ನಾತಿಕುಬ್ಜಾನ್ನ ವಾಮನಾನ್ ॥ ೧೯॥

ವಿರೂಪಾನ್ ಬಹುರೂಪಾಂಶ್ಚ ಸುರೂಪಾಂಶ್ಚ ಸುವರ್ಚಸಃ ।
ಧ್ವಜೀನ್ ಪತಾಕಿನಶ್ಚೈವ ದದರ್ಶ ವಿವಿಧಾಯುಧಾನ್ ॥ ೨೦॥

ಶಕ್ತಿವೃಕ್ಷಾಯುಧಾಂಶ್ಚೈವ ಪಟ್ಟಿಶಾಶನಿಧಾರಿಣಃ ।
ಕ್ಷೇಪಣೀಪಾಶಹಸ್ತಾಂಶ್ಚ ದದರ್ಶ ಸ ಮಹಾಕಪಿಃ ॥ ೨೧॥

ಸ್ರಗ್ವಿಣಸ್ತ್ವನುಲಿಪ್ತಾಂಶ್ಚ ವರಾಭರಣಭೂಷಿತಾನ್ ।
ನಾನಾವೇಷಸಮಾಯುಕ್ತಾನ್ ಯಥಾಸ್ವೈರಗತಾನ್ ಬಹೂನ್ ॥ ೨೨॥

ತೀಕ್ಷ್ಣ ಶೂಲಧರಾಂಶ್ಚೈವ ವಜ್ರಿಣಶ್ಚ ಮಹಾಬಲಾನ್ ।
ಶತಸಾಹಸ್ರಮವ್ಯಗ್ರಮಾರಕ್ಷಂ ಮಧ್ಯಮಂ ಕಪಿಃ ॥ ೨೩॥

ರಕ್ಷೋಽಧಿಪತಿನಿರ್ದಿಷ್ಟಂ ದದರ್ಶಾಂತಃಪುರಾಗ್ರತಃ ।
ಸ ತದಾ ತದ್ಗೃಹಂ ದೃಷ್ಟ್ವಾ ಮಹಾಹಾಟಕತೋರಣಮ್ ॥ ೨೪॥

ರಾಕ್ಷಸೇಂದ್ರಸ್ಯ ವಿಖ್ಯಾತಮದ್ರಿಮೂರ್ಧ್ನಿ ಪ್ರತಿಷ್ಠಿತಮ್ ।
ಪುಂಡರೀಕಾವತಂಸಾಭಿಃ ಪರಿಖಾಭಿಃ ಸಮಾವೃತಮ್ ॥ ೨೫॥

ಧರಿಸಿದ್ದರು.* ಕೃತ್ಯಾದಿ ಶಕ್ತಿಗಳನ್ನು ಆಯುಧರೂಪವಾಗಿ ಸೃಷ್ಟಿಸಬಲ್ಲ ಅಗ್ನಿಕುಂಡಗಳನ್ನು ಕೆಲವರು ಆಶಾಧಿಸುತ್ತಿದ್ದರು. ॥ ೧೫॥

ಹಾಗೆಯೇ ಮುಂದರಿಯುತ್ತಿದ್ದಂತೆ ಕೆಲವರು ಶೂಲಾಯುಧಗಳನ್ನು, ಕೆಲವರು ಮುದ್ಗರವನ್ನು** ಕೆಲವರು ದಂಡಾಯುಧಗಳನ್ನು ಹಿಡಿದಿದ್ದರು. ॥ ೧೬॥ ಅವರಲ್ಲಿ ಕೆಲವರಿಗೆ ಒಂದೇ ಕಣ್ಣಿತ್ತು, ಕೆಲವರಿಗೆ ಒಂದೇ ಕಿವಿಯಿತ್ತು, ಕೆಲವರು ಉದ್ದವಾದ ಹೊಟ್ಟೆಗಳನ್ನು, ಸ್ತನಗಳನ್ನು ಹೊಂದಿದ್ದರು. ಎಲ್ಲರೂ ಭಯಂಕರವಾದ ಆಕಾರವುಳ್ಳವರಾಗಿದ್ದರು. ವಕ್ರಮುಖರೂ, ಕುಟಿಲಮುಖರೂ ಅಲ್ಲಿದ್ದರು. ಕೆಲವರು ಏರುಪೇರಾದ ಅಂಗವುಳ್ಳವರೂ, ಕುಳ್ಳರೂ ಆಗಿದ್ದರು. ಹಲವಾರು ಮಂದಿ ಧನುಸ್ಸು, ಖಡ್ಗ, ಶತಘ್ನೀ, ಮುಸಲ ಇವೇ ಮುಂತಾದ ಆಯುಧಗಳನ್ನು ಧರಿಸಿದ್ದರು. ಕೆಲವರು ಉತ್ತಮವಾದ ಪರಿಘಾಯುಧಗಳನ್ನು, ಕೆಲವರು ವಿಚಿತ್ರವಾದ ಕವಚಗಳನ್ನು ಧರಿಸಿ ಪ್ರಜ್ವಲಿಸುತ್ತಿದ್ದರು. ಹೆಚ್ಚು ಸ್ಥೂಲರಲ್ಲದವರನ್ನು, ಅತ್ಯಂತ ಕೃಶರಲ್ಲದವರನ್ನು, ಹೆಚ್ಚು ಎತ್ತರವಾಗಿಲ್ಲದವರನ್ನು, ಮೋಟರಲ್ಲದವರನ್ನು, ಹೆಚ್ಚು ಬಿಳುಪಾಗಿಲ್ಲದವರನ್ನು, ಹೆಚ್ಚುಕಪ್ಪಾಗಿಲ್ಲದವರನ್ನು, ಹೆಚ್ಚು ಕುಳ್ಳರಲ್ಲದವರನ್ನು ನೋಡಿದನು. ॥ ೧೭-೧೯॥ ವಿರೂಪರನ್ನು, ಬಹುರೂಪರನ್ನು, ಸುರೂಪರನ್ನು, ಒಳ್ಳೆಯ ತೇಜಸ್ವಿಗಳನ್ನು ಹನುಮಂತನು ಅಲ್ಲಿ ನೋಡಿದನು. ಧ್ವಜ, ಪತಾಕೆಗಳನ್ನು ಕೈಗಳಲ್ಲಿ ಹಿಡಿದಿರುವವರನ್ನು ಶಕ್ತಿ, ವೃಕ್ಷ, ಪಟ್ಟಿಶ, ವಜ್ರ, ಕಣವೆ, ಹಗ್ಗ ಮುಂತಾದ ಹಲವು ಬಗೆಯ ಆಯುಧಗಳನ್ನು ಹಿಡಿದು ನಿಂತಿದ್ದ ರಾಕ್ಷಸರನ್ನು ಮಹಾಕಪಿಯು ನೋಡಿದನು. ॥ ೨೦-೨೧॥ ಸ್ವೆಚ್ಛೆಯಿಂದ ಸಂಚರಿಸುತ್ತಿದ್ದವರನ್ನೂ, ಮಾಲಾಧಾರಿಗಳನ್ನು, ಗಂಧಬಳಿದುಕೊಂಡಿದ್ದವರನ್ನು, ಶ್ರೇಷ್ಠವಾದ ಆಭರಣಗಳಿಂದ ಅಲಂಕೃತರಾದವರನ್ನು, ನಾನಾವಿಧವಾದ ವೇಷಧಾರಿಗಳನ್ನು ತೀಕ್ಷ್ಣವಾದ ಶೂಲಗಳನ್ನು ಧರಿಸಿದ್ದವರನ್ನು, ವಜ್ರಾಯುಧಧಾರಿಗಳನ್ನು, ಮಹಾಬಲಶಾಲಿಗಳನ್ನು ಹನುಮಂತನು ಅಲ್ಲಿ ನೋಡಿದನು. ॥ ೨೧-೨೩॥

ನಗರ ರಕ್ಷಣೆಯಲ್ಲಿಯೇ ಏಕಾಗ್ರತೆಯಿಂದ ನಿರತರಾಗಿದ್ದ, ರಾಕ್ಷಸಾಧಿಪತಿಯಾದ ರಾವಣನಿಂದ ಆಜ್ಞಪ್ತರಾದ ಲಕ್ಷ ಮಂದಿ ರಾಕ್ಷಸರನ್ನು ಅಂತಃಪುರದ ಮುಂಭಾಗದಲ್ಲಿದ್ದವರನ್ನು ಅವನು ನೋಡಿದನು. ಅನಂತರ ಹನುಮಂತನು ರಾಕ್ಷಸೇಂದ್ರನಾದ ರಾವಣನ ಸುವಿಖ್ಯಾತವಾದ, ಪರ್ವತದ ಅಗ್ರಭಾಗದಲ್ಲಿದ್ದ ಭವ್ಯವಾದ ಅರಮನೆಯನ್ನು ನೋಡಿದನು. ಆ ಅರಮನೆಗೆ ಸುವರ್ಣಮಯವಾದ ಸಿಂಹದ್ವಾರವಿತ್ತು. ಬಿಳಿಯ ಕಮಲಗಳಿಂದ ವಿಭೂಷಿತವಾಗಿದ್ದ ಕಂದಕಗಳಿಂದ ಅದು

* 'ಯಥಾ ವಜ್ರಂ ಹರೇಃ ಪಾಣೌ ತಥಾ ವಿಪ್ರಕರೇ ಕುಶಾಃ' ।
ಮಂತ್ರಜ್ಞನಾದ ಬ್ರಾಹ್ಮಣನ ಕೈಯಲ್ಲಿರುವ ದರ್ಭೆಯು ವಜ್ರಾಯುಧಕ್ಕೆ ಸಮಾನವಾದುದು.

** ಮುದ್ಗರಃ ದೊಡ್ಡದಾದ ಕಬ್ಬಿಣದ ಸಲಾಕೆ (ಹಾರೆ)

ಪ್ರಾಕಾರಾವೃತಮತ್ಯುಚ್ಚಂ ದದರ್ಶ ಸ ಮಹಾಕಪಿಃ ।
ತ್ರಿವಿಷ್ಟಪನಿಭಂ ದಿವ್ಯಂ ದಿವ್ಯನಾದವಿನಾದಿತಮ್ ॥ ೨೬॥

ವಾಜಿಹೇಷಿತಸಂಘುಷ್ಟಂ ನಾದಿತಂ ಭೂಷಣೈಸ್ತಥಾ ।
ರಥೈರ್ಯಾನೈರ್ವಿಮಾನೈಶ್ಚ ತಥಾ ಗಜಹಯೈಃ ಶುಭೈಃ ॥ ೨೭॥

ವಾರಣೈಶ್ಚ ಚತುರ್ದಂತೈಃ ಶ್ವೇತಾಭ್ರನಿಚಯೋಪಮೈಃ ।
ಭೂಷಿತಂ ರುಚಿರದ್ವಾರಂ ಮತ್ತೈಶ್ಚ ಮೃಗಪಕ್ಷಿಭಿಃ ॥ ೨೮॥

ರಕ್ಷಿತಂ ಸುಮಹಾವೀರ್ಯೈರ್ಯಾತುಧಾನೈಃ ಸಹಸ್ರಶಃ ।
ರಾಕ್ಷಸಾಧಿಪತೇರ್ಗುಪ್ತಮಾವಿವೇಶ ಗೃಹಂ ಕಪಿಃ ॥ ೨೯॥

ಸಹೇಮಚಾಂಬೂನದಚಿತ್ರವಾಲಂ
ಮಹಾರ್ಹಮುಕ್ತಾಮಣಿಭೂಷಿತಾಂತಮ್ ।
ಪರಾರ್ಧ್ಯಕಾಲಾಗರುಚಂದನಾಕ್ತಂ
ಸ ರಾವಣಾಂತಃಪುರಮಾವಿವೇಶ ॥ ೩೦॥

ಸುತ್ತುವರಿಯಲ್ಪಟ್ಟಿತ್ತು. ಸುತ್ತಲೂ ಪ್ರಾಕಾರಗಳಿ ದ್ದವು. ಸ್ವರ್ಗ ಸದೃಶವಾಗಿದ್ದ ಆ ರಾಜಭವನವು ದಿವ್ಯನಾದ ದಿಂದ ನಿನಾದಿತವಾಗಿದ್ದಿತು. ॥ ೨೪-೨೫॥ ಅಲ್ಲಿ ಕುದುರೆಗಳ ಹೇಷಾರವವು ಕೇಳಿ ಬರುತ್ತಿತ್ತು. ಅದ್ಭುತವಾದ ಕುದುರೆಗಳೂ, ರಥಗಳೂ, ಯಾನಗಳೂ, ವಿಮಾನಗಳೂ, ಶುಭಲಕ್ಷಣದಿಂದ ಕೂಡಿದ ಆನೆ-ಕುದುರೆಗಳೂ, ಬಿಳಿಯ ಮೋಡಗಳ ರಾಶಿಯಂತೆ ಕಾಣುತ್ತಿದ್ದ ನಾಲ್ಕು ದಂತಗಳುಳ್ಳ ಮದಿಸಿದ ಆನೆಗಳೂ, ಮೃಗ-ಪಕ್ಷಿಗಳೂ ಆ ಅರಮನೆಯಲ್ಲಿದ್ದವು. ಅರಮನೆಗೆ ಸುಂದರವಾದ ಮಹಾದ್ವಾರವಿತ್ತು. ಮಹಾ ಪರಾಕ್ರಮಿಗಳಾದ ಸಾವಿರಾರು ರಾಕ್ಷಸರು ಆ ದಿವ್ಯ ಭವನವನ್ನು ಎಲ್ಲ ಕಾಲಗಳಲ್ಲಿಯೂ ರಕ್ಷಿಸುತ್ತಿದ್ದರು. ಅಂತಹ ಅತಿಗೋಪ್ಯವಾದ ರಾಕ್ಷಸೇಶ್ವರ ರಾವಣನ ಅರಮನೆಯನ್ನು ಹನುಮಂತನು ಪ್ರವೇಶಿಸಿದನು. ॥ ೨೬-೨೯॥

ರಾವಣನ ಅಂತಃಪುರವು ತಪ್ತಕಾಂಚನದಿಂದ ನಿರ್ಮಿತವಾದ ಪ್ರಾಕಾರದಿಂದ ಕೂಡಿದ್ದಿತು. ಒಳಭಾಗವು ಅನರ್ಘ್ಯವಾದ ಮುತ್ತಿನ ಮಣಿಗಳಿಂದ ಸಮಲಂಕೃತವಾಗಿತ್ತು. ಶ್ರೇಷ್ಠವಾದ ಕಾಲಾಗರು, ಚಂದನ ಧೂಪಗಳಿಂದ ಧೂಪಿತವಾಗಿತ್ತು. ಅಂತಹ ಪರಮಾದ್ಭುತವಾದ ಕಾಂತಿಯಿಂದ ಕೂಡಿದ್ದ ಅಂತಃಪುರವನ್ನು ಆ ಕಪಿವರನು ಪ್ರವೇಶಿಸಿದನು. ॥ ೩೦॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಚತುರ್ಥಃ ಸರ್ಗಃ ॥ ೪ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಾಲ್ಕನೇ ಸರ್ಗವು ಮುಗಿಯಿತು.

* * *

ಐದನೆಯ ಸರ್ಗ

ಚಂದ್ರಶೋಭಾವರ್ಣನೆ, ಹನುಮಂತನು ರಾವಣನ ಅಂತಃಪುರದಲ್ಲಿ ಸೀತೆಯನ್ನು ಹುಡುಕಿ ಅವಳು ಸಿಕ್ಕದ ಕಾರಣ ದುಃಖಿತನಾದುದು–

ತತಃ ಸ ಮಧ್ಯಂ ಗತಮಂಶುಮಂತಂ
ಜ್ಯೋತ್ಸ್ನಾವಿತಾನಂ ಮಹದುದ್ವಮಂತಮ್ ।
ದದರ್ಶ ಧೀಮಾನ್ ದಿವಿ ಭಾನುಮಂತಂ
ಗೋಷ್ಠೇ ವೃಷಂ ಮತ್ತಮಿವ ಭ್ರಮಂತಮ್ ॥ ೧॥

ಲೋಕಸ್ಯ ಪಾಪಾನಿ ವಿನಾಶಯಂತಂ
ಮಹೋದಧಿಂ ಚಾಪಿ ಸಮೇಧಯಂತಮ್ ।
ಭೂತಾನಿ ಸರ್ವಾಣಿ ವಿರಾಜಯಂತಂ
ದದರ್ಶ ಶೀತಾಂಶುಮಥಾಭಿಯಾಂತಮ್ ॥ ೨॥

ಅನಂತರ ಗೋಶಾಲೆಯೊಳಗೆ ಗೋವುಗಳ ಮಧ್ಯದಲ್ಲಿ ಸುತ್ತಾಡುತ್ತಿರುವ ಮದಿಸಿದ ಹೋರಿಯಂತೆ ಆಕಾಶದ ಮಧ್ಯಭಾಗದಲ್ಲಿ ಅತ್ತಲಿತ್ತ ಸಂಚರಿಸುತ್ತಾ ಪೃಥ್ವಿಯಮೇಲೆ ಅಪಾರವಾದ ಬೆಳದಿಂಗಳನ್ನು ಹೊರಚೆಲ್ಲುತ್ತಾ ನಕ್ಷತ್ರಗಳೊಡನೆ ಸಂಚರಿಸುತ್ತಿದ್ದ ಚಂದ್ರನನ್ನು ಧೀಮಂತನಾದ ಹನುಮಂತನು ನೋಡಿದನು. ॥ ೧॥

ಲೋಕದ ಜನರ ದುಃಖವನ್ನು ತನ್ನ ಆಹ್ಲಾದಕರವಾದ ಬೆಳದಿಂಗಳಿನಿಂದ ನಿವಾರಿಸುತ್ತಿದ್ದ, ಸಮುದ್ರವನ್ನು ಉಕ್ಕಿಸುತ್ತಿದ್ದ, ಸರ್ವಪ್ರಾಣಿಗಳನ್ನು ಪ್ರಕಾಶಗೊಳಿಸುತ್ತಿದ್ದ, ಆಕಾಶದಲ್ಲಿ ಸಾಗುತ್ತಿದ್ದ ಅಮೃತ ಕಿರಣಗಳನ್ನು ಸುರಿಸುತ್ತಿದ್ದ ಚಂದ್ರನನ್ನು ಮಾರುತಿಯು ನೋಡಿದನು. ॥ ೨॥

ಯಾ ಭಾತಿ ಲಕ್ಷ್ಮೀರ್ಭುವಿ ಮಂದರಸ್ಥಾ
ತಥಾ ಪ್ರದೋಷೇಷು ಚ ಸಾಗರಸ್ಥಾ ।
ತಥೈವ ತೋಯೇಷು ಚ ಪುಷ್ಕರಸ್ಥಾ
ರರಾಜ ಸಾ ಚಾರುನಿಶಾಕರಸ್ಥಾ ॥ ೩॥

ಹಂಸೋ ಯಥಾ ರಾಜತಪಂಜರಸ್ಥಃ
ಸಿಂಹೋ ಯಥಾ ಮಂದರಕಂದರಸ್ಥಃ ।
ವೀರೋ ಯಥಾ ಗರ್ವಿತಕುಂಜರಸ್ಥ-
ಶ್ಚಂದ್ರೋಽಪಿ ಬಭ್ರಾಜ ತಥಾಂಬರಸ್ಥಃ ॥ ೪॥

ಸ್ಥಿತಃ ಕಕುದ್ಮಾನಿವ ತೀಕ್ಷ್ಣಶೃಂಗೋ
ಮಹಾಚಲಃ ಶ್ವೇತ ಇವೋತ್ಥಶೃಂಗಃ ।
ಹಸ್ತೀವ ಜಾಂಬೂನದಬದ್ಧ ಶೃಂಗೋ
ರರಾಜ ಚಂದ್ರಃ ಪರಿಪೂರ್ಣಶೃಂಗಃ ॥ ೫॥

ವಿನಷ್ಟ ಶೀತಾಂಶುತುಷಾರಪಂಕೋ
ಮಹಾಗ್ರಹಗ್ರಾಹವಿನಷ್ಟಪಂಕಃ ।
ಪ್ರಕಾಶಲಕ್ಷ್ಮ್ಯಾಶ್ರಯನಿರ್ಮಲಾಂಕೋ
ರರಾಜ ಚಂದ್ರೋ ಭಗವಾನ್ ಶಶಾಂಕಃ ॥ ೬॥

ಶಿಲಾತಲಂ ಪ್ರಾಪ್ಯ ಯಥಾ ಮೃಗೇಂದ್ರೋ
ಮಹಾರಣಂ ಪ್ರಾಪ್ಯ ಯಥಾ ಗಜೇಂದ್ರಃ ।
ರಾಜ್ಯಂ ಸಮಾಸಾದ್ಯ ಯಥಾ ನರೇಂದ್ರ-
ಸ್ತಥಾ ಪ್ರಕಾಶೋ ವಿರರಾಜ ಚಂದ್ರಃ ॥ ೭॥

ಪ್ರಕಾಶಚಂದ್ರೋದಯನಷ್ಟದೋಷಃ
ಪ್ರವೃದ್ಧರಕ್ಷಃ ಪಿಶಿತಾಶದೋಷಃ ।
ರಾಮಾಭಿರಾಮೇರಿತ ಚಿತ್ತದೋಷಃ
ಸ್ವರ್ಗಪ್ರಕಾಶೋ ಭಗವಾನ್ ಪ್ರದೋಷಃ ॥ ೮॥

ತಂತ್ರೀಸ್ವನಾಃ ಕರ್ಣಸುಖಾಃ ಪ್ರವೃತ್ತಾಃ
ಸ್ಖಲಂತಿ ನಾರ್ಯಃ ಪತಿಭಿಃ ಸುವೃತ್ತಾಃ ।
ನಕ್ತಂಚರಾಶ್ಚಾಪಿ ತಥಾ ಪ್ರವೃತ್ತಾ
ವಿಹರ್ತುಮತ್ಯದ್ಭುತರೌದ್ರವೃತ್ತಾಃ ॥ ೯॥

ಪ್ರಪಂಚದಲ್ಲಿ ಮಂದರಪರ್ವತದಲ್ಲಿರುವ ಕಾಂತಿಯು ಪ್ರಕಾಶಿಸುವಂತೆ, ಪ್ರದೋಷಕಾಲದಲ್ಲಿ ಸಾಗರದ ಕಾಂತಿಯು ಪ್ರಕಾಶಿಸುವಂತೆ, ಸರೋವರಗಳಲ್ಲಿರುವ ಕಮಲಗಳ ಕಾಂತಿಯು ಪ್ರಕಾಶಿಸುವಂತೆ, ಚಂದ್ರನಲ್ಲಿದ್ದ ಮನೋಹರವಾದ ಕಾಂತಿಯು ಪ್ರಕಾಶಿಸುತ್ತಿತ್ತು. ॥ ೩॥ ಬೆಳ್ಳಿಯ ಪಂಜರದಲ್ಲಿರುವ ಹಂಸದಂತೆ, ಮಂದರಾಚಲದ ಗುಹೆಯಲ್ಲಿದ್ದ ಸಿಂಹವು ಪ್ರಕಾಶಿಸುವಂತೆ, ಮದಿಸಿದ ಆನೆಯ ಮೇಲೆ ಕುಳಿತಿರುವ ವೀರನಂತೆ, ಚಂದ್ರನು ಅಂಬರದಲ್ಲಿ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿದ್ದನು. ॥ ೪॥ ಚೂಪಾದ ಕೋಡುಗಳುಳ್ಳ ಗೂಳಿಯಂತೆಯೂ, ಎತ್ತರವಾದ ಶಿಖರಗಳಿರುವ ಪರ್ವತದಂತೆಯೂ, ಭಂಗಾರದ ಪಟ್ಟಿಗಳಿಂದ ಅಲಂಕೃತವಾದ ದಂತಗಳುಳ್ಳ ಆನೆಯಂತೆಯೂ, ಪರಿಪೂರ್ಣ ಷೋಡಶ ಕಲೆಗಳಿಂದ ಚಂದ್ರನು ವಿರಾಜಿಸುತ್ತಿದ್ದನು. ॥ ೫॥

ಮಂಜಿನ ತುಂತುರುಗಳೆಂಬ ಮಾಲಿನ್ಯವನ್ನು ದೂರಮಾಡಿದ್ದ ಗ್ರಹರಾಜನಾದ ಸೂರ್ಯನ ಕಿರಣಗಳ ಪ್ರತಿಫಲನದಿಂದಾಗಿ ಉಜ್ವಲವಾದ ಬೆಳಕನ್ನು ಹೊಂದಿ ಕತ್ತಲೆಯನ್ನು ಹೋಗಲಾಡಿ ಸಿದ್ದ ಪ್ರಕಾಶ ಲಕ್ಷ್ಮೀಯ ಆಶ್ರಯದಿಂದ ನಿರ್ಮಲವಾಗಿ ಕಾಣುತ್ತಿದ್ದ ಮೃಗಲಾಂಛನವನ್ನು ಹೊಂದಿದ್ದ, ಭಗವಾನ್ ಚಂದ್ರನು ರಾರಾಜಿಸುತ್ತಿದ್ದನು. ॥ ೬॥

ಆಗಸದಲ್ಲಿ ವಿರಾಜಮಾನನಾದ ಶಶಾಂಕನು, ಶಿಲೆಯ ಮೇಲೆ ಸ್ಥಿರವಾಗಿ ನಿಂತಿರುವ ಸಿಂಹದಂತೆ, ಮಹಾರಣರಂಗದಲ್ಲಿ ನಿಂತಿರುವ ಗಜರಾಜನಂತೆ, ಕಳೆದು ಹೋದ ರಾಜ್ಯವನ್ನು ಪಡೆದುಕೊಂಡ ಚಕ್ರವರ್ತಿಯಂತೆ, ಪ್ರಕಾಶಮಾನವಾಗಿ ಬೆಳಗುತ್ತಿದ್ದನು. ॥ ೭॥

ಪೂರ್ಣಮಿಯ ಪೂರ್ಣ ಚಂದ್ರೋದಯದಿಂದ ಅಂಧಕಾರವು ತೊಲಗಿ ಜಗತ್ತಿನ ಜನರೆಲ್ಲರೂ ಹರ್ಷಿತ ರಾದರು. ನಿಶಾಚರರು ಮಾಂಸಭಕ್ಷಣಕ್ಕೆ ಪ್ರವೃತ್ತರಾಗಿ ಸಂತೋಷ ಗೊಂಡರು. ಸ್ತ್ರೀಪುರುಷರು ಅನುರಾಗಸೌಖ್ಯದಲ್ಲಿ ಮುಳುಗಿದ್ದರು. ತಮ್ಮ ಮನಸ್ತಾಪಗಳನ್ನು ಹೀಗೆ ಎಲ್ಲರಿಗೂ ಆನಂದದಾಯಕವಾದ ಪ್ರದೋಷಕಾಲವು ಸೀತಾನ್ವೇಷಣ ತತ್ಪರನಾದ ಹನುಮಂತನಿಗೆ ಸ್ವರ್ಗದಂತೆ ಸುಖದಾಯಕ ವಾಯಿತು. * ॥ ೮॥

ಆಗ ಲಂಕೆಯಲ್ಲಿ ಕರ್ಣಾನಂದಕರವಾದ ವೀಣಾವಾದನದ ಮಧುರ ಶಬ್ದಗಳು ಕೇಳಿ ಬರುತ್ತಿದ್ದುವು. ಒಳ್ಳೆಯ ಸ್ವಭಾವವುಳ್ಳ ಸ್ತ್ರೀಯರು ತಮ್ಮ ಪತಿಗಳೊಡನೆ ನಿದ್ರಿಸಿದ್ದರು. ಅದ್ಭುತವಾದ

* ''ಭಗವಾನ್ ಪ್ರದೋಷಃ''-
ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ । ಜ್ಞಾನವೈರಾಗ್ಯಯೋ ಶ್ಚೈವ ಷಣ್ಣಾಂ ಭಗ ಇತೀರಣಾ॥
ಸಮಗ್ರವಾದ ಐಶ್ವರ್ಯ, ಸಮಗ್ರವಾದ ಧರ್ಮ, ಸತ್‌ಕೀರ್ತಿ, ಪೂರ್ಣಸಂಪತ್ತು, ಅಖಂಡ ಜ್ಞಾನ, ನಿರ್ಮಲವಾದ ವೈರಾಗ್ಯ ಈ ಆರು ಭಗಗಳುಳ್ಳವನು ಭಗವಂತನು ಹದ್ದುಗೆಟ್ಟೈಶ್ವರ್ಯ ಸಂಪನ್ನನಾದ ಹನುಮಂತನಿಗೆ ಭಗವತ್ತ್ವ ರೂಪವಾದ ಈ ಪ್ರದೋಷಕಾಲವು ಸ್ವರ್ಗತುಲ್ಯವಾಗಿ ಸುಖಾನಂದಗಳನ್ನು ಕೊಟ್ಟಿತು.

ಮತ್ತಪ್ರಮತ್ತಾನಿ ಸಮಾಕುಲಾನಿ
ರಥಾಶ್ವಭದ್ರಾಸನಸಂಕುಲಾನಿ ।
ವೀರಶ್ರಿಯಾ ಚಾಪಿ ಸಮಾಕುಲಾನಿ
ದದರ್ಶ ಧೀಮಾನ್ ಸ ಕಪಿಃ ಕುಲಾನಿ ॥ ೧೦॥

ಪರಸ್ಪರಂ ಚಾಧಿಕಮಾಕ್ಷಿಪಂತಿ
ಭುಜಾಂಶ್ಚ ಪೀನಾನಧಿವಿಕ್ಷಿಪಂತಿ ।
ಮತ್ತಪ್ರಲಾಪಾನಧಿವಿಕ್ಷಿಪಂತಿ
ಮತ್ತಾನಿ ಚಾನ್ಯೋನ್ಯಮಧಿಕ್ಷಿಪಂತಿ ॥ ೧೧॥

ರಕ್ಷಾಂಸಿ ವಕ್ತ್ರಾಣಿ ಚ ವಿಕ್ಷಿಪಂತಿ
ಗಾತ್ರಾಣಿ ಕಾಂತಾಸು ಚ ವಿಕ್ಷಿಪಂತಿ ।
ರೂಪಾಣಿ ಚಿತ್ರಾಣಿ ಚ ವಿಕ್ಷಿಪಂತಿ
ದೃಢಾನಿ ಚಾಪಾನಿ ಚ ವಿಕ್ಷಿಪಂತಿ ॥ ೧೨॥

ದದರ್ಶ ಕಾಂತಾಶ್ಚ ಸಮಾಲಭಂತ್ಯ-
ಸ್ತ್ರಥಾಪರಾಸ್ತತ್ರ ಪುನಃ ಸ್ವಪಂತ್ಯಃ ।
ಸುರೂಪವಕ್ತ್ರಾಶ್ಚ ತಥಾ ಹಸಂತ್ಯಃ
ಕ್ರುದ್ಧಾಃ ಪರಾಶ್ಚಾಪಿ ವಿನಿಃಶ್ವಸಂತ್ಯಃ ॥ ೧೩॥

ಮಹಾಗಜೈಶ್ಚಾಪಿ ತಥಾ ನದದ್ಭಿಃ
ಸುಪೂಜಿತೈಶ್ಚಾಪಿ ತಥಾ ಸುಸದ್ಭಿಃ ।
ರರಾಜ ವೀರೈಶ್ಚ ವಿನಿಶ್ವಸದ್ಭಿಃ
ಹ್ರದೋ ಭುಜಂಗೈರಿವ ನಿಃಶ್ವಸದ್ಭಿಃ ॥ ೧೪॥

ಬುದ್ಧಿಪ್ರಧಾನಾನ್ ರುಚಿರಾಭಿಧಾನಾನ್
ಸಂಶ್ರದ್ಧಧಾನಾನ್ ಜಗತಃ ಪ್ರಧಾನಾನ್ ।
ನಾನಾವಿಧಾನಾನ್ ರುಚಿರಾಭಿಧಾನಾನ್
ದದರ್ಶ ತಸ್ಯಾಂ ಪುರಿ ಯಾತುಧಾನಾನ್ ॥ ೧೫॥

ನನಂದ ದೃಷ್ಟ್ವಾ ಚ ಸ ತಾನ್ ಸುರೂಪಾನ್
ನಾನಾಗುಣಾನಾತ್ಮಗುಣಾನುರೂಪಾನ್ ।
ವಿದ್ಯೋತಮಾನಾನ್ ಸ ತದಾನುರೂಪಾನ್
ದದರ್ಶ ಕಾಂಶ್ಚಿತ್ಸ ಪುನರ್ವಿರೂಪಾನ್ ॥ ೧೬॥

ತತೋ ವರಾರ್ಹಾಃ ಸುವಿಶುದ್ಧಭಾವಾ-
ಸ್ತೇಷಾಂ ಸ್ತ್ರಿಯಸ್ತತ್ರ ಮಹಾನುಭಾವಾಃ ।
ಪ್ರಿಯೇಷು ಪಾನೇಷು ಚ ಸಕ್ತಭಾವಾ
ದದರ್ಶ ತಾರಾ ಇವ ಸುಪ್ರಭಾವಾಃ ॥ ೧೭॥

ಮತ್ತು ಭಯಂಕರವಾದ ಆಚರಣೆಯುಳ್ಳ ರಾಕ್ಷಸರು ವಿಹರಿಸಲು ಹೊರಟಿದ್ದರು. ॥ ೯॥

ಧೀರನೂ, ಪ್ರಜ್ಞಾಶಾಲಿಯೂ ಆದ ಹನುಮಂತನು ಅನೇಕ ಭವನಗಳನ್ನು ನೋಡಿದನು. ಕೆಲವು ಮನೆಗಳಲ್ಲಿ ಮದಿರಾಪಾನ ಮತ್ತರಾದ ರಾಕ್ಷಸರಿದ್ದರು. ಕೆಲವು ಮನೆಗಳು ರಥ, ಅಶ್ವ ಮತ್ತು ಭದ್ರಾಸನ (ಆಸನ)ಗಳಿಂದ ಸಂಪನ್ನವಾಗಿದ್ದುವು. ಇನ್ನು ಕೆಲವು ಗೃಹಗಳಲ್ಲಿ ಐಶ್ವರ್ಯಮದದಿಂದ ಕೊಬ್ಬಿದ ರಾಕ್ಷಸರನ್ನು ನೋಡಿದನು. ॥ ೧೦॥ ಆ ಮನೆಗಳಲ್ಲಿದ್ದ ರಾಕ್ಷಸರಲ್ಲಿ ಕೆಲವರು ಪರಸ್ಪರ ಆಕ್ಷೇಪಿಸುತ್ತಿದ್ದರು. ತಮ್ಮ ಉಬ್ಬಿದ ಬಾಹುಗಳನ್ನು ಇನ್ನೊಬ್ಬರ ಹೆಗಲಗಳಲ್ಲಿ ಚಾಚಿದ್ದರು. ಮದ್ಯವನ್ನು ಕುಡಿದು ಮತ್ತರಾದ ಕೆಲವರು ಅಸಂಬದ್ಧವಾದ ಮಾತುಗಳನ್ನಾಡುತ್ತಿದ್ದರು. ಮದವೇರಿದ ರಾಕ್ಷಸರು ಅನ್ಯೋನ್ಯವಾಗಿ ಬೈದಾಡು ತ್ತಿದ್ದರು. ॥ ೧೧॥ ಕೆಲವು ರಾಕ್ಷಸರು ಪರಾಕ್ರಮ ಸೂಚಕವಾಗಿ ಎದೆಗಳನ್ನು ತಟ್ಟಿಕೊಳ್ಳುತ್ತಿದ್ದರು. ಕೆಲವರು ತಮ್ಮ ಅಂಗನೆಯರ ಮೇಲೆ ಅಂಗಾಂಗಗಳನ್ನು ಚೆಲ್ಲಿದ್ದರು. ಕೆಲವರು ಸುಂದರವಾದ ಚಿತ್ರಪಟಗಳನ್ನು ಅಲ್ಲಿ ಜೋಡಿಸುತ್ತಿದ್ದರು. ಕೆಲವರು ದೃಢವಾದ ಬಿಲ್ಲಿನ ನಾಣನ್ನು ಕಿವಿವರೆಗೂ ಸೆಳೆದು ಅಭ್ಯಾಸ ಮಾಡುತ್ತಿದ್ದುದನ್ನು ಹನುಮಂತನು ನೋಡಿದನು. ॥ ೧೨॥

ಆ ಭವನಗಳಲ್ಲಿ ರಾಕ್ಷಸರ ಪತ್ನಿಯರಲ್ಲಿ ಕೆಲವರು ಆಂಗರಾಗಾದಿಗಳನ್ನು ಲೇಪಿಸಿಕೊಳ್ಳುತ್ತಿದ್ದರು. ಇನ್ನು ಕೆಲವು ಸ್ತ್ರೀಯರು ಮರಳಿ ನಿದ್ದೆಹೋದರು. ಸುಂದರಮುಖವುಳ್ಳ ಕೆಲವರು ಸಂತೋಷಸೂಚಕ ನಗುತ್ತಿದ್ದರು. ಕೆಲವು ಪತ್ನಿಯರು ಪತಿಯ ಮೇಲೆ ಕುಪಿತರಾಗಿ ನಿಟ್ಟುಸಿರುಡುತ್ತಿದ್ದರು. ॥ ೧೩॥ ಆ ಲಂಕಾಪಟ್ಟಣವು ಆನೆಗಳ ಘೀಂಕಾರಗಳಿಂದ ತುಂಬಿಹೋಗಿತ್ತು. ಪೂಜ್ಯರಾದ ಸಭಾಸದರಿಂದಲೂ ಕೂಡಿದ್ದು, ನಿಟ್ಟುಸಿರು ಬಿಡುತ್ತಿದ್ದ ವೀರರನ್ನೊಳಗೊಂಡು ಬುಸುಗುಟ್ಟುವ ಸರ್ಪಗಳಿಂದ ತುಂಬಿದ ಸರೋವರದಂತೆ ಕಂಗೊಳಿಸುತ್ತಿತ್ತು. ॥ ೧೪॥

ಆ ಲಂಕೆಯಲ್ಲಿ ಮಹಾಬುದ್ಧಿಶಾಲೀ ರಾಕ್ಷಸರನ್ನು, ಸುಮಧುರವಾಗಿ ಮಾತಾಡುವವರನ್ನು, ಶ್ರದ್ಧಾಳುಗಳನ್ನು, ಅತ್ತಿಂದಿತ್ತ ತಿರುಗಾಡುತ್ತಿದ್ದ ಪ್ರಧಾನರಾದ ರಾಕ್ಷಸನ್ನು, ನಾನಾವಿಧವಾದ ವೇಷಗಳನ್ನು ಧರಿಸಿದವರನ್ನು, ಮನೋಹರವಾದ ನಾಮಧೇಯವುಳ್ಳವರನ್ನೂ ಮಾರುತಿಯು ನೋಡಿದನು. ॥ ೧೫॥ ಅಲ್ಲಿ ಬುದ್ಧಿಶಾಲಿಗಳನ್ನು, ಹೆಚ್ಚಾಗಿ ಅಂದವಾಗಿರುವವನ್ನು, ಸದ್ಗುಣ ಸಂಪನ್ನರನ್ನು * ತಮ್ಮ ಸ್ವಭಾವಕ್ಕನುಸಾರ ವರ್ತಿಸುತ್ತಾ, ಹೆಸರುವಾಸಿಯಾದವರನ್ನು ನೋಡಿ ಆ ಕಪಿವರನು ಬಹಳ ಸಂತೋಷಪಟ್ಟನು. ಹಾಗೆಯೇ ಅವನು ವಿಕೃತಾಕಾರರಾದವನ್ನೂ, ಅದಕ್ಕನುಸಾರ ವರ್ತಿಸುವವರನ್ನೂ ಕೂಡ ನೋಡಿದನು. ॥ ೧೬॥ ಅನಂತರ ಆಂಜನೇಯನು ಶ್ರೇಷ್ಠ ಪುರುಷರಿಗೆ ಯೋಗ್ಯವಾದ ಸತಿಯರನ್ನು, ಪತಿಗಳಲ್ಲಿ ಪ್ರೇಮಾನುರಾಗವುಳ್ಳವರನ್ನು,

* ವಿಭೀಷಣಾದಿ ಸಜ್ಜನರನ್ನು ನೋಡಿ ಹನುಮಂತನು ಆನಂದದಲ್ಲಿ ಮುಳುಗಿಹೋದನು.

ಶ್ರಿಯಾ ಜ್ವಲಂತೀಸ್ವಪಯೋಪಗೂಢಾ
ನಿಶೀಥಕಾಲೇ ರಮಕೋಪಗೂಢಾಃ ।
ದದರ್ಶ ಕಾಶ್ಚಿತ್ ಪ್ರಮದೋಪಗೂಢಾ
ಯಥಾ ವಿಹಂಗಾಃ ಕುಸುಮೋಪಗೂಢಾಃ ॥ ೧೮॥

ಅನ್ಯಾಃ ಪುನರ್ಮನ್ಮತಲೋಭವಿಷ್ಟಾ-
ಸ್ತತ್ರ ಪ್ರಿಯಾಂಕೇಷು ಸುಖೋಪವಿಷ್ಟಾಃ ।
ಭರ್ತುಃ ಪ್ರಿಯಾ ಧರ್ಮಪರಾ ನಿವಿಷ್ಟಾ
ದದರ್ಶ ಧೀಮಾನ್ ಮದನಾಭಿವಿಷ್ಟಾಃ ॥ ೧೯॥

ಅಪ್ಸ್ವಾವೃತಾಃ ಕಾಂಚನರಾಜವರ್ಣಾಃ
ಕಾಶ್ಚಿತ್ ಪರಾರ್ಧ್ಯಸ್ರಪನೀಯವರ್ಣಾಃ ।
ಪುನಶ್ಚ ಕಾಶ್ಚಿಚ್ಛಶಲಕ್ಷ್ಮ ವರ್ಣಾಃ
ಕಾಂತಪ್ರಹೀಣಾ ರುಚಿರಾಂಗವರ್ಣಾಃ ॥ ೨೦॥

ತತಃ ಪ್ರಿಯಾನ್ ಪ್ರಾಪ್ಯ ಮನೋಽಭಿರಾಮಾನ್
ಸುಪ್ರೀತಿಯುಕ್ತಾಃ ಪ್ರಸಮಿಕ್ಷ್ಯರಾಮಾಃ ।
ಗೃಹೇಷು ಹೃಷ್ಟಾಃ ಪರಮಾಭಿರಾಮಾ
ಹರಿಪ್ರವೀರಃ ಸ ದದರ್ಶ ರಾಮಾಃ ॥ ೨೧॥

ಚಂದ್ರಪ್ರಕಾಶಾಶ್ಚ ಹಿ ವಕ್ತ್ರಮಾಲಾ
ವಕ್ತ್ರಾಣ್ಯಪಕ್ಷ್ಮಾಶ್ಚ ಸುನೇತ್ರಮಾಲಾಃ ।
ವಿಭೂಷಣಾನಾಂ ಚ ದದರ್ಶ ಮಾಲಾಃ
ಶತಹ್ರದಾನಾಮಿವ ಚಾರುಮಾಲಾಃ ॥ ೨೨॥

ನ ತ್ವೇವ ಸೀತಾಂ ಪರಮಾಭಿಜಾತಾಂ
ಪಥಿ ಸ್ಥಿತೇ ರಾಜಕುಲೇ ಪ್ರಜಾತಾಮ್ ।
ಲತಾಂ ಪ್ರಫುಲ್ಲಾಮಿವ ಸಾಧು ಜಾತಾಂ
ದದರ್ಶ ತನ್ವೀಂ ಮನಸಾಭಿಜಾತಾಮ್ ॥ ೨೩॥

ಉತ್ತಮ ಶೀಲವತಿಯರನ್ನು, ಅಲ್ಲದೆ ತಮ್ಮ ಪ್ರಿಯಕರನಲ್ಲಿ ಪ್ರೀತಿಯನ್ನುಂಟುಮಾಡುವ, ಪಾನಾದಿಗಳಲ್ಲಿ ಆಸಕ್ತರಾಗಿದ್ದ, ನಕ್ಷತ್ರಗಳಂತೆ ಒಳ್ಳೆಯ ಪ್ರಭೆಯಿಂದ ಕೂಡಿದ್ದ ರಾಕ್ಷಸಸ್ತ್ರೀಯರನ್ನು ನೋಡಿದನು. ॥ ೧೭॥ ರೂಪಾದಿ ಸಂಪತ್ತುಗಳಿಂದ ಪ್ರಕಾಶಮಾನರಾಗಿದ್ದ ಕೆಲವು ಸ್ತ್ರೀಯರು ನಾಚಿಕೆಯುಳ್ಳವರಾಗಿದ್ದರು. ಮತ್ತೆ ಕೆಲವರು ಪತಿಗಳಿಂದ ಆಲಿಂಗಿಸಲ್ಪಟ್ಟವರಾಗಿ ಪ್ರಮೋದಾಮೋದಗಳಲ್ಲಿದ್ದರು. ಪುಷ್ಪವೃಕ್ಷಗಳಲ್ಲಿ ವಿಹರಿಸುವ ಪಕ್ಷಿಗಳಂತೆ, ಕೆಲವು ಸ್ತ್ರೀಯರು ಕುಸುಮಿತವಾದ ಲತಾಕುಂಜಗಳಲ್ಲಿ ತಮ್ಮ ಪತಿಗಳೊಡನೆ ವಿಹರಿಸುತ್ತಿದ್ದರು. ॥ ೧೮॥ ಕೆಲವರು ಉಪ್ಪರಿಗೆಗಳಲ್ಲಿ ಕುಳಿತಿದ್ದರು. ಕೆಲವರು ಗಂಡಂದಿರ ತೊಡೆಗಳ ಮೇಲೆ ಸುಖವಾಗಿ ಕುಳಿತಿದ್ದರು. ಕೆಲವು ಧಾರ್ಮಿಕ ಸ್ತ್ರೀಯರು ಪತಿಗಳ ಸೇವೆಯಲ್ಲಿ ನಿರತರಾಗಿದ್ದರು. ಕೆಲವರು ಕಾಮಪರವಶರಾಗಿ ಪ್ರಿಯಕರರೊಡನೆ ಕಾಮಕೇಳಿಯಲ್ಲಿ ನಿರತರಾಗಿದ್ದರು. ಹೀಗೆ ಎಲ್ಲ ಬಗೆಯ ಸ್ತ್ರೀಯರನ್ನು ಹನುಮಂತನು ಆಲ್ಲಿ ನೋಡಿದನು. ॥ ೧೯॥ ಕೆಲವರು ಮೇಲು ಹೊದಿಕೆಯಿಲ್ಲದ ಸುವರ್ಣ ರೇಖೆಗೆ ಸದೃಶಕಾಂತಿಯಿಂದ ಕೂಡಿ ರಾರಾಜಿಸುತ್ತಿದ್ದರು. ಕೆಲವರು ಶ್ರೇಷ್ಠರಾದ ಸ್ತ್ರೀಯರು ಪುಟವಿಟ್ಟ ಚಿನ್ನದಂತೆ ಬಣ್ಣವುಳ್ಳವರಾಗಿದ್ದರು. ಕೆಲವರು ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದರು. ಕೆಲವು ಸುಂದರಾಂಗಿಯರು ಪ್ರಿಯತಮನ ವಿರಹ ತಾಪದಿಂದ ಖಿನ್ನಮನಸ್ಕರಾಗಿದ್ದರು. ಕೆಲವರು ಸುಂದರವಾದ ಅಂಗ ಕಾಂತಿಯಿಂದ ಕೂಡಿದ್ದರು. ಇಂತಹ ಲತಾಂಗಿಯರನ್ನು ಮರುತ್ಸಂತನು ನೋಡಿದನು. ॥ ೨೦॥ ಕೆಲವು ಮನೆಗಳಲ್ಲಿ ಮನಸ್ಸಿಗೆ ಆನಂದವನ್ನುಂಟುಮಾಡುವ ಪ್ರಿಯರನ್ನು ಪೊಂದಿ ಪ್ರೀತಿಯುಕ್ತರಾಗಿ, ಪುಷ್ಪಗಳಿಂದ ಸಿಂಗರಿಸಿಕೊಂಡು ಕಂಗೊಳಿಸುತ್ತಿದ್ದರು. ಪರಮಹೃಷ್ಟರಾಗಿದ್ದ, ಕದು ಚೆಲುವೆಯರಾಗಿದ್ದ ಸ್ತ್ರೀಯರನ್ನು ನೋಡಿದನು. ॥ ೨೧॥ ಬೆಳದಿಂಗಳಿನಂತೆ ಪ್ರಕಾಶಮಾನವಾಗಿ ಕಾಣುತ್ತಿದ್ದ ಸ್ತ್ರೀಯರ ಸುಂದರ ಮುಖಾವಲಿ (ಸಾಲು)ಗಳನ್ನು, ಸುಂದರವಾದ ಹಾಗೂ ವಕ್ರವಾದ ಹುಬ್ಬುಗಳ ಕೂದಲಿನಿಂದ ಕೂಡಿದ ಕಣ್ಣುಗಳ ಸಾಲುಗಳನ್ನೂ, ಮಿಂಚಿನ ಸಾಲುಗಳಂತೆ ಕಾಣುತ್ತಿದ್ದ ಸುಂದರವಾದ ಆಭರಣಗಳ ಸಾಲುಗಳನ್ನು* ಹನುಮಂತ ನೋಡಿದನು. ॥ ೨೨॥

ಆದರೆ ಕದುಚೆಲುವೆಯಾದ, ಆಯೋನಿಜೆಯಾಗಿದ್ದ ವಿಕಸಿತ ಲತೆಯಂತಿದ್ದ, ಧರ್ಮಮಾರ್ಗದಲ್ಲಿಯೇ ಸ್ಥಿರಳಾಗಿದ್ದ, ರಾಜಕುಲದಲ್ಲಿ ಬೆಳೆದ ಸೀತಾದೇವಿಯನ್ನು ಮಾರುತಿಯು ಎಲ್ಲಿಯೂ ಕಾಣಲಿಲ್ಲ ॥ ೨೩॥ ಅವಿಚ್ಛಿನ್ನವಾದ ಪಾತಿವ್ರತ್ಯ ಮಾರ್ಗದಲ್ಲಿ ಸುಸ್ಥಿರಳಾಗಿದ್ದ, ಶ್ರೀರಾಮಚಂದ್ರನ

* ಮಾನುಷಸ್ತ್ರೀಯಳಿಗೂ, ರಾಕ್ಷಸಸ್ತ್ರೀಯರಿಗೂ ಇರುವ ವ್ಯತ್ಯಾಸವನ್ನು ಗುರುತಿಸಲು ಆಲ್ಲಿಯ ಸ್ತ್ರೀಯರ ಆಲಂಕಾರಗಳನ್ನು, ಮುಖ, ನೇತ್ರಗಳನ್ನೂ, ಸೀತಾನ್ವೇಷಣ ತತ್ಪರನಾದ ಹನುಮಂತನು ಪರಿಕಿಸಿದನು.

ಸನಾತನೇ ವರ್ತ್ಮನಿ ಸಂನಿವಿಷ್ಟಾಂ
ರಾಮೇಕ್ಷಣಾಂ ತಾಂ ಮದನಾಭಿವಿಷ್ಟಾಮ್ ।
ಭರ್ತುರ್ಮನಃ ಶ್ರೀಮದನುಪ್ರವಿಷ್ಟಾಮ್
ಸ್ತ್ರಿಯೋ ವರಾಭ್ಯಶ್ಚ ಸದಾ ವಿಶಿಷ್ಟಾಮ್ ॥ ೨೪॥

ಉಷ್ಣಾರ್ದಿತಾಂ ಸಾನುಸೃತಾಸ್ರಕಂಠೀಂ
ಪುರಾ ವರಾರ್ಹೋತ್ತಮನಿಷ್ಕಕಂಠೀಮ್ ।
ಸುಜಾತಪಕ್ಷ್ಮಾಮಭಿರಕ್ತಕಂಠೀಂ
ವನೇ ಪ್ರನೃತ್ತಾಮಿವ ನೀಲಕಂಠೀಮ್ ॥ ೨೫॥

ಅವ್ಯಕ್ತರೇಖಾಮಿವ ಚಂದ್ರರೇಖಾಂ
ಪಾಂಸುಪ್ರದಿಗ್ಧಾಮಿವ ಹೇಮರೇಖಾಮ್ ।
ಕ್ಷತಪ್ರರೂಢಾಮಿವ ಭಾನುರೇಖಾಂ
ವಾಯುಪ್ರಭಿನ್ನಾಮಿವ ಮೇಘರೇಖಾಮ್ ॥ ೨೬॥

ಸೀತಾಮಪಶ್ಯನ್ ಮನುಜೇಶ್ವರಸ್ಯ
ರಾಮಸ್ಯ ಪತ್ನೀಂ ವದತಾಂ ವರಸ್ಯ ।
ಬಭೂವ ದುಃಖಾಭಿಹತಶ್ಚಿರಸ್ಯ
ಪ್ಲವಂಗಮೋ ಮಂದ ಇವಾಚಿರಸ್ಯ ॥ ೨೭॥

ಅಗಲುವಿಕೆಯಿಂದ ದುಃಖಿತಳಾಗಿದ್ದು, ಅವನನ್ನು ನೋಡಬೇಕೆಂಬ ಕಾತರತೆಯಿಂದಿದ್ದ, ತನ್ನ ಪವಿತ್ರವಾದ ಮನಸ್ಸಿನಲ್ಲಿ ಶ್ರೀರಾಮನನ್ನು ಸದಾಕಾಲ ನಿಲ್ಲಿಸಿಕೊಂಡಿದ್ದ, ನಾರೀರತ್ನಗಳಲ್ಲಿ ಅತ್ಯುತ್ತಮವಾದ ಸೀತಾದೇವಿಯನ್ನು ಮಾತ್ರ ಅವನು ನೋಡಲಿಲ್ಲ. ॥ ೨೪॥

ಶ್ರೀರಾಮನ ವಿರಹದಿಂದ ಪರಿತಪಿಸುತ್ತಿರುವ, ಕಣ್ಣೀರಕೋಡಿ ಹರಿಯುತ್ತಿದ್ದು, ಗದ್ಗದ ಕಂಠದಿಂದ ವಿಲಾಪಿಸುತ್ತಿದ್ದ, ಶ್ರೇಷ್ಠವಾದ ಭಂಗಾರದ ಕಂಠಾಭರಣಗಳನ್ನು ಧರಿಸಿದ್ದ, ಅಂದವಾದ ಹುಬ್ಬುಗಳುಳ್ಳವಳೂ, ಮಧುರವಾದ ಕಂಠಸ್ವರವುಳ್ಳವಳೂ, ಅರಣ್ಯದಲ್ಲಿ ಚೆನ್ನಾಗಿ ನರ್ತಿಸುವ ಹೆಣ್ಣುನವಿಲಿನಂತಿರುವ ಸೀತಾದೇವಿಯು ಮಾತ್ರ ಕಂಡು ಬರಲಿಲ್ಲ. ॥ ೨೫॥ ಕಂಡೂ-ಕಾಣದಂತಿರುವ ಚಂದ್ರರೇಖೆಯಂತೆ ಅತ್ಯಂತ ಕೃಶಳಾಗಿದ್ದ, ಧೂಳಿ ಧೂಸರಿತ ಬಂಗಾರದ ಸಲಾಕೆಯಂತಿದ್ದ, ಬಾಣದ ಗಾಯದಂತೆ ರೂಢಮೂಲವಾಗಿದ್ದ ಮಾನಸಿಕ ಗಾಯದಿಂದ ಪರಿತಪಿಸುತ್ತಿದ್ದ, ವಾಯುವಿನಿಂದ ಛಿದ್ರ-ಛಿದ್ರವಾಗಿ ಚದುರಿಹೋದ ಮೇಘುಗಳಂತೆ ಭಗ್ನಮನೋರಥವುಳ್ಳ ಜಾನಕೀದೇವಿಯು ಹನುಮಂತನಿಗೆ ಎಲ್ಲೆಲ್ಲೂ ಕಾಣಲಿಲ್ಲ. * ॥ ೨೬॥

ವಾಗ್ಮಿಗಳಲ್ಲಿ ಶ್ರೇಷ್ಠನಾದ, ಮನುಜೇಶ್ವರನಾದ ಶ್ರೀರಾಮನ ಪತ್ನಿಯನ್ನು ಎಷ್ಟು ಹುಡುಕಿದರೂ ಆಕೆಯು ಕಾಣದಿದ್ದಾಗ ಕಪೀಶ್ವರನಾದ ಹನುಮಂತನು ದುಃಖಾಕ್ರಾಂತನಾಗಿ ಕ್ಷಣಕಾಲ ಮಾತ್ರ ಅಜ್ಞಾನಿಯಂತೆ ದಿಕ್ಕುತೋಚದಾದನು. ॥ ೨೭॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಪಂಚಮಃ ಸರ್ಗಃ ॥ ೫ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐದನೆಯ ಸರ್ಗವು ಮುಗಿಯಿತು.

❊ ❊ ❊

* ಮಾರುತಿಯು ಎಷ್ಟೋಮಂದಿ ಸುಂದರೀ ಮಣಿಗಳನ್ನುನೋಡಿದನು. ಆದರೆ ಆಪರಲ್ಲಿ ಒಬ್ಬರೂ ಸೀತಾದೇವಿ ಆಲ್ಲವೆಂದು ನಿಶ್ಚಯಿಸಿದನು. ಏಕೆಂದರೆ ಆವನು ತನ್ನ ಮನಸ್ಸಿನಲ್ಲಿ ಮುದ್ರಿಸಿಕೊಂಡ ಸೀತಾದೇವಿಯ ಊಹಾ ಚಿತ್ರ ಹೀಗಿತ್ತು - ವಾಸ್ತವವಾಗಿ ಹದಿನಾರು ಕಲೆಗಳಿಂದ ಕೂಡಿದ ಚಂದ್ರನಂತೆ ಇರುವ ಸೀತಾದೇವಿಯು ಶ್ರೀರಾಮನ ಅಗಲುವಿಕೆಯಿಂದ ಈಗ ಮಂಜುಮುಸುಕಿದ ಚಂದ್ರನಂತೆ ಕಾಂತಿಹೀನಳಾಗಿರಬಹುದು. ಸಹಜವಾಗಿ ಭಂಗಾರ ಕಾಂತಿಯಿಂದಿರುವ ಆಕೆಯ ದೇಹವು ಧೂಳಿ ಧೂಸರಿತವಾದ ಸುವರ್ಣರೇಖೆಯಂತೆ ಇರಬಹುದು. ಬಾಣದ ಗಾಯವು ವಾಸಿಯಾದರೂ ಉಳಿಯುವ ಗುರುತಿನಂತೆ ಸೀತಾದೇವಿಯ ಮನಸ್ಸಿನಮೇಲೆ ಬಿದ್ದ ರಾವಣನ ವಾಗ್ಬಾಣಗಳ ಗುರುತು ಮಾತ್ರ ಆಕೆಯ ಮುಖಕಮಲದಲ್ಲಿ ಕಂಡು ಬಂದಿತು. ಗಾಳಿಯು ಮೋಡಗಳನ್ನು ಛಿನ್ನ-ಭಿನ್ನ ಮಾಡುವಂತೆ ರಾವಣನೆಂಬ ವಾಯುವಿನ ಘಾತದಿಂದ ರಾಮನೆಂಬ ಮೇಘವು ಚೂರು-ಚೂರು ಆಗಿ ಸೀತಾದೇವಿಯು ಕಾಂತಿಹೀನಳಾಗಿರಬಹುದು. ಅಂತಹ ಜಾನಕೀ ದೇವಿ ಮಾತ್ರ ಎಷ್ಟೇ ಹುಡುಕಿದರೂ ಅಲ್ಲಿ ತರುಣಿ ಮಣಿಗಳಲ್ಲಿ ಮಾರುತಿಗೆ ಕಂಡುಬರಲಿಲ್ಲ.

ಆರನೆಯ ಸರ್ಗ

ಹನುಮಂತನು ರಾವಣನ ಅರಮನೆಯಲ್ಲಿಯೂ, ಇತರ ರಾಕ್ಷಸರ ಮನೆಗಳಲ್ಲಿಯೂ ಸೀತೆಯನ್ನು ಹುಡುಕಿದುದು

ಸ ನಿಕಾಮಂ ವಿಮಾನೇಷು ವಿಷಣ್ಣಃ ಕಾಮರೂಪಧೃತ್ ।
ವಿಚಚಾರ ಪುನರ್ಲಂಕಾಂ ಲಾಘವೇನ ಸಮನ್ವಿತಃ ॥ ೧॥

ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಮ್ ।
ಪ್ರಾಕಾರೇಣಾರ್ಕವರ್ಣೇನ ಭಾಸ್ವರೇಣಾಭಿಸಂವೃತಮ್ ॥ ೨॥

ರಕ್ಷಿತಂ ರಾಕ್ಷಸೈರ್ಭೀಮೈಃ ಸಿಂಹೈರಿವ ಮಹದ್ವನಮ್ ।
ಸಮೀಕ್ಷ್ಯಮಾಕೋ ಭವನಂ ಚಕಾಶೇ ಕಪಿಕುಂಜರಃ ॥ ೩॥

ರೂಪ್ಯಕೋಪಹಿತೈಶ್ಚಿತ್ರೈಃ,ಸ್ತೋರಣೈರ್ವೇಮ ಭೂಷಿತೈಃ ।
ವಿಚಿತ್ರಾಭಿಶ್ಚ ಕಕ್ಷ್ಯಾಭಿರ್ದ್ವಾರೈಶ್ಚ ರುಚಿರೈರ್ವ್ಯತಮ್ ॥ ೪॥

ಗಜಾಸ್ಥಿತೈರ್ಮಹಾಮಾತ್ರೈಃ ಶೂರೈಶ್ಚ ವಿಗತಶ್ರಮೈಃ ।
ಉಪಪನ್ನತಮಸಂಹಾರ್ಯೈರ್ಹರ್ಯಕ್ಷೈಃ ಸ್ಯಂದನಯಾಯಿಭಿಃ ॥ ೫॥

ಸಿಂಹವ್ಯಾಘ್ರತನುತ್ರಾಣೈರ್ದಾಂತಕಾಂಚನರಾಜತೈಃ ।
ಘೋಷವದ್ಭಿರ್ವಿಚಿತ್ರೈಶ್ಚ ಸದಾ ವಿಚರಿತಂ ರಥೈಃ ॥ ೬॥

ಬಹು ರತ್ನಸಮಾಕೀರ್ಣಂ ಪರಾರ್ಧ್ಯಾಸನಭಾಜನಮ್ ।
ಮಹಾರಥಸಮಾವಾಸಂ ಮಹಾರಥಮಹಾಸ್ವನಮ್ ॥ ೭॥

ದೃಶ್ಯೈಶ್ಚ ಪರಮೋದಾರೈಸ್ಸೈಶ್ಚ ಮೃಗಪಕ್ಷಿಭಿಃ ।
ವಿವಿಧೈರ್ಬಹುಸಾಹಸ್ರೈಃ ಪರಿಪೂರ್ಣಂ ಸಮಂತತಃ ॥ ೮॥

ವಿನೀತೈರಂತಪಾಲೈಶ್ಚ ರಕ್ಷೋಭಿಶ್ಚ ಸುರಕ್ಷಿತಮ್ ।
ಮುಖ್ಯಾಭಿಶ್ಚ ವರಸ್ತ್ರೀಭಿಃ ಪರಿಪೂರ್ಣಂ ಸಮಂತತಃ ॥ ೯॥

ಮನಬಂದಂತೆ ರೂಪಧರಿಸುವ ಶಕ್ತಿಯನ್ನು ಹೊಂದಿದ್ದ ಆ ಕಪೀಶ್ವರನು, ಉಪ್ಪರಿಗೆಗಳಿಂದ ಕೂಡಿದ್ದ ಆರಮನೆಗಳಲ್ಲಿ ಸಂಚರಿಸುತ್ತಾ ಸೀತೆಯನ್ನು ಕಾಣದೆ ದುಃಖಿತನಾಗಿ, ಲಂಕೆಯ ಸುತ್ತಲೂ ಪುನಃ ಹುಡುಕುವ ಸಲುವಾಗಿ ವೇಗದಿಂದ ನಡೆಯತೊಡಗಿದನು. ॥೧॥

ಶುಭಲಕ್ಷಣ ಸಂಪನ್ನನಾದ ಮಾರುತಿಯು ಸೂರ್ಯ ಕಾಂತಿಯಂತೆ ಪ್ರಕಾಶಿಸುತ್ತಿರುವ ಪ್ರಾಕಾರಗಳಿಂದ ಸುತ್ತುವರಿಯಲ್ಪಟ್ಟ ರಾಕ್ಷಸೇಂದ್ರನಾದ ರಾವಣನ ಅರಮನೆಗೆ ಬಂದನು. ॥೨॥ ಸಿಂಹಗಳಿಂದ ರಕ್ಷಿತವಾದ ಮಹಾರಣ್ಯದಂತೆ ಆ ರಾವಣನ ಭವನವನ್ನು ಭಯಂಕರರಾದ ರಾಕ್ಷಸರಿಂದ ರಕ್ಷಿಸಲ್ಪಡುತ್ತಿತ್ತು. ಅಂತಹ ಭವನವನ್ನು ಪರಿಕಿಸಿ ನೋಡಿದ ಆ ಕಪಿವರನು ಆಶ್ಚರ್ಯಚಕಿತನಾದನು. ॥೩॥

ರಾವಣನ ಆ ಅರಮನೆಯು ಬೆಳ್ಳಿಯಿಂದ ಮಾಡಿದ ಚಿತ್ರಗಳಿಂದ ಅಲಂಕೃತವಾಗಿತ್ತು. ಸುವರ್ಣಭೂಷಿತವಾದ ಹೊರಬಾಗಿಲುಗಳಿಂದ ಕೂಡಿದ್ದಿತು. ವಿಚಿತ್ರವಾದ ಅಂತಃಪುರ ಗಳಿಂದಲೂ, ಸುಂದರವಾದ ಒಳಬಾಗಿಲುಗಳಿಂದಲೂ ಕೂಡಿದ್ದ ರಾವಣನ ಅಂತಃಪುರವನ್ನು ಹನುಮಂತನು ವೀಕ್ಷಿಸಿದನು. ॥೪॥ ಆ ಅರಮನೆಯು ಆನೆಗಳ ಮೇಲೆ ಕುಳಿತ್ತಿದ್ದ ಮಾವಟಿಗ ರಿಂದಲೂ, ಬಳಲಿಕೆಯೇ ಇಲ್ಲದ ಶೂರರಿಂದಲೂ, ಅಪ್ರತಿಹತ ವಾದ ವೇಗವುಳ್ಳ ರಥಗಳನ್ನೆಳೆಯುವ ಕುದುರೆಗಳಿಂದಲೂ, ವಿಚಿತ್ರವಾದ ರಥಗಳಿಂದಲೂ ಸಮಾವೃತವಾಗಿತ್ತು. ॥೫॥ ಆ ರಥಗಳು ಸಿಂಹ-ವ್ಯಾಘ್ರಗಳ ಚರ್ಮಗಳಿಂದ ಹೊದಿಸಲ್ಪಟ್ಟದ್ದು ದಂತ,ಚಿನ್ನ, ಬೆಳ್ಳಿಗಳಿಂದ ಮಾಡಿದ ಪ್ರತಿಮೆಗಳಿಂದ ಸಮಾವೃತವಾಗಿದ್ದವು. ವಿಚಿತ್ರವಾದ ಶಬ್ದಗಳನ್ನು ಮಾಡುತ್ತಾ ಅತ್ತಂದಿತ್ತ ಸಂಚರಿಸುತ್ತಿದ್ದುವು. ॥೬॥

ರಾವಣನ ಆ ಅರಮನೆಯು ಹೇರಳವಾದ ಮುತ್ತು ಗಳಿಂದಲೂ, ನಾನಾಬಗೆಯ ರತ್ನಗಳಿಂದಲೂ, ಅನರ್ಘ್ಯವಾದ ಆಸನಗಳಿಂದಲೂ,ಪಾತ್ರೆಗಳಿಂದಲೂ, ಅಲಂಕರಿಸಲ್ಪಟ್ಟಿತ್ತು. ಮಹಾರಥಿಕರಿಗೆ ನಿವಾಸ ಸ್ಥಾನವಾಗಿತ್ತು. ಮಹಾರಥಗಳ ಧ್ವನಿಗಳಿಂದ ಕೂಡಿತ್ತು. ॥೭॥ ಆ ಅರಮನೆಯ ಸುತ್ತಲೂ ಸುಂದರವಾದ ಅನೇಕ ದೃಶ್ಯಗಳಿದ್ದವು. ಜಿಂಕೆಗಳೇ ಮುಂತಾದ ಮೃಗಗಳೂ, ಶಾರಿಕಾದಿ ಅನೇಕ ವಿಧವಾದ ಪಕ್ಷಿಗಳು, ಅನೇಕ ಸಾವಿರ ಮೃಗಪಕ್ಷಿಗಳು ಅರಮನೆಯ ಸುತ್ತಲೂ ವಾಸಿಸುತ್ತಿದ್ದವು. ॥೮॥ ಆ ಅಂತಃಪುರವು ಸುಶಿಕ್ಷಿತರೂ, ವಿನೀತರೂ ಆದ ಕಾವಲುಗಾರರಿಂದಲೂ, ರಾಕ್ಷಸರಿಂದಲೂ ಸುರಕ್ಷಿತವಾಗಿತ್ತು. ಮುಖ್ಯರಾದ, ಶ್ರೇಷ್ಠರಾದ ವನಿತಾರತ್ನಗಳಿಂದ

ಮುದಿತಪ್ರಮದಾರತ್ನಂ ರಾಕ್ಷಸೇಂದ್ರನಿವೇಶನಮ್ ।
ವರಾಭರಣಸಂಹ್ರಾದೈಃ ಸಮುದ್ರಸ್ವನನಿಃಸ್ವನಮ್ ॥ ೧೦॥

ತದ್ಭಾವಗುಣಸಂಪನ್ನಂ ಮುಖ್ಯೈಶ್ಚ ವರಚಂದನೈಃ ।
ಮಹಾಜನೈಃ ಸಮಾಕೀರ್ಣಂ ಸಿಂಹೈರಿವ ಮಹದ್ಗುಹಮ್ ॥ ೧೧॥

ಭೇರೀಮೃದಂಗಾಭಿರುತಂ ಶಂಖಿಘೋಷವಿನಾದಿತಮ್ ।
ನಿತ್ಯಾರ್ಚಿತಂ ಪರ್ವಹುತಂ ಪೂಜಿತಂ ರಾಕ್ಷಸೈಃ ಸದಾ ॥ ೧೨॥

ಸಮುದ್ರಮಿವ ಗಂಭೀರಂ ಸಮುದ್ರಮಿವ ನಿಃಸ್ವನಮ್ ।
ಮಹಾತ್ಮನೋ ಮಹದ್ವೇಶ್ಮ ಮಹಾರತ್ನ ಪರಿಚ್ಛದಮ್ ॥ ೧೩॥

ಮಹಾರತ್ನ ಸಮಾಕೀರ್ಣಂ ದದರ್ಶ ಸ ಮಹಾಕಪಿಃ ।
ವಿರಾಜಮಾನಂ ವಪುಷಾ ಗಜಾಶ್ವ ರಥಸಂಕುಲಮ್ ॥ ೧೪॥

ಲಂಕಾಭರಣಮಿತ್ಯೇವ ಸೋಽಮನ್ಯತ ಮಹಾಕಪಿಃ ।
ಚುಚಾರ ಹನುಮಾಂಸ್ತತ್ರ ರಾವಣಸ್ಯ ಸಮಾಪತಃ ॥ ೧೫॥

ಗೃಹಾದ್ಗೃಹಂ ರಾಕ್ಷಸಾನಾಮುದ್ಯಾನಾನಿ ಚ ವಾನರಃ ।
ವೀಕ್ಷಮಾಣೋ ಹ್ಯಶಂತಸ್ತು ಪ್ರಾಸಾದಾಂಶ್ಚ ಚುಚಾರ ಸಃ ॥ ೧೬॥

ಅವಪ್ಲುತ್ಯ ಮಹಾವೇಗಃ ಪ್ರಹಸ್ತಸ್ಯ ನಿವೇಶನಮ್ ।
ಜಗಾಮಾಥ ಪುನರ್ವೀರಃ ವೇಶ್ಮ ಮಹಾಪಾರ್ಶ್ವಸ್ಯ ವೀರ್ಯವಾನ್ ॥ ೧೭॥

ಅಥ ಮೇಘಪ್ರತೀಕಾಶಂ ಕುಂಭಕರ್ಣನಿವೇಶನಮ್ ।
ವಿಭೀಷಣಸ್ಯ ಚ ತಥಾ ಪುನರ್ವೇ ಸ ಮಹಾಕಪಿಃ ॥ ೧೮॥

ಮಹೋದರಸ್ಯ ಚ ಗೃಹಂ ವಿರೂಪಾಕ್ಷಸ್ಯ ಚೈವ ಹಿ ।
ವಿದ್ಯುಜ್ಜಿಹ್ವಸ್ಯ ಭವನಂ ವಿದ್ಯುನ್ಮಾಲೇಸ್ತಥೈವ ಚ ॥ ೧೯॥

ವಜ್ರದಂಷ್ಟ್ರಸ್ಯ ಚ ತಥಾ ಪುನರ್ವೇ ಸ ಮಹಾಕಪಿಃ ।
ಶುಕಸ್ಯ ಸ ಮಹಾವೇಗಃ ಸಾರಣಸ್ಯ ಚ ಧೀಮತಃ ॥ ೨೦॥

ತಥಾ ಚೇಂದ್ರಜಿತೋ ವೇಶ್ಮ ಜಗಾಮ ಹರಿಯೂಥಪಃ ।
ಜಂಬುಮಾಲೇಃ ಸುಮಾಲೇಶ್ಚ ಜಗಾಮ ಭವನಂ ತತಃ ॥ ೨೧॥

ತುಂಬಿ ಹೋಗಿತ್ತು. ॥೯॥ ಆ ರಾಕ್ಷಸೇಂದ್ರನ ನಿವಾಸವು ಸಂತೋಷ ಭರಿತರಾದ ಉತ್ತಮ ಸ್ತ್ರಿಯರಿಂದ ಸಂಪನ್ನವಾಗಿತ್ತು. ರತ್ನವ್ಯಾಪ್ತರಾದ ಸ್ತ್ರಿಯರು ತೊಟ್ಟಿದ್ದ ಶ್ರೇಷ್ಠವಾದ ಆಭರಣಗಳ ನಿನಾದವು ಭೋರ್ಗರೆಯುವ ಸಮುದ್ರದ ಶಬ್ದವನ್ನೇ ಅನುಕರಿಸುತ್ತಿತ್ತು. ॥೧೦॥

ಆ ಆರಮನೆಯು ಛತ್ರ-ಚಾಮರ-ಸಿಂಹಾಸನಾದಿ ರಾಜಚಿಹ್ನೆ ಗಳಿಂದ ಒಪ್ಪುತ್ತಿತ್ತು. ಶ್ರೇಷ್ಠವಾದ ಅಗರು-ಚಂದನಗಳಿಂದ ಸುವಾಸಿತವಾಗಿತ್ತು. ಸಿಂಹಗಳಿಂದ ನಿಬಿಡವಾದ ಮಹಾವನದಂತೆ ಬಲಿಷ್ಠರಾದ ರಾಕ್ಷಸರಿಂದ ನಿಬಿಡವಾಗಿತ್ತು. ॥೧೧॥ ಭೇರಿ- ಮೃದಂಗ ಮುಂತಾದ ವಾದ್ಯಗಳಿಂದಲೂ, ಶಂಖಧ್ವನಿ ಯಿಂದಲೂ ನಿನಾದಿತವಾಗಿತ್ತು. ರಾಕ್ಷಸರು ಆ ಆರಮನೆಯನ್ನು ನಿತ್ಯವೂ ಪೂಜಿಸಿ ಸಿಂಗರಿಸುತ್ತಿದ್ದರು. ಪರ್ವದಿನಗಳಲ್ಲಿ ಶಾಂತಿಗಾಗಿ ಹೋಮಮಾಡುತ್ತಿದ್ದರು. ॥೧೨॥ ಆ ಆರಮನೆಯು ಸಮುದ್ರದಂತೆ ಗಂಭೀರವೂ, ಆಳವೂ, ರಾವಣನ ಭಯದಿಂದ ನಿಶ್ಶಬ್ದವಾಗಿತ್ತು. ಮಹಾರತ್ನಗಳಿಂದ ಸಮಲಂಕೃತವಾಗಿತ್ತು. ಆನೆ, ಕುದುರೆ, ರಥಗಳಿಂದ ಆದು ತುಂಬಿಹೋಗಿತ್ತು. ಮಹಾರತ್ನ ಗಳಿಂದ ವ್ಯಾಪ್ತವಾಗಿದ್ದು ತನ್ನ ಕಾಂತಿಯಿಂದಲೇ ದೇದೀಪ್ಯಮಾನ ವಾಗಿ ಬೆಳಗುತ್ತಿತ್ತು. ಮಹಾಕಾಯನಾದ ರಾವಣನ ಅಂತಹ ಸೌಧ ವನ್ನು ಹನುಮಂತನು ನೋಡಿದನು. ಆ ಸುಂದರವಾದ ಆರಮನೆಯನ್ನು ಲಂಕಾದಿದೇವತೆಯ ಆಭರಣವೆಂದೇ ಹನುಮಂತನು ಭಾವಿಸಿದನು. ಆಗ ಅವನು ರಾವಣನ ಬಳಿಯಲ್ಲೇ ಸಂಚರಿಸುತ್ತಿದ್ದನು. ॥೧೩-೧೫॥

ವಾನರಶ್ರೇಷ್ಠನಾದ ಮಾರುತಿಯು ಸೀತೆಯನ್ನು ಹುಡುಕಲು ರಾಕ್ಷಸರ ಒಂದು ಮನೆಯಿಂದ ಮತ್ತೊಂದು ಮನೆಗೆ ಹೋಗುತ್ತಿದ್ದನು. ಸುತ್ತಲೂ ಇದ್ದ ಉದ್ಯಾನವನಗಳಲ್ಲಿಯೂ ಎಲ್ಲ ಪ್ರಾಸಾದಗಳಲ್ಲಿಯೂ ನಿರ್ಭಯನಾಗಿ ಸಂಚರಿಸಿದನು. ॥೧೬॥

ಮಹಾವೇಗಶಾಲಿಯೂ, ಪರಾಕ್ರಮಿಯೂ ಆದ ವಾಯು ನಂದನನು ಹಾರಿಕೊಂಡೇ ಪ್ರಹಸ್ತನ ಮನೆಗೆ ಹೋದನು. ಅಲ್ಲಿಂದ ಮಹಾಪಾರ್ಶ್ವನೆಂಬ ರಾಕ್ಷಸಮುಖ್ಯನ ಮನೆಗೆ ಹಾರಿದನು. ಅಲ್ಲಲ್ಲೂ ಸೀತೆಯನ್ನು ಕಾಣದೆ ಮೇಘಸದೃಶನಾದ ಕುಂಭಕರ್ಣನ ಮನೆಗೆ ಹೋದನು. ಅಲ್ಲಿಂದ ಮುಂದೆ ವಿಭೀಷಣನ ಮನೆಗೂ ಹೋದನು. ಅಲ್ಲಿಯೂ ಸೀತಾದೇವಿಯನ್ನು ಕಾಣದೆ ಮುಂದೆ ರಾಕ್ಷಸಮುಖ್ಯರಾದ ಮಹೋದರ, ವಿರೂಪಾಕ್ಷ, ವಿದ್ಯುಜ್ಜಿಹ್ವ, ವಿದ್ಯುನ್ಮಾಲಿಗಳ ಮನೆಗಳಿಗೆ ಅನುಕ್ರಮವಾಗಿ ಹಾರಿಕೊಂಡೇ ಹೋದನು. ಅಲ್ಲೆಲ್ಲೂ ಸೀತೆಯು ಕಾಣದಿದ್ದಾಗ ಬೆಕ್ಕಿನಷ್ಟೇ ಗಾತ್ರದಲ್ಲಿದ್ದ ಕಪಿ ಮುಖ್ಯನಾದ ಹನುಮಂತನು ವಜ್ರದಂಷ್ಟ್ರನೆಂಬ ರಾಕ್ಷಸನ ಮನೆಗೂ, ಧೀಮಂತನಾದ ಶುಕನ ಮತ್ತು ಸಾರಣನ ಮನೆಗಳಿಗೂ ಕುಪ್ಪಳಿಸಿದನು. ಮುಂದೆ ಇಂದ್ರಜಿತುವಿನ ಮನೆಗೂ, ಜಂಬುಮಾಲಿ ಮತ್ತು ಸುಮಾಲಿಗಳೆಂಬುವರ ಮನೆಗಳಿಗೂ ಹೋದನು. ॥೧೭-೨೧॥ ಸೀತಾದೇವಿಯನ್ನು

ರಶ್ಮಿಕೇತೋಶ್ಚ ಭವನಂ ಸೂರ್ಯಶತ್ರೋಸ್ತಥೈವ ಚ ।
ವಜ್ರಕಾಯಸ್ಯ ಚ ತಥಾ ಪುಷ್ಪವೇ ಸ ಮಹಾಕಪಿಃ ॥ ೨೨॥

ಧೂಮ್ರಾಕ್ಷಸ್ಯ ಚ ಸಂಪಾತೇರ್ಭವನಂ ಮಾರುತಾತ್ಮಜಃ ।
ವಿದ್ಯುದ್ರೂಪಸ್ಯ ಭೀಮಸ್ಯ ಘನಸ್ಯ ವಿಘನಸ್ಯ ಚ ॥ ೨೩॥

ಶುಕನಾಸಸ್ಯ ವಕ್ರಸ್ಯ ಶಠಸ್ಯ ವಿಕಟಸ್ಯ ಚ ।
ಹ್ರಸ್ವಕರ್ಣಸ್ಯ ದಂಷ್ಟ್ರಸ್ಯ ರೋಮಶಸ್ಯ ಚ ರಕ್ಷಸಃ ॥ ೨೪॥

ಯುದ್ಧೋನ್ಮತ್ತಸ್ಯ ಮತ್ತಸ್ಯ ಧ್ವಜಗ್ರೀವಸ್ಯ ರಕ್ಷಸಃ ।
ವಿದ್ಯುಜ್ಜಿಹ್ವೇಂದ್ರಜಿಹ್ವಾನಾಂ ತಥಾ ಹಸ್ತಿಮುಖಸ್ಯ ಚ ॥ ೨೫॥

ಕರಾಲಸ್ಯ ಪಿಶಾಚಸ್ಯ ಕೋಣತಾಕ್ಷಸ್ಯ ಚೈವ ಹಿ ।
ಕ್ರಮಮಾಣಃ ಕ್ರಮೇಣೈವ ಹನುಮಾನ್ ಮಾರುತಾತ್ಮಜಃ ॥ ೨೬॥

ತೇಷು ತೇಷು ಮಹಾರ್ಹೇಷು ಭವನೇಷು ಮಹಾಯಶಾಃ ।
ತೇಷಾಮೃದ್ಧಿಮತಾಮೃದ್ಧಿಂ ದದರ್ಶ ಸ ಮಹಾಕಪಿಃ ॥ ೨೭॥

ಸರ್ವೇಷಾಂ ಸಮತಿಕ್ರಮ್ಯ ಭವನಾನಿ ಸಮಂತತಃ ।
ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಮ್ ॥ ೨೮॥

ರಾವಣಸ್ಯೋಪಶಾಯಿನ್ಯೋ ದದರ್ಶ ಹರಿಸತ್ತಮಃ ।
ವಿಚರನ್ ಹರಿಶಾರ್ದೂಲೋ ರಾಕ್ಷಸೀರ್ವಿಕೃತೇಕ್ಷಣಾಃ ॥ ೨೯॥

ಶೂಲಮುದ್ಗರಹಸ್ತಾಶ್ಚ ಶಕ್ತಿತೋಮರಧಾರಿಣೀಃ ।
ದದರ್ಶ ವಿವಿಧಾನ್ ಗುಲ್ಮಾಂಸ್ತಸ್ಯ ರಕ್ಷಃಪತೇರ್ಗೃಹೇ ॥ ೩೦॥

ರಾಕ್ಷಸಾಂಶ್ಚ ಮಹಾಕಾಯಾನ್ ನಾನಾಪ್ರಹರಣೋದ್ಯತಾನ್ ।
ರಕ್ತಾನ್ ಶ್ವೇತಾನ್ ಸಿತಾಂಶ್ಚಾಪಿ ಪರೀಂಶ್ಚಾಪಿಮಹಾಬಲಾನ್ ॥ ೩೧॥

ಖಲೀನಾನ್ ರೂಪಸಂಪನ್ನಾನ್ ಗಜಾನ್ ಪರಗಜಾರುಜಾನ್ ।
ನಿಖಿತಾನ್ ಗಜಶಿಕ್ಷಾಯಾಮೈರಾವತಸಮಾನ್ ಯುಧಿ ॥ ೩೨॥

ನಿಹಂತೃನ್ ಪರಸೈನ್ಯಾನಾಂ ಗೃಹೇ ತಸ್ಮಿನ್ ದದರ್ಶ ಸಃ ।
ಕ್ಷರತಶ್ಚ ಯಥಾ ಮೇಘಾನ್ ಸ್ರವತಶ್ಚ ಯಥಾಗಿರೀನ್ ॥ ೩೩॥

ಮೇಘಸ್ತನಿತನಿರ್ಘೋಷಾನ್ ಮರ್ದಲಾನ್ ಸಮರೇ ಕೃತೇ ।
ಸಹಸ್ರಂ ವಾಹಿನೀಸತ್ರ ಜಾಂಬೂನದಪರಿಷ್ಕೃತಾಃ ॥ ೩೪॥

ಹುಡುಕಲು ಮುಂದುವರಿಯುತ್ತಾ ಮಾರುತಿಯು ರಶ್ಮಿಕೇತು, ಸೂರ್ಯಶತ್ರು, ವಜ್ರಕಾಯ ಇವರ ಮನೆಗಳಿಗೂ ಹಾರಿಕೊಂಡೇ ಹೋದನು. ಬಳಿಕ ಧೂಮ್ರಾಕ್ಷ, ಸಂಪಾತಿ, ವಿದ್ಯುದ್ರೂಪ, ಭೀಮ, ಘನ, ವಿಘನ ಮುಂತಾದವರ ಮನೆಗಳಲ್ಲಿ ನೆಗೆ-ನೆಗೆದು ಹುಡುಕಿದನು. ಮುಂದೆ ಶುಕನಾಸ, ವಕ್ರ, ಶಠ, ವಿಕಟ, ಹ್ರಸ್ವಕರ್ಣ, ದಂಷ್ಟ್ರ, ಲೋಮಶ ಮುಂತಾದ ರಾಕ್ಷಸಶ್ರೇಷ್ಠರ ಮನೆಗಳಿಗೂ ಹೋದನು. ಆಲ್ಲೆಲ್ಲೂ ಸೀತೆಯು ಸಿಕ್ಕದ ಕಾರಣ ಮುಂದೆ ಯುದ್ಧೋನ್ಮತ್ತ ಮತ್ತ ಧ್ವಜಗ್ರೀವ, ವಿದ್ಯುಜ್ಜಿಹ್ವ, ದ್ವಿಜಿಹ್ವ, ಹಸ್ತಿಮುಖ, ಕರಾಲ, ಪಿಶಾಚ, ಕೋಣತಾಕ್ಷ ಇವರೆಲ್ಲರ ಮನೆಗಳಿಗೆ ಅನುಕ್ರಮವಾಗಿ ಹಾರಿಕೊಂಡೇ ಹೋದನು. ॥೨೨-೨೬॥

ಮಹಾಯಶಸ್ವಿಯಾದ ಆ ಮಹಾಕಪಿಯು ಬಹುಮೂಲ್ಯವಾದ ಆ ಅರಮನೆಗಳಲ್ಲಿ ಸಂಚರಿಸಿ ಸಮೃದ್ಧಿಶಾಲಿಗಳಾದ ರಾಕ್ಷಸರ ಅಪಾರವಾದ ಸಂಪತ್ತನ್ನು ನೊಡಿದನು. ॥೨೭॥

ಆ ಎಲ್ಲ ರಾಕ್ಷಸರ ಮನೆಗಳಲ್ಲಿಯೂ ಸೀತಾದೇವಿಯನ್ನು ಹುಡುಕಿ ನಿರಾಶನಾಗಿ ಶುಭಲಕ್ಷಣಸಂಪನ್ನನಾದ ಮಾರುತಿಯು ರಾಕ್ಷಸೇಂದ್ರನಾದ ರಾವಣನ ಅರಮನೆಯನ್ನು ಪುನಃ ಸೇರಿದನು.॥೨೮॥ರಾವಣನ ಅರಮನೆಯಲ್ಲಿ ಸಂಚರಿಸುತ್ತಿದ್ದಾಗ ರಾವಣೇಶ್ವರನ ಪರ್ಯಂಕವನ್ನು ರಕ್ಷಿಸುತ್ತಾ ಸಮೀಪದಲ್ಲಿ ಮಲಗಿದ್ದ ವಿಕಾರವಾದ ಕಣ್ಣುಗಳನ್ನು ಹೊಂದಿದ್ದ ರಾಕ್ಷಸಿಯರನ್ನು ನೋಡಿದನು.॥೨೯॥ ಆ ರಾಕ್ಷಸ ಸ್ತ್ರೀಯರಲ್ಲಿ ಕೆಲವರು ಶೂಲ, ಮುದ್ಗರ, ಶಕ್ತಿ, ತೋಮರ ಮುಂತಾದ ಆಯುಧಗಳನ್ನು ಧರಿಸಿದ್ದರು. ರಾಕ್ಷಸರ ನಾನಾವಿಧವಾದ ಸೇನೆಯ ತುಕಡಿಗಳನ್ನು ರಾವಣನ ನಿಲಯದಲ್ಲಿ ವೀಕ್ಷಿಸಿದನು.॥೩೦॥ ಆ ಅರಮನೆಯಲ್ಲಿ ಹನುಮಂತನು ಮಹಾಕಾಯರಾದ ವಿಧ- ವಿಧವಾದ ಆಯುಧಗಳನ್ನು ಮೇಲಕ್ಕೆತ್ತಿಕೊಂಡು ನಿಂತಿದ್ದ ರಾಕ್ಷಸರನ್ನು, ಕೆಂಪಾಗಿರುವ, ಬಿಳಿಯ ಬಣ್ಣದ ಮಹಾವೇಗವುಳ್ಳ ಬಂಧಿಸಲ್ಪಟ್ಟ ಕುದುರೆಗಳನ್ನು ನೋಡಿದನು. ॥೩೧॥ಒಳ್ಳೆಯಜಾತಿಯಲ್ಲಿ ಹುಟ್ಟಿದ್ದ, ಒಳ್ಳೆಯ ರೂಪವನ್ನು ಹೊಂದಿದ್ದ, ಶತ್ರುಗಳ ಆನೆಗಳನ್ನು ಗಾಯಗೊಳಿಸುವುದರಲ್ಲಿ ಸಮರ್ಥವಾದ, ಯುದ್ಧವೇ ಮುಂತಾದ ವಿದ್ಯೆಗಳಲ್ಲಿ ಸುಶಿಕ್ಷಿತವಾದ, ಐರಾವತಕ್ಕೆ ಸಮಾನವಾಗಿ ಯುದ್ಧಮಾಡಲು ಸಾಮರ್ಥ್ಯವನ್ನು ಹೊಂದಿದ್ದ , ಶತ್ರುಸೈನ್ಯವನ್ನು ಸಂಹರಿಸಲು ಸಮರ್ಥವಾದ ಆನೆಗಳನ್ನು ನೋಡಿದನು.ಆ ಆನೆಗಳು ನೀರನ್ನು ಸುರಿಸುವ ಮೇಘಗಳಂತೆ ಹಾಗೂ ಪ್ರವಾಹರೂಪವಾಗಿ ನೀರನ್ನು ಸುರಿಸುವ ಬೆಟ್ಟಗಳಂತೆ ಮದೋದಕವನ್ನು ಸುರಿಸುತ್ತಿದ್ದವು. ಮೇಘಗಳಂತೆ ಗರ್ಜಿಸುತ್ತಿದ್ದವು. ಶತ್ರುಗಳಿಂದ ಎದುರಿಸಲು ಆಸಾಧ್ಯವಾಗಿದ್ದ ಆನೆಗಳನ್ನು ಆ ರಾವಣನ ನಿಲಯದಲ್ಲಿ ಕಪಿವರನು ನೋಡಿದನು. ಅವುಗಳು ಭಂಗಾರದ ಅಭರಣಗಳಿಂದ ಶೃಂಗರಿಸಲ್ಪಟ್ಟು, ಮಧ್ಯಾಹ್ನದ ಸೂರ್ಯನಂತೆ ಕಂಗೊಳಿಸುವ

ಹೇಮಜಾಲ ಪರಿಚ್ಛನ್ನಾಸ್ತರುಣಾದಿತ್ಯ ವರ್ಚಸಃ ।
ದದರ್ಶ ರಾಕ್ಷಸೇಂದ್ರಸ್ಯ ರಾವಣಸ್ಯ ನಿವೇಶನೇ ॥ ೩೫॥

ಶಿಬಿಕಾ ವಿವಿಧಾಕಾರಾಃ ಸ ಕಪಿರ್ಮಾರುತಾತ್ಮಜಃ ।
ಲತಾಗೃಹಾಣಿ ಚಿತ್ರಾಣಿ ಚಿತ್ರಶಾಲಾಗೃಹಾಣಿ ಚ ॥ ೩೬॥

ಕ್ರೀಡಾಗೃಹಾಣಿ ಚಾನ್ಯಾನಿ ದಾರುಪರ್ವತಕಾನಪಿ ।
ಕಾಮಸ್ಯ ಗೃಹಕಂ ರಮ್ಯಂ ದಿವಾಗೃಹಕಮೇವ ಚ ॥ ೩೭॥

ದದರ್ಶ ರಾಕ್ಷಸೇಂದ್ರಸ್ಯ ರಾವಣಸ್ಯ ನಿವೇಶನೇ ।
ಸ ಮಂದರಗಿರಿಪ್ರಖ್ಯಂ ಮಯೂರಸ್ಥಾನ ಸಂಕುಲಮ್ ॥ ೩೮॥

ಧ್ವಜಯಷ್ಟಿಭಿರಾಕೀರ್ಣಂ ದದರ್ಶ ಭವನೋತ್ತಮಮ್ ।
ಅನೇಕರತ್ನಸಂಕೀರ್ಣಂ ನಿಧಿಜಾಲಸಮಾವೃತಾಮ್ ॥ ೩೯॥

ಧೀರನಿಷ್ಠಿತ ಕರ್ಮಾಂತಂ ಗೃಹಂ ಭೂತಪತೇರಿವ ।
ಅರ್ಚಿರ್ಭಿಶ್ಚಾಪಿ ರತ್ನಾನಾಂ ತೇಜಸಾ ರಾವಣಸ್ಯ ಚ ॥ ೪೦॥

ವಿರರಾಜಾಥ ತದ್ವೇಶ್ಮ ರಶ್ಮಿಮಾನಿವ ರಶ್ಮಿಭಿಃ ।
ಜಂಬೂನದಮಯಾನ್ಯೇವ ಶಯನಾನ್ಯಾಸನಾನಿ ಚ ॥ ೪೧॥

ಭಾಜನಾನಿ ಚ ಶುಭ್ರಾಣಿ ದದರ್ಶ ಹರಿಯೂಥಪಃ ।
ಮಧ್ವಾಸವಕೃತಕ್ಲೇದಂ ಮಣಿಭಾಜನಸಂಕುಲಮ್ ॥ ೪೨॥

ಮನೋರಮಮಸಂಬಾಧಂ ಕುಬೇರಭವನಂ ಯಥಾ ।
ನೂಪುರಾಣಾಂ ಚ ಘೋಷೇಣ ಕಾಂಚೀನಾಂ ನಿನದೇನ ಚ ॥ ೪೩॥

ಮೃದಂಗತಲಘೋಷೈಶ್ಚ ಘೋಷವದ್ಭಿರ್ವಿನಾದಿತಮ್ ।
ಪ್ರಾಸಾದಸಂಘಾತಯುತಂ ಸ್ತ್ರೀರತ್ನಶತಸಂಕುಲಮ್ ॥
ಸುವ್ಯೂಢಕಕ್ಷ್ಯಂ ಹನುಮಾನ್ ಪ್ರವಿವೇಶ ಮಹಾಗೃಹಮ್ ॥ ೪೪॥

ಸಾವಿರಾರು ಪದಾತಿ ಸೈನಿಕರನ್ನು ಆ ರಾವಣನ ನಿವೇಶನದಲ್ಲಿ ಹನುಮಂತನು ನೋಡಿದನು. ॥೩೨-೩೫॥

ಬಳಿಕ ವಾಯುಪುತ್ರನಾದ ಹನುಮಂತನು ರಾವಣನ ಅರಮನೆಯಲ್ಲಿ ವಿವಿಧಾಕಾರಗಳಲ್ಲಿದ್ದ ಶೃಂಗರಿಸಲ್ಪಟ್ಟ ಪಲ್ಲಕಿಗಳನ್ನು ಲತಾಗೃಹಗಳನ್ನು, ಚಿತ್ರಶಾಲೆಗಳನ್ನು, ಆಟದಮನೆಗಳನ್ನು, ಮರದಿಂದ ಮಾಡಿದ ಕೃತ್ರಮ ಕ್ರೀಡಾಪರ್ವತಗಳನ್ನು, ರಮ್ಯವಾದ ರತಿಮಂದಿರಗಳನ್ನು ಹಗಲಿನ ವಿಹಾರ ಗೃಹಗಳನ್ನು ನೋಡಿದನು. ॥೩೬-೩೭॥ ಆ ಅರಮನೆಯು ಮಂದರ ಪರ್ವತದಂತೆ ಸುವರ್ಣಮಯವಾಗಿದ್ದು ಉನ್ನತವಾಗಿತ್ತು. ನವಿಲುಗಳ ಕ್ರೀಡಾಗೃಹಗಳಿಂದ ಸಮಾಕುಲವಾಗಿತ್ತು. ಧ್ವಜದಂಡಗಳಿಂದ ವ್ಯಾಪ್ತವಾಗಿದ್ದ ರಾವಣನ ಉತ್ತಮೋತ್ತಮವಾದ ಪ್ರಾಸಾದವನ್ನು ನೋಡಿದನು. ಭವ್ಯವಾದ ಆ ಅರಮನೆಯು ಅನೇಕವಾದ ರತ್ನಗಳ ರಾಶಿಗಳಿಂದ ತುಂಬಿಹೋಗಿತ್ತು. ಮಹಾಪದ್ಮಾದಿ ನವನಿಧಿಗಳ ಸಮೂಹಗಳಿಂದ ವ್ಯಾಪ್ತವಾಗಿತ್ತು. ಸದಾಶಿವನ ನಿವಾಸವಾದ ಕೈಲಾಸ ಪರ್ವತದಂತೆ, ದೃಢವ್ರತಿಗಳಿಗೆ ಪ್ರಾಪ್ತವಾದ ತಪಃಫಲದಂತೆ, ರತ್ನಗಳ ಕಾಂತಿಯಿಂದಲೂ ರಾವಣನ ತೇಜಸ್ಸಿನಿಂದಲೂ ಆ ಮಹಾ ಪ್ರಾಸಾದವು ಕಿರಣಗಳಿಂದ ಕೂಡಿದ ಸೂರ್ಯನಂತೆ ಪ್ರಕಾಶಮಾನವಾಗಿತ್ತು. ಅಲ್ಲಿದ್ದ ಹಾಸಿಗೆಗಳು, ಆಸನಗಳೂ,ಮುಖ್ಯವಾದ ಪಾತ್ರೆಗಳೂ ಎಲ್ಲವೂ ಸುವರ್ಣಮಯವೇ ಆಗಿದ್ದವು. ॥೩೮-೪೧॥

ರಾವಣನ ಆ ಅರಮನೆಯಲ್ಲಿ ಮಧುವಿನಿಂದಲೂ, ಆಸವಗಳಿಂದಲೂ, ತುಂಬಿದ್ದ ಅನೇಕ ಮಣಿಮಯವಾದ ಪಾತ್ರೆಗಳಿದ್ದವು. ಅದು ಕುಬೇರನ ಅರಮನೆಯಂತೆ ಮನೋಹರವಾಗಿಯೂ, ವಿಶಾಲವಾಗಿಯೂ ಇತ್ತು. ಅದು ಹೆಂಗಸರ ಕಾಲಂದಿಗೆಗಳ, ಓಡ್ಯಾಣಗಳ ಹಾಗೂ ಮೃದಂಗ-ತಾಳಗಳ ಧ್ವನಿಗಳಿಂದ ನಿನಾದಿತವಾಗಿತ್ತು. ಪ್ರಾಸಾದಗಳ ಸಮೂಹಗಳಿಂದ ಕೂಡಿದ್ದು, ರತ್ನಪ್ರಾಯರಾದ ನೂರಾರು ಸ್ತ್ರಿಯರಿಂದ ವ್ಯಾಪಿಸಿತ್ತು. ವಿಶಾಲವಾದ ಅನೇಕ ಒಳಹಜಾರಗಳು ಅಲ್ಲಿದ್ದವು. ಅಂತಹ ಅತ್ಯಂತ ಸುಂದರವಾದ ಮಹಾಭವನವನ್ನು ಹನುಮಂತನು ಪ್ರವೇಶಿಸಿದನು. ॥೪೨-೪೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಷಷ್ಠಃ ಸರ್ಗಃ ॥ ೬ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಆರನೆಯ ಸರ್ಗವು ಮುಗಿಯಿತು.

* * *

ಏಳನೆಯ ಸರ್ಗ

ರಾವಣನ ಅರಮನೆ ಮತ್ತು ಪುಷ್ಪಕವಿಮಾನದ ವರ್ಣನೆ –

ಸ ವೇಶ್ಮ ಜಾಲಂ ಬಲವಾನ್ ದದರ್ಶ
ವ್ಯಾಸಕ್ತವೈದೂರ್ಯಸುವರ್ಣಜಾಲಮ್ ।
ಯಥಾ ಮಹತ್ ಪ್ರಾವೃಷಿ ಮೇಘಜಾಲಂ
ವಿದ್ಯುತ್ಪಿನದ್ಧಂ ಸವಿಹಂಗಜಾಲಮ್ ॥ ೧॥

ನಿವೇಶನಾನಾಂ ವಿವಿಧಾಶ್ಚ ಶಾಲಾಃ
ಪ್ರಧಾನಶಂಖಾಯುಧಚಾಪಶಾಲಾಃ ।
ಮನೋಹರಾಶ್ಚಾಪಿ ಪುನರ್ವಿಶಾಲಾಃ
ದದರ್ಶ ವೇಶ್ಮಾದ್ರಿಷು ಚಂದ್ರಶಾಲಾಃ ॥ ೨॥

ಗೃಹಾಣಿ ನಾನಾವಸುರಾಜಿತಾನಿ
ದೇವಾಸುರೈಶ್ಚಾಪಿ ಸುಪೂಜಿತಾನಿ ।
ಸರ್ವೈಶ್ಚ ದೋಷೈಃ ಹರಿವರ್ಜಿತಾನಿ
ಕಪಿರ್ದದರ್ಶ ಸ್ವಬಲಾರ್ಜಿತಾನಿ ॥ ೩॥

ತಾನಿ ಪ್ರಯತ್ನಾಭಿಸಮಾಹಿತಾನಿ
ಮಯೇನ ಸಾಕ್ಷಾದಿವ ನಿರ್ಮಿತಾನಿ ।
ಮಹಿತಲೇ ಸರ್ವಗುಣೋತ್ತರಾಣಿ
ದದರ್ಶ ಲಂಕಾಧಿಪತೇರ್ಗೃಹಾಣಿ ॥ ೪॥

ತತೋ ದದರ್ಶೋಚ್ಚ್ರಿತಮೇಘರೂಪಂ
ಮನೋಹರಂ ಕಾಂಚನಚಾರುರೂಪಮ್ ।
ರಕ್ಷೋಽಧಿಪಸ್ಯಾತ್ಮ ಬಲಾನುರೂಪಂ
ಗೃಹೋತ್ತಮಂ ಹೃಪ್ರತಿರೂಪರೂಪಮ್ ॥ ೫॥

ಮಹೀತಲೇ ಸ್ವರ್ಗಮಿವ ಪ್ರಕೀರ್ಣಂ
ಶ್ರಿಯಾ ಜ್ವಲಂತಂ ಬಹುರತ್ನಕೀರ್ಣಮ್ ।
ನಾನಾತರೂಣಾಂ ಕುಸುಮಾವಕೀರ್ಣಂ
ಗಿರೇರಿವಾಗ್ರ್ಯಂ ರಜಸಾವಕೀರ್ಣಮ್ ॥ ೬॥

ನಾರೀಪ್ರವೇಕೈರಿವ ದೀಪ್ಯಮಾನಂ
ತಟಿದ್ಗುಣೋದ್ಗೋದವದರ್ಚ್ಯಮಾನಮ್ ।
ಹಂಸಪ್ರವೇಕೈರಿವ ವಾಹ್ಯಮಾನಂ
ಶ್ರಿಯಾ ಯುತಂ ವೇ ಸುಕೃತಾಂ ವಿಮಾನಮ್ ॥ ೭॥

ಬಲಿಷ್ಠನಾದ ಹನುಮಂತನು ಆ ಮಹಾಂತಃಪುರದ ಸಮುಚ್ಚಯದಲ್ಲಿ ಸುಂದರವಾದ ಮನೆಗಳ ಸಮೂಹಗಳನ್ನು ನೋಡಿದನು. ಎಲ್ಲ ಮನೆಗಳು ಮಿಂಚಿನಿಂದ ಕೂಡಿದ ಮೇಘಗಳ ಸಾಲಿನಂತಿದ್ದವು. ವೈಡೂರ್ಯಮಣಿಗಳಿಂದ ನಿಬದ್ಧವಾದ ಚಿನ್ನದ ಬಲೆಗಳಿಂದ ಕೂಡಿದ್ದವು. ಪಕ್ಷಿಗಳ ಸಮೂಹಗಳಿಂದ ಶೋಭಾಯ ಮಾನವಾಗಿದ್ದವು.॥೧॥ ಅಲ್ಲಿ ಪ್ರಶಸ್ತವಾದ ಶಂಖಗಳೂ, ಆಯುಧಗಳೂ, ಧನುಸ್ಸುಗಳೂ, ಇವುಗಳಿಂದ ಶೋಭಿತವಾದ ಅಂತರ್ಗೃಹಗಳನ್ನೂ, ಪರ್ವತಸದೃಶವಾದ ಪ್ರಾಸಾದಗಳಲ್ಲಿ ಮನೋಹರವಾದ, ವಿಶಾಲವಾದ ಚಂದ್ರಶಾಲೆಗಳನ್ನೂ ಹನುಮಂತನು ನೋಡಿದನು.॥೨॥ ಅವು ನಾನಾ ವಿಧವಾದ ಸಂಪತ್ತುಗಳಿಂದ ದೇವಿಪ್ಯಮಾನವಾಗಿ ಕಾಣುತ್ತಿದ್ದು, ದೇವಾಸುರರಿಂದಲೂ ಪ್ರಶಂಸಿಸಲ್ಪಡುತ್ತಿದ್ದುವು. ಸಕಲ ವಿಧವಾದ ಭೋಗಸಾಮಗ್ರಿಗಳು ವಿಪುಲವಾಗಿದ್ದು, ಯಾವುದರ ಕೊರತೆಯೂ ಇರಲಿಲ್ಲ. ರಾವಣನು ಸ್ವಬಲ ಪರಾಕ್ರಮಗಳಿಂದ ಸಂಪಾದಿಸಿದ್ದು, ಅಂತಹ ಭವ್ಯವಾದ, ಸುಂದರವಾದ ಗೃಹಗಳನ್ನು ಮಾರುತಿಯು ನೋಡಿದನು.॥೩॥

ಪ್ರಯತ್ನಪೂರ್ವಕವಾಗಿ ಬಹಳ ಸುಂದರವಾಗಿ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಆ ಸೌಧಗಳಲ್ಲಿನ ಮಾಯಾವಿಶೇಷಗಳಿಂದಾಗಿ ಮಯನಿಂದಲೇ ನಿರ್ಮಿಸಲ್ಪಟ್ಟರುವುದೋ ಎಂಬಂತೆ ಕಾಣುತ್ತಿತ್ತು. ಭೂಮಂಡಲದಲ್ಲೇ ಸಕಲ ಗುಣಗಳಿಂದಲೂ ವಿಶಿಷ್ಟವಾಗಿದ್ದ ಲಂಕಾಧಿಪತಿಯಾದ ರಾವಣನ ಪ್ರಾಸಾದಗಳನ್ನು ಹನುಮಂತನು ನೋಡಿದನು. ॥೪॥ ರಾವಣನ ಉತ್ತಮೋತ್ತಮವಾದ ಅರಮನೆಯು ಎತ್ತರದಲ್ಲಿರುವ ಮೇಘದಂತೆ ಮನೋಹರವಾಗಿತ್ತು. ಸುವರ್ಣದಂತೆ ಸುಂದರವಾಗಿಯೂ ರಾಕ್ಷಸರ ಅಧಿಪತಿಯಾದ ರಾವಣನ ಆಂತಸ್ಥಿಗೆ ಅನುರೂಪವಾಗಿ ವಿರಾಜಿಸುತ್ತಿತ್ತು. ॥೫॥ ಅದು ಭೂಮಿಗೆ ಇಳಿದು ಬಂದ ಸ್ವರ್ಗದಂತೆ ಶೋಭಿಸುತ್ತಾ ಹೊಳೆಯುತ್ತಿತ್ತು. ಅನೇಕ ರತ್ನ ರಾಶಿಗಳಿಂದ ಸಮೃದ್ಧವಾಗಿತ್ತು. ವೃಕ್ಷಗಳ ಕುಸುಮಗಳಿಂದಲೂ ವ್ಯಾಪ್ತವಾಗಿದ್ದು, ಕುಸುಮ ಪರಾಗದಿಂದ ಆಚ್ಛಾದಿತವಾದ ಪರ್ವತ ಶಿಖರದಂತೆ ವಿರಾಜಿಸುತ್ತಿತ್ತು.॥೬॥ ಅನಂತರ ಹನುಮಂತನು ಅತ್ಯಂತ ಶೋಭೆಯಿಂದ ಮೆರೆಯುವ ಪುಷ್ಪಕವಿಮಾನವನ್ನು ನೋಡಿದನು. ಅದು ವಿದ್ಯುನ್ಮಾಲೆಗಳಿಂದ ಶೋಭಿತವಾದ ಮೇಘದಂತೆ ಶ್ರೇಷ್ಠರಾದ ನಾರೀಮಣಿಯರಿಂದ ಬೆಳಗುತ್ತಿತ್ತು. ಶ್ರೇಷ್ಠವಾದ ಹಂಸಗಳಿಂದ ಆಕಾಶದಲ್ಲಿ ಒಯ್ಯಲ್ಪಡುತ್ತಿರುವಂತೆ ಕಾಣುತ್ತಿತ್ತು. ಬ್ರಹ್ಮಾದಿ ಪುಣ್ಯಪುರುಷರ ವಿಮಾನದಂತೆ

ಯಥಾ ನಗಾಗ್ರಂ ಬಹುಧಾತುಚಿತ್ರಂ
ಯಥಾ ಸಭಶ್ಚ ಗ್ರಹಚಂದ್ರಚಿತ್ರಮ್ ।
ದದರ್ಶ ಯುಕ್ತೀಕೃತಮೇಘಚಿತ್ರಂ
ವಿಮಾನರತ್ನಂ ಬಹುರತ್ನಚಿತ್ರಮ್ ॥ ೬॥

ಮಹೀ ಕೃತಾ ಪರ್ವತರಾಜಿಪೂರ್ಣಾ
ಶೈಲಾಃ ಕೃತಾ ವೃಕ್ಷವಿತಾನಪೂರ್ಣಾಃ ।
ವೃಕ್ಷಾಃ ಕೃತಾಃ ಪುಷ್ಪವಿತಾನಪೂರ್ಣಾಃ
ಪುಷ್ಪಂ ಕೃತಂ ಕೇಸರಪತ್ರಪೂರ್ಣಮ್ ॥ ೯॥

ಕೃತಾನಿ ವೇಶ್ಮಾನಿ ಚ ಪಾಂಡರಾಣಿ
ತಥಾ ಸುಪುಷ್ಪಾಣ್ಯಪಿ ಪುಷ್ಕರಾಣಿ ।
ಪುನಶ್ಚ ಪದ್ಮಾನಿ ಸಕೇಸರಾಣಿ
ಧನ್ಯಾನಿ ಚಿತ್ರಾಣಿ ತಥಾ ವನಾನಿ ॥ ೧೦॥

ಪುಷ್ಪಾಹ್ವಯಂ ನಾಮ ವಿರಾಜಮಾನಂ
ರತ್ನಪ್ರಭಾಭಶ್ಚ ವಿವರ್ಧಮಾನಮ್ ।
ವೇಶ್ಮೋತ್ತಮಾನಾಮಪಿ ಚೋಚ್ಛ್ರಿತಮಾನಂ
ಮಹಾಕಪಿಸ್ತತ್ರ ಮಹಾವಿಮಾನಮ್ ॥ ೧೧॥

ಕೃತಾಶ್ಚ ವೈಡೂರ್ಯಮಯಾ ವಿಹಂಗಾಃ
ರೂಪ್ಯಪ್ರವಾಲೈಶ್ಚ ತಥಾ ವಿಹಂಗಾಃ ।
ಚಿತ್ರಾಶ್ಚ ನಾನಾವಸುಭಿರ್ಭುಜಂಗಾ
ಜಾತ್ಯಾನು ರೂಪಾಸ್ತುರಗಾಃ ಶುಭಾಂಗಾಃ ॥ ೧೨॥

ಪ್ರವಾಲಜಾಂಬೂನದಪುಷ್ಪಪಕ್ಷಾಃ
ಸಲೀಲಮಾವರ್ಜಿತಜಿಹ್ಮಪಕ್ಷಾಃ ।
ಕಾಮಸ್ಯ ಸಾಕ್ಷಾದಿವ ಭಾಂತಿ ಪಕ್ಷಾಃ
ಕೃತಾ ವಿಹಂಗಾಃ ಸುಮುಖಾಃ ಸುಪಕ್ಷಾಃ ॥ ೧೩॥

ನಿಯುಜ್ಯಮಾನಾಸ್ತು ಗಜಾಃ ಸುಹಸ್ತಾಃ
ಸಕೇಸರಾಶ್ಚೋತ್ಪಲಪತ್ರಹಸ್ತಾಃ ।
ಬಭೂವ ದೇವೀ ಚ ಕೃತಾ ಸುಹಸ್ತಾ
ಲಕ್ಷ್ಮೀಸ್ತಥಾ ಪದ್ಮನಿ ಪದ್ಮಹಸ್ತಾ ॥ ೧೪॥

ಶೋಭಿಸುತ್ತಿತ್ತು.॥೭॥ ಆ ಪುಷ್ಪಕವಿಮಾನವು ಅನೇಕವಿಧವಾದ ಗೈರಿಕಾದಿ ಧಾತುಗಳಿಂದ ಚಿತ್ರಿತವಾದ ಪರ್ವತದಂತೆ ಕಾಣುತ್ತಿತ್ತು, ಗ್ರಹಗಳಿಂದಲೂ, ಚಂದ್ರನಿಂದಲೂ ಚಿತ್ರಿತವಾದ ಆಕಾಶದಂತೆ ರಾರಾಜಿಸುತ್ತಿತ್ತು. ಒಟ್ಟುಗೂಡಿದ ಮೇಘಗಳ ಸಮೂಹದಂತೆ ಕಾಣುತ್ತಿದ್ದ ಆ ವಿಮಾನರತ್ನವು ಅಪಾರವಾದ ರತ್ನಗಳಿಂದ ಚಿತ್ರಿತವಾಗಿತ್ತು. ॥೮॥

ಆ ಪುಷ್ಪಕವಿಮಾನದಲ್ಲಿ ಅನೇಕ ಚಿತ್ರಗಳನ್ನು ಬಿಡಿಸಿದ್ದರು. ಅದರಲ್ಲಿ ಚಿತ್ರಿತವಾದ ಶಿಲ್ಪದಲ್ಲಿ ಪರ್ವತದ ಸಾಲುಗಳಿಂದ ಯುಕ್ತವಾದ ಭೂಮಿಯಿತ್ತು. ಪರ್ವತಗಳು ವೃಕ್ಷಗಳ ಸಮೂಹಗಳಿಂದ ವ್ಯಾಪ್ತವಾಗಿದ್ದವು. ವೃಕ್ಷಗಳು ಪುಷ್ಪಗುಚ್ಛಗಳಿಂದ ಸಮೃದ್ಧವಾಗಿದ್ದವು. ಆ ಪುಷ್ಪಗಳು ಕೇಸರಗಳಿಂದಲೂ, ದಳಗಳಿಂದಲೂ,ಕೂಡಿ ಬಹು ಸುಂದರವಾಗಿ ಗೋಚರಿಸುತ್ತಿದ್ದವು. ॥೯॥ ಆ ಪುಷ್ಪಕವಿಮಾನದ ಚಿತ್ರಗಳಲ್ಲಿ ಶ್ವೇತವರ್ಣದ ಭವನಗಳಿದ್ದವು. ಕೇಸರಗಳಿಂದ ಕೂಡಿದ ಸರೋವರಗಳು ರಂಗು ರಂಗಾದ ಹೂವುಗಳಿಂದ ಶೋಭಿಸುತ್ತಿದ್ದವು. ಅದರಲ್ಲಿ ಕೇಸರಗಳಿಂದ ಕೂಡಿದ ಪದ್ಮಗಳೂ ರಾರಾಜಿಸುತ್ತಿದ್ದವು. ಅದರಲ್ಲಿ ಚಿತ್ರಿತವಾದ ವನಗಳು ಅದ್ಭುತವಾಗಿದ್ದವು. ॥೧೦॥ ಅದು ತನ್ನಲ್ಲಿದ್ದ ರತ್ನಗಳ ಪ್ರಭೆಯನ್ನು ದಶದಿಕ್ಕುಗಳಿಗೂ ಪಸರಿಸುತ್ತಾ, ಆಕಾಶದಲ್ಲಿ ಹಾರಾಡುತ್ತಿದೆಯೋ ಎಂಬತ್ತಿತ್ತು. ಉತ್ತಮೋತ್ತಮ ಪ್ರಾಸಾದಗಳಿಗೂ ಶ್ರೇಷ್ಠತಮವಾಗಿರುವ ಪ್ರಾಸಾದದಂತೆ ಕಂಗೊಳಿಸುತ್ತಿತ್ತು. ಅಂತಹ 'ಪುಷ್ಪಕ'ವೆಂಬ ಹೆಸರಿನ ಮಹಾವಿಮಾನವನ್ನು ಹನುಮಂತನು ನೋಡಿದನು.॥೧೧॥

ಆ ವಿಮಾನದಲ್ಲಿ ವೈಡೂರ್ಯಮಯವಾದ ಪಕ್ಷಿಗಳೂ, ಬೆಳ್ಳಿಯಿಂದಲೂ ಹಾಗೂ ಹವಳಗಳಿಂದಲೂ ಮಾಡಿದ ಪಕ್ಷಿಗಳೂ ಇದ್ದವು. ನಾನಾವಿಧವಾದ ಮುತ್ತು-ರತ್ನಗಳಿಂದ ಚಿತ್ರಿತವಾದ ಹಾವುಗಳಿದ್ದವು. ಜಾತಿಗೆ ಅನುರೂಪವಾದ ಶುಭಲಕ್ಷಣಗಳಿಂದ ಕೂಡಿದ ಕುದುರೆಗಳಿದ್ದವು.॥೧೨॥ ಆ ವಿಮಾನದಲ್ಲಿ ಹವಳ ಹಾಗೂ ಸುವರ್ಣಪುಷ್ಪಗಳೇ ರೆಕ್ಕೆಗಳ ರೂಪದಲ್ಲಿದ್ದ ಪಕ್ಷಿಗಳು ಇದ್ದವು. ಅವುಗಳು ವಕ್ರವಾಗಿದ್ದ ರೆಕ್ಕೆಗಳನ್ನು ಲೀಲಾಜಾಲವಾಗಿ ಒಳಕ್ಕೆ ಎಳೆದು ಕೊಳ್ಳುತ್ತಿದ್ದವು. ಕಾಮದೇವನಿಗೆ ಒತ್ತಾಸೆ ನೀಡುವ ವಸ್ತುಗಳೋ ಎಂಬಂತೆ ಆ ಪಕ್ಕಿಗಳು ಪ್ರಕಾಶಿಸುತ್ತಿದ್ದವು. ಅಂತಹ ಸುಂದರವಾದ, ಆನುಪಮವಾದ ರೆಕ್ಕೆಗಳಿಂದಲೂ, ಸುಂದರವಾದ ಮುಖಗಳಿಂದಲೂ ಕೂಡಿದ ಪಕ್ಷಿಗಳು ಅದರಲ್ಲಿ ಚಿತ್ರಿತವಾಗಿದ್ದವು.॥೧೩॥ ಆ ಭವನದಲ್ಲಿ ಲಕ್ಷ್ಮೀದೇವಿಯು ತನ್ನ ಮನೋಹರ ಹಸ್ತಗಳಲ್ಲಿ ಪದ್ಮಗಳನ್ನು ಧರಿಸಿ ಪದ್ಮಸರೋವರದಲ್ಲಿ ವಿರಾಜಿಸುತ್ತಿರುವಂತೆ ಚಿತ್ರಿತವಾಗಿತ್ತು. ಅವಳ ಇಕ್ಕೆಡೆಗಳಲ್ಲಿ ಸುಂದರವಾದ ಸೊಂಡಿಲುಗಳುಳ್ಳ ಆನೆಗಳನ್ನು ಚಿತ್ರಿಸಿದ್ದರು.ಅವುಗಳ ಸೊಂಡಿಲುಗಳಲ್ಲಿ ತಾವರೆ ಹೂವುಗಳನ್ನು, ಎಲೆಗಳನ್ನು ಹಿಡಿದು ಕೊಂಡು, ದೇವಿಗೆ ಆತ್ಮಾರ್ಪಣ ಬುದ್ಧಿಯಿಂದ ಅಭಿಷೇಕ ಮಾಡುತ್ತಿರುವಂತೆ

ಇತೀವ ತದ್ಗೃಹಮಭಿಗಮ್ಯ ಕೋಭನಂ
ಸವಿಸ್ಮಯೋ ನಗಮಿವ ಚಾರುಶೋಭನಮ್ ।
ಪುನಶ್ಚತತ್ ಪರಮ ಸುಗಂಧಿ ಸುಂದರಂ
ಹಿಮಾತ್ಯಯೇ ನಗಮಿವ ಚಾರುಕಂದರಮ್ ॥ ೧೫॥

ಇತ್ಯು॥೧೪॥ ಪರ್ವತದಂತೆ ಉನ್ನತವಾದ, ಆಹ್ಲಾದಕರವಾಗಿ ಶೋಭಿಸುತ್ತಿರುವ ಗೃಹವನ್ನು (ಪುಷ್ಪಕವನ್ನು) ನೋಡಿ ಹನುಮಂತನು ಆಶ್ಚರ್ಯಚಕಿತನಾದನು. ಸುಂದರವಾದ ಪೊಟರೆಯಿಂದ ಕೂಡಿದ ಸುಗಂಧಯುಕ್ತವಾದ ವೃಕ್ಷಗಳಂತೆಯೂ, ವಸಂತಕಾಲದಲ್ಲಿ ಸುಂದರವಾದ ಗುಹೆಯಿಂದ ಕೂಡಿದ ಪರ್ವತದಂತೆಯೂ ಶೋಭಾಯಮಾನವಾದ ಆ ಭವನವನ್ನು ಅವನು ಮಗದೊಮ್ಮೆ ಪ್ರವೇಶಿಸಿದನು.॥೧೫॥

ತತಃ ಸ ತಾಂ ಕಪಿರಭಿಹತ್ಯ ಪೂಜಿತಾಂ
ಚರನ್ ಪುರೀಂ ದಶಮುಖಬಾಹುಪಾಲಿತಾಮ್ ।
ಅದೃಶ್ಯ ತಾಂ ಜನಕಸುತಾಂ ಸುಪೂಜಿತಾಂ
ಸುದುಃಖಿತಃ ಪತಿಗುಣದೇಗನಿರ್ಜಿತಾಮ್ ॥ ೧೬॥

ಹೀಗೆ ಹನುಮಂತನು ರಾವಣೇಶ್ವರನಿಂದ ಪರಿಪಾಲಿಸಲ್ಪಡುತ್ತಿದ್ದ ಹಾಗೂ ಸಕಲರಿಂದ ಪೂಜಿಸಲ್ಪಡುತ್ತಿದ್ದ ಲಂಕಾಪಟ್ಟಣದ ಎಲ್ಲ ಕಡೆಗಳಲ್ಲಿಯೂ ಸಂಚರಿಸಿ ಸೀತಾದೇವಿಯನ್ನು ಹುಡುಕಿದನು. ಆದರೂ ಪರಮ ಪೂಜ್ಯಳೂ, ಶ್ರೀರಾಮನ ಸದ್ಗುಣ ಪ್ರಭಾವಗಳಿಂದ ಜಯಿಸಲ್ಪಟ್ಟ; ಆಪ್ಯೇ ಅಲ್ಲ ಶ್ರೀರಾಮನು ಶಿವಧನುಷ್ಸಿನ ಗುಣವನ್ನು(ನಾರಾಚವನ್ನು) ಬಲವಾಗಿಸೆಳೆದು ಧನುರ್ಭಂಗ ಮಾಡಿ ಜಯಿಸಲ್ಪಟ್ಟವಳಾದ ಆ ಜಾನಕಿಯನ್ನು ಕಾಣದೆ ಅವನು ವಿಚಾರ ಗ್ರಸ್ತನಾದನು.॥೧೬॥ ಆ ಸಮುದಲ್ಲಿ ಲಂಕಾಪಟ್ಟಣದಲ್ಲಿ ಸಂಚರಿಸುತ್ತಿದ್ದ ಮಹಾತ್ಮನಾದ ಬಹುವಿಧವಾಗಿ ಆಗುಹೋಗುಗಳನ್ನು ಮನಸ್ಸಿನಲ್ಲಿಯೇ ವಿಚಾರಮಾಡುತ್ತಿದ್ದ, ತೀಕ್ಷ್ಣಬುದ್ಧಿಯವ ನಾದ, ಸದಾಚಾರ ಸಂಪನ್ನನಾದ, ಹನುಮಂತನು ಸೂಕ್ಷ್ಮದೃಷ್ಟಿಯಿಂದ ಹೂಡುಕಿದರೂ ಸೀತೆಯನ್ನು ಕಾಣದೆ ಅವನ ಮನಸ್ಸು ಅತಿ ದುಃಖಿತವಾಯಿತು. ॥೧೬॥

ತತಸ್ತದಾ ಬಹುವಿಧಭಾವಿತಾತ್ಮನಃ
ಕೃತಾತ್ಮನೋ ಜನಕಸುತಾಂ ಸುವರ್ಚಸಃ ।
ಅಪಶ್ಯತೋಽಭವದತಿದುಃಖಿತಂ ಮನಃ
ಸುಚಕ್ಷುಷಃ ಪ್ರವಿಚರತೋ ಮಹಾತ್ಮನಃ ॥ ೧೭॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಸಪ್ತಮಃ ಸರ್ಗಃ ॥ ೭ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಏಳನೆಯ ಸರ್ಗವು ಮುಗಿಯಿತು.

* * *

ಎಂಟನೆಯ ಸರ್ಗ

ಹನುಮಂತನು ಪುನಃ ಪುಷ್ಪಕವಿಮಾನವನ್ನು ಸಂದರ್ಶಿಸಿದುದು—

ಸ ತಸ್ಯ ಮಧ್ಯೇ ಭವನಸ್ಯ ಸಂಸ್ಥಿತಂ
ಮಹದ್ವಿಮಾನಂ ಬಹು ರತ್ನ ಚಿತ್ರಿತಮ್ ।
ಪ್ರತಪ್ತಜಾಂಬೂನದಜಾಲಕೃತ್ರಿಮಂ
ದದರ್ಶ ವೀರಃ ಪವನಾತ್ಮಜಃ ಕಪಿಃ ॥ ೧॥

ಧೀಮಂತನಾದ, ವಾಯುಪುತ್ರನಾದ ಹನುಮಂತನು ಮಣಿಗಳಿಂದಲೂ, ರತ್ನಗಳಿಂದಲೂ ನಿಬದ್ಧವಾಗಿ ಚಿತ್ರಿತವಾಗಿದ್ದ ಪುಟಕ್ಕೆ ಹಾಕಿದ ಚಿನ್ನದಿಂದಲೇ ನಿರ್ಮಿತವಾದ ಮಹಾವಿಮಾನವನ್ನು ರಾವಣನ ಆ ಮಹಾಸೌಧದ ಮಧ್ಯದಲ್ಲಿ ನೋಡಿದನು. ॥೧॥

ತದಪ್ರಮೇಯಾಪ್ರತಿಕಾರಕೃತ್ರಿಮಂ
ಕೃತಂ ಸ್ವಯಂ ಸಾಧ್ವಿತಿ ವಿಶ್ವಕರ್ಮಣಾ ।
ದಿವಂ ಗತಂ ವಾಯುಪಥೇ ಪ್ರತಿಷ್ಠಿತಂ
ವ್ಯರಾಜತಾದಿತ್ಯಪಥಸ್ಯ ಲಕ್ಷ್ಮವತ್ ॥ ೨॥

ಆ ಪುಷ್ಪಕವಿಮಾನವು ಅಪ್ರಮೇಯವಾದ ಸೌಂದರ್ಯದಿಂದ ಕೂಡಿರುವ ಪ್ರತಿಮೆಯಂತೆ ನಿರ್ಮಿತವಾಗಿತ್ತು. ಲೋಕವೇ ಮೆಚ್ಚುಕೊಳ್ಳುವಂತಹ ಊಹಾತೀತವಾದ, ಸಾಟಿಯಿಲ್ಲದ ಆ ಪುಷ್ಪಕವಿಮಾನವನ್ನು

ನ ತತ್ರ ಕಿಂಚಿನ್ನ ಕೃತಂ ಪ್ರಯತ್ನತೋ
ನ ತತ್ರ ಕಿಂಚಿನ್ನ ಮಹಾರ್ಹರತ್ನವತ್ ।
ನ ತೇ ವಿಶೇಷಾ ನಿಯತಾಃ ಸುರೇಷ್ವಪಿ
ನ ತತ್ರ ಕಿಂಚಿನ್ನ ಮಹಾವಿಶೇಷವತ್ ॥ ೩॥

ಸ್ವತಃ ವಿಶ್ವಕರ್ಮನೇ ನಿರ್ಮಿಸಿದ್ದನು. ಅದು ಆಕಾಶಕ್ಕೆ ಹೋಗುವ ವಾಯುಮಾರ್ಗದಲ್ಲಿ ಪ್ರತಿಷ್ಠಿತವಾಗಿತ್ತು. (ನೆಲಬಿಟ್ಟು ಅಂತರಾಳದಲ್ಲಿತ್ತು) ಸೂರ್ಯನಮಾರ್ಗಕ್ಕೆ ತೋರುಗಲ್ಲಿನಂತೆ ಕಾಣುತ್ತಿದ್ದ ಆ ದಿವ್ಯವಿಮಾನವನ್ನು ಹನುಮಂತನು ನೋಡಿದನು. ॥೨॥

ಪ್ರಯತ್ನ ಪೂರ್ವಕವಾಗಿ ಮಾಡದಿರುವ ಯಾವುದೊಂದು ಭಾಗವೂ ಆ ವಿಮಾನದಲ್ಲಿರಲಿಲ್ಲ. ಬಹುಮೂಲ್ಯವಾದ ರತ್ನಗಳಿಂದ ಕೂಡಿರದ ಯಾವ ಭಾಗವೂ ಆ ವಿಮಾನದಲ್ಲಿರಲಿಲ್ಲ. ಅತಿರಚನಾ ವಿಶಿಷ್ಟವಲ್ಲದ ಯಾವ ಭಾಗವೂ ಅದರಲ್ಲಿರಲಿಲ್ಲ.ಅದರಲ್ಲಿನ ಎಲ್ಲ ಭಾಗಗಳೂ ಶಿಲ್ಪಚಾತುರ್ಯದ ವೈಶಿಷ್ಟ್ಯದಿಂದಲೇ ಕೂಡಿದ್ದವು. ದೇವತೆಗಳಲ್ಲಿಯೂ ಅಂತಹ ವಿಶಿಷ್ಟರೀತಿಯಿಂದ ನಿರ್ಮಿಸಿದ ವಿಮಾನಗಳಿರಲಿಲ್ಲ. ॥೩॥ ತಪೋನುಷ್ಠಾನದಿಂದಲೂ, ಪರಾಕ್ರಮದಿಂದಲೂ ರಾವಣನು ಆ ಪುಷ್ಪಕವಿಮಾನವನ್ನು ಸಂಪಾದಿಸಿದ್ದನು. ಆದರಲ್ಲಿ ಆಸೀನರಾದವರು ಮನಸ್ಸಿನಲ್ಲಿ ನಿಶ್ಚಯಿಸಿದ ಸ್ಥಳಕ್ಕೆ ಅದು ಸಂಚರಿಸುತ್ತಿತ್ತು. ಆ ವಿಮಾನದಲ್ಲಿ ಅನೇಕವಿಧವಾದ ವಿಲಕ್ಷಣವಾದ ಸಭಾಭವನಗಳೂ, ಕ್ರೀಡಾವನಗಳೂ, ಭೋಜನಶಾಲೆಗಳೂ, ವಿನೋದ ಮಂದಿರಗಳೂ, ಗೋಪುರಗಳೂ ಮುಂತಾದ ಬೇರೆ ಬೇರೆ ಭಾಗಗಳೂ ಸೌಕರ್ಯಕ್ಕಾಗಿ ನಿರ್ಮಿಸಿದ್ದವು. ಆ ವಿಮಾನಕ್ಕೆ ಅನುಗುಣವಾಗಿ ಸೂಕ್ಷ್ಮವಾದ ಚಿತ್ರಕಲೆ, ಕುಸುರಿ ಕೆಲಸಗಳಿಂದ ಕೂಡಿದ್ದು, ವಿಶೇಷ ದರ್ಶನಯೋಗ್ಯವಾಗಿತ್ತು. ಅಂತಹ ವಿಮಾನವು ಬೇರೆ ಎಲ್ಲಿಯೂ ಇರಲಿಲ್ಲ.॥೪॥

ತಪಃಸಮಾಧಾನ ಪರಾಕ್ರಮಾರ್ಜಿತಂ
ಮನಃಸಮಾಧಾನವಿಚಾರ ಚಾರಿಣಮ್ ।
ಅನೇಕ ಸಂಸ್ಥಾನವಿಶೇಷನಿರ್ಮಿತಂ
ತತಸ್ತ ತಸ್ತುಲ್ಯ ವಿಶೇಷದರ್ಶನಮ್ ॥ ೪॥

ಸ್ವಾಮಿಯ ಮನಸ್ಸಿಗೆ ಅನುಸಾರವಾಗಿ ಅತಿತೀಕ್ಷ್ಣವಾಗಿ ಆ ವಿಮಾನವು ನಿರ್ದಿಷ್ಟವಾದ ಸ್ಥಳಕ್ಕೆ ಹೋಗುತ್ತಿತ್ತು. ಆದರ ಗಮನವನ್ನು ಶತ್ರುಗಳಿಂದಲೂ ಎದುರಿಸಲು ಅಸಾಧ್ಯವಾಗಿತ್ತು. ಅದು ವಾಯುವೇಗದಿಂದ ಸಾಗುತ್ತಿತ್ತು. ಮಹಾತ್ಮರಾದ, ಪುಣ್ಯಾತ್ಮರಾದ, ತೇಜಸ್ಸಂಪನ್ನರಾದ, ಸುಪ್ರಸಿದ್ಧರ ಆರಮನೆಗಳಂತೆ, ಇಂದ್ರಾದಿದೇವತೆಗಳ ಸ್ವರ್ಗದಂತೆ ಸುಖ, ಸಂತೋಷದಾಯಕವಾಗಿತ್ತು.॥೫॥ ಆಕಾಶ ಗಮನವೇ ಮುಂತಾದ ವಿಶೇಷಗುಣಗಳನ್ನು ಹೊಂದಿದ್ದು ವಾಯು ಮಾರ್ಗದಲ್ಲಿ ಅದು ಸ್ಥಾಪಿಸಲ್ಪಟ್ಟಿತ್ತು. ಚಿತ್ರ-ವಿಚಿತ್ರವಾದ ಅನೇಕಶಿಖರಗಳಿಂದ ಅಲಂಕೃತವಾಗಿತ್ತು. ಶರತ್ಕಾಲದ ಚಂದ್ರನಂತೆ ನಿರ್ಮಲವಾಗಿದ್ದು, ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತಿತ್ತು. ಅನೇಕ ಸಣ್ಣ ಶಿಖರಗಳಿಂದ ಕೂಡಿದ ಪರ್ವತದ ದೊಡ್ಡ ಶಿಖರದಂತೆ ಇದ್ದ ಪುಷ್ಪಕವಿಮಾನವನ್ನು ಹನುಂತನು ನೋಡಿದನು. ॥೬॥

ಮನಃ ಸಮಾಧಾಯ ತು ತೀಕ್ಷ್ಣಗಾಮಿನಂ
ದುರಾವರಂ ಮಾರುತತುಲ್ಯಗಾಮಿನಮ್ ।
ಮಹಾತ್ಮನಾಂ ಪುಣ್ಯಕೃತಾಂ ಮಹರ್ದ್ಧಿನಾಂ
ಯಶಸ್ವಿನಾಮಗ್ರ್ಯಮುದಾಮಿವಾಲಯಮ್ ॥ ೫॥

ವಿಶೇಷಮಾಲಂಬ್ಯ ವಿಶೇಷಸಂಸ್ಥಿತಂ
ವಿಚಿತ್ರಕೂಟಂ ಬಹುಕೂಟಮಂಡಿತಮ್ ।
ಮನೋಽಭಿರಾಮಂ ಶರದಿಂದು ನಿರ್ಮಲಂ
ವಿಚಿತ್ರಕೂಟಂ ಶಿಖಿರಂ ಗಿರೇರ್ಯಥಾ ॥ ೬॥

ಕರ್ಣಕುಂಡಲಗಳಿಂದ ಶೋಭಿತವಾದ ಮುಖಿಗಳುಳ್ಳವರೂ, ಮಹಾಕಾಯರೂ, ಆಕಾಶದಲ್ಲಿ ಸಂಚರಿಸುವ ರಾಕ್ಷಸರು, ತಮ್ಮ ಪ್ರಭುವಿಗೆ ಅನುಕೂಲವಾಗಿ ನಡೆಯುವವರೂ, ವಿಶಾಲನೇತ್ರರೂ, ಅತಿವೇಗವಾಗಿ ಸಂಚರಿಸುವ ಸಾವಿರಾರು ಭೂತಗಣಗಳು ಆ ವಿಮಾನವನ್ನು ಹೊರುತ್ತಿರುವಂತೆ

ವಹಂತಿ ಯಂ ಕುಂಡಲಶೋಭಿತಾನನಾ
ಮಹಾಶನಾ ವ್ಯೋಮಚರಾ ನಿಶಾಚರಾಃ ।
ವಿವೃತ್ತವಿಧ್ವತ್ತವಿಶಾಲಲೋಚನಾ
ಮಹಾಜವಾ ಭೂತಗಣಾಃ ಸಹಸ್ರಶಃ ॥ ೭॥

ವಸಂತಪುಷ್ಪೋತ್ಕರಚಾರುದರ್ಶನಂ
ವಸಂತಮಾಸಾದಪಿ ಕಾಂತದರ್ಶನಮ್ ।
ಸ ಪುಷ್ಪಕಂ ತತ್ರ ವಿಮಾನಮುತ್ತಮಂ
ದದರ್ಶ ತದ್ವಾನರವೀರಸತ್ತಮಃ ॥ ೮ ॥

ಹೊರಭಾಗದಲ್ಲಿ ಶಿಲ್ಪಗಳಿದ್ದವು. ॥೭॥ (ಸ್ವೇಚ್ಛೆಯಿಂದ ಹೋಗುವ 'ಕಾಮಗ' ವಿಮಾನಕ್ಕೆ ಹೊರುವವರ ಅಪೇಕ್ಷೆಯಿಲ್ಲದಿರುವುದರಿಂದ ಗೋಪುರಗಳಲ್ಲಿ ರಥಗಳಲ್ಲಿ ಕೆತ್ತಲ್ಪಟ್ಟ ಭೂತಗಳಂತೆ ಇಲ್ಲಿಯೂ ಪ್ರತಿಮಾ ರೂಪದಿಂದ ಇದ್ದವು.)

ವಸಂತ ಕಾಲದ ಪುಷ್ಪಗಳ ಸಮೂಹದಂತೆ ಬಹಳ ಸುಂದರವಾಗಿ ಕಾಣುತ್ತಿದ್ದ, ವಸಂತ ಮಾಸಕ್ಕಿಂತಲೂ ಹೆಚ್ಚು ಚೆಲುವಾಗಿದ್ದ, ಉತ್ತಮೋತ್ತಮವಾದ ಆ ಪುಷ್ಪಕವಿಮಾನವನ್ನು ವಾನರಶ್ರೇಷ್ಠನಾದ ಮಾರುತಿಯು ನೋಡಿದನು.॥೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಅಷ್ಟಮಃ ಸರ್ಗಃ ॥ ೮ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಎಂಟನೆಯ ಸರ್ಗವು ಮುಗಿಯಿತು.

* * *

ಒಂಭತ್ತನೆಯ ಸರ್ಗ

ಹನುಮಂತನು ರಾವಣನ ಅಂತಃಪುರದಲ್ಲಿ ಮಲಗಿದ್ದ ಸ್ತ್ರೀಯರನ್ನು ನೋಡಿದುದು -

ತಸ್ಯಾಲಯವರಿಷ್ಠಸ್ಯ ಮಧ್ಯೇ ವಿಪುಲಮಾಯತಮ್ ।
ದದರ್ಶ ಭವನಶ್ರೇಷ್ಠಂ ಹನುಮಾನ್ ಮಾರುತಾತ್ಮಜಃ ॥ ೧॥

ಅರ್ಧಯೋಜನವಿಸ್ತೀರ್ಣಮಾಯತಂ ಯೋಜನಂ ಹಿ ತತ್ ।
ಭವನಂ ರಾಕ್ಷಸೇಂದ್ರಸ್ಯ ಬಹುಪ್ರಾಸಾದಸಂಕುಲಮ್ ॥ ೨॥

ಮಾರ್ಗಮಾಣಸ್ತು ವೈದೇಹಿಂ ಸೀತಾಮಾಯತಲೋಚನಾಮ್ ।
ಸರ್ವತಃ ಪರಿಚಕ್ರಾಮ ಹನುಮಾನರಿಸೂದನಃ ॥ ೩॥

ಉತ್ತಮಂ ರಾಕ್ಷಸಾವಾಸಂ ಹನುಮಾನವಲೋಕಯನ್ ।
ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಮ್ ॥ ೪॥

ಚತುರ್ವಿಷಾಣೈರ್ದ್ವಿರದೈಸ್ತ್ರಿವಿಷಾಣೈಸ್ತಥೈವ ಚ ।
ಪರಿಕ್ಷಿಪ್ತಮಸಂಬಾಧಂ ರಕ್ಷ್ಯಮಾಣಮುದಾಯುಧೈಃ ॥ ೫॥

ರಾಕ್ಷಸೀಭಿಶ್ಚ ಪತ್ನಿಭೀ ರಾವಣಸ್ಯ ನಿವೇಶನಮ್ ।
ಆಹೃತಾಭಿಶ್ಚ ವಿಕ್ರಮ್ಯ ರಾಜಕನ್ಯಾಭಿರಾವೃತಮ್ ॥ ೬॥

ಮರುತಾತ್ಮಜನಾದ ಹನುಮಂತನು ಶ್ರೇಷ್ಠವಾದ ಆ ಪುಷ್ಪಕವಿಮಾನದ ಮಧ್ಯಭಾಗದಲ್ಲಿ ನಿರ್ಮಲವಾಗಿಯೂ, ವಿಸ್ತಾರವಾಗಿಯೂ ಇದ್ದ ಸರ್ವಸುಖ ಸಂಪನ್ನವಾದ ಒಂದು ರಾಜಭವನವನ್ನು ನೋಡಿದನು.॥೧॥ ಪುಷ್ಪಕ ವಿಮಾನದಲ್ಲಿದ್ದ ರಾವಣನ ಆ ಮಹಾಭವನದ ಸುತ್ತಲೂ ಅನೇಕ ಪ್ರಾಕಾರಗಳಿದ್ದವು. ಆ ಪುಷ್ಪಕ ಭವನವು ಅರ್ಧಯೋಜನದಷ್ಟು ಅಗಲವಾಗಿದ್ದು, ಒಂದು ಯೋಜನದಷ್ಟು ಉದ್ದವಾಗಿ ವಿಸ್ತಾರವಾಗಿತ್ತು.॥೨॥

ಶತ್ರುಸಂಹಾರಕನೂ, ಸಮರ್ಥನೂ ಆದ ಹನುಮಂತನು ವಿಶಾಲನೇತ್ರೆಯಾದ ವಿದೇಹನಂದಿನಿ ಸೀತಾದೇವಿಯನ್ನು ಹುಡುಕುತ್ತಾ ಆ ಭವನಗಳೆಲ್ಲವನ್ನು ಜಾಲಾಡಿದನು.॥೩॥ ಸರ್ವಶುಭಲಕ್ಷಣಗಳಿಂದ ಕೂಡಿದ ಹನುಮಂತನು ರಾಕ್ಷಸರ ಶ್ರೇಷ್ಠವಾದ ಸೌಧಗಳೆಲ್ಲವನ್ನು ನೋಡಿಕೊಂಡು ರಾಕ್ಷಸೇಂದ್ರನಾದ ರಾವಣನ ಪ್ರಾಸಾದಕ್ಕೂ ತಲುಪಿದನು.॥೪॥ ಆ ವಿಶಾಲವಾದ ಅರಮನೆಯು ಎರಡು, ಮೂರು, ನಾಲ್ಕು ದಂತಗಳುಳ್ಳ ಮತ್ತಗಜಗಳಿಂದ ಪರಿವೃತವಾಗಿತ್ತು. ಆಯುಧಗಳನ್ನು ಎತ್ತಿ ಹಿಡಿದುಕೊಂಡು ಸರ್ವ ಸನ್ನದ್ಧರಾದ ರಾಕ್ಷಸರು ಅದನ್ನು ಎಲ್ಲ ಕಾಲದಲ್ಲಿಯೂ ರಕ್ಷಿಸುತ್ತಿದ್ದರು.॥೫॥ ಆ ಮಹಾ ಪ್ರಾಸಾದದಲ್ಲಿ ರಾವಣನ ರಾಕ್ಷಸಸ್ತ್ರೀಯರು ಹಾಗೂ ಪರಾಕ್ರಮದಿಂದ ಸೆಳೆದುತಂದ ರಾಜಕನ್ಯೆಯರೂ ಆವೃತವಾಗಿದ್ದರು. ॥೬॥ ರಾಕ್ಷಸರಾಜನಾದ ರಾವಣನ ಆ

ತನ್ನಕ್ರಮಕರಾಕೀರ್ಣಂ ತಿಮಿಂಗಿಲಝಷಾಕುಲಮ್ ।
ವಾಯುವೇಗಸಮಾಧೂತಂ ಪನ್ನಗೈರಿವ ಸಾಗರಮ್ ॥ ೭॥

ಯಾ ಚ ವೈಶ್ರವಣೇ ಲಕ್ಷ್ಮೀರ್ಯಾಚೇಂದ್ರೇ ದಿವಾಪಥೇ ।
ಸಾ ರಾವಣಗೃಹೇ ಸರ್ವಾ ನಿತ್ಯಮೇವಾನಪಾಯಿನೀ ॥ ೮॥

ಯಾ ಚ ರಾಜ್ಞಃ ಕುಬೇರಸ್ಯ ಯಮಸ್ಯ ವರುಣಸ್ಯ ಚ ।
ತಾದೃಶೀ ತದ್ವಿಶಿಷ್ಟಾ ವಾ ಋದ್ಧೀ ರಕ್ಷೋಗೃಹೇಷ್ವಿಹ ॥ ೯॥

ತಸ್ಯ ಹರ್ಮ್ಯಸ್ಯ ಮಧ್ಯಸ್ಥಂ ದೇಶ್ಯ ಚಾನ್ಯೈಶ್ಚ ಸುನಿರ್ಮಿತಮ್।
ಬಹುನಿರ್ಯೂಹಸಂಕೀರ್ಣಂ ದದರ್ಶ ಪವನಾತ್ಮಜಃ ॥ ೧೦॥

ಬ್ರಹ್ಮಣೋಽರ್ಥೇ ಕೃತಂ ದಿವ್ಯಂ ದಿವಿ ಯದ್ವಿಶ್ವಕರ್ಮಣಾ ।
ವಿಮಾನಂ ಪುಷ್ಪಕಂ ನಾಮ ಸರ್ವರತ್ನವಿಭೂಷಿತಮ್ ॥ ೧೧॥

ಪರೇಣ ತಪಸಾ ಲೇಭೇ ಯತ್ ಕುಬೇರಃ ಪಿತಾಮಹಾತ್ ।
ಕುಬೇರಮೋಜಸಾ ಜಿತ್ವಾ ಲೇಭೇ ತದ್ರಾಕ್ಷಸೇಶ್ವರಃ ॥ ೧೨॥

ಈಹಾಮೃಗಸಮಾಯುಕ್ತೈಃ ಕಾರ್ತಸ್ವರವಿರಂಜಿತೈಃ ।
ಸುಕೃತೈರಾಚಿತಂ ಸ್ತಂಭೈಃ ಪ್ರದೀಪ್ತಮಿವ ಚ ಶ್ರಿಯಾ ॥ ೧೩॥

ಮೇರುಮಂದರಸಂಕಾಶೈಃ ಉಲ್ಲಿಖದ್ಭಿರಿವಾಂಬರಮ್ ।
ಕೂಟಾಗಾರೈಃ ಶುಭಾಕಾರೈಃ ಸರ್ವತಃ ಸಮಲಂಕೃತಮ್ ॥ ೧೪॥

ಜ್ವಲನಾರ್ಕಪ್ರತೀಕಾಶಂ ಸುಕೃತಂ ವಿಶ್ವಕರ್ಮಣಾ ।
ಹೇಮಸೋಪಾನಸಂಯುಕ್ತಂ ಚಾರುಪ್ರವರವೇದಿಕಮ್ ॥ ೧೫॥

ಜಾಲವಾತಾಯನೈರ್ಯುಕ್ತಂ ಕಾಂಚನೈಃ ಸ್ಫಾಟಿಕೈರಪಿ ।
ಇಂದ್ರನೀಲಮಹಾನೀಲ ಮಣಿಪ್ರವರವೇದಿಕಮ್ ॥ ೧೬॥

ಅರಮನೆಯು ಮೊಸಳೆಗಳಿಂದಲೂ, ಮೀನುಗಳಿಂದಲೂ, ತಿಮಿಂಗಿಲಗಳಿಂದಲೂ, ಮಹಾಮತ್ಸ್ಯಗಳಿಂದಲೂ ಕೂಡಿರುವ ವಾಯುವೇಗದಿಂದ ಅಲ್ಲೋಲ-ಕಲ್ಲೋಲವಾಗಿ ಆಗಸಕ್ಕೆ ಮುಟ್ಟುವ ತರಂಗಗಳಿಂದ ಕೂಡಿದ ಸರ್ಪಭರಿತವಾದ ಸಾಗರದಂತೆ ಕಾಣುತ್ತಿತ್ತು.॥೭॥

ಕುಬೇರನ ಅರಮನೆಯಲ್ಲಿರುವ ಲಕ್ಷ್ಮಿಯು (ಐಶ್ವರ್ಯವು), ಹರಿವಾಹನ(ಐರಾವತ)ನಾದ ಇಂದ್ರನ ಅರಮನೆಯಲ್ಲಿರುವ ಸುರಮ್ಯವಾದ ಲಕ್ಷ್ಮಿಯೇ ರಾವಣನ ಅರಮನೆಯಲ್ಲೂ ಶಾಶ್ವತವಾಗಿ ವಾಸವಾಗಿದ್ದಳು. ॥೮॥ ಧನಪತಿಯಾದ ಕುಬೇರನ ಬಳಿ ಇರುವ, ಯಮ, ವರುಣರ ಬಳಿ ಇದ್ದ ಸಂಪತ್ಸಮೃದ್ಧಿಯೇ ಅದಕ್ಕಿಂತಲೂ ಮಿಗಿಲಾದ ಸಂಪತ್ತು ಮೈದ್ದಿಯ ಲಂಕೆಯಲ್ಲಿದ್ದ ರಾವಣನ ಬಳಿ ಹಾಗೂ ಅವನ ಸಹೋದರ, ಪುತ್ರ, ಮಂತ್ರಿಗಳೇ ಮುಂತಾದ ಎಲ್ಲ ರಾಕ್ಷಸರ ಮನೆಗಳಲ್ಲಿಯೂ ಇದ್ದಿತು.॥೯॥ ರಾವಣನ ಆ ಮಹಾಪ್ರಾಸಾದದ ಮಧ್ಯಭಾಗದಲ್ಲಿ ಸುಂದರವಾಗಿ ನಿರ್ಮಿಸಲ್ಪಟ್ಟಿದ್ದ ಮಡಿಸಿದ ಹಲವಾರು ಕೃತ್ರಿಮವಾದ ಅನೆಗಳು ಸಮೂಹವಾಗಿದ್ದುದನ್ನು ಆ ಹನುಮಂತನು ನೋಡಿದನು. ॥೧೦॥ ಬ್ರಹ್ಮನ ಸಲುವಾಗಿ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದ್ದ ಸರ್ವರತ್ನವಿಭೂಷಿತವಾದ ದಿವ್ಯ ಪುಷ್ಪಕವೆಂಬ ವಿಮಾನವು ಅದಾಗಿತ್ತು. ॥೧೧॥ ಬ್ರಹ್ಮನಿಗಾಗಿ ವಿಶ್ವಕರ್ಮನಿಂದ ರಚಿಸಲ್ಪಟ್ಟ ಆ ಪುಷ್ಪಕವಿಮಾನವನ್ನು ಮಹಾತಪಸ್ಸಿನಿಂದ ಕುಬೇರನು ಬ್ರಹ್ಮನಿಂದ ಪಡೆದು ಕೊಂಡಿದ್ದನು. ಅನಂತರ ರಾವಣೇಶ್ವರನು ಭುಜ-ಬಲ ಪರಾಕ್ರಮಗಳಿಂದ ಕುಬೇರನನ್ನು ಜಯಿಸಿ ಆ ಪುಷ್ಪಕವಿಮಾನವನ್ನು ಪಡೆದುಕೊಂಡಿದ್ದನು. ॥೧೨॥

ಆ ಪುಷ್ಪಕವಿಮಾನವು ಅಪರಂಜಿ ಚಿನ್ನದಿಂದ ನಿರ್ಮಿತವಾದ ಕ್ರೀಡಾಮೃಗ ಮುಂತಾದ ಪ್ರತಿಮೆಗಳಿಂದ, ಕಲಾತ್ಮಕವಾಗಿ ಕಯಾರಿಸಿದ ಬೆಳ್ಳಿಯ ಸ್ತಂಭಗಳಿಂದ ಅಲಂಕೃತವಾಗಿತ್ತು. ಅದ್ಭುತ ಕಾಂತಿಯಿಂದ ಕೋಛಾಯಮಾನವಾಗಿ ಕಾಣುತ್ತಿತ್ತು. ॥೧೩॥ ಮೇರು-ಮಂದರ ಪರ್ವತಗಳಿಗೆ ಸದೃಶವಾಗಿದ್ದು ಆಕಾಶವನ್ನು ಉಜ್ಜುತ್ತಿರುವುದೋ ಎಂಬಂತೆ ಕಾಣುತ್ತಿತ್ತು. ಅಗ್ನಿ-ಸೂರ್ಯರ ಪ್ರಕಾಶಕ್ಕೆ ಸಮಾನವಾದ ಪ್ರಕಾಶದಿಂದ ಬೆಳಗುತ್ತಾ ಚಂದ್ರಶಾಲೆಗಳಿಂದಲೂ, ಗುಪ್ತಗೃಹಗಳಿಂದಲೂ ಸಮಲಂಕೃತವಾಗಿದ್ದಿತು. ॥೧೪॥ ವಿಶ್ವಕರ್ಮನಿಂದ ಚಾಕಚಕ್ಯತೆಯಿಂದ ನಿರ್ಮಿತವಾದ ಪುಷ್ಪಕವು ಸೂರ್ಯಾಗ್ನಿಗಳಂತೆ ಪ್ರಕಾಶಮಾನವಾಗಿತ್ತು. ಸುವರ್ಣಮಯವಾದ ಸೋಪಾನಗಳಿಂದಲೂ, ಶ್ರೇಷ್ಠವಾದ ಜಗುಲಿಗಳಿಂದಲೂ ಕೂಡಿದ ಸರ್ವಶ್ರೇಷ್ಠವಾದ ಆ ವಿಮಾನವನ್ನು ಹನುಮಂತನು ನೋಡಿದನು. ॥೧೫॥ ಆ ವಿಮಾನವು ಸುವರ್ಣಮಯವಾದ ಹಾಗೂ ಸ್ಫಟಿಕ ಮಯವಾದ ಜಾಲರಿಗಳಿಂದ ಕೂಡಿದ ಕಿಟಕಿಗಳಿಂದ ಸಮಲಂಕೃತವಾಗಿತ್ತು. ಅದರಲ್ಲಿದ್ದ ಜಗುಲಿಗಳು ಶ್ರೇಷ್ಠವಾದ ಇಂದ್ರನೀಲಮಣಿಗಳಿಂದ ಮತ್ತು ಸಿಂಹಳ ದ್ವೀಪದಲ್ಲಿ ಲಭಿಸುವ ಮಹಾನೀಲಗಳಿಂದ ನಿರ್ಮಿಸಲ್ಪಟ್ಟಿದ್ದವು. ॥೧೬॥

ವಿದ್ರುಮೇಣ ವಿಚಿತ್ರೇಣ ಮಣಿಭಿಶ್ಚ ಮಹಾಧನೈಃ ।
ನಿಸ್ತುಲಾಭಿಶ್ಚ ಮುಕ್ತಾಭಿಸ್ತಲೇನಾಭಿವಿರಾಜಿತಮ್ ॥ ೧೭॥

ಚಂದನೇನ ಚ ರಕ್ತೇನ ತಪನೀಯನಿಭೇನ ಚ ।
ಸುಪುಣ್ಯಗಂಧಿನಾ ಯುಕ್ತಮಾದಿತ್ಯರಥಸಮಮ್ ॥ ೧೮॥

ಕೂಟಾಗಾರೈರ್ವರಾಕಾರೈಃ ವಿವಿಧೈಃ ಸಮಲಂಕೃತಮ್ ।
ವಿಮಾನಂ ಪುಷ್ಪಕಂ ದಿವ್ಯಮಾರುರೋಹ ಮಹಾಕಪಿಃ ॥ ೧೯॥

ತತ್ರಸ್ಥಃ ಸ ತದಾ ಗಂಧಂ ಪಾನಭಕ್ಷ್ಯಾನ್ನಸಂಭವಮ್ ।
ದಿವ್ಯಂ ಸಮುರ್ಧಿತಂ ಜಿಘ್ರನ್ದದರ್ಶಾತಿಮಹಾಬಲಃ ।
ಸ ಗಂಧಸ್ತಂ ಮಹಾಸತ್ತ್ವಂ ಬಂಧುರ್ಬಂಧುಮಿವೋತ್ತಮಮ್ ॥ ೨೦॥

ಇತ ಏಹೀತ್ಯುವಾಚೇವ ತತ್ರ ಯತ್ರ ಸ ರಾವಣಃ ।
ತತಸ್ತಾಂ ಪ್ರಮಿತಃ ಶಾಲಾಂ ದದರ್ಶ ಮಹತೀಂ ಶುಭಾಮ್ ॥ ೨೧॥

ರಾವಣಸ್ಯ ಮನಃಕಾಂತಾಂ ಕಾಂತಾಮಿವ ವರಸ್ತ್ರಿಯಮ್ ।
ಮಣಿಸೋಪಾನವಿಕೃತಾಂ ಹೇಮಜಾಲವಿರಾಜಿತಾಮ್ ॥ ೨೨॥

ಸ್ಫಾಟಿಕೈರಾವೃತತಲಾಂ ದಂತಾಂತರಿತರೂಪಿಕಾಮ್ ।
ಮುಕ್ತಾಭಿಶ್ಚ ಪ್ರವಾಲೈಶ್ಚ ರೂಪ್ಯಚಾಮೀಕರೈರಪಿ ॥ ೨೩॥

ವಿಭೂಷಿತಾಂ ಮಣಿಸ್ತಂಭೈಃ ಸುಬಹುಸ್ತಂಭಭೂಷಿತಾಮ್ ।
ಸರ್ವೈರ್ಗುಣೈರಭಿರತ್ಯುಚ್ಚೈಃ ಸಮಂತಾತ್ ಸುವಿಭೂಷಿತೈಃ ॥ ೨೪॥

ಸ್ತಂಭೈಃ ಪಕ್ಷೈರಿವಾತ್ಯುಚ್ಚೈರ್ದಿವಂ ಸಂಪ್ರಸ್ಥಿತಾಮಿವ ।
ಮಹತ್ಯಾ ಕುಥಯಾಸ್ತೀರ್ಣಾಂ ಪೃಥಿವೀಲಕ್ಷಣಾಂಕಯಾ ॥ ೨೫॥

ಪೃಥಿವೀಮಿವ ವಿಸ್ತೀರ್ಣಾಂ ಸರಾಷ್ಟ್ರಗೃಹಮಾಲಿನೀಮ್ ।
ನಾನಿತಾಂ ಮತ್ತವಿಹಗೈರ್ದಿವ್ಯಗಂಧಾಧಿವಾಸಿತಾಮ್ ॥ ೨೬॥

ಆದರ ತಳಭಾಗವು (ನೆಲ) ವಿಚಿತ್ರವಾದ ಹವಳಗಳಿಂದಲೂ, ಆಪಾರಮೌಲ್ಯದ ಮಣಿಗಳಿಂದಲೂ, ಉಪಮಾನ ರಹಿತವಾದ ದುಂಡಾಗಿರುವ ಮುತ್ತುಗಳಿಂದ ಚಿತ್ರಿತವಾಗಿ ರಾರಾಜಿಸುತ್ತಿತ್ತು. ॥೧೭॥ಅದು ಸುವರ್ಣ ಸದೃಶವಾದ ಪುಣ್ಯಗಂಧದಿಂದ ಯುಕ್ತವಾದ ರಕ್ತಚಂದನದಿಂದ ಸುವಾಸಿತವಾಗಿತ್ತು. ಕಾದ ಭಂಗಾರದ ಕಾಂತಿ ಯಿಂದ ಮಧ್ಯಾಹ್ನದ ಸೂರ್ಯನಂತೆ ತೇಜಃಪುಂಜ ವಾಗಿತ್ತು. ॥೧೮॥ ವಿವಿಧವಾದ ಸುಂದರಾಕೃತಿಗಳುಳ್ಳ ಗುವ್ವಗ್ಯಹಗಳಿಂದ(ಕೂಟಾಗಾರ) ಕೂಡಿದ್ದು ಆ ಪುಷ್ಪಕ ವಿಮಾನವು ಅಲಂಕೃತವಾಗಿತ್ತು. ಅಂತಹ ದಿವ್ಯವಿಮಾನವನ್ನು ಮಹಾಕಪಿಯಾದ ಹನುಮಂತನು ಏರಿದನು. ॥೧೯॥ ಆಗ ಅಲ್ಲಿ ಭಕ್ಷ್ಯ-ಪಾನೀಯಗಳಿಂದ ಹಾಗೂ ಅನ್ನಭಂಡಾರದಿಂದ ಹೊರಸೂಸುತ್ತಿದ್ದ ಮೈ-ಮನ ಮರೆಸುವಂತಹ ದಿವ್ಯಪರಿಮಳವು ಸರ್ವತ್ರ ಪಸರಿಸಿತ್ತು. ಆ ಸುವಾಸನೆಯ ನಾಸಾಪುಟಕ್ಕೆ ತಗಲುತ್ತಲೇ ಹನುಮಂತನು ನಿರಾಕಾರವಾದ ವಾಯುದೇವರೇ ಮೂರ್ತಿಭವಿಸಿ ಪರಿಮಳ ರೂಪದಿಂದಬಂದಿರುವಂತೆ ಭಾವಿಸಿದನು.॥೨೦॥ ಪಾನ-ಭಕ್ಷ್ಯಾದಿಗಳಿಂದ ಹೊರಹೊಮ್ಮುತ್ತಿದ್ದ ಆ ದಿವ್ಯ ಗಂಧವು(ವಾಯುದೇವರು) ಬಂಧುವೊಬ್ಬನನ್ನು ಮತ್ತೊಬ್ಬ ಉತ್ತಮನಾದ ಬಂಧುವು 'ಇತ್ತ ಬಾ, ಇತ್ತ ಬಾ'ಎಂದು ಹೇಳಿಕೊಂಡುರಾವಣನಿರುವ ಸ್ಥಳಕ್ಕೆ ಕರೆಯುತ್ತಿರುವನೋ ಎಂಬಂತೆ ಕಾಣುತ್ತಿತ್ತು. ॥೨೧॥

ಆಲ್ಲಿಂದ ಮುಂದೆ ಹೋದ ಹನುಮಂತನು ಶುಭಾಕೃತಿಯ ಒಂದು ವಿಶಾಲವಾದ, ಸುಂದರವಾದ ಶಾಲೆಯನ್ನು ನೋಡಿದನು. ಅದು ಕಡುಚೆಲುವೆಯಾದ ಮನೋಹರವಾದ ಕಾಂತಿಯುಕ್ತ ಕಾಂತೆಯು ಕಾಂತನಿಗೆ ಪ್ರಿಯವಾಗುವಂತೆ ರಾವಣನಿಗೆ ಅತ್ಯಂತ ಪ್ರಿಯವಾಗಿತ್ತು.॥೨೨॥ ಆ ಶಾಲೆಯ ಸೋಪಾನಗಳುಮಣಿಮಯವಾಗಿದ್ದವು.ಸುವರ್ಣಮಯವಾದ ಬಲೆಗಳಿಂದ ವಿರಾಜಿಸುವ ಗವಾಕ್ಷಗಳು ಮಂಗಳಕರವಾಗಿದ್ದವು.ನೆಲಕ್ಕೆ ಸ್ಫಟಿಕ ಶಿಲೆಗಳನ್ನು ಹಾಸಿ ಅಲ್ಲಲ್ಲಿ ದಂತದ ಚಿತ್ರಗಳನ್ನು ಕೆತ್ತಿದ್ದರು.॥೨೩॥ ಮುತ್ತು ಹವಳ ವಜ್ರಗಳಿಂದಲೂ ಬೆಳ್ಳಿ ಭಂಗಾರದ ತಗಡುಗಳಿಂದಲೂ ಸಮಲಂಕೃತವಾದ ಮಣಿಮಯ ಸ್ತಂಭಗಳೇ ಅಲ್ಲದೆ ಇನ್ನೂ ಅನೇಕ ಸುಂದರವಾದ ಸ್ತಂಭಗಳಿಂದ ಆ ದಿವ್ಯಶಾಲೆಯು ಭೂಷಿತವಾಗಿತ್ತು. ॥೨೪॥ ಆ ಸ್ತಂಭಗಳು ಸ್ವಲ್ಪವೂ ಡೊಂಕಿಲ್ಲದಂತೆ ನೇರವಾಗಿದ್ದು ಅಮೂಲಾಗ್ರವಾಗಿ ಅಲಂಕೃತವಾಗಿ ಎತ್ತರವಾಗಿದ್ದವು. ಗಗನ ಚುಂಬಗಳಾದ ಆ ಕಂಬಗಳು ಪಕ್ಷಿಗಳ ರೆಕ್ಕೆಗಳಂತೆ ಕಾಣುತ್ತಿದ್ದು, ಆಕಾಶದ ಕಡೆಗೆ ಹಾರಲು ಸಿದ್ಧವಾಗಿರುವಂತೆ ಕಾಣುತ್ತಿದ್ದವು. ॥೨೫॥ ಆ ದಿವ್ಯ ಶಾಲೆಯ ಮಧ್ಯದಲ್ಲಿ ನದಿ-ಸಮುದ್ರ, ಅರಣ್ಯಗಳ ಕಸೂತಿಯಿಂದ ಕೂಡಿದ ವಿಶಾಲವಾದ ರತ್ನಗಂಬಳಿಯನ್ನು ಹಾಸಿದ್ದರು. ಅದು ರಾಷ್ಟ್ರ, ಗೃಹಗಳ ಸಾಲುಗಳು ಮುಂತಾದ ಚಿತ್ರಗಳಿಂದ ಅಲಂಕೃತವಾಗಿತ್ತು. ಆ ದಿವ್ಯ ಶಾಲೆಯು ಭೂಮಿಯಂತೆ

ಪರಾರ್ಧ್ಯಸ್ತರಕೋಪೇತಾಂ ರಕ್ಷೋಽಧಿಪನಿಸೇವಿತಾಮ್ ;
ಧೂಮ್ರಾಮಗರುಧೂಮೇನ ವಿಮಲಾಂ ಹಂಸಪಾಂಡುರಾಮ್ ॥ ೨೭॥

ಚಿತ್ರಾಂ ಶುಕ್ಲೋಪಹಾರೇಣ ಕಲ್ಮಾಷೀಮಿವ ಸುಪ್ರಭಾಮ್ ।
ಮನಃಸಂಹ್ಲಾದಜನನೀಂ ವರ್ಣಸ್ಯಾಪಿ ಪ್ರಸಾದಿನೀಮ್ ॥ ೨೮॥

ತಾಂ ಶೋಕನಾಶಿನೀಂ ದಿವ್ಯಾಂ ಶ್ರಿಯಃ ಸಂಜನನೀಮಿವ ।
ಇಂದ್ರಿಯಾಗೇಂದ್ರಿಯಾರ್ಥೈಶ್ಚ ಪಂಚ ಪಂಚಭಿರುತ್ತಮೈಃ ॥ ೨೯॥

ತರ್ಪಯಾಮಾಸ ಮಾತೇವ ತದಾ ರಾವಣಪಾಲಿತಾ ।
ಸ್ವರ್ಗೋಽಯಂ ದೇವಲೋಕೋಽಯಂ ಇಂದ್ರಸ್ಯೇಯಂ ಪುರೀ ಭವೇತ್ ॥

ಸಿದ್ಧಿರ್ವೇಯಂ ಪರಾ ಹಿ ಸ್ಯಾತ್ ಇತ್ಯಮನ್ಯತ ಮಾರುತಿಃ ।
ಪ್ರಖ್ಯಾಯತ ಇವಾಪಶ್ಯತ್ ಪ್ರದೀಪಾಂಶ್ಚ ಕಾಂಚನಾನ್ ॥ ೩೦॥

ಧೂರ್ತಾನಿವ ಮಹಾಧೂರ್ತೈಃ ದೇವಸೇನ ಪರಾಜಿತಾನ್ ।
ದೀಪಾನಾಂ ಚ ಪ್ರಕಾಶೇನ ತೇಜಸಾ ರಾವಣಸ್ಯ ಚ ॥ ೩೨॥

ಆರ್ಚಿರ್ಭಿರ್ಭೂಷಣಾನಾಂ ಚ ಪ್ರದೀಪ್ತೈರ್ವಾಪ್ಯಮನ್ಯತ ।
ತತೋಽಪಶ್ಯತ್ ಕುಥಾಸೀನಂ ನಾನಾವರ್ಣಾಂಬರಸ್ರಜಮ್ ॥ ೩೩॥

ವಿಸ್ತಾರವಾಗಿ ಕಾಣುತ್ತಿತ್ತು.॥೨೬॥ ಅಲ್ಲಿ ಮದಿಸಿದ ಪಕ್ಷಿಗಳು ಕಲ-ಕಲಧ್ವನಿಮಾಡುತ್ತಿದ್ದವು.ದಿವ್ಯಗಂಧಗಳಿಂದ ಆ ಶಾಲೆಯು ಸುವಾಸಿತವಾಗಿತ್ತು. ಆಲ್ಲಿ ಬಹುಮೂಲ್ಯ ರತ್ನಗಂಬಳಿಯನ್ನು ಹಾಸಿದ್ದರು. ರಾಕ್ಷಸಾಧಿಪತಿಯಾದ ರಾವಣನು ಆ ದಿವ್ಯ ಶಾಲೆಯಲ್ಲಿ ವಾಸಮಾಡುತ್ತಿದ್ದನು.॥೨೭॥ ಅಗರು ಧೂಪಗಳಿಂದ ಧೂಪಿತವಾದ ಆ ಶಾಲೆಯು ಧೂಮ್ರವರ್ಣದ್ದಾಗಿ ಕಾಣುತ್ತಿತ್ತು. ಆದರೆ ವಾಸ್ತವವಾಗಿ ಹಂಸದಂತೆ ಬಿಳುಪಾಗಿಯೂ, ನಿರ್ಮಲವಾಗಿಯೂ ಇತ್ತು. ಆದು ನಾನಾಬಣ್ಣಗಳ ಪುಷ್ಪಹಾರ ಗಳಿಂದ ಚಿತ್ರವರ್ಣದಂತೆ ವಿರಾಜಿತವಾಗಿದ್ದು, ಚಿತ್ರ-ವಿಚಿತ್ರ ವರ್ಣಗಳಿಂದ ಶೋಭಿತವಾದ ವಸಿಷ್ಠರ ಧೇನುವಿನಂತೆ * ಸಕಲ ಕಾಮನಾ ವಸ್ತುಗಳನ್ನು ಕೊಡುತ್ತಿದ್ದಿತು.॥೨೮॥ ಆದು ಒಳ್ಳೆಯ ಪ್ರಭೆಯಿಂದ ರಾರಾಜಿಸುತ್ತಾ ಮನಸ್ಸಿಗೆ ಆಮೋದವನ್ನು ಉಂಟು ಮಾಡುತ್ತಿತ್ತು. ಸುಂದರ ಬಣ್ಣಗಳ ಸೌಂದರ್ಯವನ್ನು ಹೆಚ್ಚಿಸು ವಂತಿತ್ತು. ಎಲ್ಲ ಶೋಕಗಳನ್ನು ಪರಿಹರಿಸುತ್ತಿತ್ತು. ದಿವ್ಯಸಂಪತ್ತಿನ ಉಗಮಸ್ಥಾನವೇ ಆಗಿರುವುದೋ ಎಂಬಷ್ಟಿದ್ದ ಆ ಶಾಲೆಯನ್ನು ಹನುಮಂತನು ನೋಡಿದನು.॥೨೯॥

ರಾವಣನಿಂದ ಪಾಲಿತವಾದ ಆ ದಿವ್ಯಶಾಲೆಯು ಶಬ್ದ, ಸ್ಪರ್ಶ, ರೂಪ,ರಸ, ಗಂಧಗಳೆಂಬ ಐದು ಇಂದ್ರಿಯ ವಿಷಯಗಳಿಂದ ಕಿವಿ, ಚರ್ಮ, ಕಣ್ಣು ನಾಲಿಗೆ, ಮೂಗು ಹೀಗೆ ಹನುಮಂತನ ಐದು ಇಂದ್ರಿಯಗಳನ್ನು ತಾಯಿಯೋಪಾದಿಯಲ್ಲಿ ತೃಪ್ತಿಗೊಳಿಸುತ್ತಿತ್ತು. ಆ ದಿವ್ಯಶಾಲೆಯಲ್ಲಿ ಪಂಚೇಂದ್ರಿಯಗಳೂ ತೃಪ್ತಿಯುಂಟಾಗುತ್ತಿತ್ತು.॥೩೦॥

ಅಂತಹ ದಿವ್ಯಶಾಲೆಯನ್ನು ಆದರ ಅನುಪಮವಾದ ಸೌಂದರ್ಯವನ್ನು ನೋಡಿ ಮಾರುತಿಯು-''ಇದು ನಿಶ್ಚಯವಾಗಿಯೂ ಎಲ್ಲರೂ ಪಡೆಯುವ ಸ್ವರ್ಗಲೋಕವೇ ಸರಿ.ದೇವತೆಗಳು ವಾಸಿಸುವ ದೇವಲೋಕವಾದರೂ ಇರಬಹುದು.ಅಥವಾ ಇಂದ್ರನ ಅಮರಾವತಿಯಿರಬಹುದೇ? ಅದಕ್ಕಿಂತಲೂ ಮಿಗಿಲಾದ ತಪಸ್ಸಿದ್ಧಿರೂಪವಾದ ಲೋಕವೇ ಆಗಿರಬಹುದು'' ಎಂದುಕೊಂಡನು.॥೩೧॥

ಸುವರ್ಣಮಯವಾದ ದೀಪಸ್ತಂಭಗಳಲ್ಲಿ ಆಲ್ಲಾಡದೆ ಉರಿಯುತ್ತಿದ್ದ ಮಣಿದೀಪಗಳ ಸಾಲುಗಳನ್ನು ಹನುಮಂತನು ನೋಡಿದನು. ಜೂಜಿನಲ್ಲಿ ಮಹಾಧೂರ್ತರಿಂದ ಪರಾಜಿತರಾಗಿ ಚಿಂತಾಮಗ್ನರಾಗಿ (ಧ್ಯಾನಮಗ್ನರಾಗಿ) ಕುಳಿತಿರುವ ಸಾಧಾರಣ ಧೂರ್ತರಂತೆ ಅವು ಕಾಣುತ್ತಿದ್ದವು. ಆದರೆ ಆ ದೀಪಗಳು ರಾವಣನ ದಿವ್ಯತೇಜಸ್ಸಿನ ಮುಂದೆ ಮಸಕು-ಮಸಕಾಗಿ ಕಾಣುತ್ತಿದ್ದವು. ದೀಪಗಳ ಪ್ರಕಾಶದಿಂದಲೂ ರಾವಣನ ತೇಜಸ್ಸಿನಿಂದಲೂ, ಆಭರಣಗಳ ಕಾಂತಿಯಿಂದಲೂ ಆ ದಿವ್ಯ ಶಾಲೆಯು ಜಾಜ್ವಲ್ಯಮಾನವಾಗಿ ದೆಯೋ ಎಂಬಂತೆ ಹನುಮಂತನಿಗೆ ಭಾಸವಾಯಿತು. ॥೨೨-೩೩॥

---

* ವಸಿಷ್ಠ ಮಹರ್ಷಿಗಳ ಕಾಮಧೇನುವು ಎಲ್ಲರ ಮನೋರಥಗಳನ್ನು ಈಡೇರಿಸುವಂತೆ ''ಶಬಲ'' (ಕಲ್ಮಾಷಿ) ವರ್ಣಶೋಭಿತವಾದ ಈ ಭವನವು ಅಲ್ಲಿ ವಾಸಿಸುವರೆಲ್ಲರ ಕೋರಿಕೆಗಳನ್ನು ಈಡೇರಿಸುತ್ತಿತ್ತು.

ಸಹಸ್ರಂ ವರನಾರೀಣಾಂ ನಾನಾವೇಷವಿಭೂಷಿತಮ್ ।
ಪರಿವೃತ್ತೇऽರ್ಧರಾತ್ರೇ ತು ಪಾನನಿದ್ರಾವಶಂಗತಮ್ ॥ ೩೪॥

ಕ್ರೀಡಿತ್ವೋಪರತಂ ರಾತ್ರೌ ಪ್ರಸುಪ್ತಂ ಬಲವತ್ತದಾ ।
ತತ್ ಪ್ರಸುಪ್ತಂ ವಿರುರುಚೇ ನಿಶಬ್ದಾಂತರಭೂಷಣಮ್ ॥ ೩೫॥

ನಿಃಶಬ್ದ ಹಂಸಭ್ರಮರಂ ಯಥಾ ಪದ್ಮವನಂ ಮಹತ್ ।
ತಾಸಾಂ ಸಂವೃತದಂತಾನಿ ಮೀಲಿತಾಕ್ಷೀಣಿ ಮಾರುತಿಃ ॥ ೩೬॥

ಆಪಶ್ಯತ್ ಪದ್ಮಗಂಧೀನಿ ವದನಾನಿ ಸುಯೋಷಿತಾಮ್ ।
ಪ್ರಬುದ್ಧಾನೀವ ಪದ್ಮಾನಿ ತಾಸಾಂ ಭೂತ್ವಾಕ್ಷಪಾಕ್ಷಯೇ ॥ ೩೭॥

ಪುನಃ ಸಂವೃತಪತ್ರಾಣಿ ರಾತ್ರಾವಿವ ಬಭುಸ್ತದಾ ।
ಇಮಾನಿ ಮುಖಪದ್ಮಾನಿ ನಿಯತಂ ಮತ್ತಷಟ್ಪದಾಃ ॥ ೩೮॥

ಆಂಬುಜಾನೀವ ಫುಲ್ಲಾನಿ ಪ್ರಾರ್ಥಯಂತಿ ಪುನಃ ಪುನಃ ।
ಇತಿ ಚಾಮನ್ಯತ ಶ್ರೀಮಾನ್ ಉಪಪತ್ತ್ಯಾ ಮಹಾಕಪಿಃ ॥ ೩೯॥

ಮೇನೇ ಹಿ ಗುಣತಸ್ತಾನಿ ಸಮಾನಿ ಸಲಿಲೋದ್ಭವೈಃ ।
ಸಾ ತಸ್ಯ ಶುಶುಭೇ ಶಾಲಾ ತಾಭಿಃ ಸ್ತ್ರೀಭಿರ್ವಿರಾಜಿತಾ ॥ ೪೦॥

ಶಾರದೀವ ಪ್ರಸನ್ನಾ ದ್ಯೌಸ್ತಾರಾಭಿರಭಿಶೋಭಿತಾ ।
ಸ ಚ ತಾಭಿಃ ಪರಿವೃತಃ ಶುಶುಭೇ ರಾಕ್ಷಸಾಧಿಪಃ ॥ ೪೧॥

ಯಥಾಮ್ಬುಪತಿಃ ಶ್ರೀಮಾನ್ ತಾರಾಭಿರಭಿಸಂವೃತಃ ।
ಯಾಶ್ಚೈವೇಹೇಕ್ಷಿತಾಸ್ತಾರಾಃ ಪುಣ್ಯಶೇಷಮಾವಹತಾಃ ॥ ೪೨॥

ಇಮಾಸ್ತಾಃ ಸಂಗತಾಃ ಕೃತ್ಸ್ನಾ ಇತಿ ಮೇನೇ ಹರಿಸ್ತದಾ ।
ತಾರಾಣಾಮಿವ ಸುವ್ಯಕ್ತಂ ಮಹತೀನಾಂ ದ್ಯುಚರ್ಚಿಷಾಮ್ ॥ ೪೩॥

ಆನಂತರ ಮಾರುತಿಯು ಆ ದಿವ್ಯ ಶಾಲೆಯಲ್ಲಿ ಸಾವಿರಾರು ಉತ್ತಮ ಸುಂದರ ಸ್ತ್ರೀಯರನ್ನು ನೋಡಿದನು. ಅವರೆಲ್ಲರೂ ರತ್ನಗಂಬಳಿಗಳ ಮೇಲೆ ಕುಳಿತ್ತಿದ್ದು, ಬಗೆ-ಬಗೆಯ ಬಣ್ಣಗಳ ವಸ್ತ್ರಗಳನ್ನು, ಮಾಲೆಗಳನ್ನು ಧರಿಸಿದ್ದರು. ನಾನಾವಿಧವಾದ ವೇಷ-ಭೂಷಣಗಳಿಂದ ಸಮಲಂಕೃತರಾಗಿದ್ದರು. ಅವರಲ್ಲಿ ಕೆಲವರು ಅರ್ಧರಾತ್ರಿಯವರೆಗೆ ಕ್ರೀಡಾದಿಗಳಿಂದ ವಿರತರಾಗಿ ಮಧುಪಾನಮತ್ತರಾಗಿ ತೂರಾಡುತ್ತಿದ್ದರು. ॥೩೪॥ ಕ್ರೀಡೆಯ ಆಯಾಸದಿಂದಲೂ, ಮಧುಪಾನದಿಂದಲೂ ಅವರು ಬಲವಂತವಾಗಿ ನಿದ್ರಾದೇವಿಯನ್ನು ಆಲಿಂಗಿಸಬೇಕಾಯಿತು. ನಿದ್ರಾಮುದ್ರಿತರಾದ ನಾರಿಯರ ಕಾಲಂದುಗೆ, ಗೊಲಸು, ಓಡ್ಯಾಣ ಇವೇ ಮುಂತಾದ ಆಭರಣಗಳು ನಿಶ್ಶಬ್ದವಾಗಿದ್ದರಿಂದ ಅಲ್ಲಿ ನಿಶ್ಶಬ್ದವು ತಾಂಡವವಾಡುತ್ತಿತ್ತು. ಅದನ್ನು ನೋಡಿದರೆ ಹಂಸಗಳಿಂದಲೂ, ದುಂಬಿಗಳಿಂದಲೂ ಕೂಡಿದ ಶಾಂತವಾದ ಪದ್ಮಸರೋವರ ದಂತೆ ಕಂಗೊಳಿಸುತ್ತಿತ್ತು. ಮಲಗಿದ್ದ ಸಮಯದಲ್ಲಿ ಆ ಸ್ತ್ರೀಯರೆಲ್ಲರ ತುಟಿಗಳು, ಕಣ್ಣುಗಳು ಮುಚ್ಚಿದ್ದವು. ಅವರ ಮುಖಗಳು ಸುಗಂಧ ಯುಕ್ತವಾಗಿದ್ದು ಪದ್ಮಗಳಂತೆ ಪ್ರಕಾಶಿಸುತ್ತಿರುವ ಸ್ತ್ರೀಯರನ್ನು ಹನುಮಂತನು ನೋಡಿದನು. ॥೩೫-೩೬॥

''ಆ ರಾಕ್ಷಸ ಸ್ತ್ರೀಯರ ಮುಖಿಗಳು ಹಗಲಿನಲ್ಲಿ ವಿಕಸಿತವಾದ ಪದ್ಮಗಳಂತೆ ಇದ್ದವು. ಆದರೆ ಆಗ ರಾತ್ರಿಯಾಗುತ್ತಲೇ ಮುಕುಳಿತವಾದ ಪದ್ಮಗಳಂತೆ ಒಪ್ಪುತ್ತಿದ್ದವು.॥೩೭॥ ಮದಿಸಿದ ದುಂಬಿಗಳಿಂದ ಕೂಡಿದ ಪದ್ಮಸರೋವರಕ್ಕೂ, ದಿವ್ಯ ಶಾಲೆಯಲ್ಲಿದ್ದ ವರಸ್ತ್ರೀಯರ ಮುಖಪದ್ಮಗಳಿಗೂ ವ್ಯತ್ಯಾಸವೇ ಗೊತ್ತಾಗುತ್ತಿರಲಿಲ್ಲ. ಮದಿಸಿದ ದುಂಬಿಗಳು ಅರಳಿದ ಕಮಲಗಳನ್ನು ನಿತ್ಯವೂ ಆಶಿಸುವಂತೆ, ಉತ್ತಮ ಸ್ತ್ರೀಯರ ಆ ಮುಖ ಪದ್ಮಗಳು ರಸಾಸ್ವಾದನೆಗಾಗಿ ಅಭಿಲಾಷಿಸುವಂತಿತ್ತು. ಸರ್ವಶುಭಲಕ್ಷಣಗಳಿಂದ ಒಪ್ಪುತ್ತಿದ್ದ ಆ ಮಹಾಕಪಿಯು ಹೀಗೆ ಯುಕ್ತಿ-ಯುಕ್ತವಾಗಿ ಆಲೋಚಿಸಿ ಸೌಭಾಗ್ಯಾದಿ ಗುಣಸಾಮ್ಯದಿಂದ ತಟಸ್ಥಭಾವದಿಂದ ನೋಡುತ್ತಿರುವ ಆವನಿಗೆ ಆ ಸ್ತ್ರೀಯರ ಮುಖಿಗಳು ಕಮಲಕ್ಕೆ ಸಮಾನವೆಂದೇ ಕಂಡುಬಂದಿತು. ॥೩೮-೪೦॥

ಅಂತಹ ಭಾಮಿನಿಯರಿಂದ ವಿರಾಜಿಸುತ್ತಿದ್ದ ರಾವಣನ ಆ ಭವ್ಯಶಾಲೆಯು ನಕ್ಷತ್ರಗಳಂತೆ ಶೋಭಿಸುತ್ತಿತ್ತು. ಆ ದಿವ್ಯಶಾಲೆಯು ತಾರೆಗಳಿಂದ ಕೂಡಿ ಶೋಭಿಸುವ ಶರತ್ಕಾಲದ ನಿರ್ಮಲಾಕಾಶದಂತೆ ವಿರಾಜಿಸುತ್ತಿತ್ತು. ॥೪೧॥ ತರುಣೀಮಣಿಗಳಿಂದ ಪರಿವೇಷ್ಟಿತವಾದ ರಾವಣೇಶ್ವರನು ನಕ್ಷತ್ರಗಳಿಂದ ಪರಿವೃತವಾದ ಕಳಾನಿಧಿ ಚಂದ್ರನಂತೆ ಪ್ರಕಾಶಿಸುತ್ತಿದ್ದನು. ॥೪೨॥

ಸೌಂದರ್ಯದ ಖನಿಯಂತಿದ್ದ ಆ ಸ್ತ್ರೀಸಮೂಹವನ್ನು ನೋಡಿ, ಸ್ವರ್ಗಭೋಗಗಳನ್ನು ಅನುಭವಿಸಿ ಮಿಕ್ಕ ಪುಣ್ಯಶೇಷದಿಂದ ಭೂಲೋಕಕ್ಕಿಳಿದ ಎಲ್ಲ ತಾರೆಗಳು ಒಟ್ಟಾಗಿ ಈ ದಿವ್ಯಶಾಲೆಯಲ್ಲಿ ಸೇರಿಕೊಂಡಿರುವೆಯೋ ಎಂದು ಮಾರುತಿಯು

ಪ್ರಭಾ ವರ್ಣಪ್ರಸಾದಾಶ್ಚ ವಿರೇಜುಸ್ತತ್ರ ಯೋಷಿತಾಮ್ ।
ವ್ಯಾವೃತ್ತ ಗುರುಪೀನಸ್ರಕ್ ಪ್ರಕೀರ್ಣವರಭೂಷಣಾಃ ॥ ೪೪॥

ಪಾನವ್ಯಾಯಾಮಕಾಲೇಷು ನಿದ್ರಾಪಹೃತಚೇತಸಃ ।
ವ್ಯಾವೃತ್ತತಿಲಕಾಃ ಕಾಶ್ಚಿತ್ ಕಾಶ್ಚಿದುದ್ಭ್ರಾಂತನೂಪುರಾಃ ॥ ೪೫॥

ಪಾರ್ಶ್ವೇ ಗಲಿತಹಾರಾಶ್ಚ ಕಾಶ್ಚಿತ್ ಪರಮಯೋಷಿತಃ ।
ಮುಕ್ತಾಹಾರಾವೃತಾಶ್ಚಾನ್ಯಾಃ ಕಾಶ್ಚಿದ್ವಿಸ್ರಸ್ತವಾಸಸಃ ॥ ೪೬॥

ವ್ಯಾವಿದ್ಧರಶನಾದಾಮಾಃ ಕಿಶೋರ್ಯ ಇವ ವಾಹಿತಾಃ ।
ಸುಕುಂಡಲಧರಾಶ್ಚಾನ್ಯಾ ವಿಚ್ಛಿನ್ನ ಮೃದಿತಸ್ರಜಃ ॥ ೪೭॥

ಗಜೇಂದ್ರಮೃದಿತಾಃ ಫುಲ್ಲಾ ಲತಾ ಇವ ಮಹಾವನೇ ।
ಚಂದ್ರಾಂಶುಕಿರಣಾಶ್ಚಾನ್ಯಾ ಹಾರಾಃ ಕಾಸಾಂಚಿದುತ್ಕಟಾಃ ॥ ೪೮॥

ಹಂಸಾ ಇವ ಬಭುಃ ಸುಪ್ತಾಃ ಸ್ತನಮಧ್ಯೇಷು ಯೋಷಿತಾಮ್ ।
ಅಪರಾಸಾಂ ಚ ವೈಡೂರ್ಯಾಃ ಕಾದಂಬಾ ಇವ ಪಕ್ಷಿಣಃ ॥ ೪೯॥

ಹೇಮಸೂತ್ರಾಣಿ ಚಾನ್ಯಾಸಾಂ ಚಕ್ರವಾಕಾ ಇವಾಭವನ್ ।
ಹಂಸಕಾರಂಡವಾಕೀರ್ಣಾ ಶ್ಚಕ್ರವಾಕೋಪಶೋಭಿತಾಃ ॥ ೫೦॥

ಅಪಗಾ ಇವ ತಾ ರೇಜುಃ ಜಘನೈಃ ಪುಲಿನೈರಿವ ।
ಕಿಂಕಿಣೀಜಾಲಸಂಕೋಶಾಃ ತಾಹ್ಯೇಮವಿಪುಲಾಂಬುಜಾಃ ॥ ೫೧॥

ಭಾವಗ್ರಾಹಾ ಯಶಸ್ವೀದಾಃ ಸುಪ್ತಾ ನದ್ಯ ಇವಾಬಭುಃ ।
ಸ್ಮೃಮುಷ್ಟಂಗೇಷು ಕಾಸಾಂಚಿತ್ ಕುಚಾಗ್ರೇಷು ಚ ಸಂಸ್ಥಿತಾಃ ॥ ೫೨॥

ಭಾವಿಸಿದನು. ॥೪೩॥ರಾತ್ರಿಯ ನಿರ್ಮಲಾಕಾಶದಲ್ಲಿದ್ದ ಮಹಾ ನಕ್ಷತ್ರಗಳು ಉಜ್ವಲತೆ, ಕಾಂತಿ, ಶುಭ್ರತೆಗಳಿಂದ ಹೊಳೆಯು ತ್ತಿರುವಂತೆ, ರಾವಣನ ಆ ದಿವ್ಯ ಶಾಲೆಯಲ್ಲಿದ್ದ ಶುಭಕರ ರಮಣೀಯರ ದೇಹಗಳ ಕಾಂತಿಯು, ರೂಪಗಳೂ, ಪ್ರಸನ್ನತೆಗಳೂ ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಆ ದಿವ್ಯ ಶಾಲೆಯಲ್ಲಿದ್ದ ನಾರೀಮಣಿಗಳು ಮಧುಪಾನಾನಂತರ ರಾವಣನನ್ನು ಸಂತೋಷ ಪಡಿಸಲು, ನೃತ್ಯ-ಗೀತ-ಕ್ರೀಡೆಗಳಲ್ಲಿ ಆಸಕ್ತರಾಗಿದ್ದಾಗ ಅವರ ತಲೆಗೂದಲುಗಳು ಕೆದರಿ ಹೋಗಿತ್ತು. ಹಾರಗಳು ಅಸ್ತವ್ಯಸ್ತವಾಗಿದ್ದವು. ಆಭರಣಗಳು ಚೆಲ್ಲಾಪಿಲ್ಲಿ ಯಾಗಿ ಹೋಗಿದ್ದವು. ॥೪೪॥ ಮಧುಪಾನದಿಂದ ಮತ್ತು ಆಯಾಸದಿಂದ ಪ್ರಮತ್ತರಾಗಿ ನಿದ್ರೆಯಿಂದ ಜ್ಞಾನಶೂನ್ಯರಾಗಿದ್ದರು. ಆಲ್ಲಿದ್ದ ಸಾವಿರಾರು ವರನಾರಿಯರಲ್ಲಿ ಕೆಲವರ ಜಡೆಯ ಕಸ್ತೂರೀ, ಸಿಂಧೂರಾದಿ ತಿಲಕಗಳು ಆಳಿಸಿಹೋಗಿದ್ದವು. ಕೆಲವರ ಕಾಲಂದುಗೆಗಳು ಕಳಚಬಿದ್ದಿದ್ದವು. ಕೆಲವರ ಕಂಠಹಾರಗಳು ಕಳಚಿ ಪಕ್ಕಕ್ಕೆ ಬಿದ್ದಿದ್ದವು. ಕೆಲವರ ಮುತ್ತಿನಹಾರಗಳು ಕಡಿದು ಹೋಗಿದ್ದವು. ಕೆಲವರ ವಸ್ತ್ರಗಳು ಸಡಿಲವಾಗಿದ್ದವು. ಓಡ್ಯಾಣಗಳು ಕಳಚಿಬಿದ್ದಿದ್ದವು. ಅವರೆಲ್ಲರೂ ರಥವನ್ನೆಳೆದ ಹೆಣ್ಣುಕುದುರೆ ಮರಿಗಳು ರಥದಿಂದ ಬಿಚ್ಚಿದೊಡನೆ ಶ್ರಮವರಿಹಾರಕ್ಕಾಗಿ ಕಾಲುಗಳನ್ನು ಆಸ್ತವ್ಯಸ್ತವಾಗಿ ಚೆಲ್ಲಿ ಮಲಗಿ ಬಿಡುವಂತೆ ಆ ವರನಾರಿಯರು ಆಸ್ತವ್ಯಸ್ತವಾಗಿ ಮಲಗಿದ್ದರು. ॥೪೭॥ ಕೆಲವರು ಅಂದವಾದ ಕುಂಡಲಗಳನ್ನು ಧರಿಸಿದ್ದರು. ಕೆಲವು ತರುಣೀಮಣಿಗಳು ಧರಿಸಿದ್ದ ಪುಷ್ಪಮಾಲಿಕೆಗಳು ಕಡಿದುಬಿದ್ದು ಮರ್ದಿತವಾಗಿದ್ದವು. ಆಗ ಅವರು ಮಹಾವನದಲ್ಲಿ ಗಜೇಂದ್ರನಿಂದ ತುಳಿಯಲ್ಪಟ್ಟ ಚೆನ್ನಾಗಿ ವಿಕಸಿತವಾದ ಲತೆಗಳಂತೆ ಕಾಣುತ್ತಿದ್ದರು. ॥೪೫-೪೮॥

ಕೆಲವುಮಂದಿ ಸ್ತ್ರೀಯರ ಸ್ತನಗಳ ಮಧ್ಯದಲ್ಲಿ ತೊಟ್ಟಿದ್ದ ಮುತ್ತಿನ ಹಾರಗಳು ಸೂರ್ಯ-ಚಂದ್ರಕಿರಣಗಳಂತೆ ಆಹ್ಲಾದಕರವಾದ ಪ್ರಭೆಯಿಂದ ಕೂಡಿದ್ದು ಮಿರ-ಮಿರನೆ ಹೊಳೆಯುತ್ತಿದ್ದರು. ಅವು ಮಲಗಿದ್ದ ಶ್ರೇಷ್ಠ ಹಂಸಗಳಂತೆಕಾಣುತ್ತಿದ್ದವು.॥೪೯॥ ಮತ್ತೆ ಕೆಲವು ಕಾಂತೆಯರ ಎದೆಯ ಮೇಲೆ ಧರಿಸಿದ್ದ ವೈಡೂರ್ಯ ಮಣಿಮಾಲೆಗಳು ಕಲಹಂಸಗಳಂತೆ ಇದ್ದವು. ಇನ್ನೂ ಕೆಲವು ತರುಣಿಯರ ಸ್ತನಗಳ ಮಧ್ಯದಲ್ಲಿ ಎದ್ದು ಕಾಣುತ್ತಿದ್ದ ಹೇಮ ಸೂತ್ರಗಳು ಚಕ್ರವಾಕ ಪಕ್ಷಿಗಳಂತೆ ಕಾಣುತ್ತಿದ್ದವು.॥೫೦॥ ನದಿಗಳಲ್ಲಿನ ಮರಳದಿಣ್ಣೆಗಳಂತಿರುವ ಜಘನಪ್ರದೇಶಗಳಿಂಲೂ ಮುಕ್ತಾಹಾರ, ವೈಡೂರ್ಯ, ಹೇಮಸೂತ್ರರೂಪವಾದ ಹಂಸ-ಕದಂಬ- ಚಕ್ರವಾಕ ಪಕ್ಷಿಗಳಿಂದಲೂ ಕೂಡಿದ್ದ ನದಿಗಳಂತೆ ಆ ವರನಾರಿಯರು ಶೋಭಿಸುತ್ತಿದ್ದರು.॥೫೧॥ಅವರು ಕಾಲಲ್ಲಿ ತೊಟ್ಟಿದ್ದ ಕಿರುಗೆಜ್ಜೆಗಳೇ ಕಮಲದಮೊಗ್ಗಿನಂತಿದ್ದವು. ಸುವರ್ಣಾ ಭರಣಗಳು ನದಿಯಲ್ಲಿರುವ ಕಮಲಗಳಂತಿದ್ದವು. ಅವರು ನಿದ್ರೆಯಲ್ಲಿಯೂ ವಾಸನಾಬಲದಿಂದ ಮಾಡುತ್ತಿದ್ದ ಶೃಂಗಾರ ಚೇಷ್ಟೆಗಳು ಮೊಸಳೆಗಳಂತಿದ್ದವು. ಅವರ ದೇಹಕಾಂತಿಯು ನದಿಯ ತೀರಗಳಂತೆ ಇದ್ದವು.॥೫೨॥ ಕೆಲವು

ಬಭೂವುರ್ಭೂಷಣಾನೀವ ಶುಭಾ ಭೂಷಣರಾಜಯಃ ।
ಅಂಶುಕಾಂತಾಶ್ಚ ಕಾಸಾಂಚಿತ್ ಮುಖಮಾರುತಕಂಪಿತಾಃ ॥ ೫೩॥

ಉಪರ್ಯುಪರಿ ವಕ್ತ್ರಾಣಾಂ ವ್ಯಾಧೂಯಂತೇ ಪುನಃ ಪುನಃ ।
ತಾಃ ಪತಾಕಾ ಇವೋದ್ಧೂತಾ ಪತ್ನೀನಾಂ ರುಚಿರಪ್ರಭಾಃ ॥ ೫೪॥

ನಾನಾವರ್ಣ ಸುವರ್ಣಾನಾಂ ವಕ್ತ್ರಮೂಲೇಷು ರೇಜಿರೇ ।
ವವಲ್ಗುಶ್ಚಾತ್ರ ಕಾಸಾಂಚಿತ್ ಕುಂಡಲಾನಿ ಶುಭಾರ್ಚಿಷಾಮ್ ॥ ೫೫॥

ಮುಖಮಾರುತಸಂಪರ್ಕಾತ್ ಮಂದಂ ಮಂದಂ ಸುಯೋಷಿತಾಮ್ ।
ಶರ್ಕರಾಸವಗಂಧೈಶ್ಚ ಪ್ರಕೃತ್ಯಾ ಸುರಭಿಃ ಸುಖಃ ॥ ೫೬॥

ತಾಸಾಂ ವದನನಿಃಶ್ವಾಸಃ ಸಿಷೇವೇ ರಾವಣಂ ತದಾ ।
ರಾವಣಾನನಸಂಕಾಶ್ಚ ಕಾಶ್ಚಿದ್ರಾವಣಯೋಷಿತಃ ॥ ೫೭॥

ಮುಖಾನಿ ಸ್ಮ ಸಪತ್ನೀನಾಮುಪಾಜಿಘ್ರನ್ ಪುನಃ ಪುನಃ ।
ಅತ್ಯರ್ಥಂ ಸಕ್ತಮನಸೋ ರಾವಣೇ ತಾ ವರಸ್ತ್ರಿಯಃ ॥ ೫೮॥

ಅಸ್ವತಂತ್ರಾಃ ಸಪತ್ನೀನಾಂ ಪ್ರಿಯಮೇವಾಚರಂಸ್ತದಾ ।
ಬಾಹೂನುಪನಿಧಾಯಾನ್ಯಾಃ ಪಾರಿಹಾರ್ಯವಿಭೂಷಿತಾನ್ ॥ ೫೯॥

ಅಂಶುಕಾನಿ ಚ ರಮ್ಯಾಣಿ ಪ್ರಮದಾಸ್ತತ್ರ ಶಿಶ್ಶಿರೇ ।
ಅನ್ಯಾ ವಕ್ಷಸಿ ಚಾನ್ಯಸ್ಯಾಸ್ತಸ್ಯಾಃ ಕಾಶ್ಚಿತ್ ಪುನರ್ಭುಜಮ್ ॥ ೬೦॥

ಅಪರಾ ತ್ವಂಕಮನ್ಯಸ್ಯಾಸ್ತಸ್ಯಾಶ್ಚಾಪ್ಯಪರಾ ಭುಜೌ ।
ಊರುಪಾರ್ಶ್ವಕಟೀಪೃಷ್ಠಂ ಮನ್ಯೋನ್ಯಸ್ಯ ಸಮಾಶ್ರಿತಾಃ ॥ ೬೧॥

ಪರಸ್ಪರನಿವಿಷ್ಟಾಂಗ್ಯೋ ಮದಸ್ನೇಹವಶಾನುಗಾಃ ।
ಅನ್ಯೋನ್ಯಸ್ಯಾಂಗಸಂಸ್ಪರ್ಶಾತ್ ಪ್ರೀಯಮಾಣಾಃ ಸುಮಧ್ಯಮಾಃ ॥

ಏಕೀಕೃತಭುಜಾಃ ಸರ್ವಾಃ ಸುಷುಪುಸ್ತತ್ರ ಯೋಷಿತಃ ।
ಅನ್ಯೋನ್ಯಭುಜಸೂತ್ರೇಣ ಸ್ತ್ರೀಮಾಲಾ ಗ್ರಥಿತಾ ಹಿ ಸಾ ॥ ೬೩॥

ಸ್ತ್ರೀಯರ ಮೃದುವಾದ ಅಂಗಗಳಲ್ಲಿಯೂ, ಸ್ತನಭಾಗಗಳಲ್ಲಿಯೂ ಧರಿಸಿದ್ದ ಆಭರಣಗಳ ಗುರ್ತುಗಳು (ಅವುಗಳು ಒತ್ತುವಿಕೆಯಿಂದ) ಆಭರಣಗಳಂತೆ ಚೆನ್ನಾಗಿ ಮೂಡಿದ್ದವು. ಕೆಲವು ಸ್ತ್ರೀಯರ ಮುಖಗಳು ತಮ್ಮ ಸೆರಗುಗಳಿಂದ ಮುಚ್ಚಿಹೋಗಿದ್ದವು. ಅವು ಬಾಯಿಂದ ಹೊರಬರುತ್ತಿದ್ದ ಉಸಿರಿನ ಗಾಳಿಯಿಂದ ಮೇಲೆ ಕೆಳಗೆ ಹಾರಾಡುತ್ತಿದ್ದವು. ಆ ರಾವಣನ ಸ್ತ್ರೀಯರು ಉಟ್ಟಿದ್ದ ಸುಂದರವಾದ ರೂಪುಗಳಿಂದಲೂ, ಶೋಭಾಯಮಾನವಾದ ನಾನಾವರ್ಣಗಳಿಂದಲೂ, ಪರಿಶೋಭಿಸುತ್ತಿದ್ದ ಸೀರೆಗಳ ಸೆರಗುಗಳು ನಿಃಶ್ವಾಸದಿಂದ ಧ್ವಜಪಟಗಳಂತೆ ಹಾರಾಡುತ್ತಾ ಪ್ರಕಾಶಿಸುತ್ತಿದ್ದವು.

ಮನೋಹರವಾದ ಕಾಂತಿಯಿಂದ ಕೂಡಿದ್ದ ಕೆಲವು ಸ್ತ್ರೀಯರ ಕುಂಡಲಗಳು ಅವರ ಮುಖಗಳಿಂದ ಬರುತ್ತಿದ್ದ ಸುರಿನ ಗಾಳಿಯ ಸಂಸರ್ಗದಿಂದ ಮೆಲ್ಲ-ಮೆಲ್ಲನೇ ಕುಣಿದಾಡುತ್ತಿದ್ದವು. ಸುಂದರ ಸ್ತ್ರೀಯರ ಮುಖದಿಂದ ಸಹಜವಾಗಿ ಹೊರಬರುತ್ತಿದ್ದ ಸುಖಕರ, ಸುಗಂಧಯುಕ್ತ ನಿಃಶ್ವಾಸವು ಸಕ್ಕರೆಯಿಂದ ತಯಾರಿಸಿದ ಆಸವಗಂಧದಂತೆ ಇದ್ದು ಅದು ಸುಖದಾಯಕ ವಾಗಿ ರಾವಣನನ್ನು ಸೇವಿಸುತ್ತಿತ್ತು. (ರಾವಣನನ್ನು ಚುಂಬಿಸು ತ್ತಿದ್ದರು.) ರಾವಣನ ಕೆಲವು ಮಡದಿಯರು ಪಾನಮತ್ತರಾಗಿ ತಮ್ಮ ಜೊತೆಯಲ್ಲಿ ಮಲಗಿದ್ದ ಸವತಿಯರ ಮುಖಗಳನ್ನೇ ರಾವಣನ ಮುಖವೆಂದು ಭ್ರಮಿಸಿ ಪುನಃ-ಪುನಃ ಆಘ್ರಾಣಿಸುತ್ತಿದ್ದರು. (ಚುಂಬಿಸು ತ್ತಿದ್ದರು.)॥೫೩.-೫೮॥ ರಾವಣನಲ್ಲೇ ಅತ್ಯಾಸಕ್ತರಾಗಿದ್ದ ಮನಸ್ಸುಳ್ಳ ತರುಣೀಮಣಿಗಳು ಮಧುಪಾನದಿಂದ ಪರವಶರಾಗಿ ರಾವಣನೇ ತಮ್ಮನ್ನು ಮುದ್ದಾಡುತ್ತಿರುವನೆಂದು ಭಾವಿಸಿ ಅವರು ಸವತಿಯರನ್ನೇ ಸಂತಸದಿಂದ ಅಪ್ಪಿಕೊಳ್ಳುತ್ತಿದ್ದರು.॥೫೯॥ ಕೆಲವು ಪ್ರಮದೆಯರು ಕಡಗಗಳಿಂದ ಸಮಲಂಕೃತವಾದ ತೋಳುಗಳನ್ನು, ರಮ್ಯವಾದ ವಸ್ತ್ರಗಳನ್ನು ತಲೆದಿಂಬುಗಳಾಗಿಸಿಕೊಂಡು ಮಲಗಿದ್ದರು. ॥೬೦॥ ಓರ್ವಳು ಮತ್ತೊಬ್ಬಳ ವಕ್ಷಸ್ಥಳದಲ್ಲಿ ತಲೆಯನ್ನಿಟ್ಟು ಕೊಂಡು ಮಲಗಿದ್ದಳು. ಮತ್ತೊಬ್ಬಳು ಬೇರೊಬ್ಬಳ ತೊಡೆಯನ್ನೇ ದಿಂಬಾಗಿಸಿಕೊಂಡು ಮಲಗಿದ್ದಳು. ಇನ್ನೋರ್ವ ಸುಂದರಿಯು ಸವತಿಯ ಭುಜದಮೇಲೆ ತಲೆಯನ್ನಿಟ್ಟು ಮಲಗಿದ್ದಳು.॥೬೧॥ ಮಧುಪಾನದಿಂದ ಮತ್ತರಾಗಿ, ಸ್ನೇಹವಶರಾಗಿದ್ದ ಆ ವರಸ್ತ್ರೀಯರು ಪರಸ್ಪರವಾಗಿ ಒಬ್ಬಳು ಮತ್ತೊಬ್ಬಳ ತೊಡೆಗಳನ್ನೂ, ಪಾರ್ಶ್ವಗಳನ್ನೂ, ಕಟಿಪ್ರದೇಶವನ್ನೂ, ಪೃಷ್ಠಭಾಗಗಳನ್ನೂ ಆಶ್ರಯಿಸಿ, ಒಬ್ಬಳ ಅಂಗಗಳನ್ನು ಮತ್ತೊಬ್ಬಳ ಅಂಗಗಳ ಮೇಲಿಟ್ಟುಕೊಂಡು ಮಲಗಿದ್ದರು. ॥೬೨॥ ಕೆಲವು ತರುಣೀಮಣಿಗಳು ಪರಸ್ಪರ ತೋಳುಗಳನ್ನು ಅಪ್ಪಿಕೊಂಡಿದ್ದರು. ಅದು ಹೂವಿನಹಾರದಂತೆ ಗೋಚರಿ ಸುತ್ತಿತ್ತು. ಮಾಲೆಯಂತ್ತಿದ್ದ ಆ ಭುಜಸೂತ್ರದಲ್ಲಿ ಮದಿಸಿದ ದುಂಬಿಗಳಂತೆ ಅವರ ಕೇಶಪಾಶಗಳು

ಮಾಲೇವ ಗ್ರಥಿತಾ ಸೂತ್ರೇ ಶುಶುಭೇ ಮತ್ತಷಟ್ಪದಾ ।
ಲತಾನಾಂ ಮಾಧವೇ ಮಾಸಿ ಪುಷ್ಪಾಣಾಂ ವಾಯುಸೇವನಾತ್ ॥ ೬೪॥

ಅನ್ಯೋನ್ಯಮಾಲಾಗ್ರಥಿತಂ ಸಂಸಕ್ತಕುಸುಮೋಚ್ಚಯಮ್ ।
ವ್ಯತಿವೇಷ್ಟಿತಸುಸ್ಕಂಧಮನ್ಯೋನ್ಯಭ್ರಮರಾಕುಲಮ್ ॥ ೬೫॥

ಆಸೀದ್ವನಮಿವೋದ್ಭೂತಂ ಸ್ತ್ರೀವನಂ ರಾವಣಸ್ಯ ತತ್ ।
ಉಚಿತೇಷ್ವಪಿ ಸುವ್ಯಕ್ತಂ ನ ತಾಸಾಂ ಯೋಷಿತಾಂ ತದಾ॥ ೬೬॥

ವಿವೇಕಃ ಶಕ್ಯ ಆಧಾತುಂ ಭೂಷಣಾಂಗಾಂಬರಸ್ರಜಾಮ್ ।
ರಾವಣೇ ಸುಖಿಸಂವಿಷ್ಟೇ ತಾಃ ಸ್ತ್ರಿಯೋ ವಿವಿಧಪ್ರಭಾಃ ॥ ೬೭॥

ಜ್ವಲಂತಃ ಕಾಂಚನಾ ದೀಪಾಃ ಪ್ರೈಕ್ಷಂತಾನಿಮಿಷಾ ಇವ ।
ರಾಜರ್ಷಿತ್ಯ ದೈತ್ಯಾನಾಂ ಗಂಧರ್ವಾಣಾಂ ಚ ಯೋಷಿತಃ ॥ ೬೮॥

ರಾಕ್ಷಸಾನಾಂ ಚ ಯಾಃ ಕನ್ಯಾಸ್ತಸ್ಯ ಕಾಮವಶಂ ಗತಾಃ ।
ಯುದ್ಧಾಮೇನ ತಾಃ ಸರ್ವಾ ರಾವಣೇನ ಹೃತಾಃ ಸ್ತ್ರಿಯಃ ।
ಸಮದಾ ಮದನೇನೈವ ಮೋಹಿತಾಃ ಕಾಶ್ಚಿದಾಗತಾಃ ॥ ೬೯॥

ನ ತತ್ರ ಕಾಶ್ಚಿತ್ ಪ್ರಮದಾಃ ಪ್ರಸಹ್ಯ
ವೀರ್ಯೋಪಪನ್ನೇನ ಗುಣೇನ ಲಬ್ಧಾಃ ।
ನ ಚಾನ್ಯಕಾಮಾಪಿ ನ ಚಾನ್ಯ ಪೂರ್ವಾ
ವಿನಾ ವರಾರ್ಹಾಂ ಜನಕಾತ್ಮಜಾಂ ತಾಮ್ ॥ ೭೦॥

ನ ಚಾಕುಲೀನಾ ನ ಚ ಹೀನರೂಪಾ
ನಾದಕ್ಷಿಣಾ ನಾನುಪಚಾರಯುಕ್ತಾ ।
ಭಾರ್ಯಾಭವತ್ತಸ್ಯ ನ ಹೀನಸತ್ತ್ವಾ
ನ ಚಾಪಿ ಕಾಂತಸ್ಯ ನ ಕಾಮನೀಯಾ ॥ ೭೧॥

ಓಲಾಡುತ್ತಿದ್ದವು. ರಾವಣನ ಸ್ತ್ರೀ ಸಮುದಾಯವು (ಸ್ತ್ರೀವನವು) ಒಂದು ಲತಾವನದಂತೆ ಭಾಸವಾಗುತ್ತಿತ್ತು. ವಸಂತಋತುವಿನಲ್ಲಿ ಬೀಸುವ ಮಲಯಾನಿಲದಿಂದ ವಿಕಸಿತವಾದ ಹೂವುಗಳು ಕಂಪಿಸುವಂತೆ ಆ ಸ್ತ್ರೀಯರ ನಿಃಶ್ವಾಸದಿಂದ ಲತಾರೂಪವಾದ ಅವರ ಸೆರಗು ಗಳು ಕಂಪಿಸುತ್ತಿದ್ದವು. ಗಾಳಿಯು ಬೀಸುವುದರಿಂದ ಪುಷ್ಪಗುಚ್ಛ ಗಳಿರುವ ಲತೆಗಳೆಲ್ಲವೂ ಒಂದಕ್ಕೊಂದು ಸೇರಿಕೊಂಡು ಮಾಲೆಯಂತೆ ಕಾಣುತ್ತಿರುವಂತೇ ಆ ಸ್ತ್ರೀವನದಲ್ಲಿ ಭುಜಗಳೆಂಬ ದಾರದಲ್ಲಿ ಸ್ತ್ರೀ ಕುಸುಮಗಳು ಮಾಲೆಯ ರೂಪದಲ್ಲಿ ಪೋಣಿಸಲ್ಪಟ್ಟಿದ್ದವು. ಗಾಳಿಯ ಹೊಡೆತಕ್ಕೆ ರಂಬೆಗಳು (ಸ್ಕಂಧಗಳು) ಒಂದಕ್ಕೊಂದು ಸೇರಿಕೊಳ್ಳುವಂತೆ ರಾವಣನ ಸ್ತ್ರೀವನದಲ್ಲಿ ಸ್ತ್ರೀಯರ ಸ್ಕಂಧಗಳು(ಹೆಗಲುಗಳು) ಪರಸ್ಪರ ಸೇರಿಕೊಂಡಿ ದ್ದವು. ವಸಂತದಲ್ಲಿ ವನವು ದುಂಬಿಗಳಿಂದ ಸಮಾಕುಲ ವಾಗಿರುವಂತೆ ಆ ಸ್ತ್ರೀವನವು ಸ್ತ್ರೀಯರ ಕೇಶರಾಶಿಗಳ ರೂಪ ವಾದ ಭ್ರಮರಗಳಿಂದಸಮಾಕುಲವಾಗಿದ್ದಿತು. ಹೀಗೆ ರಾವಣೇಶ್ವರನ ಶಾಲೆಯಲ್ಲಿದ್ದ ಸ್ತ್ರೀವನವು ಮಧುಮಾಸದ ಅರಣ್ಯದಂತೆ ಕಂಗೊಳಿಸುತ್ತಿದ್ದಿತು.॥೬೩-೬೫॥

ಆಭರಣಗಳೂ, ವಸ್ತ್ರಗಳೂ, ಮಾಲೆಗಳೂ ಇರಬೇಕಾದ ಉಚಿತ ಸ್ಥಳಗಳಲ್ಲೇ ಇದ್ದರೂ ಆಗ ರಾವಣನ ವರಸ್ತ್ರೀಯರೆಲ್ಲರೂ ಪರಸ್ಪರವಾಗಿ ತಬ್ಬಿಕೊಂಡು ಮಲಗಿದ್ದರಿಂದ ಯಾವ ಆಭರಣಗಳು ಯಾರವು? ಎಂಬುದನ್ನು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ॥೬೬॥ ರಾವಣನು ಗಾಢವಾಗಿ ನಿದ್ರಿಸುತ್ತಿರುವಾಗ ನಾನಾಪ್ರಕಾರವಾದ ಪ್ರಭೇದಗಳಿಂದ ಯುಕ್ತರಾದ ಆ ಸ್ತ್ರೀಯರು ಪ್ರಜ್ವಲಿಸುತ್ತಿದ್ದ ಸುವರ್ಣಮಯವಾದ ಮಣಿ ದೀಪಗಳಂತೆ ರೆಪ್ಪೆಗಳನ್ನೂ ಆಡಿಸದೆ ನೋಡುತ್ತಿದ್ದರು.

ರಾಜರ್ಷಿಗಳ, ಪಿತೃದೇವತೆಗಳ, ದೈತ್ಯರ, ಗಂಧರ್ವರ ಕನ್ಯೆಯರೂ, ರಾಕ್ಷಸಕನ್ಯೆಯರೂ ರಾವಣನಲ್ಲಿರುವ ಮೋಹದಿಂದಲೂ, ಕಾಮವಶರಾಗಿಯೂ ಬಂದು ಸೇರಿಕೊಂಡಿದ್ದರು. ಆ ಎಲ್ಲ ಸ್ತ್ರೀಯರು ಯುದ್ಧಾಕಾಂಕ್ಷಿಯಾದ ರಾವಣನಿಂದ ಅಪಹರಿಸಿ ತಂದವರೇ ಆಗಿದ್ದರು. ಆದರೆ ಇನ್ನೂ ಕೆಲವು ಜಿಜ್ಞಾಸೆಯರು ಮಾತ್ರ ಕಾಮಾತುರರಾಗಿ ರಾವಣನನ್ನು ಮೋಹಿಸಿ ತಾವೇ-ತಾವಾಗಿ ಬಂದಿದ್ದರು.॥೬೭-೬೯॥

ಪೂಜಾರ್ಹಳಾದ ಜನಕನ ಮಗಳಾದ ಸೀತಾದೇವಿ ಯೊಬ್ಬಳನ್ನು ಬಿಟ್ಟು ವೀರ್ಯ, ಗುಣಸಂಪನ್ನನಾದ ರಾವಣನ ಅಂತಃಪುರದಲ್ಲಿದ್ದ ಯಾವಳೇ ಸ್ತ್ರೀಯನ್ನು ತಂದಿರಲಿಲ್ಲ. ಅವರೆಲ್ಲರೂ ಅವನಲ್ಲಿ ಆಕರ್ಷಿತರಾಗಿ ಬಂದವರು. ಬೇರೆಯವರನ್ನು ಕಾಮಿಸಿದ್ದ ಸ್ತ್ರೀಯಾಗಲೀ, ಬೇರೆಯವ ರೊಡನೆ ವಿವಾಹವಾಗಿದ್ದ ಸ್ತ್ರೀಯಾಗಲೀ ರಾವಣನ ಅಂತಃಪುರದಲ್ಲಿ ಇರಲಿಲ್ಲ. ॥೭೦॥ ರಾವಣನ ಆ ಭಾರ್ಯೆಯರಲ್ಲಿ ಹೀನಕುಲದವಳಾಗಲೀ, ಕುರೂಪಿ ಯಾಗಲೀ, ಮೂರ್ಖಿರಾಗಲೀ, ಉತ್ತಮ ಭೂಷಣಗಳಿಂದ ರಹಿತರಾದವರಾಗಲೀ, ದುರ್ಬಲಳಾಗಲೀ, ಕಾಂತನಾದ

ಬಭೂವ ಬುದ್ಧಿಸ್ತು ಹರೀಶ್ವರಸ್ಯ
ಯದೀದೃಶೀ ರಾಘವಧರ್ಮಪತ್ನೀ ।
ಇಮಾ ಯಥಾ ರಾಕ್ಷಸರಾಜಭಾರ್ಯಾಃ
ಸುಜಾತಮಸ್ಯೇತಿ ಹಿ ಸಾಧುಬುದ್ಧೇಃ ॥ ೭೨॥

ರಾವಣನ ಮೋಹಕ್ಕೊಳಗಾಗದವಳೂ ಯಾರೂ ಇರಲಿಲ್ಲ. (ಎಲ್ಲರೂ ಎಲ್ಲ ವಿಧದಿಂದ ಯೋಗ್ಯತೆಯುಳ್ಳವರೇ) ॥೭೧॥

ರಾಕ್ಷಸರಾಜನಾದ ರಾವಣನ ಭಾರ್ಯೆಯರೆಲ್ಲರೂ ತಮ್ಮ ಗಂಡನಾದ ರಾವಣನೊಡನೆ ಸುಖವಾಗಿರುವಂತೆ ರಾಘವನ ಧರ್ಮಪತ್ನಿಯಾದ ಸೀತಾದೇವಿಯು ಶ್ರೀರಾಮನೊಂದಿಗೆ ಸಂತೋಷದಾಗಿ ಇರುವಂತಾದರೆ ಈ ರಾವಣನಿಗೆ ಮಂಗಳವಾಗುತ್ತಿತ್ತು ಎಂದು ಬುದ್ಧಿಶಾಲಿಯಾದ ಕಪೀಶ್ವರನಿಗೆ ಅನಿಸಿತು.॥೭೨॥

ಪುನಶ್ಚ ಸೋಽಚಿಂತಯ ದಾರ್ತರೂಪೋ
ಧ್ರುವಂ ವಿಶಿಷ್ಟಾ ಗುಣತೋ ಹಿ ಸೀತಾ ।
ಅಥಾಯಮಸ್ಯಾಂ ಕೃತವಾನ್ ಮಹಾತ್ಮಾ
ಲಂಕೇಶ್ವರಃ ಕಷ್ಟಮನಾರ್ಯಕರ್ಮ ॥ ೭೩॥

''ಸೀತಾದೇವಿಯು ನಿಶ್ಚಯವಾಗಿ ಉತ್ತಮಗುಣ ಸಂಪನ್ನಳೆಂಬುದು ತ್ರಿವಾರ ಸತ್ಯವಾಗಿದೆ.ಆದರೆ ರಾವಣನೂ ಉತ್ತಮ ಕುಲೋತ್ಪನ್ನನೂ, ಲಂಕೆಗೆ ಪ್ರಭುವಾಗಿದ್ದು ದೊಡ್ಡ ಶಿವಭಕ್ತನಾಗಿದ್ದರೂ ಕೂಡ ಅವನು ತನ್ನ ವಂಶಕ್ಕೆ, ತನ್ನ ಅರಸೊತ್ತಿಗೆಗೆ, ತನ್ನ ಶಿವಭಕ್ತಿಗೆ ತಕ್ಕದಾದ ಕಾರ್ಯವನ್ನು ಮಾಡದೇ, ಸೀತಾದೇವಿಯನ್ನು ಅಪಹರಿಸಿ ತಂದು ಇವಳ ವಿಷಯದಲ್ಲಿ ಅನಾರ್ಯರು ಮಾಡುವ ಅತಿಕುತ್ಸಿತವಾದ ಕಾರ್ಯವನ್ನೇ ಮಾಡಿರುವನು'' ಎಂದು ಚಿಂತಿಸುತ್ತಾ ಹನುಮಂತನು ದುಃಖಿತನಾದನು.॥೭೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ನವಮಃ ಸರ್ಗಃ ॥ ೯ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಒಂಭತ್ತನೆಯ ಸರ್ಗವು ಮುಗಿಯಿತು.

* * *

ಹತ್ತನೆಯ ಸರ್ಗ

ಹನುಮಂತನು ಅಂತಃಪುರದಲ್ಲಿ ಮಲಗಿದ್ದ ರಾವಣನನ್ನು ಮತ್ತು ಅವನ ಪತ್ನೀಯರನ್ನು ನೋಡಿದುದು, ಮಂಡೋದರಿಯನ್ನು ಸೀತೆಯೆಂದು ಭಾವಿಸಿ ಹೃಷ್ಟನಾದುದು -

ತತ್ರ ದಿವ್ಯೋಪಮಂ ಮುಖ್ಯಂ ಸ್ಫಾಟಿಕಂ ರತ್ನಭೂಷಿತಮ್ ।
ಅವೇಕ್ಷಮಾಣೋ ಹನುಮಾನ್ ದದರ್ಶ ಶಯನಾಸನಮ್ ॥ ೧॥

ಹನುಮಂತನು ಆ ದಿವ್ಯಶಾಲೆಯಲ್ಲಿ ಸೀತಾದೇವಿಯನ್ನು ಹುಡುಕುತ್ತಿದ್ದಾಗ, ಬಹುಮೂಲ್ಯವಾದ, ಶ್ರೇಷ್ಠವಾದ ಆಸನಗಳಿಂದ ಕೂಡಿದ್ದ ಮಹಾಪರ್ಯಂಕವನ್ನು ನೋಡಿದನು. ಆ ಶಯನಾಸನಗಳು ಸ್ವರ್ಗದಲ್ಲಿರುವ ಶಯನಾಸನಗಳಿಗೆ ಅನುರೂಪವಾಗಿದ್ದವು. ಸ್ಫಟಿಕಮಯವಾಗಿಯೂ, ರತ್ನಭೂಷಿತವಾಗಿಯೂ, ದಂತದಿಂದಲೂ, ಸುವರ್ಣದಿಂದಲೂ ಚಿತ್ರಿತವಾಗಿದ್ದ ಕಾಲುಗಳೇ ಮುಂತಾದ ಭಾಗಗಳಿಂದ ಕೂಡಿದ್ದವು. ಬೆಲೆಬಾಳುವ ರತ್ನಗಂಬಳಗಳು ಹಾಸಿದ್ದು, ವೈಡೂರ್ಯ ಮಣಿಗಳಿಂದ ಸಮಲಂಕೃತವಾಗಿದ್ದವು.॥೧-೨॥

ದಾಂತಕಾಂಚನಚಿತ್ರಾಂಗೈಃ ವೈಡೂರ್ಯೈಶ್ಚ ವರಾಸನೈಃ ।
ಮಹಾರ್ಹಾಸ್ತರಣೋಪೇತೈಃ ಉಪಪನ್ನಂ ಮಹಾಧನೈಃ॥ ೨॥

ತಸ್ಯ ಚೈಕತಮೇ ದೇಶೇ ದಿವ್ಯಮಾಲಾವಿಭೂಷಿತಮ್ ।
ದದರ್ಶ ಪಾಂಡರಂ ಛತ್ರಂ ತಾರಾಧಿಪತಿಸನ್ನಿಭಮ್ ॥ ೩॥

ಆ ಪರ್ಯಂಕದ ಮೇಲ್ಭಾಗದಲ್ಲಿ ದಿವ್ಯವಾದ ಮಾಲೆಗಳಿಂದ ಅಲಂಕೃತವಾಗಿದ್ದು , ಚಂದ್ರನ ಕಾಂತಿಯಂತೆ ಬೆಳಗುತ್ತಿದ್ದ ಒಂದು ಬಿಳಿಯ ಛತ್ರಿಯನ್ನು ಆ ಮಾರುತಿಯು ನೋಡಿದನು. ॥೩॥

ಜಾತರೂಪಪರಿಕ್ಷಿಪ್ತಂ ಚಿತ್ರಭಾನುಸಮಪ್ರಭಮ್ ।
ಅಶೋಕಮಾಲಾವಿತತಂ ದದರ್ಶ ಪರಮಾಸನಮ್ ॥ ೪॥

ವಾಲವ್ಯಜನಹಸ್ತಾಭಿರ್ವೀಜ್ಯ ಮಾನಂ ಸಮಂತತಃ ।
ಗಂಧೈಶ್ಚ ವಿವಿಧೈರ್ಜುಷ್ಟಂ ವರಧೂಪೇನ ಧೂಪಿತಮ್ ॥ ೫॥

ಪರಮಾಸ್ತರಣಾಸ್ತೀರ್ಣಮಾವಿಕಾಜಿನಸಂವೃತಮ್ ।
ದಾಮಭಿರ್ವರಮಾಲ್ಯಾನಾಂ ಸಮಂತಾದುಪಶೋಭಿತಮ್ ॥ ೬॥

ತಸ್ಮಿನ್ ಜೀಮೂತಸಂಕಾಶಂ ಪ್ರದೀಪ್ತೋತ್ತಮಕುಂಡಲಮ್ ।
ಲೋಹಿತಾಕ್ಷಂ ಮಹಾಬಾಹುಂ ಮಹಾರಜತವಾಸಸಮ್ ॥ ೭॥

ಲೋಹಿತೇನಾನು ಲಿಪ್ತಾಂಗಂ ಚಂದನೇನ ಸುಗಂಧಿನಾ ।
ಸಂಧ್ಯಾರಕ್ತಮಿವಾಕಾಶೇ ತೋಯದಂ ಸತಟಿದ್ಗಣಮ್ ॥ ೮॥

ವೃತಮಾಭರಣೈರ್ದಿವ್ಯೈಃ ಸುರೂಪಂ ಕಾಮರೂಪಿಣಮ್ ।
ಸವೃಕ್ಷವನಗುಲ್ಮಾಢ್ಯಂ ಪ್ರಸುಪ್ತಮಿವ ಮಂದರಮ್ ॥ ೯॥

ಕ್ರೀಡಿತ್ವೋಪರತಂ ರಾತ್ರೌ ವರಾಭರಣಭೂಷಿತಮ್ ।
ಪ್ರಿಯಂ ರಾಕ್ಷಸಕನ್ಯಾನಾಂ ರಾಕ್ಷಸಾನಾಂ ಸುಖಾವಹಮ್ ॥ ೧೦॥

ಪೀತ್ವಾಪ್ಯುಪರತಂ ಚಾಪಿ ದದರ್ಶ ಸ ಮಹಾಕಪಿಃ ।
ಭಾಸ್ವರೇ ಶಯನೇ ವೀರಂ ಪ್ರಸುಪ್ತಂ ರಾಕ್ಷಸಾಧಿಪಮ್ ॥ ೧೧॥

ನಿಃಶ್ವಸಂತಂ ಯಥಾ ನಾಗಂ ರಾವಣಂ ವಾನರರ್ಷಭಃ ।
ಆಸಾದ್ಯ ಪರಮೋದ್ವಿಗ್ನಃ ಸೋಽಪಾಸರ್ಪತ್ ಸುಭೀತವತ್ ॥ ೧೨॥

ಭಂಗಾರದಿಂದ ನಿರ್ಮಿಸಲ್ಪಟ್ಟ, ಸೂರ್ಯ ಕಿರಣಗಳಂತೆ ಬೆಳಗುತ್ತಾ ರಾರಾಜಿಸುತ್ತಿದ್ದ ಆ ಪರಮಾಸನವು (ಪರ್ಯಂಕವು) ಅಶೋಕಪುಷ್ಪಗಳ ಮಾಲೆಗಳಿಂದ ಸಮಲಂಕೃತವಾಗಿತ್ತು. ಅಂತಹ ಮನಃಪ್ರಶಾಂತಿ ದೊರಕುವ, ದುಃಖಗಳು ದೂರಾಗಿಸುವ ಮಂಚವನ್ನು ಹನುಮಂತನು ನೋಡಿದನು. ॥೪॥ ಅಲ್ಲಿ ಚಾಮರಗಳನ್ನು ಕೈಗಳಲ್ಲಿ ಹಿಡಿದು ಕೊಂಡು ರಾವಣನಿಗೆ ಗಾಳಿಬೀಸಲು ಅನೇಕ ಸ್ತ್ರೀಯರು ಸುತ್ತಲೂ ನಿಂತಿದ್ದರು. ಅಲ್ಲಿ ಉತ್ತಮವಾದ ಸುಂಗಧ ಧೂಪಗಳಿಂದ ಸುವಾಸಿತವಾಗಿತ್ತು. ಅದು ಉಣ್ಣೆಯ ಕಂಬಳಿಗಳಿಂದ ಸಮಾವೃತವಾಗಿತ್ತು. ಎಲ್ಲ ಕಡೆಗಳಲ್ಲಿಯೂ ಶ್ರೇಷ್ಠವಾದ ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟಿದ್ದ ಆ ಪರಮಾಸನವು ಅತ್ಯಂತ ಶೋಭಾಯಮಾನವಾಗಿ ಕಂಗೊಳಿಸುತ್ತಿತ್ತು.॥೫-೬॥

ಅಂತಹ ಶ್ರೇಷ್ಠವಾದ ಪರ್ಯಂಕದಲ್ಲಿ ಮಲಗಿದ್ದ ರಾಕ್ಷಸೇಶ್ವರನನ್ನು ಆ ಕಪಿವರನಾದ ಹನುಮಂತನು ನೋಡಿದನು. ಅವನು ಕಪ್ಪಾದ ಮೋಡದಂತೆ ಇದ್ದನು. ಅವನ ಕರ್ಣಕುಂಡಲಗಳು ಮೆರೆಯುತ್ತಿದ್ದವು. ಅವನ ಕಣ್ಣುಗಳು ಕೆಂಡದಂತೆ ಕೆಂಪಾಗಿದ್ದವು. ಮಹಾಬಾಹುವಾದ ಅವನು ಸುವರ್ಣ ಜರಿಯಿಂದ ಕೂಡಿರುವ ವಸ್ತ್ರವನ್ನು ಉಟ್ಟಿದ್ದನು. ಅವನ ಅಂಗಾಂಗಗಳೆಲ್ಲವೂ ಪರಿಮಳಯುಕ್ತ ಗಂಧದಿಂದ ಪೂಸಲ್ಪಟ್ಟಿದ್ದವು. ಫಳ-ಫಳನೇ ಹೊಳೆಯುತ್ತಿದ್ದ ದಿವ್ಯಾಭರಣಗಳಿಂದ ಭೂಷಿತನಾಗಿ ಸ್ಫುರದ್ರೂಪಿಯೂ, ಕಾಮರೂಪಿಯೂ ಆದ ಆತನು ಸಂಧ್ಯಾಕಾಲದ ರಕ್ತವರ್ಣದಿಂದಲೂ, ಮಿಂಚುಗಳಿಂದಲೂ ಕೂಡಿದ ಮೇಘದಂತೆ ಪ್ರಕಾಶಿಸುತ್ತಿದ್ದನು. ಅವನು ವೃಕ್ಷಗಳಿಂದಲೂ, ವನಗಳಿಂದಲೂ, ಲತೆಗಳಿಂದಲೂ ಕೂಡಿ ಶಾಂತವಾಗಿ ನಿದ್ರಿಸುತ್ತಿರುವ ಮಂದರಪರ್ವತದಂತೆ ಕಾಣುತ್ತಿದ್ದನು. ಅಮೂಲ್ಯವಾದ ಆಭರಣಗಳನ್ನು ತೊಟ್ಟಿರುವವನೂ, ರಾಕ್ಷಸ ಕನ್ಯೆಯರಿಗೆ ಪ್ರೀತಿಪಾತ್ರನೂ, ರಾಕ್ಷಸರಿಗೆ ಸುಖವನ್ನು ಕೊಡುವವನೂ, ಸುರತ ಕ್ರೀಡೆಯಿಂದ ವಿರಮಿಸಿ ಗಾಢವಾಗಿ ಮಲಗಿದ್ದ ಆ ರಾವಣನನ್ನು ಹನುಮಂತನು ನೋಡಿದನು. ॥೭-೧೧॥

ಆನೆಯಂತೆ ಗೊರಕೆ ಹೊಡೆಯುತ್ತಿದ್ದ ರಾವಣನನ್ನು ಸಮೀಪಿಸಿದ ಆ ಕಪಿವರನಾದ ಮರುತಿಯು ಹೆಚ್ಚಾಗಿ ಉದ್ವಿಗ್ನನಾಗಿ "ಛೀ! ಇವನು ಪರಸ್ತ್ರೀಯನ್ನು ಅಪಹರಿಸಿಕೊಂಡು ತಂದ ದುರ್ಮಾರ್ಗಿಯು. ಇವನಿಂದ ದೂರವಿರುವುದೇ ಉಚಿತವು." ಎಂದು ಕೊಂಡು ಅವನು ತುಂಬಾ ಭಯಪಟ್ಟವನಂತೆ ರಾವಣನಿಂದ ದೂರಕ್ಕೆ ಸರಿದನು.*॥೧೨॥

---

* ಶಕಟಂ ಪಂಚ ಹಸ್ತೇನ ದಶಹಸ್ತೇಷು ವಾಜಿನಮ್। ಗಜಂ ಸಹಸ್ರಹಸ್ತೇಷು ದುಷ್ಟಂ ದೂರೇಣ ವರ್ಜಯೇತ್॥
ಶಕಟ(ಬಂಡಿ)ದಿಂದ ಐದುಮಾರುದೂರ, ಕುದುರೆಯಿಂದ ಹತ್ತುಮಾರು ದೂರ, ಆನೆಯಿಂದ ಸಾವಿರಮಾರು ದೂರವಿದ್ದು ದುಷ್ಟನನ್ನು ಅತಿದೂರವಿಡಬೇಕು.

ಅಥಾರೋಹಣಮಾಸಾದ್ಯ ವೇದಿಕಾಂತರಮಾಶ್ರಿತಃ ।
ಕ್ಷೀಬಂ ರಾಕ್ಷಸಶಾರ್ದೂಲಂ ಪ್ರೇಕ್ಷತೇ ಸ್ಮ ಮಹಾಕಪಿಃ ॥ ೧೩॥

ಶುಶುಭೇ ರಾಕ್ಷಸೇಂದ್ರಸ್ಯ ಸ್ವಪತಃ ಶಯನೋತ್ತಮಮ್ ।
ಗಂಧಹಸ್ತಿನಿ ಸಂವಿಷ್ಟೇ ಯಥಾ ಪ್ರಸ್ರವಣಂ ಮಹತ್ ॥ ೧೪॥

ಕಾಂಚನಾಂಗದಸನ್ನದ್ಧೌ ದದರ್ಶ ಸ ಮಹಾತ್ಮನಃ ।
ವಿಕ್ಷಿಪ್ತೌ ರಾಕ್ಷಸೇಂದ್ರಸ್ಯ ಭುಜಾವಿಂದ್ರಧ್ವಜೋಪಮೌ ॥ ೧೫॥

ಐರಾವತವಿಷಾಣಾಗ್ರೈರಾಪೀಡನಕೃತವ್ರಣೌ ।
ವಜ್ರೋಲ್ಲಿಖಿತಪೀನಾಂಸೌ ವಿಷ್ಣುಚಕ್ಕ್ರಪರಿಕ್ಷತೌ ॥ ೧೬॥

ಪೀನೌ ಸಮಸುಜಾತಾಂಸೌ ಸಂಗತೌ ಬಲಸಂಯುತೌ ।
ಸುಲಕ್ಷಣನಖಾಂಗುಷ್ಠೌ ಸ್ವಂಗುಲೀತಲಲಕ್ಷಿತೌ ॥ ೧೭॥

ಸಂಹತೌ ಪರಿಘಾಕಾರೌ ವೃತ್ತೌ ಕರಿಕರೋಪಮೌ ।
ವಿಕ್ಷಿಪ್ತೌ ಶಯನೇ ಶುಭ್ರೇ ಪಂಚಶೀರ್ಷಾವಿವೋರಗೌ ॥ ೧೮॥

ಶಶಕ್ತತ್ವಜಕಲ್ಪೇನ ಸುಶೀತೇನ ಸುಗಂಧಿನಾ ।
ಚಂದನೇನ ಪರಾರ್ಧ್ಯೇನ ಸ್ವನುಲಿಪ್ತೌ ಸ್ವಲಂಕೃತೌ ॥ ೧೯॥

ಉತ್ತಮಸ್ತ್ರೀವಿಮೃದಿತೌ ಗಂಧೋತ್ತಮನಿಷೇವಿತೌ ।
ಯಕ್ಷಪನ್ನಗಗಂಧರ್ವದೇವದಾನವರಾವಿಣೌ ॥ ೨೦॥

ದದರ್ಶ ಸ ಕಪಿಸ್ತಸ್ಯ ಬಾಹೂ ಶಯನಸಂಸ್ಥಿತೌ ।
ಮಂದರಸ್ಯಾಂತರೇ ಸುಪ್ತೌ ಮಹಾಹೀ ರುಷಿತಾವಿವ ॥ ೨೧॥

ತಾಭ್ಯಾಂ ಸ ಪರಿಪೂರ್ಣಾಭ್ಯಾಂ ಭುಜಾಭ್ಯಾಂ ರಾಕ್ಷಸೇಶ್ವರಃ ।
ಶುಶುಭೇಽಚಲಸಂಕಾಶಃ ಶೃಂಗಾಭ್ಯಾಮಿವ ಮಂದರಃ ॥ ೨೨॥

ಆನಂತರ ಆ ಮಹಾಕಪಿಯು ಸೋಪಾನಮಾರ್ಗದಿಂದ ಮತ್ತೊಂದು ವೇದಿಕೆಯನ್ನು ಏರಿ ಕುಳಿತು ಗಾಢನಿದ್ದೆಯಲ್ಲಿದ್ದ ರಾವಣನನ್ನು ನೋಡುತ್ತಲೇ ಇದ್ದನು.॥೧೩॥ ಮಲಗಿದ್ದ ರಾವಣನ ಮಹಾತಲ್ಪವು, ಒಂದು ಮದಭರಿತ ಗಂಧಹಸ್ತಿಯು ಪ್ರವೇಶಿಸಿದ ಜಲಾಶಯದಂತೆ ಪ್ರಕಾಶಿಸುತ್ತಿತ್ತು. (ಗಂಧಹಸ್ತಿ ಅಂದರೆ – ತನ್ನ ಮದೋದಕ ಗಂಧದಿಂದ ಇತರ ಗಂಡುಆನೆಗಳು ಭಯಪಟ್ಟು ಓಡಿಹೋಗುವವು. ಈ ಮದಗಜವು ಸರೋವರದಲ್ಲಿ ಪ್ರವೇಶಿಸುತ್ತಲೇ ಉಳಿದ ಗಂಡುಆನೆಗಳು ಓಡಿಹೋಗುವವು. ಹೆಣ್ಣು ಆನೆಗಳು ಅಲ್ಲೇ ಇರುವವು.) ॥೧೪॥ ಸುವರ್ಣಮಯವಾದ ಭುಜಕೀರ್ತಿಗಳಿಂದ ಯುಕ್ತವಾಗಿದ್ದು, ಇಂದ್ರಧ್ವಜ ಸದೃಶವಾಗಿದ್ದು ಹೊರಚಾಚಿ ಕೊಂಡಿದ್ದ ರಾಕ್ಷಸೇಂದ್ರನಾದ ರಾವಣನ ತೋಳುಗಳಲ್ಲಿ ಇಂದ್ರನೊಡನೆ ಮಾಡಿದ ಯುದ್ಧದಲ್ಲಿ ಐರಾವತದ ದಂತ ಗಳಿಂದ ಶವಿಯಲ್ಪಟ್ಟು ಉಂಟಾದ ಗಾಯದ ಗುರ್ತುಗಳು ಕಂಡುಬರುತ್ತಿದ್ದವು. ಬಲಿಷ್ಠವಾದ ಆ ಭುಜಗಳಲ್ಲಿ ವಜ್ರಾಯುಧದ ಏಟಿನ ಮಚ್ಚೆಯಿಂದಲೂ, ಉಪೇಂದ್ರನ ವಿಷ್ಣುಚಕ್ರದ ಚಿಹ್ನೆಗಳು ಮೂಡಿದ್ದವು. ಆ ಎಲ್ಲ ಪ್ರಹಾರಗಳಿಂದಲೂ ಆ ತೋಳುಗಳು ಜಜ್ಜುಕಟ್ಟಿ ಹೋಗಿತ್ತಲ್ಲದೆ, ಸ್ಥೂಲವಾಗಿಯೂ, ಸುಂದರವಾಗಿಯೂ, ಬಲಿಷ್ಠವಾಗಿದ್ದವು. ಸುಂದರವಾದ ಸುಲಕ್ಷಣವಾದ ಉಗುರಗಳುಳ್ಳ ಅಂಗುಷ್ಠಗಳಿಂದ ಕೂಡಿದ್ದವು. ಚೆಲುವಾದ ಬೆರಳುಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದವು. ದುಂಡಾಗಿಯೂ, ಸಂಧಿಬಂಧಗಳು ಪುಷ್ಟವಾಗಿಯೂ ಇದ್ದ ಆ ತೋಳುಗಳು ಪರಿಘಾಯುಧದಂತೆಯೂ, ಆನೆಯ ಸೊಂಡಿಲು ಗಳಂತೆಯೂ,ಐದು ಹೆಡೆಗಳ ಎರಡು ಸರ್ಪಗಳಂತೆ ಕಾಣುತ್ತಿದ್ದವು. ಮೊಲದ ರಕ್ತದಂತೆ ಶೀತಲವಾದ ಸುಗಂಧಯುಕ್ತವಾದ ಹೆಚ್ಚು ಬೆಲೆಬಾಳುವ ಶ್ರೇಷ್ಠವಾದ ಚಂದನದಿಂದ ಅವು ಲೇಪಿತವಾಗಿದ್ದವು. ಕನಕಾಂಗದ ಕೇಯೂರಾದಿ ಆಭರಣಗಳಿಂದ ಸಮಲಂಕೃತವಾಗಿದ್ದವು. ಶ್ರೇಷ್ಠರಾದ ಸ್ತ್ರೀಯರು ಉತ್ತಮವಾದ ಗಂಧದಿಂದ ಲೇಪಿತವಾಗಿದ್ದ ರಾವಣನ ಆ ತೋಳುಗಳನ್ನು ಸುಖಕರವಾದ ರೀತಿಯಲ್ಲಿ ಒತ್ತುತ್ತಿದ್ದರು. ಯಕ್ಷ, ಗಂಧರ್ವ, ಪನ್ನಗ, ದೇವ, ದಾನವರನ್ನು ಭಯದಿಂದ ಕೂಗಿಕೊಳ್ಳುವಂತೆ ಮಾಡಲು ರಾವಣನ ಆ ಮಹಾಬಾಹುಗಳು ಸಮರ್ಥವಾಗಿದ್ದವು. ಮಂದರ ಪರ್ವತದಲ್ಲಿ ಮಲಗಿರುವ ರೋಷಗೊಂಡ ಸರ್ಪಗಳಂತೆ ಇದ್ದ ರಾವಣನ ಆ ತೋಳುಗಳನ್ನು ಹನುಮಂತನು ನೋಡಿದನು. ಪರಿಪುಷ್ಟವಾಗಿದ್ದ ಅಂತಹ ತೋಳುಗಳಿಂದ ಶೋಭಿತನಾಗಿದ್ದ ಪರ್ವತೋಪಮನಾದ ರಾವಣನು ಎರಡು ಶಿಖರಗಳಿಂದ ಕೂಡಿರುವ ಮಂದರಪರ್ವತದಂತೆ ಪ್ರಕಾಶಿಸುತ್ತಿದ್ದನು.॥೧೫-೨೨॥

ಮಲಗಿದ್ದ ರಾಕ್ಷಸರಾಜನ ಮುಖದಿಂದ ಹೊರಬರುತ್ತಿದ್ದ ಸುದೀರ್ಘವಾದ ಉಸುರಿನ ಶಬ್ದವು ಆ ಅರಮನೆಯನ್ನೇ

ಚೂತಪುಂನಾಗಸುರಭಿರ್ಬಕುಲೋತ್ತಮಸಂಯುತಃ ।
ಮೃಷ್ಟಾನ್ನರಸಸಂಯುಕ್ತಃ ಪಾನಗಂಧಪುರಃಸರಃ ॥ ೨೩॥

ತಸ್ಯ ರಾಕ್ಷಸಸಿಂಹಸ್ಯ ನಿಶ್ಚಕ್ರಾಮ ಮಹಾಮುಖಾತ್ ।
ಶಯಾನಸ್ಯ ವಿನಿಃಶ್ವಾಸಃ ಪೂರಯನ್ನಿವ ತದ್ಗೃಹಂ ॥ ೨೪॥

ಮುಕ್ತಾಮಣಿವಿಚಿತ್ರೇಣ ಕಾಂಚನೇನ ವಿರಾಜಿತಮ್ ।
ಮುಕುಟೇನಾಪವೃತ್ತೇನ ಕುಂಡಲೋಜ್ಜ್ವಲಿತಾನನಮ್ ॥ ೨೫॥

ರಕ್ತಚಂದನದಿಗ್ಧೇನ ತಥಾ ಹಾರೇಣ ಶೋಭಿನಾ ।
ಪೀನಾಯತವಿಶಾಲೇನ ವಕ್ಷಸಾಭಿವಿರಾಜಿತಮ್ ॥ ೨೬॥

ಪಾಂಡರೇಣಾಪವಿದ್ಧೇನ ಕೌಮೇಣ ಕ್ಷತಜೇಕ್ಷಣಮ್ ।
ಮಹಾರ್ಹೇಣ ಸುಸಂವೀತಂ ಪೀತನೋತ್ತಮವಾಸಸಾ ॥ ೨೭॥

ಮಾಹರಾತಿಪ್ರತೀಕಾಶಂ ನಿಃಶ್ವಸಂತಂ ಭುಜಂಗವತ್ ।
ಗಾಂಗೇ ಮಹತಿ ತೋಯಾಂತೇ ಪ್ರಸುಪ್ತಮಿವ ಕುಂಜರಮ್ ॥ ೨೮॥

ಚತುರ್ಭಿಃ ಕಾಂಚನೈರ್ದೀಪೈರ್ದೀಪ್ಯಮಾನಚತುರ್ದಿಶಮ್ ।
ಪ್ರಕಾಶೀಕೃತಸರ್ವಾಂಗಂ ಮೇಘಂ ವಿದ್ಯುದ್ಗಣೈರಿವ ॥ ೨೯॥

ಪಾದಮೂಲಗತಾಶ್ಚಾನ್ಯಾ ದದರ್ಶ ಸುಮಹಾತ್ಮನಃ ।
ಪತ್ನೀಃ ಸ ಪ್ರಿಯಭಾರ್ಯಸ್ಯ ತಸ್ಯ ರಕ್ಷಃಪತೇರ್ಗೃಹೇ ॥ ೩೦॥

ಶಶಿಪ್ರಕಾಶವದನಾಶ್ಚಾರುಕುಂಡಲಭೂಷಿತಾಃ ।
ಅಮ್ಲಾನಮಾಲ್ಯಾಭರಣಾ ದದರ್ಶ ಹರಿಯೂಥಪಃ ॥ ೩೧॥

ನೃತ್ತವಾದಿತ್ರಕುಶಲಾ ರಾಕ್ಷಸೇಂದ್ರಭುಜಾಂಕಗಾಃ ।
ವರಾಭರಣಧಾರಿಣ್ಯೋ ನಿಷಣ್ಣಾ ದದೃಶೇ ಹರಿಃ ॥ ೩೨॥

ವಜ್ರವೈಡೂರ್ಯಗರ್ಭಾಣಿ ಶ್ರವಣಾಂತೇಷು ಯೋಷಿತಾಮ್।
ದದರ್ಶ ತಾಪನೀಯಾನಿ ಕುಂಡಲಾನ್ಯಂಗದಾನಿ ಚ ॥ ೩೩॥

ತುಂಬುವುದೋ ಎಂಬಂತೆ ಕೇಳಿಬರುತ್ತಿದ್ದಿತು. ಅವನು ಬಿಡುತ್ತಿದ್ದ ಉಸಿರು ಸಿಹಿಮಾವು, ಸುರಹೊನ್ನೆಮರಗಳ ಹೂವಿನವಾಸನೆಯಂತೆ ಸುವಾಸನೆಯಿಂದ ಕೂಡಿತ್ತು, ಉತ್ತಮವಾದ ಬಕುಳ ಪುಷ್ಪದ ಸುಗಂಧದಿಂದಲೂ, ಷಡ್ರಸೋಪೇತವಾದ ಮೃಷ್ಟಾನ್ನದ ವಾಸನೆಯಿಂದಲೂ, ಮಧುವಿನ ವಾಸನೆಯಿಂದಲೂ ಕೂಡಿತ್ತು. ॥೨೨-೨೪॥

ಅನಂತರ ಹನುಮಂತನು ರಾವಣನ ಮುಖವನ್ನು ನೋಡಿದನು. ಆ ಮುಖವು ಉಜ್ವಲವಾದ ಕರ್ಣಕುಂಡಲಗಳಿಂದ ಅಲಂಕೃತವಾಗಿತ್ತು. ಮುತ್ತಿನ ಮಣಿಗಳಿಂದ ಚಿತ್ರಿತವಾಗಿ ಥಳ-ಥಳಿಸುತ್ತಿದ್ದ ಸುವರ್ಣಖಚಿತವಾದ, ಸ್ವಲ್ಪ ಓರೆಯಾಗಿದ್ದ ಕಿರೀಟದಿಂದ ಕಂಗೊಳಿಸುತ್ತಿತ್ತು. ॥೨೫॥ ರಾವಣನ ವಕ್ಷಸ್ಥಲವು ರಕ್ತಚಂದನದಿಂದ ಲೇಪಿತವಾಗಿತ್ತು, ರತ್ನ ಹಾರಗಳಿಂದ ಶೋಭಿಸುತ್ತಿದ್ದು, ಎತ್ತರವಾಗಿಯೂ, ದಪ್ಪವಾಗಿಯೂ ವಿಶಾಲವಾಗಿಯೂ ವಿರಾಜಿಸುತ್ತಿತ್ತು.॥೨೬॥ ಅವನು ಬಿಳುಪಾದ ಪಟ್ಟವಸ್ತ್ರವನ್ನು ಉಟ್ಟಿದ್ದನು. ನಿದ್ದೆಯಲ್ಲಿರುವುದರಿಂದ ಅದು ಸ್ವಲ್ಪ ಅತ್ತ-ಇತ್ತ ಸರಿದಿತ್ತು. ಹೊಂಬಣ್ಣದ ಮಹಾಮೌಲ್ಯದ ಮೇಲು ಹೊದಿಕೆಯಿಂದ ಸಮಲಂಕೃತವಾಗಿದ್ದನು. ॥೨೭॥ ಅವನು ಉದ್ದಿನ ರಾಶಿಯಂತೆ ನೀಲವರ್ಣದವನಾಗಿದ್ದನು. ಮಹಾಸರ್ಪವು ಬುಸುಗುಟ್ಟುವಂತೆ ಅವನು ನಿಟ್ಟುಸಿರು ಬಿಡುತ್ತಿದ್ದನು. ರತ್ನಪರ್ಯಂಕದಲ್ಲಿ ಮಲಗಿದ್ದ ಅವನು ಗಂಗಾನದಿಯ ಮಹಾಪ್ರವಾಹದಲ್ಲಿ ಮಲಗಿರುವ ಆನೆಯಂತೆ ಕಂಗೊಳಿಸುತ್ತಿದ್ದನು. ॥೨೮॥ ನಾಲ್ಕೂ ದಿಕ್ಕುಗಳನ್ನು ಬೆಳಗುವ ಸುವರ್ಣದ ನಾಲ್ಕು ದೀಪಗಳನ್ನು ರಾವಣನ ಪರ್ಯಂಕವ ಸುತ್ತಲೂ ಇಟ್ಟಿದ್ದರು. ಮಿಂಚಿನಿಂದ ಮೇಘಗಳು ಪ್ರಕಾಶಿಸುವಂತೆ ಆ ದೀಪಗಳಿಂದ ರಾವಣನ ಸರ್ವಾಂಗಗಳೂ ಜಾಜ್ವಲ್ಯಮಾನವಾಗಿ ಬೆಳಗುತ್ತಿದ್ದವು.॥೨೯॥

ಭಾರ್ಯೆಯರಿಗೆ ಅತ್ಯಂತ ಪ್ರಿಯನಾಗಿದ್ದ, ಮಹಾತ್ಮನಾದ, ರಾಕ್ಷಸಾಧಿಪತಿಯಾದ ರಾವಣನ ಆರಮನೆಯಲ್ಲಿ ಅವನ ಪದತಲದಲ್ಲಿ ಮಲಗಿದ್ದ ಮುದ್ದು ಪತ್ನೀಯರನ್ನು ಹನುಮಂತನು ನೋಡಿದನು. ॥೩೦॥ ಚಂದ್ರನಂತೆ ಮುಖವುಳ್ಳವರೂ, ಮನೋಹರವಾದ ಕುಂಡಲಗಳಿಂದ ಅಲಂಕೃತರೂ, ಹೂಮಾಲೆಗಳನ್ನು ಆಭರಣಗಳನ್ನು ಧರಿಸಿರುವ, ಇಂಥಹ ರಾವಣನ ಪತ್ನೀಯರನ್ನು ಕಪೀಶ್ವರನು ನೋಡಿದನು. ॥೩೧॥ ಆವರೆಲ್ಲರೂ ನೃತ್ಯ-ವಾದ್ಯಕಲೆಗಳಲ್ಲಿ ಕುಶಲೆಯರಾಗಿದ್ದರು. ಶ್ರೇಷ್ಠವಾದ ಆಭರಣಗಳನ್ನು ಧರಿಸಿದ್ದರು. ರಾಕ್ಷಸೇಂದ್ರನ ಭುಜಗಳನ್ನೂ, ತೊಡೆಗಳನ್ನೂ ಆಶ್ರಯಿಸಿ ಚೆನ್ನಾಗಿ ನಿದ್ದೆ ಹೋದ ರಾವಣನ ಭಾರ್ಯೆಯರನ್ನು ಕಪಿವರನಾದ ಹನುಮಂತನು ನೋಡಿದನು. ॥೩೨॥ ಆ ಕಾಂತೆಯರು ಕಿವಿಗಳಲ್ಲಿ ಧರಿಸಿದ್ದ ವಜ್ರ-ವೈಡೂರ್ಯಖಚಿತವಾದ ಭಂಗಾರದ ಕುಂಡಲಗಳನ್ನು, ಭುಜದಲ್ಲಿ ಧರಿಸಿದ್ದ ಅಂಗದಗಳನ್ನು ಮಾರುತಿಯು ನೋಡಿದನು. ॥೩೩॥ ಚಂದ್ರ ಸದೃಶವಾದ ಮುಖಗಳಿಂದಲೂ ಶುಭಪ್ರದವಾದ ಹಾಗೂ

ತಾಸಾಂ ಚಂದ್ರೋಪಮೈರ್ವಕ್ತ್ರೈಃ ಶರ್ಧೇರ್ಲಲಿತಕುಂಡಲೈಃ ।
ವಿರರಾಜ ವಿಮಾನಂ ತತ್ ನಭಸ್ತಾರಾಗಣೈರಿವ ॥ ೩೪॥

ಮದವ್ಯಾಯಾಮಖಿನ್ನಾಸ್ತಾ ರಾಕ್ಷಸೇಂದ್ರಸ್ಯ ಯೋಷಿತಃ ।
ತೇಷು ತೇಷ್ವವಕಾಶೇಷು ಪ್ರಸುಪ್ತಾಸ್ತನುಮಧ್ಯಮಾಃ ॥ ೩೫॥

ಅಂಗಹಾರೈಸ್ತಥೈವಾನ್ಯಾ ಕೋಮಲೈರ್ನೃತ್ತಶಾಲಿನೀ ।
ವಿನ್ಯಸ್ತ ಶುಭಸರ್ವಾಂಗೀ ಪ್ರಸುಪ್ತಾ ವರವರ್ಣಿನೀ ॥ ೩೬॥

ಕಾಚಿದ್ವೀಣಾಂ ಪರಿಷ್ವಜ್ಯ ಪ್ರಸುಪ್ತಾ ಸಂಪ್ರಕಾಶತೇ ।
ಮಹಾನದೀಪ್ರಕೀರ್ಣೇವ ನಲಿನೀ ಪೋತಮಾಶ್ರಿತಾ ॥ ೩೭॥

ಅನ್ಯಾ ಕಕ್ಷಗತೇನೈವ ಮಡ್ಡುಕೇನಾಸಿತೇಕ್ಷಣಾ ।
ಪ್ರಸುಪ್ತಾ ಭಾಮಿನೀ ಭಾತಿ ಬಾಲಪುತ್ರೇವ ವತ್ಸಲಾ ॥ ೩೮॥

ಪಟಹಂ ಚಾರುಸರ್ವಾಂಗೀ ಪೀಡ್ಯ ಶೇತೇ ಶುಭಸ್ತನಿ ।
ಚಿರಸ್ಯ ರಮಣಂ ಲಬ್ಧ್ವಾ ಪರಿಷ್ವಜ್ಯೇವ ಭಾಮಿನೀ ॥ ೩೯॥

ಕಾಚಿದ್ಬಾಹುಶಂ ಪರಿಷ್ವಜ್ಯ ಸುಪ್ತಾ ಕಮಲಲೋಚನಾ ।
ರಹಃ ಪ್ರಿಯತಮಂ ಗೃಹ್ಯ ಸಕಾಮೇವ ಚ ಕಾಮಿನೀ ॥ ೪೦॥

ವಿಪಂಚೀಂ ಪರಿಗೃಹ್ಯಾನ್ಯಾ ನಿಯತಾ ನೃತ್ತಶಾಲಿನೀ ।
ನಿದ್ರಾವಶಮನುಪ್ರಾಪ್ತಾ ಸಹಕಾಂತೇವ ಭಾಮಿನೀ ॥ ೪೧॥

ಅನ್ಯಾ ಕನಕಸಂಕಾಶೈರ್ಮೃದುಪೀನೈರ್ಮನೋರಮೈಃ ।
ಮೃದಂಗಂ ಪರಿಪೀಡ್ಯಾಂಗೈಃ ಪ್ರಸುಪ್ತಾ ಮತ್ತಲೋಚನಾ ॥ ೪೨॥

ಭುಜಪಾರ್ಶ್ವಾಂತರಸ್ಥೇನ ಕಕ್ಷಗೇನ ಕೃತೋದರೀ ।
ಪಣವೇನ ಸಹಾನಿಂದ್ಯಾ ಸುಪ್ತಾ ಮದಕೃತಶ್ರಮಾ ॥ ೪೩॥

ಡಿಂಡಿಮಂ ಪರಿಗೃಹ್ಯಾನ್ಯಾ ತಥೈವಾಸಕ್ತಡಿಂಡಿಮಾ ।
ಪ್ರಸುಪ್ತಾ ತರುಣಂ ವತ್ಸಮುಪಗೂಹ್ಯೇವಭಾಮಿನೀ ॥ ೪೪॥

ಸುಂದರವಾದ ಕುಂಡಲಗಳಿಂದಲೂ ಯುಕ್ತವಾಗಿದ್ದ ರಾವಣನ ಪತ್ನೀಯರ ಆ ವಿಮಾನಾಕೃತಿಯ ಪರ್ಯಂಕವು ಚಂದ್ರನಿಂದಲೂ, ನಕ್ಷತ್ರಸಮೂಹಗಳಿಂದಲೂ ಕೂಡಿರುವ ಆಕಾಶದಂತೆಕಾಣುತ್ತಿದ್ದಿತು. ॥೩೪॥

ಮದ್ಯಪಾನದ ಮದದಿಂದಲೂ, ರತಿಕ್ರೀಡೆಯಿಂದಲೂ ಆಯಾಸ ಗೊಂಡಿದ್ದ, ಕೃಶವಾದ ನಡುವಿನಿಂದ ಕೂಡಿದ್ದ ರಾವಣನ ಮಡದಿಯರು ಅವಕಾಶವಿದ್ದೆಡೆಗಳಲ್ಲಿ ಆಸ್ವಸ್ಥವಾಗಿ ಮಲಗಿದ್ದರು. ॥೩೫॥ ನೃತ್ಯದಲ್ಲಿ ಪಳಗಿದ್ದ ಓರ್ವಶುಭಾಂಗಿಯು ನೃತ್ಯವನ್ನು ಮಾಡುತ್ತಿರುವವಳಂತೆ ಮನೋಹರವಾದ ಅಂಗಹಾರಗಳಿಂದ (ಅಂಗಿಕವಾದ ಅಭಿನಯಗಳಿಂದ) ನೃತ್ಯದ ಭಂಗಿಯಲ್ಲೇ ಮಲಗಿದ್ದಳು. ॥೩೬॥ ವೀಣೆಯನ್ನೇ ತಬ್ಬಿಕೊಂಡು ಮಲಗಿದ್ದ ರಾವಣನ ಮತ್ತೊಬ್ಬ ತರುಣೀಮಣಿಯು ಹರಿಗೋಲಿಗೆ ಸುತ್ತಿಕೊಂಡು ಹರಡಿಕೊಂಡಿರುವ ಕಮಲದ ಬಳ್ಳಿಯಂತೆ ಮನೋಹರವಾಗಿದ್ದಳು. ॥೩೭॥

'ಮಡ್ಡುಕ'ವೆಂಬ ಚರ್ಮವಾದ್ಯವನ್ನು ಕಂಕುಳಲ್ಲಿ ಅಪ್ಪಿಕೊಂಡು ಮಲಗಿದ್ದ ಓರ್ವ ಯುವತಿಯು ವಾತ್ಸಲ್ಯದಿಂದ ಚಿಕ್ಕ ಮಗುವನ್ನು ಕಂಕುಳಲ್ಲೆತ್ತಿಕೊಂಡೇ ಮಲಗಿದ್ದ ಭಾಮಿನಿಯಂತೆ ಕಾಣುತ್ತಿದ್ದಳು. ॥೩೮॥ ಭೇರಿಯನ್ನು ಆಲಿಂಗಿಸಿಕೊಂಡು ಮಲಗಿದ್ದ ಸುಂದರವಾದ ಕುಚಗಳುಳ್ಳ ಸರ್ವಾಂಗಸುಂದರಿಯಾದ ಓರ್ವ ರಮಣಿಯು ಬಹಳ ಕಾಲಾನಂತರ ಆಗಮಿಸಿದ ರಮಣನನ್ನು ಗಟ್ಟಿಯಾಗಿ ತಬ್ಬಿಕೊಂಡು ಮಲಗಿರುವಳೋ ಎಂಬಂತೆ ಕಂಡು ಬರುತ್ತಿದ್ದಳು. ॥೩೯॥ ಕೊಳಲನ್ನು ಅಪ್ಪಿಕೊಂಡು ಮಲಗಿದ್ದ ಕಮಲಾಕ್ಷಿಯಾದ, ಕಮನೀಯರೂಪಳಾದ ಓರ್ವ ಕಾಂತೆಯು ಪ್ರಿಯತಮನನ್ನು ಏಕಾಂತ ಸ್ಥಳಕ್ಕೆ ಕರಕೊಂಡುಹೋಗಿ ತನ್ನ ಬಯಕೆಯನ್ನು ಪೂರ್ಣಗೊಳಿಸುತ್ತಿರುವಳೋ ಎಂಬಂತೆ ಕಾಣುತ್ತಿತ್ತು. ॥೪೦॥ ವಿಪಂಚಿ ಎಂಬ ಏಳುತಂತಿಯ ವೀಣೆಯನ್ನು ಹಿಡಿದು ನೃತ್ಯ ಭಂಗಿಯಲ್ಲೇ ಮಲಗಿದ್ದ ಓರ್ವ ಲಲನಾಮಣಿಯು ಪ್ರಿಯತಮನೊಡನೆ ನಿದ್ದೆ ಮಾಡುತ್ತಿರುವಳೋ ಎಂದು ಕಂಡುಬರುತ್ತಿದ್ದಳು. ॥೪೧॥ ಮಧುಪಾನದಿಂದ ಮತ್ತವಾದ ಕಣ್ಣುಗಳಿಂದ ಕೂಡಿದ್ದ ಓರ್ವ ರಾವಣನ ಪ್ರಿಯತಮೆಯು, ಮೃದುವಾಗಿಯೂ, ಸ್ಥೂಲವಾಗಿಯೂ, ಮನೋಹರ ವಾಗಿಯೂ ಇದ್ದ ಸುವರ್ಣ ಸದೃಶವಾದ ಅಂಗಗಳಿಂದ ಮೃದಂಗವನ್ನೇ ತಬ್ಬಿಕೊಂಡು ಮಲಗಿದ್ದಳು. ॥೪೨॥ ಮಧುಪಾನಾದಿ ಕ್ರೀಡೆಗಳಿಂದ ಆಯಾಸಗೊಂಡಿದ್ದ, ತೆಳ್ಳನೆಯ ಹೊಟ್ಟೆಯಿಂದ ಕೂಡಿದ್ದ, ಅನಿಂದ್ಯಳಾದ ಸುಂದರಿಯೋರ್ವಳು ಭುಜಗಳ ಮಧ್ಯದ ಕಂಕುಳಲ್ಲಿದ್ದ ಮದ್ದಲೆಯೊಡನೆ ನಿದ್ದೆ ಮಾಡುತ್ತಿದ್ದಳು. ॥೪೩॥ ಡಿಂಡಿಮ ವಾದ್ಯವನ್ನೇ ತಬ್ಬಿಕೊಂಡು ಮಲಗಿದ್ದ ಮತ್ತೋರ್ವ ತರುಣಿಯು ಮಗುವನ್ನು ಅಪ್ಪಿಕೊಳ್ಳುವಂತೆ ಡಿಂಡಿಮದಲ್ಲಿ ಆಸಕ್ತಳಾದ ತರುಣನನ್ನು ಅಪ್ಪಿಕೊಂಡು ಮಲಗಿರುವಳೋ ಎಂಬಂತೆ ಕಾಣುತ್ತಿದ್ದಳು.॥೪೪॥ ಕಮಲಪತ್ರಾಕ್ಷಿಯಾದ

ಕಾಚಿದಾಡಂಬರಂ ನಾರೀ ಭುಜಸಂಯೋಗಪೀಡಿತಮ್ ।
ಕೃತ್ವಾ ಕಮಲಪತ್ರಾಕ್ಷೀ ಪ್ರಸುಪ್ತಾ ಮದಮೋಹಿತಾ ॥ ೪೫॥

ಕಲಹೀಮಪವಿಧ್ಯಾನ್ಯಾ ಪ್ರಸುಪ್ತಾ ಭಾತಿ ಭಾಮಿನೀ ।
ವಸಂತೇ ಪುಷ್ಪ ಶಬಲಾ ಮಾಲೇವ ಪರಿಮಾರ್ಜಿತಾ ॥ ೪೬॥

ಪಾಣಿಧ್ನಾಂ ಚ ಕುಚೌ ಕಾಚಿತ್ ಸುವರ್ಣಕಲಶೋಪಮೌ ।
ಉಪಗೂಹ್ಯಾಬಲಾ ಸುಪ್ತಾ ನಿದ್ರಾಬಲಪರಾಜಿತಾ ॥ ೪೭॥

ಅನ್ಯಾ ಕಮಲಪತ್ರಾಕ್ಷೀ ಪೂರ್ಣೇಂದುಸದೃಶಾನನಾ ।
ಅನ್ಯಾಮಾಲಿಂಗ್ಯ ಸುಶ್ರೋಣೀಂ ಪ್ರಸುಪ್ತಾ ಮದವಿಹ್ವಲಾ ॥ ೪೮॥

ಆತೋದ್ಯಾನಿ ವಿಚಿತ್ರಾಣಿ ಪರಿಷ್ವಜ್ಯ ವರಸ್ತ್ರಿಯಃ ।
ನಿಪೀಡ್ಯ ಚ ಕುಚೈಃ ಸುಪ್ತಾಃ ಕಾಮಿನ್ಯಃ ಕಾಮುಕಾನಿವ ॥ ೪೯॥

ತಾಸಾಮೇಕಾಂತವಿನ್ಯಸ್ತೇ ಶಯಾನಾಂ ಶಯನೇ ಶುಭೇ ।
ದದರ್ಶ ರೂಪಸಂಪನ್ನಮಪರಾಂ ಸ ಕಪಿಃ ಸ್ತ್ರಿಯಮ್ ॥ ೫೦॥

ಮುಕ್ತಾಮಣಿಸಮಾಯುಕ್ತೈರ್ಭೂಷಣೈಃ ಸುವಿಭೂಷಿತಾಮ್ ।
ವಿಭೂಷಯಂತೀಮಿವ ತಂ ಸ್ವಶ್ರಿಯಾ ಭವನೋತ್ತಮಮ್ ॥ ೫೧॥

ಗೌರೀಂ ಕನಕವರ್ಣಾಂಗೀಮಿಷ್ಟಾದಯಿತಪೂರ್ವಿಣೀಮ್ ।
ಕಪಿರ್ಮನೋವರೀಂ ತತ್ರ ಶಯಾನಾಂ ಹಾರಿರೂಪಿಣೀಮ್ ॥ ೫೨॥

ಸ ತಾಂ ದೃಷ್ಟ್ವಾ ಮಹಾಬಾಹುರ್ಭೂಷಿತಾಂ ಮಾರುತಾತ್ಮಜಃ ।
ತರ್ಕಯಾಮಾಸ ಸೀತೇತಿ ರೂಪಯೌವನಸಂಪದಾ ।
ಹರ್ಷೇಣ ಮಹತಾ ಯುಕ್ತೋ ನನಂದ ಹರಿಯೂಥಪಃ ॥ ೫೩॥

ಮದದಿಂದ ಮೋಹಿತಳಾಗಿದ್ದ ಓರ್ವ ಕಾಂತೆಯು 'ಆಡಂಬರ' ಎಂಬ ತೂರ್ಯ ವಾದ್ಯವನ್ನು ಭುಜಗಳಿಂದ ಗಟ್ಟಿಯಾಗಿ ತಬ್ಬಿಕೊಂಡು ಪರವಶಳಾಗಿ ಮಲಗಿದ್ದಳು. ॥೪೫॥ ಓರ್ವ ತರುಣಿಯು ಆತ್ತಲಿತ್ತ ಹೊರಳಾಡುವಾಗ ತನ್ನ ಬಳಿಯಲ್ಲಿದ್ದ ಪನ್ನೀರ ತುಂಬಿದ ಕಲಶವನ್ನು ಕೆಳಕ್ಕೆ ಬೀಳಿಸಿ ನೀರಿನಿಂದ ತೊಯ್ದುಹೋಗಿದ್ದರೂ ಹಾಗೆಯೇ ಗಾಢವಾಗಿ ಮಲಗಿದ್ದಳು. ಆಗ ಅವಳು ವಸಂತ ಕಾಲದಲ್ಲಿ ಬಾಡದಿರಲೆಂದು ನೀರಿನಿಂದ ಚುಮುಕಿಸಲ್ಪಟ್ಟ ಹಲವು ಬಣ್ಣಗಳಿಂದ ಕೂಡಿದ ಪುಷ್ಪಮಾಲೆಯಂತೆ ಕಂಡು ಬರುತ್ತಿದ್ದಳು. ॥೪೬॥ ಗಾಢವಾದ ನಿದ್ದೆಯಿಂದ ವಿವಶಳಾಗಿದ್ದ ಓರ್ವ ಅಬಲೆಯು ಸುವರ್ಣ ಕಲಶಗಳಂತೆ ಇದ್ದ ತನ್ನೆರಡೂ ಸ್ತನಗಳನ್ನು ಎರಡೂ ಕೈಗಳಿಂದ ಮುಚ್ಚಿಕೊಂಡು ಮಲಗಿದ್ದಳು. ॥೪೭॥ ಚಂದ್ರಬಿಂಬ ದಂತಿರುವ ಮುಖವುಳ್ಳ ಓರ್ವ ಕಮಲಲೋಚನೆಯು ಮದನಾವೇಶಕ್ಕೆ ಒಳಗಾಗಿ ಮತ್ತೊಬ್ಬ ರಮಣಿಯನ್ನು ಆಲಿಂಗಿಸಿಕೊಂಡು ಮಲಗಿದ್ದಳು. ॥೪೮॥ ರಾವಣನ ಶ್ರೇಷ್ಠವಾದ ಇನ್ನೂ ಅನೇಕ ನಾರೀಮಣಿಗಳು- ಕಾಮಿನಿಯರು ಕಾಮುಕರನ್ನು ತಬ್ಬಿ ಕೊಂಡು ಸ್ತನಗಳಿಂದ ಪೀಡಿಸುವಂತೆ ವಿಚಿತ್ರವಾದ ಬಗೆ-ಬಗೆಯ ವಾದ್ಯಗಳನ್ನು ಎದೆಯಮೇಲೆ ತಬ್ಬಿಕೊಂಡು ಮಲಗಿದ್ದರು. ॥೪೯॥

ಆ ವರ ಸ್ತ್ರೀಯರಿದ್ದ ಸ್ಥಳದಿಂದ ಪ್ರತ್ಯೇಕವಾಗಿದ್ದ ಏಕಾಂತ ಸ್ಥಳದಲ್ಲಿ ಸುಂದರವಾದ ಹಾಸಿಗೆಯಲ್ಲಿ ಮಲಗಿದ್ದ ರೂಪ ಸಂಪನ್ನೆಯಾದ ಮತ್ತೊಬ್ಬ ಸ್ತ್ರೀರತ್ನವನ್ನು ಕಪಿಶ್ರೇಷ್ಠನಾದ ಹನುಮಂತನು ನೋಡಿದನು. ॥೫೦॥ ಆ ನಾರೀಮಣಿಯು ಮುತ್ತಿನ ಮಣಿಗಳಿಂದ ನಿರ್ಮಿತವಾದ ಸುಂದರವಾದ ಒಡವೆಗಳಿಂದ ಸಮಲಂಕೃತವಾಗಿದ್ದಳು. ದಿವ್ಯವಾದ ಹಾಗೂ ಶ್ರೇಷ್ಠವಾದ ಆ ಭವನವನ್ನೇ ತನ್ನ ಅಂಗಕಾಂತಿಯಿಂದ ಬೆಳಗಿಸು ತ್ತಿರುವಳೋ ಎಂಬಂತೆ ಕಾಣುತ್ತಿದ್ದಳು. ॥೫೧॥ಅವಳು ಗೌರಾಂಗಳೂ, ಸುವರ್ಣಸದೃಶಳೂ, ಆಗಿದ್ದಳು. ರಾವಣನಿಗೆ ಇಷ್ಟಳಾಗಿದ್ದು, ಸುಮನೋಹರವಾದ ರೂಪಿನಿಂದ ಕಂಗೊಳಿಸು ತ್ತಿದ್ದಳು. ಆಂತಃಪುರಕ್ಕೆ ಒಡತಿಯೂ, ಸರ್ವಾಂಗಸುಂದರಳೂ, ವಿಕಾಂತಸ್ಥಳದಲ್ಲಿ ಮಲಗಿದ್ದ ಆ ಮಂಡೋದರಿಯನ್ನು ಹನುಮಂತನು ನೋಡಿದನು. ॥೫೨॥

ಮಹಾಬಾಹುವಾದ ವಾಯುಪುತ್ರನಾದ ಮಾರುತಿಯು ಸರ್ವಾಭರಣಗಳಿಂದಲೂ ಭೂಷಿತೆಯಾಗಿದ್ದ ಮಂಡೋದರಿ ಯನ್ನು ನೋಡಿ ಅವಳಲ್ಲಿದ್ದ ರೂಪಸಂಪತ್ತಿನಿಂದ ಅವಳು ಸೀತೆಯೇ ಇರಬಹುದೆಂದು ಊಹಿಸಿದನು. ಸೀತೆಯನ್ನು ಕಂಡೆನೆಂದು ಭಾವಿಸಿದ ಹನುಮಂತನು ಮಹಾಹರ್ಷ ಯುಕ್ತನಾಗಿ ಆನಂದತುಂದಿಲನಾದನು. ॥೫೩॥

ಸೀತೆಯನ್ನು ನೋಡಿದೆನೆಂಬ ಆನಂದಾತಿರೇಕದಿಂದ ಮಹತ್ತರವಾದ ಕಾರ್ಯವನ್ನು ಸಾಧಿಸಿದವನಂತೆ ತನ್ನೆರಡೂ ಭುಜಗಳನ್ನು ತಟ್ಟಿಕೊಂಡನು. ಬಾಲಕ್ಕೆ ಮುತ್ತಿಟ್ಟು ಆನಂದಿಸಿದನು. ಕುಣಿದಾಡಿದನು. ಹಾರಿದನು, ಅತ್ತಿಂದಿತ್ತ

ಆಸ್ಫೋಟಯಾಮಾಸ ಚುಚುಂಬ ಪುಚ್ಛಂ
ನನಂದ ಚಿಕ್ರೀಡ ಜಗೌ ಜಗಾಮ।
ಸ್ತಂಭಾನರೋಹನ್ನಿಪಪಾತ ಭೂಮೌ
ನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಮ್ ॥ ೫೪॥

ತಿರುಗಾಡಿದನು. ವಿಜಯೋತ್ಸಾಹದಿಂದ ಕಂಬವನ್ನು ಹತ್ತಿ ಕೆಳಕ್ಕೆ ಧುಮುಕಿದನು. (ವಾನರರಿಗೆ ಸ್ವಾಮಿ ಭಕ್ತಿ ಪರಾಂಬಣತ್ವವು ಸ್ವಾಭಾವಿಕವಾಗಿರುವುದರಿಂದ ಹನುಮಂತನಿಗೆ ಶ್ರೀರಾಮನ ಮೇಲೆ ಭಕ್ತಿ ಉತ್ಸಾಹಗಳೇ ಅವನ ಇಂತಹ ಚೆರ್ಯೆಗಳಿಗೆ ಪ್ರೇರಕವು.) ॥೫೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ದಶಮಃ ಸರ್ಗಃ ॥ ೧೦ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹತ್ತನೆಯ ಸರ್ಗವು ಮುಗಿಯಿತು.

* * *

ಹನ್ನೊಂದನೆಯ ಸರ್ಗ

ಮಲಗಿರುವವಳು ಸೀತೆಯಲ್ಲವೆಂಬುದನ್ನು ನಿಶ್ಚಯಿಸಿದ ಹನುಮಂತನು ಅಂತಃಪುರದಲ್ಲಿ ಮತ್ತು ಪಾನಗೃಹಗಳಲ್ಲಿ ಸೀತೆಯನ್ನು ಹುಡುಕಲು ಪುನಃ ತೊಡಗುವುದು. ಅವನ ಮನಸ್ಸಿನಲ್ಲಿ ಧರ್ಮಲೋಪದ ಶಂಕೆ ಉಂಟಾಗುವುದು. ಅದನ್ನು ತಾನೇ ಪರಿಹರಿಸಿಕೊಳ್ಳುವುದು –

ಅವಧೂಯ ಚ ತಾಂ ಬುದ್ಧಿಂ ಬಭೂವಾವಸ್ಥಿತಸ್ತದಾ।
ಜಗಾಮ ಚಾಪರಾಂ ಚಿಂತಾಂ ಸೀತಾಂ ಪ್ರತಿ ಮಹಾಕಪಿಃ ॥ ೧॥

ಸೀತಾದೇವಿಯ ಪಾತಿವ್ರತ್ಯವೇ ಮೊದಲಾದ ಮಹಾಗುಣಗಳನ್ನು ಸ್ಮರಿಸಿದ ಹನುಮಂತನು ರಾವಣನ ಅಂತಃಪುರದಲ್ಲಿ ಮಲಗಿರುವವಳು ಸೀತೆಯಲ್ಲವೆಂದು ನಿಶ್ಚಯಿಸಿ ಸ್ಥಿರತೆಯನ್ನು ಹೊಂದಿ, ಸೀತಾದೇವಿಯು ಸಿಕ್ಕದಿರುವ ಬಗ್ಗೆ ಪುನಃ ಯೋಚಿಸ ತೊಡಗಿದನು–॥೧॥

ನ ರಾಮೇಣ ವಿಯುಕ್ತಾ ಸಾ ಸ್ವಪ್ತುಮರ್ಹತಿ ಭಾಮಿನೀ।
ನ ಭೋಕ್ತುಂ ನಾಪ್ಯಲಂಕರ್ತುಂ ನ ಪಾನಮುಪಸೇವಿತುಮ್ ॥ ೨॥

ಶ್ರೀರಾಮನಿಂದ ಬೇರ್ಪಟ್ಟಿರುವ ಸೀತಾದೇವಿಯು ನಿಶ್ಚಿಂತಳಾಗಿ ಮಲಗಿರಲಾರಳು. ಆ ಸ್ಥಿತಿಯಲ್ಲಿ ಅನ್ನ-ಪಾನಾದಿಗಳ ಕಡೆಗೆ ಮನಸ್ಸಾಗದು. ಅಲಂಕಾರ ಮಾಡಿಕೊಳ್ಳಲಾರಳು.॥೨॥ ಅನ್ಯ ಮನುಷ್ಯನ ಅಥವಾ ದೇವತೆಗಳ ಒಡೆಯನಾದ ಇಂದ್ರನ ಬಳಿಯಲ್ಲಿಯೂ, ಅವಳು ಸ್ವಸ್ಥ ಚಿತ್ತಳಾಗಿ ಕುಳಿತುಕೊಳ್ಳಲಾರಳು; ಯಾರಬಳಿಗೂ ಹೋಗಲಾರಳು. ಏಕೆಂದರೆ ಶ್ರೀರಾಮನಿಗೆ ಸದೃಶನಾದವನು ದೇವತೆಗಳಲ್ಲಿಯೂ ಯಾರು ಇಲ್ಲ.॥೩॥ ಆದುದರಿಂದ ಇಲ್ಲಿ ಮಲಗಿರುವವಳು ''ಸೀತಾದೇವಿಯಂತೂ ಅಲ್ಲವೇ ಅಲ್ಲ'' ಎಂದು ನಿಶ್ಚಯಿಸಿಕೊಂಡು ಆ ಕಪಿವರನು ಸೀತಾಸಂದರ್ಶನಕ್ಕಾಗಿ ಉತ್ಸಾಹದಿಂದ ಅಂತಃಪುರದಲ್ಲಿ ಹಾಗೂ ಪಾನಗೃಹಗಳಲ್ಲಿ ಪುನಃ ಹುಡುಕ ತೊಡಗಿದನು. ॥೪॥

ನಾನ್ಯಂ ನರಮುಪಸ್ಥಾತುಂ ಸುರಾಣಾಮಪಿ ಚೇಶ್ವರಮ್।
ನ ಹಿ ರಾಮಸಮಃ ಕಶ್ಚಿದ್ವಿದ್ಯತೇ ತ್ರಿದಶೇಷ್ವಪಿ ॥ ೩॥

ಅನ್ಯೇಯಮಿತಿ ನಿಶ್ಚಿತ್ಯ ಭೂಯಸ್ತತ್ರ ಚುಚಾರ ಸಃ।
ಪಾನಭೂಮೌ ಹರಿಶ್ರೇಷ್ಠಃ ಸೀತಾಸಂದರ್ಶನೋತ್ಸುಕಃ ॥ ೪॥

ಆ ಪಾನಭೂಮಿಯಲ್ಲಿ ಕೆಲವು ಸ್ತ್ರೀಯರು ಕ್ರೀಡಾವಿಹಾರದಿಂದ ಬಳಲಿ ಮಲಗಿದ್ದರು. ಕೆಲವರು ಹಾಡಿ-ಹಾಡಿ ಆಯಾಸಗೊಂಡು ಮಲಗಿದ್ದರು. ಇನ್ನೂ ಕೆಲವರು ನೃತ್ಯಮಾಡಿ ದಣಿದು ಮಲಗಿದ್ದರು. ಮತ್ತೂ ಕೆಲವರು ಅತಿಯಾದ ಮಧುಪಾನದಿಂದ ಪ್ರಜ್ಞಾಶೂನ್ಯರಾಗಿ ಪವಡಿಸಿದ್ದರು.॥೫॥ ಕೆಲವರು ಡೋಲು-ಮೃದಂಗ ವಾದ್ಯಗಳನ್ನು ನುಡಿಸುವುದರಲ್ಲಿ

ಕ್ರೀಡಿತೇನಾಪರಾಃ ಕ್ಲಾಂತಾ ಗೀತೇನ ಚ ತಥಾಪರಾಃ।
ನೃತ್ತೇನ ಚಾಪರಾಃ ಕ್ಲಾಂತಾಃ ಪಾನವಿಪ್ರಹತಾಸ್ತಥಾ ॥ ೫॥

ಮುರಜೇಷು ಮೃದಂಗೇಷು ಪೀಠಿಕಾಸು ಚ ಸಂಸ್ಥಿತಾಃ ।
ತಥಾಽಽಸ್ತರಣಮುಖ್ಯೇಷು ಸಂವಿಷ್ಟಾಶ್ಚಾಪ್ಸರಾಃ ಸ್ತ್ರಿಯಃ ॥ ೬॥

ಅಂಗನಾನಾಂ ಸಹಸ್ರೇಣ ಭೂಷಿತೇನ ವಿಭೂಷಣೈಃ ।
ರೂಪಸಂಲಾಪಶೀಲೇನ ಯುಕ್ತಗೀತಾರ್ಥಭಾಷಿಣಾ ॥ ೭॥

ದೇಶಕಾಲಾಭಿಯುಕ್ತೇನ ಯುಕ್ತವಾಕ್ಯಾಭಿಧಾಯಿನಾ ।
ರತಾಭಿರತಸಂಸುಪ್ತಂ ದದರ್ಶ ಹರಿಯೂಥಪಃ ॥ ೮॥

ಅನ್ಯತ್ರಾಪಿ ವರಸ್ತ್ರೀಣಾಂ ರೂಪಸಂಲಾಪಶಾಲಿನಾಮ್ ।
ಸಹಸ್ರಂ ಯುವತೀನಾಂ ತು ಪ್ರಸುಪ್ತಂ ಸ ದದರ್ಶ ಹ ॥ ೯॥

ತಾಸಾಂ ಮಧ್ಯೇ ಮಹಾಬಾಹುಃ ಶುಶುಭೇ ರಾಕ್ಷಸೇಶ್ವರಃ ।
ಗೋಷ್ಠೇ ಮಹತಿ ಮುಖ್ಯಾನಾಂ ಗವಾಂ ಮಧ್ಯೇ ಯಥಾ ವೃಷಃ ॥ ೧೦॥

ಸ ರಾಕ್ಷಸೇಂದ್ರಃ ಶುಶುಭೇ ತಾಭಿಃ ಪರಿವೃತಃ ಸ್ವಯಮ್ ।
ಕರೇಣುಭಿರ್ಯಥಾರಣ್ಯೇ ಪರಿಕೀರ್ಣೋ ಮಹಾದ್ವಿಪಃ ॥ ೧೧॥

ಸರ್ವಕಾಮೈರುಪೇತಾಂ ಚ ಪಾನಭೂಮಿಂ ಮಹಾತ್ಮನಃ ।
ದದರ್ಶ ಕಪಿಶಾರ್ದೂಲಸ್ತಸ್ಯ ರಕ್ಷಃಪತೇರ್ಗೃಹೇ ॥ ೧೨॥

ಮೃಗಾಣಾಂ ಮಹಿಷಾಣಾಂ ಚ ವರಾಹಾಣಾಂ ಚ ಭಾಗಶಃ ।
ತತ್ರ ನ್ಯಸ್ತಾನಿ ಮಾಂಸಾನಿ ಪಾನಭೂಮೌ ದದರ್ಶ ಸಃ ॥ ೧೩॥

ರೌಕ್ಮೇಷು ಚ ವಿಶಾಲೇಷು ಭಾಜನೇಷ್ವರ್ಧಭಕ್ಷಿತಾನ್ ।
ದದರ್ಶ ಕಪಿಶಾರ್ದೂಲೋ ಮಯೂರಾನ್ ಕುಕ್ಕುಟಾಂಸ್ತಥಾ ॥ ೧೪॥

ವರಾಹವಾಧ್ರೀಣಸಕಾನ್ ದಧಿಸೌವರ್ಚಲಾಯುತಾನ್ ।
ಶಲ್ಯಾನ್ ಮೃಗಮಯೂರಾಂಶ್ಚ ಹನುಮಾನನ್ವಪದ್ಯತ ॥ ೧೫॥

ಕೃಕರಾನ್ ವಿವಿಧಾನ್ ಸಿದ್ಧಾನ್ ಚಕೋರಾನರ್ಧಭಕ್ಷಿತಾನ್ ।
ಮಹಿಷಾನೇಕಶಲ್ಯಾಂಶ್ಚ ಚ್ಛಾಗಾಂಶ್ಚ ಕೃತನಿಷ್ಕ್ರಿತಾನ್ ॥ ೧೬॥

ಲೇಹ್ಯಾನುಚ್ಚಾವಚಾನ್ ಪೇಯಾನ್ ಭೋಜ್ಯಾನಿ ವಿವಿಧಾನಿ ಚ ।
ತಥಾಮ್ಲ ಲವಣೋತ್ತಂಸೈರ್ವಿವಿಧೈ ರಾಗಷಾಡವೈಃ ॥ ೧೭॥

ಆಸಕ್ತರಾಗಿ ನಿದ್ದೆಹೋಗಿದ್ದರು. ಕೆಲವರು ಶ್ರೇಷ್ಠವಾದ ಹಂಸತೂಲಿಕಾತಲ್ಪಗಳಲ್ಲಿ ಮಲಗಿದ್ದರು.॥೬॥

ಅಂತಃಪುರದ ಸಮಿಪದಲ್ಲಿಯೇ ಇದ್ದ ಪಾನಗೃಹಗಳಲ್ಲಿಯೂ ಸಾವಿರಾರು ಅಂಗನೆಯರು ಇದ್ದರು. ಅವರೆಲ್ಲರೂ ಸುಂದರವಾದ ಹಾಗೂ ಶ್ರೇಷ್ಠವಾದ ಆಭರಣಗಳಿಂದ ಸಮಲಂಕೃತರಾಗಿದ್ದರು. ತಮ್ಮ ರೂಪ ಸೌಂದರ್ಯಗಳನ್ನು ಬಗೆ-ಬಗೆಯಾಗಿ ವರ್ಣಿಸಿ ಹೇಳುವ ಸ್ವಭಾವದವರಾಗಿದ್ದರು. ಅಂತೆಯೇ ರಾವಣನ ರೂಪವನ್ನು, ವೀರ್ಯ-ಪರಾಕ್ರಮಗಳನ್ನು ನಾನಾರೀತಿಯಿಂದ ಬಣ್ಣಿಸುತ್ತಿದ್ದರು. ತತ್ಕಾಲೋಚಿತವಾದ ಗೀತೆಗಳನ್ನು ಹಾಡಿ ಅವುಗಳ ಅರ್ಥವನ್ನು ಹೇಳುತ್ತಿದ್ದರು. ಎಲ್ಲರೂ ದೇಶ-ಕಾಲೋಚಿತವಾಗಿ ಮಾತನಾಡುವ ಕುಶಲತೆಯಿಂದ ಕೂಡಿದ್ದರು.॥೭-೮॥ ಮತ್ತೊಂದೆಡೆಯಲ್ಲಿ ರೂಪ-ಸಂಪತ್ತಿನಿಂದ ಕೂಡಿದ್ದ, ಸಲ್ಲಾಪ ಕುಶಲೆಯರಾದ, ನವಯುವತಿಯರಾದ ಸಾವಿರಾರು ಸ್ತ್ರೀಯರೂ ಮಲಗಿರುವುದನ್ನು ಆ ಹನುಮಂತನು ನೋಡಿದನು.॥೯॥

ಒಂದು ವಿಶಾಲವಾದ ಗೋಶಾಲೆಯಲ್ಲಿ ಉತ್ತಮ ಜಾತಿಯ ಎಕಳುಗಳ ಮಧ್ಯದಲ್ಲಿರುವ ಒಂದು ಕೊಬ್ಬಿದ ಗೂಳಿಯಂತೆ, ಮಹಾಬಾಹುವಾದ ರಾವಣನು ಆ ತರುಣಿಯರ ಮಧ್ಯದಲ್ಲಿ ರಾರಾಜಿಸುತ್ತಿದ್ದನು.॥೧೦॥ ಮಹಾರಣ್ಯದಲ್ಲಿ ಹೆಣ್ಣಾನೆಗಳಿಂದ ಸುತ್ತುವರಿಯಲ್ಪಟ್ಟ ಸಲಗದೋಪಾದಿ ರಾಕ್ಷಸರಾಜನು ಆ ಕಡು ಚೆಲುವೆಯರಾಗಿದ್ದ ನವಯುವತಿಯರಿಂದ ಪರಿವೃತನಾಗಿದ್ದನು.॥೧೧॥ ಕಪಿಶ್ರೇಷ್ಠನಾದ ಹನುಮಂತನು ಮಹಾವೀರನಾದ ರಾಕ್ಷಸೇಶ್ವರನ ಅರಮನೆಯಲ್ಲಿ ಸಕಲ ವಿಧವಾದ ಕಾಮನಾವಸ್ತುಗಳಿಂದಲೂ ಸಮೃದ್ಧವಾಗಿದ್ದ ಪಾನ ಗೃಹಗಳನ್ನು ನೋಡಿದನು.॥೧೨॥ ಆ ಪಾನಮಂದಿರದ ಒಂದು ಭಾಗದಲ್ಲಿ ಮೃಗ-ಮಹಿಷ-ವರಾಹ ಮುಂತಾದ ಕಾಡುಪ್ರಾಣಿಗಳ ಮಾಂಸವಿಂಡಗಳನ್ನು ಇಟ್ಟಿದ್ದನ್ನು ಆ ಕಪಿವರನು ನೋಡಿದನು.॥೧೩॥ ಮತ್ತೊಂದೆಡೆಯಲ್ಲಿ ಸುವರ್ಣ ಮಯವಾದ ವಿಶಾಲವಾದ ಪಾತ್ರೆಗಳಲ್ಲಿ ಅರ್ಧ ಭಾಗವನ್ನು ಮಾತ್ರವೇ ತಿಂದುಳಿಸಿದ್ದ ನವಿಲುಗಳ ಮತ್ತು ಕೋಳಿ ಗಳ ಮಾಂಸವಿದ್ದುದನ್ನು ಹನುಮಂತನು ನೋಡಿದನು. ॥೧೪॥ ಉಪ್ಪಿನಿಂದಲೂ ಮೊಸರಿನಿಂದಲೂ ಸಂಸ್ಕರಿಸಿದ್ದ ಹಂದಿ, ಮುಳ್ಳುಹಂದಿ, ಬಿಡ್ಡಮೃಗ, ಜಿಂಕೆ ಮತ್ತು ನವಿಲುಗಳ ಮಾಂಸವನ್ನು ಪಾನಗೃಹದ ಮತ್ತೊಂದು ಭಾಗದಲ್ಲಿ ನೋಡಿದನು.॥೧೫॥ ಇನ್ನೊಂದು ಭಾಗದಲ್ಲಿ ಕತ್ತರಿಸಿ ಪಕ್ವಮಾಡಿದ್ದ ಕಾಡುಕೊಕ್ಕರೆಗಳ, ಚಕೋರಪಕ್ಷಿಗಳ, ಎಮ್ಮೆ, ಆಡು ಮತ್ತು ಮೀನುಗಳ ಮಾಂಸವನ್ನು ಸುವರ್ಣಮಯವಾದ ತಟ್ಟೆಗಳಲ್ಲಿ ಅರ್ಧತಿಂದು ಬಿಟ್ಟಿದ್ದನ್ನು ಮಾರುತಿಯು ನೋಡಿದನು.॥೧೬॥ ದ್ರಾಕ್ಷಿ, ದಾಳಿಂಬೆಗಳ ರಸದಿಂದಲೂ, ಕಷಾಯಗಳಿಂದಲೂ, ಹುಳಿಯೇ ಪ್ರಧಾನವಾದ ಹಾಗೂ ಉಪ್ಪು ಪ್ರಧಾನವಾದ ರಸಗಳಿಂದಲೂ ಕೂಡಿದ್ದ ಅನೇಕ ವಿಧವಾದ ಲೇಹ್ಯಗಳನ್ನೂ, ಪಾನೀಯಗಳನ್ನು, ಅನೇಕ

ಹಾರನೂಪುರಕೇಯೂರೈರಪವಿದ್ಧೈರ್ಮಹಾಧನೈಃ ।
ಪಾನಭಾಜನವಿಕ್ಷಿಪ್ತೈಃ ಫಲೈಶ್ಚ ವಿವಿಧೈರಪಿ ॥ ೧೮॥

ಕೃತಪುಷ್ಪೋಪಹಾರಾ ಭೂರಧಿಕಂ ಪುಷ್ಯತಿ ಶ್ರಿಯಂ ।
ತತ್ರ ತತ್ರ ಚ ವಿನ್ಯಸ್ತೈಃ ಸುಶ್ಲಿಷ್ಟೈಃ ಶಯನಾಸನೈಃ ॥ ೧೯॥

ಪಾನಭೂಮಿರ್ವಿನಾ ವಹ್ನಿಂ ಪ್ರದೀಪ್ತೇವೋಪಲಕ್ಷ್ಯತೇ ।
ಬಹುಪ್ರಕಾರೈರ್ವಿವಿಧೈರ್ವರಸಂಸ್ಕಾರಸಂಸ್ಕೃತೈಃ ॥ ೨೦॥

ಮಾಂಸೈಃ ಕುಶಲಸಂಯುಕ್ತೈಃ ಪಾನಭೂಮಿಗತೈಃ ಪೃಥಕ್ ।
ದಿವ್ಯಾಃ ಪ್ರಸನ್ನಾ ವಿವಿಧಾಃ ಸುರಾಃ ಕೃತಸುರಾ ಅಪಿ ॥ ೨೧॥

ಶರ್ಕರಾಸವಮಾಧ್ವೀಕಪುಷ್ಪಾಸವಫಲಾಸವಾಃ ।
ವಾಸಚೂರ್ಣೈಶ್ಚ ವಿವಿಧೈರ್ದೃಷ್ಟಾಸ್ತೈಃ ಪೃಥಕ್ ಪೃಥಕ್ ॥ ೨೨॥

ಸಂತತಾ ಶುಶುಭೇ ಭೂಮಿರ್ಮಾಲ್ಯೈಶ್ಚ ಬಹುಸಂಸ್ಥಿತೈಃ ।
ಹಿರಣ್ಮಯೈಶ್ಚ ವಿವಿಧೈರ್ಭಾಜನೈಃ ಸ್ಫಾಟಿಕೈರಪಿ ॥ ೨೩॥

ಜಾಂಬೂನದಮಯೈಶ್ಚಾನ್ಯೈಃ ಕರಕೈರಭಿಸಂವೃತಾ ।
ರಾಜತೇಷು ಚ ಕುಂಭೇಷುಜಾಂಬೂನದಮಯೇಷು ಚ ॥ ೨೪॥

ಪಾನಶ್ರೇಷ್ಠಂ ತಥಾ ಭೂರಿ ಕಪಿಸ್ತತ್ರ ದದರ್ಶ ಸಃ ।
ಸೋಽ ಪಶ್ಯಚ್ಛಾತಕುಂಭಾನಿ ಶೀಧೋರ್ಮಣಿಮಯಾನಿ ಚ ॥ ೨೫॥

ರಾಜತಾನಿ ಚ ಪೂರ್ಣಾನಿ ಭಾಜನಾನಿ ಮಹಾಕಪಿಃ ।
ಕ್ವಚಿದರ್ಧಾವಶೇಷಾಣಿ ಕ್ವಚಿತ್ ಪೀತಾನಿ ಸರ್ವಶಃ ॥ ೨೬॥

ಕ್ವಚಿನ್ನೈವ ಪ್ರಪೀತಾನಿ ಪಾನಾನಿ ಸ ದದರ್ಶ ಹ ।
ಕ್ವಚಿಧ್ಭಕ್ಷ್ಯಾಂಶ್ಚ ವಿವಿಧಾನ್ ಕ್ವಚಿತ್ ಪಾನಾನಿ ಭಾಗಶಃ ॥ ೨೭॥

ಕ್ವಚಿದನ್ನಾವಶೇಷಾಣಿ ಪಶ್ಯನ್ ವೈ ವಿಚಚಾರ ಹ ।
ಕ್ವಚಿತ್ ಪ್ರಭಿನ್ನಃ ಕರಕೈಃ ಕ್ವಚಿದಾಲೋಲಿತೈರ್ಘಟೈಃ ॥ ೨೮॥

ವಿಧವಾದ ಭಕ್ಷ್ಯಗಳನ್ನು, ರಾಗ-ಖಾಂಡವ (ಭಕ್ಷ್ಯವಿಶೇಷ) ಗಳನ್ನು ಮನುಮಂತನು ನೋಡಿದನು.॥೧೭॥ ಅಲ್ಲಿ-ಇಲ್ಲಿ ಚೆಲ್ಲಾಪಿಲ್ಲಿ ಯಾಗಿ ಬಿದ್ದಿದ್ದ ಅಮೂಲ್ಯ ಹಾರಗಳನ್ನೂ, ಕಾಲಂದುಗೆಗಳನ್ನೂ, ಕೇಯೂರಗಳನ್ನೂ, ವಿವಿಧವಾದ ಫಲರಸಗಳಿಂದ ತುಂಬಿದ ಪಾನಪಾತ್ರೆಗಳನ್ನು ಆ ಮಾರುತಿಯುನೋಡಿದನು.॥೧೮॥ ಅಲಲ್ಲಿ ಸುವ್ಯವಸ್ಥಿತವಾಗಿ ಜೋಡಿಸಲ್ಪಟ್ಟ ಹಂಸತೂಲಿಕಾ ತಲ್ಪಗಳಿಂದಲೂ, ಆಸನಗಳಿಂದಲೂ ಸಂಪನ್ನವಾಗಿದ್ದ ಆ ಪಾನಗೃಹವು ಪುಷ್ಪಬಲಿಯನ್ನು ಅರ್ಪಿಸಿದ ಭೂಮಿಯಂತೆ ಕಾಣುತ್ತಿದ್ದು ಆ ಅರಮನೆಯ ಕಾಂತಿಯನ್ನು ಹೆಚ್ಚಿಸುತ್ತಿತ್ತು.॥೧೯॥ ಆ ಪಾನಭೂಮಿಯು ಅಗ್ನಿಯೇ ಇಲ್ಲದಿದ್ದರೂ ವಿವಿಧ ಜ್ವಾಲೆಗಳಿಂದ ಹೊಳೆಯುತ್ತಿತ್ತು. ಅಲ್ಲಿ ಅನೇಕ ಪ್ರಕಾರದಿಂದ ವಿಧ-ವಿಧವಾದ ಶ್ರೇಷ್ಠವಾದ ಸಂಸ್ಕಾರಗಳಿಂದ ಸಂಸ್ಕೃತವಾಗಿ ಸಿದ್ಧಗೊಳಿಸಿದ ಘಮ-ಘಮಿಸುತ್ತಿರುವ ಚೆನ್ನಾಗಿ ತಯಾರಿಸಿದ ಭಕ್ಷ್ಯಗಳಿದ್ದವು. ಆ ಪಾನಶಲೆಯಲ್ಲಿ ಕುಶಲರಾದ ಪಾಚಕರಿಂದ ಪ್ರತ್ಯೇಕ-ಪ್ರತ್ಯೇಕವಾಗಿ ಸಿದ್ಧಗೊಳಿಸಿದ ಮಾಂಸವು ರಾಶಿ- ರಾಶಿಯಾಗಿ ಬಿದ್ದಿತ್ತು. ಉತ್ತಮವಾದ ರುಚಿಕರವಾದ ವಿಧ-ವಿಧವಾದ ಸಹಜ ಮದ್ಯಗಳನ್ನೂ (ಈಚಲ, ತೆಂಗು, ಮತ್ತು ತಾಳೆಮರಗಳಿಂದ ಭಟ್ಟಿ ಇಳಿಸಿದ ಮದ್ಯಗಳನ್ನು) ವಿಧ-ವಿಧವಾದ ವಾಸನಾಚೂರ್ಣಗಳಿಂದಲೂ, ಸಕ್ಕರೆಯಿಂದಲೂ, ಜೇನುತುಪ್ಪದಿಂದಲೂ, ಪುಷ್ಪರಸಗಳಿಂದಲೂ, ದ್ರಾಕ್ಷಿಯೇ ಮೊದಲಾದ ಫಲಗಳಿಂದ ತಯಾರಿಸಿದ ಕೃತ್ರಿಮವಾದ ಪಾನೀಯಗಳನ್ನು ನೋಡಿದನು.॥೨೦-೨೨॥ ಅಲಂಕಾರಾರ್ಥವಾಗಿ ಅಲ್ಲಲ್ಲಿ ಹಾಕಿದ್ದ ಹೂಮಾಲೆಗಳಿಂದಲೂ, ಸುವರ್ಣ ಕಲಶಗಳಿಂದಲೂ, ಸ್ಫಟಿಕಮಯ ಪಾತ್ರೆಗಳಿಂದಲೂ, ವ್ಯಾಪ್ತವಾದ ಆ ಭೂಮಿಯು ಪ್ರಕಾಶಿಸುತ್ತಿತ್ತು.॥೨೩॥ಸುವರ್ಣಮಯವಾದ ಗಿಂಡಿಗಳಿಂದಲೂ, ಆ ಭೂಮಿಯು ಬಹಳವಾಗಿ ಶೋಭಿಸುತ್ತಿತ್ತು. ಚಿನ್ನ ಮತ್ತು ಬೆಳ್ಳಿಯ ಬಿಂದಿಗೆಗಳಲ್ಲಿ ಶ್ರೇಷ್ಠವಾದ ಪಾನೀಯಗಳನ್ನು ಅಲ್ಲಿ ತುಂಬಿಟ್ಟಿದ್ದರು. ಸುವರ್ಣಮಯವಾದ ಮತ್ತು ಮಣಿಮಯವಾದ ಮದ್ಯದ ಗಡಿಗೆಗಳೂ, ಪಾನಪಾತ್ರೆಗಳೂ ಹೇರಳವಾಗಿದ್ದುದನ್ನು ಕಪೀಶ್ವರನು ನೋಡಿದನು.॥೨೪-೨೫॥

ಕೆಲವು ಕಡೆಗಳಲ್ಲಿ ಬೆಳ್ಳಿ-ಭಂಗಾರದ ಪಾತೆಗಳಲ್ಲಿದ್ದ ಸುರೆಯಲ್ಲಿ ಅರ್ಧಭಾಗವನ್ನು ಮಾತ್ರ ಕುಡಿದು ಉಳಿದ ಅರ್ಧಭಾಗವನ್ನು ಹಾಗೆಯೇ ಉಳಿಸಿದ್ದರು. ಕೆಲವು ಕಡೆಗಳಲ್ಲಿ ಸಂಪೂರ್ಣವಾಗಿ ಕುಡಿದಿದ್ದರು. ಕೆಲವು ಕಡೆಗಳಲ್ಲಿ ಪಾನಪಾತ್ರೆಗಳು ಸುರೆಯಿಂದ ತುಂಬಿದ್ದವು. ಅವೆಲ್ಲವನ್ನು ಹನುಮಂತನು ನೋಡುತ್ತಾ ಹೋದನು. ಪಾನಗೃಹದ ಕೆಲವೆಡೆಗಳಲ್ಲಿ ವಿಧ-ವಿಧವಾದ ಭಕ್ಷ್ಯಗಳನ್ನೂ, ಕೆಲವು ಕಡೆಗಳಲ್ಲಿ ಭಾಗಶಃ ಕುಡಿದು, ಭಾಗಶಃ ಮದ್ಯವಿದ್ದ ಪಾತ್ರೆಗಳನ್ನೂ, ಕೆಲವು ಕಡೆಗಳಲ್ಲಿ ಅರ್ಧಭಾಗದಷ್ಟು ತುಂಬಿದ್ದ ಸುರಾಪಾತ್ರೆಗಳನ್ನೂ ನೋಡುತ್ತಾ ಆ ಕಪಿವರನು ಅಲ್ಲಲ್ಲೇ ಸುತ್ತಾಡಿದನು. ಪಾನಗೃಹಗಳಲ್ಲಿದ್ದ ಅನೇಕ ಹಾಸಿಗೆಗಳು

ಕ್ವಚಿತ್ ಸಂಪೃಕ್ತಮಾಲ್ಯಾನಿ ಮೂಲಾನಿ ಚ ಫಲಾನಿ ಚ।
ಶಯನಾನ್ಯತ್ರ ನಾರೀಣಾಂ ಶುಭ್ರಾಣಿ ಬುಹಧಾ ಪುನಃ ॥ ೨೯॥

ಪರಸ್ಪರಂ ಸಮಾಶ್ಲಿಷ್ಯ ಕಾಶ್ಚಿತ್ ಸುಪ್ತಾ ವರಾಂಗನಾಃ।
ಕಾಚಿಚ್ಚ ವಸ್ತ್ರಮನ್ಯಸ್ಯಾಃ ಸ್ವಪಂತ್ಯಾಃ ಪರಿಧಾಯ ಚ ॥ ೩೦॥

ಆಹೃತ್ಯ ಚಾಬಲಾಃ ಸುಪ್ತಾ ನಿದ್ರಾಬಲಪರಾಜಿತಾಃ।
ತಾಸಾಮುಚ್ಛ್ವಾಸವಾತೇನ ವಸ್ತ್ರಂ ಮಾಲ್ಯಂ ಚ ಗಾತ್ರಜಮ್ ॥ ೩೧॥

ನಾತ್ಯರ್ಥಂ ಸ್ಪಂದತೇ ಚಿತ್ರಂ ಪ್ರಾಸ್ಯ ಮಂದಮಿವಾನಿಲಮ್ ।
ಚಂದನಸ್ಯ ಚ ಶೀತಸ್ಯ ಶೀಧ್ವೋಧುರಸ್ಯ ಚ ॥ ೩೨॥

ವಿವಿಧಸ್ಯ ಚ ಮಾಲ್ಯಸ್ಯ ಧೂಪಸ್ಯ ವಿವಿಧಸ್ಯ ಚ।
ಬಹುಧಾ ಮಾರುತಸ್ತತ್ರ ಗಂಧಂ ವಿವಿಧಮುದ್ವಹನ್ ॥ ೩೩॥

ರಸಾನಾಂ ಚಂದನಾನಾಂ ಚ ಧೂಪಾನಾಂ ಚೈವ ಮೂರ್ಛಿತಃ।
ಪ್ರವವೌ ಸುರಭಿರ್ಗಂಧೋ ವಿಮಾನೇ ಪುಷ್ಪಕೇ ತದಾ ॥ ೩೪॥

ಶ್ಯಾಮಾದಾತಾಸ್ತ್ವನ್ಯಾಃ ಕಾಶ್ಚಿತ್ ಕೃಷ್ಣಾ ವರಾಂಗನಾಃ।
ಕಾಶ್ಚಿತ್ ಕಾಂಚನವರ್ಣಾಂಗ್ಯಃ ಪ್ರಮದಾ ರಾಕ್ಷಸಾಲಯೇ ॥ ೩೫॥

ತಾಸಾಂ ನಿದ್ರಾವಶತ್ವಾಚ್ಚ ಮದನೇನ ಚ ಮೂರ್ಛಿತಮ್ ।
ಪದ್ಮಿನೀನಾಂ ಪ್ರಸುಪ್ತಾನಾಂ ರೂಪಮಾಸೀದ್ಯಥೈವ ಹಿ ॥ ೩೬॥

ಏವಂ ಸರ್ವಮಶೇಷೇಣ ರಾವಣಾಂತಃಪುರಂ ಕಪಿಃ।
ದದರ್ಶ ಸುಮಹಾತೇಜಾ ನ ದದರ್ಶ ಚ ಜಾನಕೀಮ್ ॥ ೩೭॥

ನಿರೀಕ್ಷಮಾಣಶ್ಚ ತದಾ ತಾಃ ಸ್ತ್ರಿಯಃ ಸ ಮಹಾಕಪಿಃ।
ಜಗಾಮ ಮಹತೀಂ ಚಿಂತಾಂ ಧರ್ಮಸಾಧ್ವಸಶಂಕಿತಃ ॥ ೩೮॥

ಪರದಾರಾವರೋಧಸ್ಯ ಪ್ರಸುಪ್ತಸ್ಯ ನಿರೀಕ್ಷಣಮ್ ।
ಇದಂ ಖಲು ಮಮಾತ್ಯರ್ಥಂ ಧರ್ಮಲೋಪಂ ಕರಿಷ್ಯತಿ ॥ ೩೯॥

ನ ಹಿ ಮೇ ಪರದಾರಾಣಾಂ ದೃಷ್ಟಿರ್ವಿಷಯವರ್ತಿನೀ ।
ಅಯಂ ತ್ವತ್ರ ಮಯಾ ದೃಷ್ಟಃ ಪರದಾರಪರಿಗ್ರಹಃ ॥ ೪೦॥

ತಸ್ಯ ಪ್ರಾದುರಭೂಚ್ಚಿಂತಾ ಪುನರನ್ಯಾ ಮನಸ್ವಿನಃ।
ನಿಶ್ಚಿತೈಕಾಂತಚಿತ್ತಸ್ಯ ಕಾರ್ಯನಿಶ್ಚಯದರ್ಶಿನೀ ॥ ೪೧॥

ಬರಿದ್ದಾಗಿದ್ದವು. ಏಕೆಂದರೆ ಶ್ರೇಷ್ಠರಾದ ಕೆಲವು ಸ್ತ್ರೀಯರು ತಮ್ಮ ಹಾಸಿಗೆಗಳನ್ನು ಬಿಟ್ಟು ಇತರ ಸ್ತ್ರೀಯರನ್ನು ಗಾಢವಾಗಿ ಆಲಿಂಗಿಸಿಕೊಂಡು ಮಲಗಿದ್ದರು.॥೨೬-೨೯॥

ನಿದ್ರಾದೇವಿಯ ಬಲದಿಂದ ಪರಾಜಿತಳಾದ ಓರ್ವ ನಾರೀ ಮಣಿಯು, ಮಲಗಿದ್ದ ಮತ್ತೊಬ್ಬ ನಾರಿಯ ವಸ್ತ್ರವನ್ನು ಎಳೆದು ಕೊಂಡು ಅದನ್ನೇ ಹೊದ್ದುಕೊಂಡು ಮಲಗಿದ್ದಳು.॥೩೦॥ ಆ ವರನಾರಿಯರ ಉಚ್ಛ್ವಾಸದ ಗಾಳಿಯಿಂದ ಅವರ ಶರೀರದಲ್ಲಿದ್ದ ಚಿತ್ರಿತ ವಸ್ತ್ರಗಳೂ, ವಿಚಿತ್ರವಾದ ಮಾಲೆಗಳೂ ಸ್ವಲ್ಪವೇ ಕದಲುತ್ತಿದ್ದವು.॥೩೧॥

ಉಚ್ಛ್ವಾಸದ ಗಾಳಿಗಳು ಮಂದಮಾರುತದಂತೆ ಹಿತಕರ ವಾಗಿದ್ದವು. ಆ ಗಾಳಿಯು ಶೀತಲ ಚಂದನ, ಮದ್ಯ, ಮಧುರರಸ, ವಿಧ-ವಿಧವಾದ ಪುಷ್ಪಗಳೂ, ವಿಧ-ವಿಧವಾದ ಮಾಲೆಗಳೂ,ಷಡ್ರಸಗಳೂ, ಚಂದನಗಳೂ, ಧೂಪಗಳೂ ಮುಂತಾದ ವಾಸನೆಯನ್ನು ಹೊತ್ತು ಪುಷ್ಪಕವಿಮಾನವನ್ನು ಪರಿಮಳಭರಿತವನ್ನಾಗಿಸುತ್ತಿತ್ತು.ರಾಕ್ಷಸನ ಆ ಆರಮನೆಯಲ್ಲಿ ಶ್ಯಾಮಲವರ್ಣದ, ಶ್ವೇತವರ್ಣದ, ಕೃಷ್ಣವರ್ಣದ, ಹೊಂಬಣ್ಣದ ಅನೇಕ ಪ್ರಮದೆಯರು ಇದ್ದರು. ಅವರೆಲ್ಲರೂ ನಿದ್ರಾವಶರಾಗಿದ್ದುದರಿಂದಲೂ, ರತಿಕ್ರೀಡೆಯಿಂದ ಆಯಾಸ ಗೊಂಡಿದ್ದರಿಂದಲೂ, ಅವರ ರೂಪವು ಮುಕುಳಿತವಾದ ಕಮಲಗಳಂತೆ ಕಾಣುತ್ತಿತ್ತು. ಹೀಗೆ ಮಹಾತೇಜಸ್ವಿಯಾದ ಕಪಿವರನಾದ ಮಾರುತಿಯು ರಾವಣನ ಆಂತಃಪುರದಲ್ಲಿ ಯಾವುದನ್ನು ಬಿಡದೇ ಎಲ್ಲವನ್ನು ನೋಡಿದನು. ಆದರೆ ಸೀತೆದೇವಿಯನ್ನು ಮಾತ್ರ ಅವನು ಕಾಣಲಿಲ್ಲ.॥೩೨-೩೭॥

ರಾವಣಾಂತಃಪುರದಲ್ಲಿ ಆ ಸ್ತ್ರೀಯರನ್ನು ನೋಡಿದ ಕಪಿವರನು 'ಇದರಿಂದಾಗಿ ಧರ್ಮಲೋಪವಾಗಿಲ್ಲವಲ್ಲ!' ಎಂದು ಯೋಚಿಸುತ್ತಾ ತೀವ್ರವಾದ ಸಂದೇಹದಲ್ಲಿ ಬಿದ್ದನು. ಅಂತಃಪುರದಲ್ಲಿ ಗಾಢನಿದ್ರೆಯಲ್ಲಿ ಮಲಗಿದ್ದ ಪರಸ್ತ್ರೀಯರನ್ನು ಈರೀತಿ ನೋಡಿದನು. ಆದರಿಂದಾಗಿ ನನ್ನ ಬ್ರಹ್ಮಚರ್ಯೆ ನಿಷ್ಠೆಯಲ್ಲಿ ಲೋಪಉಂಟಾಗಿಲ್ಲವಲ್ಲ! ಆದರೆ ಪರಸತಿಯರ ವಿಷಯದಲ್ಲಿ ನನಗೆ ಎಂದೂ ವಿಷಯವಾಸನಾ ದೃಷ್ಟಿಯೇ ಇರಲಿಲ್ಲ. ಈ ಪರಸ್ತ್ರೀಯರನ್ನು ನಾನು ವಿಷಯಾಸಕ್ತಿಯಿಂದ ನೋಡಿಲ್ಲ. ಆದರಿಂದ ಧರ್ಮಲೋಪವಾಗುವುದಿಲ್ಲ. ಆದರೆ ಪರಸ್ತ್ರೀಯರ ಅಪಹಾರಕನಾದ ಈ ದುಷ್ಟ ರಾವಣನು ನನಗೆ ಕಂಡುಬಂದನು.॥೨೮-೩೯॥

ಮನನಶೀಲನಾದ, ನಿಯತವಾದ ಮನಸ್ಸುಳ್ಳ ಹನುಮಂತನು ನಿಶ್ಚಯಿಸಿಕೊಂಡ ಲಕ್ಷ್ಯದಿಂದ, ಏಕಾಗ್ರವಾದ ಚಿತ್ತವು ಕದಲಲಾರದು. ಮನಸ್ಸಿನಲ್ಲಿದ್ದ ಕರ್ತವ್ಯವನ್ನು ನಿಶ್ಚಯಿಸಿದ್ದ ಆ ಮಾರುತಿಯು ಹೀಗೆ ಯೋಚಿಸಿದನು-॥೪೦॥

''ಪರಪುರುಷರು ನೋಡಲಾರರೆಂಬ ದೃಢ ವಿಶ್ವಾಸದಿಂದ ಮಲಗಿದ್ದ ರಾವಣನ ಪತ್ನೀಯರನ್ನು ನಿಃಶಂಕಭಾವದಿಂದ ನಾನು ಚೆನ್ನಾಗಿ ನೋಡಿದೆ. ಆದರೆ ಅಸ್ವಸ್ಥಸ್ವಾದ ಸ್ಥಿತಿಯಲ್ಲಿದ್ದ ಇವರನ್ನು ನೋಡಿಯೂ ನನ್ನ ಮನಸ್ಸಿನಲ್ಲಿ ಸ್ವಲ್ಪವೂ ವಿಕಾರ

ಕಾಮಂ ಧೃಷ್ಟಾ ಮಯಾ ಸರ್ವಾ ವಿಶ್ರಾವ್ಯಾ ರಾವಣಸ್ತ್ರಿಯಃ ।
ನ ಹಿ ಮೇ ಮನಸಃ ಕಿಂಚಿದ್ವೈಕೃತ್ಯಮುಪಪದ್ಯತೇ ॥ ೪೨॥

ಮನೋ ಹಿ ಹೇತುಃ ಸರ್ವೇಷಾಮಿಂದ್ರಿಯಾಣಾಂ ಪ್ರವರ್ತನೇ ।
ಶುಭಾಶುಭಾಸ್ವವಸ್ಥಾಸು ತಚ್ಚ ಮೇ ಸುವ್ಯವಸ್ಥಿತಮ್ ॥ ೪೩॥

ನಾನ್ಯತ್ರ ಚ ಮಯಾ ತಕ್ಷ್ಯಾ ವೈದೇಹೀ ಪರಿಮಾರ್ಗಿತುಮ್ ।
ಸ್ತ್ರಿಯೋ ಹಿ ಸ್ತ್ರಿಷು ದೃಶ್ಯಂತೇ ಸರ್ವಥಾ ಪರಿಮಾರ್ಗಣೇ ॥ ೪೪॥

ಯಸ್ಯ ಸತ್ತ್ವಸ್ಯ ಯಾ ಯೋನಿಸ್ತಸ್ಯಾಂ ತತ್ ಪರಿಮೃಗ್ಯತೇ ।
ನ ಶಕ್ಯಾ ಪ್ರಮದಾ ನಷ್ಟಾ ಮೃಗೀಷು ಪರಿಮಾರ್ಗಿತುಮ್ ॥ ೪೫॥

ತದಿದಂ ಮಾರ್ಗಿತಂ ತಾವಚ್ಛುದ್ಧೇನ ಮನಸಾ ಮಯಾ ।
ರಾವಣಾಂತಃಪುರಂ ಸರ್ವಂ ದೃಶ್ಯತೇ ನ ಚ ಜಾನಕೀ ॥ ೪೬॥

ದೇವಗಂಧರ್ವ ಕನ್ಯಾಶ್ಚ ನಾಗಕನ್ಯಾಶ್ಚ ವೀರ್ಯವಾನ್ ।
ಅವೇಕ್ಷಮಾಣೋ ಹನುಮಾನ್ನೈವಾಪಶ್ಯತ ಜಾನಕೀಮ್ ॥ ೪೭॥

ತಾಮಪಶ್ಯನ್ ಕಪಿಸ್ತತ್ರ ಪಶ್ಯಂಶ್ಚಾನ್ಯಾ ವರಸ್ತ್ರಿಯಃ ।
ಅಪಕ್ರಮ್ಯ ತದಾ ವೀರಃ ಪ್ರಧ್ಯಾತುಮುಪಚಕ್ರಮೇ ॥ ೪೮॥

ಸ ಧೂಯಸ್ತು ಪರಂ ಶ್ರೀಮಾನ್ ಮಾರುತಿರ್ಯತ್ನ ಮಾಸ್ಥಿತಃ ।
ಅಹಾನಭೂಮಿಮುತ್ಸೃಜ್ಯ ತಾಂ ವಿಚೇತುಂ ಪ್ರಚಕ್ರಮೇ ॥ ೪೯॥

ಭಾವವು ಉಂಟಾಗಲಿಲ್ಲ.॥೪೧॥ ಪಾಪ-ಪುಣ್ಯಗಳ ಕರ್ಮಗಳಲ್ಲಿ ಇಂದ್ರಿಯಗಳು ಪ್ರವರ್ತಿಸಬೇಕಾದರೆ ಮನಸ್ಸೇ ಮುಖ್ಯ ಕಾರಣವಾಗುತ್ತದೆ. ಮನಸ್ಸಿನ ಮೂಲಕವೇ ಇಂದ್ರಿಯಗಳು ಶುಭ-ಅಶುಭ ಕರ್ಮಗಳಲ್ಲಿ ತೊಡಗುತ್ತವೆ. ಈ ವಿಷಯದಲ್ಲಿ ನನ್ನ ಮನಸ್ಸು ಸುವ್ಯವಸ್ಥಿತವಾಗಿದೆ, ಧರ್ಮಮಾರ್ಗದಲ್ಲಿ ಸ್ಥಿರವಾಗಿದೆ. ಇಂದ್ರಿಯಗಳನ್ನು ಪಾಪಕರ್ಮಗಳಿಗೆ ಪ್ರಚೋದಿಸುತ್ತಿಲ್ಲ.॥೪೨॥

ಸ್ತ್ರೀಯರ ಸಮೂಹವಲ್ಲದೆ ಬೇರೆ ಸ್ಥಳಗಳಲ್ಲಿ ಸೀತೆಯನ್ನು ಹುಡುಕುವ ಅಥವಾ ಕಾಣುವ ಸಾಧ್ಯತೆಯಿಲ್ಲ. ಏಕೆಂದರೆ ಸ್ತ್ರೀಯರ ಮಧ್ಯದಲ್ಲಿಯೇ ಜಾನಕಿಯು ಇರುವ ಸಂಭವವಿದೆ. ಸ್ತ್ರೀಯರನ್ನು ಹುಡುಕಬೇಕಾದರೆ ಸ್ತ್ರೀಯರ ಸಮೂಹದಲ್ಲೇ ಹುಡುಕಬೇಕು. ಸಾಮಾನ್ಯವಾಗಿ ಅವರು ಅಲ್ಲೇ ಇರುತ್ತಾರೆ.॥೪೩.।

ತಪ್ಪಿಸಿಕೊಂಡ ಪ್ರಾಣಿಯನ್ನು ಆ ಜಾತಿಯ ಪ್ರಾಣಿಗಳಲ್ಲಿಯೇ ಹುಡುಕಬೇಕು. ಆದುದರಿಂದ ಕಳೆದುಹೋಗಿರುವ ಸ್ತ್ರೀಯನ್ನು ಜಿಂಕೆಗಳ ಹಿಂಡಿನಲ್ಲಿ ಹುಡುಕುವುದಕ್ಕಾಗುವುದಿಲ್ಲ, ಸ್ತ್ರೀಯರ ಮಧ್ಯದಲ್ಲೇ ಹುಡುಕಬೇಕು.॥೪೪॥ ಈ ಕಾರಣದಿಂದಲೇ ನಾನು ಶುದ್ಧವಾದ ಮನಸ್ಸಿನಿಂದ ರಾವಣನ ಅಂತಃಪುರದಲ್ಲಿ ಸ್ತ್ರೀಯರ ಮಧ್ಯದಲ್ಲೇ ಸೀತಾದೇವಿಯು ಇರಬಹುದೆಂದು ಹುಡುಕಿದೆನು. ಆದರೆ ಅವಳು ಮಾತ್ರ ಇಲ್ಲಿ ಕಂಡುಬರಲಿಲ್ಲ.''॥೪೬॥

ಹೀಗೆ ಸ್ತ್ರೀಯರ ಮಧ್ಯದಲ್ಲಿ ಸೀತಾನ್ವೇಷಣೆಯನ್ನು ಸಮರ್ಥಿಸಿಕೊಂಡ ಪರಾಕ್ರಮಶಾಲಿಯಾದ ಹನುಮಂತನು ಪುನಃ ದೇವ-ಗಂಧರ್ವ- ನಾಗಕನ್ಯೆಯರ ಮಧ್ಯದಲ್ಲಿ ಜಾನಕಿಯನ್ನು ಹುಡುಕಿದನು. ಆದರೆ ಅಲ್ಲಿಯೂ ಆವಳನ್ನು ಕಾಣಲಾಗಲಿಲ್ಲ.॥೪೭॥ವೀರನಾದ ಹನುಮಂತನು ಅಲ್ಲೆಲ್ಲೂ ಸೀತಾದೇವಿಯನ್ನು ಕಾಣದೆ, ಇತರ ಶ್ರೇಷ್ಠರಾದ ಸ್ತ್ರೀಯರನ್ನೇ ಅನುಲಕ್ಷಿಸುತ್ತಾ ನಿರಾಶನಾಗಿ ಅಲ್ಲಿಂದ ಹೊರಡಲನುವಾದನು. ಸರ್ವಶುಭಲಕ್ಷಣಗಳಿಂದ ಕೂಡಿದ್ದ ಮಾರುತಿಯು ಆ ಪಾನ ಭೂಮಿಯಿಂದ ನಿರ್ಗಮಿಸಿ, ತನ್ನ ಪ್ರಯತ್ನದಲ್ಲಿ ಕೃತನಿಶ್ಚಯವುಳ್ಳವನು ಪುನಃ ಆ ರಾವಣಾಂತಃಪುರದಲ್ಲಿ ಸೀತಾದೇವಿಯನ್ನು ಹುಡುಕುತ್ತಾ ಸಾಗಿದನು.॥೪೮-೪೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಏಕಾದಶಃ ಸರ್ಗಃ ॥ ೧೧ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹನ್ನೊಂದನೆಯ ಸರ್ಗವು ಮುಗಿಯಿತು.

* * *

ಹನ್ನೆರಡನೆಯ ಸರ್ಗ

ಸೀತಾದೇವಿಯು ಮರಣ ಹೊಂದಿರಬಹುದೆಂದು ಶಂಕಿಸಿ ಮನುಮಂತನು ದುಃಖಿತನಾದುದು, ಪುನಃ ಉತ್ಸಾಹದಿಂದ ಹುಡುಕಲು ಹೊರಟ್ಟದ್ದು, ಎಷ್ಟು ಹುಡುಕಿದರೂ ಸೀತೆಯು ದೊರಕದಿರಲು ಪುನಃ ಚಿಂತಾಮಗ್ನನಾದುದು –

ಸ ತಸ್ಯ ಮಧ್ಯೇ ಭವನಸ್ಯ ಮಾರುತಿಃ
ಲತಾಗೃಹಾಂಶ್ಚಿತ್ರಗೃಹಾನ್ಸಿ ಶಾಗೃಹಾನ್ ।
ಜಗಾಮ ಸೀತಾಮ್ಪ್ರತಿ ದರ್ಶನೋತ್ಸುಕೋ
ನ ಚೈವ ತಾಂ ಪಶ್ಯತಿ ಚಾರುದರ್ಶನಾಮ್ ॥ ೧॥

ಸ ಚಿಂತಯಾಮಾಸ ತತೋ ಮಹಾಕಪಿಃ
ಪ್ರಿಯಾಮಪಶ್ಯನ್ ರಘುನಂದನಸ್ಯ ತಾಮ್ ।
ಧ್ರುವಂ ನ ಸೀತಾ ಧ್ರಿಯತೇ ಯಥಾ ನ ಮೇ
ವಿಚಿನ್ವತೋ ದರ್ಶನಮೇತಿ ಮೈಥಿಲೀ ॥ ೨॥

ಸಾ ರಾಕ್ಷಸಾನಾಂ ಪ್ರವರೇಣ ಜಾನಕೀ
ಸ್ವಶೀಲಸಂರಕ್ಷಣತತ್ಪರಾ ಸತೀ ।
ಅನೇನ ನೂನಂ ಪ್ರತಿದುಷ್ಕರ್ಮಣಾ
ಹತಾ ಭವೇದಾರ್ಯಜನಪ್ರಿಯೇ ವರೇ ಸ್ಥಿತಾ ॥ ೩॥

ವಿರೂಪರೂಪಾ ವಿಕೃತಾ ವಿದರ್ಚಸೋ
ಮಹಾನನಾ ದೀರ್ಘವಿರೂಪದರ್ಶನಾಃ ।
ಸಮೀಕ್ಷ್ಯ ಸಾ ರಾಕ್ಷಸರಾಜಯೋಷಿತೋ
ಭಯಾದ್ವಿನಷ್ಟಾ ಜನಕೇಶ್ವರಾತ್ಮಜಾ ॥ ೪॥

ಸೀತಾಮದೃಷ್ಟ್ವಾ ಹ್ಯನವಾಪ್ಯ ಪೌರುಷಂ
ವಿಷೃಜ್ಯ ಕಾಲಂ ಸಹ ವಾನರೈಶ್ಚಿರಮ್ ।
ನಮೋಽಸ್ತು ಸುಗ್ರೀವಸಮಾಶ್ರಯಾಯ ತತ್
ಸುತೀಕ್ಷ್ಣದಂಡೋ ಬಲವಾಂಶ್ಚ ವಾನರಃ ॥ ೫॥

ದೃಷ್ಟಮಂತಃಪುರಂ ಸರ್ವಂ ದೃಷ್ಟಾ ರಾವಣಯೋಷಿತಃ ।
ನ ಸೀತಾ ದೃಶ್ಯತೇ ಸಾಧ್ವೀ ವೃಥಾಜಾತೋ ಮಮಶ್ರಮಃ॥ ೬॥

ಕಿಂ ನು ಮಾಂ ವಾನರಾಃ ಸರ್ವೇ ಗತಂ ವಕ್ಷ್ಯಂತಿ ಸಂಗತಾಃ ।
ಗತ್ವಾ ತತ್ರ ತ್ವಯಾ ವೀರ ಕಿಂ ಕೃತಂ ತದ್ವದಸ್ವನಃ॥ ೭॥

ಸೀತಾದೇವಿಯನ್ನು ನೋಡುವ ಉತ್ಸಾಹದಿಂದ ಕೂಡಿದ್ದ ಹನುಮಂತನು ರಾವಣನ ಅರಮನೆಯ ಮಧ್ಯಭಾಗದಲ್ಲಿದ್ದ ಲತಾಗೃಹಗಳನ್ನು, ಚಿತ್ರಗೃಹಗಳನ್ನು, ರಾತ್ರಿಗಳನ್ನು ಕಳೆಯುವ ವಿಹಾರಗೃಹಗಳನ್ನು ಹುಡುಕಿದನು. ಆದರೆ ಕಡು ಚೆಲುವೆಯಾದ ಪೈದೇಹಿಯನ್ನು ಎಲ್ಲೆಲ್ಲೂ ಕಾಣಲಿಲ್ಲ.॥೧॥

ಮಹಾಕಪಿಯಾದ ಆಂಜನೇಯನು ರಘುನಂದನನಾದ ಶ್ರೀರಾಮನ ಭಾರ್ಯೆಯಾದ ಸೀತಾದೇವಿಯನ್ನು ಕಾಣದೆ ಇಂತು ಚಿಂತಿಸಿದನು–"ಎಲ್ಲ ಕಡೆಗಳಲ್ಲಿ ಹುಡುಕಿದರೂ ಕಣ್ಣಿಗೆ ಕಾಣದಿರುವುದರಿಂದ ಸೀತಾದೇವಿಯು ನಿಶ್ಚಯವಾಗಿ ಪ್ರಾಣಗಳನ್ನು ತೊರೆದಿರಬಹುದೇ?॥೨॥ ಆರ್ಯರ ಶ್ರೇಷ್ಠವಾದ ಮಾರ್ಗವನ್ನೇ ಅನುಸರಿಸುತ್ತಿದ್ದ ಅವಳು ತನ್ನ ಶೀಲದ ಸಂರಕ್ಷಣೆಯಲ್ಲೇ ನಿರತಳಾಗಿದ್ದ ಕಾರಣ ರಾಕ್ಷಸಶ್ರೇಷ್ಠನಾದ ದುಷ್ಕರ್ಮಿಯಾದ ಈ ರಾವಣನಿಂದ ಪತಿವ್ರತೆಯಾದ ಜಾನಕಿಯು ವಧಿಸಲ್ಪಟ್ಟರಲೂ ಬಹುದು.॥೩॥ ರಾವಣನ ದಾಸಿಯರಾದ ರಾಕ್ಷಸಿಯರು ವಿಕಾರ ರೂಪವುಳ್ಳವರು. ಭಯಂಕರ ಆಕಾರವುಳ್ಳವರೂ, ವಿಶಾಲವಾದ ಮುಖವುಳ್ಳವರೂ, ದೀರ್ಘವಾಗಿಯೂ, ವಿಕಾರವಾಗಿಯೂ, ಕಣ್ಣುಗಳುಳ್ಳವರು. ಇಂತಹ ಭಯಂಕರ ರೂಪಿಣಿಯರಾದ ಕಾಂತಿಹೀನ ರಾಕ್ಷಸಿಯರನ್ನು ನೋಡಿ, ಭಯವಿಹ್ವಲಳಾದ ಜನಕನಂದಿನಿಯು ಕಣ್ಮರೆಯಾಗಿರಲೂ ಬಹುದು.॥೪॥

ಅಂಗದಾದಿ ವಾನರರೊಡನೆ ಬಹಳ ಕಾಲದವರೆಗೆ ಅಲೆದಾಡಿ, ಸೀತೆಯನ್ನು ಹುಡುಕಲು ಇಲ್ಲಿಗೆ ಬಂದರೂಅವಳನ್ನು ಇದುವರೆಗೂ ಕಾಣಲಾಗಲಿಲ್ಲ. ಎಲ್ಲ ಪುರುಷ ಪ್ರಯತ್ನಗಳೂ ನಿಷ್ಫಲವಾದುವು. ಆದುದರಿಂದ ಸುಗ್ರೀವನ ಬಳಿಗೆ ಹೋಗುವ ಮಾರ್ಗವು ನನಗಾಗಿ ಮುಚ್ಚಿಹೋಗಿದೆ. ಏಕೆಂದರೆ, ಬಲಿಷ್ಠನಾದ ಸುಗ್ರೀವನು ಅಪರಾಧವನ್ನು ಮಾಡಿದವರಿಗೆ ತೀಕ್ಷ್ಣವಾದ ದಂಡನೆಯನ್ನು ವಿಧಿಸುವನು.॥೫॥ ರಾವಣನ ಅಂತಃಪುರದ ಎಲ್ಲ ಸ್ಥಳಗಳನ್ನು ನೋಡಿಯಾಯಿತು. ರಾಕ್ಷಸೇಶ್ವರನ ಪತ್ನೀಯರ ಮಧ್ಯದಲ್ಲಿ ಹುಡುಕಿದ್ದಾಯಿತು. ಆದರೆ ಸಾಧ್ವಿಯಾದ ಸೀತಾದೇವಿಯು ಎಲ್ಲೆಲ್ಲೂ ಕಾಣಲಿಲ್ಲ. ಇದರಿಂದಾಗಿ ಸಮುದ್ರವನ್ನು ಹಾರಿಕೊಂಡು ಇಲ್ಲಿಗೆ ಬಂದ ನನ್ನ ಪ್ರಯತ್ನವೆಲ್ಲ ನಿರರ್ಥಕವಾಯಿತಲ್ಲ.॥೬॥ ನಾನೇನಾದರೂ ಈಗ ಹಿಂದಕ್ಕೆ ಹೋದರೆ ವಾನರರೆಲ್ಲರೂ ಸುತ್ತಲೂಸೇರಿ ನನ್ನನ್ನು ಪ್ರಶ್ನಿಸಲಿಕ್ಕಿಲ್ಲವೇ? 'ವೀರನೇ! ನೀನು ಲಂಕೆಗೆ ಹೋಗಿ ಅಲ್ಲೇನುಮಾಡಿ ಬಂದೆ? ಎಂದು ಹೇಳು' ಮುಂತಾಗಿ

ಅದೃಷ್ಟ್ವಾ ಕಿಂ ಪ್ರವಕ್ಷ್ಯಾಮಿ ತಾಮಹಂ ಜನಕಾತ್ಮಜಮ್ ।
ಧ್ರುವಂ ಪ್ರಾಯಮುಪೈಷ್ಯಂತಿ ಕಾಲಸ್ಯ ವ್ಯತಿವರ್ತನೇ ॥ ೮॥

ಕಿಂ ವಾ ವಕ್ಷ್ಯತಿ ವೃದ್ಧಶ್ಚ ಜಾಂಬವಾನಂಗದಶ್ಚ ಸಃ ।
ಗತಂ ಪಾರಂ ಸಮುದ್ರಸ್ಯ ವಾನರಾಶ್ಚ ಸಮಾಗತಾಃ ॥ ೯॥

ಅನಿರ್ದೇಶಃ ಶ್ರಿಯೋ ಮೂಲಮನಿರ್ದೇಶಃ ಪರಂಸುಖಮ್ ।
ಭೂಯಸ್ತತ್ರ ವಿಚೇಷ್ಯಾಮಿ ನ ಯತ್ರ ವಿಚಯಃ ಕೃತಃ ॥ ೧೦॥

ಅನಿರ್ದೇಶೋ ಹಿ ಸತತಂ ಸರ್ವಾರ್ಥೇಷು ಪ್ರವರ್ತಕಃ ।
ಕರೋತಿ ಸಫಲಂ ಜಂತೋಃ ಕರ್ಮ ಯತ್ತತ್ ಕರೋತಿ ಸಃ ॥ ೧೧॥

ತನ್ನಾನಿರ್ದೇಶಕರಂ ಯತ್ನಂ ಚೇಷ್ಯೇಽಹಮುತ್ತಮಮ್ ।
ಅದೃಷ್ಟಾಸ್ತ್ರ ವಿಚೇಷ್ಯಾಮಿ ದೇಶಾನ್ ರಾವಣಪಾಲಿತಾನ್ ॥ ೧೨॥

ಆಪಾನಶಾಲಾ ವಿಚಿತಾಸ್ತಥಾ ಪುಷ್ಪಗೃಹಾಣಿ ಚ ।
ಚಿತ್ರಶಾಲಾಶ್ಚ ವಿಚಿತಾ ಭೂಯಃ ಕ್ರೀಡಾಗೃಹಾಣಿ ಚ ॥ ೧೩॥

ನಿಷ್ಕುಟಾಂತರರಥ್ಯಾಶ್ಚ ವಿಮಾನಾನಿ ಚ ಸರ್ವಶಃ ।
ಇತಿ ಸಂಚಿಂತ್ಯ ಭೂಯೋಽಪಿ ವಿಚೇತುಮುಪಚಕ್ರಮೇ ॥ ೧೪॥

ಭೂಮಿಗೃಹಾಂಶ್ಚೈತ್ಯಗೃಹಾನ್ ಗೃಹಾತಿಗೃಹಕಾನಪಿ ।
ಉತ್ಪತನ್ನಿಷ್ಪತಂಶ್ಚಾಪಿ ತಿಷ್ಠನ್ ಗಚ್ಛನ್ ಪುನಃ ಪುನಃ ॥ ೧೫॥

ಆಪಾವೃಣ್ವಂಶ್ಚ ದ್ವಾರಾಣಿ ಕಪಾಟಾನ್ಯವಘಾಟಯನ್ ।
ಪ್ರವಿಶನ್ನಿಷ್ಪತಂಶ್ಚಾಪಿ ಪ್ಲವತನ್ಪುತ್ಲತನ್ನಪಿ ॥ ೧೬॥

ಸರ್ವಮಪ್ಯವಕಾಶಂ ಸ ವಿಚಚಾರ ಮಹಾಕಪಿಃ ।
ಚತುರಂಗುಲಮಾತ್ರೋಽಪಿ ನಾವಕಾಶಃ ಸ ವಿದ್ಯತೇ ॥ ೧೭॥

ಪ್ರಶ್ನಿಸುವರು.॥೭॥ ಜಾನಕಿಯನ್ನು ಕಾಣದಿರುವ ನಾನು ಅವರಿಗೆ ಏನೆಂದು ಸಮಾಧಾನ ಹೇಳಲೀ? ಮೇಲಾಗಿ ಸುಗ್ರೀವನು ಇತ್ತಿರುವ ಗಡುವು ಮೀರಿಹೋಗುತ್ತಿದೆ. ಆದರಿಂದ ಅವರೆಲ್ಲರೂ ಪ್ರಾಯೋಪವೇಶವನ್ನೇ ಮಾಡುವರು.॥೮॥ ನಾನು ಸಮುದ್ರದ ಉತ್ತರ ತೀರವನ್ನು ತಲುಪಿದೊಡನೆ ನನ್ನೊಡನೆ ಬಂದ ವೃದ್ಧರಾದ ಜಾಂಬವಂತರು ಏನನ್ನುತ್ತಾರೋ! ಅಂಗದನು ಏನನ್ನುವನೋ? ಉಳಿದ ಕಪಿಗಳು ಏನೆಂದು ಹೇಳುವರು? ನನ್ನನ್ನು ಖಂಡಿತವಾಗಿ ಧಿಕ್ಕರಿಸುವರು. ಆದುದರಿಂದ ನಾನು ಕೃತಕೃತ್ಯನಾಗದೆ ಹಿಂದಿರುಗುವಂತೆಯೇ ಇಲ್ಲ.॥೯॥

ಕಳವಳಗೊಳ್ಳದೆ ಉತ್ಸಾಹಶೀಲನಾಗುವುದೇ ಶ್ರೇಯಸ್ಸಾಧನೆಗೆ ಮೂಲ. ಅದೇ ಪರಮ ಸುಖವನ್ನು ಕೊಡುತ್ತದೆ. ಆದುದರಿಂದ ನಾನು ಇದುವರೆಗೆ ಸೀತೆಯನ್ನು ಹುಡುಕದೇ ಇರುವ ಪ್ರದೇಶಗಳನ್ನು ಪುನಃ ಹುಡುಕುತ್ತೇನೆ.॥೧೦॥

ಉತ್ಸಾಹವೆಂಬುದೇ ಮನುಷ್ಯನನ್ನು ಯಾವಾಗಲೂ ಎಲ್ಲ ಕರ್ತವ್ಯಗಳಲ್ಲಿ ಪ್ರವರ್ತಿಸುತ್ತದೆ. ಪ್ರಯತ್ನದಲ್ಲಿ ನಿರಾಶನಾಗದೆ ಇರುವ ಮನುಷ್ಯನೇ ಪ್ರಾರಂಭಿಸಿದ ಕಾರ್ಯವನ್ನು ಸಫಲಗೊಳಿಸುತ್ತಾನೆ.॥೧೧॥

ಆದುದರಿಂದ ಪ್ರಯತ್ನದಲ್ಲಿ ನಿರಾಶನಾಗದೆ ಉತ್ಸಾಹದಿಂದ ಚೆನ್ನಾದ ಪ್ರಯತ್ನವನ್ನು ಮುಂದರಿಸುತ್ತೇನೆ. ರಾವಣನಿಂದ ಪಾಲಿಸಲ್ಪಟ್ಟ, ಇದುವರೆವಿಗೂ ಹುಡುಕದೇ ಇರುವ ಸ್ಥಳಗಳಲ್ಲಿ ಪುನಃ ಸೀತೆಯನ್ನು ಹುಡುಕುತ್ತೇನೆ.॥೧೨॥ ನಾನಿದುವರೆಗೆ ಪಾನಶಾಲೆಗಳಲ್ಲಿ, ಪುಷ್ಪಗೃಹಗಳಲ್ಲಿ, ಚಿತ್ರಶಾಲೆಗಳಲ್ಲಿ, ಕ್ರೀಡಾಗೃಹಗಳಲ್ಲಿ ಅರಮನೆಯ ಕೈದೋಟಗಳಲ್ಲಿ, ಓಣಿಗಳಲ್ಲಿ, ಪುಷ್ಪಕವೇ ಮೊದಲಾದ ವಿಮಾನಗಳಲ್ಲಿ ಅರಮನೆಯ ಎಲ್ಲೆಡೆಗಳಲ್ಲೂ ಹುಡುಕಿದೆ.ಮುಂದೆ ಇವುಗಳನ್ನು ಬಿಟ್ಟು ಬೇರೆಡೆಗಳಲ್ಲಿ ಹುಡುಕುತ್ತೇನೆ. ಎಂದು ನಿಶ್ಚಯಿಸಿ ಪುನಃ ಹುಡುಕಲು ಪ್ರಾರಂಭಿಸಿದನು.॥೧೩-೧೪॥

ನೆಲಮಾಳಿಗೆಗಳಲ್ಲಿಯೂ, ದೇವಾಲಯಗಳಲ್ಲಿಯೂ, ಮಂಟಪಗಳಲ್ಲಿಯೂ, ಮನೆಗಳಿಗೆ ಸ್ವಲ್ಪ ದೂರದಲ್ಲಿ ಸ್ವೀಚ್ಛಾ ವಿಹಾರ್ಥವಾಗಿ ನಿರ್ಮಿಸಿದ ಮನೆಗಳಲ್ಲಿಯೂ, ಪುನಃ-ಪುನಃ ಸೀತಾದೇವಿಯನ್ನು ಹುಡುಕತೊಡಗಿದನು. ಹಾಗೆ ಹೋಗುತ್ತಿರು ವಾಗ ಹನುಮಂತನು ಒಮ್ಮೆ ನೆಗೆಯುತ್ತಾ, ಮತ್ತೊಮ್ಮೆ ಮೇಲಿನಿಂದ ಕೆಳಕ್ಕೆ ಧುಮುಕುತ್ತಾ, ಮಗದೊಮ್ಮೆ ಒಂದೆಡೆಯಲ್ಲಿ ನಿಂತು ನೋಡುತ್ತಿದ್ದನು. ಅನಂತರ ಪುನಃ ಮುಂದಕ್ಕೆ ಹೋಗು ತ್ತಿದ್ದನು. ಮನೆಗಳ ಬಾಗಿಲುಗಳನ್ನು ತೆರೆಯುತ್ತಾ, ಚಿಕ್ಕ-ಚಿಕ್ಕ ಬಾಗಿಲುಗಳನ್ನು ತಟ್ಟುತ್ತಾ, ಒಮ್ಮೆ ಮನೆಯೊಳಗೆ ಪ್ರವೇಶಿಸುತ್ತಾ, ಅಲ್ಲಿ ಸೀತೆಯನ್ನು ಕಾಣದೆ ಹೊರಬಂದು, ಮನೆಯ ಮೇಲಕ್ಕೆ ಹಾರುತ್ತಾ ಮೇಲಿನಿಂದ ಕೆಳಕ್ಕೆ ಧುಮುಕುತ್ತಾ ಹುಡುಕುತ್ತಿದ್ದನು. ಒಳಗೆ ಹೋಗಲು ಅವಕಾಶವಿದ್ದ ಎಲ್ಲ ಸ್ಥಳಗಳಲ್ಲಿಯೂ ಮಹಾ ಕಪಿಯಾದ ಹನುಮಂತನು ಸಂಚರಿಸಿದನು. ರಾವಣನ ಅಂತಃಪುರದಲ್ಲಿ ಹುಡುಕದಿರುವ ನಾಲ್ಕು ಅಂಗುಲ ಜಾಗವೂ ಉಳಿಯಲಿಲ್ಲ.

ರಾವಣಾಂತಃಪುರೇ ತಸ್ಮಿನ್ ಯಂ ಕಪಿರ್ನ ಜಗಾಮ ಸಃ ।
ಪ್ರಾಕಾರಾಂತರರಥ್ಯಾಶ್ಚ ವೇದಿಕಾಶ್ಚೈತ್ಯಸಂಶ್ರಯಾಃ ॥ ೧೮॥

ದೀರ್ಘಿಕಾಃ ಪುಷ್ಕರಿಣ್ಯಶ್ಚ ಸರ್ವಂ ತೇನಾವಲೋಕಿತಮ್ ।
ರಾಕ್ಷಸ್ಯೋ ವಿವಿಧಾಕಾರಾ ವಿರೂಪಾ ವಿಕೃತಾಸ್ತದಾ ॥ ೧೯॥

ದೃಷ್ಟಾ ಹನುಮತಾ ತತ್ರ ನ ತು ಸಾ ಜನಕಾತ್ಮಜಾ ।
ರೂಪೇಣಾಪ್ರತಿಮಾ ಲೋಕೇ ವರಾ ವಿದ್ಯಾಧರಸ್ತ್ರಿಯಃ ॥ ೨೦॥

ದೃಷ್ಟಾ ಹನುಮತಾ ತತ್ರ ನ ತು ರಾಘವನಂದಿನೀ ।
ನಾಗಕನ್ಯಾ ವರಾರೋಹಾಃ ಪೂರ್ಣಚಂದ್ರನಿಭಾನನಾಃ ॥ ೨೧॥

ದೃಷ್ಟಾ ಹನುಮತಾ ತತ್ರ ನ ತು ಸೀತಾ ಸುಮಧ್ಯಮಾ ।
ಪ್ರಮಥ್ಯ ರಾಕ್ಷಸೇಂದ್ರೇಣ ನಾಗಕನ್ಯಾ ಬಲಾದ್ಧೃತಾಃ ॥ ೨೨॥

ದೃಷ್ಟಾ ಹನುಮತಾ ತತ್ರ ನ ಸಾ ಜನಕನಂದಿನೀ ।
ಸೋಽಪಶ್ಯಂಸ್ತಾಂ ಮಹಾಬಾಹುಃ ಪಶ್ಯಂಶ್ಚಾನ್ಯಾ ವರಸ್ತ್ರಿಯಃ ॥ ೨೩॥

ವಿಷಸಾದ ಮುಹುರ್ಧೀಮಾನ್ ಹನುಮಾನ್ ಮಾರುತಾತ್ಮಜಃ ।
ಉದ್ಯೋಗಂ ವಾನರೇಂದ್ರಾಣಾಂ ಪ್ಲವನಂ ಸಾಗರಸ್ಯ ಚ ॥ ೨೪॥

ವ್ಯರ್ಥಂ ವೀಕ್ಷ್ಯಾನಿಲಸುತಶ್ಚಿಂತಾಂ ಪುನರುಪಾಗಮತ್ ।
ಅವತೀರ್ಯ ವಿಮಾನಾಚ್ಚ ಹನುಮಾನ್ ಮಾರುತಾತ್ಮಜಃ ।
ಚಿಂತಾಮುಪಜಗಾಮಾಥ ಶೋಕೋಪಹತಚೇತನಃ ॥ ೨೫॥

ಪ್ರಾಕಾರದ ಒಳಭಾಗದಲ್ಲಿದ್ದ ಬೀದಿಗಳನ್ನು, ಚೌಕಗಳಲ್ಲಿರುವ ಜಗುಲಿಗಳನ್ನೂ, ಹಳ್ಳಗಳನ್ನೂ, ಸರೋವರಗಳನ್ನೂ, ಇತರ ಎಲ್ಲ ಪ್ರದೇಶಗಳನ್ನೂ ಅವನು ವೀಕ್ಷಿಸಿದನು.॥೧೫-೧೮॥

ವಿಧ-ವಿಧವಾದ ಆಕಾರಗಳನ್ನು ಹೊಂದಿದ್ದ ವಿಕಾರ ರೂಪಿಣಿಯರಾಗಿದ್ದ ವಿಕೃತರಾಗಿ ಕಾಣುತ್ತಿದ್ದ ರಾಕ್ಷಸಿಯರನ್ನು ಹನುಮಂತನು ಆ ಎಲ್ಲ ಸ್ಥಳಗಳಲ್ಲಿಯೂ ನೋಡಿದನು. ಆದರೆ ಜನಕನ ಮಗಳು ಮಾತ್ರ ಎಲ್ಲಿಯೂ ಕಾಣಲಿಲ್ಲ.॥೧೯॥ ರೂಪದಲ್ಲಿ ಅಪ್ರತಿಮೆಯರಾದ ಶ್ರೇಷ್ಠರಾದ ವಿದ್ಯಾಧರ ಸ್ತ್ರೀಯರನ್ನು, ಹನುಮಂತನು ಅಲ್ಲಿ ನೋಡಿದನು. ಆದರೆ ರಾಘವನಿಗೆ ಆನಂದವನ್ನುಂಟು ಮಾಡುವ ಸೀತೆಯನ್ನು ಮಾತ್ರ ನೋಡಲಿಲ್ಲ.॥೨೦॥ ಪೂರ್ಣಚಂದ್ರನಂತೆ ಅಂದವಾದ ಮುಖಗಳನ್ನು ಹೊಂದಿದವರೂ, ರೂಪವೈಭವಸಂಪನ್ನರೂ, ಆದ ನಾಗಕನ್ಯೆಯರನ್ನು ಅಲ್ಲಿ ನೋಡಿದನು.ಆದರೆ ಹನುಮಂತನಿಗೆ ಸಾಧ್ವಿಯಾದ ಸೀತಾದೇವಿಯು ಕಂಡು ಬರಲಿಲ್ಲ.॥೨೧॥ ರಾವಣನು ಬಲಾತ್ಕಾರದಿಂದ ಸೆಳೆದು ತಂದು, ನಿರ್ಬಂಧದಲ್ಲಟ್ಟ ನಾಗಕನ್ಯೆಯರನ್ನು ನೋಡಿದನು. ಆದರೆ ಜನಕನಂದಿನಿಯನ್ನು ಮಾತ್ರ ನೋಡಲಿಲ್ಲ.॥೨೨॥ ಮಹಾಬಾಹುವೂ, ಬುದ್ಧಿಶಾಲಿಯೂ ಆದ ವಾಯುನಂದನನು ಇತರ ಎಲ್ಲ ಶ್ರೇಷ್ಠನಾರಿಯರನ್ನು ಕಂಡರೂ ಸೀತಾದೇವಿಯನ್ನು ಕಾಣದೆ ವಿಚಾರಗ್ರಸ್ತನಾದನು.॥೨೩॥

ಸೀತಾನ್ವೇಷಣೆಗಾಗಿ ಕಿಷ್ಕಿಂಧೆಯಿಂದ ಹೊರಟು ಎಲ್ಲ ದಿಕ್ಕುಗಳಿಗೂ ತೆರಳಿದ ವಾನರರ ಪ್ರಯತ್ನಗಳೂ, ತಾನು ಸಮುದ್ರವನ್ನು ಲಂಘಿಸಿದುದು ವ್ಯರ್ಥವಾಯಿತಲ್ಲ ಎಂದು ಭಾವಿಸಿ, ಅನಿಲನಂದನನು ಪುನಃ ಚಿಂತೆಯಲ್ಲಿ ಮುಳುಗಿದನು. ವಾಯುಸುತನಾದ ಹನುಮಂತನು ಪುಷ್ಪಕವಿಮಾನದಿಂದ ಕೆಳಗಿಳಿದು, ಶೋಕದಿಂದ ಕಂಗೆಟ್ಟು ಆಲೋಚಿಸತೊಗಿದನು. ॥೨೪-೨೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ದ್ವಾದಶಃ ಸರ್ಗಃ ॥ ೧೨ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹನ್ನೆರಡನೆಯ ಸರ್ಗವು ಮುಗಿಯಿತು.

* * *

ಹದಿಮೂರನೆಯ ಸರ್ಗ

ಸೀತಾದೇವಿಯು ವಿನಾಶಹೊಂದಿರಬಹುದೆಂದು ಹನುಮಂತನು ಪುನಃ ಶಂಕಿಸಿದುದು, ಸೀತೆಯು ಸಿಕ್ಕಲಿಲ್ಲವೆಂದು ರಾಮನಿಗೆ ತಿಳಿಸುವುದರಿಂದ ಉಂಟಾಗುವ ಅನರ್ಥವನ್ನು ನೆನೆದು, ಕಪ್ಪಿಂಧೆಗೆ ಹಿಂದಿರುಗದಿರಲು ನಿಶ್ಚಯಿಸಿ ಅಶೋಕವನದಲ್ಲಿ ಸೀತೆಯನ್ನು ಹುಡುಕಲು ಹೊರಟಿದುದು –

ವಿಮಾನಾತ್ತು ಸುಸಂಕ್ರಮ್ಯ ಪ್ರಾಕಾರಂ ಹರಿಪುಂಗವಃ ।
ಹನುಮಾನ್ ವೇಗವಾನಾಪೀದ್ಯಥಾ ವಿದ್ಯುದ್ಘನಾಂತರೇ ॥ ೧॥

ಸಂಪರಿಕ್ರಮ್ಯ ಹನುಮಾನ್ ರಾವಣಸ್ಯ ನಿವೇಶನಮ್ ।
ಅದೃಷ್ಟ್ವಾ ಜಾನಕೀಂ ಸೀತಾಮಬ್ರವೀದ್ವಚನಂ ಕಪಿಃ ॥ ೨॥

ಭೂಯಿಷ್ಠಂ ಲೋಲಿತಾ ಲಂಕಾ ರಾಮಸ್ಯ ಚರತಾ ಪ್ರಿಯಮ್ ।
ನಹಿ ಪಶ್ಯಾಮಿ ವೈದೇಹೀಂ ಸೀತಾಂ ಸರ್ವಾಂಗಶೋಭನಾಮ್ ॥ ೩॥

ಪಲ್ವಲಾನಿ ತಟಾಕಾನಿ ಸರಾಂಸಿ ಸರಿತಸ್ತಥಾ ।
ನದ್ಯೋಽನೂಪವನಾಂತಾಶ್ಚ ದುರ್ಗಾಶ್ಚ ಧರಣೀಧರಾಃ ॥ ೪॥

ಲೋಲಿತಾ ವಸುಧಾ ಸರ್ವಾ ನ ತು ಪಶ್ಯಾಮಿ ಜಾನಕೀಮ್ ।
ಇಹ ಸಂಪಾತಿನಾ ಸೀತಾ ರಾವಣಸ್ಯ ನಿವೇಶನೇ ॥ ೫॥

ಆಖ್ಯಾತಾ ಗೃಧ್ರರಾಜೇನ ನ ಚ ಪಶ್ಯಾಮಿ ತಾಮಹಮ್ ।
ಕಿಂ ನು ಸೀತಾಥ ವೈದೇಹೀ ಮೈಥಿಲೀ ಜನಕಾತ್ಮಜಾ ॥ ೬॥

ಉಪತಿಷ್ಠೇತ ವಿವಶಾ ರಾವಣಂ ದುಷ್ಟಕಾರಿಣಮ್ ।
ಕ್ಷಿಪ್ರಮುತ್ಪತತೋ ಮನ್ಯೇ ಸೀತಾಮಾದಾಯ ರಕ್ಷಸಃ ॥ ೭॥

ಬಿಭ್ಯತೋ ರಾಮಬಾಣಾನಾಮಂತರಾ ಪತಿತಾ ಭವೇತ್ ।
ಅಥವಾ ಹ್ರಿಯಮಾಣಾಯಾಃ ಪಥಿ ಸಿದ್ಧನಿಷೇವಿತೇ ॥ ೮॥

ಮನ್ಯೇ ಪತಿತಮಾರ್ಯಾಯಾ ಹೃದಯಂ ಹ್ರೇಷ್ಟ್ಯ ಸಾಗರಮ್ ।
ರಾವಣಸ್ಯೋರುವೇಗೇನ ಭುಜಾಭ್ಯಾಂ ಪೀಡಿತೇನ ಚ ॥ ೯॥

ಕಪಿಸೈನ್ಯದ ರಕ್ಷಕನಾದ ಹನುಮಂತನು ವಿಮಾನದಿಂದ ಕೆಳಗಿಳಿದು, ಪ್ರಾಕಾರವನ್ನು ದಾಟಿ ಮೊಡಗಳ ಮಧ್ಯದಲ್ಲಿ ಅರಕ್ಷಣದಲ್ಲಿ ಕಣ್ಮರೆಯಾಗುವ ವಿದ್ಯುಲ್ಲತೆಯಂತೆ ಅತಿವೇಗವಾಗಿ ನಡೆದನು.॥೧॥ ಕಪಿಶ್ರೇಷ್ಠನಾದ ಮಾರುತಿಯು ರಾವಣನ ಆರಮನೆಯಿಂದ ಹೊರಟು ಎಲ್ಲ ಕಡೆಗಳಲ್ಲಿಯೂ ಸುತ್ತಾಡಿ, ಸೀತಾದೇವಿಯ ಜಾಡನ್ನು ತಿಳಿಯದೆ, ಅವನು ತನ್ನಲ್ಲೇ ಹೀಗೆ ಹೇಳಿಕೊಂಡನು– ॥೨॥

"ರಾಮನಿಗೆ ಪ್ರಿಯವಾದ ಕಾರ್ಯವನ್ನು ಮಾಡುವ ಆಶಯದಿಂದಲೂ, ಸೀತೆಯನ್ನು ಕಾಣಬೇಕೆಂಬ ಹಂಬಲದಿಂದ ಲಂಕೆಯನ್ನು ಹಲವಾರು ಬಾರಿ ಜಾಲಾಡಿದೆನು. ಆದರೆ ಸರ್ವಾಂಗ ಶೋಭನೆಯಾದ ವೈದೇಹಿಯು ಎಲ್ಲಿಯೂ ಕಾಣದೆ ಹೋದಳು.॥೩॥ ಸಣ್ಣ ಜಲಾಶಯಗಳ ಬಳಿಯಲ್ಲೂ, ಕೆರೆಗಳ ಬಳಿಯಲ್ಲಿಯೂ, ಸರೋವರಗಳ ತೀರಗಳಲ್ಲಿಯೂ,ಜಾಗಾದ ಸ್ಥಳಗಳಲ್ಲಿಯೂ, ಉಸನದಿ-ಮಹಾನದಿಗಳ ತಿರಗಳಲ್ಲಿಯೂ, ಅರಣ್ಯಗಳಲ್ಲಿಯೂ, ವನ-ಪರ್ವತಗಳಲ್ಲಿಯೂ, ಇತರ ಎಲ್ಲ ಪ್ರದೇಶಗಳಲ್ಲಿಯೂ ಸೀತೆಯನ್ನು ಹುಡುಕಿದೆನು. ಆದರೆಅವಳು ಮಾತ್ರ ಸಿಗಲಿಲ್ಲ. ಗೃಧ್ರರಾಜನಾದ ಸಂಪಾತಿಯು ಈ ರಾವಣನ ಆರಮನೆಯಲ್ಲೇ ಸೀತೆಯಿರುವಳೆಂದು ಹೇಳಿದ್ದನು. ಆದರೆ ನಾನು ಅವಳನ್ನಿಲ್ಲಿ ಕಾಣಲಾಗಲಿಲ್ಲ.॥೪-೫॥ ರಾವಣನಿಂದ ಬಲಾತ್ಕಾರವಾಗಿ ಸೆಳೆದುತರಲ್ಪಟ್ಟ ವಿದೇಹರಾಜನ ಮಗಳಾದ ವೈದೇಹಿಯು ಆಸ್ವತಂತ್ರಳಾಗಿ ದುರಾಚಾರಿಯಾದ ರಾವಣನಿಗೆ ವಶಳಾಗಿರಬಹುದೇ?(ಇದು ಅಸಂಭವವು.) ॥೬॥ ಅಥವಾ ರಾಮನ ಬಾಣಗಳಿಗೆ ಹೆದರಿದ ರಾಕ್ಷಸನಾದ ರಾವಣನು ವೇಗವಾಗಿ ಸೀತೆಯನ್ನು ಎತ್ತಿಕೊಂಡುಸಮುದ್ರದ ಮೇಲಿನಿಂದ ಹೋಗುತ್ತಿದ್ದಾಗ, ಅವನ ಹಿಡಿತದಿಂದ ಜಾರಿ ಸಮುದ್ರದಲ್ಲಿ ಬಿದ್ದುಬಿಟ್ಟಿರಬಹುದೇ?॥೭॥ ಅಥವಾ ಸಿದ್ಧರಿಂದ ಸೇವಿತವಾದ ಆಕಾಶಮಾರ್ಗದಿಂದ ರಾವಣನು ಸೆಳೆದುಕೊಂಡು ಹೋಗುತ್ತಿದ್ದಾಗ ಆರ್ಯೆಯಾದ ಸೀತಾದೇವಿಯು ಮಹಾ ಸಾಗರವನ್ನು ನೋಡಿದೊಡನೆಯೇ ಅವಳ ಹೃದಯ ಭಗ್ನವಾಗಿ ಸಮುದ್ರದಲ್ಲಿ ಬಿದ್ದಿರಬಹುದೇ?॥೮॥ ರಾವಣನು ಅತಿಯಾದ ವೇಗದಿಂದ ಒಯ್ಯುವಾಗ ಅವನ ಭುಜಬಲಗಳಿಂದ ಕಂಗೆಟ್ಟುಹೋದ ಪುನೀತಳಾದ, ವಿಶಾಲನೇತ್ರೆಯಾದ ಸೀತೆಯು ಜೀವಿತವನ್ನೇ ತ್ಯಜಿಸಿರಬಹುದೇ?॥೯॥ ರಾವಣನು ಸೀತೆಯನ್ನು ಎತ್ತಿಕೊಂಡು ಸಮುದ್ರದ ಮೇಲಿನಿಂದ

ತಯಾ ಮನ್ಯೇ ವಿಶಾಲಾಕ್ಷ್ಯಾ ತ್ಯಕ್ತಂ ಜೀವಿತಮಾರ್ಯಯಾ ।
ಉಪರ್ಯುಪರಿ ವಾ ನೂನಂ ಸಾಗರಂ ಕ್ರಮತಸ್ತದಾ ॥ ೧೦॥

ವಿವೇಷ್ಟಮಾನಾ ಪತಿತಾ ಸಮುದ್ರೇ ಜನಕಾತ್ಮಜಾ ।
ಅಹೋ ಕ್ಷುದ್ರೇಣ ಚಾನೇನ ರಕ್ಷಂತೀ ಶೀಲಮಾತ್ಮನಃ ॥ ೧೧॥

ಅಬಂಧುರ್ಭಕ್ಷಿತಾ ಸೀತಾ ರಾವಣೇನ ತಪಸ್ವಿನೀ ।
ಅಥವಾ ರಾಕ್ಷಸೇಂದ್ರಸ್ಯ ಪತ್ನೀಭವತಿ ತೇಕ್ಷಣಾ ॥ ೧೨॥

ಅದುಷ್ಟಾ ದುಷ್ಟಭಾವಾಭಿರ್ಭಕ್ಷಿತಾ ಸಾ ಭವಿಷ್ಯತಿ ।
ಸಂಪೂರ್ಣಚಂದ್ರ ಪ್ರತಿಮಂ ಪದ್ಮ ಪತ್ರನಿಭೇಕ್ಷಣಮ್ ॥ ೧೩॥

ರಾಮಸ್ಯ ಧ್ಯಾಯತೀ ದಕ್ಷಂ ಪಂಚತ್ವಂ ಕೃಪಣಾ ಗತಾ ।
ಹಾ ರಾಮ ಲಕ್ಷ್ಮಣೇತ್ಯೇವಂ ಹಾಽಯೋಧ್ಯೇ ಚೇತಿ ಮೈಥಿಲೀ ॥ ೧೪॥

ವಿಲಪ್ಯ ಬಹು ವೈದೇಹೀ ನೃಸ್ತದೇಹಾ ಭವಿಷ್ಯತಿ ।
ಅಥವಾ ನಿಹಿತಾ ಮನ್ಯೇ ರಾವಣಸ್ಯ ನಿವೇಶನೇ ॥ ೧೫॥

ನೂನಂ ಲಾಲಪ್ಯತೇ ಸೀತಾ ಪಂಜರಸ್ಥೇವ ಶಾರಿಕಾ ।
ಜನಕಸ್ಯ ಸುತಾ ಸೀತಾ ರಾಮಪತ್ನೀ ಸುಮಧ್ಯಮಾ ॥ ೧೬॥

ಕಥಮುತ್ಪಲಪತ್ರಾಕ್ಷೀ ರಾವಣಸ್ಯ ವಶಂ ವ್ರಜೇತ್ ।
ವಿನಷ್ಟಾ ವಾ ಪ್ರನಷ್ಟಾ ವಾ ಮೃತಾ ವಾ ಜನಕಾತ್ಮಜಾ ॥ ೧೭॥

ರಾಮಸ್ಯ ಪ್ರಿಯಭಾರ್ಯಸ್ಯ ನ ನಿವೇದಯಿತುಂ ಕ್ಷಮಮ್ ।
ನಿವೇದ್ಯಮಾನೇ ದೋಷಃ ಸ್ಯಾದ್ದೋಷಃ ಸ್ಯಾದನಿವೇದನೇ ॥ ೧೮॥

ಕಥಂ ನು ಖಲು ಕರ್ತವ್ಯಂ ವಿಷಮಂ ಪ್ರತಿಭಾತಿ ಮೇ ।
ಉಭಯೇಮಂ ಗತೇ ಕಾರ್ಯೇ ಪ್ರಾಪ್ತಕಾಲಂ ಕ್ಷಮಂ ಚ ಕಿಮ್ ॥ ೧೯॥

ಹೋಗುತ್ತಿದ್ದಾಗ ಅವನ ಹಿಡಿತದಿಂದ ಬಿಡಿಸಿಕೊಳ್ಳಲು ಹೆಣಗಾಡಿ ಸಮುದ್ರದಲ್ಲಿ ಬಿದ್ದಿರಬಹುದೇ?॥೧೦॥

ಅಯ್ಯೋ! ಬಂಧುಗಳಿಂದ ದೂರವಾಗಿದ್ದು, ನಿಃಸಹಾಯಕಳಾಗಿ ದೀನಾವಸ್ಥೆಯನ್ನು ಹೊಂದಿ, ತನ್ನ ಶೀಲವನ್ನು ರಕ್ಷಿಸಿಕೊಳ್ಳುವುದರಲ್ಲೇ ಪ್ರಯತ್ನಶೀಲಳಾದ ತಪಸ್ವಿನಿಯಾದ ಸೀತಾದೇವಿಯನ್ನು ಕ್ಷುದ್ರನಾದ ರಾವಣನು ಭಕ್ಷಿಸಿರಲೂ ಬಹುದು.॥೧೧॥ ಚೆಲುವಾದ ಕಣ್ಣುಗಳುಳ್ಳವಳೂ, ಸೌಶೀಲ್ಯವತಿಯೂ ಆದ ಸೀತಾದೇವಿಯನ್ನು ಪರಮದುಷ್ಟೆಯಾದ ರಾಕ್ಷಸೇಂದ್ರನ ಮಡದಿಯರು ಅಸೂಯೆಯಿಂದ ತಿಂದುಹಾಕಿರಬಹುದೇ?॥೧೨॥ ಪೂರ್ಣಚಂದ್ರಸದೃಶವಾದ, ಕಮಲ ಪತ್ರಕ್ಕೆ ಸಮಾನವಾದ ಕಣ್ಣುಗಳಿಂದ ಕಂಗೊಳಿಸುವ ದೀನಳಾದ ಸೀತಾದೇವಿಯು ಶ್ರೀರಾಮನ ಮುಖಕಮಲವನ್ನೇ ಧ್ಯಾನ ಮಾಡುತ್ತಾ ವಿರಹವನ್ನು ತಾಳಲಾರದೆ ಸಾವನ್ನಪ್ಪಿರಬಹುದು. ॥೧೩॥ ವಿದೇಹರಾಜನ ಮಗಳಾದ ಮೈಥಿಲಿಯು ''ಹಾ ರಾಮಾ! ಹಾ ಲಕ್ಷ್ಮಣಾ! ಹಾ ಅಯೋಧ್ಯೆ!'' ಎಂದು ಪರಿ-ಪರಿಯಾಗಿ ವಿಲಾಪಿಸುತ್ತಾ ತನ್ನ ತನುವನ್ನು ತ್ಯಜಿಸಿದಳೋ ಏನೋ?॥೧೪॥ ಅಥವಾ ಯಾರ ಕಣ್ಣುಗಳಿಗೂ ಬೀಳದಂತೆ ರಾವಣನ ಅರಮನೆಯ ಒಂದು ಭಾಗದಲ್ಲಿ ಬಂಧಿತಳಾಗಿ ಸೀತಾದೇವಿಯು ಪಂಜರದಲ್ಲಿರುವ ಮೈನಾಹಕ್ಕಿಯಂತೆ ಸತತವಾಗಿ ವಿಲಾಪಿಸುತ್ತಿರಬಹುದು.॥೧೫॥ ಮಹಾನುಭಾವನಾದ ಜನಕಮಹಾರಾಜನ ಮಗಳೂ, ಪುರುಷೋತ್ತಮನಾದ ಶ್ರೀರಾಮನ ಪತ್ನೀಯೂ, ಸುಮಧ್ಯಮೆಯೂ, ಅಂದವಾದ ನೀಲೋತ್ಪಲ ನೇತ್ರಗಳುಳ್ಳ ಸೀತಾದೇವಿಯು ಹೇಗೆ ತಾನೇ ರಾವಣನ ಅಧೀನ ಳಾಗುವಳು?॥೧೬॥

ಜಾನಕಿಯು ಅದೃಶ್ಯಳಾದುದನ್ನು, ತಪ್ಪಿಸಿಕೊಂಡಿರುವುದನ್ನು, ವಿನಾಶಹೊಂದಿದುದನ್ನು, ಶ್ರೀರಾಮನನ್ನೇ ಸತತವಾಗಿ ಚಿಂತಿಸುತ್ತಾ ಸಾವನ್ನಪ್ಪಿದುದನ್ನು, ಅವಳ ಸ್ಥಿತಿ-ಗತಿಗಳನ್ನು ಸರಿಯಾಗಿ ತಿಳಿಯದೆ, ಭಾರ್ಯೆಯ ವಿಷಯದಲ್ಲಿ ಹೆಚ್ಚು ಪ್ರೇಮವನ್ನಿಟ್ಟಿರುವ ರಾಮಚಂದ್ರನಿಗೆ ಸಂದೇಹಕ್ಕೆ ಆಸ್ಪದವಾದ ವಾರ್ತೆಯನ್ನು ತಿಳಿಸುವುದು ಯುಕ್ತವಾಗಿ ಕಾಣುವುದಿಲ್ಲ.॥೧೭॥

''ಸೀತೆಯು ಸಿಕ್ಕಲಿಲ್ಲ'' ಎಂಬ ಅಪ್ರಿಯವಾರ್ತೆಯನ್ನು ತಿಳಿಸುವುದೂ ದೋಷವಾಗುತ್ತದೆ. ಹೇಳದೆ ಹೋದರೂ ಸ್ವಾಮಿಗೆ ವಂಚನೆ ಮಾಡಿದಂತಾಗುತ್ತದೆ. ಹೀಗಿರುವಾಗ ಈಗ ನನ್ನ ಕರ್ತವ್ಯವೇನು? ನನಗಂತೂ ಇದು ಇಕ್ಕಟ್ಟಿನ ಪರಿಸ್ಥಿತಿಯಾಗಿದೆ.॥೧೮॥

ಹನುಮಂತನ ಸೀತಾನ್ವೇಷಣೆಯ ಕಾರ್ಯವು ಇಂತಹ ಇಕ್ಕಟ್ಟಿನ ಪರಿಸ್ಥಿತಿಯನ್ನು ಮುಟ್ಟಲಾಗಿ, ತತ್ಕಾಲೋಚಿತವಾದ ಯವ ಕಾರ್ಯಮಾಡಬಹುದು ಎಂಬುದರ ಬಗ್ಗೆ ಪುನಃ ಕಪೀಶ್ವರನು ಯೋಚಿಸತೊಡಗಿದನು.॥೧೯॥

''ಒಂದುವೇಳೆ ನಾನು ಸೀತೆಯನ್ನು ಕಾಣದೆಯೇ ವಾನರೇಂದ್ರನಾದ ಸುಗ್ರೀವನ ಪಟ್ಟಣವಾದ ಕಿಷ್ಕಿಂಧೆಗೆ

ಭವೇದಿತಿ ಮತಂ ಭೂಯೋ ಹನೂಮಾನ್ ಪ್ರವಿಚಾರಯನ್ ।
ಯದಿ ಸೀತಾಮದೃಷ್ಟ್ವಾಹಂ ವಾನರೇಂದ್ರಪುರೀಮಿತಃ ॥ ೨೦॥

ಗಮಿಷ್ಯಾಮಿ ತತಃ ಕೋ ಮೇ ಪುರುಷಾರ್ಥೋ ಭವಿಷ್ಯತಿ ।
ಮಮೇದಂ ಲಂಘನಂ ವ್ಯರ್ಥಂ ಸಾಗರಸ್ಯ ಭವಿಷ್ಯತಿ ॥ ೨೧॥

ಪ್ರವೇಶಶ್ಚೈವ ಲಂಕಾಯಾ ರಾಕ್ಷಸಾನಾಂ ಚ ದರ್ಶನಮ್ ।
ಕಿಂ ಮಾಂ ವಕ್ಷ್ಯತಿ ಸುಗ್ರೀವೋ ಹರಯೋ ವಾ ಸಮಾಗತಾಃ ॥ ೨೨॥

ಕಿಷ್ಕಿಂಧಾಂ ಸಮನುಪ್ರಾಪ್ತಂ ತೌ ವಾ ದಶರಥಾತ್ಮಜೌ ।
ಗತ್ವಾ ತು ಯದಿ ಕಾಕುತ್ಸ್ಥಂ ವಕ್ಷ್ಯಾಮಿ ಪರಮಪ್ರಿಯಮ್ ॥ ೨೩॥

ನ ದೃಷ್ಟೇತಿ ಮಯಾ ಸೀತಾ ತತಸ್ತ್ಯಕ್ಷ್ಯತಿ ಜೀವಿತಮ್ ।
ಪರುಷಂ ದಾರುಣಂ ಕ್ರೂರಂ ತೀಕ್ಷ್ಣಮಿಂದ್ರಿಯತಾಪನಮ್ ॥ ೨೪॥

ಸೀತಾನಿಮಿತ್ತಂ ದುರ್ವಾಕ್ಯಂ ಶ್ರುತ್ವಾ ಸ ನ ಭವಿಷ್ಯತಿ ।
ತಂ ತು ಕೃಚ್ಛ್ರಗತಂ ದೃಷ್ಟ್ವಾ ಪಂಚತ್ವಗತಮಾನಸಮ್ ॥ ೨೫॥

ಭೃಶಾನುರಕ್ತೋ ಮೇಧಾವಿ ನ ಭವಿಷ್ಯತಿ ಲಕ್ಷ್ಮಣಃ ।
ವಿನಷ್ಟೌ ಭ್ರಾತರೌ ಶ್ರುತ್ವಾ ಭರತೋಽಪಿ ಮರಿಷ್ಯತಿ ॥ ೨೬॥

ಭರತಂ ಚ ಮೃತಂ ದೃಷ್ಟ್ವಾ ಶತ್ರುಘ್ನೋ ನ ಭವಿಷ್ಯತಿ ।
ಪುತ್ರಾನ್ ಮೃತಾನ್ ಸಮೀಕ್ಷ್ಯಾಥ ನ ಭವಿಷ್ಯಂತಿ ಮಾತರಃ ॥ ೨೭॥

ಕೌಸಲ್ಯಾ ಚ ಸುಮಿತ್ರಾ ಚ ಕೈಕೇಯೀ ಚ ನ ಸಂಶಯಃ ।
ಕೃತಜ್ಞಃ ಸತ್ಯಸಂಧಶ್ಚ ಸುಗ್ರೀವಃ ಪ್ಲವಗಾಧಿಪಃ ॥ ೨೮॥

ರಾಮಂ ತಥಾಗತಂ ದೃಷ್ಟ್ವಾ ತತಸ್ತ್ಯಕ್ಷತಿ ಜೀವಿತಮ್ ।
ದುರ್ಮನಾ ವ್ಯಥಿತಾ ದೀನಾ ನಿರಾನಂದಾ ತಪಸ್ವಿನೀ ॥ ೨೯॥

ಪೀಡಿತಾ ಭರ್ತೃಶೋಕೇನ ರುಮಾ ತ್ಯಕ್ಷತಿ ಜೀವಿತಮ್ ।
ವಾಲಿಜೇನ ತು ದುಃಖೇನ ಪೀಡಿತಾ ಶೋಕಕರ್ಶಿತಾ ॥ ೩೦॥

ಪಂಚತ್ವಂ ಚ ಗತೇ ರಾಜ್ಞಿ ತಾರಾಪಿ ನ ಭವಿಷ್ಯತಿ ।
ಮಾತಾಪಿತ್ರೋರ್ವಿನಾಶೇನ ಸುಗ್ರೀವವ್ಯಸನೇನ ಚ ॥ ೩೧॥

ಕುಮಾರೋಽಪ್ಯಂಗದಃ ಕಸ್ಮಾದ್ಧಾರಯಿಷ್ಯತಿ ಜೀವಿತಮ್ ।
ಭರ್ತೃಜೇನ ತು ದುಃಖೇನ ಹ್ಯಭಿಭೂತಾ ವನೌಕಸಃ ॥ ೩೨॥

ಶಿರಾಂಸ್ಯಭಿಹನಿಷ್ಯಂತಿ ತಲೈರ್ಮುಷ್ಟಿಭಿರೇವ ಚ ।
ಸಾಂತ್ವೇನಾನುಪ್ರದಾನೇನ ಮಾನೇನ ಚ ಯಶಸ್ವಿನಾ ॥ ೩೩॥

ಹೋದುದಾದರೆ ನನಗೆ ಲಭಿಸುವ ಪುರುಷಾರ್ಥವಾದರೂ ಏನು?॥೨೦॥ (ಸೀತೆಯನ್ನು ಕಾಣದೆ ನಾನು ಹಿಂದಿರುಗಿದರೆ) ನನ್ನ ಈ ಸಮುದ್ರ ಲಂಘನವೂ, ಲಂಕಾಪ್ರವೇಶವೂ, ರಾಕ್ಷಸರ ದರ್ಶನವೂ ವ್ಯರ್ಥವೇ ಆಗುತ್ತದೆ.॥೨೧॥ ಕಾರ್ಯವನ್ನು ಸಾಧಿಸದೆ ಕಿಷ್ಕಿಂಧೆಗೆ ಹಿಂದಿರುಗಿದ ನನ್ನನ್ನು ನೋಡಿ ಸುಗ್ರೀವನೂ, ಅಲ್ಲಿಗೆ ಆಗಮಿಸಿರುವ ಇತರ ವಾನರ ಶ್ರೇಷ್ಠರೂ ದಶರಥನ ಮಕ್ಕಳಾದ ರಾಮ-ಲಕ್ಷ್ಮಣರು ಏನನ್ನುವರು?॥೨೨॥ ಅಲ್ಲಿಗೆ ಹೋಗಿ ಶ್ರೀರಾಮನಿಗೆ 'ನಾನು ಸೀತಾದೇವಿಯನ್ನು ಎಲ್ಲಿಯೂ ನೋಡಲಿಲ್ಲ' ಎಂದು ಹೇಳಿಬಿಟ್ಟರೆ ಆ ಕರ್ಣಕಠೋರವಾದ ವಾರ್ತೆಯನ್ನು ಕೇಳಿದೊಡನೆಯೇ ಮಹಾ ಪುರುಷನಾದ ಅವನು ಜೀವಿತವನ್ನೇ ತ್ಯಜಿಸಬಹುದು. ॥೨೩॥ ದಾರುಣವಾದ, ಅತಿತೀಕ್ಷ್ಣವಾದ, ಕ್ರೂರವಾದ, ಮನಸ್ಸಿಗೆ ತಾಪವನ್ನುಂಟುಮಾಡುವ "ನಾನು ಸೀತೆಯನ್ನು ನೋಡಲಿಲ್ಲ" ಎಂಬ ದುರ್ವಾಕ್ಯವನ್ನು ಕೇಳಿ ರಾಮನು ಉಳಿಯಲಾರನು. ॥೨೪॥ ತೀವ್ರವಾದ ವೇದನೆಗೆ ಗುರಿಯಾದ, ಮರಣೋನ್ಮುಖನಾದ ಶ್ರೀರಾಮನನ್ನು ನೋಡಿ, ಅಣ್ಣನಲ್ಲಿ ಅತ್ಯಂತ ಅನುರಕ್ತನಾದ ಮೇಧಾವಿಯಾದ ಲಕ್ಷ್ಮಣನೂ ಬದುಕಿರಲಾರನು. ॥೨೫॥ ಅರಣ್ಯಕ್ಕೆ ಹೋದ ಸಹೋದರ ರಿಬ್ಬರೂ ಮೃತರಾದರೆಂದು ತಿಳಿದೊಡನೆಯೇ ಅತ್ತ ಭರತನು ಸಾಯುತ್ತಾನೆ. ಭರತನು ಸತ್ತುದನ್ನು ನೋಡಿ ಶತ್ರುಘ್ನನು ಉಳಿಯುವುದಿಲ್ಲ.॥೨೬॥ ನಾಲ್ಕು ಮಕ್ಕಳೂ ಸತ್ತಿದುದನ್ನು ನೋಡಿ ಅವರ ತಾಯಂದಿರಾದ ಕೌಸಲ್ಯಾ, ಸುಮಿತ್ರಾ, ಕೈಕೇಯಿ ಇವರೂ ಸಾಯುತ್ತಾರೆ.॥೨೭॥ ವಾನರ ಪ್ರಭುವಾದ ಸುಗ್ರೀವನು ಸತ್ಯಸಂಧನು. ಪಡೆದ ಉಪಕಾರವನ್ನು ಸದಾ ಸ್ಮರಿಸುವವನು. ರಾಮನ ಪ್ರಿಯ ಮಿತ್ರನಾದ್ದರಿಂದ ರಾಮನು ಸತ್ತುದನ್ನು ತಿಳಿದು ಅವನೂ ಸಾಯುತ್ತಾನೆ.॥೨೮॥ ಪತಿಯ ಮರಣಶೋಕದಿಂದ ಪೀಡಿತಳಾದ, ನಿರಾನಂದಳಾದ, ತಪಸ್ವಿನಿ ಯಾದ ರುಮಾದೇವಿಯೂ ಅತ್ಯಂತ ದುಃಖಿತಳಾಗಿ ಮನಸ್ಸನ್ನು ಕೆಡಿಸಿಕೊಂಡು, ದೀನಳಾಗಿ ಜೀವಿತವನ್ನು ತೊರೆಯುತ್ತಾಳೆ. ॥೨೯॥ ವಾಲಿಯ ಮರಣದಿಂದುಂಟಾದ ದುಃಖದಿಂದ ಪೀಡಿತಳಾದ, ಶೋಕಾಕುಲಳಾದ, ಮಹಾರಾಣಿಯಾದ ತಾರಾದೇವಿಯೂ, ರಾಜನಾದ ಸುಗ್ರೀವನು ಅವಸಾನಹೊಂದಿದ ಬಳಿಕ ಬದುಕಿರಲಾರಳು.॥೩೦॥ ಮಾತಾ-ಪಿತೃಗಳಾದ ತಾರಾ-ವಾಲಿಯರ ನಿಧನದಿಂದಲೂ, ಸುಗ್ರೀವನನ್ನು ಅಗಲಿದ ದುಃಖದಿಂದ ವ್ಯಾಕುಲಿತನಾದ ಅಂಗದ ಕುಮಾರನು ಹೇಗೆ ತಾನೇ ಜಿವಿಸಿರುವನು?॥೩೧॥ಸ್ವಾಮಿಯ ಮರಣದಿಂದ ಕಂಗೆಡುವ ವಾನರವೀರರು ಅಂಗೈಗಳಿಂದಲೂ, ಮುಷ್ಟಿಗಳಿಂದಲೂ ತಲೆಯನ್ನು ಚಚ್ಚಿಕೊಂಡು ಸಾಯುತ್ತಾರೆ.॥೩೨॥ ಯಶಸ್ವಿಯಾದ ಕಪಿರಾಜ ಸುಗ್ರೀವನು ಪ್ರಜೆಗಳನ್ನು ಸಾಂತ್ವನ ವಚನಗಳಿಂದಲೂ, ದಾನಾದಿಗಳಿಂದಲೂ, ಗೌರವದಿಂದಲೂ ಲಾಲಿಸಿ-ಪೋಷಿಸುತ್ತಿರುವನು. ತಮ್ಮ ರಾಜನ ಮರಣದಿಂದಾಗಿ ದುಃಖಿತರಾಗುವ ವಾನರರೆಲ್ಲರೂ ಪ್ರಾಣಗಳನ್ನು ಪರಿತ್ಯಜಿಸು

ಲಾಲಿತಾಃ ಕಪಿರಾಜೇನ ಪ್ರಾಣಾಂಸ್ತ್ಯಕ್ಷ್ಯಂತಿ ವಾನರಾಃ।
ನ ವನೇಷು ನ ಶೈಲೇಷು ನ ನಿರೋಧೇಷು ವಾ ಪುನಃ॥ ೩೪॥

ಕ್ರೀಡಾಮನುಭವಿಷ್ಯಂತಿ ಸಮೇತ್ಯ ಕಪಿಕುಂಜರಾಃ।
ಸಪುತ್ರದಾರಾಃ ಸಾಮಾತ್ಯಾ ಭರ್ತ್ರವ್ಯಸನಪೀಡಿತಾಃ॥ ೩೫॥

ಶೈಲಾಗ್ರೇಭ್ಯಃ ಪತಿಷ್ಯಂತಿ ಸಮೇತ್ಯ ವಿಷಮೇಷು ಚ।
ವಿಷಮುದ್ಬಂಧನಂ ವಾಪಿ ಪ್ರವೇಶಂ ಜ್ವಲನಸ್ಯ ವಾ॥ ೩೬॥

ಉಪವಾಸಮಥೋ ಶಸ್ತ್ರಂ ಪ್ರಚರಿಷ್ಯಂತಿ ವಾನರಾಃ।
ಘೋರಮಾರೋದನಂ ಮನ್ಯೇ ಗತೇ ಮಯಿ ಭವಿಷ್ಯತಿ॥ ೩೭॥

ಇಕ್ಷ್ವಾಕುಕುಲನಾಶಶ್ಚ ನಾಶಶ್ಚೈವ ವನೌಕಸಾಮ್।
ಸೋಽಹಂ ನೈವ ಗಮಿಷ್ಯಾಮಿ ಕಿಷ್ಕಿಂಧಾಂ ನಗರೀಮಿತಃ॥ ೩೮॥

ನ ಚ ಶಕ್ಷ್ಯಾಮ್ಯಹಂ ದ್ರಷ್ಟುಂ ಸುಗ್ರೀವಂ ಮೈಥಿಲೀಂ ವಿನಾ।
ಮಯ್ಯಗಚ್ಛತಿ ಚೀಹಸ್ಥೇ ಧರ್ಮಾತ್ಮಾನೌ ಮಹಾರಥೌ॥ ೩೯॥

ಆಶಯಾ ತೌ ಧರಿಷ್ಯೇತೇ ವಾನರಾಶ್ಚ ಮನಸ್ವಿನಃ।
ಹಸ್ತಾದಾನೋ ಮುಖಾದಾನೋ ನಿಯತೋ ಭಕ್ಷಮೂಲಕಿಃ॥ ೪೦॥

ವಾನಪ್ರಸ್ಥೋ ಭವಿಷ್ಯಾಮಿ ಹ್ಯದೃಶ್ಯಾ ಜನಕಾತ್ಮಜಾಮ್।
ಸಾಗರಾನೂಪಜೇ ದೇಶೇ ಬಹುಮೂಲಫಲೋದಕೇ॥ ೪೧॥

ಚಿತಾಂ ಕೃತ್ವಾಪ್ರವೇಕ್ಷ್ಯಾಮಿ ಸಮಿದ್ಧಮರಣೇಸುತಮ್।
ಉಪವಿಷ್ಟಸ್ಯ ವಾ ಸಮ್ಯಗ್ವಿಗಿನಂ ಸಾಧಯಿಷ್ಯತಃ॥ ೪೨॥

ಶರೀರಂ ಭಕ್ಷಯಿಷ್ಯಂತಿ ವಾಯಸಾಃ ಶ್ವಾಪದಾನಿ ಚ।
ಇದಂ ಮಹರ್ಷಿರ್ಧರ್ಮಜ್ಞಂ ನಿರ್ಯಾಣಮಿತಿ ಮೇ ಮತಿಃ॥ ೪೩॥

ಸಮ್ಯಗಪಃ ಪ್ರವೇಕ್ಷ್ಯಾಮಿ ನ ಚೇತ್ ಪಶ್ಯಾಮಿ ಜಾನಕೀಮ್।
ಸುಜಾತಮೂಲಾ ಸುಭಗಾ ಕೀರ್ತಿಮಾಲಾ ಯಶಸ್ವಿನಿ॥ ೪೪॥

ತ್ತಾರೆ.॥೩೩॥ ಹೀಗೆಲ್ಲ ಆದನಂತರ ಕಪಿಶ್ರೇಷ್ಠರು ಅರಣ್ಯಗಳಲ್ಲಿಯೂ, ಪರ್ವತ ಪ್ರದೇಶಗಳಲ್ಲಿಯೂ, ಗುಹೆಗಳ ಲ್ಲಿಯೂ, ಒಟ್ಟಾಗಿ ಸೇರಿ ವಿನೋದ-ಪ್ರಮೋದಗಳನ್ನು ಅನುಭವಿಸಲಾರರು.ರಾಜನ ವಿಯೋಗ ದುಃಖದಿಂದ ಪೀಡಿತ ರಾದ ಕಪಿಶ್ರೇಷ್ಠರು ಪುತ್ರ-ಪತ್ನೀಯರೊಡನೆ ಪರ್ವತಗಳ ಮೇಲಿನಿಂದ ಧುಮುಕಿ, ಸಮತಟ್ಟಾದ ಪ್ರದೇಶಗಳಲ್ಲಿಯೂ, ಹಳ್ಳ-ಕೊಳ್ಳಗಳಲ್ಲಿಯೂ ಬಿದ್ದು ಅಸುನೀಗುತ್ತಾರೆ.॥೩೪-೩೫॥ ಕೆಲವು ವಾನರರು ವಿಷವನ್ನು ಕುಡಿದು, ಕೆಲವರು ನೇಣುಗಳನ್ನು ಹಾಕಿಕೊಂಡು, ಕೆಲವರು ಬೆಂಕಿಯಲ್ಲಿಬಿದ್ದು, ಕೆಲವರು ಮರಣಾಂತ ಉಪವಾಸ ಮಾಡಿ, ಕೆಲವರು ಶಸ್ತ್ರಗಳಿಂದ ಚುಚ್ಚಿಕೊಂಡು ಅಸುನೀಗುತ್ತಾರೆ.

ನಾನೇನಾದರೂ ಕೃತ-ಕೃತ್ಯನಾಗದೆ ಕಿಷ್ಕಿಂಧೆಗೆ ಮರಳಿ ಸೀತೆಯು ಸಿಗಲಿಲ್ಲವೆಂಬ ಕೆಟ್ಟ ಸಮಾಚಾರವನ್ನು ತಿಳಿಸಿದರೆ, ಇಕ್ಷ್ವಾಕುವಂಶವು ನಾಶವಾಗುತ್ತದೆ. ಕಪಿಕುಲವೂ ನಾಶ ವಾಗುತ್ತದೆ. ಮಹಾಘೋರವಾದ ರೋದನವೇ ನಾನು ಕೇಳಬೇಕಾಗುತ್ತದೆ.॥೩೭॥ ಇದರಿಂದ ಅಂತಹ ಸರ್ವನಾಶಕ್ಕೆ ಕಾರಣನಾಗುವ ನಾನು ಕಿಷ್ಕಿಂಧೆಗೆ ಹೋಗುವುದೇ ಇಲ್ಲ.॥೩೮-೩೯॥ ಮೈಥಿಲಿ ಯನ್ನು ಕಾಣದೆ ಸುಗ್ರೀವನನ್ನು ಸಂದರ್ಶಿಸುವ ಸಾಮರ್ಥ್ಯವೂ ನನಗಿಲ್ಲ.

ನಾನು ಕಿಷ್ಕಿಂಧೆಗೆ ಹೋಗದೆ ಇಲ್ಲಿಯೇ ಇದ್ದುಬಿಟ್ಟರೆ ಧರ್ಮಾತ್ಮರಾದ ರಾಮ-ಲಕ್ಷ್ಮಣರು ಸೀತೆಯು ಸಿಕ್ಕುವಳು ಎಂಬ ಪ್ರತ್ಯಾಶೆಯಿಂದಲಾದರೂ ಪ್ರಾಣಗಳನ್ನು ಧರಿಸಿರುತ್ತಾರೆ.॥೩೯॥ ಅವರೊಡನೆ ಬುದ್ಧಿವಂತರಾದ ವಾನರರೂ ಜೀವಿಸಿರುತ್ತಾರೆ.

ಜನಕನ ಮಗಳಾದ ಸೀತಾದೇವಿಯನ್ನು ಕಾಣದಿರುವ ನಾನು ಇನ್ನು ಮುಂದೆ ಜಿತೇಂದ್ರಿಯನಾಗಿ ವಾನಪ್ರಸ್ಥವನ್ನು ಆಶ್ರಯಿಸಿ, ಮರದ ಬುಡದಲ್ಲಿ ವಾಸಿಸುತ್ತಾ, ತಾನಾಗಿಯೇ ಕೈಮೇಲೆ ಬೀಳುವ ಅಥವಾ ಬಾಯೊಳಗೆ ಬೀಳುವ ಫಲವನ್ನು ಮಾತ್ರ ತಿನ್ನುತ್ತಾ ಜೀವಿಸಿರುತ್ತೇನೆ. ಅನೇಕ ಫಲ-ಮೂಲಗಳಿಂದ ವಿಶಿಷ್ಟವಾದ ಸಮುದ್ರತೀರದಲ್ಲಿ ಚಿತೆಯೊಂದನ್ನು ನಿರ್ಮಿಸಿ ಅರಣಿಯಿಂದ ಪುಟ್ಟಿದ ಪ್ರಜ್ವಲಿಸುವ ಅಗ್ನಿಯಲ್ಲಿ ಪ್ರವೇಶಿಸುತ್ತೇನೆ. ಪ್ರಾಯೋಪವೇಶ ವ್ರತವನ್ನು ಕೈಗೊಂಡು ಯೋಗಸಾಧನೆಯ ಮೂಲಕ ಜೀವಾತ್ಮನ ಶರೀರಸಂಬಂಧವನ್ನು ಬೇರೆಯಾಗಿಸಿಕೊಂಡು ಶರೀರವನ್ನು ತ್ಯಾಗಮಾಡುವೆನು. ॥೪೦-೪೨॥ ಆನಂತರ ಈ ಶರೀರವನ್ನು ಕಾಗೆಗಳೂ, ಮಾಂಸಾಹಾರಿ ಇತರ ಪ್ರಾಣಿಗಳು ತಿಂದುಹಾಕುತ್ತಾರೆ.

ನಾನು ಸೀತಾದೇವಿಯನ್ನು ಕಾಣದಿದ್ದರೆ ಜಲಸಮಾಧಿಯ ಮೂಲಕ ಸಾಯುವೆನು. ನನ್ನ ಅಭಿಪ್ರಾಯದಂತೆ ಈ ವಿಧವಾದ ದೇಹತ್ಯಾಗವನ್ನು ಮಹರ್ಷಿಗಳು ಕಂಡುಕೊಂಡಿದ್ದರು.॥೪೩॥

ಈ ರಾತ್ರಿಯ ಪ್ರಾರಂಭದಲ್ಲೇ ಲಂಕಾಧಿದೇವತೆ ಯನ್ನು ನಾನು ಜಯಿಸಿದೆನು. ಆದರಿಂದ ಇದು ನನಗೆ ಶುಭದಾಯಕ ರಾತ್ರಿಯು. ರಮ್ಯವಾದ ಚಂದ್ರೋದಯದಿಂದ

ಪ್ರಭಗ್ನಾ ಚಿರರಾತ್ರೀಯಂ ಮಮ ಸೀತಾಮಪಶ್ಯತಃ ।
ತಾಪಸೋ ವಾ ಭವಿಷ್ಯಾಮಿ ನಿಯತೋ ವೃಕ್ಷಮೂಲಿಕಃ ॥ ೪೫॥

ನೇತಃ ಪ್ರತಿಗಮಿಷ್ಯಾಮಿ ತಾಮದೃಷ್ಟ್ವಾ ಪ್ರತೀಕ್ಷಮಾಮ್ ।
ಯದೀತಃ ಪ್ರತಿಗಚ್ಛಾಮಿ ಸೀತಾಮನಧಿಗಮ್ಯ ತಾಮ್ ॥ ೪೬॥

ಅಂಗದಃಸಹ ತೈಃಸರ್ವೈರ್ವಾನರೈರ್ನ ಭವಿಷ್ಯತಿ ।
ವಿನಾತೇ ಬಹವೋ ದೋಷಾ ಜೀವನ್ ಭದ್ರಾಣಿ ಪಶ್ಯತಿ ॥ ೪೭॥

ತಸ್ಯಾಶ್ ಪ್ರಾಣಾನ್ ಧರಿಷ್ಯಾಮಿ ಧ್ರುವೋ ಜೀವತಿ ಸಂಗಮಃ ।
ಏವಂ ಬಹುವಿಧಂ ದುಃಖಂ ಮನಸಾ ಧಾರಯನ್ ಮುಹುಃ ॥ ೪೮॥

ನಾಧ್ಯಗಚ್ಛತ್ತದಾ ಪಾರಂ ಶೋಕಸ್ಯ ಕಪಿಕುಂಜರಃ ।
ತತೋ ವಿಕ್ರಮಮಾಸಾದ್ಯ ಧೈರ್ಯವಾನ್ ಕಪಿಕುಂಜರಃ ॥ ೪೯॥

ರಾವಣಂ ವಾ ವಧಿಷ್ಯಾಮಿ ದಶಗ್ರೀವಂ ಮಹಾಬಲಮ್ ।
ಕಾಮಮಸ್ತು ಹೃತಾ ಸೀತಾ ಪ್ರತ್ಯಾಚೀರ್ಣಂ ಭವಿಷ್ಯತಿ ॥ ೫೦॥

ಅಥವೈನಂ ಸಮುತ್ಕ್ಷಿಪ್ಯ ಉಪರ್ಯುಪರಿ ಸಾಗರಮ್ ।
ರಾಮಾಯೋಪಹರಿಷ್ಯಾಮಿ ಪಶುಂ ಪಶುಪತೇರಿವ ॥ ೫೧॥

ಸೀತಾನ್ವೇಷಣೆಗೆ ಅನುಕೂಲವಾಯಿತು, ಇದರಿಂದ ಸುಭಗ, ಪ್ರಾರಂಭಿಕ ವಿಜಯ. ಕೀರ್ತಿತರುವಂತಹುದು ಅದರಿಂದ ನನಗೆ ಕೀರ್ತಿದಾಯಕವು. ನಾನು ಲಂಕೆಯಲ್ಲಿ ಪ್ರವೇಶಿಸಿದ ಖ್ಯಾತಿವೆತ್ತ ರಾತ್ರಿಯು, ಅದರಿಂದ ಇದು ವಿಖ್ಯಾತ. ಜಾಗರಣದಿಂದ ಇದು ದೀರ್ಘವಾದ್ದರಿಂದ ವೀರರಾತ್ರಿಯು. ಇಷ್ಟರವರೆಗೆ ಶುಭವೇ ಜರಗಿದೆ, ಆದರೆ ಸೀತಾದೇವಿಯ ಜಾಡನ್ನು ತಿಳಿಯದೇ ಇರುವುದರಿಂದ ಇವೆಲ್ಲವೂ ಬೂದಿಯಲ್ಲಿ ಪನ್ನೀರು ಸುರಿದಂತಾಯಿತು.(ಅರ್ಥಾತ್ ವ್ಯರ್ಥವಾಗಿ ಕಳೆದು ಹೋಗುತ್ತಿದೆ.) ॥ ೪೪॥

ಆದುದರಿಂದ ಸೀತಾದೇವಿಯನ್ನು ಕಾಣದೆ ನಾನು ಕಿಷ್ಕಿಂಧೆಗೆ ಹೋಗುವುದೇ ಇಲ್ಲ, ನಾನೀಗ ತಪಸ್ವಿಯಾದರೂ ಆಗುತ್ತೇನೆ, ಅಥವಾ ನಿಯತವಾದ ವ್ರತವನ್ನು ಕೈಗೊಂಡು ವೃಕ್ಷದ ಬುಡದಲ್ಲಿ ವಾಸಿಸುತ್ತೇನೆ. ॥೪೫॥ ಪೂಜ್ಯಳಾದ ಸೀತಾದೇವಿಯನ್ನು ದರ್ಶಿಸದೆ ಇಲ್ಲಿಂದ ನಾನು ಮಿತ್ರರಲ್ಲಿಗೆ ಮರಳಿ ಹೋದರೆ ಅಂಗದಾದಿ ವಾನರರೂ ಜೀವಿಸಿರಲಾರರು.

''ನಿರಾಶೆಯಿಂದ ಅಸುನೀಗಿದರೆ ಅನೇಕ ದೋಷಗಳು ಉಂಟಾಗುತ್ತವೆ. ಜೀವಿಸಿದ್ದರೆ ಎಂದಾದರೊಂದು ದಿನ ಶುಭವನ್ನು ಕಾಣಬಹುದು. ॥೪೬-೪೭॥ ಆದರಿಂದ ನಾನು ಪ್ರಾಣಗಳನ್ನು ತೊರೆಯುವುದಿಲ್ಲ; ಬದುಕಿಯೇ ಇರುವೆನು. ಜೀವಿಸಿರುವವನಿಗೆ ಸುಖವು ಲಭಿಸುವುದು ನಿಶ್ಚಯವು.'' ಕಪಿಶ್ರೇಷ್ಠನಾದ ಹನುಮಂತನು ಹೀಗೆ ಪರಿ-ಪರಿಯಾಗಿ ಯೋಚಿಸುತ್ತಾ ನಾನಾವಿಧವಾದ ದುಃಖಿಗಳನ್ನು ಮನಸ್ಸಿನಲ್ಲಿ ತುಂಬಿ ಕೊಂಡಿದ್ದನು. ॥೪೮॥ ಈ ಶೋಕದಿಂದ ಹೊರಬರಲು ಅವನಿಗೆ ಸಾಧ್ಯವಾಗಲೇ ಇಲ್ಲ.

ಅನಂತರ ಧೈರ್ಯಶಾಲಿಯೂ, ಕಪಿಶ್ರೇಷ್ಠನೂ ಆದ ಮಾರುತಿಯು ತನ್ನ ಪರಾಕ್ರಮವನ್ನು ಸ್ಮರಿಸುತ್ತಾ ಹೀಗೆ ಅಂದು ಕೊಂಡನು – ಅಪಹೃತಳಾದ ಸೀತಾದೇವಿಯು ತನ್ನ ಪಾಡಿಗೆ ಎಲ್ಲಾದರೂ ಇರಲಿ, ಮುಂದೇನಾಗುವುದೋ ಆಗಲೀ, ಆದರೆ ನಾನೀಗ ಮೊದಲಿಗೆ ಮಹಾಬಲನಾದ ಹತ್ತು ತಲೆಯ ರಾವಣನನ್ನೇ ಸಂಹಾರ ಮಾಡುತ್ತೇನೆ. ಇದರಿಂದ ಅವನು ಮಾಡಿದ ಅಪರಾಧಕ್ಕೆ ತಕ್ಕ ಪ್ರತೀಕಾರ ಆದಂತಾಗುತ್ತದೆ. ಹಾಗಿಲ್ಲದಿದ್ದರೆ ಇವನನ್ನೇ ಎತ್ತಿಕೊಂಡು ಸಮುದ್ರವನ್ನು ಲಂಘಿಸಿ ಪಶುಪತಿಗೆ ಪಶುವನ್ನು ಒಪ್ಪಿಸುವಂತೆ ರಾಮನಿಗೆ ಒಪ್ಪಿಸಿಬಿಡುತ್ತೇನೆ.* ॥೪೯-೫೧॥

ಮಹಾಭಾಗೆಯಾದ ಸೀತಾದೇವಿಯನ್ನು ಕಾಣದೇ ಹನುಮಂತನು ಹೀಗೆ ಪರಿ-ಪರಿಯಾಗಿ ಚಿಂತಿಸುತ್ತಿದ್ದನು. ಚಿಂತೆ ಮತ್ತು ಶೋಕಗಳಿಂದ ಅವನ ಮನಸ್ಸು ತುಂಬಿಹೋಗಿತ್ತು. ಮುಂದೇನು ಮಾಡಬೇಕೆಂಬುದರ ಬಗೆಗೆ ಪುನಃ-ಪುನಃ ಚಿಂತಿಸುತ್ತಲೇ ಇದ್ದನು. 'ಯಶೋವತಿಯಾದ, ಶ್ರೀರಾಮನ

---

* ''ಇಮಂ ಪಶುಂ ಪಶುಪತೇ ತೇ ಅದ್ಯ ಬಧ್ನಾಮ್ಯಗ್ನೇ'' (ತೈತ್ತರೀಯ ಸಂಹಿತಾ)
ಪಶುಪತಿ ಅಂದರೆ ಅಗ್ನಿ ಎಂದರ್ಥ.

ಇತಿ ಚಿಂತಾಂ ಸಮಾಪನ್ನಃ ಸೀತಾಮನಧಿಗಮ್ಯ ತಾಮ್ ।
ಧ್ಯಾನಶೋಕಪರೀತಾತ್ಮಾ ಚಿಂತಯಾಮಾಸ ವಾನರಃ ॥ ೫೨॥

ಯಾವತ್ ಸೀತಾಂ ಪಶ್ಯಾಮಿ ರಾಮಪತ್ನೀಂ ಯಶಸ್ವಿನೀಮ್ ।
ತಾವದೇತಾಂ ಪುರೀಂ ಲಂಕಾಂ ವಿಚಿನೋಮಿ ಪುನಃ ಪುನಃ ॥ ೫೩॥

ಸಂಪಾತಿವಚನಾಚ್ಚಾಪಿ ರಾಮಂ ಯದ್ಯಾನಯಾಮ್ಯಹಂ ।
ಅಪಶ್ಯನ್ ರಾಘವೋ ಭಾರ್ಯಾಂ ನಿರ್ದಹೇತ್ ಸರ್ವವಾನರಾನ್ ॥

ಇಕ್ಷ್ವಾಕ ನಿಯತಾಹಾರೋ ವತ್ಸ್ಯಾಮಿ ನಿಯತೇಂದ್ರಿಯಃ ।
ನ ಮತ್ಕೃತೇ ವಿನಶ್ಯೇಯುಃ ಸರ್ವೇ ತೇ ನರವಾನರಾಃ ॥ ೫೫॥

ಅಶೋಕವನಿಕಾ ಚೇಯಂ ದೃಶ್ಯತೇ ಯಾ ಮಹಾದ್ರುಮಾ ।
ಇಮಾಮಭಿಗಮಿಷ್ಯಾಮಿ ನ ಹೀಯಂ ವಿಚಿತಾ ಮಯಾ ॥ ೫೬॥

ಪೂರ್ಣಾ ರುದ್ರಾಂಸ್ತಥಾದಿತ್ಯಾನ್ವಿಶ್ವೇ ಮರುತೋಽಪಿ ಚ ।
ನಮಸ್ಕೃತ್ವಾ ಗಮಿಷ್ಯಾಮಿ ರಕ್ಷಸಾಂ ಶೋಕನರ್ದನಃ ॥ ೫೭॥

ಜಿತ್ವಾ ತು ರಾಕ್ಷಸಾನ್ ಸರ್ವಾನಿಕ್ಷ್ವಾಕುಕುಲನಂದಿನೀಮ್ ।
ಸಂಪ್ರದಾಸ್ಯಾಮಿ ರಾಮಾಯ ಯಥಾ ಸಿದ್ಧಿಂ ತಪಸ್ವಿನೇ ॥ ೫೮॥

ಸ ಮುಹೂರ್ತಮಿವ ಧ್ಯಾತ್ವಾ ಚಿಂತಾವಗ್ರಥಿತೇಂದ್ರಿಯಃ ।
ಉದತಿಷ್ಠನ್ಮಹಾತೇಜಾ ಹನೂಮಾನ್ ಮಾರುತಾತ್ಮಜಃ ॥ ೫೯॥

ನಮೋಽಸ್ತು ರಾಮಾಯ ಸಲಕ್ಷ್ಮಣಾಯ
ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ ।
ನಮೋಽಸ್ತು ರುದ್ರೇಂದ್ರಯಮಾನಿಲೇಭ್ಯೋ
ನಮೋಽಸ್ತು ಚಂದ್ರಾರ್ಕಮರುದ್ಗಣೇಭ್ಯಃ ॥ ೬೦॥

ಸ ತೇಭ್ಯಸ್ತು ನಮಸ್ಕೃತ್ವಾ ಸುಗ್ರೀವಾಯ ಚ ಮಾರುತಿಃ ।
ದಿಶಃ ಸರ್ವಾಃ ಸಮಾಲೋಕ್ಯ ಹ್ಯಶೋಕವನಿಕಾಂ ಪ್ರತಿ ॥ ೬೧॥

ಸ ಗತ್ವಾ ಮನಸಾ ಪೂರ್ವಮಶೋಕವನಿಕಾಂ ಶುಭಾಮ್ ।
ಉತ್ತರಂ ಚಿಂತಯಾಮಾಸ ವಾನರೋ ಮಾರುತಾತ್ಮಜಃ ॥ ೬೨॥

ನ್ಯಗ್ರೋಧಂ ತು ರಕ್ಷೋಬಹುಲಾ ಭವಿಷ್ಯತಿ ವನಾಕುಲಾ ।
ಅಶೋಕವನಿಕಾಽಚಿಂತ್ಯಾ ಸರ್ವಸಂಸ್ಕಾರಸಂಸ್ಕೃತಾ ॥ ೬೩॥

ಪತ್ನಿಯಾದ ಸೀತಾದೇವಿಯನ್ನು ಕಾಣುವವರೆಗೆ ನಾನು ಈ ಲಂಕೆಯಲ್ಲಿ ಮರಳಿ-ಮರಳಿ ಹುಡುಕುತ್ತಲೇ ಇರುತ್ತೇನೆ.' ॥೫೨-೫೫॥

ಸಂಪಾತಿಯ ಮಾತಿನಂತೆ ಸೀತೆಯು ಲಂಕೆಯಲ್ಲಿರುವಳೆಂದು ತಿಳಿದು ಒಂದು ವೇಳೆ ಶ್ರೀರಾಮನನ್ನು ನಾನು ಇಲ್ಲಿಗೆ ಕರತಂದರೆ ತನ್ನ ಭಾರ್ಯೆಯಾದ ಸೀತೆಯನ್ನು ಕಾಣದೆ, ರಾಘವನು ಕುಪಿತನಾಗಿ ಎಲ್ಲ ವಾನರರನ್ನು ಸುಟ್ಟುಬಿಡುವನು. ಆದುದರಿಂದ ನಾನು ನಿಯತವಾದ ಆಹಾರವನ್ನು ಸೇವಿಸುತ್ತಾ ಜಿತೇಂದ್ರಿಯನಾಗಿ ಇಲ್ಲಿಯೇ ಇದ್ದು ಬಿಡುವೆನು. ನನ್ನ ಸಲುವಾಗಿ ನರರೂ-ವಾನರರೂ ವಿನಾಶಕೊಂದದಿರಲಿ.॥೫೪-೫೫॥

ಇದೋ ಮುಂದೆ ಕಾಣುತ್ತಿರುವ ಅನೇಕ ಮಹಾವೃಕ್ಷಗಳಿಂದ ಕೂಡಿರುವ, ವಿಸ್ತಾರವಾದ ಈ ಅಶೋಕವನದಲ್ಲಿ ನಾನು ಇದುವರೆವಿಗೂ ಸೀತೆಯನ್ನು ಹುಡುಕಿಲ್ಲ, ಈಗ ಈ ವನವನ್ನು ಹೊಕ್ಕು ಸೀತೆಯನ್ನು ಇಲ್ಲಿಯೂ ಹುಡುಕುತ್ತೇನೆ.॥೫೬॥

ರಾಕ್ಷಸಿಗೆ ಶೋಕವನ್ನು ಹೆಚ್ಚಿಸಲು ಬಂದಿರುವ ನಾನು ಆಷ್ಟವಸುಗಳನ್ನೂ, ಏಕಾದಶರುದ್ರರನ್ನೂ, ದ್ವಾದಶಾದಿತ್ಯರನ್ನೂ ಅಶ್ವಿನೀದೇವತೆಗಳನ್ನೂ, ಮರುತ್ತರನ್ನೂ ನಮಸ್ಕರಿಸಿ, ಸೀತೆಯನ್ನು ಹುಡುಕಲು ಈ ಅಶೋಕವನವನ್ನು ಪ್ರವೇಶಿಸುತ್ತೇನೆ. ॥೫೭॥ ರಾಕ್ಷಸರೆಲ್ಲರನ್ನು ಸಂಹರಿಸಿ, ಇಕ್ಷ್ವಾಕುಕುಲನಂದಿನಿ ಯಾದ ಸೀತಾದೇವಿಯನ್ನು, ಓರ್ವ ಮಹಾತಪಸ್ವಿಗೆ ಪ್ರಾಪ್ತವಾಗುವ ತಪಃಫಲದಂತೆ ಶ್ರೀರಾಮನಿಗೆ ಒಪ್ಪಿಸುತ್ತೇನೆ.''॥೫೮॥

ಚಿಂತೆಯಿಂದ ವ್ಯಾಕುಲವಾದ ಮನಸ್ಸಿನಿಂದ ಕೂಡಿದ್ದ, ಮಹಾ ತೇಜಸ್ವಿಯಾದ ವಾಯುಪುತ್ರನು ಕ್ಷಣಕಾಲ ಚಿಂತಿಸಿ ಒಂದು ನಿರ್ಧಾರಕ್ಕೆ ಬಂದು ಛಟ್ಟನೆ ಎದ್ದು ನಿಂತು ದೇವತೆಗಳನ್ನು ಪ್ರಾರ್ಥಿಸಿದನು- ॥೫೯॥

''ಶ್ರೀರಾಮನಿಗೆ ನಮಸ್ಕಾರವು. ಜನಕಸುತೆಯಾದ ಜಾನಕಿಗೆ ನಮಸ್ಕಾರವು. ಲಕ್ಷ್ಮಣ ದೇವನಿಗೂ ನಮಸ್ಕಾರವು. ರುದ್ರನಿಗೂ, ಇಂದ್ರನಿಗೂ, ಯಮನಿಗೂ, ವಾಯು ದೇವರಿಗೂ,ನಮಸ್ಕಾರಗಳು. ಸೂರ್ಯ,ಚಂದ್ರ, ಮರುದ್ಗಣರಿಗೂ,ನಮಸ್ಕಾರಮಾಡುತ್ತೇನೆ.॥೬೦॥ ಹೀಗೆ ಮಾರುತಿಯು ಎಲ್ಲರಿಗೂ ನಮಸ್ಕರಿಸಿ ಒಡೆಯನಾದ ಸುಗ್ರೀವನನ್ನು ಮನಸ್ಸಿನಲ್ಲೇ ನಮಸ್ಕರಿಸಿ, ಸುತ್ತಲೂ ಎಲ್ಲಕಡೆಗಳಲ್ಲಿಯೂ ದೃಷ್ಟಿ ಹರಿಸಿ ಅಶೋಕವನದ ಕಡೆಗೆ ಹೊರಟನು.॥೬೧॥ ಹನುಮಂತನು ಮೊದಲು ಅಶೋಕವನವನ್ನು ಮನಸ್ಸಿನಿಂದಲೇ ಪ್ರವೇಶಿಸಿ, ಆಲ್ಲೇ ಇರುವೆನೆಂದು ಭಾವಿಸಿ, ಮುಂದೆ ಮಾಡಬೇಕಾದ ಕಾರ್ಯಗಳ ಬಗೆಗೆ ಹಾಗೂ ಆಲ್ಲಿರಬಹುದಾದ ವಾತಾವರಣದ ಬಗ್ಗೆ ಯೋಚಿಸತೊಡಗಿದನು.॥೬೨॥

'' ಉದ್ಯಾನವನಗಳ ಸಮೂಹಗಳಿಂದ ವ್ಯಾಪ್ತವಾಗಿರುವ, ಪುಣ್ಯತಮವಾದ, ಸಕಲವಿಧವಾದ ಸಂಸ್ಕಾರಗಳಿಂದಲೂ ಸಂಸ್ಕೃತವಾಗಿ ಚೆನ್ನಾಗಿ ಬೆಳೆದಿರುವ ಗಿಡ-ಮರ-ಬಳ್ಳಿಗಳಿಂದ ತುಂಬಿರುವ ಈ ಅಶೋಕವನವನ್ನು ಮೊದಲು ನೋಡಿಲ್ಲ. ಇಲ್ಲಿ

ರಕ್ಷಿಣಶ್ಚಾತ್ರ ವಿಹಿತಾ ನೂನಂ ರಕ್ಷಂತಿ ಪಾದಪಾನ್ ।
ಭಗವಾನಪಿ ಸರ್ವಾತ್ಮಾ ನಾತಿಕ್ಲೇಶಂ ಪ್ರವಾತಿ ವೈ ॥ ೬೪॥

ಸಂಕ್ಷಿಪ್ತೋಽಯಂ ಮಯಾತ್ಮಾ ಚ ರಾಮಾರ್ಥೇ ರಾವಣಸ್ಯ ಚ ।
ಸಿದ್ಧಿಂ ಮೇ ಸಂವಿಧಾಸ್ಯಂತಿ ದೇವಾಃ ಸರ್ಷಿಗಣಾಸ್ತ್ವಿಹ ॥ ೬೫॥

ಬ್ರಹ್ಮಾ ಸ್ವಯಂಭೂರ್ಭಗವಾನ್ ದೇವಾಶ್ಚೈವ ದಿಶಂತು ಮೇ ।
ಸಿದ್ಧಿಮಗ್ನಿಶ್ಚ ವಾಯುಶ್ಚ ಪುರುಹೂತಶ್ಚ ವಜ್ರಭೃತ್ ॥ ೬೬॥

ವರುಣಃ ಪಾಶಹಸ್ತಶ್ಚ ಸೋಮಾದಿತ್ಯೌ ತಥೈವ ಚ ।
ಅಶ್ವಿನೌ ಚ ಮಹಾತ್ಮಾನೌ ಮರುತಃ ಶರ್ವ ಏವ ಚ ॥ ೬೭॥

ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚೈವ ಯಃ ಪ್ರಭುಃ ।
ದಾಸ್ಯಂತಿ ಮಮ ಯೇ ಚಾನ್ಯೇ ಹೃದಯಸ್ಥಾ ಸಖಿ ಗೋಚರಾಃ ॥ ೬೮॥

ತದುನ್ನಸಂ ಪಾಂಡರದಂತಮವ್ರಣಂ
ಶುಚಿಸ್ಮಿತಂ ಪದ್ಮಪಲಾಶಲೋಚನಮ್ ।
ದ್ರಕ್ಷ್ಯೇ ತದಾರ್ಯಾವದನಂ ಕದಾ ನ್ವಹಂ
ಪ್ರಸನ್ನ ತಾರಾಧಿಪತುಲ್ಯದರ್ಶನಮ್ ॥ ೬೯॥

ಕ್ಷುದ್ರೇಣ ಪಾಪೇನ ನೃಶಂಸಕರ್ಮಣಾ
ಸುದಾರುಣಾಲಂಕೃತವೇಷಧಾರಿಣಾ ।
ಬಲಾಭಿಭೂತಾ ಹ್ಯಬಲಾ ತಪಸ್ವಿನೀ
ಕಥಂ ನು ಮೇ ದೃಷ್ಟಿಪಥೇಽದ್ಯ ಸಾ ಭವೇತ್ ॥ ೭೦॥

ಅನೇಕ ರಾಕ್ಷಸರು ಇರಬಹುದೆಂಬುದು ನಿಶ್ಚಯವು.॥೬೨॥ ಇಲ್ಲಿ ವನದ ವೃಕ್ಷರಕ್ಷಣೆಗಾಗಿ ರಾಕ್ಷಸಭಟರು ತಪ್ಪದೇ ನಿಯೋಜಿತರಾಗಿರಬಹುದು. ಸರ್ವಾತ್ಮನಾದ ಭಗವಾನ್ ವಾಯುದೇವರೂ ಕೂಡ ವೃಕ್ಷಗಳು ಹೆಚ್ಚು ಅಲ್ಲಾಡದಂತೆ ಮೆಲ್ಲ-ಮೆಲ್ಲನೆ ಬೀಸುತ್ತಿರುವನು.॥೬೪॥ ಶ್ರೀರಾಮನ ಕಾರ್ಯಸಾಧನೆಗಾಗಿಯೂ, ರಾವಣನು ನೋಡದಿರಲೆಂದು ನಾನು ನನ್ನ ಶರೀರವನ್ನು ಸಣ್ಣದಾಗಿಸಿಕೊಂಡಿದ್ದೇನೆ. ದೇವತೆಗಳೂ, ಮಹರ್ಷಿಗಳ ಸಮೂಹಗಳೂ, ನನ್ನ ಕಾರ್ಯವು ಸಿದ್ಧಿಸುವಂತೆ ಅನುಗ್ರಹಿಸಲಿ. ॥೬೫॥ ಸ್ವಯಂಭುವಾದ ಬ್ರಹ್ಮದೇವರೂ, ಇತರ ದೇವತೆಗಳೂ, ಅಗ್ನಿಯೂ, ವಾಯುವೂ, ವಜ್ರಪಾಣಿಯಾದ ಇಂದ್ರನೂ ಪಾಶಹಸ್ತನಾದ ವರುಣನೂ ಹಾಗೇ ಸೂರ್ಯ-ಚಂದ್ರರೂ, ಮಹಾತ್ಮರಾದ ಅಶ್ವಿನೀದೇವತೆಗಳೂ, ಮರುತ್ತುಗಳೂ, ಶಿವನು ನನ್ನ ಕಾರ್ಯವು ಸಿದ್ಧಿಸುವಂತೆ ಅನುಗ್ರಹಿಸಲಿ.॥೬೬-೬೭॥ ಸಕಲ ಪ್ರಾಣಿಗಳೂ, ಸಮಸ್ತ ಜೀವಕೋಟಿಗೆ ಅಧಿಪತಿಯಾದ ಶ್ರೀಮಹಾವಿಷ್ಣುವು ಅದೃಶ್ಯರಾಗಿ ಸಂಚರಿಸುವ ಇತರ ದೇವತೆಗಳೂ ನನ್ನ ಕಾರ್ಯಸಿದ್ಧಿಗಾಗಿ ಆಶೀರ್ವದಿಸಲಿ.॥೬೮॥

ಆರ್ಯೆಯಾದ ಸೀತಾದೇವಿಯ ಮುಖಾರವಿಂದವು, ಅಂದ ವಾದ ಮೂಗಿನಿಂದ ಕೂಡಿದೆ. ಬಿಳುಪಾದ ಹಲ್ಲುಗಳಿಂದ ಶೋಭಾಯಮಾನವಾಗಿದೆ. ಆ ಸುಂದರ ಮುಖದಲ್ಲಿ ಯಾವುದೇ ಕಲೆಗಳು ಇಲ್ಲ. ಶುಭ್ರವಾದ ಮಂದಹಾಸದಿಂದ ಯುಕ್ತವಾಗಿದೆ. ತಾವರೆಯ ಎಸಳಿಗೆ ಸಮಾನವಾದ ಕಣ್ಣುಗಳಿಂದ ಕೂಡಿದ್ದು, ತಾರಾಗಣ ಅಧಿಪತಿಯಾದ ಚಂದ್ರನಂತೆ ಪ್ರಭೆಯಿಂದೊಡಗೂಡಿದೆ. ಅಂತಹ ಸುಂದರವಾದ ಮುಖಾರವಿಂದವನ್ನು ನಾನು ಎಂದು ನೋಡುವೆನೋ?॥೬೯॥

ರಾವಣನು ಕ್ಷುದ್ರನೂ, ಪಾಪಿಷ್ಠನೂ, ಕ್ರೂರಕರ್ಮನೂ, ಭಯಂಕರವಾದ ವೇಷವನ್ನು ಧರಿಸುವವನೂ ಆದ ಆ ದುಷ್ಟನು ಅಬಲೆಯಾದ, ಶ್ರೀರಾಮನನ್ನೇ ಸದಾಕಾಲ ಧ್ಯಾನಿಸುತ್ತಿರುವ, ಪತಿಪರಾಯಣಳಾದ ಸೀತಾದೇವಿಯನ್ನು ಬಲವಂತವಾಗಿ ಅಪಹರಿಸಿ ಕೊಂಡು ಬಂದು ತನ್ನ ಅಧೀನದಲ್ಲಿ ಇಟ್ಟು ಕೊಂಡಿರುವನು. ಅಂತಹವಳು ನನ್ನ ದೃಷ್ಟಿಗೆ ಹೇಗೆ ಗೋಚರಿಸುವಳು?ನನಗೆಲ್ಲಿ ಸಿಗುವಳು?॥೭೦॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ತ್ರಯೋದಶಃ ಸರ್ಗಃ ॥ ೧೩ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿಮೂರನೆಯ ಸರ್ಗವು ಮುಗಿಯಿತು.

* * *

ಹದಿನಾಲ್ಕನೆಯ ಸರ್ಗ

ಹನುಮಂತನು ಅಶೋಕವನವನ್ನು ಪ್ರವೇಶಿಸಿ ಅದರ ಸೊಬಗನ್ನು ನೋಡಿದುದು, ಅಶೋಕವೃಕ್ಷದ ಮೇಲೆ ಕುಳಿತು ಸೀತೆಯಿರುವ ಸ್ಥಳವನ್ನು ಹುಡುಕಿದುದು –

ಸ ಮುಹೂರ್ತಮಿವ ಧ್ಯಾತ್ವಾ ಮನಸಾ ಚಾಧಿಗಮ್ಯ ತಾಮ್ ।
ಅವಪ್ಲುತೋ ಮಹಾತೇಜಾಃ ಪ್ರಾಕಾರಂ ತಸ್ಯ ವೇಶ್ಮನಃ ॥ ೧॥

ಸ ತು ಸಂಹೃಷ್ಟಸರ್ವಾಂಗಃ ಪ್ರಾಕಾರಸ್ಥೋ ಮಹಾಕಪಿಃ ।
ಪುಷ್ಪಿತಾಗ್ರಾನ್ ವಸಂತಾದೌ ದದರ್ಶ ವಿವಿಧಾನ್ ದ್ರುಮಾನ್ ॥ ೨॥

ಸಾಲಾನಶೋಕಾನ್ ಭವ್ಯಾಂಶ್ಚ ಚಂಪಕಾಂಶ್ಚ ಸುಪುಷ್ಪಿತಾನ್ ।
ಉದ್ದಾಲಕಾನ್ನಾಗವೃಕ್ಷಾಂಶ್ಚೂತಾನ್ ಕಪಿಮೂಖಾನಪಿ ॥ ೩॥

ಅಥಾಮ್ರವಣಸಂಛನ್ನಾಂ ಲತಾಶತಸಮಾವೃತಾಮ್ ।
ಜ್ಯಾಮುಕ್ತ ಇವ ನಾರಾಚಃ ಪುಪ್ಲುವೇ ವೃಕ್ಷವಾಟಿಕಾಮ್ ॥ ೪॥

ಸ ಪ್ರವಿಶ್ಯ ವಿಚಿತ್ರಾಂ ತಾಂ ವಿಹಗೈರಭಿನಾದಿತಾಮ್ ।
ರಾಜತೈಃ ಕಾಂಚನೈಶ್ಚೈವ ಪಾದಪೈಃ ಸರ್ವತೋ ವೃತಾಮ್ ॥ ೫॥

ವಿಹಗೈರ್ಮೃಗಸಂಘೈಶ್ಚ ವಿಚಿತ್ರಾಂ ಚಿತ್ರಕಾನನಾಮ್ ।
ಉದಿತಾದಿತ್ಯಸಂಕಾಶಾಂ ದದರ್ಶ ಹನುಮಾನ್ ಕಪಿಃ ॥ ೬॥

ವೃತಾಂ ನಾನಾವಿಧೈರ್ವೃಕ್ಷೈಃ ಪುಷ್ಪೋಪಗಫಲೋಪಗೈಃ ।
ಕೋಕಿಲೈರ್ಭೃಂಗರಾಜೈಶ್ಚ ಮತ್ತೈರ್ನಿತ್ಯನಿಷೇವಿತಾಮ್ ॥ ೭॥

ಪ್ರಹೃಷ್ಟಮನುಜೇ ಕಾಲೇ ಮೃಗಪಕ್ಷಿಸಮಾಕುಲೇ ।
ಮತ್ತಬರ್ಹಿಣಸಂಘುಷ್ಟಾಂ ನಾನಾದ್ವಿಜಗಣಾಯುತಾಮ್ ॥ ೮॥

ಮಾರ್ಗಮಾಣೋ ವರಾರೋಹಾಂ ರಾಜಪುತ್ರೀಮನಿಂದಿತಾಮ್ ।
ಸುಖಪ್ರಸುಪ್ತಾನ್ ವಿಹಗಾನ್ ಬೋಧಯಾಮಾಸ ವಾನರಃ ॥ ೯॥

ಮಹಾತೇಜಸ್ವಿಯಾದ ಆ ಹನುಮಂತನು ಕ್ಷಣಕಾಲದ ವರೇಗೆ ಮುಂದೆ ಮಾಡಬೇಕಾದ ಕಾರ್ಯದ ಬಗೆಗೆ ಯೋಚಿಸುತ್ತಾ, ಸೀತಾದೇವಿಯನ್ನು ಮನಸ್ಸಿನಲ್ಲಿಯೇ ಧ್ಯಾನಿಸಿ, ಮಾನಸಿಕವಾಗಿ ಅಶೋಕವನವನ್ನು ಸೇರಿದನು. ಅನಂತರ ರಾವಣನ ಭವನದಿಂದ ಹಾರಿ ಅಶೋಕವನದ ಪ್ರಾಕಾರವನ್ನು ಆಡರಿದನು.॥೧॥ ಪ್ರಾಕಾರದ ಮೇಲಿದ್ದ ಆ ಮಹಾಕಪಿವರನು ಪುಲಕಿತಗಾತ್ರನಾಗಿ, ವಸಂತ ಋತುವಿನ ಪ್ರಾರಂಭದಲ್ಲಿ ಸಮೃದ್ಧವಾಗಿ ಪುಷ್ಪಗಳಿಂದ ಕೂಡಿರುವ ವಿಧ-ವಿಧವಾದ ವೃಕ್ಷಗಳನ್ನು ಆ ಅಶೋಕವನದಲ್ಲಿ ನೋಡಿದನು.॥೨॥

ಅಲ್ಲಿ ಅನೇಕ ಮತ್ತಿಮರಗಳೂ, ಭವ್ಯವಾದ ಅಶೋಕ ವೃಕ್ಷಗಳೂ, ಹೂವುಗಳಿಂದ ಅಲಂಕೃತವಾದ ಸಂಪಿಗೆಯ ಮರಗಳೂ, ಚಳ್ಳೆಮರಗಳೂ, ನಾಗಸಂಪಿಗೆ ಮರಗಳೂ, ಅನೇಕಜಾತಿಯ ಮಾವಿನಮರಗಳೂ ಇದ್ದುವು. ಕೋತಿಮಾವಿನ ಹಣ್ಣಿನಮರಗಳೂ ಅಲ್ಲಿ ಹೇರಳವಾಗಿದ್ದವು. ನೂರಾರು ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟ ಆ ವೃಕ್ಷವಾಟಿಕೆಯನ್ನು ಬಿಲ್ಲಿನ ನಾಣಿನಿಂದ ಹೊರಟ ಬಾಣದಂತೆ ಹನುಮಂತನು ವೇಗವಾಗಿ ಒಂದೇ ನೆಗೆತಕ್ಕೆ ಅಶೋಕಾವನಕ್ಕೆ ಹಾರಿದನು.॥೩-೪॥

ಅವನು ಚಿತ್ರ-ವಿಚಿತ್ರವಾದ ವೃಕ್ಷವಾಟಿಕೆಯನ್ನು ಹೊಕ್ಕನು. ಅಲ್ಲಿ ಪಕ್ಷಿಗಳ ಕಿಲ-ಕಿಲಧ್ವನಿಗಳು ತುಂಬಿದ್ದವು. ಚಿನ್ನ ಮತ್ತು ಬೆಳ್ಳಿಯಂತೆ ಶೋಭಿಸುವ ವೃಕ್ಷಗಳಿಂದಲೂ, ಪಕ್ಷಿಗಳ, ಮೃಗಗಳ ಸಮೂಹಗಳಿಂದ ಕೂಡಿದ್ದು ವಿಚಿತ್ರವಾಗಿ ಕಾಣುತ್ತಿತ್ತು. ಅದು ಉದಿಸಿದ ಸೂರ್ಯಕಾಂತಿಯಂತೆ ಪ್ರಕಾಶಿಸುತ್ತಾ ವಿರಾಜಿಸುತ್ತಿದ್ದಿತು. ಹನುಮಂತನು ಅಂತಹ ವಿಚಿತ್ರವಾದ ಉದ್ಯಾನ ವನವನ್ನು ನೋಡಿದನು.॥೫-೬॥ ಆ ಸಮಯವು ಮಾನವ ರೆಲ್ಲರೂ ನಕ್ಕು-ನಲಿಯುವ ವಸಂತಕಾಲವಾಗಿದ್ದಿತು. ಫಲ- ಪುಷ್ಪಗಳಿಂದ ಸಮೃದ್ಧವಾದ ನಾನಾವಿಧ ವೃಕ್ಷಗಳಿಂದ ವ್ಯಾಪ್ತವಾಗಿದ್ದಿತು.ಮದಿಸಿದ ದುಂಬಿಗಳೂ, ಕೋಗಿಲೆಗಳೂ ಆ ವೃಕ್ಷಗಳನ್ನು ಆಶ್ರಯಿಸಿದ್ದವು. ಮತ್ತ ಮಯೂರಗಳು ನಿನಾದ ಮಾಡುತ್ತಿದ್ದವು. ನಾನಾ ವಿಧವಾದ ಪಕ್ಷಿಗಳ ಸಮೂಹಗಳಿಂದ, ಮೃಗಗಳ ಹಿಂಡಿನಿಂದ ಸಮಾವೃತವಾಗಿತ್ತು. ಅಂತಹ ಸುಂದರವಾದ ಅಶೋಕವನವನ್ನು ಹನುಮಂತನು ನೋಡಿದನು. ॥೭-೮॥

ಸರ್ವಶುಭಲಕ್ಷಣಸಂಪನ್ನೆಯೂ ಸೌಂದರ್ಯರಾಶಿಯೂ ಆದ ಜನಕಸುತೆಯನ್ನು ಹುಡುಕುತ್ತಿದ್ದ ಹನುಮಂತನು ಸುಖನಿದ್ದೆಯಲ್ಲಿದ್ದ ಪಕ್ಷಿಗಳನ್ನು ರೆಂಬೆಗಳನ್ನು ಅಲ್ಲಾಡಿಸಿ ಎಚ್ಚರಿಸಿದನು.॥೯॥ ಗಾಬರಿಗೊಂಡು ಮೇಲಕ್ಕೆ ಹಾರುತ್ತಿದ್ದ

ಉತ್ಪತದ್ಭಿರ್ದ್ವಿಜಗಣೈಃ ಪಕ್ಷೈಃ ಸಾಲಾಃ ಸಮಾಹತಾಃ ।
ಅನೇಕವರ್ಣಾ ವಿವಿಧಾ ಮುಮುಚುಃ ಪುಷ್ಪವೃಷ್ಟಯಃ ॥ ೧೦॥

ಪುಷ್ಪಾವಕೀರ್ಣಃ ಶುಶುಭೇ ಹನುಮಾನ್ ಮಾರುತಾತ್ಮಜಃ ।
ಅಶೋಕವನಿಕಾಮಧ್ಯೇ ಯಥಾ ಪುಷ್ಪಮಯೋ ಗಿರಿಃ ॥ ೧೧॥

ದಿಶಃ ಸರ್ವಾಃ ಪ್ರಧಾವಂತಂ ವೃಕ್ಷಷಂಡಗತಂ ಕಪಿಮ್ ।
ದೃಷ್ಟ್ವಾ ಸರ್ವಾಣಿ ಭೂತಾನಿ ವಸಂತ ಇತಿ ಮೇನಿರೇ ॥ ೧೨॥

ವೃಕ್ಷೇಭ್ಯಃ ಪತಿತೈಃ ಪುಷ್ಪೈರವಕೀರ್ಣಾ ಪೃಥಗ್ವಿಧೈಃ ।
ರರಾಜ ವಸುಧಾ ತತ್ರ ಪ್ರಮದೇವ ವಿಭೂಷಿತಾ ॥ ೧೩॥

ತರಸ್ವಿನಾ ತೇ ತರವಸ್ತರಸಾಭಿಪ್ರಕಂಪಿತಾಃ ।
ಕುಸುಮಾನಿ ವಿಚಿತ್ರಾಣಿ ಮುಮುಚುಃ ಕಪಿನಾ ತದಾ ॥ ೧೪॥

ನಿರ್ಧೂತಪತ್ರಶಿಖರಾಃ ಶೀರ್ಣಪುಷ್ಪಫಲಾ ದ್ರುಮಾಃ ।
ನಿಕ್ಷಿಪ್ತ ವಸ್ತ್ರಾಭರಣಾ ಧೂರ್ತಾ ಇವ ಪರಾಜಿತಾಃ ॥ ೧೫॥

ಹನೂಮತಾ ವೇಗವತಾ ಕಂಪಿತಾಸ್ತೇ ನಗೋತ್ತಮಾಃ ।
ಪುಷ್ಪಪರ್ಣಫಲಾನ್ಯಾಶು ಮುಮುಚುಃ ಪುಷ್ಪಶಾಲಿನಃ ॥ ೧೬॥

ವಿಹಂಗಸಂಘೈರ್ಹೀನಾಸ್ತೇ ಸ್ಕಂಧಮಾತ್ರಾಶ್ರಯಾ ದ್ರುಮಾಃ ।
ಬಭೂವುರಗಮಾಃ ಸರ್ವೇ ಮಾರುತೇನೇವ ನಿರ್ಧುತಾಃ ॥ ೧೭॥

ನಿರ್ಧೂತಕೇಶೀ ಯುವತಿರ್ಯಥಾ ಮೃದಿತವರ್ಣಕಾ ।
ನಿಷ್ಪೀತಶುಭದಂತೋಷ್ಠೀ ನಖೈರ್ದಂತೈಶ್ಚ ವಿಕ್ಷತಾ ॥ ೧೮॥

ತಥಾ ಲಾಂಗೂಲಹಸ್ತೈಶ್ಚ ಚರಣಾಭ್ಯಾಂ ಚ ಮರ್ದಿತಾ ।
ಬಭೂವಾಶೋಕವನಿಕಾ ಪ್ರಭಗ್ನವರಪಾದಪಾ ॥ ೧೯॥

ಮಹಾಲತಾನಾಂ ದಾಮಾನಿ ವ್ಯಧಮತ್ತರಸಾ ಕಪಿಃ ।
ಯಥಾ ಪ್ರಾವೃಷಿ ವಿಂಧ್ಯಸ್ಯ ಮೇಘಜಾಲಾನಿ ಮಾರುತಃ ॥ ೨೦॥

ಸ ತತ್ರ ಮಣಿಭೂಮೀಶ್ಚ ರಾಜತೀಶ್ಚ ಮನೋರಮಾಃ ।
ತಥಾ ಕಾಂಚನಭೂಮೀಶ್ಚ ದದರ್ಶ ವಿಚರನ್ ಕಪಿಃ ॥ ೨೧॥

ಪಕ್ಷಿಗಳ ರೆಕ್ಕೆಗಳ ಬಡಿತದಿಂದಾಗಿ ಪುಷ್ಪಭರಿತವಾಗಿದ್ದ ವೃಕ್ಷಗಳು ನೂರಾರು ಬಣ್ಣ-ಬಣ್ಣದ ಹೂ ಮಳೆಯನ್ನೇ ಸುರಿಸಿದವು. ॥೧೦॥ ವಾಯುಪುತ್ರನಾದ ಹನುಮಂತನ ಮೇಲೆ ಸುರಿಯುತ್ತಿದ್ದ ಹೂ ಮಳೆಯಿಂದ ಮುಳುಗಿ ಮಾರುತಿಯು ಆ ಅಶೋಕವನದ ಮಧ್ಯದಲ್ಲಿ ಪುಷ್ಪಮಯ ಪರ್ವತದಂತೆ ಪ್ರಕಾಶಿಸುತ್ತಿದ್ದನು. ॥೧೧॥ ಹನುಮಂತನು ಅಶೋಕವನದ ಎಲ್ಲ ಕಡೆಗಳಲ್ಲಿ ಸೀತೆಯನ್ನು ಹುಡುಕುತ್ತಾ ವೃಕ್ಷಗಳ ಸಮೂಹದಲ್ಲಿ ನುಸುಳಿಕೊಂಡು ಓಡಾಡುತ್ತಿದ್ದನು. ಅವನನ್ನು ನೋಡಿದ ಎಲ್ಲ ಪ್ರಾಣಿಗಳು, ವಸಂತನೇ ಮೂರ್ತಿಮಂತನಾಗಿ ಬಂದಿರಬಹುದೆಂದು ಭಾವಿಸಿದವು.(ಏಕೆಂದರೆ ಮಾರುತಿಯು ಅತೀವ ಸುಂದರನಾಗಿದ್ದನು.) ॥೧೨॥ ವೃಕ್ಷಗಳಿಂದ ಉದುರಿದ್ದ ನಾನಾವಿಧವಾದ ಪುಷ್ಪಗಳಿಂದ ತುಂಬಿಹೋದ ಭೂದೇವಿಯು ಆಭರಣಗಳಿಂದ ಸಮಲಂಕೃತಳಾದ ಪ್ರಮದೆಯಂತೆ ರಾರಾಜಿಸುತ್ತಿದ್ದಳು. ॥೧೩॥

ಮಹಾಬಲಶಾಲಿಯಾದ ಆ ಹನುಮಂತನು ತನ್ನ ಬಲದಿಂದ ಅಲ್ಲಿದ್ದ ವೃಕ್ಷಗಳನ್ನು ಅಲ್ಲಾಡಿಸುತ್ತಿರುವಾಗ ಅವುಗಳಲ್ಲಿದ್ದ ಹಲವಾರು ಬಣ್ಣದ ಹೂವುಗಳು ಉದುರುತ್ತಿದ್ದವು.॥೧೪॥ ಹನುಮಂತನು ಆ ವೃಕ್ಷಗಳನ್ನು ಅಲ್ಲಾಡಿಸುವಾಗ ಅವುಗಳ ಎಲೆಗಳೂ,ಹೂವುಗಳೂ, ಫಲಗಳೂ ಪೂರ್ಣವಾಗಿ ಬಿದ್ದು ಹೋದುವು. ಆಗ ಬೋಳಾದ ಆ ಮರಗಳು, ಜೂಜಿನಲ್ಲಿ ಪರಾಜಿತರಾಗಿ ವಸ್ತ್ರಾಭರಣಗಳನ್ನು ಕಳೆದುಕೊಂಡ ಜೂಜುಕೋರರಂತೆ* ಕಾಣುತ್ತಿದ್ದವು.॥೧೫॥ ವೇಗಶಾಲಿಯಾದ ಹನುಮಂತನು ರಭಸದಿಂದ ಅಲ್ಲಾಡಿಸುತ್ತಿದ್ದ ವೃಕ್ಷಗಳು ಕ್ಷಣಮಾತ್ರದಲ್ಲಿ ಹೂವು, ಹಣ್ಣು, ಎಲೆಗಳನ್ನು ಕಳಕೊಂಡವು. ॥೧೬॥ ಕಾಂಡಗಳು ಮಾತ್ರ ಉಳಿದು ಬೋಳುಮರಗಳಾಗಿ, ಅವುಗಳಲ್ಲಿದ್ದ ಪಕ್ಷಿಗಳು ದಿಕ್ಕಾಪಾಲಾಗಿ ಓಡಿಹೋದುವು. ಆಶ್ರಯಿಸುವವರಿಲ್ಲದೆ ಆ ಮರಗಳು ನಿರುಪಯೋಗಿಗಳಾದವು. ॥೧೭॥ ಹನುಮಂತನು ತನ್ನ ಬಾಲದಿಂದಲೂ, ಕೈ-ಕಾಲುಗಳಿಂದಲೂ ಅಶೋಕವನದಲ್ಲಿದ್ದ ವೃಕ್ಷಗಳನ್ನು ಒಂದಾದ ಮೇಲೊಂದರಂತೆ ಹಾಳುಗೆಡಹಿದನು. ಆ ಸಮಯದಲ್ಲಿ ಆ ಅಶೋಕವನವು ಪ್ರಿಯಕರನು ಗೈದ ಶೃಂಗಾರಚೇಷ್ಟೆಗಳಿಂದ ನಲುಗಿಹೋದ, ಕೆದರಿದ ಕೂದಲುಗಳಿಂದ, ಮಾಸಿದ ಅಂಗರಾಗದಿಂದ ಒಪ್ಪುತ್ತಿದ್ದ ಯುವತಿಯಂತೆ ಗೋಚರಿಸುತ್ತಿತ್ತು. ॥೧೮-೧೯॥ ವರ್ಷಾಕಾಲದಲ್ಲಿ ಬಿರುಗಾಳಿಯು ವೇಗವಾಗಿ ಬೀಸುತ್ತಾ ಮೇಘಗಳ ಸಮೂಹವನ್ನೇ ಭಿದ್ರ-ವಿಚ್ಛಿದ್ರಗೊಳಿಸುವಂತೆ, ಕಪೀಶ್ವರನಾದ ಹನುಮಂತನು ಕ್ಷಣಮಾತ್ರದಲ್ಲಿ ಆ ಅಶೋಕವನದಲ್ಲಿದ್ದ ಮಹಾಲತಾವಲಯವನ್ನು ಧ್ವಂಸಮಾಡಿದನು.॥೨೦॥

ಹನುಮಂತನು ಅಶೋಕವನದಲ್ಲಿ ಸಂಚರಿಸುತ್ತಿದ್ದಾಗ ಮನೋಹರವಾದ, ಮಣಿಮಯವಾದ, ರಜತ-ಸ್ವರ್ಣಮಯವಾದ ಭೂಮಿಗಳನ್ನು(ವೇದಿಕೆಗಳನ್ನು) ನೋಡಿದನು.॥೨೧॥

* ಜೂಜಿನಲ್ಲಿಹೆಚ್ಚಾದ ವ್ಯಸನಕ್ಕೆ ಒಳಗಾದವರು ವಿವೇಕ ಭ್ರಷ್ಟರಾಗಿ, ಅಮೂಲ್ಯವಾದ ವಸ್ತುಗಳನ್ನು, ಹಣವನ್ನು, ವಸ್ತ್ರಗಳನ್ನು ಕೂಡ ಜೂಜಿನ ಪಣಕ್ಕೆ ಕಟ್ಟಿ ಕಳೆದುಕೊಳ್ಳುತ್ತಾರೆ. ಇಷ್ಟಾದರೂ ಅದರಿಂದ ದೂರವುಳಿಯುವುದಿಲ್ಲ. ಆದುದರಿಂದ ಜೂಜು ಎಂಬುದು ಬಲು ಕೆಟ್ಟದ್ದಾಗಿದೆ.

ವಾಪೀಶ್ಚ ವಿವಿಧಾಕಾರಾಃ ಪೂರ್ಣಾಃ ಪರಮವಾರಿಣಾ ।
ಮಹಾರ್ಹೈರ್ಮಣಿಸೋಪಾನೈರುಪಪನ್ನಾಸ್ತತಸ್ತತಃ ॥ ೨೨॥

ಮುಕ್ತಾಪ್ರವಾಲಸಿಕತಾಃ ಸ್ಫಾಟಿಕಾಂತರ ಕುಟ್ಟಿಮಾಃ ।
ಕಾಂಚನೈಸ್ತರುಭಿಶ್ಚಿತ್ರೈಸ್ತೀರಜೈರುಪಶೋಭಿತಾಃ ॥ ೨೩॥

ಫುಲ್ಲಪದ್ಮೋತ್ಪಲ ವನಾಶ್ಚಕ್ರವಾಕೋಪಕೂಜಿತಾಃ ।
ನತ್ಯೂಹರುತಸಂಘುಷ್ಟಾ ಹಂಸಸಾರಸನಾದಿತಾಃ ॥ ೨೪॥

ದೀರ್ಘಾಭಿರ್ದ್ರುಮಯುಕ್ತಾಭಿಃ ಸರಿದ್ಭಿಶ್ಚ ಸಮಂತತಃ ।
ಅಮೃತೋಪಮತೋಯಾಭಿಃ ಶಿವಾಭಿರುಪಸಂಸ್ಕೃತಾಃ ॥ ೨೫॥

ಲತಾಶತೈರವತತಾಃ ಸಂತಾನ ಕುಸುಮಾವೃತಾಃ ।
ನಾನಾಗುಲ್ಮಾವೃತಘನಾಃ ಕರವೀರಕೃತಾಂತರಾಃ ॥ ೨೬॥

ತತೋಽಂಬುಧರಸಂಕಾಶಂ ಪ್ರವೃದ್ಧಶಿಖಿರಂ ಗಿರಿಮ್ ।
ವಿಚಿತ್ರಕೂಟಂ ಕೂಟೈಶ್ಚ ಸರ್ವತಃ ಪರಿವಾರಿತಮ್ ॥ ೨೭॥

ಶಿಲಾಗೃಹೈರವತತಂ ನಾನಾವೃಕ್ಷೈಃ ಸಮಾವೃತಮ್ ।
ದದರ್ಶ ಹರಿಶಾರ್ದೂಲೋ ರಮ್ಯಂ ಜಗತಿ ಪರ್ವತಮ್ ॥ ೨೮॥

ದದರ್ಶ ಚ ನಗಾತ್ತಸ್ಮಾನ್ನದೀಂ ನಿಪತಿತಾಂ ಕಪಿಃ ।
ಅಂಕಾದಿವ ಸಮುತ್ಪತ್ಯ ಪ್ರಿಯಸ್ಯ ಪತಿತಾಂ ಪ್ರಿಯಾಮ್ ॥ ೨೯॥

ಜಲೇ ನಿಪತಿತಾಗ್ರೈಶ್ಚ ಹ್ರಾದಪೈರುಪಶೋಭಿತಾಮ್ ।
ವಾರ್ಯಮಾಣಾಮಿವ ಕ್ರುದ್ಧಾಂ ಪ್ರಮದಾಂ ಪ್ರಿಯಬಂಧುಭಿಃ ॥ ೩೦॥

ಪುನರಾವೃತ್ತತೋಯಾಂ ಚ ದದರ್ಶ ಸ ಮಹಾಕಪಿಃ ।
ಪ್ರಸನ್ನಾಮಿವ ಕಾಂತಸ್ಯ ಕಾಂತಾಂ ಪುನರುಪಸ್ಥಿತಾಮ್ ॥ ೩೧॥

ತಸ್ಯಾದೂರಾಚ್ಚ ಪದ್ಮಿನ್ಯೋ ನಾನಾದ್ವಿಜಗಣಾಯುತಾಃ ।
ದದರ್ಶ ಹರಿಶಾರ್ದೂಲೋ ಹನುಮಾನ್ ಮಾರುತಾತ್ಮಜಃ ॥ ೩೨॥

ಸ್ವಚ್ಛವಾದ ಮಧುರ ಜಲದಿಂದ ತುಂಬಿದ್ದ, ಮಹಾ ಮೌಲ್ಯದ ಮಣಿಮಯ ಸೋಪಾನಗಳಿಂದ ಸಂಪನ್ನವಾಗಿದ್ದ, ವಿವಿಧಾಕಾರಗಳಲ್ಲಿದ್ದ ಕೊಳಗಳನ್ನು ಅಲ್ಲಲ್ಲಿ ನೋಡಿದನು. ಅವುಗಳು ಹವಳ, ಮುತ್ತುಗಳೇ ಮಳಲುರೂಪದಿಂದ ಕೂಡಿದ್ದವು. ತಳಭಾಗವು ಸ್ಫಟಿಕಮಯವಾಗಿತ್ತು. ತೀರಪ್ರದೇಶ ಗಳಲ್ಲಿ ಹುಟ್ಟಿ ಬೆಳೆದಿದ್ದ ಸುವರ್ಣಮಯವಾದ ಸಂಪಿಗೆ, ಹೊನ್ನೆ ಮುಂತಾದ ಅದ್ಭುತವಾದ ವೃಕ್ಷಗಳಿದ್ದು, ಅವು ಕೋಭಾಯ ಮಾನವಾಗಿ ಕಾಣಿಸಿದ್ದವು. ವಿಕಸಿತವಾದ ಕಮಲಗಳಿಂದಲೂ, ಕನ್ನೈದಿಲೆಗಳಿಂದಲೂ ಕೂಡಿದ್ದ ಸರೋವರಗಳನ್ನು ಹನುಮಂತನು ನೋಡಿದನು. ಆ ಸರೋವರಗಳು ಚಕ್ರವಾಕ ಪಕ್ಷಿಗಳಿಂದ ಶೋಭಿಸುತ್ತಿದ್ದವು. ನೀರುಕೋಳಿಗಳ ಧ್ವನಿಗಳಿಂದ ನಿನಾದಿತವಾಗಿದ್ದವು. ಹಂಸ, ಸಾರಸ ಪಕ್ಷಿಗಳಿಂದ ನಿಜಿಡ ವಾಗಿದ್ದವು. ಆ ಸರೋವರಗಳಿಗೆ ನದಿಯಿಂದ ಸಣ್ಣ-ಸಣ್ಣ ಕಾಲುವೆಗಳಿದ್ದವು. ಅವು ಅಮೃತೋಪಮವಾದ ನೀರಿನಿಂದ ತುಂಬಿದ್ದವು. ಅವುಗಳ ಸುತ್ತಲೂ ಎತ್ತರವಾದ ವಿಶಾಲವಾದ ವೃಕ್ಷಗಳು ಶೋಭಿಸುತ್ತಿದ್ದವು. ಎಲ್ಲವೂ ನೂರಾರು ಲತೆ ಗಳಿಂದಲೂ, ಕಲ್ಪವೃಕ್ಷದ ಪುಷ್ಪಗಳಿಂದಲೂ ಸಮಾವೃತ ವಾಗಿದ್ದವು. ಅಂತಹ ಸುಂದರವಾದ ಸರೋವರಗಳನ್ನು ಹನುಮಂತನು ಆಶೋಕವನದಲ್ಲಿ ನೋಡಿದನು.।೨೨-೨೬॥

ಹಾಗೆಯೇ ಮುಂದೆ ಹೋಗುತ್ತಿದ್ದಾಗ ಕಪೀಶ್ವರನು ಪ್ರಪಂಚದಲ್ಲೇ ಅತ್ಯಂತ ರಮ್ಯವಾಗಿದ್ದ, ಮೇಘಸದೃಶವಾದ ಎತ್ತರವಾದ ಪರ್ವತವೊಂದನ್ನು ನೋಡಿದನು. ಅದು ಉನ್ನತವಾದ ವಿಚಿತ್ರವಾದ ಶಿಖರಗಳಿಂದಲೂ, ಸಣ್ಣ-ಪುಟ್ಟ ಶಿಖರಗಳಿಂದಲೂ ಸುತ್ತುವರಿಯಲ್ಪಟ್ಟಿತ್ತು. ಅಲ್ಲಲ್ಲಿ ಶಿಲಾಮಯವಾದ ಗುಹೆಗಳಿದ್ದು, ನಾನಾವಿಧವಾದ ವೃಕ್ಷಗಳಿಂದ ನಿಬಿಡವಾಗಿತ್ತು. ॥೨೭-೨೮॥ ಪ್ರಯತಮನ ತೊಡೆಯಿಂದ ಮೇಲೆದ್ದು ದೂರಸರಿದು ನಿಲ್ಲುವ ಪ್ರೇಯಸಿಯಂತೆ ಆ ಪರ್ವತದಿಂದ ಕೆಳಕ್ಕೆ ಧುಮುಕುತ್ತಿದ್ದ ನದಿಯೊಂದನ್ನು ಹನುಮಂತನು ನೋಡಿದನು.॥೨೯॥ ಅಲ್ಲಿದ್ದ ವೃಕ್ಷಗಳ ತುದಿಗಳು ಧುಮುಕುತ್ತಿದ್ದ ನದಿಯ ನೀರಿನಿಂದ ತೊಯ್ದುಹೋಗಿದ್ದವು. ಪರ್ವತದ ಮೇಲಿನಿಂದ ಹರಿದು ಬರುತ್ತಿದ್ದ ನದಿಯ ನೀರು ದಟ್ಟವಾಗಿ ಬೆಳೆದು ನಿಂತಿದ್ದ ವೃಕ್ಷಗಳಿಂದ ತಡೆಯಲ್ಪಡುತ್ತಿತ್ತು. ಅದನ್ನು ನೋಡಿದರೆ ಕ್ರುದ್ಧಳಾಗಿ ಪ್ರಿಯನನ್ನು ಅಗಲಿ ಹೊರಟ ಪ್ರಮದೆಯನ್ನು ಸಖೀಗಡಣವು ತಡೆಯುತ್ತಿರುವರೋ ಎಂಬಂತೆ ಕಾಣುತ್ತಿತ್ತು.॥೩೦॥ ಪ್ರಸನ್ನಳಾದ ಪ್ರೇಯಸಿಯು ಪುನಃ ಪ್ರಿಯಕರನೊಡನೆ ಸೇರಿಕೊಳ್ಳುವಂತೆ ದಟ್ಟವಾದ ವೃಕ್ಷಗಳಿಂದ ತಡೆಯಲ್ಪಟ್ಟು ಪರ್ವತಾಭಿಮುಖವಾಗಿ ಪ್ರವಹಿಸುತ್ತಿರುವ ನದಿಯನ್ನು ಆ ಕಪೀಶ್ವರನು ನೋಡಿದನು.॥೩೧॥

ಹರಿಪ್ರವರನಾದ ವಾಯುನಂದನನು ಆ ಪರ್ವತದ ಸಮೀಪದಲ್ಲೇ ನಾನಾವಿಧವಾದ ಪಕ್ಷಿಗಳ ಸಮೂಹಗಳಿಂದ ಸಮಾವೃತವಾಗಿದ್ದ ಪದ್ಮ ಸರೋವರಗಳನ್ನು ನೋಡಿದನು. ॥೩೨॥

ಕೃತ್ರಿಮಾಂ ದೀರ್ಘಿಕಾಂ ಚಾಪಿ ಪೂರ್ಣಾಂ ಶೀತೇನ ವಾರಿಣಾ ।
ಮಣಿಸ್ಪಟವರಸೋಪಾನಾಂ ಮುಕ್ತಾಸಿಕತಶೋಭಿತಾಮ್ ॥ ೩೩॥

ವಿವಿಧೈರ್ಮೃಗಸಂಘೈಶ್ಚ ವಿಚಿತ್ರಾಂ ಚಿತ್ರಕಾನನಾಮ್ ।
ಪ್ರಾಸಾದೈಃ ಸುಮಹದ್ಭಿಶ್ಚ ನಿರ್ಮಿತೈರ್ವಿಶ್ವಕರ್ಮಣಾ ॥ ೩೪॥

ಕೃತ್ರಿಮೈಃ ಕಾನನೈಶ್ಚಾಪಿ ಸರ್ವತಃ ಸಮಲಂಕೃತಾಮ್ ।
ಯೈಃ ಕೈಶ್ಚಿತ್ ಪಾದಪಾಸ್ತ್ರ ಪುಷ್ಪೋಪಗಫಲೋಪಗಾಃ ॥ ೩೫॥

ಸಚ್ಛತ್ರಾಃ ಸವಿತರ್ದೀಕಾಃ ಸರ್ವೇ ಸೌವರ್ಣವೇದಿಕಾಃ ।
ಲತಾಪ್ರತಾನೈರ್ಬಹುಭಿಃ ಪರ್ಣೈಶ್ಚ ಬಹುಭಿರ್ವೃತಾಮ್ ॥ ೩೬॥

ಕಾಂಚನೀಂ ಶಿಂಶಪಾಮೇಕಾಂ ದದರ್ಶ ಪವನಾತ್ಮಜಃ ।
ವೃತಾಂ ಹೇಮಮಯೀಭಿಸ್ತು ವೇದಿಕಾಭಿಃ ಸಮಂತತಃ ॥ ೩೭॥

ಸೋಽಪಶ್ಯದ್ಭೂಮಿಭಾಗಾಂಶ್ಚ ಗರ್ತಪ್ರಸ್ರವಣಾನಿ ಚ ।
ಸುವರ್ಣವೃಕ್ಷಾನಪರಾನ್ ದದರ್ಶ ತಿಲಸಂನಿಧಾನ್ ॥ ೩೮॥

ತೇಷಾಂ ದ್ರುಮಾಣಾಂ ಪ್ರಭಯಾ ಮೇರೋರಿವ ದಿವಾಕರಃ ।
ಅದೃಶ್ಯತ ತದಾ ವೀರಃ ಕಾಂಚನೋಽಸ್ಮೀತಿ ವಾನರಃ ॥ ೩೯॥

ತಾಂ ಕಾಂಚನೈಸ್ತರುಗಣೈರ್ಮಾರುತೇನ ಚ ವೀಜಿತಾಮ್ ।
ಕಿಂಚಿನೇವಶನಿಸ್ಪೋಟಾಂ ದೃಷ್ಟ್ವಾ ವಿಸ್ಮಯ ಮಾಗತಮ್ ॥ ೪೦॥

ಸ ಪುಷ್ಪಿತಾಗ್ರಾಂ ರುಚಿರಾಂ ತರುಣಾಂಕುರಪಲ್ಲವಾಮ್ ।
ತಾಮಾರುಹ್ಯ ಮಹಾಬಾಹುಃ ಶಿಂಶಪಾಂ ಪರ್ಣಸಂವೃತಾಮ್ ॥ ೪೧॥

ಇತೋ ದ್ರಕ್ಷ್ಯಾಮಿ ವೈದೇಹೀಂ ರಾಮದರ್ಶನಲಾಲಸಾಮ್ ।
ಇತಶ್ಚೇತಶ್ಚ ದುಃಖಾರ್ತಾಂ ಸಂಪತಂತೀಂ ಯದೃಚ್ಛಯಾ ॥ ೪೨॥

ಅಶೋಕವನಿಕಾ ಚೇಯಂ ದೃಷ್ಟಾ ರಮ್ಯಾ ದುರಾತ್ಮನಃ ।
ಚಂಪಕೈಶ್ಚಂದನೈಶ್ಚಾಪಿ ಪಕುಳೈಶ್ಚ ವಿಭೂಷಿತಾ ॥ ೪೩॥

ಮುಂದೆ ಹೋಗುತ್ತಿದ್ದಾಗ ಹನುಮಂತನು ಅಲ್ಲಿ ಕೃತ್ರಿಮವಾದ ಸರೋವರಗಳನ್ನು ನೋಡಿದನು. ಅವು ಶೀತಲವಾದ ನೀರಿನಿಂದ ತುಂಬಿದ್ದವು. ಶ್ರೇಷ್ಠವಾದ ರತ್ನಗಳಿಂದ ಕಲ್ಪಿತವಾದ ಸೋಪಾನಗಳಿಂದ ಕೂಡಿದ್ದು, ಮುತ್ತಿನ ಮರಳಿನಿಂದ ಶೋಭಿಸುತ್ತಿದ್ದವು.॥೩೨॥ ಅಲ್ಲಿಂದ ಮುಂದೆ ಮಾರುತಿಯು ಉದ್ಯಾನವನಗಳಿಂದ ಸರ್ವತ್ರ ಶೋಭಾಯಮಾನವಾಗಿ ಕಾಣುತ್ತಿದ್ದ ವಿಶ್ವಕರ್ಮನಿಂದ ನಿರ್ಮಿತವಾದ ಕಾಡನ್ನು ನೋಡಿದನು. ಅದು ವಿವಿಧವಾದ ಮೃಗಗಳ ಗುಂಪಿನಿಂದ ಕೂಡಿದ್ದು ವಿಚಿತ್ರವಾಗಿಕಾಣುತ್ತಿತ್ತು.॥೩೪॥ ಕೃತ್ರಿಮವಾಗಿ ನಿರ್ಮಿಸಿದ್ದ ಕಾನನವು ಎಲ್ಲಕಡೆ ಅಲಂಕೃತವಾಗಿತ್ತು. ಕೆಲವು ವೃಕ್ಷಗಳು ಎಲ್ಲ ಕಾಲಗಳಲ್ಲಿಯೂ ಫಲ-ಪುಷ್ಪಭರಿತವಾಗಿದ್ದುವು. ॥೩೫॥ ಅವೆಲ್ಲವೂ ಛತ್ರಿಯ ಆಕಾರದಲ್ಲಿ ಇದ್ದು ಬಿಡಗಳಲ್ಲಿ ಸುವರ್ಣಮಯವಾದ ಜಗುಲಿಗಳೂ, ಸೋಪಾನಗಳೂ ಇದ್ದುವು. ಅವುಗಳ ಸುತ್ತಲೂ ಅನೇಕ ಲತಾವಿತಾನಗಳಿಂದಲೂ ದಟ್ಟವಾದ ಎಲೆಗಳಿಂದಲೂ ಶೋಭಿಸುತ್ತಿದ್ದವು.॥೩೬॥

ಅನಂತರ ಹನುಮಂತನು ಸುವರ್ಣಮಯವಾದ ಒಂದು ಶಿಂಶುಪಾವೃಕ್ಷವನ್ನು ನೋಡಿದನು. ಅದರ ಸುತ್ತಲೂ ಭಂಗಾರದಿಂದ ನಿರ್ಮಿತವಾದ ವೇದಿಕೆಗಳಿಂದ ಶೋಭಿಸುತ್ತಿತ್ತು.॥೩೭॥ ಹನುಮಂತನು ಆ ಅಶೋಕವನದಲ್ಲಿ ಸುಂದರವಾಗಿದ್ದ ಇನ್ನೂ ಅನೇಕ ಭೂ ಪ್ರದೇಶಗಳನ್ನು, ಪರ್ವತದ ಝರಿಗಳನ್ನು, ಆಗ್ನಿಯಂತೆ ಪ್ರಜ್ವಲಿಸುತ್ತಿದ್ದ ಕನಕವೃಕ್ಷಗಳನ್ನು ನೋಡಿದನು. ಮೇರುಪರ್ವತದ(ಸುವರ್ಣ)ಪ್ರಭೆಯಿಂದ ಸೂರ್ಯನು ಬೆಳಗುವಂತೆ, ಆ ಕನಕ ವೃಕ್ಷಗಳ ಪ್ರಭೆಯಿಂದ ಪ್ರಭಾವಿತನಾದ ಮಾರುತಿಯು ತನ್ನನ್ನು ಸುವರ್ಣಮಯನೆಂದೇ ಭಾವಿಸಿಕೊಂಡನು.॥೩೮-೩೯॥

ಆ ಶಿಂಶುಪಾವೃಕ್ಷದ ಸುತ್ತಲೂ ಕಾಂಚನ ಮೃಗಗಳಿದ್ದವು. ಆ ಶಿಂಶುಪಾವೃಕ್ಷದಲ್ಲಿ ಸೂರಾರು ಕಿರುಗಿಜ್ಜೆಗಳನ್ನು ಅಳವಡಿಸಿದ್ದರು. ಗಾಳಿಯು ಬೀಸುವಾಗ ಕದಲುತ್ತಿರುವ ಆ ಗಂಟೆಗಳು ಧ್ವನಿಮಾಡುತ್ತಿದ್ದವು. ಅಂತಹ ಆ ದೃಶ್ಯವನ್ನು ನೋಡಿ ಹನುಮಂತನು ಆಶ್ಚರ್ಯಪಟ್ಟನು.॥೪೦॥ ಆ ಶಿಂಶುಪಾವೃಕ್ಷದ ಮೇಲೆ ರೆಂಬೆಗಳಲ್ಲಿ ಹೂಗಳು ಅರಳಿದ್ದವು. ಅದು ಸುಂದರವಾದ ಮೊಗ್ಗುಗಳಿಂದ, ಚಿಗುರುಗಳಿಂದ ಮನೋಹರವಾಗಿತ್ತು. ನಿಬಿಡವಾದ ಎಲೆಗಳಿಂದ ಸಮಾವೃತವಾಗಿದ್ದ ಆ ಶಿಂಶುಪಾವೃಕ್ಷವನ್ನು ಹತ್ತಿ ಕುಳಿತು ಹೀಗೆ ಯೋಚಿಸಿದನು.॥೪೧॥

''ಶ್ರೀರಾಮನನ್ನು ನೋಡಲು ತವಕಗೊಂಡಿರುವ, ದುಃಖ ಪೀಡಿತಳಾದ ವೈದೇಹಿಯು ಅತ್ತ-ಇತ್ತ ಸಂಚರಿಸುತ್ತಿರುವಾಗ, ದೈವವಶಾತ್ ಇಲ್ಲಿಗೂ ಬರಬಹುದು. ಆಗ ನಾನು ಅವಳನ್ನು ನೋಡುವೆನು.॥೪೨॥ ದುರ್ಮಾರ್ಗಿಯಾದ ರಾವಣನ ಈ ಅಶೋಕವನವು ಚಂದನ, ಸಂಪಿಗೆ, ಬಕುಳ ಮುಂತಾದ ವೃಕ್ಷಗಳಿಂದ ಅಲಂಕೃತವಾಗಿರುವುದರಿಂದ ಇದು ವರ್ಣನಾತೀತವಾಗಿ ನಿಶ್ಚಯವಾಗಿ ರಮ್ಯವಾಗಿದೆ.॥೪೩॥ ಸಾವಿರಾರು ಪಕ್ಷಿಗಳು

ಇಯಂ ಚ ನಲಿನೀ ರಮ್ಯಾ ದ್ವಿಜಸಂಘನಿಷೇವಿತಾ।
ಇಮಾಂ ಸಾ ರಾಮಮಹಿಷೀ ನೂನಮೇಷ್ಯತಿ ಜಾನಕೀ ॥ ೪೪॥

ಸಾ ರಾಮಾ ರಾಮಮಹಿಷೀ ರಾಘವಸ್ಯ ಪ್ರಿಯಾ ಸತೀ।
ವನಸಂಚಾರಕುಶಲಾ ಧ್ರುವಮೇಷ್ಯತಿ ಜಾನಕೀ ॥ ೪೫॥

ಅಥವಾ ಮೃಗಶಾವಾಕ್ಷೀ ವನಸ್ಯಾಸ್ಯ ವಿಚಕ್ಷಣಾ।
ವನಮೇಷ್ಯತಿ ಸಾರ್ಯೇಹ ರಾಮಚಿಂತಾಸುಕರ್ಶಿತಾ ॥ ೪೬॥

ರಾಮಶೋಕಾಭಿಸಂತಪ್ತಾ ಸಾ ದೇವೀ ವಾಮಲೋಚನಾ।
ವನವಾಸೇ ರತಾ ನಿತ್ಯಮೇಷ್ಯತೇ ವನಚಾರಿಣೀ ॥ ೪೭॥

ವನೇಚರಾಣಾಂ ಸತತಂ ನೂನಂ ಸ್ಪೃಹಯತೇ ಪುರಾ।
ರಾಮಸ್ಯ ದಯಿತಾ ಭಾರ್ಯಾ ಜನಕಸ್ಯ ಸುತಾ ಸತೀ ॥ ೪೮॥

ಸಂಧ್ಯಾಕಾಲಮನಾಃ ಶ್ಯಾಮಾ ಧ್ರುವಮೇಷ್ಯತಿ ಜಾನಕೀ।
ನದೀಂ ಚೇಮಾಂ ಶಿವಜಲಾಂ ಸಂಧ್ಯಾರ್ಥೇ ದರ್ಶನಸ್ಯ ॥ ೪೯॥

ತಸ್ಯಾಶ್ಚಾಪ್ಯನುರೂಪೇಯಮಶೋಕವನಿಕಾ ಶುಭಾ।
ಶುಭಾ ಯಾ ಪಾರ್ಥಿವೇಂದ್ರಸ್ಯ ಪತ್ನೀ ರಾಮಸ್ಯ ಸಮತಾ ॥ ೫೦॥

ಯದಿ ಜೀವತಿ ಸಾ ದೇವಿ ತಾರಾಧಿಪನಿಭಾನನಾ।
ಆಗಮಿಷ್ಯತಿ ಸಾವಶ್ಯಮಿಮಾಂ ಶಿವಜಲಾಂ ನದೀಮ್ ॥ ೫೧॥

ಏವಂ ತು ಮತ್ವಾ ಹನುಮಾನ್ ಮಹಾತ್ಮಾ
ಪ್ರತೀಕ್ಷಮಾಣೋ ಮನುಜೇಂದ್ರಪತ್ನೀಮ್ ।
ಅವೇಕ್ಷಮಾಣಶ್ಚ ದದರ್ಶ ಸರ್ವಂ
ಸುಪುಷ್ಪಿತೇ ಪತ್ರಘನೇ ನಿಲೀನಃ ॥ ೫೨॥

ಆಶ್ರಯಿಸಿರುವ ಈ ಸರೋವರವು ಅತ್ಯಂತ ರಮಣೀಯವಾಗಿದೆ. ಶ್ರೀರಾಮನ ಪತ್ನಿಯಾದ ಜಾನಕಿಯು ಈ ಅಶೋಕವನದಲ್ಲಿಯೇ ಇದ್ದುದಾದರೆ ರಮ್ಯವಾದ ಈ ಸರೋವರದ ಬಳಿಗೆ ತಪ್ಪದೇ ಬರುವಳು.॥೪೪॥ ವನಸಂಚಾರದಲ್ಲಿ ನಿಪುಣೆಯಾದ, ರಾಘವನ ಪ್ರಿಯೆಯಾದ, ಕಡುಚೆಲುವೆಯಾದ ಜಾನಕಿಯು ಇಲ್ಲಿಗೆ ನಿಶ್ಚಯವಾಗಿಯೂ ಬರುವಳೆಂದು ನನ್ನ ಮನಸ್ಸಿಗೆ ಭಾಸವಾಗುತ್ತದೆ. ಅಂದವಾದ ಕಣ್ಣುಗಳುಳ್ಳವಳೂ, ಶ್ರೀರಾಮನ ಧ್ಯಾನದಲ್ಲಿ ಕೃತಳಾಗಿರುವ, ಈ ವನವಿಷಯವನ್ನು ಚೆನ್ನಾಗಿ ತಿಳಿದು ಕೊಂಡಿರುವ ಆರ್ಯೆಯಾದ ಆ ಸೀತಾದೇವಿಯು ಈ ವನವನ್ನು ಸಂಚರಿಸುವಾಗ ಇಲ್ಲಿಗೆ ತಪ್ಪದೇ ಬರುವಳು.॥೪೫-೪೬॥ ಶ್ರೀರಾಮನಿಗಾಗಿ ಪರಿತಪಿಸುತ್ತಿರುವ, ಹದಿನಾಲ್ಕು ಸಂವತ್ಸರಗಳಲ್ಲಿ ನಿತ್ಯವು ವನವಾಸ ನಿಯಮಗಳನ್ನು ಪಾಲಿಸುತ್ತಿರುವ ಆ ವಾಮಲೋಚನೆ ಸೀತಾದೇವಿಯು ಇಲ್ಲಿಗೆ ತಪ್ಪದೇ ಬರುವಳು. ॥೪೭॥ ಜನಕನಂದಿನಿಯೂ, ಶ್ರೀರಾಮನ ಪ್ರಿಯಪತ್ನಿಯೂ, ಆದ ಸಾಧ್ವಿ ಸೀತಾದೇವಿಯು ಅರಣ್ಯದಲ್ಲಿರುವ ಮೃಗ-ಪಕ್ಷಿಗಳನ್ನು ಯಾವಾಗಲೂ ನೋಡಬೇಕೆಂಬ ಆಸೆಯುಳ್ಳವಳೂ ಆದ ಕಾರಣ ಅವಳಿಲ್ಲಿಗೆ ಬಂದೇ ಬರುವಳು.॥೪೮॥ ಶ್ರೇಷ್ಠವಾದ ದೇಹವನ್ನು ಹೊಂದಿದವಳೂ, ಅಕ್ಷಯ ಯೌವನ ಸಂಪನ್ನೆಯೂ, ಪ್ರಾತಃಸಂಧ್ಯಾಕಾಲವನ್ನು ಗಮನಿಸುತ್ತಿರುವ ಳಾದ ಜಾನಕಿಯು ಪವಿತ್ರಜಲವಾದ ಈ ನದೀತೀರಕ್ಕೆ ಸ್ನಾನ-ಧ್ಯಾನಾದಿಗಳಿಗಾಗಿ ಬಂದೆ ಬರುವಳು.॥೪೯॥ ಪಾರ್ಥಿವೇಂದ್ರನಾದ ಶ್ರೀರಾಮನಿಗೆ ಆದರಣೀಯಪತ್ನಿಯಾದ, ಶುಭ್ರರೂಪಳಾದ ಸೀತಾದೇವಿಗೆ ಶುಭಾವಹವಾದ ಈ ಅಶೋಕವನವು ಎಲ್ಲ ರೀತಿಯಿಂದ ವಾಸಕ್ಕೆ ಯೋಗ್ಯವಾಗಿದೆ.॥೫೦॥ ಚಂದ್ರಬಿಂಬಾನನೆಯಾದ ಆ ಸೀತಾದೇವಿಯು ಜೀವಿಸಿರುವುದೇ ಪಿಂಡಿತವಾದರೆ, ಶೀತಲವಾದ ನೀರಿನಿಂದ ಕೂಡಿರುವ ರಮ್ಯವಾದ ಈ ನದಿಯ ಬಳಿಗೆ ಬಂದೇ ಬರುವುಳು.॥೫೧॥

ಮಹಾತ್ಮನಾದ ಹನುಮಂತನು ಹೀಗೆ ನಿಶ್ಚಯಿಸಿ ಪುಷ್ಪಿತವಾದ ಹಾಗೂ ದಟ್ಟವಾದ ಎಲೆಗಳಿಂದ ಕೂಡಿದ ಸುವರ್ಣ ಮಯವಾದ ಶಿಂಶುಪಾವೃಕ್ಷದಲ್ಲಿ ಅಡಗಿ ಕುಳಿತು ಮನುಜೇಂದ್ರನ ಪತ್ನಿಯಾದ ಸೀತಾದೇವಿಯನ್ನೇ ಪ್ರತೀಕ್ಷೆ ಮಾಡುತ್ತಾ ಎಲ್ಲ ಕಡೆಗಳಲ್ಲಿಯೂ ನೋಡುತ್ತಾ ಇದ್ದನು.॥೫೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಚತುರ್ದಶಃ ಸರ್ಗಃ ॥ ೧೪ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನಾಲ್ಕನೆಯ ಸರ್ಗವು ಮುಗಿಯಿತು.

* * *

ಹದಿನೈದನೆಯ ಸರ್ಗ

ವನಸಿರಿಯನ್ನು ನೋಡುತ್ತಿದ್ದ ಹನುಮಂತನು ಚೈತ್ಯಪ್ರಾಸಾದದ ಬಳಿಯಲ್ಲಿ ದಯನೀಯ ಸ್ಥಿತಿಯಲ್ಲಿದ್ದ ಸೀತಾದೇವಿಯನ್ನು ನೋಡಿದುದು –

ಸ ವೀಕ್ಷಮಾಣಸ್ತತ್ರಸ್ಥೋ ಮಾರ್ಗಮಾಣಶ್ಚ ಮೈಥಿಲೀಮ್ ।
ಅಪೇಕ್ಷಮಾಣಶ್ಚ ಮಹೀಂ ಸರ್ವಾಂ ತಾಮನ್ವಪೈಕ್ಷತ ॥ ೧॥

ಸಂತಾನಕಲತಾಭಿಶ್ಚ ಪಾದಪೈರುಪಶೋಭಿತಾಮ್ ।
ದಿವ್ಯಗಂಧರಸೋಪೇತಾಂ ಸರ್ವತಃ ಸಮಲಂಕೃತಾಮ್ ॥ ೨॥

ತಾಂ ಸ ನಂದನಸಂಕಾಶಾಂ ಮೃಗಪಕ್ಷಿಭಿರಾವೃತಾಮ್ ।
ಹರ್ಮ್ಯಪ್ರಾಸಾದಸಂಬಾಧಾಂ ಕೋಕಿಲಾಕುಲನಿಸ್ವನಾಮ್ ॥ ೩॥

ಕಾಂಚನೋತ್ಪಲಪದ್ಮಾಭಿರ್ವಾಪೀಭಿರುಪಶೋಭಿತಾಮ್ ।
ಬಹ್ವಾಸ್ಯ ನಕುಲೋಪೇತಾಂ ಬಹುಭೂಮಿಗೃಹಾಯುತಾಮ್ ॥ ೪॥

ಸರ್ವರ್ತುಕುಸುಮೈ ರಮ್ಯಾಂ ಫಲವದ್ಭಿಶ್ಚ ಪಾದಪೈಃ ।
ಪುಷ್ಪಿತಾನಾಮಶೋಕಾನಾಂ ಶ್ರಿಯಾ ಸೂರ್ಯೋದಯಪ್ರಭಾಮ್ ॥

ಪ್ರದೀಪ್ತಾಮಿವ ತತ್ರಸ್ಥೋ ಮಾರುತಿಃ ಸಮುದೈಕ್ಷತ ।
ನಿಷ್ಪತ್ರಶಾಖಾಂ ವಿಹಗೈಃ ಕ್ರಿಯಮಾಣಾಮಿವಾಸಕೃತ್ ॥ ೬॥

ವಿನಿಷ್ಪತದ್ಭಿಃ ಶತಶಸ್ತೈಃ ಪುಷ್ಪಾವತಂಸಕೈಃ ।
ಆಮೂಲಪುಷ್ಪನಿಚಿತೈರಶೋಕೈಃ ಶೋಕನಾಶನೈಃ ॥ ೭॥

ಪುಷ್ಪಭಾರಾತಿಭಾರೈಶ್ಚ ಸ್ಪೃಶದ್ಭಿರಿವ ಮೇದಿನೀಮ್ ।
ಕರ್ಣಿಕಾರೈಃ ಕುಸುಮಿತೈಃ ಕಿಂಶುಕೈಶ್ಚ ಸುಪುಷ್ಪಿತೈಃ ॥ ೮॥

ಶಿಂಶುಪಾವೃಕ್ಷದ ಮೇಲೆ ಕುಳಿತ್ತಿದ್ದ ಹನುಮಂತನು ಸೀತಾದೇವಿಯ ದರ್ಶನಕ್ಕಾಗಿ ಎದುರು ನೋಡುತ್ತಾ, ಆ ಅಶೋಕವನದ ಸುತ್ತಲೂ ದೃಷ್ಟಿಯನ್ನು ಪರಿಸುತ್ತಾ ಇದ್ದನು. ॥೧॥

ಅವನು ನೋಡುತ್ತಿದ್ದ ಅಶೋಕವನದ ಭೂಭಾಗವೂ ಕಲ್ಪವೃಕ್ಷದ ಲತೆಗಳಿಂದಲೂ, ವೃಕ್ಷಗಳಿಂದಲೂ ಸುಶೋಭಿತವಾಗಿತ್ತು. ದಿವ್ಯ ಗಂಧ ಹಾಗೂ ದಿವ್ಯರಸದಿಂದಲೂ ಪರಿಪೂರ್ಣವಾಗಿದ್ದು, ಎಲ್ಲ ಕಡೆಗಳಲ್ಲಿಯೂ ಸಮಲಂಕೃತವಾಗಿತ್ತು.॥೨॥ ಮೃಗ-ಪಕ್ಷಿಗಳಿಂದಲೂ ಸುತ್ತುವರಿಯಲ್ಪಟ್ಟ, ಸುವರ್ಣಮಯವಾದ ಪ್ರಾಸಾದಗಳಿಂದ ನಿಬಿಡವಾಗಿದ್ದು, ಕೋಗಿಲೆಗಳ ಸಮೂಹಗಳಿಂದ ನಿನಾದಿತವಾಗಿತ್ತು, ಅದು ಇಂದ್ರನ ನಂದನ ವನದಂತೆ ಶೋಭಿಸುತ್ತಿತ್ತು.॥೩॥ ಸುವರ್ಣಮಯವಾದ ಕಮಲ ಹಾಗೂ ಕನ್ನೈದಿಲೆಗಳುಳ್ಳ ಕೊಳಗಳಿಂದ ಶೋಭಾಯಮಾನವಾಗಿತ್ತು. ಅಲ್ಲಿ ಅನೇಕ ನೆಲಮಾಳಿಗೆಗಳು ಇದ್ದುವು. ಅವು ಆಸನಗಳಿಂದಲೂ, ಚಿತ್ರಗಂಬಳಿಗಳಿಂದಲೂ ಅಲಂಕೃತವಾಗಿತ್ತು.॥೪॥ ಆ ವನವು ಎಲ್ಲ ಋತುಗಳಲ್ಲಿಯೂ ಹೂ-ಹಣ್ಣುಗಳನ್ನು ನೀಡುವ ಫಲಭರಿತ ವೃಕ್ಷಗಳಿಂದ ಕೂಡಿದ್ದಿತು. ಪುಷ್ಪಿತವಾದ ಅಶೋಕವೃಕ್ಷಗಳ ಕಾಂತಿಯು ಉದಿತಸೂರ್ಯನ ಪ್ರಭೆಯನ್ನು ಅನುಕರಿಸುತ್ತಿದ್ದು ದೇದಿಪ್ಯಮಾನವಾಗಿ ಶೋಭಿಸುತ್ತಿತ್ತು.॥೫॥

ಮಾರುತಿಯು ಕುಳಿತಲ್ಲಿಂದಲೇ ನೋಡುತ್ತಾ ಪ್ರಕಾಶಿತವಾದ ವೃಕ್ಷಗಳ ಮೇಲೆ ನೂರಾರು ಪಕ್ಷಿಗಳು ಪದೇ-ಪದೇ ಮರದಲ್ಲಿ ಹಾರಿಬಂದು ಕುಳಿತುಕೊಳ್ಳುತ್ತಿದ್ದವು. ಆಗ ಕೊಂಬೆಗಳ ಮೇಲೆ ಪಕ್ಷಿಗಳು ಕುಳಿತಿರುವಾಗ ಎಲೆಗಳೇ ಇಲ್ಲವೋ ಎಂಬಂತೆ ಕಾಣುತ್ತಿತ್ತು. ಆ ಪಕ್ಷಿಗಳು ಪುಷ್ಪಗಳನ್ನು ಕೊಕ್ಕಿನಿಂದ ಕಚ್ಚಿಕೊಂಡು ಹಾರಿ ಹೋಗುತ್ತಿದ್ದಾಗ ಅವು ಚಿತ್ರದಲ್ಲಿರುವ ಹೂವುಗಳಂತೆ ಆಲಂಕೃತವಾಗುತ್ತಿದ್ದವು. ಈ ವಿಧದಿಂದ ಪಕ್ಷಿಗಳು ಮರಗಳ ಮೇಲೆ ಹಾರುತ್ತಿದ್ದವು. ಅಲ್ಲಿದ್ದ ಅಶೋಕವೃಕ್ಷಗಳು ಆಮೂಲಾಗ್ರವಾಗಿ ಪುಷ್ಪಗಳಿಂದ ತುಂಬಿಹೋಗಿದ್ದವು. ಆದರಿಂದ ಅವು ನೋಡುವವರ ಶೋಕವನ್ನು ಮರೆಸುತ್ತಿದ್ದವು. ಅಂತಹ ಹಲವಾರು ಅಶೋಕವೃಕ್ಷಗಳು ಅಲ್ಲಿದ್ದವು.॥೬-೭॥ ಆ ಅಶೋಕವನದಲ್ಲಿ ಆರಳಿನಿಂತ ಕಣಗಿಲೆ ಗಿಡಗಳೂ, ಪುಷ್ಪಿತವಾದ ಮುತ್ತುಗದ ಮರಗಳು ಇದ್ದವು. ಅತಿಯಾದ ಪುಷ್ಪಗಳ ಭಾರದಿಂದ ಆ ವೃಕ್ಷಗಳು ಭೂಮಿಯನ್ನೇ ಸ್ಪರ್ಶಿಸುತ್ತಿವೆಯೋ ಎಂಬಂತೆ ಬಾಗಿದ್ದವು.॥೮॥

ಹನುಮಂತನು ನೋಡುತ್ತಿದ್ದ ಆ ಪ್ರದೇಶವು ಎಲ್ಲ ಪುಷ್ಪ ವೃಕ್ಷಗಳಿಂದ ಕೂಡಿದ್ದು, ಅವುಗಳ ಪ್ರಭೆಯಿಂದ

ಸ ದೇಶಃ ಪ್ರಭಯಾ ತೇಷಾಂ ಪ್ರದೀಪ್ತ ಇವ ಸರ್ವತಃ ।
ಪುನ್ನಾಗಾಃ ಸಪ್ತಪರ್ಣಾಶ್ಚ ಚಂಪಕೋದ್ದಾಲಕಾಸ್ತಥಾ ॥ ೯॥

ವಿವೃದ್ಧಮೂಲಾ ಬಹವಃ ಶೋಭಂತೇ ಸ್ಮ ಸುಪುಷ್ಪಿತಾಃ ।
ಶಾತಕುಂಭನಿಭಾಃ ಕೇಚಿತ್ ಕೇಚಿದಗ್ನಿ ಶಿಖೋಪಮಾಃ ॥ ೧೦॥

ನೀಲಾಂಜನನಿಭಾಃ ಕೇಚಿತ್ತತ್ರಾಶೋಕಾಃ ಸಹಸ್ರಶಃ ।
ನಂದನಂ ವಿಬುಧೋದ್ಯಾನಂ ಚೈತ್ರಂ ಚೈತ್ರರಥಂ ಯಥಾ ॥ ೧೧॥

ಅತಿವೃತ್ತಮಿವಾಚಿಂತ್ಯಂ ದಿವ್ಯಂ ರಮ್ಯಂ ಶ್ರಿಯಾವೃತಮ್ ।
ದ್ವಿತೀಯಮಿವ ಚಾಕಾಶಂ ಪುಷ್ಪಜ್ಯೋತಿರ್ಗಣಾಯುತಮ್ ॥ ೧೨॥

ಪುಷ್ಪರತ್ನ ಶತೈಶ್ಚಿತ್ರಂ ಪಂಚಮಂ ಸಾಗರಂ ಯಥಾ ।
ಸರ್ವರ್ತುಪುಷ್ಪೈರ್ನಿಚಿತಂ ಪಾದಪೈರ್ಮಧುಗಂಧಿಭಿಃ ॥ ೧೩॥

ನಾನಾನಿನಾದ್ಯೈರುದ್ಯಾನಂ ರಮ್ಯಂ ಮೃಗಗಣೈರ್ದ್ವಿಜೈಃ ।
ಅನೇಕಗಂಧಪ್ರವಹಂ ಪುಣ್ಯಗಂಧಂ ಮನೋರಮಮ್ ॥ ೧೪॥

ತೈರೇಂದ್ರಮಿವ ಗಂಧಾಢ್ಯಂ ದ್ವಿತೀಯಂ ಗಂಧಮಾದನಮ್ ।
ಅಶೋಕವನಿಕಾಯಾಂ ತು ತಸ್ಯಾಂ ವಾನರಪುಂಗವಃ ॥ ೧೫॥

ಸ ದದರ್ಶಾವಿದೂರಸ್ಥಂ ಚೈತ್ಯಪ್ರಾಸಾದಮುಚ್ಛ್ರಿತಮ್ ।
ಮಧ್ಯೇ ಸ್ತಂಭಸಹಸ್ರೇಣ ಸ್ಥಿತಂ ಕೈಲಾಸಪಾಂಡರಮ್ ॥ ೧೬॥

ಪ್ರವಾಲಕೃತಸೋಪಾನಂ ತಪ್ತಕಾಂಚನವೇದಿಕಮ್ ।
ಮುಷ್ಣತಮಿವ ಚಕ್ಷೂಂಷಿ ದ್ಯೋತಮಾನಮಿವ ಶ್ರಿಯಾ ॥ ೧೭॥

ವಿಮಲಂ ಪ್ರಾಂಶುಭಾವತ್ವಾದ್ಗುಲ್ಫಿತಮಿವಾಂಬರಮ್ ।
ತಥಾ ಮಲಿನಸಂವೀತಾಂ ರಾಕ್ಷಸೀಭಿಃ ಸಮಾವೃತಾಮ್ ॥ ೧೮॥

ಉದ್ದಿಪ್ತವಾಗಿದೆಯೋ ಎಂಬಂತೆ ಕಾಣುತ್ತಿತ್ತು. ಮತ್ತೊಂದು ಭಾಗದಲ್ಲಿ ಸುರಹೊನ್ನೆ ಮರಗಳು, ಏಳಿಲೆಬಾಳೆಗಳೂ, ಸಂಪಿಗೆ ಮರಗಳೂ, ಚಳ್ಳೆಮರಗಳೂ, ಬಹಳ ದಪ್ಪವಾದ ಕಾಂಡಗಳಿಂದ ಕೂಡಿದ್ದು, ಸುಗಂಧ ಪುಷ್ಪಗಳಿಂದ ಕಣ್ಣನಿಗೆಗೆ ಆನಂದ ವನ್ನುಂಟುಮಾಡುತ್ತಿದ್ದವು. ಅಲ್ಲಿದ್ದ ಕೆಲವು ಮರಗಳು ಸುವರ್ಣ ಮಯವಾಗಿಯೂ, ಕೆಲವು ಅಗ್ನಿಜ್ವಾಲೆಯಂತಹ ಪ್ರಭೆ ಯಿಂದಲೂ, ಕೆಲವು ಕಪ್ಪು ಕಾಡಿಗೆಯಂತೆಯೂ ಶೋಭಿಸುತ್ತಿದ್ದವು. ಆಶೋಕವೃಕ್ಷಗಳಿಂತೂ ಸಾವಿರಾರು ಸಂಖ್ಯೆಯಲ್ಲಿದ್ದವು. ಆ ಉದ್ಯಾನವನವು ದೇವತೆಗಳ ಉದ್ಯಾನವಾದ ನಂದನ ವನವನ್ನು, ಕುಬೇರನ ಉದ್ಯಾನವಾದ ಚೈತ್ರರಥೋದ್ಯಾನ ವನ್ನೂ ರಮ್ಯತೆಯಲ್ಲಿ ಮೀರಿಸುವಂತಿತ್ತು.॥೯-೧೧॥ ಊಹೆಗೂ ನಿಲುಕ ದಂತಹ ಸೊಬಗಿನಿಂದ ಕೂಡಿದ್ದ ಆ ಉದ್ಯಾನವು ರಮ್ಯವಾದ ಹಾಗೂ ದಿವ್ಯವಾದ ಕಾಂತಿಯಿಂದ ಶೋಭಿಸುತ್ತಿತ್ತು.ಪುಷ್ಪರೂಪ ವಾದ ತಾರೆಗಳ ಸಮೂಹ ಗಳಿಂದ ವ್ಯಾಪ್ತವಾಗಿದ್ದು ಮತ್ತೊಂದು ಆಕಾಶದಂತೆ ವಿರಾಜಿಸುತ್ತಿತ್ತು.॥೧೨॥ ಪುಷ್ಪರೂಪವಾದ ನೂರಾರು ರತ್ನಗಳಿಂದ ಚಿತ್ರಿತವಾಗಿದ್ದ ಆ ವನವು ಐದನೆಯ ಸಮುದ್ರದಂತೆ ಕಂಗೊಳಿಸುತ್ತಿತ್ತು. ಎಲ್ಲ ಋತುಗಳಲ್ಲಿಯೂ ಬಿಡುವ ಪುಷ್ಪಗಳಿಂದ ವ್ಯಾಪ್ತವಾಗಿದ್ದು, ಮಧುಮಿನ ಗಂಧದಿಂದ ಕೂಡಿರುವ ವೃಕ್ಷಗಳಿಂದ ಸಮಲಂಕೃತವಾದ್ದಿತು.॥೧೩॥ ನಾನಾ ಪ್ರಕಾರವಾಗಿ ಧ್ವನಿಮಾಡುತ್ತಿದ್ದ ಮೃಗ-ಪಕ್ಷಿಗಳ ಸಮೂಹ ಗಳಿಂದ ನಿಬಿಡವಾಗಿ, ಅನೇಕವಿಧವಾದ ಗಂಧವನ್ನು ಹೊರಸೂಸುತ್ತಾ ಪುಣ್ಯಗಂಧಯುಕ್ತವಾಗಿದ್ದಿತು.॥೧೪॥ ಅತ್ಯಂತ ಮನೋಹರವಾದ ಆ ಉದ್ಯಾನವನವು ಪರ್ವತಗಳಲ್ಲಿ ಶ್ರೇಷ್ಠವಾದ ಎರಡನೆಯ ಗಂಧಮಾದನ ಪರ್ವತವೋ ಎಂಬಂತೆ ಭಾಸವಾಗುತ್ತಿದ್ದಿತು. ಹೀಗೆ ಶೋಭಿಸುತ್ತಿರುವ ಆ ಅಶೋಕವನವನ್ನು ವಾನರಶ್ರೇಷ್ಠನಾದ ಮಾರುತಿಯು ನೋಡಿದನು.॥೧೫॥

ಬಳಿಕ ವಾನರೋತ್ತಮನು ಮತ್ತೊಂದು ಕಡೆಗೆ ದೃಷ್ಟಿಯನ್ನು ಹರಿಸಿದಾಗ, ದೂರದಲ್ಲಿದ್ದ ಅತ್ಯುನ್ನತವಾದ ನಿರ್ಮಲವಾದ ವರ್ಣಲಾಕಾರದ ಒಂದು ಚೈತ್ಯಪ್ರಾಸಾದವನ್ನು ನೋಡಿದನು. ಅಶೋಕವನದ ಮಧ್ಯಭಾಗದಲ್ಲಿದ್ದ, ಸಾವಿರಾರು ಕಂಬಗಳಿಂದ ಕೂಡಿದ್ದ ಆ ಪ್ರಾಸಾದವು ಧವಳ ಕೈಲಾಸಪರ್ವತದಂತೆ ಬಿಳಿಯಾಗಿ ಶೋಭಿಸುತ್ತಿತ್ತು.॥೧೬॥ ಆದರ ಸೋಪಾನವು ಹವಳದ ಮಣಿಗಳಿಂದ ನಿರ್ಮಿತವಾಗಿತ್ತು. ಜಗುಲಿಗಳು ಪುಟಕ್ಕೆ ಹಾಕಿದ ಚಿನ್ನದಿಂದ ರಚಿಸಿದ್ದರು. ಉಜ್ವಲ ಕಾಂತಿಯಿಂದ ಪ್ರಜ್ವಲಿಸುತ್ತಿದ್ದ ಆ ಚೈತ್ಯಪ್ರಾಸಾದವು ತನ್ನ ರಮ್ಯತೆಯಿಂದ ನೋಡುವವರ ಕಣ್ಣುಗಳನ್ನೇ ಅಪಹರಿಸುವಂತಿದ್ದಿತು. ಹೆಚ್ಚು ಎತ್ತರವಾಗಿದ್ದು ಆಕಾಶದೊಡನೆ ಸ್ಪರ್ಧಿಸುತ್ತಿದೆಯೋ ಎಂಬಂತೆ ಕಾಣುತ್ತಿತ್ತು.॥೧೭॥ ಅದರ ಬಳಿಯಲ್ಲೇ ಹನುಮಂತನು ಬಹಳ ಹೊತ್ತಿನಿಂದ ನಿರೀಕ್ಷಿಸುತ್ತಿದ್ದ, ಬಿದಿಗೆಯ ಚಂದ್ರರೇಖೆಯಂತೆ ಆಮಲಾಂಗಿಯಾದ ಸೀತಾದೇವಿಯನ್ನು ನೋಡಿದನು. ಆಗ ಅವಳ ವಸ್ತ್ರವು ಮಲಿನವಾಗಿತ್ತು. ಘೋರರೂಪಿಣಿಯರಾದ

ಉಪವಾಸಕೃಶಾಂ ದೀನಾಂ ನಿಃಶ್ವಸಂತೀಂ ಪುನಃ ಪುನಃ ।
ದದರ್ಶ ಪಕ್ಷಪಕ್ಷ್ಮಾಕ್ಷೀ ಚಂದ್ರರೇಖಾಮಿವಾಮಲಾಮ್ ॥ ೧೯॥

ಮಂದಂ ಪ್ರಜ್ವಾಯಮಾನೇನ ರೂಜೇಣ ರುಚಿರಪ್ರಭಾಮ್ ।
ಪಿನದ್ಧಾಂ ಧೂಮಜಾಲೇನ ಶಿಖಾಮಿವ ವಿಭಾವಸೋಃ ॥ ೨೦॥

ಪೀತೇನೈಕೇನ ಸಂವೀತಾಂ ಕ್ಲಿಷ್ಟೇನೋತ್ತಮವಾಸಸಾ ।
ಸಪಂಕಾಮಸಲಂಕಾರಾಂ ವಿಪದ್ಮಾಮಿವ ಪದ್ಮಿನೀಮ್ ॥ ೨೧॥

ವ್ರೀಡಿತಾಂ ದುಃಖಿಸಂತಪ್ತಾಂ ಪರಿಮ್ಲಾನಾಂ ತಪಸ್ವಿನೀಮ್ ।
ಗ್ರಹೇಣಾಂಗಾರಕೇಣೇವ ಪೀಡಿತಾಮಿವ ರೋಹಿಣೀಮ್ ॥ ೨೨॥

ಅಶ್ರುಪೂರ್ಣಮುಖೀಂ ದೀನಾಂ ಕೃಶಾಮನಶನೇನ ಚ ।
ಶೋಕಧ್ಯಾನಪರಾಂ ದೀನಾಂ ನಿತ್ಯಂ ದುಃಖಪರಾಯಣಾಮ್ ॥ ೨೩॥

ಪ್ರಿಯಂ ಜನಮಪಶ್ಯಂತೀಂ ಪಶ್ಯಂತೀಂ ರಾಕ್ಷಸೀಗಣಮ್ ।
ಸ್ವಗಣೇನ ಮೃಗೀಂ ಹೀನಾಂ ಶ್ವಗಣಾಭಿವೃತಾಮಿವ ॥ ೨೪॥

ನೀಲನಾಗಾಭಯಾ ವೇಣ್ಯಾ ಜಘನಂ ಗತಯೌಕಯಾ ।
ನೀಲಯಾ ನಿರದಾಕಾಯೇ ವನರಾಜ್ಯಾ ಮಹೀಮಿವ ॥ ೨೫॥

ಸುಖಾರ್ಹಾಂ ದುಃಖಿಸಂತಪ್ತಾಂ ವ್ಯಸನಾನಾಮಕೋವಿದಾಮ್ ।
ತಾಂ ಸಮೀಕ್ಷ್ಯ ವಿಶಾಲಾಕ್ಷೀಮಧಿಕಂ ಮಲಿನಾಂ ಕೃಶಾಮ್ ॥ ೨೬॥

ತರ್ಕಯಾಮಾಸ ಸೀತೇತಿ ಕಾರಣೈರುಪಪಾದಿಭಿಃ ।
ಹ್ರಿಯಮಾಣಾ ತದಾ ತೇನ ರಕ್ಷಸಾ ಕಾಮರೂಪಿಣಾ ॥ ೨೭॥

ಯಥಾರೂಪಾ ಹಿ ದೃಷ್ಟಾ ವೈ ತಥಾರೂಪೇಯಮಂಗನಾ ।
ಪೂರ್ಣಚಂದ್ರಾನನಾಂ ಸುಭ್ರೂಂ ಚಾರುವೃತ್ತಪಯೋಧರಾಮ್ ॥

ರಾಕ್ಷಸಿಯರಿಂದ ಸುತ್ತುವರಿಯಲ್ಪಟ್ಟಿದ್ದಳು. ನಿತ್ಯೋಪವಾಸದಿಂದ ಕೃಶಕಾಯಳಾಗಿದ್ದಳು. ಅತ್ಯಂತ ದೀನವದನೆಯಾಗಿದ್ದು, ಪದೇ-ಪದೇ ನಿಟ್ಟುಸಿರು ಬಿಡುತ್ತಿದ್ದಳು. ॥೧೮-೧೯॥ ಜಾಜ್ವಲ್ಯಮಾನವಾಗಿ ಪ್ರಕಾಶಿಸುವ ಅಗ್ನಿಯು ಧೂಮಜಾಲದಿಂದ ಪರಿವೃತವಾದಾಗ, ಅದರ ಕಾಂತಿಯು ಸ್ಪಷ್ಟವಾಗಿ ಕಾಣುವುದಿಲ್ಲ. ಅದರಂತೆ ಮನೋಹರವಾದ ರೂಪ ಸಂಪತ್ತಿನಿಂದ ಕೂಡಿದ್ದ ಆವಳ ಶೋಭೆಯು ಯುಕ್ತ-ಯುಕ್ತವಾಗಿ ತರ್ಕದಿಂದ ಅಲೋಚಿಸಿದರೆ ಮಾತ್ರ ಗೋಚರಿಸುತ್ತಿತ್ತು.॥೨೦॥ ಅವಳು ಒಂದೇ ಒಂದು ಪಿತಾಂಬರವನ್ನು ಧರಿಸಿದ್ದಳು. ಅದೂ ಮಲಿನವಾಗಿತ್ತಾದರೂ ಉತ್ತಮವಾಗಿತ್ತು. ಯಾವ ವಿಧವಾದ ಅಲಂಕಾರವನ್ನು ಮಾಡಿಕೊಳ್ಳದೆ ಇರುವುದರಿಂದ ಕಮಲಪುಷ್ಪಗಳಿಂದ ರಹಿತವಾದ, ಕೆಸರಿನಿಂದ ಕೂಡಿದ ಸರೋವರದಂತೆ ಕಾಣುತ್ತಿದ್ದಳು.॥೨೧॥ ಲಜ್ಜಾಯುಕ್ತಳಾಗಿಯೂ, ದುಃಖದಿಂದ ಪರಿತಪಿಸುತ್ತಲೂ, ತಪಸ್ವಿನಿಯಂತೇ ಇದ್ದಳು. ಪಾಪಗ್ರಹ ಅಂಗಾರಕನಿಂದ ಪೀಡಿತವಾದ ರೋಹಿಣಿಯಂತೆ ಕಾಣುತ್ತಿದ್ದಳು.॥೨೨॥ ಕಂಬನಿ ದುಂಬಿದ ಕಣ್ಣುಗಳಿಂದ ಕೂಡಿ ದೀನಳಾಗಿದ್ದಳು.ಆಹಾರವನ್ನು ಸೇವಿಸದೆ ಇದ್ದುದರಿಂದ ಅತ್ಯಂತಕೃಶಳಾಗಿದ್ದಳು. ಶೋಕಿಸುತ್ತಾ ಧ್ಯಾನಮಗ್ನಳಾಗಿದ್ದು ದುಃಖವೆಂಬ ಸಾಗರದಲ್ಲಿ ಮುಳುಗಿ ಹೋಗಿದ್ದಳು.॥೨೩॥ ಆತ್ಮೀಯ ಜನರನ್ನು ಕಾಣದೆ ಘೋರರೂಪಿಣಿಯರಾದ ರಾಕ್ಷಸಿಯರನ್ನೇ ನೋಡುತ್ತಿದ್ದ ಅವಳು- ಜಿಂಕೆಗಳ ಸಮೂಹದಿಂದ ತಪ್ಪಿಸಿಕೊಂಡು ನಾಯಿಗಳ ಮಧ್ಯದಲ್ಲಿರುವ ಹೆಣ್ಣುಜಿಂಕೆಯಂತೆ ಕಾಣುತ್ತಿದ್ದಳು.॥೨೪॥ ಕೃಷ್ಣಸರ್ಪಸದೃಶವಾದ ಅವಳ ಜಡೆಗಟ್ಟಿದ ನೀಳ್ಗೂದಲುಗಳು ಕಟಿಪ್ರದೇಶದವರೆಗೂ ಪಸರಿಸಿದ್ದವು. ಅಂತಹ ಕಪ್ಪಾದ, ನೀಳವಾದ ತಲೆಗೂದಲಿನಿಂದ ಒಪ್ಪುತ್ತಿದ್ದ ಸೀತಾದೇವಿಯು ಶರತ್ಕಾಲದಲ್ಲಿ ವನರಾಜಿಯಿಂದ ಶೋಭಿಸುವ ಭೂಮಿಯಂತೆ ಕಂಗೊಳಿಸುತ್ತಿದ್ದಳು.॥೨೫॥

ರಾಜಕುಮಾರಿಯಾದ ಅವಳು ಸುಖಿಯಾಗಿರಲು ಅರ್ಹಳಾಗಿದ್ದರೂ ದುಃಖದಿಂದ ಪರಿತಪಿಸುತ್ತಿದ್ದಳು. ಈ ಮೊದಲು ವ್ಯಸನವೇನೆಂಬುದನ್ನೇ ಅರಿಯದವಳು. ಈಗಂತೂ ಅಪಾರವಾದ ದುಃಖದಿಂದ ಮಲಿನಳೂ, ಕೃಶಳೂ ಆಗಿದ್ದಳು. ವಿಶಾಲಾಕ್ಷಿಯಾದ ಅವಳನ್ನು ನೋಡಿ ತಾನು ಎಣಿಸಿಕೊಂಡ ಕಾರಣಗಳಿಂದ ಕಾಮರೂಪಿಯಾದ ರಾಕ್ಷಸರಾಜನಾದ ರಾವಣನು ಅಪಹರಿಸಿ ತಂದಿರುವ ಸೀತೆಯು ಇವಳೇ ಎಂದು ಹನುಮಂತನು ಭಾವಿಸಿದನು.॥೨೬-೨೭॥

ಋಷ್ಯಮೂಕ ಪರ್ವತದಮೇಲಿಂದ ಅಪಹರಿಸಿಕೊಂಡು ಹೋಗುತ್ತಿದ್ದ ಅಂಗನೆಯಂತೆ ಇವಳು ಗೋಚರಿಸುತ್ತಿರುವಳು. ಹುಣ್ಣಿಮೆಯ ಪೂರ್ಣಚಂದ್ರನಂತೆ ಇವಳ ಮುಖವಿದ್ದು, ಸುಂದರವಾದ ಹಾಗೂ ದೊಂಕಾದ ಹುಬ್ಬುಗಳಿಂದ ಕೂಡಿದ್ದು, ಸರ್ವಾಂಗಸುಂದರಿಯಾಗಿದ್ದಾಳೆ. ಈ ದೇವಿಯು ತನ್ನ ಶರೀರ ಕಾಂತಿಯಿಂದ ಎಲ್ಲ ಕಡೆಗಳಲ್ಲಿ ಆವರಿಸಿದ ಕತ್ತಲೆಯನ್ನು ಓಡಿಸುತ್ತಿರುವಳು. ನೀಳವಾದ ಕೇಶರಾಶಿಯಿಂದಲೂ,

ಕುರ್ವಂತೀಂ ಪ್ರಭಯಾ ದೇವೀಂ ಸರ್ವಾ ವಿತಿಮಿರಾ ದಿಶಃ ।
ತಾಂ ನೀಲಕೇಶೀಂ ಬಿಂಬೋಷ್ಠೀಂ ಸುಮುಖೀಂ ಸುಪ್ರತಿಷ್ಠಿತಾಮ್ ॥ ೨೯॥

ಸೀತಾಂ ಪದ್ಮಪಲಾಶಾಕ್ಷೀಂ ಮನೃಥಸ್ಯ ರತಿಂ ಯಥಾ ।
ಇಷ್ಟಾಂ ಸರ್ವಸ್ಯ ಜಗತಃ ಪೂರ್ಣಚಂದ್ರಪ್ರಭಾಮಿವ ॥ ೩೦॥

ಭೂಮೌ ಸುತನುಮಾಸೀನಾಂ ನಿಯತಾಮಿವ ತಾಪಸೀಮ್ ।
ನೀಹಾರ್ತಬಹುಲಾಂ ಭೀರುಂ ಭದ್ರಮೇಂದ್ರವಧೂಮಿವ ॥ ೩೧॥

ಶೋಕಜಾಲೇನ ಮಹತಾ ವಿತತೇನ ನ ರಾಜತೀಮ್ ।
ಸಂಸಕ್ತಾಂ ಧೂಮಜಾಲೇನ ಶಿಖಾಮಿವ ವಿಭಾವಸೋಃ ॥ ೩೨॥

ತಾಂ ಸ್ಮೃತೀಮಿವ ಸಂದಿಗ್ಧಾಮೃದ್ಧಿಂ ನಿಹತಿತಾಮಿವ ।
ವಿಹತಾಮಿವ ಚ ಶ್ರದ್ಧಾಮಾಶಾಂ ಪ್ರತಿಹತಾಮಿವ ॥ ೩೩॥

ಸೋಪಸರ್ಗಾಂ ಯಥಾ ಸಿದ್ಧಿಂ ಬುದ್ಧಿಂ ಸಕಲುಷಾಮಿವ ।
ಅಭೂತೇನಾಪವಾದೇನ ಕೀರ್ತಿಂ ನಿಹತಿತಾಮಿವ ॥ ೩೪॥

ರಾಮೋಪರೋಧವ್ಯಥಿತಾಂ ರಕ್ಷೋಹರಣಕರ್ಶಿತಾಮ್।
ಅಬಲಾಂ ಮೃಗಶಾವಾಕ್ಷೀಂ ವೀಕ್ಷಮಾಣಾಂ ತತಸ್ತತಃ ॥ ೩೫॥

ಬಾಷ್ಪಾಂಬುಪರಿಪೂರ್ಣೇನ ಕೃಷ್ಣವರ್ತ್ಮಾಕ್ಷಿಪಕ್ಷ್ಮಣಾ ।
ವದನೇನಾಪ್ರಸನ್ನೇನ ನಿಃಶ್ವಸಂತೀಂ ಪುನಃ ಪುನಃ ॥ ೩೬॥

ಮಲಸಂಕಧರಾಂ ದೀನಾಂ ಮಂಡನಾರ್ಹಾಮಮಂಡಿತಾಮ್ ।
ಪ್ರಭಾಂ ನಕ್ಷತ್ರರಾಜಸ್ಯ ಕಾಲಮೇಘೈರಿವಾವೃತಾಮ್ ॥ ೩೭॥

ತಸ್ಯ ಸಂದಿದಿಹೇ ಬುದ್ಧಿರ್ಮುಹೂಃ ಸೀತಾಂ ನಿರೀಕ್ಷ್ಯ ತು ।
ಆಮ್ನಾ ಯಾನಾಮಯೋಗೇನ ವಿದ್ಯಾಂ ಪ್ರಥಿಲಾಮಿವ ॥ ೩೮॥

ದುಃಖೇನ ಬುಬುಧೇ ಸೀತಾಂ ಹನುಮಾನನಲಂಕೃತಾಮ್।
ಸಂಸ್ಕಾರೇಣ ಯಥಾ ಹೀನಾಂ ವಾಚಮರ್ಥಾಂತರಂ ಗತಾಮ್ ॥ ೩೯॥

ತೊಂಡೆಯ ಹಣ್ಣಿನಂತೆ ಕೆಂಪಾದತುಟಿಗಳಿಂದಲೂ ಕಂಗೊಳಿಸುತ್ತಿದ್ದಳು. ಸುಂದರವಾದ ನಡುವಿನಿಂದ ಕೂಡಿದ್ದು, ಸರ್ವಾಂಗಗಳೂ ಸೌಷ್ಠವತೆಯಿಂದ ಶೋಭಿಸುತ್ತಿದ್ದವು. ಕಣ್ಣುಗಳು ಪದ್ಮ ಪತ್ರದಂತೆ ವಿಶಾಲವಾಗಿದ್ದು, ಈಕೆಯು ಮನ್ಮಥನ ಪತ್ನೀಯಾದ ರತಿಯಂತೆ ಕಾಣುತ್ತಿದ್ದಳು. ಹುಣ್ಣಿಮೆಯ ಬೆಳದಿಂಗಳಂತೆ ಎಲ್ಲರಿಗೂ ಆಹ್ಲಾದವನ್ನುಂಟುಮಾಡುತ್ತಿದ್ದಳು. ಆದ್ದರಿಂದ ನಿಜವಾಗಿ ಈಕೆಯು ಸೀತೆಯೇ ಆಗಿದ್ದಾಳೆ.॥೨೮- ೩೦॥

ಈಕೆಯು ಅನುಪಮ ತನು ಸೌಭಾಗ್ಯದಿಂದ ಕಂಗೊಳಿಸುತ್ತಾ ನಿಯಮನಿಷ್ಠಳಾದ ತಾಪಸಿಯಂತೆ ನೆಲದ ಮೇಲೆ ಕುಳಿತಿದ್ದಳು. ಭಯಗ್ರಸ್ತಳಾಗಿ ತನ್ನ ಬಳಿಗೆ ಯಾರೂ ಬಾರದಿರುವಂತೆ ಪೊಳ್ಳರಿಸುವ ಹೆಣ್ಣುಸರ್ಪದಂತೆ, ನಿಟ್ಟುಸಿರು ಬಿಡುತ್ತಿದ್ದಳು. ಬಹಳ ಕಾಲದ ಶೋಕಗಳ ಪರಂಪರೆಯಿಂದ ಕಾಂತಿಶೂನ್ಯಳಾಗಿದ್ದ ಸೀತಾದೇವಿಯು ದಟ್ಟವಾದ ಹೊಗೆಯಿಂದ ಮುಚ್ಚಲ್ಪಟ್ಟ ಯಜ್ಞೇಶ್ವರನಂತೆ ಕಾಣುತ್ತಿದ್ದಳು.॥೩೧-೩೨॥

ಸಂದಿಗ್ಧವಾದ ಅರ್ಥವುಳ್ಳ ಸ್ಮೃತಿವಚನದಂತೆಯೂ, ನಾಶ ಹೊಂದುತ್ತಿರುವ ಐಶ್ವರ್ಯದಂತೆಯೂ, ದೃಢತೆಯಿಲ್ಲದ ಶ್ರದ್ಧೆಯಂತೆಯೂ, ನೆರವೇರದ ಆಸೆಯಂತೆಯೂ, ವಿಘ್ನದಿಂದ ಕೂಡಿದ ಸಿದ್ಧಿಯಂತೆಯೂ, ಕಲುಷಿತವಾದ ಬುದ್ಧಿಯಂತೆಯೂ, ನಿರಾಧಾರವಾದ ಅಪವಾದದಿಂದ ತಗ್ಗಿಹೋದ ಕೀರ್ತಿಯಂತೆ ಒಪ್ಪುತ್ತಿರುವ, ರಾವಣನಿಂದ ಆಪಹರಿಸಲ್ಪಟ್ಟ ಕಾರಣ ಕೃಶಳಾದ, ಶ್ರೀರಾಮನ ಆಗಲುವಿಕೆಯಿಂದ ವ್ಯಥೆ ಪಡುತ್ತಿರುವ, ಅಬಲೆಯಾದ ಜಿಂಕೆಮರಿಯಂತೆ ಅತ್ತ-ಇತ್ತ ಸುತ್ತಲೂ ನೋಡುತ್ತಿರುವ ಸೀತಾದೇವಿಯನ್ನು ಮಾರುತಿಯು ನೋಡಿದನು. ॥೩೩-೩೫॥

ಆಕೆಯ ಕಣ್ಣುಗಳು ಅಶ್ರುಪೂರ್ಣವಾಗಿದ್ದವು. ಕಣ್ಣಿನ ರೆಪ್ಪೆಗಳು ದೊಂಕಾಗಿಯೂ ಕಪ್ಪಾಗಿಯೂ ಇದ್ದವು. ಪದೇ-ಪದೇ ನಿಟ್ಟುಸಿರು ಬಿಡುತ್ತಿರುವ ಆಕೆಯ ವದನದಲ್ಲಿ ಪ್ರಸನ್ನತೆಯುಸರಲಿಲ್ಲ. ತಪಸ್ವಿನಿಂದಾಗಿ ಅವಳ ಶರೀರವು ಧೂಳಿನಿಂದಲೂ, ಬೆವರಿನಿಂದಲೂ ಉಂಟಾದ ಕೊಳೆಯಿಂದ ತುಂಬಿ ಹೋಗಿದ್ದಿತು. ಅಲಂಕರಿಸಿಕೊಳ್ಳಲು ಯೋಗ್ಯಳಾಗಿದ್ದರೂ, ಅಲಂಕಾರಾದಿಗಳಿಂದ ರಹಿತಳಾಗಿದ್ದಳು. ದೀನಳಾದ ಆಕೆಯು ಕಾಲಮೇಘಗಳಿಂದ ಸಮಾವೃತನಾದ ನಕ್ಷತ್ರರಾಜನಾದ ಪೂರ್ಣಚಂದ್ರನಂತೆ ಕಾಣುತ್ತಿದ್ದಳು. ॥೩೬-೩೭॥

ಸತತವಾದ ಆಭ್ಯಾಸವಿಲ್ಲದ ಕಾರಣದಿಂದ ವೇದಾದಿ ವಿದ್ಯೆಗಳ ವಿಷಯದಲ್ಲಿ ಸಂದೇಹವು ಉಂಟಾಗುವಂತೆ, ಸೀತೆಯನ್ನು ನೋಡಿ ಹನುಮಂತನಿಗೆ ಇವಳು ಸೀತಾದೇವಿಯು ಹೌದೋ? ಅಲ್ಲವೋ? ಎಂಬ ಸಂದೇಹವು ಉಂಟಾಯಿತು. ॥೩೮॥

ವ್ಯುತ್ಪತ್ತಿ ವ್ಯಾಕರಣ-ಉಚ್ಚಾರಣೆ ಮುಂತಾದ ಸಂಸ್ಕಾರರಹಿತವಾಗಿ ವಿಪರೀತವಾದ ಅರ್ಥಕೊಡುವ ವಾಕ್ಯದಂತೆ, ತೈಲಾದಿ ಸಂಸ್ಕಾರಗಳಿಲ್ಲದೆ, ಅಲಂಕಾರರಹಿತಳಾದ ಸೀತಾದೇವಿಯನ್ನು, ಆ ಮಾರುತಿಯು ಅತಿಕಷ್ಟದಿಂದ ಗುರುತಿಸಿಕೊಂಡನು. ॥೩೯॥

ಸೌಶೀಲ್ಯವತಿಯೂ, ಜನಕಸುತೆಯೂ, ವಿಶಾಲಾಕ್ಷಿಯೂ ಆದ

ತಾಂ ಸಮೀಕ್ಷ್ಯ ವಿಶಾಲಾಕ್ಷೀಂ ರಾಜಪುತ್ರೀಮನಿಂದಿತಾಮ್ ।
ತರ್ಕಯಾಮಾಸ ಸೀತೇತಿ ಕಾರಕೈರುಪಪಾದಿಭಿಃ ॥ ೪೦॥

ವೈದೇಹ್ಯಾ ಯಾನಿ ಚಾಂಗೇಷು ತದಾ ರಾಮೋಽನ್ವಕೀರ್ತಯತ್।
ತಾನ್ಯಾಭರಣಜಾಲಾನಿ ಶಾಖಾಶೋಭೀನ್ಯ ಲಕ್ಷಯತ್ ॥ ೪೧॥

ಸುಕೃತೌ ಕರ್ಣವೇಷ್ಟೌ ಚ ಶ್ವದಂಷ್ಟ್ರೌ ಚ ಸುಸಂಸ್ಥಿತೌ ।
ಮಣಿವಿದ್ರುಮಚಿತ್ರಾಣಿ ಹಸ್ತೇಷ್ವಾಭರಣಾನಿ ಚ ॥ ೪೨॥

ತ್ಯಾಮಾನಿ ಚಿರಯುಕ್ತತ್ವಾತ್ತಥಾ ಸಂಸ್ಥಾನವಂತಿ ಚ ।
ತಾನ್ಯೇತಾನಿ ಮನ್ಯೇಽಹಂ ಯಾನಿ ರಾಮೋಽನ್ವಕೀರ್ತಯತ್ ॥ ೪೩॥

ತತ್ರ ಯಾನ್ಯವಹೀನಾನಿ ತಾನ್ಯಹಂ ನೋಪಲಕ್ಷಯೇ ।
ಯಾನ್ಯಸ್ಯಾ ನಾವಹೀನಾನಿ ತಾನೀಮಾನಿ ನ ಸಂಶಯಃ ॥ ೪೪॥

ಪೀತಂ ಕನಕಪಟ್ಟಾಭಂ ಸ್ರಸ್ತಂ ತದ್ವಸನಂ ಶುಭಮ್ ।
ಉತ್ತರೀಯಂ ನಗಾಸಕ್ತಂ ತದಾ ದೃಷ್ಟಂ ಪ್ರವಂಗಮೈಃ ॥ ೪೫॥

ಭೂಷಣಾನಿ ವಿಚಿತ್ರಾಣಿ ದೃಷ್ಟಾನಿ ಧರಣೀತಲೆ ।
ಅನಯೈವಾಪವಿದ್ಧಾನಿ ಸ್ವನವಂತಿ ಮಹಾಂತಿ ಚ ॥ ೪೬॥

ಇದಂ ಚಿರಗೃಹೀತತ್ವಾದ್ವಸನಂ ಕ್ಲಿಷ್ಟವತ್ತರಮ್ ।
ತಥಾಪಿ ನೂನಂ ತದ್ವರ್ಣಂ ತಥಾ ಶ್ರೀಮದ್ಯಥೇತರತ್ ॥ ೪೭॥

ಇಯಂ ಕನಕವರ್ಣಾಂಗೀ ರಾಮಸ್ಯ ಮಹಿಷೀ ಪ್ರಿಯಾ ।
ಪ್ರನಷ್ಟಾಪಿ ಸತೀ ಯಸ್ಯ ಮನಸೋ ನ ಪ್ರಣಶ್ಯತಿ ॥ ೪೮॥

ಇಯಂ ಸಾ ಯತ್ಕೃತೇ ರಾಮಶ್ಚತುರ್ಭಿಃ ಪರಿತಪ್ಯತೇ ।
ಕಾರುಣ್ಯೇನಾನೃಶಂಸ್ಯೇನ ಶೋಕೇನ ಮದನೇನ ಚ ॥ ೪೯॥

ಆಕೆಯನ್ನು ಚೆನ್ನಾಗಿ ಪರಿಶೀಲಿಸಿ ನೋಡಿ, ತಾನು ಗಮನಿಸುತ್ತಿದ್ದ ಲಕ್ಷಣಗಳನ್ನು ಕಂಡು ಹನುಮಂತನು ಇವಳೇ ಸೀತಾದೇವಿಯೆಂದು ನಿಶ್ಚಯಿಸಿಕೊಂಡನು. ॥೪೦॥

ಶ್ರೀರಾಮನು ವೈದೇಹಿಯು ಯಾವ-ಯಾವ ಅವಯವಗಳಲ್ಲಿ ಯಾವ-ಯಾವ ಆಭರಣಗಳನ್ನು ಧರಿಸುತ್ತಿರುವಳು ಎಂದು ಹನುಮಂತನ ಬಳಿ ಹೇಳಿದ್ದನು. ಅವೆಲ್ಲ ಆಭರಣಗಳು ಅಲ್ಲೇ ಇದ್ದ ಒಂದು ಮರದ ಕೊಂಬೆಯಲ್ಲಿ ತೂಗು ಹಾಕಿದ್ದನ್ನು ಮಾರುತಿಯು ನೋಡಿದನು. ॥೪೧॥ ಸುಂದರವಾಗಿ ನಿರ್ಮಿತವಾದ ಕರ್ಣಾಭರಣಗಳು ಚೆನ್ನಾಗಿ ಕಾಣುವ 'ಶ್ವದಂಷ್ಟ್ರ' ವೆಂಬ ತ್ರಿಕರ್ಣವೆಂಬ ಕರ್ಣಪುಷ್ಪಗಳೂ, ಮಣಿ-ಹವಳಗಳಿಂದ ನಿರ್ಮಿಸಲ್ಪಟ್ಟ ಚಿತ್ರ-ವಿಚಿತ್ರವಾದ ಹಸ್ತಾಭರಣಗಳೂ ಇಲ್ಲಿವೆ. ಹೆಚ್ಚುಕಾಲ ಧರಿಸದೆ ಇರುವುದರಿಂದ, ಸೀತಾ ವಿರಹತಾಪದಿಂದ ಅವು ಕಪ್ಪಾಗಿಹೋಗಿವೆ. ಹಾಗೂ ಅವುಗಳ ಚಿಹ್ನೆಗಳು ಶರೀರದಲ್ಲಿ ಕಾಣುತ್ತಿವೆ. ಮರದ ಕೊಂಬೆಯಲ್ಲಿ ನೇತಾಡುತ್ತಿದ್ದ ಈ ಆಭರಣಗಳು ಶ್ರೀರಾಮನು ವರ್ಣಿಸಿದ ಆಭರಣಗಳೇ ಎಂದು ನಾನು ಭಾವಿಸುತ್ತೇನೆ. ॥೪೨-೪೩॥

ಋಷ್ಯಮೂಕ ಪರ್ವತದಲ್ಲಿ ಸೀತಾದೇವಿಯು ಯಾವ-ಯಾವ ಆಭರಣಗಳನ್ನು ಕೆಳಕ್ಕೆ ಹಾಕಿದ್ದಳೋ, ಆ ಯಾವ ಆಭರಣಗಳೂ ಇಲ್ಲಿ ಕಾಣುವುದಿಲ್ಲ. ಉಳಿದಿರುವ ಮತ್ತು ಇಲ್ಲಿ ಇರುವ ಆಭರಣಗಳು ಶ್ರೀರಾಮನು ವರ್ಣಿಸಿದ ಆಭರಣಗಳೇ ಆಗಿವೆ. ಇದರಲ್ಲಿ ಸಂದೇಹವೇ ಇಲ್ಲ. ॥೪೪॥ ಅಂದು ಋಷ್ಯಮೂಕ ಪರ್ವತದಲ್ಲಿ ಬೀಳಿಸಿದ ಭಂಗಾರದ ಗಂಟಿನ ಪೀತಾಂಬರದಂತೆ ಹೊಂಬಣ್ಣದ ಉತ್ತರೀಯವು ಮರದಲ್ಲಿ ಸಿಕ್ಕಿಕೊಂಡಿರುವುದನ್ನು ವಾನರ ಮುಖ್ಯರು ನೋಡಿದ್ದರು. ॥೪೫॥ ಸೀತೆಯೇ ಭೂಮಿಗೆ ಎಸೆದಿರುವ, ಝಣ-ಝಣ ಎಂಬ ಶಬ್ದದಿಂದ ಕೂಡಿದ್ದ ಶ್ರೇಷ್ಠವಾದ, ಆಕರ್ಷಕವಾದ ಭೂಷಣಗಳನ್ನು ಕೂಡ ಆ ವಾನರರು ನೋಡಿದ್ದರು. ॥೪೬॥ ಈಗ ಇವಳುಟ್ಟಿರುವ ವಸ್ತ್ರವು ಬಹಳ ಕಾಲದಿಂದ ಧರಿಸಿರುವುದರಿಂದ ಮಲಿನವಾಗಿದೆ. ಆದರೆ ಆದರ ಬಣ್ಣ ಸ್ವಲ್ಪವೂ ಮಾಸಿರುವುದಿಲ್ಲ. ಋಷ್ಯಮೂಕಪರ್ವತದಲ್ಲಿ ಬಿದ್ದಿದ್ದ ಮೇಲುವಸ್ತ್ರದಂತೆ, ಈಗ ಉಟ್ಟಿರುವ ವಸ್ತ್ರವೂ ಕಾಂತಿಯುಕ್ತವಾಗಿದೆ. ಚಿನ್ನದಂತೆ ಮೈ ಬಣ್ಣವಿರುವ, ರಾಮನ ಪಟ್ಟಮಹಿಷಿಯಾದ, ಪತಿವ್ರತೆಯಾದ ಈ ಸೀತಾದೇವಿಯೂ ಶರೀರದಿಂದ ರಾಮನಿಂದ ದೂರವಿದ್ದರೂ, ಮನಸ್ಸಿನಿಂದ ಮಾತ್ರ ಇವಳು ಕೂಡಿಕೊಂಡೇ ಇರುವಳು. ॥೪೮॥

ಶ್ರೀರಾಮನು ಯಾರ ಸಲುವಾಗಿ ಕಾರುಣ್ಯ, ಅನೃಂಶ್ಯ, ಶೋಕ, ಪ್ರೇಮ ಎಂಬ ನಾಲ್ಕರಿಂದಲೂ ಪರಿತಪಿಸುತ್ತಿರುವನೋ ಅಂತಹ ಸೀತಾದೇವಿಯು ಇವಳೇ ಆಗಿದ್ದಾಳೆ. ॥೪೯॥ ಸ್ತ್ರೀಯೊಬ್ಬಳು ಅಪಹೃತಳಾದಳೆಂಬುದು ಕರುಣಾಮಯ ತಾಪಕ್ಕೆ ಕಾರಣ. ತನಗೆ ಆಶ್ರಿತವಾಗಿದ್ದ ಸ್ತ್ರೀಯ ಅಪಹೃತಳಾದಳೆಂಬುದು ದಯೆಯ ಪರಿಣಾಮದಿಂದ

ಸ್ತ್ರೀ ಪ್ರನಷ್ಟೇತಿ ಕಾರುಣ್ಯಾದಾರ್ಯೇತ್ಯಾನೃ ಶಂಸ್ಯತಃ ।
ಪತ್ನೀ ನಷ್ಟೇತಿ ಶೋಕೇನ ಪ್ರಿಯೇತಿ ಮದನೇನ ಚ ॥ ೫೧॥

ಉಂಟಾದ ತಾಪಕ್ಕೆ ಕಾರಣ. ಸ್ತ್ರೀಯು ಆಶ್ರಿತಳೂ ಹಾಗೂ ಪತ್ನೀಯೂ ಆದವಳು ಕಣ್ಮರೆಯಾದಳೆಂಬ ಶೋಕರೂಪವಾದ ತಾಪಕ್ಕೆ ಕಾರಣವು. ಸ್ತ್ರೀಯೂ, ಆಶ್ರಿತಳೂ, ಪ್ರಿಯಪತ್ನಿಯೂ, ಆಗಿದ್ದಳು. ಕಳೆದುಹೋದರಿಂದ ಪ್ರೇಮದಿಂದ ಉಂಟಾದ ವೇದನೆಗೆ ಕಾರಣವು. ಹೀಗೆ ನಾಲ್ಕು ವಿಧವಾದ ಕಾರಣಗಳಿಂದ ಶ್ರೀರಾಮನು ಪರಿತಪಿಸುತ್ತಿದ್ದನು. ॥೫೧॥

ಅಸ್ಯಾ ದೇವ್ಯಾ ಯಥಾ ರೂಪಮಂಗಪ್ರತ್ಯಂಗಸೌಷ್ಠವಮ್ ।
ರಾಮಸ್ಯ ಚ ಯಥಾರೂಪಂ ತಸ್ಯೇಯಮಸಿತೇಕ್ಷಣಾ ॥ ೫೨॥

ಅಂಗಪ್ರತ್ಯಂಗ ಸೌಷ್ಠವಗಳಿಂದ ಕೂಡಿದವಳು ಲೋಕ ಸುಂದರೀ ಸೀತಾದೇವಿಯು. ಸೌಂದರ್ಯದಲ್ಲಿ ಶ್ರೀರಾಮನು ಪುರುಷಮೋಹನಾಕಾರನು. ಎಲ್ಲ ವಿಧದಿಂದಲೂ ಇವರು ಒಬ್ಬರಿಗೊಬ್ಬರು ಸಮಾನರೇ. ಆದುದರಿಂದ ಈ ಸಾಧ್ವಿಯು ಶ್ರೀರಾಮನಿಗೆ ಯೋಗ್ಯಭಾರ್ಯೆಯೇ ಆಗಿದ್ದಾಳೆ. ॥೫೨॥

ಅಸ್ಯಾ ದೇವ್ಯಾ ಮನಸ್ತಸ್ಮಿಂಸ್ತಸ್ಯ ಚಾಸ್ಯಾಂ ಪ್ರತಿಷ್ಠಿತಮ್ ।
ತೇನೇಯಂ ನ ಚ ಧರ್ಮಾತ್ಮಾ ಮುಹೂರ್ತಮಪಿ ಜೀವತಿ ॥ ೫೩॥

ಸೀತಾದೇವಿಯ ಮನಸ್ಸು ಶ್ರೀರಾಮನಲ್ಲಿಯೇ ಲೀನವಾಗಿಬಿಟ್ಟಿದೆ. ಶ್ರೀರಾಮನ ಮನಸ್ಸು ಸೀತೆಯಲ್ಲಿ ಲೀನವಾಗಿದೆ. ಶರೀರಗಳ ದೃಷ್ಟಿಯಿಂದ ಪರಸ್ಪರ ಬಹಳ ದೂರವಿದ್ದರೂ, ಅಂತರಂಗದಲ್ಲಿ ಪರಸ್ಪರರಿಬ್ಬರೂ ನೋಡುತ್ತಲೇ ಇದ್ದಾರೆ. ಈ ಕಾರಣದಿಂದಲೇ ಸೀತಾದೇವಿಯೂ, ಧರ್ಮಾತ್ಮನಾದ ಶ್ರೀರಾಮನೂ ಇಲ್ಲಿಯವರೆಗೆ ಬದುಕಿದ್ದಾರೆ. ॥೫೩॥ ಸಾಧ್ವಿಯೂ, ಸರ್ವಾಂಗಸುಂದರಿಯೂ ಆದ ಸೀತಾದೇವಿಯಿಂದ ಆಗಲಿದ್ದರೂ ಶ್ರೀರಾಮನು ತನ್ನ ದೇಹವನ್ನು ಧರಿಸಿಕೊಂಡಿರುವನು. ವಿರಹ ಶೋಕದಿಂದ ನಾಶಹೊಂದಿಲ್ಲ. ಇಂತಹ ದುಃಸ್ಥಿತಿಯಲ್ಲಿ ಅವನು ಕಠೋರವಾದ ಧೈರ್ಯ-ಸ್ಥೈರ್ಯಗಳನ್ನು ಹೊಂದಿರುವನು. ॥೫೪॥

ದುಷ್ಕರಂ ಕೃತವಾನ್ ರಾಮೋ ಹೀನೋ ಯದನಯಾ ಪ್ರಭುಃ ।
ಧಾರಯತ್ಯಾತ್ಮನೋ ದೇಹಂ ನ ಶೋಕೇನಾವಸೀದತಿ ॥ ೫೪॥

ನಡುಜವ್ವನೆಯಾದ ಈ ಸೀತಾದೇವಿಯನ್ನ ಕ್ಷಣಕಾಲವಾದರೂ ಬಿಟ್ಟು ಇರದೇ ಇರುವ ಶ್ರೀರಾಮನು ಇಷ್ಟರವರೆಗೆ ಜೀವಿಸಿರುವುದು ನಿಜವಾಗಿ ದುಷ್ಕರವಾದ ಕಾರ್ಯವೇ. ॥೫೪॥

ದುಷ್ಕರಂ ಕರುತೇ ರಾಮೋ ಯ ಇಮಾಂ ಮತ್ತಕಾಶಿನೀಮ್ ।
ಸೀತಾಂ ವಿನಾಂ ಮಹಾಬಾಹುಃ ಮುಹೂರ್ತ ಮಪಿ ಜೀವತಿ ॥ ೫೪॥

ಹೀಗೆ ಸೀತೆಯನ್ನು ಕಂಡ ಹನುಮಂತನು ಅನೇಕ ಕಾರಣಗಳಿಂದ ಇವಳೇ ಸೀತೆಯೆಂಬುದನ್ನು ನಿಶ್ಚಯಿಸಿ, ವಾಯುನಂದನನು ಮಹದಾನಂದ ಭರಿತನಾದನು. ಅವನು ಶ್ರೀರಾಮನನ್ನು ಮನಸ್ಸಿನಿಂದಲೇ ಧ್ಯಾನಿಸುತ್ತಾ ಶ್ರೀರಾಮನನ್ನು ಪ್ರಶಂಸೆ ಮಾಡಿದನು. (ಇಂತಹ ಉತ್ತಮ ಸಾಧ್ವಿಯಾದ ಭಾರ್ಯೆಗಾಗಿ ಪರಿತಪಿಸುವುದು ಶ್ರೀರಾಮನಿಗೆ ಉಚಿತವೇ. ಇಂತಹ ಸೌಶೀಲ್ಯವತಿಯಾದ ಪತ್ನಿಯನ್ನು ಹೊಂದಲು ಅವನೇ ಯೋಗ್ಯನು.) ॥೫೫॥

ಏವಂ ಸೀತಾಂ ತದಾ ದೃಷ್ಟ್ವಾ ಹೃಷ್ಟಃ ಪವನಸಂಭವಃ ।
ಜಗಾಮ ಮನಸಾ ರಾಮಂ ಪ್ರಶಶಂಸ ಚ ತಂ ಪ್ರಭುಮ್ ॥ ೫೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಪಂಚದಶಃ ಸರ್ಗಃ ॥ ೧೫ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನೈದನೆಯ ಸರ್ಗವು ಮುಗಿಯಿತು.

* * *

ಹದಿನಾರನೆಯ ಸರ್ಗ

ಹನುಮಂತನು ಸೀತಾದೇವಿಯ ಶೀಲ-ಸೌಂದರ್ಯಗಳನ್ನು ಮನಸ್ಸಿನಲ್ಲೇ ಶ್ಲಾಘಿಸುತ್ತಾ, ಅವಳ ಕಷ್ಟಕೋಟಲೆಗಳಿಗೆ ಮರುಗಿದುದು –

ಪ್ರಶಸ್ಯ ತು ಪ್ರಶಸ್ತವ್ಯಾಂ ಸೀತಾಂ ತಾಂ ಹರಿಪುಂಗವಃ।
ಗುಣಾಭಿರಾಮಂ ರಾಮಂ ಚ ಪುನಶ್ಚಿಂತಾಪರೋಽಭವತ್ ॥ ೧॥

ಸ ಮುಹೂರ್ತಮಿವ ಧ್ಯಾತ್ವಾ ಬಾಷ್ಪಪರ್ಯಾಕುಲೇಕ್ಷಣಃ।
ಸೀತಾಮಾಶ್ರಿತ್ಯ ತೇಜಸ್ವೀ ಹನುಮಾನ್ ವಿಲಲಾಪ ಹ ॥ ೨॥

ಮಾನ್ಯಾ ಗುರುವಿನೀತಸ್ಯ ಲಕ್ಷ್ಮಣಸ್ಯ ಗುರುಪ್ರಿಯಾ।
ಯದಿ ಸೀತಾಪಿ ದುಃಖಾರ್ತಾ ಕಾಲೋ ಹಿ ದುರತಿಕ್ರಮಃ॥ ೩॥

ರಾಮಸ್ಯ ವ್ಯವಸಾಯಜ್ಞಾ ಲಕ್ಷ್ಮಣಸ್ಯ ಚ ಧೀಮತಃ।
ನಾತ್ಯರ್ಥಂ ಕ್ಷುಭ್ಯತೇ ದೇವೀ ಗಂಗೇವ ಜಲದಾಗಮೇ ॥ ೪॥

ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನಲಕ್ಷಣಾಮ್।
ರಾಘವೋಽರ್ಹತಿ ವೈದೇಹೀಂ ತಂ ಚೇಯಮಸಿತೇಕ್ಷಣಾ॥ ೫॥

ತಾಂ ದೃಷ್ಟ್ವಾ ನವಹೇಮಾಭಾಂ ಲೋಕಕಾಂತಾಮಿವ ಶ್ರಿಯಮ್।
ಜಗಾಮ ಮನಸಾ ರಾಮಂ ವಚನಂ ಚೇದಮಬ್ರವೀತ್ ॥ ೬॥

ಅಸ್ಯಾ ಹೇತೋರ್ವಿಶಾಲಾಕ್ಷ್ಯಾ ಹತೋ ವಾಲೀ ಮಹಾಬಲಃ।
ರಾವಣಪ್ರತಿಮೋ ವೀರ್ಯೇ ಕಬಂಧಶ್ಚ ನಿಪಾತಿತಃ॥ ೭॥

ವಿರಾಧಶ್ಚ ಹತಃ ಸಂಖ್ಯೇ ರಾಕ್ಷಸೋ ಭೀಮವಿಕ್ರಮಃ।
ವನೇ ರಾಮೇಣ ವಿಕ್ರಮ್ಯ ಮಹೇಂದ್ರೇಣೇವ ಶಂಬರಃ॥ ೮॥

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್।
ನಿಹತಾನಿ ಜನಸ್ಥಾನೇ ಶರೈರಗ್ನಿ ಶಿಖೋಪಮೈಃ ॥ ೯॥

ಕಪಿಶ್ರೇಷ್ಠನಾದ ಹನುಮಂತನು ಪ್ರಶಂಸಾರ್ಹಳಾದ ಸೀತಾದೇವಿಯನ್ನು ಮತ್ತು ಸುಗುಣಾಭಿರಾಮನೂ, ಲೋಕವಂದಿತನೂ ಆದ ಶ್ರೀರಾಮನನ್ನು ಕೊಂಡಾಡಿದನು. ಒಡನೆಯೇ ಚಿಂತಾಮಗ್ನನಾದನು. ॥೧॥ ಮಹಾಧೈರ್ಯ ಶಾಲಿಯಾದ ಹನುಮಂತನು ಒಂದು ಕ್ಷಣಕಾಲ ಧ್ಯಾನಮಗ್ನನಾಗಿ ಸೀತೆಯ ಅಗಿನ ಪರಿಸ್ಥಿತಿಯನ್ನು ಕಂಡು, ಕಣ್ಣೀರು ತುಂಬಿ ಗಟ್ಟಿಯಾಗಿ ವಿಲಪಿಸತೊಡಗಿದನು – ॥೨॥

''ಹೆಚ್ಚಾದ ವಿನಯ ವಿಧೇಯನಾದ ಲಕ್ಷ್ಮಣ ಸ್ವಾಮಿಗೆ ಪೂಜ್ಯಳಾದ ಆವನಣ್ಣನಾದ ಶ್ರೀರಾಮನಿಗೆ ಪ್ರಿಯಪತ್ನೀ ಯಾಗಿರುವ ಈ ಸೀತೆಯೂ ದುಃಖಪೀಡಿತಳಾಗುವುದೆಂದರೆ ಕಾಲವನ್ನು ಯಾರು ತಾನೇ ಮಿರಲು ಸಾಧ್ಯ? ॥೩॥ ಮಹಾಪರಾಕ್ರಮಿಯಾದ ಶ್ರೀರಾಮನ ತೌರ್ಯವನ್ನೂ, ಅಭಿಪ್ರಾಯವನ್ನೂ ಹಾಗೂ ಲಕ್ಷ್ಮಣನ ಎಣೆಯಿಲ್ಲದ ಪರಾಕ್ರಮವನ್ನು ತಿಳಿದಿರುವ ಸೀತಾದೇವಿಯು ವರ್ಷಾಕಾಲ ದಲ್ಲಿ ಮಹಾಪ್ರವಾಹ ಬಂದಾಗಲೂ ಗಂಗಾನದಿಯು ಕ್ಷೋಭೆಗೊಳ್ಳದಂತೆ ಅಧೀರಳಾಗಿಲ್ಲ. ॥೪॥ ತನಗೆ ಸಮಾನವಾದ ಶೀಲ, ವಯಸ್ಸು, ಚಾರಿತ್ರ್ಯ ಹಾಗೂ ಸತ್ಕುಲ ಲಕ್ಷಣಗಳುಳ್ಳ ಶ್ರೀಸೀತಾದೇವಿಯನ್ನು ಪತ್ನಿಯಾಗಿ ಪಡೆಯಲು ನಿಶ್ಚಯವಾಗಿ ಶ್ರೀರಾಮನು ಯೋಗ್ಯನಾಗಿದ್ದಾನೆ. ಹಾಗೆಯೇ ತನಗೆ ಸಮಾನವಾದ ಶೀಲ, ವಯಸ್ಸು, ಚಾರಿತ್ರ್ಯ ಮತ್ತು ಕುಲ-ಲಕ್ಷಣಗಳುಳ್ಳ ಶ್ರೀರಾಮನನ್ನು ಪತಿಯಾಗಿ ಪಡೆಯಲು ಕನ್ನೈದಿಲೆಯಂತೆ ಕಪ್ಪಾದ ಕಣ್ಣುಗಳುಳ್ಳ ವೈದೇಹಿಯೂ ಯೋಗ್ಯ ಳಾಗಿದ್ದಾಳೆ.'' ॥೫॥

ಪುಟಕ್ಕಿಟ್ಟ ಚಿನ್ನದಂತೆ ಶೋಭಿಸುತ್ತಿರುವ, ಲಕ್ಷ್ಮೀದೇವಿಯಂತೆ ಲೋಕಮನೋಹರಳಾದ ಆ ಸೀತಾದೇವಿಯನ್ನು ನೋಡಿ, ಮನಸ್ಸಿನಲ್ಲೇ ಶ್ರೀರಾಮನನ್ನೇ ಧ್ಯಾನಿಸುತ್ತಾ ಹನುಮಂತನು ಪುನಃ ಹೀಗೆ ಹೇಳಿಕೊಂಡನು – ॥೬॥

ವಿಶಾಲನೇತ್ರಿಯಾದ ಇವಳ ಸಲುವಾಗಿಯೇ ಮಹಾಬಲಿಷ್ಠ ನಾದ ವಾಲಿಯ ಸಂಹಾರವಾಯಿತು. ಪರಾಕ್ರಮದಲ್ಲಿ ರಾವಣ ನಿಗೆ ಸಮಾನವಾಗಿದ್ದ ಕಬಂಧನೂ ಕೂಡ ಹತನಾದನು. ॥೭॥ ಮಹೇಂದ್ರನು ಶಂಬರನನ್ನು ಸಂಹರಿಸುವಂತೆ, ಮಹಾಪರಾಕ್ರಮಿಯಾದ ಶ್ರೀರಾಮನು ಅರಣ್ಯದಲ್ಲಿ ಭಯಂಕರ ಪರಾಕ್ರಮಿಯಾದ ವಿರಾಧನನ್ನು ಯುದ್ಧದಲ್ಲಿ ಸಂಹರಿಸಿದನು. ॥೮॥ಜನಸ್ಥಾನದಲ್ಲಿ ಭಯಂಕರಕರ್ಮಿಗಳಾದ ಹದಿನಾಲ್ಕು ಸಾವಿರ ರಾಕ್ಷಸರು ಶ್ರೀರಾಮನ ಅಗ್ನಿಜ್ವಾಲೆಗೆ ಸಮಾನವಾದ ಬಾಣಗಳಿಗೆ ಬಲಿಯಾದರು.॥೯॥

ಖರಶ್ಚ ನಿಹತಃ ಸಂಖ್ಯೇ ತ್ರಿಶಿರಾಶ್ಚ ನಿಪಾತಿತಃ।
ದೂಷಣಶ್ಚ ಮಹಾತೇಜಾ ರಾಮೇಣ ವಿದಿತಾತ್ಮನಾ ॥ ೧೦॥

ಋಕ್ಷರಜಸಾಂ ಚ ದುರ್ಗಭೂ ದಾಪಿಪಾಲಿತಮ್ ।
ಅಸ್ಯಾ ನಿಮಿತ್ತೇ ಸುಗ್ರೀವಃ ಪ್ರಾಪ್ತವಾನ್ ಲೋಕಸತ್ಕೃತಮ್ ॥ ೧೧॥

ಸಾಗರಶ್ಚ ಮಯಾ ಕ್ರಾಂತಃ ಶ್ರೀಮಾನ್ನದನದೀಪತಿಃ।
ಅಸ್ಯಾ ಹೇತೋರ್ವಿಶಾಲಾಕ್ಷ್ಯಾಃ ಪುರೀ ಚೇಯಂ ನಿರೀಕ್ಷಿತಾ ॥ ೧೨॥

ಯದಿ ರಾಮಃ ಸಮುದ್ರಾಂತಾಂ ಮೇದಿನೀಂ ಪರಿವರ್ತಯೇತ್ ।
ಅಸ್ಯಾಃ ಕೃತೇ ಜಗಚ್ಚಾಪಿ ಯುಕ್ತಮಿತ್ಯೇವ ಮೇ ಮತಿಃ ॥ ೧೩॥

ರಾಜ್ಯಂ ವಾ ತ್ರಿಷು ಲೋಕೇಷು ಸೀತಾ ವಾ ಜನಕಾತ್ಮಜಾ ।
ತ್ರೈಲೋಕ್ಯರಾಜ್ಯಂ ಸಕಲಂ ಸೀತಾಯಾ ನಾಪ್ನುಯಾತ್ ಕಲಾಮ್ ॥ ೧೪॥

ಇಯಂ ಸಾ ಧರ್ಮಶೀಲಸ್ಯ ಮೈಥಿಲಸ್ಯ ಮಹಾತ್ಮನಃ।
ಸುತಾ ಜನಕರಾಜಸ್ಯ ಸೀತಾ ಭರ್ತೃದೃಢವ್ರತಾ ॥ ೧೫॥

ಉತ್ಥಿತಾ ಮೇದಿನೀಂ ಭಿತ್ತ್ವಾ ಕ್ಷೇತ್ರೇ ಹಲಮುಖಿಕ್ಷತೇ।
ಪದ್ಮರೇಣುನಿಭೈಃ ಕೀರ್ಣಾ ಶುಭೈಃ ಕೇದಾರಪಾಂಸುಭಃ ॥ ೧೬॥

ವಿಕ್ರಾಂತಸ್ಯಾರ್ಯಶೀಲಸ್ಯ ಸಂಯುಗೇಷ್ವನಿವರ್ತಿನಃ।
ಸ್ನುಷಾ ದಶರಥಸ್ಯೈಷಾ ಜ್ಯೇಷ್ಠಾ ರಾಜ್ಞೋ ಯತಸ್ವಿನೀ ॥ ೧೭॥

ಧರ್ಮಜ್ಞಸ್ಯ ಕೃತಜ್ಞಸ್ಯ ರಾಮಸ್ಯ ವಿದಿತಾತ್ಮನಃ।
ಇಯಂ ಸಾ ದಯಿತಾ ಭಾರ್ಯಾ ರಾಕ್ಷಸೀವಶಮಾಗತಾ ॥ ೧೮॥

ಸರ್ವಾನ್ ಭೋಗಾನ್ ಪರಿತ್ಯಜ್ಯ ಭರ್ತೃಸ್ನೇಹಬಲಾತ್ಕೃತಾ ।
ಆಚಿತಂತಯಿತ್ವಾ ದುಃಖಾನಿ ಪ್ರವಿಷ್ಟಾ ನಿರ್ಜನಂ ವನಮ್ ॥ ೧೯॥

ಸಂತುಷ್ಟಾ ಫಲಮೂಲೇನ ಭರ್ತುಃಶುಶ್ರೂಷಣೇ ರತಾ ।
ಯಾ ಪರಾಂ ಭಜತೇ ಪ್ರೀತಿಂ ವನೇಽಪಿ ಭವನೇ ಯಥಾ ॥ ೨೦॥

ಸೇಯಂ ಕನಕವರ್ಣಾಂಗೀ ನಿತ್ಯಂ ಸುಸ್ಮಿತಭಾಷಿಣೀ ।
ಸಹತೇ ಯಾತನಾಮೇತಾಮನರ್ಹಾ ನಾಮಭಾಗಿನೀ ॥ ೨೧॥

ಜಗದ್ವಿಖ್ಯಾತನಾದ ಶ್ರೀರಾಮನಿಂದ ಸಮರಾಂಗಣದಲ್ಲಿ ಖರನೂ, ತ್ರಿಶಿರನೂ ಮಣ್ಣುಗೂಡಿದರು. ಯುದ್ಧವೀರನಾದ ದೂಷಣನೂ ನೆಲಸಮನಾದನು.॥೧೦॥ ವಾಲಿಯಿಂದ ರಕ್ಷಿಸಲ್ಪಡುತ್ತಿದ್ದ, ಇತರರಿಂದ ಹೊಂದಲು ಅಶಕ್ಯವಾದ, ಲೋಕಪ್ರಸಿದ್ಧವಾದ ವಾನರರ ಆತುರೈಶ್ವರ್ಯವನ್ನು ಇವಳ ನಿಮಿತ್ತದಿಂದಲೇ ಸುಗ್ರೀವನು ಪಡೆದುಕೊಂಡನು.॥೧೧॥ ವಿಶಾಲಾಕ್ಷಿಯಾದ ಇವಳಿಗಾಗಿಯೇ ನಾನು ನದಿ-ನದಗಳಿಗೆ ಒಡೆಯನೂ, ರತ್ನಾಕರನೂ ಆದ ಸಮುದ್ರವನ್ನು ಲಂಘಿಸಿ ಬಂದು ಈ ಲಂಕಾಪಟ್ಟಣವನ್ನು ನೋಡಿದೆನು.॥೧೨॥ ಒಂದು ವೇಳೆ ಈ ಸೀತಾದೇವಿಗಾಗಿ ಶ್ರೀರಾಮನು ಸಮುದ್ರಾಂತವಾದ ಈ ಭೂಮಂಡಲವೇ ಅಲ್ಲ ಸಕಲಲೋಕಗಳನ್ನು ತಲೆಕೆಳಗಾಗಿ ಮಾಡಿದರೂ ಅದು ಯುಕ್ತವೆಂದೇ ನನ್ನ ಭಾವನೆಯಾಗಿದೆ. ॥೧೩॥ ಶ್ರೀರಾಮನಿಗೆ ಮೂರು ಲೋಕಗಳ ಆಧಿಪತ್ಯವನ್ನು ಪಡೆಯುವುದು ಮುಖ್ಯವೋ? ಜನಕಾತ್ಮಜೆಯಾದ ಸೀತಾ ದೇವಿಯನ್ನು ಹೊಂದುವುದು ಮುಖ್ಯವೋ? ಎಂದು ಆಲೋಚಿಸಿದರೆ ತ್ರಿಲೋಕಾಧಿಪತ್ಯವು ಸೀತಾಪ್ರಾಪ್ತಿಯಮುಂದೆ ಹದಿನಾರನೆಯ ಒಂದು ಅಂಶಕ್ಕೂ ಕೂಡ ಸರಿಯಾಗಲಾರದು. ॥೧೪॥

ಧರ್ಮಶೀಲನೂ, ಮಹಾತ್ಮನೂ ಆದ ಮಿಥಿಲಾಧಿಪತಿ ಜನಕ ಮಹಾರಾಜನು ಯಜ್ಞನಿಮಿತ್ತವಾಗಿ ಭೂಮಿಯನ್ನು ಊಳುತ್ತಿದ್ದಾಗ ಪದ್ಮಪರಾಗದಂತೆ ಶುಭಕರ ಧೂಳಿನಿಂದ ಉದಿಸಿದ ಆಯೋನಿಜೆಯಾದ ಜನಕನ ಮಗಳೂ, ಪತಿಯನ್ನೇ ದೃಢವಾಗಿ ಆಶ್ರಯಿಸಿರುವ ಮಹಾಪತಿವ್ರತೆಯಾದ ಸೀತೆಯು ಇವಳೇ ಆಗಿದ್ದಾಳೆ.॥೧೫-೧೬॥ ಮಹಾಪರಾಕ್ರಮಿಯಾದ ಆರ್ಯರ ಗುಣ-ಶೀಲಗಳನ್ನೇ ಮೈಗೂಡಿಸಿಕೊಂಡಿದ್ದ, ಯುದ್ಧಗಳಲ್ಲಿ ಎಂದೂ ಹಿಂಜರಿಯದೆ ಕೆಚ್ಚಿನಿಂದ ಶತ್ರುಗಳೊಡನೆ ಹೋರಾಡುತ್ತಿದ್ದ ದಶರಥಮಹಾರಾಜನ ಹಿರಿಯ ಸೊಸೆ ಇವಳೇ ಅಲ್ಲವೇ?॥೧೭॥ ಧರ್ಮಜ್ಞನೂ, ಮಾಡಿದ ಉಪಕಾರವನ್ನು ಎಂದೂ ಮರೆಯದವನೂ, ಆತ್ಮಜ್ಞಾನಿಯೂ ಆದ ಶ್ರೀರಾಮನಿಗೆ ಪ್ರಾಣಪ್ರಿಯಳೂ, ಧರ್ಮಪತ್ನಿಯೂ ಆದ ಸೀತಾದೇವಿಯು ಇಂದು ರಾಕ್ಷಸಿಯರ ಮಧ್ಯದಲ್ಲಿ ಇರುವಳಲ್ಲ? ॥೧೮॥ ಸಾಧ್ವಿಯಾದ ಇವಳು ಪತಿಯ ಪ್ರೇಮಬಲದಿಂದ ಆಕರ್ಷಿತಳಾಗಿ ಸಕಲ ವಿಧವಾದ ರಾಜಭೋಗಗಳನ್ನು ಪರಿತ್ಯಜಿಸಿ ವನವಾಸ ಕಷ್ಟಗಳನ್ನು ಲೆಕ್ಕಿಸದೆ, ನಿರ್ಜನವಾದ ಅರಣ್ಯಕ್ಕೆ ಪತಿಯೊಡನೆ ಬಂದವಳು.॥೧೯॥ ಪತಿಸೇವಾ ಪರಾಯಣೆಯೂ, ಅರಣ್ಯದಲ್ಲಿ ಸಿಗುವ ಫಲ-ಮೂಲಾದಿಗಳಿಂದಲೇ ಸಂತುಷ್ಟಳಾಗುತ್ತಿದ್ದ, ಶ್ರೀರಾಮನೊಡನೆ ಪರಮ ಪ್ರೀತಿಯಿಂದ ಅರಮನೆಯನ್ನು ಬಿಟ್ಟು ಗೊಂಡಾರಣ್ಯವನ್ನು ಸೇರಿದ ಆ ಸೀತೆಯು ಇವಳೇ.॥೨೦॥ ಯಾವಾಗಲೂ ಮುಗುಳ್ನಗೆಯಿಂದಲೇ ಮಾತಾಡುವ ಪುತ್ಥಳಿಬೊಂಬೆಯಂತಿರುವ, ಯಾವುದೇ ಸಣ್ಣ ಕಷ್ಟಗಳಿಗೂ ಭಾಗಿಯಾಗಲು ಯೋಗ್ಯಳಲ್ಲದ ಸೀತಾದೇವಿಯು

ಇಮಾಂ ತು ಶೀಲಸಂಪನ್ನಾಂ ದ್ರಷ್ಟುಮಿಚ್ಛತಿ ರಾಘವಃ ।
ರಾವಣೇನ ಪ್ರಮಥಿತಾಂ ಪ್ರಪಾಮಿವ ಪಿಪಾಸಿತಃ ॥ ೨೨॥

ಅಸ್ಯಾ ನೂನಂ ಪುನರ್ಲಾಭಾದ್ರಾಘವಃ ಪ್ರೀತಿಮೇಷ್ಯತಿ ।
ರಾಜಾ ರಾಜ್ಯಾತ್ ಪರಿಭ್ರಷ್ಟಃ ಪುನಃ ಪ್ರಾಪ್ಯೇವ ಮೇದಿನೀಮ್ ॥ ೨೩॥

ಕಾಮಭೋಗೈಃ ಪರಿತ್ಯಕ್ತಾ ಹೀನಾ ಬಂಧುಜನೇನ ಚ ।
ಧಾರಯತ್ಯಾತ್ಮನೋ ದೇಹಂ ತತ್ಸಮಾಗಮಕಾಂಕ್ಷಿಣೀ ॥ ೨೪॥

ನೈಷಾ ಪಶ್ಯತಿ ರಾಕ್ಷಸ್ಯೋ ನೇಮಾನ್ ಪುಷ್ಪಫಲದ್ರುಮಾನ್ ।
ವಿಕೃಷ್ಟಹೃದಯಾ ನೂನಂ ರಾಮಮೇವಾನುಪಶ್ಯತಿ ॥ ೨೫॥

ಭರ್ತಾ ನಾಮ ಪರಂ ನಾರ್ಯಾ ಭೂಷಣಂ ಭೂಷಣಾದಪಿ ।
ಏಷಾ ವಿರಹಿತಾ ತೇನ ಭೂಷಣಾರ್ಹಾ ನ ಶೋಭತೇ ॥ ೨೬॥

ದುಷ್ಕರಂ ಕುರುತೇ ರಾಮೋ ಹೀನೋ ಯದನಯಾ ಪ್ರಭುಃ ।
ಧಾರಯತ್ಯಾತ್ಮನೋ ದೇಹಂ ನ ದುಃಖೇನಾವಸೀದತಿ ॥ ೨೭॥

ಇಮಾಮಸಿತಕೇಶಾಂತಾಂ ಶತಪತ್ರನಿಭೇಕ್ಷಣಾಮ್ ।
ಸುವಾಕ್ಯಾಂ ದುಃಖಿತಾಂ ದೃಷ್ಟ್ವಾ ಮಮಾಪಿ ವ್ಯಥಿತಂ ಮನಃ ॥ ೨೮॥

ಕ್ಷಿತಿಕ್ಷಮಾ ಪುಷ್ಕರಸಂನಿಭಾಕ್ಷೀ
ಯಾ ರಕ್ಷಿತಾ ರಾಘವಲಕ್ಷ್ಮಣಾಭ್ಯಾಮ್ ।
ಸಾ ರಾಕ್ಷಸೀಭಿರ್ವಿಕೃತೇಕ್ಷಣಾಭಿಃ
ಸಂರಕ್ಷ್ಯತೇ ಸಂಪ್ರತಿ ವೃಕ್ಷಮೂಲೇ ॥ ೨೯॥

ಹಿಮಹತನಲಿನೀವ ನಷ್ಟ ಶೋಭಾ
ವ್ಯಸನಪರಂಪರಯಾತಿಪೀಡ್ಯಮಾನಾ ।
ಸಹಚರರಹಿತೇವ ಚಕ್ರವಾಕೀ
ಜನಕಸುತಾ ಕೃಪಣಾಂ ದಶಾಂ ಪ್ರಪನ್ನಾ ॥ ೩೦॥

ಅಸ್ಯಾ ಹಿ ಪುಷ್ಪಾವನತಾಗ್ರಶಾಖಾಃ
ಶೋಕಂ ದೃಢಂ ವೈ ಜನಯಂತ್ಯಶೋಕಾಃ ।
ಹಿಮವ್ಯಪಾಯೇನ ಚ ಶೀತರಶ್ಮಿ-
ರಭ್ಯುತ್ಥಿತೋ ನೈಕಸಹಸ್ರರಶ್ಮಿಃ ॥ ೩೧॥

ರಾಕ್ಷಸಿಯರು ಕೊಡುತ್ತಿರುವ ಉಪಟಳವನ್ನು ಸಹಿಸಿಕೊಂಡಿದ್ದಾಳೆ.॥೨೧॥ ದುಷ್ಟನಾದ ರಾವಣನು ಕೊಡುತ್ತಿರುವ ಎಲ್ಲ ಕಷ್ಟಗಳನ್ನು ಸಹಿಸಿಕೊಂಡು, ತನ್ನ ಶೀಲಸಂಪತ್ತನ್ನು ಸಂರಕ್ಷಿಸಿಕೊಂಡು ಇರುವ ಈ ಸೀತಾದೇವಿಯನ್ನು ನೋಡಲು – ಬಾಯಾರಿದವನು ಅರವಟ್ಟಿಗೆಯನ್ನು ಆರಿಸಿಕೊಂಡು ಹೋಗುವನಂತೆ, ಶ್ರೀರಾಮನು ಕಾತರನಾಗಿದ್ದಾನೆ.॥೨೨॥

ರಾಜ್ಯಭ್ರಷ್ಟನಾದ ರಾಜನು ಪುನಃ ತನ್ನ ರಾಜ್ಯವನ್ನು ಪಡೆದು ಕೊಂಡಾಗ ಸಂತೋಷ ಪಡುವಂತೆ ಶ್ರೀರಾಮನು ಸೀತಾದೇವಿಯನ್ನು ಮರಳಿ ಪಡೆದಾಗ ಬಹಳವಾಗಿ ಸಂತೋಷಪಡುವನು. ॥೨೩॥

ಕರ್ಮೋಪಭೋಗಗಳೆಲ್ಲವನ್ನು ಪರಿತ್ಯಜಿಸಿ, ಬಂಧುಜನ ರಿಂದ ದೂರವಾದ ಇವಳು ಶ್ರೀರಾಮನ ಆಗಮನವನ್ನೇ ನಿರೀಕ್ಷಿಸುತ್ತಾ ತನ್ನ ದೇಹವನ್ನು ಧರಿಸಿಕೊಂಡಿದ್ದಾಳೆ.॥೨೪॥ ಸಾಧ್ವಿಯಾದ ಇವಳು ಸುತ್ತಲೂ ಇರುವ ರಾಕ್ಷಸಿಯರನ್ನಾಗಲೀ, ಫಲ-ಪುಷ್ಪಗಳಿಂದ ಸಮೃದ್ಧವಾದ ಸುಂದರ ವೃಕ್ಷಗಳನ್ನಾಗಲಿ ನೋಡುತ್ತಲೇ ಇಲ್ಲ, ಶ್ರೀರಾಮನಲ್ಲೇ ಅನನ್ಯಚಿತ್ತಳಾಗಿ ಹೃನ್ಮಂದಿರಗಳಲ್ಲಿ ಶ್ರೀರಾಮನ್ನೇ ಎಲ್ಲ ಕಾಲಗಳಲ್ಲಿಯೂ ನೋಡುತ್ತಿದ್ದಾಳೆ.॥೨೫॥

ಹೆಂಗಸಿಗೆ ಇತರ ಎಲ್ಲ ಆಭರಣಗಳಿಗಿಂತಲೂ ಪತಿಯೇ ಪರಮ ಶ್ರೇಷ್ಠವಾದ ಆಭರಣವು. ಆಭರಣಗಳಿಂದ ಶೋಭಿಸ ಬೇಕಾಗಿರುವ ಇವಳು ಪತಿಯೆಂಬ ಆ ಆಭರಣದಿಂದ ರಹಿತಳಾಗಿ ಶೋಭಿಸುತ್ತಿಲ್ಲ.॥೨೬॥

ಇಂತಹ ಸಾಧ್ವಿಮಣಿಯಿಂದ ವಿಹೀನನಾಗಿರುವ ಶ್ರೀರಾಮನು ವಿರಹ ದುಃಖದಿಂದ ವಿನಾಶಹೊಂದದೆ ತನ್ನ ದೇಹವನ್ನಿನ್ನು ಧರಿಸಿಕೊಂಡಿರುವನು. ನಿಶ್ಚಯವಾಗಿಯೂ ಶ್ರೀರಾಮನು ಅತ್ಯಂತ ದುಷ್ಕರವಾದ ಕಾರ್ಯವನ್ನೇ ಮಾಡುತ್ತಿದ್ದಾನೆ.॥೨೭॥ ಕಪ್ಪಾದ ಕೂದಲುಗಳನ್ನು ಹೊಂದಿರುವ ತಾವರೆಯಂತೆ ಕಣ್ಣುಗಳುಳ್ಳ, ಶ್ರೀರಾಮನನ್ನೇ ಸೇರಿ ಸುಖಪಡಲು ಯೋಗ್ಯಳಾಗಿರುವ ಇವಳು ರಾಕ್ಷಸಿಯರ ಮಧ್ಯದಲ್ಲಿ ದುಃಖಿತಳಾಗಿರುವುದನ್ನು ನೋಡಿ ನನ್ನ ಮನಸ್ಸು ಕೂಡ ವ್ಯಥೆಗೊಂಡಿದೆ. ಅಂತಿರುವಾಗ ಪರಮ ದಯಾಳುವಾದ ಶ್ರೀರಾಮನ ವಿಷಯದಲ್ಲಿ ಹೇಳುವುದೇನಿದೆ?॥೨೮॥

ಭೂದೇವಿಯಂತೆ ಕ್ಷಮಾಗುಣವುಳ್ಳ ಕಮಲಸದೃಶವಾದ ಕಣ್ಣುಗಳುಳ್ಳ, ರಾಮ-ಲಕ್ಷ್ಮಣರಿಂದ ರಕ್ಷಿಸಲ್ಪಡುತ್ತಿದ್ದ ಇವಳೀಗ ವೃಕ್ಷಮೂಲದಲ್ಲಿ ವಿಕಾರವಾದ ಕಣ್ಣುಗಳುಳ್ಳ ರಾಕ್ಷಸಿಯರ ಕಾವಲಿನಲ್ಲಿದ್ದು ದೀನಳಾಗಿದ್ದಾಳೆ.॥೨೯॥ ಹಿಮಘಾತದಿಂದ ನಲುಗಿಹೋದ ಕಮಲದ ಬಳ್ಳಿಯಂತೆ ಶೋಭಾರಹಿತಳಾಗಿ ರುವ ಕಷ್ಟಪರಂಪರೆಯಿಂದ ಪೀಡಿತಳಾದ ಜಾನಕಿಯು, ಸಹಚರರಿಂದ ಅಗಲಿದ ಹೆಣ್ಣುಚಕ್ರವಾಕದಂತೆ ದೈನ್ಯಾವಸ್ಥೆಯನ್ನು ಹೊಂದಿದ್ದಾಳೆ.॥೩೦॥ ಪುಷ್ಪಗಳ ಭಾರದಿಂದ ಬಗ್ಗಿರುವ ರೆಂಬೆಗಳುಳ್ಳ ಅಶೋಕವೃಕ್ಷಗಳು ಈಕೆಗೆ ಶೋಕವನ್ನು ಹೆಚ್ಚಿಸುತ್ತವೆ. ವಸಂತನಿಂದೊಡಗೂಡಿದ ಚಂದ್ರನು

ಇತ್ಯೇವಮರ್ಥಂ ಕಪಿರನ್ವವೇಕ್ಷ್ಯ
ಸೀತೇಯಮಿತ್ಯೇವ ನಿವಿಷ್ಟಬುದ್ಧಿಃ ।
ಸಂಶ್ರಿತ್ಯ ತಸ್ಮಿನ್ಹನುಮಾನ್ ವನಸ್ಥೇ
ಬಲೀ ಹರೀಣಾಮೃಷಭಸ್ತರಸ್ವೀ ॥ ೩೨॥

ಸಾವಿರಾರು ಕಿರಣಗಳಿಂದ ಕೂಡಿ ಶೀತರಶ್ಮಿಗಳನ್ನು ಪಸರಿಸುತ್ತಾ ಈ ಸೀತಾದೇವಿಗೆ ಅತ್ಯಂತ ದಾರುಣವಾದ ವಿರಹ ಶೋಕವನ್ನು ಇಮ್ಮಡಿಗೊಳಿಸುತ್ತಿದ್ದಾನೆ..॥೩೧॥

ಹೆಚ್ಚಿನಬಲಶಾಲಿಯೂ, ಕಪಿಶ್ರೇಷ್ಠನೂ, ಮಹಾವೀರನೂ, ಆದ ಹನುಮಂತನು ಹೀಗೆ ಯೋಚಿಸುತ್ತಾ - 'ಇವಳು ಸೀತೆಯೇ ಸರಿ' ಎಂದು ಬುದ್ಧಿಯಿಂದ ನಿಶ್ಚಯಿಸಿ ಆ ಶಿಂಶುಪಾವೃಕ್ಷದಲ್ಲಿಯೇ ಅಡಗಿ ಕುಳಿತನು. ॥೩೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಷೋಡಶಃ ಸರ್ಗಃ ॥ ೧೬ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನಾರನೆಯ ಸರ್ಗವು ಮುಗಿಯಿತು.

* * *

ಹದಿನೇಳನೆಯ ಸರ್ಗ

ಹನುಮಂತನು ಸೀತಾದೇವಿಯನ್ನು ನೋಡಿ ಪ್ರಸನ್ನನಾದುದು –

ತತಃ ಕುಮುದಷಂಡಾಢ್ಯೋ ನಿರ್ಮಲೋ ನಿರ್ಮಲಂ ಸ್ವಯಮ್ ।
ಪ್ರವಿವೇಶ ಸಪದ್ಮೋತ್ಪೀಡೋ ಹಂಸೋ ನೀಲಮಿವೋದಕಮ್ ॥ ೧॥

ಆಗ ನಿರ್ಮಲವರ್ಣದ ಸರೋವರವನ್ನು ಹಂಸವು ಪ್ರವೇಶಿಸುವಂತೆ ಕನ್ನೈದಿಲೆಗಳ ಕಾಂತಿಯಂತೆ ಕಾಂತಿಯುಕ್ತವಾದ ನಿರ್ಮಲನಾದ ಚಂದ್ರನು ನಿರ್ಮಲವೂ, ನೀಲವೂ ಆದ ಪಶ್ಚಿಮಾಕಾಶದಲ್ಲಿ ಪ್ರವೇಶಿಸಿದನು.॥೧॥ ನಿರ್ಮಲವಾದ ಪ್ರಭೆಯಿಂದ ಕೂಡಿದ್ದ ಚಂದ್ರನು ತನ್ನ ಪ್ರಭೆಯಿಂದ ಸಹಾಯ ಮೆಸಗುತ್ತಿರುವನೋ ಎಂಬಂತೆ ಶೀತಲವಾದ ಕಿರಣಗಳಿಂದ ಹನುಮಂತನನ್ನು ಸೇವಿಸುತ್ತಿದ್ದನು.॥೨॥ ಹೆಚ್ಚು ಭಾರದಿಂದ ನೀರಿನಲ್ಲಿ ಮುಳುಗಿ ಹೋಗುತ್ತಿರುವ ನಾವೆಯಂತೆ ಶೋಕಭಾರದಿಂದ ಕುಗ್ಗಿ ಹೋಗಿದ್ದ ಚಂದ್ರಮುಖಿಯಾದ ಸೀತಾದೇವಿಯನ್ನು ಹನುಮಂತನು ನೋಡಿದನು.॥೩॥ ವೈದೇಹಿಯನ್ನು ನೋಡಲು ಬಯಸಿದ್ದ ವಾಯುಪುತ್ರನಾದ ಹನುಮಂತನು ಆಮೆ ಸಮೀಪದಲ್ಲಿಯೇ ಇದ್ದ ಭಯಂಕರವಾಗಿ ಕಾಣುತ್ತಿದ್ದ ರಾಕ್ಷಸಿಯರನ್ನು ನೋಡಿದನು.॥೪॥

ಸಾಚಿವ್ಯಮಿವ ಕುರ್ವನ್ ಸ ಪ್ರಭಯಾ ನಿರ್ಮಲಪ್ರಭೇಃ ।
ಚಂದ್ರಮಾ ರಶ್ಮಿಭಿಃ ಶೀತೈಃ ಸಿಷೇವೇ ಪವನಾತ್ಮಜಮ್ ॥ ೨॥

ಸ ದದರ್ಶ ತತಃ ಸೀತಾಂ ಪೂರ್ಣಚಂದ್ರನಿಭಾನನಾಮ್ ।
ಶೋಕಭಾರೈರಿವ ನ್ಯಸ್ತಾಂ ಭಾರೈರ್ನಾವಮಿವಾಂಭಸಿ ॥ ೩॥

ವಿದಿತ್ವಮಾನೋ ವೈದೇಹೀಂ ಹನುಮಾನ್ ಪವನಾತ್ಮಜಃ ।
ಸ ದದರ್ಶಾವಿದೂರಸ್ಥಾ ರಾಕ್ಷಸೀರ್ಘೋರದರ್ಶನಾಃ ॥ ೪॥

ಆ ರಾಕ್ಷಸಿಯರ ದೇಹರಚನೆಯೇ ಬಹಳವಿಚಿತ್ರವಾಗಿತ್ತು. ಅವರಲ್ಲಿ ಕೆಲವು ರಾಕ್ಷಸಿಯರಿಗೆ ಒಂದೇ ಕಣ್ಣು ಒಂದೇ ಕಿವಿಗಳಿದ್ದವು. ಕೆಲವರಿಗೆ ತಲೆಗಳನ್ನೇ ಮುಚ್ಚಿಕೊಂಡಿರುವಂತಹ ವಿಶಾಲವಾದ ಕಿವಿಗಳಿದ್ದವು. ಕೆಲವರಿಗೆ ಮೂಗುಗಳು ಮೇಲ್ಮುಖವಾಗಿದ್ದವು. ಕೆಲವು ರಾಕ್ಷಸಿಯರಿಗೆ ಅತಿದಪ್ಪವಾದ ತಲೆಗಳಿದ್ದವು. ಕೆಲವರಿಗೆ ತೆಳ್ಳಗಾಗಿಯೂ ಮತ್ತು ಉದ್ದವಾಗಿಯೂ ಕುತ್ತಿಗೆಗಳಿದ್ದವು. ಕೆಲವರಿಗೆ ತಲೆಗಳಲ್ಲಿ ಸ್ವಲ್ಪ ಕೂದಲುಗಳಿದ್ದು, ಕೆಲವರಿಗೆ ಕೂದಲೇ ಇರಲಿಲ್ಲ. ಕೆಲವರಿಗೆ ಉಷ್ಣೆಯಂತೆ ಕೂದಲಿದ್ದವು. ಕೆಲವರಿಗೆ ಜೋಲಾಡುತ್ತಿರುವ ಕಿವಿಗಳು ಮತ್ತು ಹಣೆಗಳಿದ್ದವು. ಕೆಲವರಿಗೆ ಜೋತುಬಿದ್ದಿರುವ ಹೊಟ್ಟೆಗಳೂ, ಸ್ತನಗಳೂ ಇದ್ದವು. ಕೆಲವರ ತುಟಿಗಳು ಜೋತು

ಏಕಾಕ್ಷೀಮೇಕಕರ್ಣಾಂ ಚ ಕರ್ಣಪ್ರಾವರಣಾಂ ತಥಾ ।
ಅಕರ್ಣಾಂ ಶಂಕುಕರ್ಣಾಂ ಚ ಮಸ್ತಕೋತ್ಕ್ಷಿಪ್ತಕರ್ಣಿಕಾಮ್ ॥ ೫॥

ಅತಿಕಾಯೋತ್ತಮಾಂಗೀಂ ಚ ಕನುದೀರ್ಘಶಿರೋಧರಾಮ್ ।
ದೃಷ್ಟ್ವ ಕೇಶೀಂ ತಥಾಕೇಶೀಂ ಕೇಶಕಂಬಲಧಾರಿಣೀಮ್ ॥ ೬॥

ಲಂಬಕರ್ಣಲಲಾಟಾಂ ಚ ಲಂಬೋದರ ಪಯೋಧರಾಮ್ ।
ಲಂಬೋಷ್ಠೀಂ ಚುಬುಕೋಷ್ಠೀಂ ಚ ಲಂಬಾಸ್ಯಾಂ ಲಂಬಜಾನುಕಾಮ್ ॥

ಹ್ರಸ್ವಾಂ ದೀರ್ಘಾಂ ತಥಾ ಕುಬ್ಜಾಂ ವಿಕಟಾಂ ವಾಮನಾಂ ತಥಾ ।
ಕರಾಲಾಂ ಭುಗ್ನವಕ್ತ್ರಾಂ ಚ ಪಿಂಗಾಕ್ಷೀಂ ವಿಕೃತಾನನಾಮ್ ॥ ೮॥

ವಿಕೃತಾಃ ಪಿಂಗಲಾಃ ಕಾಲೀಃ ಕ್ರೋಧನಾಃ ಕಲಹಪ್ರಿಯಾಃ ।
ಕಾಲಾಯಸಮಹಾಶೂಲಕೂಟಮುದ್ಗರಧಾರಿಣೀಃ ॥ ೯॥

ವರಾಹಮೃಗಶಾರ್ದೂಲಮಹಿಷಾಜಶಿವಾಮುಖೀಃ ।
ಗಜೋಷ್ಟ್ರಹಯಪಾದೀಶ್ಚ ನಿಖಾತಶಿರಸೋಽಪರಾಃ ॥ ೧೦॥

ವಿಕಟಾಸ್ಯೈಕಪಾದಾಶ್ಚ ಖರಕರ್ಣ್ಯಶ್ವಕರ್ಣಿಕಾಃ ।
ಗೋಕರ್ಣೀರ್ಹಸ್ತಿಕರ್ಣೀಶ್ಚ ಹರಿಕರ್ಣೀಸ್ತಥಾ ಪರಾಃ ॥ ೧೧॥

ಅನಾಸಾ ಅತಿನಾಸಾಶ್ಚ ತಿರ್ಯಙ್ನಾಸಾ ವಿನಾಸಿಕಾಃ ।
ಗಜಸಂನಿಭನಾಸಾಶ್ಚ ಲಲಾಟೋಚ್ಚೈಸ್ತನಾಸಿಕಾಃ ॥ ೧೨॥

ಹ್ರಸ್ವಾದಾ ಮಹಾದಾ ಗೋದಾಃ ಪಾದಚೂರಿಕಾಃ ।
ಅತಿಮಾತ್ರಶಿರೋಗ್ರೀವಾ ಅತಿಮಾತ್ರಕುಟೋದರೀಃ ॥ ೧೩॥

ಅತಿಮಾತ್ರಾಸ್ಯನೇತ್ರಾಶ್ಚ ದೀರ್ಘಜಿಹ್ವಾನಖಾಸ್ತಥಾ ।
ಅಜಾಮುಖೀರ್ಹಯಮುಖೀರ್ಗೋಮುಖೀಃ ಸೂಕರೀಮುಖೀಃ ॥

ಹಯೋಷ್ಟ್ರಖರವಕ್ತ್ರಾಶ್ಚ ರಾಕ್ಷಸೀರ್ಘೋರದರ್ಶನಾಃ ।
ಶೂಲಮುದ್ಗರಹಸ್ತಾಶ್ಚ ಕ್ರೋಧನಾಃ ಕಲಹಪ್ರಿಯಾಃ ॥ ೧೫॥

ಕರಾಲಾ ಧೂಮ್ರಕೇಶೀಶ್ಚ ರಾಕ್ಷಸೀರ್ವಿಕೃತಾನನಾಃ ।
ಪಿಬಂತೀಃ ಸತತಂ ಪಾನಂ ಸದಾ ಮಾಂಸಸುರಾಪ್ರಿಯಾಃ॥ ೧೬॥

ಮಾಂಸೌಘನಿತದಿಗ್ಧಾಂಗೀರ್ಮಾಂಸೌಘನಿತಭೋಜನಾಃ ।
ತಾ ದದರ್ಶ ಕಪಿಶ್ರೇಷ್ಠೋ ರೋಮಹರ್ಷಣದರ್ಶನಾಃ॥ ೧೭॥

ಬಿದ್ದಿದ್ದವು. ಕೆಲವರಿಗೆ ಗಲ್ಲದಲ್ಲೇ ಸೇರಿಹೋದ ತುಟಿಗಳಿದ್ದವು. ಕೆಲವರ ಮುಖಗಳು ಜೋತುಬಿದ್ದಿದ್ದುವು. ಕೆಲವರಿಗೆ ದೀರ್ಘವಾದ ಮಂಡಿಗಳಿದ್ದವು. ಕೆಲವರಿಗೆ ಸೊಂಟದ ಮೇಲು ಭಾಗವೂ ಗಿಡ್ಡಾಗಿಯೂ ಕೆಳಭಾಗವು ಉದ್ದವಾಗಿಯೂ ಇತ್ತು. ಅಲ್ಲಿ ಕೆಲವು ಗೂನುಬೆನ್ನಿನ ರಾಕ್ಷಸಿಯರಿದ್ದರು. ಸ್ಥೂಲವಾದ ಮೊಣಕಾಲುಗಳುಳ್ಳವರಿದ್ದರು. ಕುಳ್ಳಿಯರಿದ್ದರು. ಉಬ್ಬಿದ ಹಲ್ಲುಗಳುಳ್ಳವರಿದ್ದರು. ತಗ್ಗಾದ ಮುಖಗಳುಳ್ಳರಿದ್ದರು. ಕಂದು-ಹಳದಿಬಣ್ಣದ ಕಣ್ಣುಗಳುಳ್ಳವರಿದ್ದರು. ಕೆಲವರ ಮುಖಗಳು ವಿಕಾರವಾಗಿದ್ದವು. ಆಕಾರವೂ ವಿಕಾರವಾಗಿದ್ದಿತು. ಅಲ್ಲಿ ಪಿಂಗಲ ವರ್ಣದ, ಕೃಷ್ಣವರ್ಣದ ರಾಕ್ಷಸಿಯರಿದ್ದರು. ಕೋಪಿಷ್ಠೆಯರಾದ ರಾಕ್ಷಸಿಯರಿದ್ದರು. ಜಗಳಗಂಟಿಯರಿದ್ದರು. ಅವರಲ್ಲಿ ಕೆಲವರು ಕಾಲದಂಡಗಳನ್ನು, ಕೆಲವರು ಕಬ್ಬಿಣದ ಆಯುಧಗಳನ್ನು, ಕೆಲವರು ಶೂಲಾಯುಧಗಳನ್ನು, ಕೆಲವರು ಪಾಶ-ಮುದ್ಗರಗಳನ್ನು ಹಿಡಿದಿದ್ದರು. ಅವರಲ್ಲಿ ಕೆಲವರಿಗೆ ಹಂದಿ, ಸಿಂಹ, ಎಮ್ಮೆ, ಆಡು, ಗುಳ್ಳನರಿ, ಇವೇ ಮುಂತಾದ ಪ್ರಾಣಿಗಳ ಮುಖಗಳಿದ್ದವು. ಆನೆ, ಒಂಟೆ, ಕುದುರೆಗಳ ಕಾಲುಗಳಂತಹ ಕಾಲುಗಳನ್ನು ಕೆಲವರು ಹೊಂದಿದ್ದರು. ಕೆಲವು ರಾಕ್ಷಸಿಯರ ಕಿವಿಗಳು ಕತ್ತೆ ಕುದುರೆ, ಹಸು, ಆನೆ, ಕಪಿ, ಇವುಗಳ ಕಿವಿಗಳಂತಿದ್ದವು. ಕೆಲವು ರಾಕ್ಷಸಿಯರಿಗೆ ನೀಳವಾದ ಮೂಗುಗಳಿದ್ದವು. ಕೆಲವರಿಗೆ ಅಡ್ಡವಾದ ಮುಗುಗಳಿದ್ದವು. ಕೆಲವರಿಗೆ ಮೂಗೇ ಇರಲಿಲ್ಲ. ಕೆಲವರಿಗೆ ಆನೆಯ ಮೂಗು, ಕೆಲವರಿಗೆ ಹಣೆಯಲ್ಲಿ ಮೂಗಿದ್ದಿತು. ಕೆಲವು ರಾಕ್ಷಸಿಯರಿಗೆ ಆನೆಯಂತೆ ಕಾಲುಗಳಿದ್ದವು. ಕೆಲವರಿಗೆ ದೊಡ್ಡದಾದ ಹೆಜ್ಜೆಗಳಿದ್ದವು. ಕೆಲವರಿಗೆ ಹಸುವಿನಂತೆ ಪಾದಗಳಿದ್ದವು. ಕೆಲವರಿಗೆ ಕಾಲಿನಲ್ಲಿ ಶಿಖಾರೂಪವಾದ ಕೂದಲುಗಳಿದ್ದವು. ಕೆಲವರಿಗೆ ಆಳತೆಗೆ ಮೀರಿದ ತಲೆ-ಕುತ್ತಿಗೆಗಳಿದ್ದವು. ಕೆಲವರಿಗೆ ಮಿತಿಮೀರಿದ ಸ್ತನಗಳೂ, ಹೊಟ್ಟೆಗಳೂ, ಮುಖ, ನಾಸಿಕಗಳಿದ್ದವು. ಕೆಲವರಿಗೆ ಉದ್ದವಾದ ನಾಲಿಗೆಗಳು, ನೀಳವಾದ ಮುಖಗಳಿದ್ದವು. ಕೆಲವರು ಆಡು, ಆನೆ, ಹಸು, ಹಂದಿ, ಕುದುರೆ, ಒಂಟೆ, ಕತ್ತೆ, ಇವೇ ಮುಂತಾದ ಪ್ರಾಣಿಗಳ ಮುಖಗಳನ್ನು ಹೊಂದಿದ್ದರು. ಕೆಲವರು ಶೂಲ-ಮುದ್ಗರಗಳನ್ನು ಹಿಡಿದಿದ್ದರು. ಕೆಲವರು ಮಹಾಕೋಪಿಷ್ಠೆಯರಾಗಿದ್ದರು. ಜಗಳಗಂಟಿಗಳಾಗಿದ್ದರು. ಕೆಲವರು ಕರಾಲವಾದ ಮತ್ತು ಧೂಮ್ರವರ್ಣದ ಕೇಶವುಳ್ಳವರಾಗಿದ್ದರು. ಅವರೆಲ್ಲರೂ ಸದಾ ಮಧುಪಾನ ಮಾಡುತ್ತಿದ್ದರು. ಆವರಿಗೆ ಮಾಂಸವನ್ನು ತಿನ್ನುವುದರಲ್ಲಿ, ಸುರಾಪಾನದಲ್ಲಿ ವಿಶೇಷವಾದ ಆಸಕ್ತಿಯಿದ್ದಿತು. ಈ ಕಾರಣದಿಂದ ಅವರ ಶರೀರಗಳು ರಕ್ತ-ಮಾಂಸಗಳಿಂದ ನೆನೆದುಹೋಗಿದ್ದವು. ಅವರು ವಿಕಾರವಾದ ಮುಖಗಳನ್ನು ಹೊಂದಿ ಭಯಂಕರವಾಗಿ ಕಾಣುತ್ತಿದ್ದರು. ನೋಡುವವರಿಗೆ ರೋಮಾಂಚನವನ್ನುಂಟು ಮಾಡುತ್ತಿದ್ದರು. ಅಂತಹ ಅನೇಕ ರಾಕ್ಷಸಿಯರು ಶಿಂಶುಪಾ ವೃಕ್ಷವನ್ನು ಸುತ್ತುವರಿದು ಕುಳಿತಿರುವುದನ್ನು ಕಪಿಶ್ರೇಷ್ಠನಾದ ಹನುಮಂತನು ನೋಡಿದನು.॥೫-೧೭॥

ಸ್ಕಂದವಂತಮುಪಾಸೀನಾಃ ಪರಿವಾರ್ಯ ವನಸ್ಪತಿಮ್ ।
ತಸ್ಯಾಧಸ್ತಾಚ್ಚ ತಾಂ ದೇವೀಂ ರಾಜಪುತ್ರೀಮನಿಂದಿತಾಮ್ ॥ ೧೮॥

ಲಕ್ಷಯಾಮಾಸ ಲಕ್ಷ್ಮೀವಾನ್ ಹನುಮಾನ್ ಜನಕಾತ್ಮಜಾಮ್ ।
ನಿಷ್ಪ್ರಭಾಂ ಶೋಕಸಂತಪ್ತಾಂ ಮಲಸಂಕುಲಮೂರ್ಧಜಾಮ್ ॥ ೧೯॥

ಕ್ಷೀಣಪುಣ್ಯಾಂ ಚ್ಯುತಾಂ ಭೂಮೌ ತಾರಾಂ ನಿಪತಿತಾಮಿವ ।
ಚಾರಿತ್ರ್ಯವ್ಯಪದೇಶಾಢ್ಯಾಂ ಭರ್ತೃದರ್ಶನದುರ್ಗತಾಮ್ ॥ ೨೦॥

ಭೂಷಣೈರುತ್ತಮೈರ್ಹೀನಾಂ ಭರ್ತೃವಾತ್ಸಲ್ಯಭೂಷಣಾಮ್ ।
ರಾಕ್ಷಸಾಧಿಪಸಂರುದ್ಧಾಂ ಬಂಧುಭಿಶ್ಚ ವಿನಾಕೃತಾಮ್ ॥ ೨೧॥

ವಿಯೂಥಾಂ ಸಿಂಹಸಂರುದ್ಧಾಂ ಬದ್ಧಾಂ ಗಜವಧೂಮಿವ ।
ಚಂದ್ರರೇಖಾಂ ಪಯೋದಾಂತೇ ಶಾರದಾಭ್ರೈರಿವಾವೃತಾಮ್ ॥ ೨೨॥

ಕ್ಲಿಷ್ಟರೂಪಾಮಸಂಸ್ಪರ್ಶಾದಯುಕ್ತಾಮಿವ ವಲ್ಲಕೀಮ್ ।
ಸೀತಾಂ ಭರ್ತೃವಶೇ ಯುಕ್ತಾಮಯುಕ್ತಾಂ ರಾಕ್ಷಸೀವಶೇ ॥ ೨೩॥

ಅಶೋಕವನಿಕಾಮಧ್ಯೇ ಶೋಕಸಾಗರಮಾಪ್ಲುತಾಮ್ ।
ತಾಭಿಃ ಪರಿವೃತಾಂ ತತ್ರ ಸಗ್ರಹಾಮಿವ ರೋಹಿಣೀಮ್ ॥ ೨೪॥

ದದರ್ಶ ಹನುಮಾನ್ ದೇವೀಂ ಲತಾಮಕುಸುಮಾಮಿವ ।
ಸಾ ಮಲೇನ ಚ ದಿಗ್ಧಾಂಗೀ ವಪುಷಾ ಚಾಪ್ಯಲಂಕೃತಾ ॥ ೨೫॥

ಮೃಣಾಲೀ ಪಂಕದಿಗ್ಧೇವ ವಿಭಾತಿ ನ ವಿಭಾತಿ ಚ ।
ಮಲಿನೇನ ಚ ವಸ್ತ್ರೇಣ ಪರಿಕ್ಲಿಷ್ಟೇನ ಭಾಮಿನೀಮ್ ॥ ೨೬॥

ಸಂವೃತಾಂ ಮೃಗಶಾವಾಕ್ಷೀಂ ದದರ್ಶ ಹನುಮಾನ್ ಕಪಿಃ ।
ತಾಂ ದೇವೀಂ ದೀನವದನಾಮದೀನಾಂ ಭರ್ತೃತೇಜಸಾ ॥ ೨೭॥

ರಕ್ಷಿತಾಂ ಸ್ವೇನ ಶೀಲೇನ ಸೀತಾಮಸಿತಲೋಚನಾಮ್ ।
ತಾಂ ದೃಷ್ಟ್ವಾ ಹನುಮಾನ್ ಸೀತಾಂ ಮೃಗಶಾವನಿಭೇಕ್ಷಣಾಮ್ ॥ ೨೮॥

ಆ ರಾಕ್ಷಸಸ್ತ್ರೀಯರು ದೊಡ್ಡರೆಂಬೆಗಳುಳ್ಳ ವೃಕ್ಷದ ಸುತ್ತಲೂ ಕುಳಿತು ಕೊಂಡಿದ್ದರು. ಆ ಮರದ ಕೆಳಗೆ ಕುಳಿತಿರುವ ಪೂಜ್ಯಳಾದ ಜನಕರಾಜನ ಸುತೆಯಾದ ಜಾನಕಿಯನ್ನು ಹನುಮಂತನು ನೋಡಿದನು.॥೧೮॥ ಆ ಜಾನಕಿಯನ್ನು ದರ್ಶಿಸಿದ ಮಾರುತಿಯು ಮಹದಾನಂದ ಭರಿತನಾಗಿ ದಿವ್ಯತೇಜದಿಂದ ವಿರಾಜಮಾನನಾದನು. ಶೋಕಸಂತಪ್ತಳಾದ ಆಕೆಯು ಕಾಂತಿ ಹೀನಳಾಗಿದ್ದು, ಮಲಿನವಾದ ತಲೆಗೂದಲುಗಳಿಂದ ಕೂಡಿದ್ದಳು.॥೧೯॥ ಆ ಸಮಯದಲ್ಲಿ ಸೀತಾದೇವಿಯು-ಪುಣ್ಯ ಕ್ಷೀಣಿಸಿದಾಗ ಧರೆಗೆ ಉರುಳಿದ ನಕ್ಷತ್ರದಂತೆ ಕಾಣುತ್ತಿದ್ದಳು. ಪತಿವ್ರತಾ ಧರ್ಮವನ್ನು ಪಾಲಿಸುತ್ತಿರುವ ಉತ್ತಮ ಶೀಲಸಂಪನ್ನೆಯಾಗಿದ್ದರೂ ಪತಿದರ್ಶನ ಭಾಗ್ಯವಿಲ್ಲದೇ ಆಕೆಯು ಬಹಳವಾಗಿ ಕಂಗೆಟ್ಟಿದ್ದಳು.॥೨೦॥ ಅವಳು ಉತ್ತಮವಾದ ಆಭರಣಗಳನ್ನು ತೊಟ್ಟಿರಲಿಲ್ಲ. ಆದರೂ ಪತಿಪ್ರೇಮವೆಂಬ ಆಭರಣದಿಂದ ಅಲಂಕೃತಳಾಗಿದ್ದಳು. ರಾಕ್ಷಸಾಧಿಪನಾದ ರಾವಣನು ಅವಳನ್ನಿಲ್ಲಿ ಬಂಧಿಸಿಟ್ಟಿದ್ದನು. ಅಲ್ಲಿ ಅವಳಿಗೆ ಬಂಧುಗಳು ಯಾರು ಸನಿಹದಲ್ಲಿ ಇರಲಿಲ್ಲ.॥೨೧॥ ಆನೆಗಳ ಸಮೂಹದಿಂದ ಬೇರ್ಪಟ್ಟು ಸಿಂಹದಿಂದ ತಡೆಯಲ್ಪಟ್ಟ ಹೆಣ್ಣಾನೆಯಂತೆ ಭಯಭೀತಳಾಗಿದ್ದಳು. ಶರತ್ಕಾಲದಲ್ಲಿ ಮೋಡಗಳಿಂದ ಆವೃತನಾದ ಬಿದಿಗೆಯ ಚಂದ್ರರೇಖೆಯಂತೆ ಕಾಣುತ್ತಿದ್ದಳು.॥೨೨॥ ಅಭ್ಯಂಜನಾದಿ ಸಂಸ್ಕಾರಗಳಿಲ್ಲದೆ ಅವಳ ಶರೀರವು ಮಲಿನವಾಗಿದ್ದಿತು. ಅವಳು ವಾದಕನಿಲ್ಲದ ವೀಣೆಯಂತಿದ್ದಳು. ಪತಿಯಾದ ಶ್ರೀರಾಮನ ವಶದಲ್ಲಿರ ಬೇಕಾದ ಸಿತೆಯು ಇಂದು ರಾಕ್ಷಸಿಯರ ಮಧ್ಯದಲ್ಲಿರುವುದು ಯೋಗ್ಯವಾಗಿಕಾಣುವುದಿಲ್ಲ.॥೨೩॥ ಅಶೋಕವನದ ಮಧ್ಯದಲ್ಲಿದ್ದರೂ ಇವಳು ಶೋಕಸಾಗರದಲ್ಲಿ ಮುಳುಗಿದ್ದಾಳೆ. ಕ್ರೂರ ಗ್ರಹಗಳಿಂದ ಪಿಡಿತವಾದ ರೋಹಿಣೀ ನಕ್ಷತ್ರದಂತೆ ಕ್ರೂರ ರಾಕ್ಷಸಿಯರಿಂದ ಪರಿವೃತಳಾಗಿದ್ದಾಳೆ.॥೨೪॥ ಅವಳು ಕುಸುಮಗಳಿಲ್ಲದ ಲತೆಯಂತೆ ನಿಸ್ತೇಜವಾಗಿದ್ದಳು. ಅಂಗಾಂಗಳು ಧೂಳಿನಿಂದ ಆವರಿಸಲ್ಪಟ್ಟಿದ್ದವು. ಅಲಂಕಾರಗಳಿಲ್ಲದಿದ್ದರೂ ಶರೀರದಿಂದ ದಿವ್ಯಕಾಂತಿಯು ಹೊರಸೂಸುತ್ತಿದ್ದಿತು. ಕೆಸರಿನಿಂದ ಬಳಿಯಲ್ಪಟ್ಟ ಕಮಲದ ಬಳ್ಳಿಯಂತೆ ಅಪ್ರಕಾಶಳಾಗಿಯೂ ಇದ್ದ ಸೀತಾದೇವಿಯನ್ನು ಹನುಮಂತನು ನೋಡಿದನು.॥೨೫॥ ಹೆಚ್ಚು ದಿನಗಳು ಉಪಯೋಗಿಸಿದ್ದ ಕಾರಣ ಉಟ್ಟಿದ್ದ ವಸನವು ಮಲಿನವಾಗಿತ್ತು. ಜಿಂಕೆಯ ಮರಿಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳಿಂದ ಶೋಭಿಸುತ್ತಿದ್ದ ಜಾನಕಿಯನ್ನು ವಾನರೋತ್ತಮನು ನೋಡಿದನು. ಒಮ್ಮೆ ಅವಳ ಮುಖದಲ್ಲಿ ದೈನ್ಯಭಾವವು ಮೂಡಿದರೆ, ಮತ್ತೊಮ್ಮೆ ಶ್ರೀರಾಮನ ತೇಜಸ್ಸನ್ನು ಸ್ಮರಿಸಿದೊಡನೆಯೇ ಆ ದೈನ್ಯಭಾವವು ಅಳಿಸಿ ಹೋಗುತ್ತಿತ್ತು. ಶೀಲವನ್ನು ಅತ್ಯಂತ ಜಾಗರೂಕತೆಯಿಂದ ರಕ್ಷಿಸಿಕೊಳ್ಳುತ್ತಿದ್ದ, ಕಪ್ಪಾದ ಕಣ್ಣುಗಳುಳ್ಳ ಜಾನಕಿಯು ಜಿಂಕೆಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳಿಂದ ಭಯಗೊಂಡ ಹುಲ್ಲೆಯಂತೆ ಅತ್ತಲಿತ್ತ ನೋಡುತ್ತಿದ್ದಳು.॥೨೬-೨೮॥

ಮೃಗಕನ್ಯಾಮಿವ ತ್ರಸ್ತಾಂ ವೀಕ್ಷಮಾಣಾಂ ಸಮಂತತಃ ।
ದಹಂತೀಮಿವ ನಿಃಶ್ವಾಸೈರ್ವೃಕ್ಷಾನ್ ಪಲ್ಲವಧಾರಿಣಃ ॥ ೨೯॥

ಸಂಘಾತಮಿವ ಶೋಕಾನಾಂ ದುಃಖಸ್ಯೋರ್ಮಿಮಿವೋತ್ಥಿತಾಮ್ ।
ತಾಂ ಕ್ಷಮಾಂ ಸರ್ವಥಾಯೋಗಾಂ ವಿನಾಭರಣಶೋಭಿನೀಮ್ ।
ಪ್ರಹರ್ಷಮತುಲಂ ಲೇಭೇ ಮಾರುತಿಃ ಪ್ರೇಕ್ಷ್ಯ ಮೈಥಿಲೀಮ್ ॥ ೩೦॥

ಹರ್ಷಜಾನಿ ಚ ಸೋಽಶ್ರೂಣಿ ತಾಂ ದೃಷ್ಟ್ವಾ ಮಥಿತೇಕ್ಷಣಾಮ್ ।
ಮುಮೋಚ ಹನುಮಾಂತ್ರ ನಮುಖ್ಯೇ ಚ ರಾಘವಮ್ ॥ ೩೧॥

ನಮಸ್ಕೃತ್ವಾ ಚ ರಾಮಾಯ ಲಕ್ಷ್ಮಣಾಯ ಚ ವೀರ್ಯವಾನ್ ।
ಸೀತಾದರ್ಶನಸಂಹೃಷ್ಟೋ ಹನುಮಾನ್ ಸಂವೃತೋಽಭವತ್ ॥ ೩೨॥

ಚಿಗುರೊಡೆದ ವೃಕ್ಷಗಳನ್ನು ತನ್ನ ಬಿಸಿ-ಬಿಸಿಯಾದ ನಿಟ್ಟುಸಿರಿನಿಂದ ಸುಟ್ಟುಬಿಡುವಳೋ ಎಂಬಂತೆ ಕಾಣುತ್ತಿದ್ದಳು. ಅವಳು ಶೋಕಸಮೂಹವೇ ಮೂರ್ತಿಮತ್ತಾಗಿ ಬಂದಿರುವುದೋ ಎಂಬಂತೆ ಕಾಣುತ್ತಿದ್ದಳು.॥೨೯॥ ದುಃಖವೆಂಬ ಸಾಗರದಲ್ಲಿ ಮೇಲುಕ್ಕಿಬರುವ ಆಲೆಯೋಪಾದಿಯಲ್ಲಿ ಕಾಣುತ್ತಿದ್ದಳು. ಚೆನ್ನಾದ ಅವಯವ ಸೌಷ್ಠವತೆಯಿಂದ ಆಭರಣಗಳಿಲ್ಲದಿದ್ದರೂ ಶೋಭಿಸುತ್ತಿರುವ ಕ್ಷಮಾಮೂರ್ತಿಯಾದ ಆ ಸೀತಾಮಾತೆಯನ್ನು ನೋಡಿ ಮಾರುತಿಯು ಹೆಚ್ಚಿನ ಆನಂದಕುಂದಿಲನಾದನು.॥೩೦॥

ಆಂದವಾದ ಕಣ್ಣುಗಳುಳ್ಳ ಆ ಸೀತಾದೇವಿಯನ್ನು ನೋಡಿದಾಗಲೇ ಹನುಮಂತನ ನೇತ್ರಗಳಿಂದ ಆನಂದಾಶ್ರುಗಳು ಹರಿದವು. ಬಳಿಕ ಮಹಾಪರಾಕ್ರಮಿಯಾದ ಆಂಜನೇಯನು ಮನಸ್ಸಿನಲ್ಲೇ ರಾಘವನಿಗೂ, ಲಕ್ಷ್ಮಣನಿಗೂ ನಮಸ್ಕರಿಸಿ ಸೀತಾದರ್ಶನದಿಂದ ಸಂಹೃಷ್ಟನಾಗಿ ಆ ಶಿಂಶುಪಾ ವೃಕ್ಷದಲ್ಲೇ ಉಡುಗಿದನು.॥೩೧-೩೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಸಪ್ತದಶಃ ಸರ್ಗಃ ॥ ೧೭ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನೇಳನೆಯ ಸರ್ಗವು ಮುಗಿಯಿತು.

* * *

ಹದಿನೆಂಟನೆಯ ಸರ್ಗ

ರಾವಣನು ಅಂತಃಪುರದ ಸ್ತ್ರೀಯರಿಂದ ಪರಿವೃತನಾಗಿ ಅಶೋಕವನಕ್ಕೆ ಬಂದುದನ್ನು ಹನುಮಂತನು ನೋಡಿದುದು–

ತಥಾ ವಿಪ್ರೇಕ್ಷಮಾಣಸ್ಯ ವನಂ ಪುಷ್ಪಿತಪಾದಪಮ್ ।
ವಿಚಿನ್ವತಶ್ಚ ವೈದೇಹೀಂ ಕಿಂಚಿಚ್ಛೇಷಾ ನಿಶಾಭವತ್ ॥ ೧॥

ಷಡಂಗವೇದವಿದುಷಾಂ ಕ್ರತುಪ್ರವರಯಾಜಿನಾಮ್ ।
ಶುಶ್ರಾವ ಬ್ರಹ್ಮಘೋಷಾಂಶ್ಚ ವಿರಾತ್ರೇ ಬ್ರಹ್ಮರಕ್ಷಸಾಮ್ ॥ ೨॥

ಅಥ ಮಂಗಲವಾದಿತ್ರೈಃ ಶಬ್ದೈಃ ಶ್ರೋತ್ರಮನೋಹರೈಃ ।
ಪ್ರಾಬುಧ್ಯತ ಮಹಾಬಾಹುರ್ದಶಗ್ರೀವೋ ಮಹಾಬಲಃ ॥ ೩॥

ವಿಬುಧ್ಯ ತು ಯಥಾಕಾಲಂ ರಾಕ್ಷಸೇಂದ್ರಃ ಪ್ರತಾಪವಾನ್ ।
ಸ್ರಸ್ತಮಾಲ್ಯಾಂಬರಧರೋ ವೈದೇಹೀಮನ್ವಚಿಂತಯತ್ ॥ ೪॥

ಆಗ ಹನುಮಂತನು ಪುಷ್ಪಿತವಾದ ವೃಕ್ಷಗಳಿಂದ ನಿಬಿಡವಾಗಿದ್ದ ಅಶೋಕವನದಲ್ಲಿ ಜಾನಕಿಯನ್ನು ಹುಡುಕುತ್ತಿರುವಾಗಲೇ ರಾತ್ರಿಯ ಬಹು ಭಾಗವು ಕಳೆದು ಸ್ವಲ್ಪಭಾಗಮಾತ್ರ ಉಳಿದಿತ್ತು.॥೧॥ ರಾತ್ರಿಯು ಕಳೆಯುತ್ತಿದ್ದ ಆ ಸಮಯದಲ್ಲಿ ಸಾಂಗವೇದಾಧ್ಯಯನ ಮಾಡಿದ್ದ, ಮಹಾಯಜ್ಞಗಳ ಯಾಜಕರಾಗಿದ್ದ ಬ್ರಹ್ಮರಾಕ್ಷಸರು ಮಾಡುತ್ತಿದ್ದ ವೇದಘೋಷಗಳನ್ನು ಹನುಮಂತನು ಕೇಳಿದನು.॥೨॥ ಅದೇ ಸಮಯದಲ್ಲಿ ಕಿವಿಗಳಿಗೆ ಇಂಪಾಗಿದ್ದ ಮಂಗಳವಾದ್ಯಗಳ ನಿನಾದದಿಂದ ದೀರ್ಘಬಾಹುವೂ, ಮಹಾಬಲಶಾಲಿಯೂ ಆದ ದಶಗ್ರೀವನನ್ನು ಅನುಚರರು ಎಚ್ಚರಿಸಿದರು.॥೩॥ ಪ್ರತಾಪಶಾಲಿಯಾದ, ರಾಕ್ಷಸೇಂದ್ರನಾದ, ರಾವಣನು ಸಕಾಲದಲ್ಲಿ ಮೇಲೆದ್ದನು. ಅವನು ಧರಿಸಿದ್ದ ಮಾಲೆಗಳೂ, ಹಾರಗಳೂ, ಅಸ್ತವ್ಯಸ್ತವಾಗಿದ್ದವು. ಎದ್ದಾಗಲೇ ವೈದೇಹಿಯ ವಿಷಯವಾಗಿ ಯೋಚಿಸತೊಡಗಿದನು.॥೪॥ ಮಾದಕ ಪದಾರ್ಥಗಳ ಸೇವನೆಯಿಂದ,

ಭೃಶಂ ನಿಯುಕ್ತಸ್ತಸ್ಯಾಂ ಚ ಮದನೇನ ಮದೋತ್ಕಟಃ ।
ನ ಸ ತಂ ರಾಕ್ಷಸಃ ಕಾಮಂ ಶಶಾಕಾತ್ಮನಿ ಗೂಹಿತುಮ್ ॥ ೫॥

ಸ ಸರ್ವಾಭರಣೈರ್ಯುಕ್ತೋ ಬಿಭ್ರಚ್ಛ್ರಿಯಮನುತ್ತಮಾಮ್ ।
ತಾಂ ನಗೈರ್ಬಹುಭಿರ್ಜುಷ್ಟಾಂ ಸರ್ವಪುಷ್ಪಫಲೋಪಗೈಃ ॥ ೬॥

ವೃತಾಂ ಪುಷ್ಕರಣೀಭಿಶ್ಚ ನಾನಾ ಪುಷ್ಪೋಪಶೋಭಿತಾಮ್ ।
ಸದಾಮದೈಶ್ಚ ವಿಹಗೈರ್ವಿಚಿತ್ರಾಂ ಪರಮಾದ್ಭುತೈಃ ॥ ೭॥

ಈಹಾಮೃಗೈಶ್ಚ ವಿವಿಧೈರ್ಜುಷ್ಟಾಂ ದೃಷ್ಟಿಮನೋಹರೈಃ ।
ವೀಥೀಃ ಸಂಪ್ರೇಕ್ಷಮಾಣಶ್ಚ ಮಣಿಕಾಂಚನ ತೋರಣಾಃ ॥ ೮॥

ನಾನಾಮೃಗಗಣಾಕೀರ್ಣಾಂ ಫಲೈಃ ಪ್ರಪತಿತೈರ್ವೃತಾಮ್ ।
ಅಶೋಕವನಿಕಾಮೇವ ಪ್ರಾವಿಶತ್ ಸಂತತದ್ರುಮಾಮ್ ॥ ೯॥

ಅಂಗನಾಃ ಶತಮಾತ್ರಂ ತು ತಂ ವ್ರಜಂತಮನುವ್ರಜನ್ ।
ಮಹೇಂದ್ರಮಿವ ಪೌಲಸ್ತ್ಯಂ ದೇವಗಂಧರ್ವಯೋಷಿತಃ ॥ ೧೦॥

ದೀಪಿಕಾಃ ಕಾಂಚನೀಃ ಕಾಶ್ಚಿಜ್ಜಗೃಹುಸ್ತತ್ರ ಯೋಷಿತಃ ।
ವಾಲವ್ಯಜನಹಸ್ತಾಶ್ಚ ತಾಲವೃಂತಾನಿ ಚಾಪರಾಃ ॥ ೧೧॥

ಕಾಂಚನೈರಪಿ ಭೃಂಗಾರೈರ್ಜಹ್ರುಃ ಸಲಿಲಮಗ್ರತಃ ।
ಮಂಡಲಾಗ್ರಾ ಬೃಸೀಶ್ಚೈವ ಗೃಹ್ಯಾನ್ಯಾಃ ಪೃಷ್ಠತೋ ಯಯುಃ ॥ ೧೨॥

ಕಾಚಿದ್ರತ್ನಮಯೀಂ ಸ್ಥಾಲೀಂ ಪೂರ್ಣಾಂ ಪಾನಸ್ಯ ಭಾಮಿನೀ ।
ದಕ್ಷಿಣಾ ದಕ್ಷಿಣೇನೈವ ತದಾ ಜಗ್ರಾಹ ಪಾಣಿನಾ ॥ ೧೩॥

ರಾಜಹಂಸಪ್ರತೀಕಾಶಂ ಛತ್ರಂ ಪೂರ್ಣಶಶಿಪ್ರಭಮ್ ।
ಸೌವರ್ಣದಂಡಮಪರಾ ಗೃಹೀತ್ವಾ ಪೃಷ್ಠ ತೋ ಯಯೌ ॥ ೧೪॥

ನಿದ್ರಾಮದಪರೀತಾಕ್ಷೋ ರಾವಣಸ್ಯೋತ್ತಮಾಃ ಸ್ತ್ರೀಯಃ ।
ಅನುಜಗ್ಮುಃ ಪತಿಂ ವೀರಂ ಘನಂ ವಿದ್ಯುಲ್ಲತಾ ಇವ ॥ ೧೫॥

ಮದೋತ್ಕಟನಾಗಿದ್ದು, ಮನ್ಮಥನ ಪ್ರಭಾವದಿಂದ ಸೀತಾದೇವಿಯಲ್ಲಿ ಅತ್ಯಾಸಕ್ತನಾಗಿದ್ದ ರಾವಣನಲ್ಲಿದ್ದ ಕಾಮದ ಉದ್ವೇಗವನ್ನು ಅಡಗಿಸದಾದನು.॥೫॥

ಒಡನೆಯೇ ಆಭರಣಗಳೆಲ್ಲವನ್ನು ತೊಟ್ಟುಕೊಂಡು, ನಯನ ಮನೋಹರವಾಗಿ ಸಿಂಗರಿಸಿಕೊಂಡು ಪರಮಶ್ರೇಷ್ಠವಾದ ಕಾಂತಿಯಿಂದ ರಾರಾಜಿಸುತ್ತಾ, ಫಲ-ಪುಷ್ಪಗಳಿಂದ ಸಮೃದ್ಧ ವಾಗಿದ್ದ ಅನೇಕ ವೃಕ್ಷಗಳಿಂದ ಕೂಡಿದ್ದ ಆ ಅಶೋಕವನವು ನಾನಾವಿಧವಾದ ಸರೋವರಗಳಿಂದ ಸಮಲಂಕೃತವಾಗಿತ್ತು. ನಾನಾವಿಧವಾದ ಪುಷ್ಪಗಳಿಂದ ಶೋಭಿಸುತ್ತಿತ್ತು. ನಿರಂತರ ಮದಿಸಿದ ಪಕ್ಷಿಗಳ ಕಲಕಲನಿನಾದದಿಂದ ಅದ್ಭುತವಾಗಿದ್ದು ಚಿತ್ರವಿಚಿತ್ರವಾಗಿತ್ತು. ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಿದ್ದ ವಿಧ-ವಿಧವಾದ ಕ್ರೀಡಾಮೃಗಗಳಿಂದ ಸಮಾವೃತವಾಗಿದ್ದಿತು. ಮಣಿಮಯ, ಮತ್ತು ಕಾಂಚನಮಯ ತೋರಣಗಳಿಂದ ಅಲಂಕೃತವಾದ, ವಿಶಾಲವಾದ ವೀಥಿಗಳನ್ನು ನೋಡುತ್ತಾ ರಾವಣನು ಮುಂದರಿದನು. ಹಲವು ಬಗೆಯ ಜಿಂಕೆಗಳ ಗುಂಪುಗಳು ಅಲಲ್ಲಿ ಶೋಭಿಸುತ್ತಿದ್ದವು. ಪಕ್ವವಾಗಿ ಕೆಳಕ್ಕೆಬಿದ್ದ ಹಣ್ಣುಗಳಿಂದ ಆ ಭೂಪ್ರದೇಶವು ಮುಚ್ಚಿಹೋಗಿದ್ದಿತು. ದಟ್ಟವಾಗಿದ್ದ ವೃಕ್ಷಗಳಿಂದ ಕೂಡಿದ್ದ ಆ ಅಶೋಕವನವನ್ನು ಪ್ರವೇಶಿಸಿದನು. ॥೬-೯॥

ದೇವ-ಗಂಧರ್ವ ಕಾಂತೆಯರು ಮಹೇಂದ್ರನನ್ನು ಅನುಸರಿಸಿ ಹೋಗುವಂತೆ ನೂರಾರು ಮಂದಿ ಅಂತಃಪುರದ ನಾರಿಯರು ಪೌಲ್ಯಸ್ತ್ಯವಂಶಜನಾದ ರಾವಣನನ್ನು ಅನುಸರಿಸಿ ಹೋಗುತ್ತಿದ್ದರು.॥೧೦॥ ಅವರಲ್ಲಿ ಕೆಲವು ಯುವತಿಯರು ಸುವರ್ಣಮಯವಾದ ದಿವಟಿಗೆಯನ್ನು ಹಿಡಿದು ಮುಂದೆ ಹೋಗುತ್ತಿದ್ದರು. ಕೆಲವರು ಬೀಸಣಿಗೆಗಳನ್ನು, ಚಾಮರಗಳನ್ನು ಹಿಡಿದ್ದಿರು.॥೧೧॥ ಇನ್ನು ಕೆಲವರು ಸುವರ್ಣಮಯವಾದ ಕಲಶಗಳಲ್ಲಿ ನೀರನ್ನು ತುಂಬಿಕೊಂಡು ಮುಂದೆ ಹೋಗುತ್ತಿದ್ದರು. ಮತ್ತೂ ಕೆಲವರು ಖಡ್ಗಗಳನ್ನು, ಮಂಡಲಾಕಾರದ ಆಸನಗಳನ್ನು ಹಿಡಿದುಕೊಂಡು ಜೊತೆಯಲ್ಲಿ ಹೋಗುತ್ತಿದ್ದರು. ॥೧೨॥ ಕುಶಲೆಯಾದ ಅಂಗನೆಯೊಬ್ಬಳು ಮದಿರೆಯಿಂದ ತುಂಬಿದ ರತ್ನಖಚಿತವಾದ ಪಾನಪಾತ್ರೆಯನ್ನು ಬಲಗೈಯಲ್ಲಿ ಹಿಡಿದುಕೊಂಡು ರಾವಣನ ಪಕ್ಕದಲ್ಲೇ ನಡೆಯುತ್ತಿದ್ದಳು.॥೧೩॥ ಇನ್ನೋರ್ವ ತರುಣಿಯು ರಾಜಹಂಸದಂತೆ ಬೆಳ್ಳಗಿದ್ದ ಪೂರ್ಣ ಚಂದ್ರನಂತೆ ಅಮಿತ ಪ್ರಭೆಯಿಂದ ಕೂಡಿದ್ದು, ಭಂಗಾರದ ದಂಡವಿದ್ದ ಶ್ವೇತಚ್ಛತ್ರವನ್ನು ಹಿಡಿದು ಕೊಂಡು ರಾವಣನ ಹಿಂದಿನಿಂದ ಹೋಗುತ್ತಿದ್ದಳು.॥೧೪॥ ಮಧುಪಾನದಿಂದ ಮತ್ತರಾಗಿದ್ದ ರಾವಣನ ಅನಂಗಸತಿಯರ ಕಣ್ಣುಗಳು ನಿದ್ರಾಮತ್ತಿನಿಂದ ಮುಚ್ಚುತ್ತಿದ್ದವು. ಕೋಲು ಮಿಂಚುಗಳು ಮೋಡವನ್ನು ಅನುಸರಿಸಿ ಹೋಗುವಂತೆ ಅಂತಃಪುರದ ಸ್ತ್ರೀಯರು ವೀರನಾದ ರಾವಣನನ್ನು ಅನುಸರಿಸಿ ಹೋಗುತ್ತಿದ್ದರು.॥೧೫॥ ರಾವಣನ ಪ್ರಿಯ ಸತಿಯರೂ, ಮದಿರಲೋಚನೆಯರಾದ ಆ

ವ್ಯಾವಿದ್ಧಹಾರಕೇಯೂರಾಃ ಸಮಾಮೃದಿತವರ್ಣಕಾಃ ।
ಸಮಾಗಲಿತಕೇಶಾಂತಾಃ ಸಸ್ವೇದವದನಾಸ್ತಥಾ ॥ ೧೬॥

ಘೂರ್ಣಂತ್ಯೋ ಮದಕೇಶೇನ ನಿದ್ರಯಾ ಚ ಶುಭಾನನಾಃ ।
ಸ್ವೇದಕ್ಲಿನ್ನಾಂಗಕುಸುಮಾಃ ಸುಮಾಲ್ಯಾಕುಲಮೂರ್ಧಜಾಃ ॥ ೧೭॥

ಪ್ರಯಾಂತಂ ನೈರ್ಋತಪತಿಂ ನಾರ್ಯೋ ಮದಿರಲೋಚನಾಃ ।
ಬಹುಮಾನಾಚ್ಚ ಕಾಮಾಚ್ಚ ಪ್ರಿಯಾ ಭಾರ್ಯಾಸ್ತಮನ್ವಯುಃ ॥ ೧೮॥

ಸ ಚ ಕಾಮಪರಾಧೀನಃ ಪತಿಸ್ತಾಸಾಂ ಮಹಾಬಲಃ ।
ಸೀತಾಸಕ್ತಮನಾ ಮಂದೋ ಮದಾಂಚಿತಗತಿರ್ಬಭೌ ॥ ೧೯॥

ತತಃ ಕಾಂಚೀನಿನಾದಂ ಚ ನೂಪುರಾಣಾಂ ಚ ನಿಸ್ವನಮ್ ।
ಶುಶ್ರಾವ ಪರಮಸ್ತ್ರೀಣಾಂ ಸ ಕಪಿರ್ಮಾರುತಾತ್ಮಜಃ ॥ ೨೦॥

ತಂ ಚಾಪ್ರತಿಮಕರ್ಮಾಣಮಚಿಂತ್ಯಬಲಪೌರುಷಮ್ ।
ದ್ವಾರದೇಶಮನುಪ್ರಾಪ್ತಂ ದದರ್ಶ ಹನುಮಾನ್ ಕಪಿಃ ॥ ೨೧॥

ದೀಪಿಕಾಭರನೇಕಾಭಿಃ ಸಮಂತಾದವಭಾಸಿತಮ್ ।
ಗಂಧಧೂಮೈಲಾವಸಿಕ್ತಾಭಿರ್ಧ್ರಿಯಮಾಣಾಭಿರಗ್ರತಃ ॥ ೨೨॥

ಕಾಮದರ್ಪಮದೈರ್ಯುಕ್ತಂ ಜಘ್ನತಾಮ್ಯಾಯತೇಕ್ಷಣಮ್ ।
ಸಮಕ್ಷಮಿವ ಕಂದರ್ಪಮವಿದ್ಧತರಾಸನಮ್ ॥ ೨೩॥

ಮಥಿತಾಮೃತಫೇನಾಭಮರಜೋವಸ್ತ್ರಮುತ್ತಮಮ್ ।
ಸಲೀಲಮನುಕರ್ಷಂತಂ ವಿಮುಕ್ತಂ ಸಕ್ತಮಂಗದೇ ॥ ೨೪॥

ತಂ ಪತ್ರವಿಟಪೇ ಲೀನಃ ಹತ್ರಪುಷ್ಪಸ್ಥನಾವೃತಃ ।
ಸಮೀಪಮುಪಸಂಕ್ರಾಂತಂ ನಿಧ್ಯಾತುಮುಪಚಕ್ರಮೇ ॥ ೨೫॥

ಅಪೇಕ್ಷಮಾಣಸ್ತು ತತೋ ದದರ್ಶ ಕಪಿಕುಂಜರಃ ।
ರೂಪಯೌವನಸಂಪನ್ನಾ ರಾವಣಸ್ಯ ವರಸ್ತ್ರಿಯಃ ॥ ೨೬॥

ತಾಭಿಃ ಪರಿವೃತೋ ರಾಜಾ ಸುರೂಪಾಭಿರ್ಮಹಾಯಶಾಃ ।
ತನ್ಮೃಗದ್ವಿಜಸಂಘುಷ್ಟಂ ಪ್ರವಿಷ್ಟಃ ಪ್ರಮದಾವನಮ್ ॥ ೨೭॥

ತರುಣೀಮಣಿಗಳ ಹಾರ ಕೇಯೂರಗಳು ಅಸ್ತವ್ಯಸ್ತವಾಗಿದ್ದವು. ಅಂಗರಾಗಗಳೆಲ್ಲವೂ ಅಳಿಸಿ ಹೋಗಿತ್ತು. ತಲೆ ಕೂದಲು ಕೆದರಿ ಹೋಗಿ ಮುಖದಲ್ಲಿ ಬೆವರು ತುಂಬಿತ್ತು.॥೧೬॥ ಸುಂದರ ಮುಖಿಯರಾಗಿದ್ದ ಅವರು ಪೂರ್ತಿ ಇಳೆಯದ ಮಧುವಿನ ಮತ್ತಿನಿಂದಲೂ, ನಿದ್ರೆಯಿಂದಲೂ ಜೋಲಾಡುತ್ತಿದ್ದರು. ಅವರು ಧರಿಸಿದ್ದ ಹಾರಗಳು ಬೆವರಿನಿಂದ ಬಾಡಿಹೋಗಿದ್ದವು. ತಲೆಯಲ್ಲಿ ಮುಡಿದ ಹೂವಿನ ದಂಡೆಗಳು ಬಾಡಿ ಆತ್ತಲಿತ್ತ ತೂಗುತ್ತಿದ್ದವು.॥೧೭॥ ಮದಿರ ಲೋಚನೆಯರಾದ ಆ ನಾರಿಯರಿಗೆ ಪತಿಯಾದ ರಾಕ್ಷಸಾಧಿಪತಿಯ ಮೇಲಿನ ಆದರಾಭಿಮಾನದಿಂದ, ಕಾಮಾತುರರಾಗಿ ಅವನನ್ನು ಹಿಂಬಾಲಿಸುತ್ತಿದ್ದರು.॥೧೮॥ ಅವರಿಗೆಲ್ಲ ಪತಿಯಾದ, ಮಹಾಬಲಶಾಲಿಯಾದ ಆ ರಾವಣನು ಕಾಮಪರವಶನಾಗಿ, ಮಂದಬುದ್ಧಿಯಿಂದ ಸೀತೆಯ ಮೇಲಿನ ಆಸಕ್ತಿಯಿಂದ ಮದಭರಿತ ಆನೆಯಂತೆ ಮುನ್ನಡೆಯುತ್ತಿದ್ದನು.॥೧೯॥

ಶಿಂಶುಪಾವೃಕ್ಷದಲ್ಲಿ ಉಡುಗಿಕೊಂಡಿದ್ದ ವಾಯುಪುತ್ರ, ಸಾದ ಹನುಮಂತನು ಸುಂದರಿಯರಾದ ಆ ರಾವಣನ ಭಾರ್ಯೆಯರ ಓಡ್ಯಾಣಗಳ ಮತ್ತು ಕಾಲಂದುಗೆಗಳ ಧ್ವನಿಯನ್ನು ಕೇಳಿದನು.॥೨೦॥ ಸಾಟಿಯಿಲ್ಲದ ದುಃಸಾಹಸ ಕಾರ್ಯಗಳನ್ನು ಮಾಡುವವನೂ, ಅಮಿತ ಬಲಪರಾಕ್ರಮಿಯು ಆದ ರಾವಣನು ಅಶೋಕ ವನದ್ವಾರದಿಂದ ಬರುತ್ತಿರುವುದನ್ನು ವಾನರೋತ್ತಮನಾದ ಮಾರುತಿಯು ನೋಡಿದನು.॥೨೧॥ ಅವನ ಮುಂದೆ ಉತ್ತಮರಾದ ಸ್ತ್ರೀಯರು ಸುಗಂಧಯುಕ್ತವಾದ ಎಣ್ಣೆಯಿಂದ ನೆನೆಸಿದ ಆನೇಕ ದಿವಟಿಗಗಳನ್ನು ಒಯ್ಯುತ್ತಿದ್ದರು. ಆ ದೀಪಗಳ ಬೆಳಕಿನಿಂದ ರಾವಣನು ಅತ್ಯಂತ ಪ್ರಕಾಶಮಾನವಾಗಿ ಕಾಣುತ್ತಿದ್ದನು.॥೨೨॥ ಕಾಮ, ಮದ, ದರ್ಪಗಳಿಂದ ಕೂಡಿದ್ದ ಅವನ ಕಣ್ಣುಗಳು ಕೆಂಪಾಗಿಯೂ, ವಿಶಾಲವಾಗಿಯೂ, ವಕ್ರವಾಗಿಯೂ ಇದ್ದವು. ಅವನು ಕುಸುಮ ಚಾಪವನ್ನು ತೊರೆದು ಪ್ರತ್ಯಕ್ಷವಾಗಿ ಕಾಣಿಸಿಕೊಂಡ ಕಾಮದೇವನಂತೆ ಕಾಣುತ್ತಿದ್ದನು. ॥೨೩॥ ಹಾಲನ್ನು ಕಡೆದಾಗ ಹೊರಬರುವ ನೊರೆಯಂತೆ ಬಿಳುಪಾದ, ಶುಭ್ರವಾದ, ಶ್ರೇಷ್ಠವಾದ ವಸ್ತ್ರಗಳನ್ನುಟ್ಟಿದ್ದು, ಉತ್ತರೀಯವು ಹೆಗಲಿನಿಂದ ಜಾರಿ ಕೇಯೂರಕ್ಕೆ ಸಿಕ್ಕಿಕೊಂಡು ನೆಲದ ಮೇಲೆ ಹೊರಳಾಡುತ್ತಿತ್ತು.॥೨೪॥

ದಟ್ಟವಾದ ಎಲೆಗಳಿಂದಲೂ, ಪುಷ್ಪಗಳಿಂದಲೂ ಸಮಾವೃತವಾದ ಶಿಂಶುಪಾವೃಕ್ಷದಲ್ಲಿ ಉಡುಗಿ ಕುಳಿತಿದ್ದ ಹನುಮಂತನು ಸಮೀಪಿಸುತ್ತಿರುವ ರಾವಣನನ್ನು ಸೂಕ್ಷ್ಮವಾಗಿ ಗಮನಿಸಿದನು. ॥೨೫॥ ಹಾಗೆಯೇ ರಾವಣನ ಕಡೆಗೆ ನೋಡುತ್ತಿದ್ದಾಗ, ಅವನನ್ನು ಹಿಂಬಾಲಿಸಿಕೊಂಡು ಬರುತ್ತಿದ್ದ ರೂಪ-ಯೌವನ ಸಂಪನ್ನೆಯರಾದ, ಶ್ರೇಷ್ಠರಾದ ರಾವಣನ ವರಸ್ತ್ರೀಯರನ್ನು ಕಪಿವರನು ನೋಡಿದನು.॥೨೬॥ ಹೀಗೆ ಕಡು ಚೆಲುವೆಯರಾಗಿದ್ದ ಆ ವರನಾರಿಯರಿಂದ ಪರಿವೃತನಾಗಿದ್ದು ಮಹಾಯಶಸ್ವಿಯಾದ ರಾಕ್ಷಸೇಶ್ವರನು ಮೃಗ-ಪಕ್ಷಿಗಳಿಂದ

ಕ್ಷೀಬೋ ವಿಚಿತ್ರಾಭರಣಃ ಶಂಕುಕರ್ಣೋ ಮಹಾಬಲಃ ।
ತೇನ ವಿಶ್ರವಸಃ ಪುತ್ರಃ ಸ ದೃಷ್ಟೋ ರಾಕ್ಷಸಾಧಿಪಃ ॥ ೨೮॥

ವೃತಃ ಪರಮನಾರೀಭಿಸ್ತಾರಾಭಿರಿವ ಚಂದ್ರಮಾಃ ।
ತಂ ದದರ್ಶ ಮಹಾತೇಜಾನ್ತೇಜೋವಂತಂ ಮಹಾಕಪಿಃ ॥ ೨೯॥

ರಾವಣೋಽಯಂ ಮಹಾಬಾಹುರಿತಿ ಸಂಚಿನ್ತ್ಯ ವಾನರಃ ।
ಸೋಽಯಮೇವ ಪುರಾ ಶೇತೇ ಪರಮಧ್ಯೇ ಗೃಹೋತ್ತಮೇ ।
ಅವಪ್ಲುತೋ ಮಹಾತೇಜಾ ಹನುಮಾನ್ ಮಾರುತಾತ್ಮಜಃ ॥ ೩೦॥

ಸ ತಥಾಪ್ಯುಗ್ರತೇಜಾಃ ಸನ್ನಿರ್ದೂತಸ್ಯ ತೇಜಸಾ ।
ಪ್ರಗುಲ್ಫಾಂತರೇ ಸಕ್ತೋ ಹನುಮಾನ್ ಸಂವೃತೋಽಭವತ್ ॥ ೩೧॥

ಸ ತಾಮಿತಕೇಶಾಂತಾಂ ಸುಶ್ರೋಣೀಂ ಸುಹೃತ್ತನೀಮ್ ।
ದಿದೃಕ್ಷುರಸಿತಾಪಾಂಗಾಮುಪಾವರ್ತತ ರಾವಣಃ ॥ ೩೨॥

ನಿನಾದಿತವಾಗಿದ್ದ ಪ್ರಮದಾವನವನ್ನು ಪ್ರವೇಶಿಸಿದನು.॥೨೭॥ ಆಗ ಮದೋನ್ಮತ್ತನಾದ ರಾವಣನು ವಿಚಿತ್ರವಾದ ಆಭರಣಗಳನ್ನು ಧರಿಸಿದ್ದನು. ಕೋನವುಳ್ಳ ಕರ್ಣಾಭರಣಗಳನ್ನು ಧರಿಸಿದ್ದು, ಗರ್ವದಿಂದ ಅವುಗಳು ನೆಟ್ಟಗಾಗಿದ್ದವು. ಮಹಾಬಲಶಾಲಿಯೂ, ವಿಶ್ರವಸುವಿನ ಮಗನೂ, ರಾಕ್ಷಸರ ಅಧಿಪತಿಯೂ ಆದ ರಾವಣನನ್ನು ಹನುಮಂತನು ನೋಡಿದನು.॥೨೮॥ ಅವನು ನಕ್ಷತ್ರಗಳಿಂದ ಪರಿವೃತನಾದ ಚಂದ್ರನಂತೆ, ವರನಾರಿಯರಿಂದ ಸುತ್ತುವರಿಯಲ್ಪಟ್ಟ , ತೇಜೋ ವಿಶಿಷ್ಟನಾದ ಆ ರಾವಣೇಶ್ವರನನ್ನು, ಮಹಾತೇಜಸ್ವಿಯಾದ, ಕಪೀಶ್ವರನಾದ ಹನುಮಂತನು ನೋಡಿದನು.॥೨೯॥

'ಮಹಾಬಾಹುವಾದ ರಾವಣನು ಇವನೇ. ಹಿಂದೆ ಲಂಕೆಯ ಶ್ರೇಷ್ಠವಾದ ಅರಮನೆಯಲ್ಲಿ ಮಲಗಿದ್ದವನೂ ಇವನೇ. ಎಂಬುದಾಗಿ ನಿಶ್ಚಯಿಸಿ, ರಾವಣನ ಚೇಷ್ಟೆಗಳನ್ನು ಗಮನಿಸಲು ತಾನು ಕುಳಿತಿದ್ದ ರೆಂಬೆಯಿಂದ ಕೆಳಗಿನ ರೆಂಬೆಗೆ ಧುಮುಕಿದನು.॥೩೦॥ ಹನುಮಂತನು ಬುದ್ಧಿವಂತನೂ, ಮಹಾಮೇಧಾವಿಯೂ, ತೀಕ್ಷ್ಣವಾದ ತೇಜಸ್ಸುಳ್ಳವನೂ ಆಗಿದ್ದರೂ ರಾವಣನ ರಾಕ್ಷಸೀ ತೇಜಸ್ಸಿನಿಂದ ನಡುಗುವವನಂತೆ ಗುಹೆಯಂತಿದ್ದ ಎಲೆಗಳ ಮಧ್ಯದಲ್ಲಿ ಪುನಃ ಉಡುಗಿದನು.॥೩೧॥

ಕಪ್ಪಾದ ತಲೆಗೂದಲುಗಳಿಂದ ಕೂಡಿದ್ದ, ಸುಂದರವಾದ ಕಟಿಪ್ರದೇಶವುಳ್ಳ, ವಕ್ಷಸ್ಥಳವನ್ನು ಮುಚ್ಚಿಕೊಂಡು ಕುಳಿತಿದ್ದ, ನೇತ್ರ ಸೌಂದರ್ಯದಿಂದ ಒಡಗೂಡಿದ ಆ ಸೀತಾದೇವಿಯನ್ನು ನೋಡುವ ಬಯಕೆಯಿಂದ ರಾವಣನು ಅಲ್ಲಿಗೆ ಆಗಮಿಸಿದನು. ॥೩೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಅಷ್ಟಾದಶಃ ಸರ್ಗಃ ॥ ೧೮ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನೆಂಟನೆಯ ಸರ್ಗವು ಮುಗಿಯಿತು.

* * *

ಹತ್ತೊಂಭತ್ತನೆಯ ಸರ್ಗ

ರಾವಣನನ್ನು ನೋಡಿ ದುಃಖ, ಭಯ ಮತ್ತು ಚಿಂತೆಗಳಲ್ಲಿ ಮಗ್ನಳಾದ ಸೀತಾದೇವಿಯ ಸ್ವರೂಪವರ್ಣನೆ -

ತಸ್ಮಿನ್ನೇವ ತತಃ ಕಾಲೇ ರಾಜಪುತ್ರೀ ತ್ವನಿಂದಿತಾ ।
ರೂಪಯೌವನಸಂಪನ್ನಂ ಭೂಷಣೋತ್ತಮಭೂಷಿತಮ್ ॥ ೧॥

ತತೋ ದದೃಶ್ಸಿವ ವೈದೇಹೀ ರಾವಣಂ ರಾಕ್ಷಸಾಧಿಪಮ್ ।
ಪ್ರಾಪೇಪತ ವರಾರೋಹಾ ಪ್ರವಾತೇ ಕದಲೀ ಯಥಾ ॥ ೨॥

ರೂಪ-ಯೌವನ ಸಂಪನ್ನನೂ, ಉತ್ತಮವಾದ ಆಭರಣಗಳನ್ನು ಧರಿಸಿದವನೂ ಆದ ರಾಕ್ಷಸಾಧಿಪತಿಯಾದ ರಾವಣನು ಬಂದ ಮರುಕ್ಷಣವೇ, ಸೌಶೀಲ್ಯವತಿಯೂ, ಸೌಂದರ್ಯ ರಾಶಿಯೂ ಆದ ಜನಕಸುತೆಯಾದ ವೈದೇಹಿಯು ಅತನನ್ನು ನೋಡಿ ಬಿರುಗಾಳಿಗೆ ಸಿಕ್ಕಿದ ಬಾಳೆಮರದಂತೆ ನಡುಗತೊಡಗಿದಳು.॥೧-೨॥

ಆಚ್ಛಾದ್ಯೋದರಮೂರುಭ್ಯಾಂ ಬಾಹುಭ್ಯಾಂ ಚ ಪಯೋಧರೌ ।
ಉಪವಿಷ್ಟಾ ವಿಶಾಲಾಕ್ಷೀ ರುದಂತೀ ವರವರ್ಣಿನೀ ॥ ೩॥

ದಶಗ್ರೀವಸ್ತು ವೈದೇಹೀಂ ರಕ್ಷಿತಾಂ ರಾಕ್ಷಸೀಗಣೈಃ ।
ದದರ್ಶ ದೀನಾಂ ದುಃಖಾರ್ತಾಂ ನಾವಂ ಸನ್ನಾಮಿವಾರ್ಣವೇ ॥ ೪॥

ಅಸಂವೃತಾಯಾಮಾಸೀನಾಂ ಧರಣ್ಯಾಂ ಸಂಶಿತವ್ರತಾಮ್ ।
ಛಿನ್ನಾಂ ಪ್ರಪತಿತಾಂ ಭೂಮೌ ಶಾಖಾಮಿವ ವನಸ್ಪತೇಃ ॥ ೫॥

ಮಲಮಂಡನದಿಗ್ಧಾಂಗೀಂ ಮಂಡನಾರ್ಹಾಮಮಂಡಿತಾಮ್ ।
ಮೃಷ್ಟಾಲೀ ಪಂಕದಿಗ್ಧೇವ ವಿಭಾತಿ ನ ವಿಭಾತಿ ಚ ॥ ೬॥

ಸಮೀಪಂ ರಾಜಸಿಂಹಸ್ಯ ರಾಮಸ್ಯ ವಿದಿತಾತ್ಮನಃ ।
ಸಂಕಲ್ಪಹಯಸಂಯುಕ್ತೈರ್ಯಾಂತೀಮಿವ ಮನೋರಥೈಃ ॥ ೭॥

ಶುಷ್ಯಂತೀಂ ರುದತೀಮೇಕಾಂ ಧ್ಯಾನಶೋಕಪರಾಯಣಾಮ್ ।
ದುಃಖಸ್ಯಾತಮಪಶ್ಯಂತೀಂ ರಾಮಾಂ ರಾಮಮನುವ್ರತಾಮ್ ॥ ೮॥

ವೇಷ್ಟಮಾನಾಂ ತಥಾವಿಷ್ಟಾಂ ಪನ್ನಗೇಂದ್ರವಧೂಮಿವ ।
ಧೂಮ್ಯಮಾನಾಂ ಗ್ರಹೇಣೇವ ರೋಹಿಣೀಂ ಧೂಮಕೇತುನಾ ॥ ೯॥

ವೃತ್ತಶೀಲಕುಲೇ ಜಾತಾಮಾಚಾರವತಿ ಧಾರ್ಮಿಕೇ ।
ಪುನಃ ಸಂಸ್ಕಾರಮಾಪನ್ನಾಂ ಜಾತಾಮಿವ ಚ ದುಷ್ಕುಲೇ ॥ ೧೦॥

ಅಭೂತೇನಾಪವಾದೇನ ಕೀರ್ತಿಂ ನಿಪತಿತಾಮಿವ ।
ಅಮ್ನಾ ಯಾನಾಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ ॥ ೧೧॥

ವರವರ್ಣಿನಿಯಾದ ವಿಶಾಲಾಕ್ಷಿಯಾದ ಸೀತಾದೇವಿಯು ರಾವಣನನ್ನು ಕಾಣುತ್ತಲೇ ತೊಡೆಗಳಿಂದ ಹೊಟ್ಟೆಯನ್ನು, ತೋಳುಗಳಿಂದ ವಕ್ಷಸ್ಥಳವನ್ನು ಮುಚ್ಚಿಕೊಂಡು (ಮಡಚಿ ಕೊಂಡು)ಅಳತೊಡಗಿದಳು.॥೨॥ಸೀತೆಯು ರಾಕ್ಷಸಸ್ತ್ರೀಯರಿಂದ ರಕ್ಷಿಸಲ್ಪಡುತ್ತಿದ್ದು, ಮಹಾಸಮುದ್ರದಲ್ಲಿ ಮುಳುಗಿ ಹೋಗುತ್ತಿರುವ ನೌಕೆಯಂತೆ ಶೋಕಸಾಗರದಲ್ಲಿ ಮುಳುಗಿದ್ದಳು. ಇಂತಹ ದುಃಖಾರ್ತಳಾದ ವೈದೇಹಿಯನ್ನು ರಾವಣನು ನೋಡಿದನು.॥೪॥ ಕತ್ತರಿಸಿದ ಮರದ ಕೊಂಬೆಯು ಭೂಮಿಗೆ ಬೀಳುವಂತೆ, ಕಠೋರವ್ರತ ದೀಕ್ಷೆಯಲ್ಲಿದ್ದ ಸೀತಾದೇವಿಯು ಯಾವುದೇ ಆಸನವಿಲ್ಲದೆ ಬರಿನೆಲದ ಮೇಲೆ ಕುಳಿತಿದ್ದಳು.॥೫॥ ಶರೀರವು ಧೂಲಿಧೂಸರಿತವಾಗಿದ್ದರೂ ಆವಳೂ ಸಹಜ-ಕಾಂತಿಯಿಂದ ಪ್ರಕಾಶಿಸುತ್ತಿದ್ದಳು. ಆಭರಣಾದಿಗಳನ್ನು ಧರಿಸಲು ಯೋಗ್ಯಳಾಗಿದ್ದರೂ ಆ ಸೌಭಾಗ್ಯವತಿಯು(ಪತಿಯನ್ನು ಅಗಲಿದ್ದ ಕಾರಣ) ಭೂಷಣಗಳನ್ನು ಧರಿಸದಿದ್ದರೂ ಆವಳು - ಕೆಸರಿನಿಂದ ಯುಕ್ತವಾದ ಕಮಲದ ಬಳ್ಳಿಯಂತೆ ಪ್ರಕಾಶಮಾನಳಾಗಿಯೂ, ಅಪ್ರಕಾಶಮಾನಳಾಗಿಯೂ ಕಾಣುತ್ತಿದ್ದಳು.॥೬॥

ಸಂಕಲ್ಪರೂಪವಾದ ಕುದುರೆಗಳಿಂದ ಕೂಡಿರುವ ಮನೋರಥವೆಂಬ ರಥದ ಮೂಲಕವಾಗಿ ಜಗದ್ವಿಖ್ಯಾತನೂ, ರಾಜಶ್ರೇಷ್ಠನೂ ಆದ ಶ್ರೀರಾಮಚಂದ್ರನ ಬಳಿಗೆ ಹೋಗುತ್ತಿರುವಳೋ ಎಂಬಂತೆ ಕಾಣುತ್ತಿದ್ದಳು.॥೭॥ ವಿಕಾಕಿನಿಯಾಗಿ ಕುಳಿತು ಆವಳು ರೋದಿಸುತ್ತಿದ್ದಳು. ಸದಾ ಶ್ರೀರಾಮನನ್ನೇ ಧ್ಯಾನಿಸುತ್ತಾ ಶೋಕಪಡುತ್ತಿದ್ದಳು. ದುಃಖದ ಪಾರವನ್ನೇ ಕಾಣದವಳಾಗಿದ್ದು, ಶ್ರೀರಾಮನಲ್ಲೇ ನೆಟ್ಟುಹೋದ ಮನಸ್ಸುಳ್ಳವಳೂ ಆಗಿದ್ದಳು.॥೮॥ ಮಣಿ-ಮಂತ್ರದಿಂದ ಬಂಧಿಸಲ್ಪಟ್ಟು ಚಡಪಡಿಸುವ ಹೆಣ್ಣುಸರ್ಪದಂತೆ ರಾವಣನಿಂದ ಬಂಧಿಸಲ್ಪಟ್ಟು ಅವಳು ಚಡಪಡಿಸುತ್ತಿದ್ದಳು. ಧೂಮಕೇತುವಿನಿಂದ ಪೀಡಿಸಲ್ಪಟ್ಟ ರೋಹಿಣಿಯಂತೆ ಆಕೆಯು ಪರಿತಪಿಸುತ್ತಿದ್ದಳು.॥೯॥ ಸೀತಾದೇವಿಯು ಧಾರ್ಮಿಕ ಸಂಪ್ರದಾಯಗಳಿಗೆ ಪ್ರಸಿದ್ಧವಾದ, ಉತ್ತಮಶೀಲಸಂಪನ್ನ ಜನಕ ರಾಜನ ನಿಮಿವಂಶದಲ್ಲಿ ಹುಟ್ಟಿದವಳು. ವಿವಾಹ ಸಂಸ್ಕಾರಫಲದಿಂದ *ಆಕೆಯು ಪವಿತ್ರವಾದ ಇಕ್ಷ್ವಾಕುವಂಶವನ್ನು ಮೆಟ್ಟಿದವಳು.(ವಿವಾಹವಾಗಿ ಬಂದವಳು,) ಅಂತಹ ಜಾನಕಿಯು ಈಗ ಮಲಿನ ವಸ್ತ್ರಧಾರಣಾದಿ ದುಃಸ್ಥಿತಿಯಲ್ಲಿದ್ದು ದುಷ್ಕುಲದಲ್ಲಿ ಹುಟ್ಟಿದಳೋ ಎಂಬಂತೆ ಕಾಣುತ್ತಿದ್ದಳು.॥೧೦॥ ಇಲ್ಲದಿರುವ ದೋಷಾರೋಪಣೆಯಿಂದ ಕಳೆದುಹೋದ ಕೀರ್ತಿಯಂತೆಯೂ, ಚೆನ್ನಾಗಿ ಅಭ್ಯಾಸ ಮಾಡದಕಾರಣ ಶಿಥಿಲವಾದ

---

* 'ವೈವಾಹಿಕೋ ವಿಧಿಃ ಸ್ತ್ರೀಣಾಮೌಪನಾಯನಿಕಃ ಸ್ಮೃತಃ' ಸ್ತ್ರೀಯರಿಗೆ ವಿವಾಹವಿಧಿಯು ಬಾಲಕರ ಉಪನಯನ ಸಂಸ್ಕಾರಕ್ಕೆ ಸಮವಾದುದು ಎಂದು ಸ್ಮೃತಿಯಲ್ಲಿ ಹೇಳಿದೆ. ''ಕುಮಾರಾಣಾಂ ಉಪನಯನಮಿವ ಕುಮಾರೀಣಾಂ ವಿವಾಹೋದ್ವಿತೀಯ ಜನ್ಮಮ್'' ಬಾಲಕರಿಗೆ ಉಪನಯನವು ದ್ವಿತೀಯ ಜನ್ಮವಿದ್ದಂತೆ ಕನ್ಯೆಯರಿಗೆ ವಿವಾಹವು ದ್ವಿತೀಯ ಜನ್ಮವು.

ಇಲ್ಲಿ 'ದುಷ್ಕುಲ' ಕೆಟ್ಟವಸ್ತುವೆಂದೂ, ಕೆಟ್ಟಕುಲವೆಂದೂ ಶ್ಲೇಷವನ್ನು ಗಮನಿಸಿರಿ.

ಸನ್ನಾಮಿವ ಮಹಾಕೀರ್ತಿಂ ಶ್ರದ್ಧಾಮಿವ ವಿಮಾನಿತಾಮ್ ।
ಪ್ರಜ್ಞಾಮಿವ ಪರಿಕ್ಷೀಣಾಮಾಶಾಂ ಪ್ರತಿಹತಾಮಿವ ॥ ೧೨॥

ಆಯತೀಮಿವ ವಿಧ್ವಸ್ತಾಮಾಜ್ಞಾಂ ಪ್ರತಿಹತಾಮಿವ ।
ದೀಪ್ತಾಮಿವ ವಿಶಂ ಕಾಲೇ ಪೂಜಾಮಪಹೃತಾಮಿವ ॥ ೧೩॥

ಪದ್ಮಿನೀಮಿವ ವಿಧ್ವಸ್ತಾಂ ಹತಶೂರಾಂ ಚಮೂಮಿವ ।
ಪ್ರಭಾಮಿವ ತಮೋಧ್ವಸ್ತಾಮುಷ್ಣಾಮಿವಾಪಗಾಮ್ ॥ ೧೪॥

ವೇದೀಮಿವ ಪರಾಮೃಷ್ಟಾಂ ಶಾಂತಾಮಗ್ನಿ ಶಿಖಾಮಿವ ।
ಪೌರ್ಣಮಾಸೀಮಿವ ನಿಶಾಂ ರಾಹುಗ್ರಸ್ತೇಂದುಮಂಡಲಾಮ್ ॥

ಉತ್ಪಾಪ್ಲ ಪರ್ಣಕಮಲಾಂ ವಿತ್ರಾಸಿತವಿಹಂಗಮಾಮ್ ।
ಹಸ್ತಿಹಸ್ತಪರಾಮೃಷ್ಟಾಮಾಕುಲಾಂ ಪದ್ಮಿನೀಮಿವ ॥ ೧೬॥

ಪತಿಶೋಕಾತುರಾಂ ಶುಷ್ಕಾಂ ನದೀಂ ವಿಸ್ರಾವಿತಾಮಿವ ।
ಪರಯಾ ಮೃಜಯಾ ಹೀನಾಂ ಕೃಷ್ಣ ಪಕ್ಷನಿಶಾಮಿವ ॥ ೧೭॥

ಸುಕುಮಾರೀಂ ಸುಜಾತಾಂಗೀಂ ರತ್ನಗರ್ಭಗೃಹೋಚಿತಾಮ್ ।
ತಪ್ತಮಾನಾಮಿವೋಷ್ಣೇನ ಮೃಣಾಲೀಮಚಿರೋದ್ಧೃತಾಮ್ ॥ ೧೮॥

ಗೃಹೀತಾಮೌಷಧೀಂ ಸ್ತುಭ್ಯೇ ಯೂಥಪೇನ ವಿನಾಕೃತಾಮ್ ।
ನಿಃಶ್ವಸಂತೀಂ ಸುದುಃಖಾರ್ತಾಂ ಗಜರಾಜವಧೂಮಿವ ॥ ೧೯॥

ವಿಕಯಾ ದೀರ್ಘಯಾ ವೇಣ್ಯಾ ಶೋಭಮಾನಮಯತ್ನತಃ ।
ನೀಲಯಾ ನೀರದಾಪಾಯೇ ವನರಾಜ್ಯಾ ಮಹೀಮಿವ ॥ ೨೦॥

ಉಪವಾಸೇನ ಶೋಕೇನ ಧ್ಯಾನೇನ ಚ ಭಯೇನ ಚ ।
ಪರಿಕ್ಷೀಣಾಂ ಕೃಶಾಂ ದೀನಾಮಲ್ಪಾಹಾರಾಂ ತಪೋಧನಾಮ್ ॥ ೨೧॥

ಅಯಾಚಮಾನಾಂ ದುಃಖಾರ್ತಾಂ ಪ್ರಾಂಜಲಿಂ ದೇವತಾಮಿವ।
ಭಾವೇನ ರಘುಮುಖ್ಯಸ್ಯ ದಶಗ್ರೀವಪರಾಭವಮ್ ॥ ೨೨॥

(ಮರೆತುಹೋದ)ವೇದಾದಿ ವಿದ್ಯೆಯಂತೆಯೂ ಅವಳು ಗೋಚರಿಸುತ್ತಿದ್ದಳು.॥೧೧॥ ಕ್ಷೀಣಿಸಿದ ಕೀರ್ತಿಯಂತೆಯೂ, ಅಪಮಾನದಿಂದ ಶಿಥಿಲವಾದ ಶ್ರದ್ಧೆಯಂತೆಯೂ, ಪೂಜಾದ್ರವ್ಯಗಳೇ ಇಲ್ಲದ ಪೂಜೆಯಂತೆ, ನಿಷ್ಫಲವಾದ ಆಸೆಯಂತೆ ಆಕೆಯು ಅತಿದೀನಾವಸ್ಥೆಗೆ ಗುರಿಯಾಗಿರುವಂತೆ ಇದ್ದಳು.॥೧೨॥ ಅವಳ ಸ್ಥಿತಿಯು ನಷ್ಟವಾಗಿ ಹೋದ ಆದಾಯದಂತೆ, ಆಚರಿಸದಿರುವ ಆಜ್ಞೆಯಂತೆ, ಉತ್ಪಾತ ಕಾಲದಲ್ಲಿ ಇರುವ ದಿಕ್ಕುಗಳಂತೆಯೂ, ಪೂಜಾದ್ರವ್ಯಗಳನ್ನು ಅಪಹರಿಸಿದಾಗ ಭಂಗವಾದ ಪೂಜೆಯಂತೆ ಇದ್ದಳು.॥೧೩॥ ವಿಧ್ವಸ್ತಗೊಂಡ ತಾವರೆ ಬಳ್ಳಿಯಂತೆಯೂ, ಶೂರರನ್ನು ಕಳೆದುಕೊಂಡ ಸೈನ್ಯದಂತೆ, ಕತ್ತಲೆಯಿಂದ ವಿನಾಶಗೊಳಿಸಲ್ಪಟ್ಟ ಪ್ರಭೆಯಂತೆ, ಬತ್ತಿಹೋದ ನದಿಯಂತೆ ಅವಳು ದೀನಾವಸ್ಥೆಯಲ್ಲಿದ್ದಳು.॥೧೪॥ ಆಯೋಗ್ಯರಿಂದ ಅಪವಿತ್ರಗೊಳಿಸಲ್ಪಟ್ಟ ಯಜ್ಞವೇದಿಯಂತೆ, ಆರಿಹೋದ ಅಗ್ನಿಶಿಖೆಯಂತೆಯೂ, ರಾಹುಗ್ರಸ್ತವಾದ ಚಂದ್ರಗ್ರಹಣದಿಂದ ಮಸಕಾದ ಹುಣ್ಣಿಮೆಯ ರಾತ್ರಿಯಂತೆ ಅವಳು ನಿಸ್ತೇಜವಾಗಿದ್ದಳು.॥೧೫॥ ಆನೆಯು ತನ್ನ ಸೊಂಡಿಲಿನಿಂದ ಕಿತ್ತುಹಾಕಿದ ಕಮಲ ಮತ್ತು ಕಮಲದಬಳ್ಳಿಗಳು, ಅದರಲ್ಲಿದ್ದ ಜಲಪಕ್ಷಿಗಳು ಭಯಪಟ್ಟು ಹಾರಿಹೋಗಿ ಶೋಭಾವಿಹೀನವಾದ ಪದ್ಮಸರೋವರದಂತೆ ಸೀತಾದೇವಿಯು ವ್ಯಾಕುಲ ಚಿತ್ತದಿಂದ ಅಲ್ಲಿದ್ದಳು.॥೧೬॥ ಆಜ್ಯಂಗಸ್ನಾನಾದಿ ಸಂಸ್ಕಾರಗಳಲ್ಲದೆ, ಪತಿಶೋಕದಿಂದ ಪರಿತಪಿಸುತ್ತಿರುವ ಸೀತಾದೇವಿಯು, ತೀರಪ್ರದೇಶವು ಕೊಚ್ಚಿಹೋಗಿ ಪ್ರವಾಹವು ಬೆರೆಡೆಗೆ ಹರಿದುಹೋದ ಕಾರಣ ಬತ್ತಿಹೋದ ನದಿಯಂತೆ, ಕೃಷ್ಣಪಕ್ಷದ ಕತ್ತಲೆಯ ರಾತ್ರಿಯಂತೆ ಕಳೆಗುಂದಿದ್ದಳು.॥೧೭॥ ಸಕುಮಾರಿಯೂ, ಸುಂದರಾಂಗಿಯೂ ಆದ ಸೀತಾದೇವಿಯು ರತ್ನಖಚಿತ ಹರ್ಮ್ಯದಲ್ಲಿ ವಾಸಿಸಲು ಯೋಗ್ಯಳಾದವಳು. ಆದರೆ ಇಂದು ಆಗ ತಾನೇ ಕಿತ್ತುಹಾಕಿ ಬಾಡಿಹೋದ ತಾವರೆಯ ಬಳ್ಳಿಯಂತೆ ಕಾಣುತ್ತಿದ್ದಳು.॥೧೮॥ಬೇಟಿಗಾರರು ಸೆರೆಹಿಡಿದು ಕಟ್ಟಿಹಾಕಲ್ಪಟ್ಟ ಗಂಡಾನೆಯಿಂದ ಬೇರ್ಪಟ್ಟ ಹೆಣ್ಣಾನೆಯಂತೆ ಇವಳು ದುಃಖಿ ಪೀಡಿತಳಾಗಿ ದೀರ್ಘವಾದ ನಿಟ್ಟುಸಿರು ಬಿಡುತ್ತಿದ್ದಳು.॥೧೯॥ ಮೋಡವಿಲ್ಲದ ಸಮಯದಲ್ಲಿ ನೀರ್ವರ್ಣ ವನಶ್ರೀಯಿಂದ ಶೋಭಿಸುವ ಭೂದೇವಿಯಂತೆ ಸೀತಾದೇವಿಯು ಹೆಣೆಯಲ್ಪಡದ ನೀಳವಾದ ಒಂದೇ ಜಡೆಯಿಂದ ಕೂಡಿದ್ದು ಕೇಶಸಂಸ್ಕಾರವಿಲ್ಲದೆ ಶೋಭಾಯಮಾನಳಾ ಕಾಣುತ್ತಿದ್ದಾಳೆ.॥೨೦॥ ಅವಳು ಉಪವಾಸದಿಂದಲೂ, ಶೋಕದಿಂದಲೂ, ಚಿಂತೆಯಿಂದಲೂ, ಭಯದಿಂದಲೂ, ವಾಯುಮಾತ್ರ ಆಹಾರದಿಂದ ತಪೋವ್ರತನಿಯಮಗಳನ್ನು ಆಚರಿಸುತ್ತಾ ಬಹಳ ಕೃಶಳಾಗಿ, ಕ್ಷೀಣಿಸಿ, ದೀನದೆಶೆಯಲ್ಲಿದ್ದಳು. ದುಃಖಿ ಪೀಡಿತಳಾದ ಸೀತಾದೇವಿಯು ಶ್ರೀರಾಮಚಂದ್ರನ ಮೂಲಕ ರಾವಣನ ಪರಾಜಯವಾಗಲಿ ಎಂಬ ಒಂದೇ ಭಾವದಿಂದ ಕೈಮುಗಿದುಕೊಂಡು ಕುಲದೇವತೆಯನ್ನು ಪ್ರಾರ್ಥಿಸುತ್ತಿರುವಳೋ ಎಂಬಂತೆ ಕಾಣುತ್ತಿತ್ತು.॥೨೧-೨೨॥

ಸಮೀಕ್ಷಮಾಣಾಂ ರುದತೀಮನಿಂದಿತಾಂ
ಸುಪಕ್ಷ್ಮ ತಾಮ್ರಾಯತಶುಕ್ಲಲೋಚನಾಮ್ ।
ಅನುವ್ರತಾಂ ರಾಮಮತೀವ ಮೈಥಿಲೀಂ
ಪ್ರಲೋಭಯಾಮಾಸ ವಧಾಯ ರಾವಣಃ ॥ ೨೩॥

ನಿಷ್ಪಳಂಕಳಾದ ಸೀತಾದೇವಿಯು ರಕ್ಷಕನಿಗಾಗಿ ಅತಿತ್ವ ಗಮನವಿಟ್ಟು ನೋಡುತ್ತಾ ಅಳುತ್ತಿದ್ದಳು. ಸುಂದರವಾದ ರೆಪ್ಪೆಗಳಿಂದ ಶೋಭಿಸುತ್ತಿದ್ದು, ವಿಶಾಲವಾಗಿಯೂ, ಕೆಂಪಾಗಿಯೂ, ಬಿಳುಪಾಗಿಯೂ ಇದ್ದ ಕಣ್ಣುಗಳನ್ನು ಹೊಂದಿದ್ದಳು. ಅವಳು ಶ್ರೀರಾಮನೇ ತನ್ನ ಸರ್ವಸ್ವವೆಂದು ಭಾವಿಸಿ, ಪತಿವ್ರತಾ ಧರ್ಮದಲ್ಲಿ ನಿರತಳಾಗಿದ್ದಳು. ಅಂತಹ ವೈದೇಹಿಯನ್ನು ರಾವಣನು ತನ್ನ ವಿನಾಶಕ್ಕಾಗಿಯೇ ಪ್ರಲೋಭನ ಗೊಳಿಸಲು ಉಪಕ್ರಮಿಸಿದನು.॥೨೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಏಕೋನವಿಂಶಃ ಸರ್ಗಃ ॥ ೧೯ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹತ್ತೊಂಭತ್ತನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತನೆಯ ಸರ್ಗ

ರಾವಣನು ಸೀತಾದೇವಿಯನ್ನು ಪ್ರಲೋಭನಗೊಳಿಸಲು ಪ್ರಯತ್ನಿಸಿದುದು –

ಸ ತಾಂ ಪತಿವ್ರತಾಂ ದೀನಾಂ ನಿರಾನಂದಾಂ ತಪಸ್ವಿನೀಮ್ ।
ಸಾಕಾರೈರ್ಮಧುರೈರ್ವಾಕ್ಯೈರ್ನ್ಯದರ್ಶಯತ ರಾವಣಃ ॥ ೧॥

ಪತಿವ್ರತೆಯೂ, ತಪಸ್ವಿನಿಯೂ, ದುಃಖಿತೆಯೂ, ದೀನಳೂ ಆದ ಆ ದೇವಿಯಬಳಿ ರಾವಣನು ಹಸ್ತಮುಖಾದಿ ಸಂಜ್ಞೆಗಳಿಂದ, ಮಧುರವಾದ ವಚನಗಳಿಂದ ತನ್ನ ಮನೋಭಾವವನ್ನು ವ್ಯಕ್ತಪಡಿಸತೊಡಗಿದನು.॥೧॥

ಮಾಂ ದೃಷ್ಟ್ವಾ ನಾಗನಾಸೋರು ಗೂಹಮಾನಾ ಸ್ತನೋದರಮ್ ।
ಅದರ್ಶನಮಿವಾತ್ಮಾನಂ ಭಯಾನ್ನೇತುಂ ತ್ವಮಿಚ್ಛಸಿ ॥ ೨॥

ಎಲೈ ಸುಂದರಿಯಾದ ಸೀತಾ! ನನ್ನನ್ನು ನೋಡಿ ನೀನು ವಕ್ಷಸ್ಥಳವನ್ನು ಕೈಗಳಿಂದ ಮುಚ್ಚಿಕೊಂಡಿರುವೆ. ನನಗೆ ಭಯಪಟ್ಟು ನೀನು ಮುಖವನ್ನು ತೋರಿಸಬಾರದೆಂದು ಅಪೇಕ್ಷಿಸುತ್ತಿರುವೆಯಾ? ॥೨॥ ಓ ಸರ್ವಾಂಗಸುಂದರೀ! ಸದ್ಗುಣ ಸಂಪನ್ನೆ! ಸರ್ವಲೋಕಮನೋಹಾರಿಣಿಯೇ! ಓ ವಿಶಾಲಾಕ್ಷಿಯೆ! ನಾನು ನಿನ್ನನ್ನು ಪ್ರೇಮಿಸುತ್ತಿರುವೆನು. ಪ್ರಿಯಳೇ! ನನ್ನನ್ನು ಯಥೋಚಿತವಾಗಿ ಗೌರವಿಸು.॥೩॥ ಇಲ್ಲಿ ಬೇರೆಯಾವ ಮನುಷ್ಯನಾಗಲೀ, ಕಾಮರೂಪಿಗಳಾದ ರಾಕ್ಷಸರಾಗಲೀ ಇಲ್ಲ. ನನ್ನಿಂದ ನಿನಗೆ ಯಾವುದಾದರೂ ಭಯವಿದ್ದರೆ ಬಿಟ್ಟುಬಿಡು.॥೪॥

ಕಾಮಯೇ ತ್ವಾಂ ವಿಶಾಲಾಕ್ಷಿ ಬಹು ಮನ್ಯಸ್ವ ಮಾಂ ಪ್ರಿಯೇ ।
ಸರ್ವಾಂಗಗುಣಸಂಪನ್ನೇ ಸರ್ವಲೋಕಮನೋಹರೇ ॥ ೩॥

ನೇಹ ಕೇಚಿನ್ಮನುಷ್ಯಾ ವಾ ರಾಕ್ಷಸಾಃ ಕಾಮರೂಪಿಣಃ ।
ವ್ಯಪಸರ್ಪತು ತೇ ಸೀತೇ ಭಯಂ ಮತ್ತಃ ಸಮುಪಸ್ಥಿತಮ್ ॥ ೪॥

ಓ ಭಯಸ್ವಭಾವದವಳೇ! ಪರಸ್ತ್ರೀಗಮನವಾಗಲೀ, ಪರಸ್ತ್ರೀಯರನ್ನು ಬಲಾತ್ಕಾರ ಪೂರ್ವಕ ಅಪಹರಿಸುವುದಾಗಲೀ, ರಾಕ್ಷಸರಿಗೆ ಎಲ್ಲವಿಧದಿಂದ ಸ್ವಧರ್ಮವೇ ಆಗಿದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.॥೫॥ ಎಲೈ ಮೈಥಿಲೀ! ಆದು ಹಾಗೇ ಇರಲಿ. ಸಹಜವಾಗಿ ನಾನು ಕಾಮಾತುರನು. ನನ್ನ ಶರೀರದಲ್ಲಿ ಕಾಮದೇವನು ತನಗೆ ಇಚ್ಛೆಬಂದಂತೆ ನಡೆದುಕೊಳ್ಳಲಿ. ಆದರೆ ನನ್ನ ಮೇಲೆ ಪ್ರೇಮವಿಲ್ಲದಿರುವ ನಿನ್ನನ್ನು ನಾನು

ಸ್ವಧರ್ಮೋ ರಕ್ಷಸಾಂ ಭೀರು ಸರ್ವಥೈವ ನ ಸಂಶಯಃ ।
ಗಮನಂ ವಾ ಪರಸ್ತ್ರೀಣಾಂ ಹರಣಂ ಸಂಪ್ರಮಥ್ಯ ವಾ ॥ ೫॥

ಏವಂ ಚೈತದಕಾಮಾಂ ತು ನ ತ್ವಾಂ ಸ್ಪ್ರಕ್ಷ್ಯಾಮಿ ಮೈಥಿಲಿ ।
ಕಾಮಂ ಕಾಮಃ ಶರೀರೇ ಮೇ ಯಥಾಕಾಮಂ ಪ್ರವರ್ತತಾಮ್ ॥ ೬॥

ದೇವಿ ನೇಹ ಭಯಂ ಕಾರ್ಯಂ ಮಯಿ ವಿಶ್ವಸಿಹಿ ಪ್ರಿಯೇ ।
ಪ್ರಣಯಸ್ವ ಚ ತತ್ತ್ವೇನ ಮೈವಂ ಭೂಃ ಶೋಕಲಾಲಸಾ ॥ ೭॥

ಏಕವೇಣೀ ಧರಾ ಶಯ್ಯಾ ಧ್ಯಾನಂ ಮಲಿನಮಂಬರಮ್ ।
ಅಸ್ಥಾನೇಽಪ್ಯುಪವಾಸಶ್ಚ ನೈತಾನ್ಯೌಪಯಿಕಾನಿ ತೇ ॥ ೮॥

ವಿಚಿತ್ರಾಣಿ ಚ ಮಾಲ್ಯಾನಿ ಚಂದನಾನ್ಯಗರೂಣಿ ಚ ।
ವಿವಿಧಾನಿ ಚ ವಾಸಾಂಸಿ ದಿವ್ಯಾನ್ಯಾಭರಣಾನಿ ಚ ॥ ೯॥

ಮಹಾರ್ಹಾಣಿ ಚ ಪಾನಾನಿ ಶಯನಾನ್ಯಾಸನಾನಿ ಚ ।
ಗೀತಂ ನೃತ್ತಂ ಚ ವಾದ್ಯಂ ಚ ಲಭ ಮಾಂ ಪ್ರಾಪ್ಯ ಮೈಥಿಲಿ ॥ ೧೦॥

ಸ್ತ್ರೀರತ್ನಮಸಿ ಮೈವಂ ಭೂಃ ಕುರು ಗಾತ್ರೇಷು ಭೂಷಣಮ್ ।
ಮಾಂ ಪ್ರಾಪ್ಯ ಹಿ ಕಥಂ ನು ಸ್ಯಾಸ್ತ್ವಮನರ್ಹಾ ಸುವಿಗ್ರಹೇ ॥ ೧೧॥

ಇದಂ ತೇ ಚಾರು ಸಂಜಾತಂ ಯೌವನಂ ಹ್ಯತಿವರ್ತತೇ ।
ಯದತೀತಂ ಪುನರ್ನೈತಿ ಸ್ರೋತಃ ಶೀಘ್ರಮಪಾಮಿವ ॥ ೧೨॥

ತ್ವಾಂ ಕೃತ್ವೋಪರತೋ ಮನ್ಯೇ ರೂಪಕರ್ತಾ ಸ ವಿಶ್ವಸೃಟ್ ।
ನ ಹಿ ರೂಪೋಪಮಾ ತ್ವನ್ಯಾ ತವಾಸ್ತಿ ಶುಭದರ್ಶನೇ ॥ ೧೩॥

ತ್ವಾಂ ಸಮಾಸಾದ್ಯ ವೈದೇಹಿ ರೂಪಯೌವನಶಾಲಿನೀಮ್ ।
ಕಃ ಪುಮಾನತಿವರ್ತೇತ ಸಾಕ್ಷಾದಪಿ ಪಿತಾಮಹಃ ॥ ೧೪॥

ಯದ್ಯತ್ ಪಶ್ಯಾಮಿ ತೇ ಗಾತ್ರಂ ಶೀತಾಂಶುಸದೃಶಾನನೇ ।
ತಸ್ಮಿಂಸ್ತಸ್ಮಿನ್ ಪೃಥುಶ್ರೋಣಿ ಚಕ್ಷುರ್ಮಮ ನಿಬಧ್ಯತೇ ॥ ೧೫॥

ಭವ ಮೈಥಿಲಿ ಭಾರ್ಯಾ ಮೇ ಮೋಹಮೇನಂ ವಿಸರ್ಜಯ ।
ಬಹ್ವೀನಾಮುತ್ತಮಸ್ತ್ರೀಣಾಂ ಮಮಾಗ್ರಮಹಿಷೀ ಭವ ॥ ೧೬॥

ಮುಟ್ಟುವುದೇ ಇಲ್ಲ. (ನೀನು ವಿಷ್ಣುಪ್ರಿಯೆ. *ಅದರಿಂದ ನಾನು ಮುಟ್ಟಲಾರೆನು.)॥೬॥ಅದರಿಂದ ಎಲೈ ದೇವಿಯೇ! ನನ್ನಲ್ಲಿ ವಿಶ್ವಾಸವಿಡು. ಭಯಪಡಬೇಡ. ನಿಶ್ಚಿತ ಬುದ್ಧಿಯಿಂದ ನನ್ನನ್ನು ಪ್ರೀತಿಸು. ಹೀಗೆ ವೃಥಾದುಃಖಿಸುತ್ತಿರಬೇಡ. ॥೭॥ ಜಡೆಯನ್ನು ಹೆಣೆದುಕೊಳ್ಳದೆ ಒಂದೇ ವೇಣಿಯನ್ನು ಹೊಂದಿರುವುದಾಗಲೀ, ಭೂಮಿಯ ಮೇಲೆ ಮಲಗುವುದಾಗಲೀ, ಯಾವಾಗಲೂ ಚಿಂತಿಸುವುದಾಗಲೀ, ಮಲಿನವಾದ ವಸ್ತ್ರಗಳನ್ನು ಧರಿಸುವುದಾಗಲೀ, ನಿಷ್ಕಾರಣವಾಗಿ ಉಪವಾಸ ಮಾಡುವುದಾಗಲೀ, ನಿನಗೆ ಖಂಡಿತವಾಗಿ ಉಚಿತವಲ್ಲ.॥೮॥

ಎಲೈ ಮೈಥಿಲಿಯೇ! ನೀನು ಚಿತ್ರವಿಚಿತ್ರವಾದ ಮಾಲೆಗಳನ್ನು, ಅಗರು, ಚಂದನಗಳನ್ನು, ವಿಧ-ವಿಧವಾದ ವಸ್ತ್ರಗಳನ್ನು, ದಿವ್ಯವಾದ ಆಭರಣಗಳನ್ನು, ಶ್ರೇಷ್ಠವಾದ ಪಾನೀಯಗಳನ್ನು, ಹಾಸಿಗೆಗಳನ್ನು, ಆಸನಗಳನ್ನು, ಉಪಭೋಗಿಸು. ಬೇಕು- ಬೇಕಾದ ಗೀತಗಳನ್ನು, ವಾದ್ಯಗಳನ್ನು ಕೇಳು. ನೃತ್ಯಗಳನ್ನು ಅವಲೋಕಿಸು. ನೀನು ನನ್ನನ್ನು ವರಿಸಿದರೆ ಇವೆಲ್ಲವನ್ನು ಪಡೆಯುವೆ.॥೯-೧೦॥ ಎಲೈ ಸುಂದರಾಂಗಿಯೇ! ನೀನು ಸ್ತ್ರೀಯರಲ್ಲೇ ರತ್ನಪ್ರಾಯಳು. ನೀನು ಹೀಗೆ ಇರುವುದು ನನಗೆ ಶೋಭಿಸದು. ಅಂಗಾಂಗಗಳಲ್ಲಿ ಆಭೂಷಣಗಳನ್ನು ಧರಿಸಿಕೊ. ನನ್ನನ್ನು ಹೊಂದಿಯೂ ನೀನು ಸಕಲ ಭೋಗಭಾಗ್ಯಗಳಿಂದ ಹೇಗೆ ವಂಚಿತಳಾಗಿರುವೆ?॥೧೧॥ ಒದಗಿ ಬಂದಿರುವ ಈ ನಿನ್ನ ಸುಮನೋಹರವಾದ ಯೌವನವೂ ವ್ಯರ್ಥವಾಗುತ್ತದಲ್ಲ! ವೇಗವಾಗಿ ಹರಿಯುವ ನದಿಯ ನೀರು ಹಿಂದಿರುಗಿ ಬರಲಾರದು. ಹಾಗೆಯೇ ಕಳೆದು ಹೋದ ನಿನ್ನ ಯೌವನವು ಮರಳಿ ಬರುವುದಿಲ್ಲ.॥೧೨॥ ಓ ಶುಭದರ್ಶನಳೇ! ರೂಪಶಿಲ್ಪಿ ಯಾದ ಬ್ರಹ್ಮದೇವರು ನಿನ್ನನ್ನು ಸೃಷ್ಟಿಸಿದ ಬಳಿಕ ವಿಶ್ರಾಂತನಾಗಿ ರುವನೆಂದೇ ನಾನು ತಿಳಿಯುತ್ತೇನೆ. ಏಕೆಂದರೆ, ಈ ಲೋಕದಲ್ಲಿ ನಿನಗೆ ಸಾಟಿಯಾದ ಸೌಂದರ್ಯವತಿಯು ಬೇರೆ ಯಾರೂ ಇರಲಾರರು.॥೧೩॥ ಎಲೈ ವೈದೇಹಿ! ರೂಪಯೌವನಶಾಲಿ ಯಾದ ನಿನ್ನನ್ನು ಪಡೆದವರು ಸಾಕ್ಷಾತ್ ಸೃಷ್ಟಿಕರ್ತನಾದ ಪಿತಾಮಹನಾದರೂ ಕೂಡ ಬಿಡಲಾರನು.॥೧೪॥ ಎಲೈ ಚಂದ್ರಮುಖಿಯೇ! ನಿನ್ನ ಅವಯವ ಸೌಂದರ್ಯ ಸೌಭಾಗ್ಯಗಳನ್ನು ನೋಡುತ್ತಾ ಇರುವಾಗ, ಪ್ರತಿ ಅವಯವ ಲಾಲಿತ್ಯವನ್ನು ದರ್ಶಿಸುವಾಗ ನನ್ನ ದೃಷ್ಟಿಯು ಬೇರೆಡೆಗೆ ಹೋಗುವುದೇ ಇಲ್ಲ.॥೧೫॥ ಎಲೈ ಮೈಥಿಲಿ! ನನ್ನ ಭಾರ್ಯೆ ಯಾಗು. ನಾನು ನಿನ್ನ ಶತ್ರುವೆಂಬ ಮೋಹವನ್ನು ಬಿಟ್ಟುಬಿಡು. ನಾನು ನಾನಾದೇಶಗಳಿಂದ ಅನೇಕ ಮಂದಿ ಯುವತಿ ಮಣಿಯರನ್ನು ಕರೆ ತಂದಿರುವೆನು. ಅವರೆಲ್ಲರಲ್ಲಿ ನೀನೇ ನನ್ನ ಪಟ್ಟಮಹಿಷಿಯಾಗುವುದು ಮೇಲು.॥೧೬॥ ಓ ಭಯಸ್ವಭಾವದವಳೇ! ನಾನು ಶತ್ರುಗಳನ್ನು ಜಯಿಸಿ ಅನೇಕ ಲೋಕಗಳಿಂದ ಹೇರಳವಾದ

* ಅಕಾರಃ-ವಿಷ್ಣುವು.ಆ-ಕಾಮಾ= ಶ್ರೀವಿಷ್ಣುವಿನಲ್ಲಿ ಪ್ರೇಮವಿಡುವವನು. (ಅಕಾಮಾ= ವಿಷ್ಣುಪ್ರಿಯಾ) ''ವಿಷ್ಣುಕಾಮಾಂ ತ್ವಾಂ ನಸ್ಪ್ರಕ್ಷಾಮಿ ಅಂದರೆ ನೀನು ರಾಮನನ್ನು ಮಾತ್ರ ಇಷ್ಟಪಡುವವಳಾಗಿರುವೆ. ಅದರಿಂದ ನಾನು ನಿನ್ನನ್ನು ಮುಟ್ಟುವುದಿಲ್ಲ ಇದು ಭಕ್ತರ ಭಾವವಾಗಿದೆ.

ಲೋಕೇಭ್ಯೋ ಯಾನಿ ರತ್ನಾನಿ ಸಂಪ್ರಮಥ್ಯಾಹೃತಾನಿ ವೈ ।
ತಾನಿ ಮೇ ಭೀರು ಸರ್ವಾಣಿ ರಾಜ್ಯಂ ಚೈತದಹಂ ಚ ತೇ ॥ ೧೭॥

ವಿಜಿತ್ಯ ಪೃಥಿವೀಂ ಸರ್ವಾಂ ನಾನಾನಗರಮಾಲಿನೀಮ್ ।
ಜನಕಾಯ ಪ್ರದಾಸ್ಯಾಮಿ ತವ ಹೇತೋರ್ವಿಲಾಸಿನಿ ॥ ೧೮॥

ನೇಹ ಪಶ್ಯಾಮಿ ಲೋಕೇಽನ್ಯಂ ಯೋ ಮೇ ಪ್ರತಿಬಲೋ ಭವೇತ್ ।
ಪಶ್ಯ ಮೇ ಸುಮಹದ್ವೀರ್ಯಮಪ್ರತಿದ್ವಂದ್ವಮಾಹವೇ ॥ ೧೯॥

ಅಸಕೃತ್ ಸಂಯುಗೇ ಭಗ್ನಾ ಮಯಾ ವಿಮೃದಿತದ್ವಜಾಃ ।
ಅಶಕ್ತಾಃ ಪ್ರತ್ಯನೀಕೇಷು ಸ್ಥಾತುಂ ಮಮ ಸುರಾಸುರಾಃ ॥ ೨೦॥

ಇಚ್ಛಯಾ ಕ್ರಿಯತಾಮದ್ಯ ಪ್ರತಿಕರ್ಮ ತವೋತ್ತಮಮ್ ।
ಸುಪ್ರಭಾಣ್ಯವಸಜ್ಯಂತಾಂ ತವಾಂಗೇ ಭೂಷಣಾನಿ ಚ ॥ ೨೧॥

ಸಾಧು ಪಶ್ಯಾಮಿ ತೇ ರೂಪಂ ಸಂಯುಕ್ತಂ ಪ್ರತಿಕರ್ಮಣಾ ।
ಪ್ರತಿಕರ್ಮಾಭಿಸಂಯುಕ್ತಾ ದಾಕ್ಷಿಣ್ಯೇನ ವರಾನನೇ ॥ ೨೨॥

ಭುಂಕ್ಷ್ವ ಭೋಗಾನ್ ಯಥಾಕಾಮಂ ಪಿಬ ಭೀರು ರಮಸ್ವ ಚ ।
ಯಥೇಷ್ಟಂ ಚ ಪ್ರಯಚ್ಛ ತ್ವಂ ಪೃಥಿವೀಂ ವಾ ಧನಾನಿ ಚ ॥ ೨೩॥

ರಮಸ್ವ ಮಯಿ ವಿಸ್ರಬ್ಧಾ ಧೃಷ್ಟಮಾಜ್ಞಾಪಯಸ್ವ ಚ ।
ಮತ್ಪ್ರಸಾದಾಲ್ಲಲಂತ್ಯಾಶ್ಚ ಲಲಂತಾಂ ಬಾಂಧವಾಸ್ತವ ॥ ೨೪॥

ಋದ್ಧಿಂ ಮದ್ಭಾಗ್ಯಪಕ್ಷ್ಯಂ ತ್ವಂ ಶ್ರಿಯಂ ಭದ್ರೇ ಯಶಶ್ಚ ಮೇ ।
ಕಿಂ ಕರಿಷ್ಯಸಿ ರಾಮೇಣ ಸುಭಗೇ ಚೀರವಾಸಸಾ ॥ ೨೫॥

ನಿಕ್ಷಿಪ್ತವಿಜಯೋ ರಾಮೋ ಗತಶ್ರೀರ್ವನಗೋಚರಃ ।
ವ್ರತೀ ಸ್ಥಂಡಿಲಶಾಯೀ ಚ ಶಂಕೇ ಜೀವತಿ ವಾ ನ ವಾ ॥ ೨೬॥

ನ ಹಿ ವೈದೇಹಿ ರಾಮಸ್ತ್ವಾಂ ದೃಷ್ಟ್ವಾ ವಾಪ್ಯಸಲಸ್ಯತೇ ।
ಪುರೋಬಲಾಕೈರುತ್ಕೈರ್ಮೇಘೈರ್ಜ್ಯೋತ್ಸ್ನಾಮಿವಾದ್ಯತಾಮ್ ॥ ೨೭॥

ಅನರ್ಘ್ಯರತ್ನಾಭರಣಗಳನ್ನು ತಂದಿರುವೆನು. ಅವೆಲ್ಲವೂ ನಿನ್ನವೇ. ಈ ಲಂಕಾರಾಜ್ಯವನ್ನು ನಿನಗೆ ಸಮರ್ಪಿಸಿ ಬಿಡುವೆನು.॥೧೭॥ ಎಲೈ ವಿಲಾಸಿನಿಯೇ! ಪ್ರಸಿದ್ಧವಾದ ಮಹಾನಗರಗಳಿಂದ ಕೂಡಿದ ಈ ಸಮಸ್ತ ಭೂಮಂಡಲವನ್ನು ನಾನು ಜಯಿಸಿರುವೆನು. ನೀನು ಬಯಸಿದರೆ ಅದನ್ನು ನಿನ್ನ ತಂದೆಯಾದ ಜನಕರಾಜನಿಗೆ ಕೊಟ್ಟುಬಿಡುವೆನು.॥೧೮॥ ನನಗೆ ಎದುರಾಗಿ ನಿಲ್ಲಲು ಸಾಮರ್ಥ್ಯವಿರುವ ವೀರನನ್ನು ನಾನು ಈ ಲೋಕದಲ್ಲಿ ಕಾಣುತ್ತಿಲ್ಲ. ರಣರಂಗದಲ್ಲಿ ಸಾಟಿಯಿಲ್ಲದ ನನ್ನ ಪರಾಕ್ರಮವನ್ನು ನೋಡಿ ನೀನು ತಿಳಿದುಕೋ.॥೧೯॥ ನನ್ನ ಶತ್ರುಗಳು ಹಲವಾರು ಬಾರಿ ಯುದ್ಧಗಳಲ್ಲಿ ಧ್ವಜಗಳನ್ನು ಕಳೆದುಕೊಂಡು ಭಗ್ನರಾಗಿದ್ದಾರೆ. ದೇವತೆಗಳಾಗಲೀ, ಅಸುರರಾಗಲೀ, ಶತ್ರುಗಳಾಗಿ ಯುದ್ಧದಲ್ಲಿ ನನ್ನ ಇದಿರಿಗೆ ನಿಲ್ಲಲು ಪಿಂಡಿತವಾಗಿ ಸಮರ್ಥರಲ್ಲ.॥೨೦॥

ಈಗ ನೀನು ಬಯಸಿದ ರೀತಿಯಿಂದ ಅಲಂಕರಿಸಿಕೊ. ಒಳ್ಳೆಯಪ್ರಭೆಯಿಂದ ಕೂಡಿರುವ ಆಭರಣಗಳು ನಿನ್ನ ಸರ್ವಾಂಗಗಳನ್ನು ಅಲಂಕರಿಸಲಿ. ಎಲೈ ವರಾನನೆ! ಅಲಂಕಾರ ವಸ್ತುಗಳಿಂದ ಸಿಂಗರಿಸಲ್ಪಟ್ಟರುವ ನಿನ್ನ ರೂಪವನ್ನು ಕಾಣ ಬೇಕೆಂದಿದ್ದೇನೆ. ನನಗೆ ಅನುರೂಪಳಾಗು. ನೀನು ಉದಾರತೆಯಿಂದ ನನ್ನ ಮೇಲೆ ಕೃಪೆಮೋರಿ ನಿನ್ನ ಶರೀರವನ್ನು ಯಥಾಯೋಗ್ಯವಾಗಿ ಸಿಂಗರಿಸಿಕೊ. ನಿನಗೆ ಇಷ್ಟವಾದ ಸುಖೋಪಭೋಗಗಳನ್ನು ಯಥೇಚ್ಛವಾಗಿ ಉಪಭೋಗಿಸು. ರುಚಿಕರವಾದ ಪಾನೀಯಗಳನ್ನು ಬೇಕಾದಷ್ಟು ಪಾನಮಾಡು. ನನ್ನೊಡನೆ ಯಥೇಚ್ಛವಾಗಿ ವಿಹರಿಸು. ನಿನಗೆ ಬೇಕಾದವರಿಗೆ ಭೂಮಿಯನ್ನಾಗಲೀ, ಧನವನ್ನಾಗಲೀ, ಔದಾರ್ಯದಿಂದ ಬೇಕಾದಷ್ಟು ಹಂಚಿಬಿಡು.॥೨೧-೨೩॥ಯಾವ ವಿಧವಾದ ಭಯವೂ ಇಲ್ಲದೆ ನನ್ನೊಡನೆ ಉಲ್ಲಾಸದಿಂದಿರು. ಧೈರ್ಯದಿಂದ ನನಗೆ ಆಳನಂತೆ ಆಜ್ಞಾಪಿಸು. ನನ್ನ ಕೃಪೆಯಿಂದಾಗಿ ನೀನು ಇಲ್ಲಿಯ ಸುಖೋಪಭೋಗಗಳನ್ನು ಅನುಭವಿಸುವಂತೆ ನಿನ್ನ ಬಂಧುಗ ಳೆಲ್ಲರೂ ಅನುಭವಿಸಲಿ.॥೨೪॥

ಎಲೈ ಮಂಗಳಪ್ರದಳೇ! ಒಂದು ಬಾರಿ ನನ್ನಲ್ಲಿರುವ ಹೇರಳವಾದ ಐಶ್ವರ್ಯವನ್ನು, ತೇಜಸ್ಸನ್ನು, ಕೀರ್ತಿಯನ್ನು, ಚೆನ್ನಾಗಿನೋಡು. ಎಲೈ ಸುಂದರಿಯೇ! ನಾರುಮಡಿಯನ್ನು ಉಟ್ಟರುವ ರಾಮನನ್ನು ಕಟ್ಟಿಕೊಂಡು ಏನು ಮಾಡುವೆ? ॥೨೫॥ ಈಗ ರಾಮನು ಜಯವನ್ನೂ, ಸಂಪತ್ತನ್ನೂ ಕಳೆದು ಕೊಂಡಿರುವನು. ಅಡವಿವಾಲಾಗಿ ಹೋಗಿರುವನು. ಮುನಿವ್ರತವನ್ನು ಕೈಗೊಂಡು ನೆಲದಮೇಲೆ ಮಲಗುತ್ತಿರುವನು. ಇನ್ನು ಅವನು ಜೀವಿಸಿರುವನೋ ಇಲ್ಲವೋ?॥೨೬॥ ಎಲೈ ವೈದೇಹಿ! ಅಗ್ರಭಾಗದಲ್ಲಿ ಬೆಳ್ಳಕ್ಕಿಗಳಿರುವ ಕಾರ್ಮುಗಿಲು ಗಳಿಂದ ಆವೃತವಾದ ಚಂದ್ರನನ್ನು ನೋಡಲಾಗದಂತೆ ನಿನ್ನನ್ನು ಪಡೆಯುವುದಿರಲೀ, ರಾಮನಿಂದ ನೋಡಲೂ ಕೂಡ ಸಾಧ್ಯವಾಗದು.॥೨೭॥ ಇಂದ್ರನ ಹಸ್ತಗತಳಾದ ಹಿರಣ್ಯಕಶಿಪು ವಿನ ಹೆಂಡತಿ (ಕೀರ್ತಿ) ಹಿಂದಕ್ಕೆ ಪಡೆಯಲು

ನ ಚಾಪಿ ಮಮ ಹಸ್ತಾಗ್ರೇ ಪ್ರಾಪ್ತಮರ್ಹತಿ ರಾಘವಃ ।
ಹಿರಣ್ಮಕಶಿಪುಃ ಕೀರ್ತಿಮಿಂದ್ರಪಸೃತಾಮಿವ ॥ ೨೮॥

ಚಾರುಸ್ಮಿತೇ ಚಾರುದತಿ ಚಾರುನೇತ್ರೇ ವಿಲಾಸಿನಿ ।
ಮನೋ ಹರತಿ ಮೇ ಭೀರು ಸುಪರ್ಣಃ ಪನ್ನಗಂ ಯಥಾ ॥ ೨೯॥

ಕ್ಲಿಷ್ಟಕೌಶೇಯವಸನಾಂ ತನ್ವೀಮನ್ಯನಲಂಕೃತಾಮ್ ।
ತ್ವಾಂ ದೃಷ್ಟ್ವಾ ಸ್ಥಿತಾಂ ತಾರೇಷು ರಹಿಂ ನೋಪಲಭಾಮ್ಯಹಮ್ ॥ ೩೦॥

ಅಂತಃಪುರನಿವಾಸಿನ್ಯಃ ಸ್ತ್ರಿಯಃ ಸರ್ವಗುಣಾನ್ವಿತಾಃ ।
ಯಾವತ್ಯೋ ಮಮ ಸರ್ವಾಸಾಮೈಶ್ವರ್ಯಂ ಕುರು ಜಾನಕಿ ॥

ಮಮ ಹ್ಯಸಿತಕೇಶಾಂತೇ ತ್ರೈಲೋಕ್ಯಪ್ರವರಾಃ ಸ್ತ್ರಿಯಃ ।
ತಾಸ್ತ್ವಾಂ ಪರಿಚರಿಷ್ಯಂತಿ ಶ್ರಿಯಮಪ್ಸರಸೋ ಯಥಾ ॥ ೩೨॥

ಯಾನಿ ವೈಶ್ರವಣೇ ಸುಭ್ರೂ ರತ್ನಾನಿ ಚ ಧನಾನಿ ಚ ।
ತಾನಿ ಲೋಕಾಂಶ್ಚ ಸುಶ್ರೋಣಿ ಮಾಂ ಚ ಭುಂಕ್ಷ್ವ ಯಥಾಸುಖಮ್ ॥

ನ ರಾಮಸ್ತಪಸಾ ದೇವಿ ನ ಬಲೇನ ನ ವಿಕ್ರಮೈಃ ।
ನ ಧನೇನ ಮಯಾ ತುಲ್ಯಸ್ತೇಜಸಾ ಯಶಸಾಪಿ ವಾ ॥ ೩೪॥

ಪಿಬ ವಿಹರ ರಮಸ್ವ ಭುಂಕ್ಷ್ವ ಭೋಗಾನ್
ಧನನಿಚಯಂ ಪ್ರತಿಶಾಮಿ ಮೇದಿನೀಂ ಚ ।
ಮಯಿ ಲಲ ಲಲನೇ ಯಥಾಸುಖಂ ತ್ವಂ
ತ್ವಯಿ ಚ ಸಮೇತ್ಯ ಲಲಂತು ಬಾಂಧವಾಸ್ತೇ ॥ ೩೫॥

ಕುಸುಮಿತತರುಜಾಲಸಂತತಾನಿ
ಭ್ರಮರಯುತಾನಿ ಸಮುದ್ರತೀರಜಾನಿ ।
ಕನಕವಿಮಲಹಾರಭೂಷಿತಾಂಗಿ
ವಿಹರ ಮಯಾ ಸಹ ಭೀರು ಕಾನನಾನಿ ॥ ೩೬॥

ಸಾಧ್ಯವಾಯಿತು.ಆದರೆ ನನ್ನ ಹಸ್ತಗತಳಾಗಿರುವ ನಿನ್ನನ್ನು ರಾಮನು ಮರಳಿ ಪಡೆದು ಕೊಳ್ಳಲಾರನು.॥೨೮॥ ಬಲುಸುಂದರವಾದ ಮಂದಹಾಸವುಳ್ಳವಳೇ! ಸುಂದರವಾದ ದಂತಪಂಕ್ತಿಯುಳ್ಳವಳೇ! ಚೆಲುವಾದ ಕಣ್ಣುಗಳುಳ್ಳವಳೇ! ವಿಲಾಸಿನಿಯೇ! ಭೀರುವೇ! ಗರುಡ ಪಕ್ಷಿಯು ಹಾವನ್ನು ಆಪಹರಿಸುವಂತೆ ನನ್ನ ಮನಸ್ಸನ್ನು ನೀನು ಅಪಹರಿಸಿರುವೆ. ॥೨೯॥ ಮಲಿನವಾದ ಪಟ್ಟವಸ್ತ್ರವನ್ನು ಧರಿಸಿದ್ದರೂ, ಉಪವಾಸಾದಿಗಳಿಂದ ಕೃಶವಾಗಿದ್ದರೂ, ಅಲಂಕಾರ ಮಾಡಿಕೊಳ್ಳದಿದ್ದರೂ ನಿನ್ನನ್ನು ನೋಡಿದ ಮೇಲೆ ನನ್ನ ಸತಿಯರ ಕಡೆಗೆ ಮನಸ್ಸೇ ಹೋಗುವುದಿಲ್ಲ.॥೩೦॥ ನನ್ನ ಅಂತಃಪುರದಲ್ಲಿ ಸಕಲ ಸದ್ಗುಣ ಸಂಪನ್ನೆಯರಾದ ಎಷ್ಟೋ ಸ್ತ್ರೀಯರಿದ್ದಾರೆ. ಅವರೆಲ್ಲರಮೇಲೆ ನೀನು ಪರಮಾಧಿಕಾರವನ್ನು ವಹಿಸು.॥೩೧॥ ಎಲೈ ಕಪ್ಪಾದ ಕೂದಲುಳ್ಳವಳೇ! ಮೂರು ಲೋಕಗಳಲ್ಲಿಯೂ ಶ್ರೇಷ್ಠರೆನಿಸಿದ ನನ್ನ ಎಲ್ಲ ಭಾರ್ಯೆಯರು-ಲಕ್ಷ್ಮೀದೇವಿಯನ್ನು ಆಪ್ಸರೆಯರು ಉಪಚರಿಸುವಂತೆ ನಿನ್ನ ಶುಶ್ರೂಷೆಯಲ್ಲಿ ನಿರತರಾಗಿರುತ್ತಾರೆ. ॥೩೨॥ ಎಲೈ ಶುಭಾಂಗಿಯೇ! ಕುಬೇರನನ್ನು ಜಯಿಸಿ ನಾನು ತಂದಿರುವ ರತ್ನಗಳನ್ನೂ, ಧನರಾಶಿಗಳನ್ನೂ, ಮೂರುಲೋಕದ ಸಂಪತ್ತನ್ನು ಅನುಭವಿಸುತ್ತಾ ನನ್ನೊಡನೆ ಹಾಯಾಗಿರು.॥೩೩॥ ಓ ದೇವಿಯೇ!ರಾಮನು ತಪಸ್ಸಿನಲ್ಲಾಗಲೀ, ಬಲದಲ್ಲಾಗಲೀ, ಪರಾಕ್ರಮದಲ್ಲಾಗಲೀ, ಧನದಿಂದಾಗಲೀ, ತೇಜಸ್ಸಿನಿಂದಾಗಲೀ, ಯಶಸ್ಸಿನಿಂದಾಗಲೀ, ನನಗೆ ಸರಿಸಮಾನನಾಗಲಾರನು.॥೩೪॥ ಎಲೈ ಲಲನಾಮಣಿಯೇ! ಸುರುಚಿರವಾದ ಪಾನೀಯಗಳನ್ನು ಪಾನಮಾಡು. ಯಥೇಚ್ಛವಾಗಿ ವಿಹರಿಸು. ಭೋಗಗಳನ್ನು ಅನುಭವಿಸು. ಧನದ ರಾಶಿಗಳನ್ನು, ಭೂಮಂಡಲದ ಭಾಗಗಳನ್ನು ನಿನಗೆ ಬೇಕಾದವರಿಗೆ ಕೊಡು. ನನ್ನೊಡನೆ ಸುವಿದಿಂದಲೂ, ವಿಲಾಸದಿಂದಲೂ ಇರು. ನಿನ್ನ ಬಾಂಧವರೆಲ್ಲರೂ ನಿನ್ನೊಡನೆ ಸೇರಿಕೊಂಡು ಸುವಿವಾಗಿರಲಿ.॥೩೫॥

ಎಲೈ ಭಯಸ್ವಭಾವದವಳೇ! ಉತ್ತಮವಾದ ಭಂಗಾರದ ಆಭರಣಗಳನ್ನು ಧರಿಸಿಕೊಂಡು, ಸಮುದ್ರತೀರದಲ್ಲಿ ಚೆನ್ನಾಗಿ ಪುಷ್ಪಿತವಾದ, ದುಂಬಿಗಳಿಂದ ಕೂಡಿರುವ, ವೃಕ್ಷಪಂಕ್ತಿಗಳಿಂದ ನಿಬಿಡವಾದ ವನಗಳಲ್ಲಿ ನನ್ನೊಡನೆ ಸೇರಿ ವಿಹರಿಸು.॥೩೬॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ವಿಂಶಃ ಸರ್ಗಃ ॥ ೨೦ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತೊಂದನೆಯ ಸರ್ಗ

ಸೀತಾದೇವಿಯು ರಾವಣನಿಗೆ ಹಿತವಾಕ್ಯವನ್ನು ಹೇಳಿ, ಶ್ರೀರಾಮನ ಮಹಿಮೆಯನ್ನು ಕೊಂಡಾಡಿದುದು –

ತಸ್ಯ ತದ್ವಚನಂ ಶ್ರುತ್ವಾ ಸೀತಾ ರೌದ್ರಸ್ಯ ರಕ್ಷಸಃ ।
ಆರ್ತಾ ದೀನಸ್ವರಾ ದೀನಂ ಪ್ರತ್ಯುವಾಚ ಶನೈರ್ವಚಃ ॥ ೧॥

ದುಃಖಾರ್ತಾ ರುದತೀ ಸೀತಾ ವೇಪಮಾನಾ ತಪಸ್ವಿನೀ ।
ಚಿಂತಯಂತೀ ವರಾರೋಹಾ ಪತಿಮೇವ ಪತಿವ್ರತಾ ॥ ೨॥

ತೃಣಮಂತರತಃ ಕೃತ್ವಾ ಪ್ರತ್ಯುವಾಚ ಶುಚಿಸ್ಮಿತಾ ।
ನಿವರ್ತಯ ಮನೋ ಮತ್ತಃ ಸ್ವಜನೇ ಕ್ರಿಯತಾಂ ಮನಃ ॥ ೩॥

ನ ಮಾಂ ಪ್ರಾರ್ಥಯಿತುಂ ಯುಕ್ತಂ ಸುಸಿದ್ಧಿಮಿವ ಪಾಪಕೃತ್ ।
ಅಕಾರ್ಯಂ ನ ಮಯಾ ಕಾರ್ಯಮೇಕಪತ್ನ್ಯಾ ವಿಗರ್ಹಿತಮ್ ॥ ೪॥

ಕುಲಂ ಸಂಪ್ರಾಪ್ತಯಾ ಪುಣ್ಯಂ ಕುಲೇ ಮಹತಿ ಜಾತಯಾ ।
ಏವಮುಕ್ತ್ವಾ ತು ವೈದೇಹೀ ರಾವಣಂ ತಂ ಯಶಸ್ವಿನೀ ॥ ೫॥

ರಾಕ್ಷಸಂ ಪೃಷ್ಠತಃ ಕೃತ್ವಾ ಭೂಯೋ ವಚನಮಬ್ರವೀತ್ ।
ನಾಹಮೌಪಯಿಕೀ ಭಾರ್ಯಾ ಪರಭಾರ್ಯಾ ಸತೀ ತವ ॥ ೬॥

ಸಾಧು ಧರ್ಮಮವೇಕ್ಷಸ್ವ ಸಾಧು ಸಾಧುವ್ರತಂ ಚರ ।
ಯಥಾ ತವ ತಥಾನ್ಯೇಷಾಂ ದಾರಾ ರಕ್ಷ್ಯಾ ನಿಶಾಚರ ॥ ೭॥

ಆತ್ಮಾನಮುಪಮಾಂ ಕೃತ್ವಾ ಸ್ವೇಷು ದಾರೇಷು ರಮ್ಯತಾಮ್ ।
ಅತುಷ್ಟಂ ಸ್ವೇಷು ದಾರೇಷು ಚಪಲಂ ಚಲಿತೇಂದ್ರಿಯಮ್ ॥ ೮॥

ನಯಂತಿ ನಿಕೃತಿಪ್ರಜ್ಞಂ ಪರದಾರಾಃ ಪರಾಭವಮ್ ।
ಇಹ ಸಂತೋ ನ ವಾ ಸಂತಿ ಸತೋ ವಾ ನಾನುವರ್ತಸೇ ॥ ೯॥

ತಥಾ ಹಿ ವಿಪರಿತಾ ತೇ ಬುದ್ಧಿರಾಚಾರವರ್ಜಿತಾ ।
ವಚೋ ಮಿಥ್ಯಾಪ್ರಣೀತಾತ್ಮಾ ಪಥ್ಯಮುಕ್ತಂ ವಿಚಕ್ಷಣೈಃ ॥ ೧೦॥

ಭಯಂಕರವಾಗಿರುವ ರಾಕ್ಷಸರಾಜನಾದ ರಾವಣನ ಮಾತುಗಳನ್ನು ಕೇಳಿ, ದುಃಖಿತಳಾದ ಸೀತಾದೇವಿಯು ಆರ್ತಳಾಗಿ ದೀನಸ್ವರದಿಂದ ನಿಧಾನವಾಗಿ ಹೀಗೆ ಹೇಳಿದಳು. ॥೧॥ ಸುಂದರಾಂಗಿಯಾದ ಸೀತಾದೇವಿಯು ದುಃಖಪೀಡಿತಳಾಗಿದ್ದಳು. ಅಳುತ್ತಾ ತರ-ತರನೇ ನಡುಗುತ್ತಿದ್ದಳು. ಪತಿಯನ್ನೇ ಯಾವಾಗಲೂ ಚಿಂತಿಸುತ್ತಿದ್ದಳು. ಶುಚಿಸ್ಮಿತೆಯಾದ ಆ ಸಾಧ್ವಿಯು ಪರಪುರುಷರೋಡನೆ ನೇರವಾಗಿ ಮಾತಾಡಕೂಡದೆಂಬ ಅಭಿಪ್ರಾಯದಿಂದ ಹುಲ್ಲುಕಡ್ಡಿಯೊಂದನ್ನು ಮಧ್ಯದಲ್ಲಿ ಆಡ್ಡಲಾಗಿಟ್ಟು ಇಂತೆಂದಳು –

''ಎಲೈರಾಕ್ಷಸರಾಜನೇ! ನಿನ್ನ ಮನಸ್ಸನ್ನು ನನ್ನಿಂದ ತೊಲಗಿಸಿಬಿಡು. ನಿನ್ನ ಭಾರ್ಯೆಯರಲ್ಲೇ ಆದು ಅನುರಕ್ತವಾಗಲಿ. ॥೨-೩॥ ಪಾಪಿಷ್ಠನು ಒಳ್ಳೆಯಸಿದ್ಧಿಯನ್ನು ಬಯಸುವಂತೆ, ನೀನು ನನ್ನನ್ನು ಬಯಸುವುದು ಯುಕ್ತವಲ್ಲ. ಪಾಪಿಷ್ಠನಿಗೆ ಸಿದ್ಧಿಯು ಸಿದ್ಧಿಸದಂತೆ ನಾನು ನಿನಗೆ ದೊರಕತಕ್ಕವಳಲ್ಲ. ನಾನು ಮಹಾ ಕುಲದಲ್ಲಿ ಹುಟ್ಟಿ ಪುಣ್ಯಕುಲಕ್ಕೆ ಸೇರಿದವಳು. ಶ್ರೀರಾಮನ ಏಕಪತ್ನಿಯಾಗಿ ರುವವಳು.(ಪತಿವ್ರತೆಯಾಗಿರುವವಳು.) ನೀನು ಸೂಚಿಸುತ್ತಿ ರುವ ಅತಿನಿಂದ್ಯವಾದ ಕಾರ್ಯವನ್ನು ಮಾಡುವುದು ನನಗೆ ಯುಕ್ತವಲ್ಲ.'' ಯಶೋವತಿಯಾದ ಸೀತಾದೇವಿಯುಹೀಗೆ ಹೇಳಿ ರಾವಣನನ್ನು ಪೂರ್ಣವಾಗಿ ತಿರಸ್ಕರಿಸುತ್ತಾ ಪುನಃ ಹೀಗೆ ಹೇಳಿದಳು–॥೪-೫॥

''ಪತಿವ್ರತೆಯಾಗಿರುವ ನಾನು ಶ್ರೀರಾಮಚಂದ್ರನ ಭಾರ್ಯೆಯು. ನಿನಗೆ ಪರಸತಿಯಾಗಿರುವೆ. ಸತ್ಪುರುಷರ ಧರ್ಮವನ್ನು ಚೆನ್ನಾಗಿ ತಿಳಿದುಕೊಂಡು, ಅವರು ಆಚರಿಸುವಂತೆ ನೀನೂ ಆಚರಿಸು. ಎಲೈ ನಿಶಾಚರನೇ! ನಿನ್ನ ಸತಿಯರು ಪರಪುರುಷರ ವಶರಾಗದಂತೆ ನೀನು ರಕ್ಷಿಸುವಂತೆ, ಪರಪತ್ನಿಯರನ್ನೂ ಅವರ ಶೀಲಕ್ಕೆ ಭಂಗವುಂಟಾಗದಂತೆ ನೀನು ರಕ್ಷಿಸಬೇಕು. ಹೀಗೆ ಗ್ರಹಿಸಿ, ನಿನಗೆ ನೀನೇ ಉಪಮಾನವಾಗಿಸಿಕೊಂಡು ನಿನ್ನ ಭಾರ್ಯೆಯರಲ್ಲೇ ರಮಿಸುವವನಾಗು.'' ॥೬-೭॥

ತನ್ನ ಪತ್ನಿಯರಲ್ಲಿ ತೃಪ್ತಿಹೊಂದದೇ ಇರುವ, ಅಸಭ್ಯನಾದ, ಚಂಚಲವಾದ ಮನಸ್ಸುಳ್ಳ, ವಂಚಕ ಬುದ್ಧಿಯಿಂದ ಕೂಡಿರುವವನು ಪರಸತಿಯರಿಂದ ಪರಾಭವಗೊಳ್ಳುತ್ತಾನೆ. ನಿನ್ನ ಬುದ್ಧಿಯು ಸದಾಚಾರ-ಸದ್ವ್ಯವಹಾರಗಳಿಂದ ದೂರವಾಗಿರುವುದನ್ನು, ವಿರುದ್ಧವಾಗಿರುವುದನ್ನು ನೋಡಿದರೆ, ನಿನ್ನ ರಾಜ್ಯದಲ್ಲಿ ಸತ್ಪುರುಷರೇ ಇಲ್ಲವೆಂದು ಭಾವಿಸಬೇಕಾಗುತ್ತದೆ. ಇದ್ದರೂ ಅವರ ಮಾರ್ಗವನ್ನು ನೀನು

ರಾಕ್ಷಸಾನಾಮಭಾವಾಯ ತ್ವಂ ವಾ ನ ಪ್ರತಿಪದ್ಯಸೇ।
ಅಕೃತಾತ್ಮಾನಮಾಸಾದ್ಯ ರಾಜಾನಮನಯೇ ರತಮ್ ॥ ೧೧॥

ಸಮೃದ್ಧಾನಿ ವಿನಶ್ಯಂತಿ ರಾಷ್ಟ್ರಾಣಿ ನಗರಾಣಿ ಚ।
ತಥೇಯಂ ತ್ವಾಂ ಸಮಾಸಾದ್ಯ ಲಂಕಾ ರಕ್ಷೋಽಧಿಪ ಸಂಕುಲಾ ॥ ೧೨॥

ಅಪರಾಧಾತ್ತವೈಕಸ್ಯ ನ ಚಿರಾದ್ವಿನಶಿಷ್ಯತಿ।
ಸ್ವಕೃತೈರ್ಹನ್ಯಮಾನಸ್ಯ ರಾವಣಾ ದೀರ್ಘದರ್ಶಿನಃ ॥ ೧೩॥

ಅಭಿನಂದಂತಿ ಭೂತಾನಿ ವಿನಾಶೇ ಪಾಪಕರ್ಮಣಃ।
ಏವಂ ತ್ವಾಂ ಪಾಪಕರ್ಮಾಣಂ ವಕ್ಷ್ಯಂತಿ ನಿಕೃತಾ ಜನಾಃ ॥ ೧೪॥

ದಿಷ್ಟ್ಯಂ ತದ್ವ್ಯಸನಂ ಪ್ರಾಪ್ತೋ ರೌದ್ರ ಅತ್ಯೇವ ಹರ್ಷಿತಾಃ।
ಶಕ್ಯಾ ಲೋಭಯಿತುಂ ನಾಹಮೈಶ್ವರ್ಯೇಣ ಧನೇನ ವಾ ॥ ೧೫॥

ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾ ಯಥಾ।
ಉಪಧಾಯ ಭುಜಂ ತಸ್ಯ ಲೋಕನಾಥಸ್ಯ ಸತ್ಕೃತಮ್ ॥ ೧೬॥

ಕಥಂ ನಾಮೋಪಧಾಸ್ಯಾಮಿ ಭುಜಮನ್ಯಸ್ಯ ಕಸ್ಯಚಿತ್।
ಅಹಮೌಪಯಿಕೀ ಭಾರ್ಯಾ ತಸ್ಯೈವ ವಸುಧಾಪತೇಃ ॥ ೧೭॥

ವ್ರತಸ್ನಾತಸ್ಯ ವಿಪ್ರಸ್ಯ ವಿಧೇರಿವ ವಿದಿತಾತ್ಮನಃ।
ಸಾಧುರಾವಣ ರಾಮೇಣ ಮಾಂ ಸಮಾನಯ ದುಃಖಿತಾಮ್ ॥ ೧೮॥

ವನೇ ವಾಸಿತಯಾ ಸಾರ್ಧಂ ಕರೇಣೇವ ಗಜಾಧಿಪಮ್।
ಮಿತ್ರಮೌಪಯಿಕಂ ಕರ್ತುಂ ರಾಮಃ ಸ್ಥಾನಂ ಪರೀಪ್ಸತಾ ॥ ೧೯॥

ವಧಂ ಚಾನಿಚ್ಛತಾ ಘೋರಂ ತ್ವಯಾಸೌ ಪುರುಷರ್ಷಭಃ।
ವಿದಿತಃ ಸ ಹಿ ಧರ್ಮಜ್ಞಃ ಶರಣಾಗತವತ್ಸಲಃ ॥ ೨೦॥

ಅನುಸರಿಸುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ನೀನು ವ್ಯರ್ಥವಾಗಿ ಪ್ರಣಯ ಪ್ರಲಾಪಗಳನ್ನು ಮಾಡುತ್ತಿರುವೆ. ಸತ್ಪುರುಷರ ಸದುಪದೇಶವನ್ನು ಕೇಳುವುದಿಲ್ಲ. ರಾಕ್ಷಸರ ನಾಶಕ್ಕಾಗಿ ನೀನು ತೊಡಗಿರುವಂತೆ ಕಾಣುತ್ತದೆ. ಸತ್ಪುರುಷರ ಉಪದೇಶಗಳನ್ನು ಗ್ರಹಿಸದಿರುವ ಅನೀತಿವಂತನಾದ ರಾಜನನ್ನು ಪಡೆದ ಸಮೃದ್ಧವಾದ ರಾಷ್ಟ್ರಗಳೂ, ನಗರಗಳೂ ವಿನಾಶಹೊಂದುತ್ತವೆ. ಅದೇ ರೀತಿಯಲ್ಲಿ ರಕ್ಷಗಳ ರಾಶಿಗಳಿಂದ ಸಮೃದ್ಧವಾಗಿರುವ ಈ ಲಂಕೆಯು ಅನೀತಿವಂತನಾದ, ಜಿತೇಂದ್ರಿಯನಲ್ಲದ ನಿನ್ನಂತಹ ರಾಜನನ್ನು ಪಡೆದು, ನೀನೊಬ್ಬನ ಅಪರಾಧದಿಂದಲೇ ಬಹಳ ಬೇಗ ವಿನಾಶಹೊಂದುತ್ತದೆ.॥೮-೧೨॥

ಎಲೈ ರಾವಣಾ! ದೂರದೃಷ್ಟಿಯಿಲ್ಲದೆ ತಾನು ಮಾಡುವ ಪಾಪಕರ್ಮದಿಂದಲೇ ವಿನಾಶಹೊಂದುವ ಪಾಪಕರ್ಮಿಯ ನಾಶದಿಂದ ಎಲ್ಲ ಪ್ರಾಣಿಗಳೂ ಸಂತೋಷಗೊಳ್ಳುತ್ತವೆ. ಪಾಪಿಯಾದ ನೀನು ನಾಶಹೊಂದಿದಾಗ ನಿನ್ನಿಂದ ವಂಚಿತರಾದ ಜನರು(ಅಹಿಂಸಕರಾದ ದೇವಗಂಧರ್ವರು) ಸಂತೋಷಗೊಂಡು 'ಭಯಂಕರನಾದ ಕ್ರೂರಿಯಾದ ರಾವಣನು ದೈವಯೋಗದಿಂದ ವಿನಾಶಹೊಂದಿದನು', ಇದು ತುಂಬಾ ಒಳ್ಳೆಯದಾಯಿತು ಎಂದು ಹೇಳಿಕೊಳ್ಳುವರು.॥೧೩-೧೪॥

ರಾವಣನೇ! ಐಶ್ವರ್ಯದಿಂದಾಗಲೀ, ಧರ್ಮದಿಂದಾಗಲೀ, ನನ್ನನ್ನು ಪ್ರಲೋಭನಗೊಳಿಸುವುದು ಸರ್ವಥಾ ಸಾಧ್ಯವಿಲ್ಲ. ಸೂರ್ಯನೊಡನೆ ಪ್ರಭೆಯು ಸೇರಿರುವಂತೆ ರಾಘವನೊಡನೆ ನಾನು ಯಾವಾಗಲೂ ಸೇರಿಕೊಂಡೇ ಇರುವೆನು.॥೧೫॥ ಲೋಕನಾಥನಾದ ಶ್ರೀರಾಮನ ತ್ರಿಲೋಕ ಸತ್ಕೃತವಾದ ಭುಜವನ್ನೇ ತಲೆದಿಂಬಾಗಿಸಿಕೊಳ್ಳುತ್ತಿದ್ದ ನಾನು ಬೇರೊಬ್ಬನ ಭುಜವನ್ನು ಹೇಗೆತಾನೇ ಆಶ್ರಯಿಸುವೆ?॥೧೬॥ ವೇದವ್ರತ ಗಳಿಂದ ಸ್ನಾತನಾದ, ಆತ್ಮಜ್ಞಾನಿಯಾದ ಬ್ರಾಹ್ಮಣನಿಗೆ ಬ್ರಹ್ಮವಿದ್ಯೆಯು ಯೋಗ್ಯವಾಗಿರುವಂತೆ, ಭೂಮಿಗೆ ಒಡೆಯನಾದ ಶ್ರೀರಾಮನಿಗೆ ಮಾತ್ರವೇ ನಾನು ಯೋಗ್ಯ ಭಾರ್ಯೆಯಾಗಿರುವೆನು.॥೧೭॥

ಎಲೈ ಸಾಧು ರಾವಣಾ! *ಆರಣ್ಯದಲ್ಲಿ ಸಂಚರಿಸುತ್ತಿರುವ ಹೆಣ್ಣಾನೆಯನ್ನು ಗಜರಾಜನೊಂದಿಗೆ ಸೇರಿಸುವಂತೆ, ಪತಿವಿಯೋಗದಿಂದ ದುಃಖಿತಳಾದ ನನ್ನನ್ನು ಶ್ರೀರಾಮನೊಡನೆ ಸೇರಿಸು. ಇದು ನಿನಗೆ ಉಚಿತವಾಗಿದೆ. ನಿನಗೆ ನಿನ್ನ ರಾಜ್ಯವನ್ನು ಉಳಿಸಿಕೊಳ್ಳಬೇಕೆಂಬ ಇಚ್ಛೆ ಇದ್ದರೆ, ರಾಕ್ಷಸರ ಘೋರವಾದ ವಧೆಯಲ್ಲಿ ನಿನಗೆ ಇಚ್ಛೆ ಇಲ್ಲದಿದ್ದರೆ, ಪುರುಷ ಶ್ರೇಷ್ಠನಾದ ಶ್ರೀರಾಮನಲ್ಲಿ ಸ್ನೇಹಬೆಳೆಸುವುದು ಮೇಲು. ಶ್ರೀರಾಮಚಂದ್ರನು ಸರ್ವಧರ್ಮಗಳನ್ನು ತಿಳಿದವನೂ, ಶರಣಾಗತವತ್ಸಲನೂ ಎಂದು ಪ್ರಸಿದ್ಧನಾದವನು. ನಿನಗೆ ಬದುಕುವ ಇಚ್ಛೆ ಇದ್ದರೆ ಅವನ ಸ್ನೇಹವನ್ನು

---

* ಇಲ್ಲಿ ಸಾಧುರಾವಣ ಎಂದು ಸಂಬೋಧಿಸಿದ ಭಾವ – ಉಪದೇಶಿಸುವಾಗ ಗೌರವ ಸೂಚಕವಾದ ಸಂಬೋಧನೆ. ಮೊದಲು ಸೀತಾಪಹರಣದ ಸಮಯದಲ್ಲಿ ಸಾಧುವೇಷದಿಂದ ಬಂದಿದ್ದ ಎಂದು.

ತೇನ ಮೈತ್ರೀ ಭವತು ತೇ ಯದಿ ಜೀವಿತುಮಿಚ್ಛಸಿ ।
ಪ್ರಸಾದಯಸ್ವ ತ್ವಂ ಚೈನಂ ಶರಣಾಗತವತ್ಸಲಮ್ ॥ ೨೧॥

ಮಾಂ ಚಾಸ್ಮೈ ಪ್ರಯತೋ ಭೂತ್ವಾ ನಿರ್ಯಾತಯಿತುಮರ್ಹಸಿ ।
ಏವಂ ಹಿ ತೇ ಭವೇತ್ ಸ್ವಸ್ತಿ ಸಂಪ್ರದಾಯ ರಘೂತ್ತಮೇ ॥ ೨೨॥

ಅನ್ಯಥಾ ತ್ವಂ ಹಿ ಕುರ್ವಾಣೋ ವಧಂ ಪಾಪ್ಸ್ಯಸಿ ರಾವಣ ।
ವರ್ಜಯೇದ್ವಜ್ರಮುತ್ಸೃಷ್ಟಂ ವರ್ಜಯೇದಂತಕಶ್ಚಿರಮ್ ॥ ೨೩॥

ತ್ವದ್ವಿಧಂ ತು ನ ಸಂಕ್ರುದ್ಧೋ ಲೋಕನಾಥಃ ಸ ರಾಘವಃ ।
ರಾಮಸ್ಯ ಧನುಷಃ ಶಬ್ದಂ ಶ್ರೋಷ್ಯಸಿ ತ್ವಂ ಮಹಾಸ್ವನಮ್ ॥ ೨೪॥

ಶತಕ್ರತುವಿಸೃಷ್ಟಸ್ಯ ನಿರ್ಘೋಷಮಶನೇರಿವ ।
ಇಹ ಶೀಘ್ರಂ ಸುಪರ್ವಾಣೋ ಜ್ವಲಿತಾಸ್ಯಾ ಇವೋರಗಾಃ ॥ ೨೫॥

ಇಷವೋ ನಿಪತಿಷ್ಯಂತಿ ರಾಮಲಕ್ಷ್ಮಣಲಕ್ಷಣಾಃ ।
ರಕ್ಷಾಂಸಿ ಪರಿನಿಘ್ನಂತಃ ಪುರ್ಯಾಮಸ್ಯಾಂ ಸಮಂತತಃ ॥ ೨೬॥

ಅಸಂಪಾತಂ ಕರಿಷ್ಯಂತಿ ಪತಂತಃ ಕಂಕವಾಸಸಃ ।
ರಾಕ್ಷಸೇಂದ್ರಮಹಾಸರ್ಪಾನ್ ಸ ರಾಮಗರುಡೋ ಮಹಾನ್ ॥ ೨೭॥

ಉದ್ಧರಿಷ್ಯತಿ ವೇಗೇನ ವೈನತೇಯ ಇವೋರಗಾನ್ ।
ಅಪನೇಷ್ಯತಿ ಮಾಂ ಭರ್ತಾ ತ್ವತ್ತಃ ಶೀಘ್ರಮರಿಂದಮಃ ॥ ೨೮॥

ಅಸುರೇಭ್ಯಃ ಶ್ರಿಯಂ ದೀಪ್ತಾಂ ವಿಷ್ಣುಸ್ತ್ರಿಭಿರಿವ ಕ್ರಮೈಃ ।
ಜನಸ್ಥಾನೇ ಹತಸ್ಥಾನೇ ನಿಹತೇ ರಕ್ಷಸಾಂ ಬಲೇ ॥ ೨೯॥

ಅಶಕ್ತೇನ ತ್ವಯಾ ರಕ್ಷಃ ಕೃತಮೇತದಸಾಧು ವೈ ।
ಆಶ್ರಮಂ ತು ತಯೋಃ ಶೂನ್ಯಂ ಪ್ರವಿಶ್ಯ ನರಸಿಂಹಯೋಃ ॥ ೩೦॥

ಗೋಚರಂ ಗತಯೋರ್ಭ್ರಾತ್ರೋರಪನೀತಾ ತ್ವಯಾಧಮ ।
ನ ಹಿ ಗಂದಮುಪಾಘ್ರಾಯ ರಾಮಲಕ್ಷ್ಮಮಯೋಸ್ತ್ವಯಾ ॥ ೩೧॥

ಬೆಳೆಸಿಕೊ.॥೧೮-೨೦॥ ಶರಣಾಗತವತ್ಸಲನಾದ ಶ್ರೀರಾಮನನ್ನು ನೀನು ಪ್ರಸನ್ನ ಗೊಳಿಸು. ಶುದ್ಧಹೃದಯದಿಂದ ವಿನೀತನಾಗಿ ನನ್ನನ್ನು ಅವನಿಗೆ ಒಪ್ಪಿಸಿಕೊಡು. ಅದೇ ನಿನಗೆ ಉಚಿತವಾಗಿದೆ. ಇದರಿಂದ ಅವನೂ ಪ್ರಸನ್ನನಾಗುವನು. ॥೨೧॥ ಎಲೈ ರಾವಣಾ! ನನ್ನ ಮಾತಿನಂತೆ ನನ್ನನ್ನು ಶ್ರೀರಾಮ ಚಂದ್ರಪ್ರಭುವಿಗೆ ಸಮರ್ಪಿಸುವುದರಿಂದ ನಿನಗೆ ಮಂಗಳ ಉಂಟಾದೀತು. ಇದಕ್ಕೆ ತಪ್ಪಿದರೆ ಮರಣವು ತಪ್ಪದು.॥೨೨॥ ಇಂದ್ರನು ಪ್ರಯೋಗಿಸಿದ ವಜ್ರಾಯುಧವಾದರೂ ನಿನ್ನನ್ನು ಕೊಲ್ಲದೆ ಇರಬಹುದು.ಯಮನು ಬಹಳಕಾಲ ನಿನ್ನ ಬಳಿಗೆ ಬರದೇ ಇರಬಹುದು, ಆದರೆ ಜಗತ್ಪತಿಯಾದ ರಾಘವನು ಕೋಪಗೊಂಡರೆ ನಿನ್ನಂತಹ ದುರುಳನನ್ನು ಜೀವಸಹಿತವಾಗಿ ಬಿಡಲಾರನು.॥೨೩॥ ಇಂದ್ರನು ಪ್ರಯೋಗಿಸಿದ ವಜ್ರಾಯುಧದ ಭಾರೀ ಶಬ್ದದಂತೆ - ಭೂಮ್ಯಾಕಾಶಗಳನ್ನು ನಡುಗಿಸುವಂತಹ ಶ್ರೀರಾಮನ ಧನುಷ್ಟಂಕಾರವನ್ನು ನೀನು ಬೇಗನೇ ಕೇಳಲಿರುವೆ.॥೨೪॥ ಒಳ್ಳೆಯ ಗಿಣ್ಣುಗಳನ್ನು ಹೊಂದಿರುವ ಬುಸುಗುಟ್ಟುವ ಮಹಾಸರ್ಪಗಳಂತೆ ಪ್ರಜ್ವಲಿಸುವ ತೀಕ್ಷ್ಣವಾದ ಅಗ್ರಭಾಗಗಳುಳ್ಳ ರಾಮ-ಲಕ್ಷ್ಮಣರ ಗುರುತು ಇರುವ ದಿವ್ಯವಾದ ಬಾಣಗಳು ಈ ಲಂಕಾಪಟ್ಟಣದ ಮೇಲೆ ಬೀಳುವವು. ಶ್ರೀರಾಮ-ಲಕ್ಷ್ಮಣರ ಗರಿಕಟ್ಟಿದ ಬಾಣಗಳು ಈ ಲಂಕಾನಗರದ ಮೇಲೆ ಮಳೆಯಂತೆ ಸುರಿದು ರಾಕ್ಷಸರನ್ನು ಸಂಹರಿಸುತ್ತಾ ಎಲ್ಲೆಡೆ ತುಂಬಿ ಹೋಗುತ್ತವೆ.॥೨೫-೨೬॥ ವೈನತೇಯನು ಸರ್ಪಗಳನ್ನು ಕ್ಷಣಮಾತ್ರದಲ್ಲಿ ಮೇಲೆತ್ತಿಕೊಂಡು ಹೋಗಿ ಕೊಲ್ಲುವಂತೆ ಮಹಾ ಪರಾಕ್ರಮಶಾಲಿಯದ ಶ್ರೀರಾಮರೂಪಿ ಗರುಡನು ಸರ್ಪರೂಪಿ ರಾಕ್ಷಸರನ್ನು ಬಹಳ ಬೇಗನೇ ಸಂಹರಿಸಲಿದ್ದಾನೆ. ॥೨೭॥ ಮಹಾವಿಷ್ಣುವು ತ್ರಿವಿಕ್ರಮನಾಗಿ ಮೂರೇ ಹೆಜ್ಜೆಗಳಿಂದ ಅಸುರರ ಅಪಾರ ಸಂಪತ್ತನ್ನು ಅಪಹರಿಸಿದಂತೆ, ಶತ್ರು ಸಂಹಾರಕನಾದ ನನ್ನ ಪತಿಯು ನಿನ್ನಿಂದ ನನ್ನನ್ನು ಕ್ಷಣಮಾತ್ರದಲ್ಲಿ ಬಿಡಿಸಿಕೊಂಡು ಹೋಗುತ್ತಾನೆ.॥೨೮॥ ಎಲೈ ರಾವಣಾ! ಜನಸ್ಥಾನದಲ್ಲಿ ಖರದೂಷಣಾದಿ ಸಹಿತ ಹದಿನಾಲ್ಕು ಸಾವಿರ ರಾಕ್ಷಸರು ಶ್ರೀರಾಮನಿಂದ ಮಣ್ಣುಗೂಡಿದರು. ಅದರಿಂದ ನಿನ್ನ ಅಧಿಕಾರದಲ್ಲಿದ್ದ ಒಂದು ಸೈನ್ಯವಸಾಹತು ಕೈಬಿಟ್ಟುಹೋಯಿತು. ಅಷ್ಟೇ ಅಲ್ಲದೆ ಶ್ರೀರಾಮನನ್ನು ಸಂಗ್ರಾಮದಲ್ಲಿ ಎದುರಿಸಲು ಸಾಮರ್ಥ್ಯವಿಲ್ಲದೆ ನೀನು ನನ್ನನ್ನು ಅಪಹರಿಸಿಕೊಂಡು ಬಂದು ದುಷ್ಕಾರ್ಯವನ್ನು ಮಾಡಿರುವೆ.॥೨೯॥

ಎಲೈ ಅಧಮಾಧಮನೇ! ಸಿಂಹಸದೃಶ ಪರಾಕ್ರಮಿಗಳಾದ ರಾಮ-ಲಕ್ಷ್ಮಣರಿಬ್ಬರೂ ಹೊರಗೆ ಹೋಗಿದ್ದಾಗ, ನೀನು ಕಳ್ಳನಂತೆ ಆಶ್ರಮವನ್ನು ಪ್ರವೇಶಿಸಿ ನನ್ನನ್ನು ಅಪಹರಿಸಿಕೊಂಡು ಬಂದಿರುವೆ.॥೩೦॥ಜೋಡಿಸಿಂಹಗಳ ವಾಸನೆಯನ್ನು ಮೂಸಿದ ನಾಯಿಗೆ ಅವುಗಳನ್ನು ದಿಟ್ಟಿಸಿ ನೋಡಲು ಸಾಧ್ಯವಾಗದಿರುವಂತೆ ರಾಮ-ಲಕ್ಷ್ಮಣರ ವಾಸನೆಯನ್ನು ಆಘ್ರಾಣಿಸಿದ ನೀನು ಅವರನ್ನು ನೋಡುವುದಾಗಲೀ, ಅವರ ಎದುರು

ಶಕ್ಯಂ ಸಂದರ್ಶನೇ ಸ್ಥಾತುಂ ಪುನಾ ಶಾರ್ದೂಲಯೋರಿವ ।
ತಸ್ಯ ತೇ ವಿಗ್ರಹೇ ತಾಭ್ಯಾಂ ಯುಗಗ್ರಹಣಮಸ್ಥಿರಮ್ ॥ ೩೨॥

ವೃತ್ರಸ್ಯೇವೇಂದ್ರ ಬಾಹುಭ್ಯಾಂ ಬಾಹೋರೇಕಸ್ಯ ನಿಗ್ರಹಃ ।
ಕ್ಷಪ್ರಂ ತವ ಸ ನಾಥೋ ಮೇ ರಾಮಃ ಸೌಮಿತ್ರಿಣಾ ಸಹ ।
ತೋಯಮಲ್ಪಮಿವಾದಿತ್ಯಃ ಪ್ರಾಣಾನಾದಾಸ್ಯತೇ ಶರೈಃ॥ ೩೩॥

ಗಿರಿಂ ಕುಬೇರಸ್ಯ ಗತೋಽಥವಾಲಯಂ
ಸಭಾಂ ಗತೋ ವಾ ವರುಣಸ್ಯ ರಾಜ್ಞಃ ।
ಅಸಂಶಯಂ ದಾಶರಥೇರ್ನ ಮೋಕ್ಷ್ಯಸೇ
ಮಹಾದ್ರುಮಃ ಕಾಲಹತೋಽ ಶನೇರಿವ ॥ ೩೪॥

ನಿಲ್ಲುವುದಾಗಲೀ, ಸಾಧ್ಯವಾಗದು.॥೩೨॥ ದೇವೇಂದ್ರನ ಎರಡು ತೋಳುಗಳೊಡನೆ ವೃತ್ರಾಸುರನು ಒಂದು ಬಾಹುವಿನಿಂದ ಪರಾಜಿತನಾದಂತೆ, ಚೋರವೃತ್ತಿಯವನಾದ ನಿನಗೆ ರಾಮ-ಲಕ್ಷ್ಮಣರೊಡನೆ ಯುದ್ಧ ಸಂಭವಿಸಿದರೆ ನಿನ್ನ ಪರಾಜಯವು ನಿಶ್ಚಿತವು. ॥೩೨॥ ಭಗವಾನ್ ಸೂರ್ಯನು ತನ್ನ ಕಿರಣಗಳಿಂದ ಸ್ವಲ್ಪ ನೀರಿರುವ ಹೊಂಡವನ್ನು ಒಣಗಿಸಿ ಬಿಡುವಂತೆ, ನನ್ನ ಪತಿಯಾದ ಶ್ರೀರಾಮನು ಸೌಮಿತ್ರಿಯಿಂದೊಡಗೂಡಿ ಬೇಗನೇ ಬಂದು ತೀಕ್ಷ್ಣವಾದ ಬಾಣಗಳಿಂದ ನಿನ್ನ ಪ್ರಾಣಗಳನ್ನು ಹೀರಿಬಿಡುತ್ತಾನೆ.

ನಿನಗೆ ವಿನಾಶಕಾಲವು ಸಮೀಪಿಸಿದೆ. ಮಹಾವೃಕ್ಷವು ಸಿಡಿಲಿನಿಂದ ತಪ್ಪಿಸಿಕೊಳ್ಳಲಾರದೋ, ಹಾಗೆಯೇ ಕಾಲಹತನಾಗಿರುವ ನೀನು ಕೈಲಾಸವನ್ನು ಹೊಕ್ಕರೂ, ಕುಬೇರನ ಅಲಕಾವತಿಯನ್ನು ಪ್ರವೇಶಿಸಿದರೂ, ವರುಣನ ಸಭೆಯಲ್ಲಿ ಆಶ್ರಯಪಡೆದರೂ ದಾಶರಥಿಯ ಬಾಣಗಳಿಂದ ತಪ್ಪಿಸಿ ಕೊಳ್ಳಲಾರೆ. ಇದರಲ್ಲಿ ಸಂಶಯವೇ ಇಲ್ಲ.॥೩೩-೩೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ದ್ವಿಚತ್ವಾರಿಂಶಃ ಸರ್ಗಃ ॥ ೨೨ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೆರಡೆನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತೆರಡನೆಯ ಸರ್ಗ

ರಾವಣನು ಸೀತೆಗೆ ಎರಡು ತಿಂಗಳ ಗಡುವನ್ನು ನೀಡಿದುದು, ಸೀತೆಯು ನಿರಾಕರಿಸಿದುದು – ರಾವಣನು ಸೀತೆಯನ್ನು ರಾಕ್ಷಸಿಯರ ವಶಕ್ಕೊಪ್ಪಿಸಿ ಅರಮನೆಯನ್ನು ಸೇರಿದುದು –

ಸೀತಾಯಾ ವಚನಂ ಶ್ರುತ್ವಾ ಪರುಷಂ ರಾಕ್ಷಸಾಧಿಪಃ ।
ಪ್ರತ್ಯುವಾಚ ತತಃ ಸೀತಾಂ ವಿಪ್ರಿಯಂ ಪ್ರಿಯದರ್ಶನಾಮ್ ॥ ೧॥

ಯಥಾ ಯಥಾ ಸಾಂತ್ವಯಿತಾ ವಶ್ಯಃ ಸ್ತ್ರೀಣಾಂ ತಥಾ ತಥಾ ।
ಯಥಾ ಯಥಾ ಪ್ರಿಯಂ ವಕ್ತಾ ಪರಿಭೂತಸ್ತಥಾ ತಥಾ ॥ ೨॥

ಸಂನಿಯಚ್ಛತಿ ಮೇ ಕ್ರೋಧಂ ತ್ವಯಿ ಕಾಮಃ ಸಮುತ್ಥಿತಃ ।
ದ್ರವತೋಽಮಾರ್ಗಮಾಸಾದ್ಯ ಹಯಾನಿವ ಸುಸಾರಥಿಃ ॥ ೩॥

ನಾಮಃ ಕಾಮೋ ಮನುಷ್ಯಾಣಾಂ ಯಸ್ಮಿನ್ ಕಿಲ ನಿಬದ್ಧತೇ ।
ಜನೇ ತಸ್ಮಿನ್ನಸೂಕ್ರೋಶಃ ಸ್ನೇಹಶ್ಚ ಕಿಲ ಜಾಯತೇ ॥ ೪॥

ರಾಕ್ಷಸೇಶ್ವರನಾದ ರಾವಣನು ಸೀತಾದೇವಿಯ ಕಠೋರವಾದ ಮಾತುಗಳನ್ನು ಕೇಳಿ ಪ್ರಿಯದರ್ಶನಳಾದ ಸೀತಾದೇವಿಗೆ ಅಪ್ರಿಯವಾಗಿ ಹೀಗೆ ಹೇಳಿದನು-॥೧॥ ''ಲೋಕದಲ್ಲಿ ಪುರುಷನು ಸ್ತ್ರೀಯನ್ನು ಸಾಂತ್ವನಗೊಳಿಸಿದಷ್ಟು ಅವನು ಸ್ತ್ರೀಯಳಿಗೆ ಅಧೀನನಾಗುತ್ತಾನೆ. ಅವರನ್ನು ತನಗೆ ಅನುಕೂಲವಾಗಿಸಿಕೊಳ್ಳಲು ಪ್ರಿಯವಚನಗಳನ್ನು ಆಡಿದಷ್ಟು ಅವರಿಂದ ಇನ್ನೂ ತಿರಸ್ಕಾರಕ್ಕೆ ಗುರಿಯಾಗುತ್ತಾನೆ.॥೨॥ ಹದ್ದು ಮೀರಿ ಹೋಗುತ್ತಿರುವ ಕುದುರೆಗಳನ್ನು ನಿಪುಣನಾದ ಸಾರಥಿಯು ಸರಿದಾರಿಗೆ ತರುವಂತೆ, ನಿನ್ನ ಮಾತನ್ನು ಕೇಳಿ ಉಕ್ಕಿಬರುತ್ತಿರುವ ನನ್ನ ಕೋಪವನ್ನು ನಿನ್ನ ವಿಷಯದಲ್ಲಿ ನನಗುಂಟಾದ ಪ್ರೇಮವು ತಡೆಯುತ್ತಿದೆ.॥೩॥ ಉತ್ಕಟವಾದ ವ್ಯಾಮೋಹವಿರುವ ಜನರು ನಮಗೆ ಪ್ರತಿಕೂಲವಾಗಿ ವರ್ತಿಸಿದರೂ ಅವರ ಮೇಲೆ ಕೋಪವು ಬರುವುದಿಲ್ಲವಲ್ಲ! ಅವರ ಕುರಿತು ದಯೆ, ಪ್ರೇಮ, ಹೆಚ್ಚುತ್ತಲೇ ಇದ್ದು, ಶಕ್ತಿಯು ಕುಂಠಿತವಾಗುತ್ತದೆ.॥೪॥

ಏತಸ್ಮಾತ್ ಕಾರಣಾನ್ನ ತ್ವಾಂ ಘಾತಯಾಮಿ ವರಾನನೇ ।
ವಧಾರ್ಹಾನುಪಮಾನಾರ್ಹಾಂ ಭಿಕ್ಷುಕವ್ರತಚಾರಿಣೀಮ್ ॥ ೫॥

ಪರುಷಾಣೀಹ ವಾಕ್ಯಾನಿ ಯಾನಿ ಯಾನಿ ಬ್ರವೀಷಿ ಮಾಮ್ ।
ತೇಷು ತೇಷು ವಧೋ ಯುಕ್ತಸ್ತವ ಮೈಥಿಲಿ ದಾರುಣಃ ॥ ೬॥

ಏವಮುಕ್ತ್ವಾತು ವೈದೇಹೀಂ ರಾವಣೋ ರಾಕ್ಷಸಾಧಿಪಃ ।
ಕ್ರೋಧಸಂರಂಭಸಂಯುಕ್ತಃ ಸೀತಾಮುತ್ತರಮಬ್ರವೀತ್ ॥ ೭॥

ದ್ವೌ ಮಾಸೌ ರಕ್ಷಿತವ್ಯೌ ಮೇ ಯೋಽವಧಿಸ್ತೇ ಮಯಾ ಕೃತಃ ।
ತತಃ ಶಯನಮಾರೋಹ ಮಮ ತ್ವಂ ವರವರ್ಣಿನಿ ॥ ೮॥

ದ್ಯಾಮ್ಯಾಮೂರ್ಧ್ವಂ ತು ಮಾಸಾಭ್ಯಾಂ ಭರ್ತಾರಂ ಮಾಮನಿಚ್ಛತೀಮ್ ।
ಮಮ ತ್ವಾಂ ಪ್ರಾತರಾಶಾರ್ಥೀಮಾಲಭಂತೇ ಮಹಾನಸೇ ॥ ೯॥

ತಾಂ ತರ್ಜ್ಯಮಾನಾಂ ಸಂಪ್ರೇಕ್ಷ್ಯ ರಾಕ್ಷಸೇಂದ್ರೇಣ ಜಾನಕೀಮ್।
ದೇವಗಂಧರ್ವಕನ್ಯಾಸ್ತಾ ವಿಷೇದುರ್ವಿಕೃತೇಕ್ಷಣಾಃ ॥ ೧೦॥

ಓಷ್ಠ ಪ್ರಕಾರೈರಪರಾ ವಕ್ತ್ರೈರ್ನೇತ್ರೈಸ್ತಥಾಪರಾಃ ।
ಸೀತಾಮಾಶ್ವಾಸಯಾಮಾಸುಸ್ತರ್ಜಿತಾಂ ತೇನ ರಕ್ಷಸಾ ॥ ೧೧॥

ತಾಭಿರಾಶ್ವಾಸಿತಾ ಸೀತಾ ರಾವಣಂ ರಾಕ್ಷಸಾಧಿಪಮ್ ।
ಉವಾಚಾತ್ಮಹಿತಂ ವಾಕ್ಯಂ ವೃತ್ತಶೌಂಡೀರ್ಯಗರ್ವಿತಮ್ ॥ ೧೨॥

ನೂನಂ ನ ತೇ ಜನಃ ಕಶ್ಚಿದಸ್ತಿ ನಿಶ್ರೇಯಸೇ ಸ್ಥಿತಃ ।
ನಿವಾರಯತಿ ಯೋ ನ ತ್ವಾಂ ಕರ್ಮಣೋಽಸ್ಮಾದ್ವಿಗರ್ಹಿತಾತ್ ॥ ೧೩॥

ಮಾಂ ಹಿ ಧರ್ಮಾತ್ಮನಃ ಪತ್ನೀಂ ಶಚೀಮಿವ ಶಚೀಪತೇಃ ।
ತ್ವದನ್ಯಸ್ತ್ರಿಷು ಲೋಕೇಷು ಪ್ರಾರ್ಥಯೇನ್ನಸಾಪಿ ಕಃ ॥ ೧೪॥

ರಾಕ್ಷಸಾಧಮ ರಾಮಸ್ಯ ಭಾರ್ಯಾಮಮಿತತೇಜಸಃ ।
ಉಕ್ತವಾನಸಿ ಯತ್ ಪಾಪಂ ಕ್ವ ಗತಸ್ಯ ಮೋಕ್ಷ್ಯಸೇ ॥ ೧೫॥

ಎಲೈ ಸುಮುಖಿಯೇ! ಈ ಕಾರಣದಿಂದಲೇ ನೀನು ವಧಾರ್ಹಳಾಗಿದ್ದರೂ, ಅಪಮಾನಗೊಳಿಸಲು ತಕ್ಕವಳಾದರೂ, ಕಪಟ ಸಂನ್ಯಾಸಿಯಂತೆ ಕಾಡಿನಲ್ಲಿ ಅಲೆದಾಡುತ್ತಿರುವ ರಾಮನಲ್ಲಿಯೇ ಅನುರಕ್ತಳಾಗಿರುವ ನಿನ್ನನ್ನು ಶಿಕ್ಷಿಸುತ್ತಿಲ್ಲ.॥೫॥ ಎಲೈ ಮೈಥಿಲಿ! ನೀನು ನನ್ನ ವಿಷಯದಲ್ಲಿ ಆಡಿದ ಕರ್ಣ ಕಠೋರವಾದ ಒಂದೊಂದು ಮಾತಿಗೂ ದಾರುಣವಾದ ಮರಣದಂಡನೆಯನ್ನು ವಿಧಿಸಲು ಅರ್ಹವಾಗಿದೆ.॥೬॥ ರಾಕ್ಷಸರಾಜನಾದ ರಾವಣನು ವೈದೇಹಿಯಬಳಿ ಹೀಗೆ ಹೇಳಿ ಕೋಪೋದ್ರಿಕ್ತನಾಗಿ ಮರಳಿ ಅವಳಲ್ಲಿ ಹೀಗೆ ನುಡಿದನು.॥೭॥ ಎಲೈ ವರವರ್ಣಿನಿ! ನಾನು ಈ ಹಿಂದೆ ನನಗೆ ವಶಳಾಗಲು ಹನ್ನೆರಡು ತಿಂಗಳುಗಳ ಅವಧಿಯನ್ನು ನಿನಗೆ ಕೊಟ್ಟಿದ್ದೆ, ಅವುಗಳಲ್ಲಿ ಎರಡು ಮಾಸಗಳೂ ಮಾತ್ರ ಉಳಿದಿವೆ. ಆ ಎರಡು ಮಾಸಗಳು ನಾನು ವ್ರತಕ್ಷೆ ಮಾಡುತ್ತೇನೆ. ಆಪ್ಪರೋಳಗಾಗಿ ನೀನು ನನಗೆ ವಶಳಾಗಬೇಕು.॥೮॥ ಈ ಎರಡು ತಿಂಗಳು ಕಳೆದ ನಂತರವೂ ನೀನು ನನ್ನನ್ನು ಪತಿಯನ್ನಾಗಿ ಸ್ವೀಕರಿಸದಿದ್ದರೆ, ನನ್ನ ಅಡಿಗೆಯವರು ನಿನ್ನನ್ನು ಬೆಳಗ್ಗಿನ ಉಪಹಾರಕ್ಕಾಗಿ ಕತ್ತರಿಸಿ ತುಂಡು-ತುಂಡುಮಾಡಿ ಬಿಡುತ್ತಾರೆ.''॥೯॥

ರಾಕ್ಷಸೇಂದ್ರನಾದ ರಾವಣನು ಈ ವಿಧವಾಗಿ ಸೀತಾ ದೇವಿಯನ್ನು ಬೆದರಿಸುತ್ತಿರಲು, ಅವನ ಸಮೀಪದಲ್ಲಿದ್ದ ದೇವ, ಗಂಧರ್ವ ಕನ್ಯೆಯರು ವಿಷಾದ ಪಟ್ಟರು. ಅವರ ಕಣ್ಣುಗಳಲ್ಲಿ ನೀರು ತುಂಬಿ ವಿಕಾರವಾಗಿ ಕಾಣುತ್ತಿದ್ದರು.॥೧೦॥ ಅವರಲ್ಲಿ ಕೆಲವರು ತುಟಿಗಳ ಸ್ಪಂದನದಿಂದಲೂ, ಕೆಲವರು ಕಣ್ಣುಗಳ ನೋಟದಿಂದಲೂ, ಕೆಲವರು ಮುಖಭಾವಗಳಿಂದಲೂ, ಸೀತಾ ದೇವಿಯನ್ನು ಸಂತೈಸಿದರು. ರಾವಣನ ಭಯದಿಂದ ಯಾರೂ ಮಾತಾಡದೆ ಮುಖ-ನೇತ್ರ, ಅಧರ ಸಂಜ್ಞೆಗಳಿಂದಲೇ ಅನುಕಂಪವನ್ನು ತೋರಿಸುತ್ತಿದ್ದರು.॥೧೧॥ ಈ ವಿಧವಾಗಿ ಅವರಿಂದ ಸಮಾಧಾನಗೊಳಿಸಲ್ಪಟ್ಟ ಸೀತಾದೇವಿಯು ರಾವಣನಿಗೆ ತನ್ನ ಪಾತಿವ್ರತ್ಯದ ಬಲ-ಗರ್ವದಿಂದ ಅವನ ಆತ್ಮ ಹಿತಕ್ಕೆ ಸಾಧಕವಾದ ಈ ಮಾತುಗಳನ್ನು ಹೇಳಿದಳು-॥೧೨॥

''ನಿಶ್ಚಯವಾಗಿಯೂ ಈ ಲಂಕೆಯಲ್ಲಿ ನಿನ್ನ ಅಭ್ಯುದಯದಲ್ಲಿ ಆಸಕ್ತನಾಗಿರುವ ಯಾರೊಬ್ಬನೂ ಇಲ್ಲವೆಂದೇ ತೋರುತ್ತದೆ. ಏಕೆಂದರೆ, ಇಂತಹ ನಿಂದನೀಯ ಕಾರ್ಯದಿಂದ ವಿಮುಖನನ್ನಾಗಿಸಲು ಯಾರೂ ಮುಂದೆ ಬರುತ್ತಿಲ್ಲವಲ್ಲ.॥೧೩॥ ದೇವೇಂದ್ರನಿಗೆ ಶಚೀದೇವಿಯಂತೆ, ಧರ್ಮಾತ್ಮವಾದ ಶ್ರೀರಾಮನಿಗೆ ನಾನು ಧರ್ಮಪತ್ನಿಯು. ಅಂತಹ ನನ್ನನ್ನು ಈ ಮೂರ್ಲೋಕಗಳಲ್ಲಿ ಯಾರೂ ಮನಸ್ಸಿನಿಂದ ಬಯಸಲಾರರು.ನೀನು ಮಾತ್ರ ಇಂತಹ ದುಸ್ಸಾಹಸಕ್ಕೆ ಕೈಯಿಕ್ಕಿರುವೆ. ॥೧೪॥ ಎಲೈ ರಾಕ್ಷಸಾಧಮನೆ! ಮಹಾತೇಜಸ್ವಿಯಾದ ಶ್ರೀರಾಮನ ಭಾರ್ಯೆಯಾದ ನನ್ನ ಕುರಿತು ಮಹಾಪಾಪ ಕರವಾದ ಮಾತುಗಳನ್ನಾಡುತ್ತಿರುವ ನೀನು ಎಲ್ಲಿಗೆ ಹೋಗಿ ಈ ಪಾಪದಿಂದ ತಪ್ಪಿಸಿಕೊಳ್ಳುವೆ?॥೧೫॥ ನೀನು ರಾಮನೊಡನೆ ಯುದ್ಧಕ್ಕೆ ಸಿದ್ಧನಾದರೆ, ಕಾಡಿನಲ್ಲಿರುವ ಮೊಲವು ಮದ

ಯಥಾ ದೃಪ್ತಶ್ಚ ಮಾತಂಗಃ ಶಶಶ್ಚ ಸಹಿತೋ ವನೇ ।
ತಥಾ ದ್ವಿರದವದ್ರಾಮಸ್ತ್ವಂ ನೀಚ ಶಶವತ್ ಸ್ಮೃತಃ ॥ ೧೬॥

ಸ ತ್ವಮಿಕ್ಷ್ವಾಕುನಾಥಂ ವೈಕ್ಷಿಪನ್ನಿಹ ನ ಲಜ್ಜಸೇ ।
ಚಕ್ಷುಷೋರ್ವಿಷಯಂ ತಸ್ಯ ನ ತಾವದುಪಗಚ್ಛಸಿ ॥ ೧೭॥

ಇಮೇ ತೇ ನಯನೇ ಕ್ರೂರೇ ವಿರೂಪೇ ಕೃಷ್ಣಪಿಂಗಲೇ ।
ಕ್ಷಿತೌ ನ ಪತಿತೇ ಕಸ್ಮಾನ್ಮಾಮನಾರ್ಯ ನಿರೀಕ್ಷತಃ ॥ ೧೮॥

ತಸ್ಯ ಧರ್ಮಾತ್ಮನಃ ಪತ್ನೀಂ ಸ್ನುಷಾಂ ದಶರಥಸ್ಯ ಚ ।
ಕಥಂ ವ್ಯಾಹರತೋ ಮಾಂ ತೇ ನ ಜಿಹ್ವಾ ವ್ಯವಶೀರ್ಯತೇ ॥ ೧೯॥

ಅಸಂದೇಶಾತ್ತು ರಾಮಸ್ಯ ತಪಸಶ್ಚಾನು ಪಾಲನಾತ್ ।
ನ ತ್ವಾಂ ಕುರ್ಮಿ ದಶಗ್ರೀವ ಭಸ್ಮ ಭಸ್ಮಾರ್ಹತೇಜಸಾ ॥ ೨೦॥

ನಾಪಹರ್ತುಮಹಂ ಶಕ್ಯಾ ತಸ್ಯ ರಾಮಸ್ಯ ಧೀಮತಃ ।
ವಿಧಿಸ್ತವ ವಧಾರ್ಥಾಯ ವಿಹಿತೋ ನಾತ್ರ ಸಂಶಯಃ ॥ ೨೧॥

ಶೂರೇಣ ಧನದಭ್ರಾತ್ರಾ ಬಲೈಃ ಸಮುದಿತೇನ ಚ ।
ಅಪೋಹ್ಯ ರಾಮಂ ಕಸ್ಮಾದ್ಧಿ ದಾರಚೌರ್ಯಂ ತ್ವಯಾ ಕೃತಮ್॥

ಸೀತಾಯಾ ವಚನಂ ಶ್ರುತ್ವಾ ರಾವಣೋ ರಾಕ್ಷಸಾಧಿಪಃ ।
ವಿವೃತ್ಯ ನಯನೇ ಕ್ರೂರೇ ಜಾನಕೀಮನ್ವವೈಕ್ಷತ ॥ ೨೩॥

ನೀಲಜೀಮೂತಸಂಕಾಶೋ ಮಹಾಭುಜಶಿರೋಧರಃ ।
ಸಿಂಹಸತ್ತ್ವಗತಿಃ ಶ್ರೀಮಾನ್ ದೀಪ್ತಜಿಹ್ವಾಗ್ರಲೋಚನಃ ॥ ೨೪॥

ಚಲಾಗ್ರಮುಕುಟಪ್ರಾಂಶುಶ್ಚಿತ್ರ ಮಾಲ್ಯಾನುಲೇಪನಃ ।
ರಕ್ತಮಾಲ್ಯಾಂಬರಧರಸ್ತಪ್ತಾಂಗದವಿಭೂಷಣಃ ॥ ೨೫॥

ಶ್ರೋಣಿಸೂತ್ರೇಣ ಮಹತಾ ಮೇಚಕೇನ ಸುಸಂವೃತಃ ।
ಅಮೃತೋತ್ಪಾದನದ್ಧೇನ ಭುಜಂಗೇನೇವ ಮಂದರಃ ॥ ೨೬॥

ಭರಿತವಾದ ಗಜವನ್ನು ಇದಿರಿಸಿದಂತೇ ಆದೀತು. ರಾಮನು ಮದಗಜದಂತಿದ್ದರೆ ನೀನು ಕ್ಷುದ್ರವಾದ ಮೊಲದಂತಿರುವೆ. ॥೧೬॥ ಅಂದು ಇಕ್ಷ್ವಾಕುಪ್ರಭುವಾದ ಶ್ರೀರಾಮನನ್ನು ಮಾಯಾಮೃಗದ ನೆಪದಿಂದ ಆಶ್ರಮದಿಂದ ದೂರ ಹೋಗುವಂತೆಮಾಡಿ, ನನ್ನನ್ನು ಅಪಹರಿಸಿರುವಿ. ಅವನ ಪರೋಕ್ಷದಲ್ಲಿ ಈಗ ಈರೀತಿ ಗಳಹಲು ನಿನಗೆ ನಾಚಿಕೆಯಾಗುವುದಿಲ್ಲವೇ?॥೧೭॥ ಎಲೈ ಅನಾರ್ಯನೇ! ನನ್ನನ್ನೇ ದುರ-ದುರನೆ ನೋಡುತ್ತಿರುವ ನಿನ್ನ ವಿರೂಪವಾದ, ಕ್ರೂರವಾದ, ಕೃಷ್ಣಪಿಂಗಳ ವರ್ಣವುಳ್ಳ ಕಣ್ಣುಗಳೇಕೆ ಇನ್ನೂ ಕಳಚಿ ಬೀಳುತ್ತಿಲ್ಲ?॥೧೮॥ ಎಲೈ ಪಾಪಿಷ್ಠನೇ! ನಾನು ಧರ್ಮಾತ್ಮನಾದ ಶ್ರೀರಾಮನ ಭಾರ್ಯೆಯು. ದಶರಥ ಮಹಾರಾಜರ ಸೊಸೆಯು. ನನ್ನ ಕುರಿತು ಆಡಬಾರದ ಮಾತುಗಳನ್ನು ಆಡುತ್ತಿರುವ ನಿನ್ನ ನಾಲಿಗೆ ಏಕೆ ಸೀಳಿಹೋಗುವುದಿಲ್ಲ?॥೧೯॥ ದಶಕಂಠನೇ! ನೀನು ಭಸ್ಮವಾಗಲೂ ಅರ್ಹನಾದವನು. ನನ್ನ ತಪಃಪ್ರಭಾವದಿಂದ, ಪಾತಿವ್ರತ್ಯದ ಮಹಿಮೆಯಿಂದ ನಿನ್ನನ್ನು ಭಸ್ಮಮಾಡಿ ಬಿಡಬಲ್ಲೆ! ಆದರೆ ಹೀಗೆ ಮಾಡಲು ರಾಮನ ಆಜ್ಞೆಯಿಲ್ಲ. ಆದರಿಂದ ನೀನು ಬದುಕಿರುವೆ.॥೨೦॥ಧೀಮಂತನಾದ ಶ್ರೀರಾಮನ ಪತ್ನಿಯಾದ ನನ್ನನ್ನು ಅಪಹರಿಸಿಕೊಂಡು ಬರಲು ನಿನಗೆ ಖಂಡಿತವಾಗಿ ಸಾಧ್ಯವಾಗುತ್ತಿರಲಿಲ್ಲ. ಆದರೆ ನಿನಗೆ ಸಾವು ಬಳಿ ಬಂದಿರುವುದರಿಂದಲೇ ವಿಧಿಯು ಈ ಸಂಚು ಹೂಡಿದೆ. ಇದರಲ್ಲಿ ಸಂದೇಹವೇ ಇಲ್ಲ.॥೨೧॥"ನಾನು ಪರಾಕ್ರಮಿಯು, ಕುಬೇರನ ಸಹೋದರನು, ಅಪಾರ ಬಲಸಂಪನ್ನನು, ಅಮಿತ ಸೇನೆ ನನ್ನ ಬಳಿ ಇದೆ" ಎಂದು ಜಂಬಕೊಚ್ಚಿಕೊಳ್ಳುತ್ತಿರುವೆಯಲ್ಲ! ಅಂತಹ ನೀನು ಮೋಸದಿಂದ ಶ್ರೀರಾಮನನ್ನು ಬಹಳ ದೂರಕ್ಕೆ ಹೋಗುವಂತೆಮಾಡಿ, ಕಳ್ಳನಂತೆ ಪರಸತಿಯನ್ನು ಏಕೆ ಅಪಹರಿಸಿಕೊಂಡು ಬಂದೆ? ನಿನ್ನಲ್ಲ ನಿಜವಾದ ಶಕ್ತಿಯಿದ್ದಿದ್ದರೆ ಅವನೆದುರು ಏಕೆ ಬರಲಿಲ್ಲ? ॥೨೨॥

ರಾಕ್ಷಸಾಧಿಪತಿಯಾದ ರಾವಣನು ಸೀತಾದೇವಿಯ ಮಾತನ್ನು ಕೇಳಿ ಪರಮಕ್ರುದ್ಧನಾಗಿ ಕ್ರೂರವಾದ ಕಣ್ಣುಗಳನ್ನು ಅಗಲಿಸಿ ಜಾನಕಿಯನ್ನು ದುರು-ದುರನೆ ನೋಡಿದನು.॥೨೩॥

ರಾವಣನು ನೀಲಮೇಘ ಸದೃಶನಾಗಿದ್ದನು. ಅವನಿಗೆ ದೊಡ್ಡ ಭುಜಗಳಿದ್ದವು. ದಪ್ಪವಾದ ಕುತ್ತಿಗೆಯಿತ್ತು. ಅವನು ಸಿಂಹ ಪರಾಕ್ರಮನೂ, ಸಿಂಹದಂತೆ ನಡಿಗೆಯುಳ್ಳವನೂ ಆಗಿದ್ದನು. ಶ್ರೀಸಂಪನ್ನನಾಗಿದ್ದನು. ಅವನ ನಾಲಿಗೆಯ ತುದಿಯೂ, ಕಣ್ಣುಗಳೂ ದೇದಿಪ್ಯಮಾನವಾಗಿ ಹೊಳೆಯುತ್ತಿದ್ದವು. ಕೋಪದ ಕಾರಣದಿಂದ ಅವನ ಕಿರೀಟದ ತುದಿಯು ಅಲ್ಲಾಡುತ್ತಿದ್ದು ಬಹಳ ಎತ್ತರವಾಗಿರುವಂತೆ ಕಾಣುತ್ತಿದ್ದನು. ವಿಚಿತ್ರವಾದ ಮಾಲೆಗಳನ್ನು ಧರಿಸಿದ್ದು, ಮೈಗೆ ಗಂಧವನ್ನು ಪೂಸಿಕೊಂಡಿದ್ದನು. ಕೆಂಪಾದ ಮಾಲೆಗಳನ್ನು ಮತ್ತು ವಸ್ತ್ರಗಳನ್ನು ಧರಿಸಿದ್ದನು. ಪುಟಕ್ಕೆ ಹಾಕಿದ ಚಿನ್ನದಿಂದ ಮಾಡಿದ ತೋಳ್ಬಳೆಗಳಿಂದ ವಿಭೂಷಿತನಾಗಿದ್ದನು. ಅಮೃತಕ್ಕಾಗಿ ಸಮುದ್ರವನ್ನು ಕಡೆದಾಗ ವಾಸುಕಿಯಿಂದ ಸುತ್ತು ವರಿಯಲ್ಪಟ್ಟ ಮಂದರ ಪರ್ವತದಂತೆ, ಮಹಾಮೌಲ್ಯದ

ತಾಭ್ಯಾಂ ಸ ಪರಿಪೂರ್ಣಾಭ್ಯಾಂ ಭುಜಾಭ್ಯಾಂ ರಾಕ್ಷಸೇಶ್ವರಃ ।
ಶುಶುಭೇಽಚಲಸಂಕಾಶಃ ಶೃಂಗಾಭ್ಯಾಮಿವ ಮಂದರಃ ॥ ೨೭॥

ತರುಣಾದಿತ್ಯವರ್ಣಾಭ್ಯಾಂ ಕುಂಡಲಾಭ್ಯಾಂ ವಿಭೂಷಿತಃ ।
ರಕ್ತಪಲ್ಲವಪುಷ್ಪಾಭ್ಯಾಮಶೋಕಾಭ್ಯಾಮಿವಾಚಲಃ ॥ ೨೮॥

ಸ ಕಲ್ಪವೃಕ್ಷಪ್ರತಿಮೋ ವಸಂತ ಇವ ಮೂರ್ತಿಮಾನ್ ।
ಶ್ಮಶಾನಚೈತ್ಯಪ್ರತಿಮೋ ಭೂಷಿತೋಪಿ ಭಯಂಕರಃ ॥ ೨೯॥

ಅವೇಕ್ಷಮಾಣೋ ವೈದೇಹೀಂ ಕೋಪಸಂರಕ್ತಲೋಚನಃ ।
ಉವಾಚ ರಾವಣಃ ಸೀತಾಂ ಭುಜಂಗ ಇವ ನಿಶ್ವಸನ್ ॥ ೩೦॥

ಅನಯೇನಾಭಿಸಂಪನ್ನ ಮರ್ಥಹೀನಮನುವ್ರತೇ ।
ನಾಶಯಾಮ್ಯಹಮದ್ಯ ತ್ವಾ ಸೂರ್ಯಃ ಸಂಧ್ಯಾಮಿವೌಜಸಾ ॥ ೩೧॥

ಇತ್ಯುಕ್ತ್ವಾ ಮೈಥಿಲೀಂ ರಾಜಾ ರಾವಣಃ ಶತ್ರು ರಾವಣಃ ।
ಸಂದಿದೇಶ ತತಃ ಸರ್ವಾ ರಾಕ್ಷಸೀರ್ಘೋರದರ್ಶನಾಃ ॥ ೩೨॥

ವಿಕಾಕ್ಷೀಮೇಕಕರ್ಣಾಂ ಚ ಕರ್ಣಪ್ರಾವರಣಾಂ ತಥಾ ।
ಗೋಕರ್ಣೀಂ ಹಸ್ತಿಕರ್ಣೀಂ ಚ ಲಂಬಕರ್ಣೀಮಕರ್ಣಕಾಮ್ ॥ ೩೩॥

ಹಸ್ತಿಪಾದ್ಯಶ್ವಪಾದ್ಯೌ ಚ ಗೋಪದೀಂ ಪಾದಚೂಲಿಕಾಮ್ ।
ವಿಕೃಷ್ಟಮೇಕಪಾದೀಂ ಚ ಪೃಥುಪಾದೀಮಪಾದಿಕಾಮ್ ॥ ೩೪॥

ಅತಿಮಾತ್ರಶಿರೋಗ್ರೀವಾಮತಿಮಾತ್ರಕುಚೋದರೀಮ್ ।
ಅತಿಮಾತ್ರಾಸ್ಯನೇತ್ರಾಂ ಚ ದೀರ್ಘಜಿಹ್ವಾಮಜಿಹ್ಮಿಕಾಮ್ ॥ ೩೫॥

ಅನಾಸಿಕಾಂ ಸಿಂಹಮುಖೀಂ ಗೋಮುಖೀಂ ಸೂಕರೀಮುಖೀಮ್ ।
ಯಥಾ ಮದ್ವಶಗಾ ಸೀತಾ ಕ್ಷಿಪ್ರಂ ಭವತಿ ಜಾನಕೀ ॥ ೩೬॥

ನೀಲವರ್ಣದ ಕಟಿಸೂತ್ರದಿಂದ ಸಮಾವೃತನಾಗಿದ್ದನು. ಪರ್ವತ ಸದೃಶನಾದ ರಾಕ್ಷಸೇಶ್ವರನು ಸುಪ್ರಸಿದ್ಧವಾದ ಅತಿ ಪುಷ್ಪವಾದ ಎರಡು ಬಾಹುಗಳಿಂದ ಕೂಡಿದ್ದು ಎರಡು ಶಿಖರ ವುಳ್ಳ ಮಂದರಾಚಲದಂತೆ ಶೋಭಿಸುತ್ತಿದ್ದನು.॥೨೪-೨೭॥ ಬಾಲಸೂರ್ಯನಂತೆ ಥಳ-ಥಳಿಸುತ್ತಿದ್ದ ಕುಂಡಲಗಳನ್ನು ಧರಿಸಿದ್ದ ರಾವಣನು ಕೆಂಪಾದ ಚಿಗುರುಗಳಿಂದಲೂ, ಹೂವುಗಳಿಂದಲೂ, ಕೂಡಿದ ಎರಡು ಅಶೋಕವೃಕ್ಷಗಳಿಂದ ಶೋಭಿಸುವ ಪರ್ವತದಂತೆ ಶೋಭಿಸುತ್ತಿದ್ದನು.॥೨೮॥ ಅವನು ಕಲ್ಪವೃಕ್ಷದಸದೃಶವಾದ ಆಕೃತಿಯನ್ನು ಹೊಂದಿದ ವಸಂತನಂತೆ ಸರ್ವಾಲಂಕಾರ ಭೂಷಿತನಾಗಿದ್ದನು. ಆದರೂ ಅವನು ಸ್ಮಶಾನ ದಲ್ಲಿರುವ ಮಂಟಪದಂತೆ ಭಯಂಕರನಾಗಿದ್ದನು.॥೨೯॥ ಅಂತಹ ರಾವಣನು ವೈದೇಹಿಯನ್ನು ದುರುಗುಟ್ಟಿ ನೋಡುತ್ತಾ ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಹಾವಿನಂತೆ ಬುಸುಗುಟ್ಟುತ್ತಾ ಅವಳಲ್ಲಿ ಹೀಗೆ ಹೇಳಿದನು–॥೩೦॥

ಎಲೈ ಸೀತೆ! ರಾಮನು ನೀತಿದಪ್ಪಿದವನು. ಧನಹೀನನು. ಅಂತಹವನನ್ನು ಅನುಸರಿಸುತ್ತಿರುವ ನಿನ್ನನ್ನು, ಸೂರ್ಯನು ಮುಂಜಾನೆಯ ಕತ್ತಲನ್ನು ತನ್ನ ತೇಜಸ್ಸಿನಿಂದ ಹೋಗಲಾಡಿಸು ವಂತೆ ಈಗಲೇ ಇಲ್ಲವಾಗಿಸುತ್ತೇನೆ.॥೩೧॥ ರಾಕ್ಷಸರಿಗೆ ರಾಜನೂ, ಶತ್ರುಗಳನ್ನು ವಧಿಸುವವನೂ ಆದ ರಾವಣನು ಸೀತಾದೇವಿಯ ಬಳಿ ಹೀಗೆ ಹೇಳಿ ಭಯಂಕರರಾಗಿದ್ದ ಕಾವಲಿನ ರಕ್ಷಸಿಯರಿಗೆ ಆಜ್ಞಾಪಿಸಿದನು –॥೩೨॥

ಆ ರಾಕ್ಷಸಿಯರಲ್ಲಿ ಕೆಲವರಿಗೆ ಒಂದೇ ಕಣ್ಣಿತ್ತು. ಕೆಲವರಿಗೆ ಒಂದೇ ಕಿವಿಯಿತ್ತು. ಕೆಲವರು ಕಿವಿಗಳನ್ನು ತಲೆಯ ಸುತ್ತಲೂ ಸುತ್ತಿಕೊಂಡಿದ್ದರು. ಕೆಲವರಿಗೆ ಗೋವಿನ ಕಿವಿಗಳೂ, ಕೆಲವರಿಗೆ ಆನೆಯ ಕಿವಿಗಳೂ ಇದ್ದವು. ಕೆಲವರಿಗೆ ನೇತಾಡುತ್ತಿರುವ ಕಿವಿಗಳಿದ್ದವು. ಕೆಲವರಿಗೆ ಕಿವಿಗಳೇ ಇರಲಿಲ್ಲ. ಕೆಲವರಿಗೆ ಆನೆಯ ಕಾಲುಗಳೂ, ಕೆಲವರಿಗೆ ಕುದುರೆಯ ಕಾಲುಗಳೂ, ಕೆಲವರಿಗೆ ಹಸುವಿನ ಕಾಲುಗಳೂ ಇದ್ದುವು. ಕೆಲವರಿಗೆ ಕಾಲುಗಳಲ್ಲಿ ಕೂದಲುಗಳ ಜುಟ್ಟು ಇತ್ತು. ಕೆಲವರಿಗೆ ಒಂದೇ ಕಣ್ಣು ಇತ್ತು, ಕೆಲವರಿಗೆ ಒಂದೇ ಕಾಲಿತ್ತು. ಕೆಲವರಿಗೆ ಅತಿದೊಡ್ಡದಾದ ಕಾಲುಗಳಿದ್ದವು. ಕೆಲವರಿಗೆ ಕಾಲುಗಳೇ ಇರಲಿಲ್ಲ. ಕೆಲವರು ಅಳತೆ ಮೀರಿದ ತಲೆಗಳನ್ನು, ಕುತ್ತಿಗೆಗಳನ್ನು, ಹೊಂದಿದ್ದರು. ಕೆಲವರು ಮಿತಿಮೀರಿದ ಸ್ತನಗಳನ್ನೂ, ಹೊಟ್ಟೆಗಳನ್ನೂ ಹೊದಿದ್ದರು. ಕೆಲವರು ಅಳತೆ ಮೀರಿದ ಮುಖಗಳನ್ನು, ಕಣ್ಣುಗಳನ್ನು ಹೊಂದಿದ್ದರು. ಕೆಲವರಿಗೆ ಉದ್ದವಾದ ನಾಲಿಗೆಗಳಿದ್ದವು. ಕೆಲವರಿಗೆ ನಾಲಿಗೆ, ಮೂಗುಗಳೇ ಇರಲಿಲ್ಲ. ಕೆಲವರಿಗೆ ಸಿಂಹದ ಮುಖಗಳು, ಕೆಲವರಿಗೆ ಗೋವಿನ ಮುಖಗಳೂ, ಕೆಲವರಿಗೆ ಹಂದಿಯ ಮುಖಗಳೂ ಇದ್ದವು. ಇಂತಹ ನಾನಾವಿಕಾರ ರೂಪರಾಗಿದ್ದ ರಾಕ್ಷಸಿಯರಿಗೆ ರಾವಣನು ಅಪ್ಪಣೆ ಇತ್ತನು – ಎಲೈ ರಾಕ್ಷಸಿಯರೇ! ನೀವೆಲ್ಲರೂ ಒಟ್ಟಾಗಿಸೇರಿ ಅನುಕೂಲ ವಿಧಾನದಿಂದಾಗಲೀ, ಪ್ರತಿಕೂಲ ವಿಧಾನ ದಿಂದಾಗಲೀ, (ಚಂದವಾಗಿ ಮಾತಾಡಿ, ಭಯವನ್ನು ತೋರಿ)

ತಥಾ ಕುರುತ ರಾಕ್ಷಸ್ಯಃ ಸರ್ವಾಃ ಕ್ಷಿಪ್ರಂ ಸಮೈತ್ಯ ಚ ।
ಪ್ರತಿಲೋಮಾನುಲೋಮೈಶ್ಚ ಸಾಮದಾನಾದಿಭೇದನೈಃ ॥ ೩೭॥

ಆವರ್ಜಯತ ವೈದೇಹೀಂ ದಂಡಸ್ಯೋದ್ಯಮನೇನ ಚ ।
ಇತಿ ಪ್ರತಿಸಮಾದಿಶ್ಯ ರಾಕ್ಷಸೇಂದ್ರಃ ಪುನಃ ಪುನಃ॥ ೩೮॥

ಕಾಮಮಸ್ಯಪರೀತಾತ್ಮಾ ಜಾನಕೀಂ ಪರ್ಯತರ್ಜಯತ್ ।
ಉಪಗಮ್ಯ ತತಃ ಕ್ಷಿಪ್ರಂ ರಾಕ್ಷಸೀ ಧಾನ್ಯಮಾಲಿನೀ ॥ ೩೯॥

ಪರಿಷ್ವಜ್ಯ ದಶಗ್ರೀವಮಿದಂ ವಚನಮಬ್ರವೀತ್ ।
ಮಯಾ ಕ್ರೀಡ ಮಹಾರಾಜ ಸೀತಯಾ ಕಿಂ ತವಾನಯಾ ॥ ೪೦॥

ವಿವರ್ಣಯಾ ಕೃಪಣಯಾ ಮಾನುಷ್ಯಾ ರಾಕ್ಷಸೇಶ್ವರ ।
ನೋಸಮ್ಯಾ ಮಹಾರಾಜ ನ ದಿವ್ಯಾನ್ ಭೋಗಸತ್ತಮಾನ್ ॥ ೪೧॥

ವಿದಧಾತ್ಯಮರಶ್ರೇಷ್ಠಸ್ತವ ಬಾಹುಬಲಾರ್ಜಿತಾನ್ ।
ಅಕಾಮಾಂ ಕಾಮಯಾನಸ್ಯ ಶರೀರಮುಪತಪ್ಯತೇ ॥ ೪೨॥

ಇಚ್ಛಂತೀಂ ಕಾಮಯಾನಸ್ಯ ಪ್ರೀತಿರ್ಭವತಿ ಶೋಭನಾ ।
ವಿವಮುಕ್ತಸ್ತು ರಾಕ್ಷಸ್ಯಾ ಸಮುತ್ಪಿಚ್ಚಪ್ಲುತೋ ಬಲೀ ॥ ೪೩॥

ಪ್ರಹಸನ್ ಮೇಘಸಂಕಾಶೋ ರಾಕ್ಷಸಃ ಸ ನ್ಯವರ್ತತ ।
ಪ್ರಸ್ಥಿತಃ ಸ ದಶಗ್ರೀವಃ ಕಂಪಯನ್ನಿವ ಮೇದಿನೀಮ್ ॥ ೪೪॥

ಜ್ವಲದ್ಭಾಸ್ಕರವರ್ಣಾಭಂ ಪ್ರವಿವೇಶ ನಿವೇಶನಮ್ ।
ದೇವಗಂಧರ್ವಕನ್ಯಾಶ್ಚ ನಾಗಕನ್ಯಾಶ್ಚ ಸರ್ವತಃ ।
ಪರಿವಾರ್ಯ ದಶಗ್ರೀವಂ ವಿವಿಶುಸ್ತದ್ಗೃಹೋತ್ತಮಮ್ ॥ ೪೫॥

ಸ ಮೈಥಿಲೀಂ ಧರ್ಮಪರಾಮವಸ್ಥಿತಾಂ
ಪ್ರವೇಪಮಾನಾಂ ಪರಿಭರ್ತ್ಸ್ಯ ರಾವಣಃ ।
ವಿಹಾಯ ಸೀತಾಂ ಮದನೇನ ಮೋಹಿತಃ
ಸ್ವಮೇವ ವೇಶ್ಮ ಪ್ರವಿವೇಶ ಭಾಸ್ವರಮ್ ॥ ೪೬॥

ಸಾಮ-ದಾನ-ಭೇದೋಪಾಯಗಳಿಂದಲೂ, ಕಡೆಗೆ ದಂಡೋಪಾಯದಿಂದಾದರೂ ಬಹಳ ಶೀಘ್ರವಾಗಿ ವೈದೇಹಿಯು ನನ್ನ ವಶಳಾಗುವಂತೆ ಮಾಡಿರಿ.॥೩೩-೩೭॥

ಕಾಮಕ್ರೋಧಗಳಿಂದ ಆಕ್ರಾಂತನಾಗಿದ್ದ, ರಾಕ್ಷಸೇಂದ್ರನಾದ ರಾವಣನು ರಾಕ್ಷಸಿಯರಿಗೆ ಪದೇ-ಪದೇ ನಿರ್ದೇಶಿಸುತ್ತಾ ಜಾನಕಿಯನ್ನು ಹೆದರಿಸಿ ಹೊರಟನು. ಆಗ ಧಾನ್ಯಮಾಲಿನೀ ಎಂಬ ರಕ್ಕಸಿಯು ಕೂಡಲೇ ರಾವಣನ ಬಳಿಗೆ ಹೋಗಿ ಅವನನ್ನು ಆಲಿಂಗಿಸಿಕೊಂಡು ಹೇಳಿದಳು– ಓ ಮಹಾರಾಜಾ! ಈ ಸೀತಾದೇವಿಯು ಮನುಷ್ಯ ಸ್ತ್ರೀಯು. ಕಾಂತಿಹೀನಳು. ದೀನಳೂ ಆದ ಇವಳಿಂದ ನಿನಗೇನು ಆಗಬೇಕಾಗಿದೆ? ನನ್ನೊಡನೆ ರಮಿಸು. ಒಡೆಯಾ! ನಿನ್ನ ಬಾಹುಬಲದಿಂದ ಉಪಾರ್ಜಿತವಾಗಿರುವ ದಿವ್ಯವಾದ ಭೋಗಸಾಮಗ್ರಿಗಳನ್ನು ಅನುಭವಿಸಲು ಸೃಷ್ಟಿಕರ್ತನಾದ ಬ್ರಹ್ಮನು ಇವಳ ಹಣೆಯಲ್ಲಿ ಬರೆದಿಲ್ಲ ವೆಂಬುದು ನಿಜ. ತನಗೆ ಒಲಿಯದಿರುವವಳನ್ನು ಕಾಮಿಸಿದರೆ ಶರೀರದಲ್ಲಿ ತಾಪವೂ ಹೆಚ್ಚುತ್ತದೆ. ತಾನಾಗಿ ಬಯಸಿ ಬಂದವಳನ್ನು ಕಾಮಿಸುವವನಿಗೆ ಅವಳ ಸಂಗದಿಂದ ಆನಂದವು ಹೆಚ್ಚುತ್ತದೆ. ಧಾನ್ಯಮಾಲಿನಿಯು ರಾಕ್ಷಸೇಶ್ವರನಿಗೆ ಹೀಗೆ ಹೇಳಿ ರಾವಣನನ್ನು ಬೇರೆಡೆಗೆ ಒಯ್ದಳು. ಬಲಿಷ್ಠನಾದ ಮೇಘ ಸದೃಶನಾದ ರಾವಣನು ಗಹ-ಗಹಿಸಿ ನಗುತ್ತಾ ಆ ಸ್ಥಳದಿಂದ ಹಿಂದಿರುಗಿದನು.॥೩೮-೪೩॥ ಅಶೋಕವನದಿಂದ ಹೊರಟ ರಾವಣನು ಭೂಮಿಯನ್ನು ನಡುಗಿಸುತ್ತಾ, ಹೆಜ್ಜೆಗಳನ್ನಿಡುತ್ತಾ ಸೂರ್ಯನಂತೆ ಹೊಳೆಯುತ್ತಿರುವ ತನ್ನ ಆರಮನೆಯನ್ನು ಪ್ರವೇಶಿಸಿದನು.॥೪೪॥ ದೇವ, ಗಂಧರ್ವ, ನಾಗಕನ್ಯೆಯರು ದಶಗ್ರೀವನನ್ನು ಸುತ್ತುವರೆದು ಅವನ ಜೊತೆಯಲ್ಲೇ ಉತ್ತಮೋತ್ತಮವಾದ ಅರಮನೆಯನ್ನು ಪ್ರವೇಶಿದರು.॥೪೫॥

ಮದನಮೋಹಿತನಾದ ರಾವಣನು ಪತಿವ್ರತಾಧರ್ಮ ಪರಾಯಣೆಯಾದ, ಭಯದಿಂದ ಥರ-ಥರನೆ ನಡುಗುತ್ತಿದ್ದ ಸೀತೆಯನ್ನು ಗರ್ಜನೆಯಿಂದ ಮತ್ತಷ್ಟು ಹೆದರಿಸಿ, ಅವಳನ್ನು ಅಲ್ಲಿಯೇ ಬಿಟ್ಟು ಪ್ರಕಾಶಮಾನವಾದ ತನ್ನ ಅರಮನೆಯನ್ನು ಹೊಕ್ಕನು.॥೪೬॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ದ್ವಾವಿಂಶಃ ಸರ್ಗಃ ॥ ೨೨ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೆರಡನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತಮೂರನೆಯ ಸರ್ಗ

ರಾಕ್ಷಸಿಯರು ಸೀತೆಯನ್ನು ಸಮಾಧಾನಗೊಳಿಸಲು ಪ್ರಶ್ನಿಸಿದುದು –

ಇತ್ಯುಕ್ತ್ವಾ ಮೈಥಿಲೀಂ ರಾಜಾ ರಾವಣಃ ಶತ್ರು ರಾವಣಃ ।
ಸಂದಿಶ್ಯ ಚ ತತಃ ಸರ್ವಾ ರಾಕ್ಷಸೀರ್ನಿರ್ಜಗಾಮ ಹ ॥ ೧॥

ನಿಷ್ಕ್ರಾಂತೇ ರಾಕ್ಷಸೇಂದ್ರೇ ತು ಪುನರಂತಃಪುರಂ ಗತೇ ।
ರಾಕ್ಷಸ್ಯೋ ಭೀಮರೂಪಾಸ್ತಾ ಸೀತಾಂ ಸಮುಪದುದ್ರುವುಃ ॥ ೨॥

ತತಃ ಸೀತಾಮುಪಾಗಮ್ಯ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ।
ಪರಂ ಪರುಷಯಾ ವಾಚಾ ವೈದೇಹೀಮಿದಮಬ್ರುವನ್ ॥ ೩॥

ಪೌಲಸ್ತ್ಯಸ್ಯ ವರಿಷ್ಠಸ್ಯ ರಾವಣಸ್ಯ ಮಹಾತ್ಮನಃ ।
ದಶಗ್ರೀವಸ್ಯ ಭಾರ್ಯಾತ್ವಂ ಸೀತೇ ನ ಬಹುಮನ್ಯಸೇ ॥ ೪॥

ತತಸ್ತ್ವೇಕಜಟಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ಆಮಂತ್ರ್ಯ ಕ್ರೋಧತಾಮ್ರಾಕ್ಷೀ ಸೀತಾಂ ಕರಕರೋದರೀಮ್ ॥ ೫॥

ಪ್ರಜಾಪತೀನಾಂ ಷಣ್ಣಾಂ ತು ಚತುರ್ಥೋ ಯಃ ಪ್ರಜಾಪತಿಃ ।
ಮಾನಸೋ ಬ್ರಹ್ಮಣಃ ಪುತ್ರಃ ಪುಲಸ್ತ್ಯ ಇತಿ ವಿಶ್ರುತಃ ॥ ೬॥

ಪುಲಸ್ತ್ಯಸ್ಯ ತು ತೇಜಸ್ವೀ ಮಹರ್ಷಿರ್ಮಾನಸಃ ಸುತಃ ।
ನಾಮ್ನಾ ಸ ವಿಶ್ರವಾ ನಾಮ ಪ್ರಜಾಪತಿಸಮಪ್ರಭಃ ॥ ೭॥

ತಸ್ಯ ಪುತ್ರೋ ವಿಶಾಲಾಕ್ಷಿ ರಾವಣಃ ಶತ್ರುರಾವಣಃ ।
ತಸ್ಯ ತ್ವಂ ರಾಕ್ಷಸೇಂದ್ರಸ್ಯ ಭಾರ್ಯಾ ಭವಿತುಮರ್ಹಸಿ ॥ ೮॥

ಮಯೋಕ್ತಂ ಚಾರುಸರ್ವಾಂಗಿ ವಾಕ್ಯ ಕಿಂ ನಾಸುಮನ್ಯಸೇ ।
ತತೋ ಹರಿಜಟಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ॥ ೯॥

ವಿಮರ್ಶ್ಯ ನಯಸೇ ಕೋಪಾನ್ಮಾರ್ಜಾರಸದೃಶೇಕ್ಷಣಾ ।
ಯೇನ ದೇವಾಸ್ತ್ರಯಸ್ತ್ರಿಂಶದ್ವೇವರಾಜಶ್ಚ ನಿರ್ಜಿತಾಃ ॥ ೧೦॥

ಶತ್ರುಗಳನ್ನು ಹಾ ಹಾ ಎಂದು ಕೂಗಿಕೊಳ್ಳುವಂತೆ ಮಾಡಲು ಸಮರ್ಥನಾದ ರಾವಣನು ಸೀತೆಗೆ ಹೀಗೆ ಹೇಳಿ ಅವಳನ್ನು ಬಹಳ ಬೇಗ ತನ್ನ ವಶಳಾಗುವಂತೆ ಮಾಡಬೇಕೆಂದು ಎಲ್ಲ ರಕ್ಕಸಿಯರಿಗೆ ಆಜ್ಞಾಪಿಸಿ ಅಶೋಕವನದಿಂದ ನಿರ್ಗಮಿಸಿದನು.॥೧॥

ರಾಕ್ಷಸೇಂದ್ರನು ಅಂತಃಪುರಕ್ಕೆ ಹೊರಟು ಹೋದಬಳಿಕ ಭಯಂಕರ ಆಕೃತಿಯ ರಾಕ್ಷಸಸ್ತ್ರೀಯರು ಸೀತೆಯ ಬಳಿಗೆ ವೇಗವಾಗಿ ಧಾವಿಸಿ ಬಂದರು. ಸೀತೆಯಬಳಿಗೆ ಬಂದು ಕ್ರೋಧಾಭಿಭೂತೆಯರಾದ ಆ ರಕ್ಕಸಿಯರು ಅತ್ಯಂತ ಕಠೋರವಾಗಿ ಹೀಗೆ ಹೇಳಿದರು–॥೨-೩॥

''ಎಲೈ ಸೀತೆ! ರಾವಣನು ಪುಲಸ್ತ್ಯ ವಂಶಜನೂ, ಮಹಾತ್ಮನೂ, ಶ್ರೇಷ್ಠನೂ ಆಗಿದ್ದಾನೆ. ಅಂತಹ ದಶಕಂಠನಿಗೆ ಭಾರ್ಯೆಯಾಗುವುದನ್ನು ನೀನು ಒಂದು ದೊಡ್ಡ ಪುರಸ್ಕಾರವೆಂದು ಏಕೆ ಭಾವಿಸುತ್ತಿಲ್ಲ? ಇದು ನಿನ್ನ ಮೌಢ್ಯವೇ ಸರಿ''॥೪॥

ರಾಕ್ಷಸಿಯರೆಲ್ಲರೂ ಒಟ್ಟಾಗಿ ಹೀಗೆ ಹೇಳಿದನಂತರ ಆ ರಾಕ್ಷಸಿಯರಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಿಂದ ಹೇಳಕೊಡಗಿದರು. ಕ್ರೋಧದಿಂದ ಕೆಂಗಣ್ಣಾಗಿದ್ದ 'ಏಕಜಟಾ' ಎಂಬ ರಕ್ಕಸಿಯು ಸಣ್ಣನಡುವುಳ್ಳ ಸೀತಾದೇವಿಗೆ ಸಂಬೋಧಿಸಿ ಹೀಗೆ ಹೇಳಿದಳು – ॥೫॥

ಎಲೆಗೆ ಸೀತೆ! ಮರಿಚಿ,ಅತ್ರಿ, ಅಂಗೀರಸ, ಪುಲಸ್ತ್ಯ ಪುಲಹ, ಕ್ರತು ಎಂಬ ಆರುಮಂದಿ ಪ್ರಜಾಪತಿಗಳಲ್ಲಿ ಪುಲಸ್ತ್ಯನು ನಾಲ್ಕನೆಯವನು. ಆವನು ಬ್ರಹ್ಮಮಾನಸ ಪುತ್ರನೂ, ವಿಖ್ಯಾತನೂ ಆಗಿರುವನು.॥೬॥ ತೇಜಸ್ವಿಯಾದ ವಿಶ್ರವಸನು ಮಹರ್ಷಿ ಪುಲಸ್ತ್ಯನಿಗೆ ಮಾನಸಪುತ್ರನು. ಆವನು ತೇಜಸ್ವಿನಲ್ಲಿ ಬ್ರಹ್ಮನಂತೆ ಇರುವವನು.॥೭॥ ಎಲೈ ವಿಶಾಲಾಕ್ಷಿಯೇ! ಸುಪ್ರಸಿದ್ಧನಾದ ವಿಶ್ರವನುವಿನ ಮಗನೇ ರಾವಣನು.ಆವನು ಅರಿವೀರಭಯಂಕರನೂ, ರಾಕ್ಷಸರಿಗೆಲ್ಲ ಪ್ರಭುವೂ ಆದ ಆವನಿಗೆ ಭಾರ್ಯೆಯಾಗಲು ನೀನು ಯೋಗ್ಯಳಾಗಿರುವೆ.॥೮॥ ಸುಂದರಾಂಗಿಯೇ! ನನ್ನ ಈ ಮಾತನ್ನು ನೀನು ಏಕೆ ಅನುಮೋದಿಸುವುದಿಲ್ಲ? ಆಗ ಸೀತೆಯು ಉತ್ತರಿಸದಿದ್ದಾಗ, ಬೆಕ್ಕಿನ ಕಣ್ಣಿನವಳಾದ 'ಹರಿಜಟಾ' ಎಂಬ ರಾಕ್ಷಸಿಯು ಕೋಪದಿಂದ ಕಣ್ಣುಗಳನ್ನು ಅರಳಿಸಿಕೊಂಡು ಹೀಗೆ ನುಡಿದಳು-

ರಾವಣನು ದೇವೇಂದ್ರನ ಸಹಿತ ಮೂವತ್ತಮೂರು ಕೋಟಿ ಪ್ರಮುಖ ದೇವತೆಗಳನ್ನು ತನ್ನ ಅತುಲಪರಾಕ್ರಮದಿಂದ ಜಯಿಸಿರುವನು. ಅಂತಹ ರಾಕ್ಷಸೇಂದ್ರನಿಗೆ ಮಡದಿಯಾಗಲು ನೀನು ಅರ್ಹಳಾಗಿರುವೆ. ರಾವಣನು ಗರ್ವದಿಂದ ಉಬ್ಬಿಹೋದ ಮಹಾಪರಾಕ್ರಮಿಯು. ಶೂರನೂ, ಯುದ್ಧದಲ್ಲಿ ಎಂದೂ ಬೆನ್ನುತೋರದಿರುವವನೂ, ಮಹಾಬಲಶಾಲಿಯೂ, ಮಹಾವೀರ್ಯವಂತನೂ ಆದ

ತಸ್ಯ ತ್ವಂ ರಾಕ್ಷಸೇಂದ್ರಸ್ಯ ಭಾರ್ಯಾ ಭವಿತುಮರ್ಹಸಿ ।
ತತಸ್ತು ಹ್ರಷ್ಟಸಾ ನಾಮ ರಾಕ್ಷಸೀ ಕ್ರೋಧಮೂರ್ಛಿತಾ ॥ ೧೧॥

ಬರ್ತ್ಸಯಂತೀ ತದಾ ಘೋರಮಿದಂ ವಚನಮಬ್ರವೀತ್ ।
ವೀರ್ಯೋತ್ಸಿಕ್ತಸ್ಯ ಶೂರಸ್ಯ ಸಂಗ್ರಾಮೇಷ್ವನಿವರ್ತಿನಃ ॥ ೧೨॥

ಬಲಿನೋ ವೀರ್ಯಯುಕ್ತಸ್ಯ ಭಾರ್ಯಾತ್ವಂ ಕಿಂ ನ ಲಪ್ಸ್ಯಸೇ ।
ಪ್ರಿಯಾ ಬಹುಮತಾ ಭಾರ್ಯಾಂ ತೃಣ್ವಾ ರಾಜ್ಞಾ ಮಹಾಬಲಃ ॥ ೧೩॥

ಸರ್ವಾಸಾಂ ಚ ಮಹಾಭಾಗಾಂ ತ್ವಾಮುಪೈಷ್ಯತಿ ರಾವಣಃ ।
ಸಮೃದ್ಧಂ ಸ್ಫೀತಸಹಸ್ರೇಣ ನಾನಾರತ್ನೋಪಶೋಭಿತಮ್ ॥ ೧೪॥

ಅಂತಃಪುರಂ ಸಮುತ್ಪಾಟ್ಯ ತ್ವಾಮುಪೈಷ್ಯತಿ ರಾವಣಃ ।
ಅನ್ಯಾ ತು ವಿಕಟಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ॥ ೧೫॥

ಅಸಕೃದ್ವೇವತಾ ಯುದ್ಧೇ ನಾಗಗಂಧರ್ವದಾನವಾಃ ।
ನಿರ್ಜಿತಾಃ ಸಮರೇ ಯೇನ ಸ ತೇ ಪಾರ್ಶ್ವಮುಪಾಗತಃ ॥ ೧೬॥

ತಸ್ಯ ಸರ್ವಸಮೃದ್ಧಸ್ಯ ರಾವಣಸ್ಯ ಮಹಾತ್ಮನಃ ।
ಕಮಧ್ಯ ರಾಕ್ಷಸೇಂದ್ರಸ್ಯ ಭಾರ್ಯಾತ್ವಂ ನೇಚ್ಛಸೇಽಧಮೇ ॥ ೧೭॥

ತತಸ್ತು ದುರ್ಮುಖೀ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ಯಸ್ಯ ಸೂರ್ಯೋ ನ ತಪತಿ ಭೀತೋ ಯಸ್ಯ ಚ ಮಾರುತಃ ॥ ೧೮॥

ನ ವಾತಿ ಚಾಸಿತಾಪಾಂಗಿ ಕಿಂ ತ್ವಂ ತಸ್ಯ ನ ತಿಷ್ಠಸಿ ।
ಪುಷ್ಪವಸ್ಯೇ ಚ ತರವೋ ಮುಮುಚುರ್ಯಸ್ಯ ವೈ ಭಯಾತ್ ॥ ೧೯॥

ಶೈಲಾಶ್ಚ ಸುಭ್ರು ಪಾನೀಯಂ ಜಲದಾಶ್ಚ ಯದೇಚ್ಛತಿ ।
ತಸ್ಯ ನೈರ್ಯತರಾಜಸ್ಯ ರಾಜರಾಜಸ್ಯ ಭಾಮಿನಿ ॥ ೨೦॥

ಕಿಂ ತ್ವಂ ನ ಕುರುಷೇ ಬುದ್ಧಿಂ ಭಾರ್ಯಾರ್ಥೇ ರಾವಣಸ್ಯ ಹಿ ।
ಸಾಧು ತೇ ತತ್ತ್ವತೋ ದೇವಿ ಕಥಿತಂ ಸಾಧು ಭಾಮಿನಿ ।
ಗೃಹಾಣ ಸುಸ್ಮಿತೇ ವಾಕ್ಯಮನ್ಯಥಾ ನ ಭವಿಷ್ಯತಿ ॥ ೨೧॥

ಅವನಿಗೆ ಭಾರ್ಯೆಯಾಗಲು ನೀನೇಕೆ ಅಪೇಕ್ಷಿಸುವುದಿಲ್ಲ?॥೯-೧೧॥ ಆಗಲೂ ಸೀತಾದೇವಿಯು ಮೌನದಿಂದಿರುವಾಗ- 'ಪ್ರಹಸಾ' ಎಂಬ ರಾಕ್ಷಸಿಯು ಕೋಪೋದ್ರಿಕ್ತಳಾಗಿ ಸೀತೆಯನ್ನು ಬೆದರಿಸುತ್ತಾ ಕಠೋರವಾದ ಈ ಮಾತನ್ನು ಹೇಳಿದಳು — ಎಲ್ಲ ಶ್ರೇಷ್ಠ ನಾರಿಯರಲ್ಲಿ ಆತ್ಯಂತಪ್ರಿಯಳಾದ, ಎಲ್ಲರಿಂದ ಗೌರವಿ ಸಲ್ಪಡುತ್ತಿರುವ, ಮಹಾಭಾಗ್ಯಶಾಲಿನಿಯಾದ ಮಂದೋದರಿ ಯನ್ನು ಕೂಡ ಪರಿತ್ಯಜಿಸಿ ಮಹಾಬಲನಾದ ರಾವಣನು ನಿನ್ನನ್ನು ಪಡೆಯಲು ಅಪೇಕ್ಷಿಸಿದ್ದಾನೆ.॥೧೨-೧೯॥ ಅಮೂಲ್ಯವಾದ ರತ್ನಗಳಿಂದ ಶೋಭಿಸುತ್ತಿರುವ ಸಾವಿರಾರು ಕಾಂತೆಯರು ರಾವಣನ ಅಂತಃಪುರದಲ್ಲಿ ಇದ್ದಾರೆ. ಅಂತಹ ತರುಣೀಮಣಿ ಗಳನ್ನು ಕಡೆಗಣಿಸಿದ ರಾವಣನು ನಿನ್ನನ್ನು ಸೇರಲು ತವಕಿಸುತ್ತಿದ್ದಾನೆ.॥೨೪॥

ಆವರು ಹೇಳುತ್ತಿದ್ದುದನ್ನು, ಕೇಳುತ್ತಾ ಸುಮ್ಮನೆ ಕುಳಿತಿರುವ ಸೀತೆಗೆ 'ವಿಕಟಾ' ಎಂಬ ಮತ್ತೋರ್ವ ರಕ್ಕಸಿಯು ಹೀಗೆ ಹೇಳುತ್ತಾಳೆ– ರಾವಣನು ಸಮರಾಂಗಣದಲ್ಲಿ ದೇವತೆಗಳನ್ನು ನಾಗರನ್ನು, ಗಂಧರ್ವರನ್ನು, ಹಲವಾರುಬಾರಿ ಪರಾಭವಗೋಳಿಸಿರುವನು. ಅಂತಹ ಮಹಾಭಯಂಕರ ಪರಾಕ್ರಮಿಯಾದ, ಮಹಾಶೂರನಾದ, ರಾವಣೇಶ್ವರನು ಪ್ರಣಯ ಭಿಕ್ಷೆಯನ್ನು ಬೇಡುತ್ತಾ ನಿನ್ನ ಬಳಿಗೆ ಬಂದಿರುವನು. ಸರ್ವಸಮೃದ್ಧಿಯನ್ನು ಹೊಂದಿರುವ ಮಹಾತ್ಮನಾದ ರಾಕ್ಷಸೇಂದ್ರನಿಗೆ ಭಾರ್ಯೆಯಾಗಲು ಬಯಸದೆ ಇರುವ ನೀನು ನಿಜವಾಗಿ ಅಧಮಳಾಗಿರುವೆ.॥೧೫-೧೭॥ ಬಳಿಕ 'ದುರ್ಮುಖಿ' ಎಂಬ ರಾಕ್ಷಸಿಯು ಸೀತೆಗೆ ಹೀಗೆ ಉಪದೇಶಿಸ ತೊಡಗಿದಳು– ಎಲೈ ಸುಂದರೀ! ರಾವಣನಿಗೆ ಭಯಪಟ್ಟು ಸೂರ್ಯನು ಕೂಡ ತೀಕ್ಷ್ಣವಾದ ಕಿರಣಗಳನ್ನು ಪಸರಿಸುವುದಿಲ್ಲ. ವಾಯುವು ಮಂದವಾಗಿ ಬೀಸುತ್ತಿರುವನು. ಓ ವಿಶಾಲಾಕ್ಷಿ! ಅಂತಹ ಪ್ರಭುವಿನ ಬಳಿಯಲ್ಲಿರಲು ನೀನೇಕೆ ಬಯಸುತ್ತಿಲ್ಲ? ಅವನಿಗೆ ಭಯಪಟ್ಟು ವೃಕ್ಷಗಳೂ ಕೂಡ ಅವನ ಬಯಕೆಯಂತೆ ಹೂವುಗಳನ್ನು ಸುರಿಸುತ್ತವೆ. ಹಾಗೆಯೇ ಪರ್ವತಗಳೂ, ಮೇಘಗಳೂ, ಕೂಡ ಅವನು ಬಯಸಿದಾಗ ಮಧುರ ಜಲವನ್ನು ಸುರಿಸುತ್ತವೆ. ಎಲೈ ಭಾಮಿನೀ! ಅಂತಹ ರಾಕ್ಷಸಚಕ್ರವರ್ತಿಯಾದ ರಾವಣೇಶ್ವರನ ಭಾರ್ಯೆಯಾಗಲು ನೀನೇಕೆ ಮನಸ್ಸು ಮಾಡುತ್ತಿಲ್ಲ? ಅವನ ಪತ್ನಿಯಾಗಲು ಏಕೆ ಸಿದ್ಧಳಾಗುವುದಿಲ್ಲ? ॥೧೮-೨೦॥

ಮಂದಸ್ಮಿತೆಯಾದ ಎಲೈ ಭಾಮಿನೀ! ದೇವೀ! ಒಳ್ಳೆಯ ರೀತಿಯಿಂದ ಹೇಳುತ್ತಿರುವ ನಮ್ಮ ಮಾತನ್ನು ಚೆನ್ನಾಗಿ ಪರಿಗ್ರಹಿಸು. ಹಾಗೇನಾದರೂ ನಮ್ಮ ಮಾತುಗಳನ್ನು ಕೇಳದಿದ್ದರೆ ನೀನು ಖಂಡಿತವಾಗಿ ಉಳಿಯಲಾರೆ.॥೨೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ತ್ರಯೋವಿಂಶಃ ಸರ್ಗಃ ॥ ೨೩ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತಮೂರನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತನಾಲ್ಕನೆಯ ಸರ್ಗ

ಸೀತಾದೇವಿಯು ರಾಕ್ಷಸಿಯರ ಮಾತನ್ನು ತಿರಸ್ಕರಿಸಿದುದು, ರಾಕ್ಷಸಿಯರು ಅವಳನ್ನು ಕೊಲ್ಲುವುದಾಗಿ ಬೆದರಿಸಿದುದು –

ತತಃ ಸೀತಾಂ ಸಮಸ್ತಾಸ್ತಾ ರಾಕ್ಷಸ್ಯೋ ವಿಕೃತಾನನಾಃ ।
ಪರುಷಂ ಪರುಷಾ ನಾರ್ಯ ಊಚುಸ್ತಾ ವಾಕ್ಯಮಪ್ರಿಯಮ್ ॥ ೧॥

ಕಿಂ ತ್ವಮಂತಃಪುರೇ ಸೀತೇ ಸರ್ವಭೂತಮನೋಹರೇ ।
ಮಹಾರ್ಹಶಯನೋಪೇತೇ ನ ವಾಸಮನುಮನ್ಯಸೇ ॥ ೨॥

ಮಾನುಷೀ ಮಾನುಷಸ್ಯೈವ ಭಾರ್ಯಾತ್ವಂ ಬಹು ಮನ್ಯಸೇ ।
ಪ್ರತ್ಯಾಹರ ಮನೋ ರಾಮಾನ್ನ ತ್ವಂ ಜಾತು ಭವಿಷ್ಯಸಿ ॥ ೩॥

ತ್ರೈಲೋಕ್ಯವಸುಭೋಕ್ತಾರಂ ರಾವಣಂ ರಾಕ್ಷಸೇಶ್ವರಮ್ ।
ಭರ್ತಾರಮುಪಸಂಗಮ್ಯ ವಿಹರಸ್ವ ಯಥಾಸುಖಮ್ ॥ ೪॥

ಮಾನುಷೀ ಮಾನುಷಂ ತಂ ತು ರಾಮಮಿಚ್ಛಸಿ ಶೋಭನೇ ।
ರಾಜ್ಯಾದ್ಭ್ರಷ್ಟಮಸಿದ್ಧಾರ್ಥಂ ವಿಕ್ಲವಂ ತ್ವಮನಿಂದಿತೇ ॥ ೫॥

ರಾಕ್ಷಸೀನಾಂ ವಚಃ ಶ್ರುತ್ವಾ ಸೀತಾ ಪದ್ಮನಿಭೇಕ್ಷಣಾ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಮಿದಂ ವಚನಮಬ್ರವೀತ್ ॥ ೬॥

ಯದಿದಂ ಲೋಕವಿಖ್ಯಾತಮುದಾಹರಥ ಸಂಗತಾಃ ।
ನೈ ತನ್ಮನಸಿ ವಾಕ್ಯಂ ಮೇ ಕಿಲ್ಬಿಷಂ ಪ್ರತಿಭಾತಿ ವಃ ॥ ೭॥

ನ ಮಾನುಷೀ ರಾಕ್ಷಸಸ್ಯ ಭಾರ್ಯಾ ಭವಿತುಮರ್ಹತಿ ।
ಕಾಮಂ ಖಾದತ ಮಾಂ ಸರ್ವಾ ನ ಕರಿಷ್ಯಾಮಿ ವೋ ವಚಃ ॥ ೮॥

ದೀನೋ ವಾ ರಾಜ್ಯಹೀನೋ ವಾ ಯೋ ಮೇ ಭರ್ತಾ ಸ ಮೇ ಗುರುಃ ।
ತಂ ನಿತ್ಯಮನುರಕ್ತಾಸ್ಮಿ ಯಥಾ ಸೂರ್ಯಂ ಸುವರ್ಚಲಾ ॥ ೯॥

ಯಥಾ ಶಚೀ ಮಹಾಭಾಗಾ ಶಕ್ರಂ ಸಮುಪತಿಷ್ಠತಿ ।
ಅರುಂಧತೀ ವಸಿಷ್ಠಂ ಚ ರೋಹಿಣೀ ಶಶಿನಂ ಯಥಾ ॥ ೧೦॥

ಲೋಪಾಮುದ್ರಾ ಯಥಾಗಸ್ತ್ಯಂ ಸುಕನ್ಯಾ ಚ್ಯವನಂ ಯಥಾ ।
ಸಾವಿತ್ರೀ ಸತ್ಯವಂತಂ ಚ ಕಪಿಲಂ ಶ್ರೀಮತೀ ಯಥಾ ॥ ೧೧॥

ವಿಕೃತಾನನೆಯರಾದ ಆ ರಾಕ್ಷಸ ಸ್ತ್ರೀಯರು ಸೀತಾದೇವಿಯ ಹತ್ತಿರ ಸರಿದು ಕಠೋರವಾದ ಮಾತುಗಳು ತಟ್ಟದೇ ಇರುವ ಆ ಸುಕುಮಾರಿಯನ್ನು ಗದರಿಸಿ ಅಪ್ರಿಯವಾದ ಮಾತುಗಳನ್ನು ಪುನಃ ಹೇಳತೊಡಗಿದರು –॥೧॥

ಎಲೈ ಸೀತೆ! ರಾವಣನ ಅಂತಃಪುರವು ಎಲ್ಲರಿಗೂ ಆಹ್ಲಾದ ಕರವಾಗಿದ್ದು ಮನೋಹರವಾಗಿದೆ. ಅತ್ಯುತ್ತಮವಾದ ಹಂಸ ತೂಲಿಕಾತಲ್ಪಯುಕ್ತವಾದ ಆದರಲ್ಲಿ ವಾಸಿಸಲು ನೀನೇಕೆ ಒಪ್ಪಿ ಕೊಳ್ಳುವುದಿಲ್ಲ?॥೨॥ ಮಾನವ ಕಾಂತೆಯಾದ ನೀನು ಸಾಮಾನ್ಯ ಮನುಷ್ಯನೊಬ್ಬನ ಹೆಂಡತಿಯಾಗಿರುವುದನ್ನು ದೊಡ್ಡದೆಂದು ತಿಳಿದುಕೊಂಡಿರುವೆ. ಇದು ಸರಿಯಲ್ಲ ನೀನು ಎಂದೂ, ಯಾವ ವಿಧದಿಂದಲೂ ಪುನಃ ರಾಮನನ್ನು ಸೇರಲಾರೆ. ಆದುದರಿಂದ ನಿನ್ನ ಮನಸ್ಸು ಅವನಿಂದ ಹಿಂದಿರುಗಿಸು.॥೩॥ ಮೂರು ಲೋಕಗಳ ಐಶ್ವರ್ಯವನ್ನು ಉಪಭೋಗಿಸುತ್ತಿರುವ ರಾಕ್ಷಸೇಶ್ವರನಾದ ರಾವಣನನ್ನು ಪತಿಯನ್ನಾಗಿಸಿಕೊಂಡು ಸುಖವಾಗಿ ಅವನೊಡನೆ ವಿಹರಿಸು.॥೪॥ ಎಲೈ ಮಂಗಳ ಸ್ವರೂಪಳೆ! ಪೂಜ್ಯಳೇ! ಮನುಷ್ಯಮಾತ್ರನಾಗಿರುವ ನಿನಗೆ ಇಂತಹ ಸುವರ್ಣಾವಕಾಶ ದೊರೆತಾಗ, ಹುಲು ಮನುಜನಾದ ರಾಜ್ಯ ಭ್ರಷ್ಟನಾದ, ಅಪ್ರಯೋಜಕನಾದ, ಶಕ್ತಿಹೀನನಾದ ಆ ರಾಮ ನನ್ನೇ ಪುನಃ ಸೇರಲು ಬಯಸುತ್ತಿರುವೆ. ನಿಶ್ಚಯವಾಗಿಯೂ ನೀನು ಮೂಢಳೇ ಸರಿ''.॥೫॥ ಕಮಲಲೋಚನೆಯಾದ ಸೀತಾದೇವಿಯು ರಾಕ್ಷಸಿಯರ ಕರ್ಣ ಕರ್ಕಶವಾದ ಮಾತು ಗಳನ್ನು ಕೇಳಿ ಕಣ್ಣೀರನ್ನು ತುಂಬಿಕೊಂಡು ಹೀಗೆಂದಳು– ॥೬॥

''ರಾಕ್ಷಸಿಯರೇ! ನೀವೆಲ್ಲರೂ ಸೇರಿ ಹೇಳುತ್ತಿರುವ ಮಾತುಗಳು ಲೋಕಮರ್ಯಾದೆಗೆ ವಿರುದ್ಧವೂ, ಪಾಪ ಯುಕ್ತವೂ ಆಗಿದೆ. ಇವು ನನ್ನ ಮನಸ್ಸಿಲ್ಲಿ ಕ್ಷಣಕಾಲವೂ ಉಳಿಯುವುದಿಲ್ಲ. ನೀವು ಹೇಳುವ ಯಾವ ಮಾತೂ ನನ್ನ ಮನಸ್ಸಿಗೆ ಹಿಡಿಸುವುದಿಲ್ಲ.॥೭॥ ಮಾನವ ಕಾಂತೆಯಾದ ನಾನು ರಾಕ್ಷಸನ ಪತ್ನಿಯಾಗಲಾರೆ. ನೀವೆಲ್ಲರೂ ಸೇರಿ ನನ್ನನ್ನು ಇಷ್ಟ ಬಂದಂತೆ ತಿಂದುಹಾಕಿರಿ. ನಾನು ನಿಮ್ಮ ಮಾತಿನಂತೆ ನಡೆಯಲಾರೆನು.॥೮॥ ನನ್ನ ಪತಿಯು ದೀನನಾಗಿರಲೀ, ರಾಜ್ಯಹೀನನಾಗಿರಲೀ, ಅವನೇ ನನಗೆ ಗುರುವು. ಸುವರ್ಚಲಾ ದೇವಿಯು ಸೂರ್ಯನಲ್ಲಿರುವಂತೆ ನಾನು ಸದಾಕಾಲ ಪತಿಯಲ್ಲೇ ಆನುರಕ್ತಳಾಗಿರುವವಳು.॥೯॥ ಶಚಿದೇವಿಯು ಇಂದ್ರನನ್ನು ಅನುಸರಿಸುವಂತೆ, ಮಹಾಸಾಧ್ವಿ ಅರುಂಧತಿಯು ವಸಿಷ್ಠರನ್ನೂ, ರೋಹಿಣಿಯು ಚಂದ್ರನನ್ನೂ, ಲೋಪಾ ಮುದ್ರೆಯು ಅಗಸ್ತ್ಯರನ್ನೂ, ಸುಕನ್ಯೆಯು ಚ್ಯವನನನ್ನೂ, ಸಾವಿತ್ರಿಯು ಸತ್ಯವಂತನನ್ನೂ, ಶ್ರೀಮತಿಯು ಕಪಿಲ ಮಹರ್ಷಿಯನ್ನೂ, ಮದಯಂತಿಯು ಸೌದಾಸನನ್ನೂ,

ಸೌದಾಸಂ ಮದಯಂತೀವ ಕೇಶಿನೀ ಸಗರಂ ಯಥಾ ।
ನೈಷಧಂ ದಮಯಂತೀವ ಭೈಮೀ ಪತಿಮನುವ್ರತಾ ॥ ೧೨॥

ತಥಾಹಮಿಕ್ಷ್ವಾಕುವರಂ ರಾಮಂ ಪತಿಮನುವ್ರತಾ ।
ಸೀತಾಯಾ ವಚನಂ ಶ್ರುತ್ವಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ॥ ೧೩॥

ಭರ್ತ್ಸಯಂತಿ ಸ್ಮ ಪರುಷೈರ್ವಾಕ್ಯೈ ರಾವಣಚೋದಿತಾಃ ।
ಅವಲೀನಃ ಸ ನಿರ್ವಾಕ್ಯೋ ಹನುಮಾನ್ ಶಿಂಸಪಾದ್ರುಮೇ ॥ ೧೪॥

ಸೀತಾಂ ಸಂತರ್ಜಯಂತೀಸ್ತಾ ರಾಕ್ಷಸೀರಶೃಣೋತ್ ಕಪಿಃ ।
ತಾಮಭಿಕ್ರಮ್ಯ ಸಂಕ್ರುದ್ಧಾ ವೇಪಮಾನಾಂ ಸಮಂತತಃ ॥ ೧೫॥

ಭೃಶಂ ಸಂಲಿಲಿಹುರ್ದೀಪ್ತಾನ್ ಪ್ರಲಂಬಾನ್ ದಶನಚ್ಛದಾನ್ ।
ಊಚುಶ್ಚ ಪರಮಕ್ರುದ್ಧಾಃ ಪ್ರಗೃಹ್ಯಾಶು ಪರಶ್ವಧಾನ್ ॥ ೧೬॥

ನೇಯಮರ್ಹತಿ ಭರ್ತಾರಂ ರಾವಣಂ ರಾಕ್ಷಸಾಧಿಪಮ್ ।
ಸಂಭರ್ತ್ಸ್ಯಮಾನಾ ಭೀಮಾಭೀ ರಾಕ್ಷಸೀಭಿರ್ವರಾನನಾ ॥ ೧೭॥

ಸಾ ಬಾಷ್ಪಮಪಮಾರ್ಜಂತೀ ಶಿಂಶಪಾಂ ತಾಮುಪಾಗಮತ್ ।
ತತಸ್ತಾ ಶಿಂಶಪಾಂ ಸೀತಾ ರಾಕ್ಷಸೀಭಿಃ ಸಮಾವೃತಾ ॥ ೧೮॥

ಅಭಿಗಮ್ಯ ವಿಶಾಲಾಕ್ಷೀ ತಸ್ಥೌಶೋಕಪರಿಪ್ಲುತಾ ।
ತಾಂ ಕೃಶಾಂ ದೀನವದನಾಂ ಮಲಿನಾಂಬರಧಾರಿಣೀಮ್ ॥ ೧೯॥

ಭರ್ತ್ಸಯಾಂಚಕ್ರಿರೇ ಸೀತಾಂ ರಾಕ್ಷಸ್ಯಸ್ತಾಂ ಸಮಂತತಃ ।
ತತಸ್ತುಂ ವಿನತಾ ನಾಮ ರಾಕ್ಷಸೀ ಭೀಮದರ್ಶನಾ ॥ ೨೦॥

ಅಬ್ರವೀತ್ ಕುಪಿತಾಕಾರಾ ಕರಾಲಾ ನಿರ್ಣತೋದರೀ ।
ಸೀತೇ ಪರ್ಯಾಪ್ತಮೇತಾವದ್ಭರ್ತುಃ ಸ್ನೇಹೋ ನಿದರ್ಶಿತಃ ॥ ೨೧॥

ಸರ್ವತ್ರಾತಿಕೃತಂ ಭದ್ರೇ ವ್ಯಸನಾಯೋಪಕಲ್ಪತೇ ।
ಪರಿತುಷ್ಟಾಸ್ಮಿ ಭದ್ರಂ ತೇ ಮಾನುಷಸ್ತೇ ಕೃತೋ ವಿಧಿಃ ॥ ೨೨॥

ಮಮಾಪಿ ತು ವಚಃ ಪಥ್ಯಂ ಬ್ರುವಂತ್ಯಾಃ ಕುರು ಮೈಥಿಲಿ ।
ರಾವಣಂ ಭಜ ಭರ್ತಾರಂ ಭರ್ತಾರಂ ಸರ್ವರಕ್ಷಸಾಮ್ ॥ ೨೩॥

ವಿಕ್ರಾಂತಂ ರೂಪವಂತಂ ಚ ಸುರೇಶಮಿವ ವಾಸವಮ್ ।
ದಕ್ಷಿಣಂ ತ್ಯಾಗಶೀಲಂ ಚ ಸರ್ವಸ್ಯ ಪ್ರಿಯದರ್ಶನಮ್ ॥ ೨೪॥

ಕೇಶಿನಿಯು ಸಗರನನ್ನೂ, ಭೀಮರಾಜನ ಮಗಳಾದ ಪತಿವ್ರತೆಯಾದ ದಮಯಂತಿಯು ನಳನನ್ನೂ, ಅನುಸರಿಸುವಂತೆ ನಾನು ನನ್ನ ಪತಿಯಾದ ಇಕ್ಷ್ವಾಕು ಕುಲತಿಲಕನಾದ ಶ್ರೀರಾಮನನ್ನೇ ಅನುಸರಿಸಿಕೊಂಡಿರುತ್ತೆನೆ.'' ॥೯-೧೨॥

ಸೀತಾದೇವಿಯು ಹೇಳಿದ ಮಾತನ್ನು ಕೇಳಿ, ರಾವಣನಿಂದ ಪ್ರೇರಿತರಾದ ರಾಕ್ಷಸ ಸ್ತ್ರೀಯರು ಕೋಪೋದ್ರಿಕ್ತರಾಗಿ ಕಠೋರವಾದ ಮಾತುಗಳಿಂದ ಅವಳನ್ನು ಭಯಪಡಿಸುತ್ತಲೇ ಇದ್ದರು.॥೧೩॥

ಶಿಂಶುಪಾವೃಕ್ಷದಲ್ಲಿ ಮೌನವಾಗಿ ಹುದುಗಿಕೊಂಡಿದ್ದ ಹನುಮಂತನು ಸೀತಾದೇವಿಯನ್ನು ಭಯಪಡಿಸುತ್ತಿದ್ದ ರಾಕ್ಷಸಿಯರ ಮಾತುಗಳನ್ನು ಶಾಂತವಾಗಿ ಕೇಳುತ್ತಿದ್ದನು.॥೧೪॥

ಕೋಪಗೊಂಡಿದ್ದ ಆ ರಾಕ್ಷಸಿಯರು ಭಯದಿಂದ ನಡುಗುತ್ತಿದ್ದ ಸೀತಾದೇವಿಯನ್ನು ಸುತ್ತುವರಿದು ಕುಳಿತು ಪ್ರದೀಪ್ತವಾಗಿಯೂ, ಜೊಲಾಡುತ್ತಲೂ ಇದ್ದ ತುಟಿಗಳನ್ನು ಆಗಾಗ ನೆಕ್ಕಿಕೊಳ್ಳುತ್ತಾ ಅವಳನ್ನು ತಿಂದು ಬಿಡುವಂತೆ ಪ್ರವರ್ತಿಸುತ್ತಿದ್ದರು.॥೧೫॥ ಪರಮ ಕ್ರುದ್ಧೆಯರಾಗಿದ್ದ ಆ ರಾಕ್ಷಸಿಯರು ಗಂಡುಕೊಡಲಿಗಳನ್ನು ಮೇಲೆತ್ತಿಕೊಂಡು, ರಾಕ್ಷಸಾಧಿಪನಾದ ರಾವಣನನ್ನು ಪತಿಯಾಗಿ ವರಿಸಲು ಇವಳು ಖಂಡಿತವಾಗಿ ಯೋಗ್ಯಳಲ್ಲ. ಆದುದರಿಂದ ಇವಳನ್ನು ಸಂಹರಿಸುವುದೇ ಯುಕ್ತವಾಗಿದೆ ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದರು.॥೧೬-೧೭॥

ಭಯಂಕರರಾದ ರಾಕ್ಷಸಿಯರು ಹೀಗೆ ಭಯಪಡಿಸುತ್ತಿರುವಾಗ ವರಾಂಗನೆಯಾದ ಸೀತಾದೇವಿಯು ಕಣ್ಣೀರನ್ನು ಒರೆಸಿಕೊಳ್ಳುತ್ತಾ ಹನುಮಂತನು ಅವಿತುಕೊಂಡಿದ್ದ ಶಿಂಶುಪಾವೃಕ್ಷದ ಬಳಿಗೆ ಹೋದಳು.॥೧೮॥ ಹೀಗೆ ಶಿಂಶುಪಾವೃಕ್ಷದಬಳಿಗೆ ಹೋದ ಸೀತಾದೇವಿಯನ್ನು ಆ ರಾಕ್ಷಸಸ್ತ್ರೀಯರು ಸುತ್ತುವರಿದರು. ಆಗ ವಿಶಾಲಾಕ್ಷಿಯಾದ ಅವಳು ಶೋಕಮಗ್ನಳಾದಳು. ಸೀತೆಯು ರಾಮವಿಯೋಗ ವ್ಯಸನದಿಂದ ಅತ್ಯಂತ ಕೃಶಕಾಯಳಾಗಿದ್ದಳು. ದೀನವದನೆಯಾಗಿದ್ದಳು. ಮಲಿನವಾದ ವಸ್ತ್ರವನ್ನುಟ್ಟಿದ್ದಳು. ಸುತ್ತಲೂ ಕುಳಿತ್ತಿದ್ದ ಭಯಂಕರಾಕಾರದ ರಕ್ಕಸಿಯರು ಅವಳನ್ನು ಭಯಪಡಿಸುತ್ತಲೇ ಇದ್ದರು.॥೧೯-೨೦॥

ಅತ್ಯಂತ ಭಯಂಕರರಾಗಿ ಕಾಣುತ್ತಿದ್ದು, ಕೋಪಗೊಂಡಿದ್ದ, ಉಬ್ಬುಹಲ್ಲುಗಳಿದ್ದ, ಹಳ್ಳವಂತೆ ಹೊಟ್ಟೆಯಿದ್ದ, 'ವಿನತಾ' ಎಂಬ ರಕ್ಕಸಿಯು ಪುನಃ ಸೀತೆಗೆ ಹೇಳತೊಡಗಿದಳು.॥೨೧॥

''ಎಲೈ ಸೀತೆ! ನಿನ್ನ ಗಂಡನ ವಿಷಯದಲ್ಲಿ ನಿನಗಿರುವ ಪ್ರೀತಿಯನ್ನು ಇಷ್ಟರವರೇಗೆ ಪ್ರದರ್ಶಿಸಿದ್ದನ್ನು ಸಾಕುಮಾಡು. ಮಂಗಳಾಂಗಿಯೇ! ಯಾವ ವಿಷಯದಲ್ಲೇ ಆಗಲೀ, ಯಾವಾಗಲೂ ಅತಿಯಾಗಿ ವರ್ತಿಸುವುದು ವ್ಯಸನಕ್ಕೆ ಕಾರಣವಾಗಿದೆ.॥೨೨॥ ಎಲೈ ಸೀತೆ! ಓರ್ವ ಮಾನವಸ್ತ್ರೀಯ ಧರ್ಮವನ್ನು ನೀನು ಚೆನ್ನಾಗಿ ಆಚರಿಸಿದ್ದಿಯೇ. ಇದರಿಂದ ನನಗೆ ಸಂತೋಷವಾಗಿದೆ. ನಿನಗೆ ಮಂಗಳವಾಗಲಿ. ಆದರೆ ನಿನಗೆ ಹಿತವಾಗುವುದನ್ನು ನಾನು ಹೇಳುತ್ತೇನೆ. ಅದರಂತೆ ನಡೆ.॥೨೩॥ ದೇವತೆಗಳ ಒಡೆಯನಾದ ಇಂದ್ರನಂತೆ ಪರಾಕ್ರಮಿಯೂ, ರೂಪವಂತನೂ, ಎಲ್ಲ ರಾಕ್ಷಸರಿಗೆ ಒಡೆಯನೂ ಆದ ರಾವಣನನ್ನು ಪತಿಯಂತೆ ಸೇವಿಸು. ಸಮರ್ಥನೂ, ತ್ಯಾಗಶೀಲನೂ, ಪ್ರಿಯದರ್ಶಿಯೂ ಆದ ರಾವಣೇಶ್ವರನನ್ನು

ಮಾನುಷಂ ಕೃಪಣಂ ರಾಮಂ ತ್ಯಕ್ತ್ವಾ ರಾವಣಮಾಶ್ರಯ ।
ದಿವ್ಯಾಂಗರಾಗಾ ವೈದೇಹೀ ದಿವ್ಯಾಭರಣಭೂಷಿತಾ ॥ ೨೫॥

ಅದ್ಯ ಪ್ರಭೃತಿ ಸರ್ವೇಷಾಂ ಲೋಕಾನಾಮೀಶ್ವರೀ ಭವ ।
ಅಗ್ನೇಃ ಸ್ವಾಹಾ ಯಥಾ ದೇವೀ ಶಚೀವೇಂದ್ರಸ್ಯ ಶೋಭನೇ ॥ ೨೬॥

ಕಿಂ ತೇ ರಾಮೇಣ ವೈದೇಹಿ ಕೃಪಣೇನ ಗತಾಯುಷಾ ।
ಏತದುಕ್ತಂ ಚ ಮೇ ವಾಕ್ಯಂ ಯದಿ ತ್ವಂ ನ ಕರಿಷ್ಯಸಿ ॥ ೨೭॥

ಅಸ್ಮಿನ್ ಮುಹೂರ್ತೇ ಸರ್ವಾಸ್ತ್ವಾಂ ಭಕ್ಷಯಿಷ್ಯಾಮಹೇವಯಮ್ ।
ಅನ್ಯಾ ತು ವಿಕಟಾ ನಾಮ ಲಂಬಮಾನಪಯೋಧರಾ ॥ ೨೮॥

ಅಬ್ರವೀತ್ ಕುಪಿತಾ ಸೀತಾಂ ಮುಷ್ಟಿಮುದ್ಯಮ್ಯ ಗರ್ಜತೀ ।
ಬಹೂನ್ಯಪ್ರಿಯರೂಪಾಣಿ ವಚನಾನಿ ಸುದುರ್ಮತೇ ॥ ೨೯॥

ಅನುಕ್ರೋಶಾನ್ಮೃದುತ್ವಾಚ್ಚ ಸೋಢಾನಿ ತವ ಮೈಥಿಲಿ ।
ನ ಚ ನಃ ಕುರುಷೇ ವಾಕ್ಯಂ ಹಿತಂ ಕಾಲಪುರಃಸರಮ್ ॥ ೩೦॥

ಆನೀತಾಸಿ ಸಮುದ್ರಸ್ಯ ಪಾರಮನ್ಯೈರ್ದುರಾಸದಮ್ ।
ರಾವಣಾಂತಃಪುರಂ ಘೋರಂ ಪ್ರವಿಷ್ಟಾ ಚಾಸಿ ಮೈಥಿಲಿ ॥ ೩೧॥

ರಾವಣಸ್ಯ ಗೃಹೇ ರುದ್ಧಾಮಸ್ಮಾಭಿಸ್ತು ಸುರಕ್ಷಿತಾಮ್ ।
ನ ತ್ವಾಂ ಶಕ್ತಃ ಪರಿತ್ರಾತುಮಪಿ ಸಾಕ್ಷಾತ್ ಪುರಂದರಃ ॥ ೩೨॥

ಕುರುಷ್ವ ಹಿತವಾದಿನ್ಯಾ ವಚನಂ ಮಮ ಮೈಥಿಲಿ ।
ಅಲಮಶ್ರುಪ್ರಪಾತೇನ ತ್ಯಜ ಶೋಕಮನರ್ಥಕಮ್ ॥ ೩೩॥

ಭಜ ಪ್ರೀತಿಂ ಪ್ರಹರ್ಷಂ ಚ ತ್ಯಜೈತಾಂ ನಿತ್ಯದೈನ್ಯತಾಮ್ ।
ಸೀತೇ ರಾಕ್ಷಸರಾಜೇನ ಸಹ ಕ್ರೀಡ ಯಥಾಸುಖಮ್ ॥ ೩೪॥

ಜಾನಾಸಿ ಹಿ ಯಥಾ ಭೀರು ಸ್ತ್ರೀಣಾಂ ಯೌವನಮಧ್ರುವಮ್ ।
ಯಾವನ್ನ ತೇ ವ್ಯತಿಕ್ರಾಮೇತ್ತಾವತ್ ಸುಖಮವಾಪ್ನು ಹಿ ॥ ೩೫॥

ಉದ್ಯಾನಾನಿ ಚ ರಮ್ಯಾಣಿ ಪರ್ವತೋಪವನಾನಿ ಚ ।
ಸಹ ರಾಕ್ಷಸರಾಜೇನ ಚರ ತ್ವಂ ಮದಿರೇಕ್ಷಣೇ ॥ ೩೬॥

ಸ್ತ್ರೀ ಸಹಸ್ರಾಣಿ ತೇ ಸಪ್ತವಶೇ ಸ್ಥಾಶ್ಯಂತಿ ಸುಂದರಿ ।
ರಾವಣಂ ಭಜ ಭರ್ತಾರಂ ಭರ್ತಾರಂ ಸರ್ವರಕ್ಷಸಾಮ್ ॥ ೩೭॥

ಉತ್ಪಾಟ್ಯ ವಾ ತೇ ಹೃದಯಂ ಭಕ್ಷಯಿಷ್ಯಾಮಿ ಮೈಥಿಲಿ ।
ಯದಿ ಮೇ ವ್ಯಾಹೃತಂ ವಾಕ್ಯಂ ನ ಯಥಾವತ್ ಕರಿಷ್ಯಸಿ ॥ ೩೮॥

ಆಶ್ರಯಿಸು. ಕೃಪಣನೂ, ತುಚ್ಛಮಾನವನೂ ಆದ ರಾಮನನ್ನು ತ್ಯಜಿಸಿಬಿಡು.॥೨೪-೨೫॥ ಎಲೈ ವೈದೇಹಿಯೇ! ಇಂದಿನಿಂದ ಲೋಕೇಶ್ವರನಾದ ರಾವಣನನ್ನು ವರಿಸಿ, ದಿವ್ಯವಾದ ಅಂಗರಾಗಗಳನ್ನು ಪೂಸಿಕೊಂಡು, ದಿವ್ಯಾಭರಣಗಳಿಂದ ಅಲಂಕೃತಳಾಗಿ ಎಲ್ಲ ಲೋಕಗಳಿಗೂ ಒಡತಿಯಾಗು.॥೨೬॥ ಎಲೈ ಮಂಗಳ ಸ್ವರೂಪಳೇ! ಅಗ್ನಿದೇವನಿಗೆ ಸ್ವಾಹಾದೇವಿಯಂತೆ, ಇಂದ್ರನಿಗೆ ಶಚಿದೇವಿಯಂತೆ ನೀನು ರಾವಣೇಶ್ವರನಿಗೆ ಪತ್ನಿಯಾಗು. ಅಲ್ಪಾಯುವೂ, ದೀನನೂ ಆದ ಆ ರಾಮನಿಂದ ನಿನಗೆ ಏನಾಗಬೇಕಾಗಿದೆ?॥೨೭॥ ನಾನು ಹೇಳುವ ಮಾತಿನಂತೆ ನೀನು ನಡೆದು ಕೊಳ್ಳದಿದ್ದರೆ, ಈ ಕ್ಷಣದಲ್ಲೇ ನಿನ್ನನ್ನು ನಾವೆಲ್ಲರೂ ತಿಂದು ಬಿಡುತ್ತೇವೆ".॥೨೮॥

ಜೋತುಬಿದ್ದ ಸ್ತನಗಳ್ಳುಳ್ಳ ವಿಕಟೆಯೆಂಬ ಮತ್ತೊಬ್ಬ ರಕ್ಕಸಿಯು ಕುಪಿತಳಾಗಿ ಮುಷ್ಟಿಯನ್ನು ಮೇಲೆತ್ತಿ ಸೀತಾದೇವಿಯನ್ನು ಭಯಪಡಿಸುತ್ತಾ ಇಂತು ನುಡಿದಳು-॥೨೯॥ ಬುದ್ಧಿಹೀನಳಾದ ಎಲೈ ಮೈಥಿಲೀ! ಅಪ್ರಿಯವಾದ ನಿನ್ನ ಎಲ್ಲ ಮಾತುಗಳನ್ನು ತಾಳ್ಮೆಯಿಂದ ನಾವು ಕೇಳಿದೆವು. ಆದರೆ ನಿನ್ನ ಕುರಿತು ಕರುಣೆಯುಂಟಾಗುತ್ತಿದೆ. ಅದರಿಂದ ನಾನು ಹೇಳುವ ಮಾತನ್ನು ಕೇಳು.॥೩೦॥ ಎಲೈ ಸೀತೆ! ಕಾಲಾನುಗುಣವಾಗಿ ನಿನಗೆ ಅತ್ಯಂತ ಹಿತಕರವಾದ ನಮ್ಮ ಮಾತಿನಂತೆ ನೀನು ನಡೆದು ಕೊಳ್ಳುತ್ತಿಲ್ಲ. ಇತರರಿಂದ ದಾಟಲು ಅಶಕ್ಯವಾದ ಸಮುದ್ರದ ದಕ್ಷಿಣ ತೀರಕ್ಕೆ ರಾವಣನು ನಿನ್ನನ್ನು ಕರೆದು ತಂದಿರುವನು.॥೩೧॥ ಓ ಮೈಥಿಲೀ! ನೀನೀಗ ಅತಿಘೋರವಾಗಿ ಕಾಣುವ ರಾವಣನ ಅಂತಃಪುರದಲ್ಲಿ ಬಂಧಿತಳಾಗಿರುವೆ. ನಿನ್ನನ್ನು ನಾವೆಲ್ಲರೂ ಕಾವಲು ಕಾಯುತ್ತಿದ್ದೇವೆ. ಸಾಕ್ಷಾತ್ ಆ ದೇವೇಂದ್ರನೂ ಕೂಡ ನಿನ್ನನ್ನು ರಕ್ಷಿಸಲು ಸಮರ್ಥನಲ್ಲ. ಆದುದರಿಂದ ಹಿತಕರವಾದ ನನ್ನ ಮಾತಿನಂತೆ ನಡೆದುಕೊ.॥೩೨-೩೩॥ ಎಲೈ ಸೀತಾದೇವೀ! ಅಳುವನ್ನು ನಿಲ್ಲಿಸು. ವ್ಯರ್ಥವಾದ ಶೋಕವನ್ನು ಪರಿತ್ಯಜಿಸು. ನಿತ್ಯದೈನ್ಯವನ್ನು ದೂರಮಾಡು. ಸುಪ್ರೀತಳಾಗು. ಉಲ್ಲಾಸದಿಂದಿರು. ಭಯಸ್ವಭಾವದವಳಾದ ಓ ಸೀತಾ! ಸ್ತ್ರಿಯರ ಯೌವನವೂ ಸ್ಥಿರವಾಗಿ ನಿಲ್ಲಲಾರದು. ಅದರ ಶೋಭೆಯು ಕ್ರಮವಾಗಿ ಕ್ಷಿಣಿಸುವುದು. ಅದು ಕಳೆದು ಹೋಗುವುದರೊಳಗೆ ನೀನು ವಿಚಾರಮಾಡಿ ರಾಕ್ಷಸರಾಜನಾದ ರಾವಣನೊಡನೆ ಹಾಯಾಗಿ ರಮಿಸಿ ಸುಖವನ್ನು ಅನುಭವಿಸು.॥೩೪-೩೫॥ ನೀನು ರಾವಣನಿಗೆ ವ್ಯತಿರೇಕವಾಗಿ ನಡೆದುಕೊಳ್ಳದೆ, ಅವನಿಗೆ ಅನುಕೂಲಳಾಗಿ ಇದ್ದರೆ ನಿನಗೆ ಸುಖಗಳು ದಕ್ಕುವುವು. ಆದುದರಿಂದ ಓ ಸುಂದರೀ! ರಾವಣೇಶ್ವರನೊಡನೆ ರಮ್ಯವಾದ ಉದ್ಯಾನವನಗಳಲ್ಲಿಯೂ, ಪರ್ವತದ ಉಪವನಗಳಲ್ಲಿಯೂ, ಆಮೋದದಿಂದ ವಿಹರಿಸು. ಆಗ ಏಳು ಸಾವಿರ ನಮ್ಮಂತಹ ಪರಿಚಾರಿಕೆಯರು ನಿನ್ನ ಅಧೀನದಲ್ಲಿರುತ್ತಾರೆ. ॥೩೬-೩೭॥ ಸರ್ವರಾಕ್ಷಸರಿಗೆ ಸ್ವಾಮಿಯಾದ ರಾವಣನಿಗೆ ನೀನು ಭಾರ್ಯೆಯಾಗಿ ಅವನನ್ನು ಸೇವಿಸು. ನಾನು ಈಗ ಹೇಳಿದಂತೆ ನೀನು ನಡೆದು ಕೊಳ್ಳದಿದ್ದರೆ ನಿನ್ನ ಎದೆಯನ್ನು ಸೀಳಿ ನಿನ್ನನ್ನು ತಿಂದುಹಾಕುತ್ತೇವೆ.॥೩೮॥

ತತಶ್ಚಂಡೋದರೀ ನಾಮ ರಾಕ್ಷಸೀ ಕ್ರೋಧಮೂರ್ಛಿತಾ।
ಭ್ರಾಮಯಂತೀ ಮಹಚ್ಶೂಲಮಿದಂ ವಚನಮಬ್ರವೀತ್ ॥ ೩೯॥

ಇಮಾಂ ಹರಿಣಶೋಲಾಕ್ಷೀಂ ತ್ರಾಸೋತ್ಕಂಪಿಪಯೋಧರಾಮ್ ।
ರಾವಣೇನ ಹೃತಾಂ ದೃಷ್ಟ್ವಾ ದೌರ್ಹೃದೋ ಮೇ ಮಹಾನಭೂತ್॥

ಯಕೃತ್ಪ್ಲೀಹ ಮಥೋತ್ಪೀಡಂ ಹೃದಯಂ ಚ ಸುಪೀಡನಮ್ ।
ಅಂತ್ರಾಣ್ಯಪಿ ತಥಾ ಪೀರ್ಯಂ ಖಾದೇಯಮಿತಿ ಮೇ ಮತಿಃ॥ ೪೧॥

ತತಸ್ತು ಪ್ರಘಸಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ಕಂತಮಸ್ಯಾ ನೃಶಂಸಾಯಾಃ ಪೀಡಯಾಮ ಕಿಮಾಸ್ಯತೇ ॥ ೪೨॥

ನಿವೇದ್ಯತಾಂ ತತೋ ರಾಜ್ಞೇ ಮಾನುಷೀ ಸಾ ಮೃತೇತಿ ಹ।
ನಾತ್ರ ಕಶ್ಚನ ಸಂದೇಹಃ ಖಾದತೇತಿ ಸ ವಕ್ಷ್ಯತಿ॥ ೪೩॥

ತತಸ್ತ್ವಜಾಮುಖೀ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ವಿಶಸ್ಯೇಮಾಂ ತತಃ ಸರ್ವಾಃ ಸಮಾನ್ ಕುರುತ ಪಿಂಡಕಾನ್ ॥ ೪೪॥

ವಿಭಜಾಮ ತತಃ ಸರ್ವಾಃ ವಿವಾದೋ ಮೇ ನ ರೋಚತೇ ।
ಕೇಯಮಾನೀಯತಾಂ ಕ್ಷಿಪ್ರಂ ಲೇಹ್ಯಮುಚ್ಚಾವಚಂ ಬಹು ॥ ೪೫॥

ತತಃ ಶೂರ್ಪಣಖಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ಅಜಾಮುಖ್ಯಾ ಯದುಕ್ತಂ ಹಿ ತದೇವ ಮಮ ರೋಚತೇ ॥ ೪೬॥

ಸುರಾ ಚಾನೀಯತಾಂ ಕ್ಷಿಪ್ರಂ ಸರ್ವಶೋಕವಿನಾಶಿನೀ।
ಮಾನುಷಂ ಮಾಂಸಮಾಸ್ವಾದ್ಯ ನೃತ್ಯಾಮೋಽಥ ನಿಕುಂಭಿಲಾಮ್॥

ಏವಂ ಸಂಭರ್ತ್ಸ್ಯಮಾನಾ ಸಾ ಸೀತಾ ಸುರಸುತೋಪಮಾ ।
ರಾಕ್ಷಸೀಭಿಃ ಸುಘೋರಾಭಿರ್ಧೈರ್ಯಮುತ್ಸೃಜ್ಯ ರೋದಿತಿ ॥ ೪೮॥

ಆನಂತರ ಅತ್ಯಂತ ಕ್ರೂರಿಯಾಗಿ ಕಾಣುತ್ತಿದ್ದ ಚಂಡೋದರಿ ಎಂಬ ರಾಕ್ಷಸಿಯು ಮಹಾಶೂಲವನ್ನು ಎತ್ತಿಕೊಂಡು ಗರ-ಗರನೆ ತಿರುಗಿಸುತ್ತಾ ಇಂತು ಹೇಳಿದಳು-॥೩೯॥

ಭಯದಿಂದ ಕಂಪಿಸುತ್ತಿರುವ ವಕ್ಷಸ್ಥಳವುಳ್ಳವಳೂ, ಜಿಂಕೆಯಂತೆ ಹೆದರಿದ ಚಂಚಲ ಕಣ್ಣುಗಳುಳ್ಳವಳೂ, ರಾವಣನಿಂದ ಅಪಹರಿಸಿ ತಂದಿರುವ ಈ ಸೀತೆಯನ್ನು ನೋಡಿ ಗರ್ಭಿಣಿಯರಂತೆ ನನಗೆ ಮಹತ್ತರವಾದೊಂದು ಬಯಕೆ ಉಂಟಾಗಿದೆ.॥೪೦॥ ಇವಳ ಹೃದಯದ ಬಲಭಾಗದಲ್ಲಿರುವ ಕಾಲಖಂಡ (ಯಕೃತ್ತು)ಎಂಬ ಮಾಂಸಖಂಡವನ್ನು, ಎಡಭಾಗದಲ್ಲಿರುವ ಗುಲ್ಮ(ಪ್ಲೀಹ)ಎಂಬ ಮಾಂಸಖಂಡವನ್ನು, ಎದೆಯ ಮೇಲಿರುವ ಮಾಂಸವನ್ನು, ಕರುಳುಗಳನ್ನು, ತಲೆಯನ್ನು ತಿಂದುಹಾಕಿ ಬಿಡಬೇಕೆಂಬ ಬುದ್ಧಿಯು ನನಗೆ ಉಂಟಾಗಿದೆ.॥೪೧॥

ಬಳಿಕ ಪ್ರಘಸಾ ಎಂಬ ರಾಕ್ಷಸಿಯು ಹೀಗೆ ಹೇಳಿದಳು– ''ವ್ಯರ್ಥವಾಗಿ ಆಲೋಚಿಸುತ್ತಾ ಸುಮ್ಮನೆ ಏಕೆ ಕುಳಿತಿರುವಿರಿ? ಮೂರ್ಖಳಾದ ಇವಳ ಕತ್ತನ್ನು ಹಿಸುಕಿ ಕೊಂದುಬಿಡೋಣ. ಮತ್ತೆ ಈ ಮಾನವ ಕಾಂತೆಯು ಸತ್ತುಹೋದಳೆಂದು ರಾವಣನ ಬಳಿಗೆ ಹೋಗಿ ಹೇಳಿಬಿಡೋಣ. ಆಗ ನಮ್ಮ ರಾಜನು ನಮಗೆ 'ಅವಳನ್ನು ತಿಂದುಬಿಡಿ' ಎಂದು ಆಜ್ಞಾಪಿಸುವನು. ಇದರಲ್ಲಿ ಸಂದೇಹವೇ ಇಲ್ಲ.॥೪೨-೪೩॥

ಆನಂತರ ಅಜಾಮುಖಿ ಎಂಬ ರಾಕ್ಷಸಿಯು ಇಂತು ಅರುಹಿದಳು– ''ಗೆಳತಿಯರೇ! ನಾವೆಲ್ಲ ಸೇರಿ ಇವಳನ್ನು ಕತ್ತರಿಸಿ ಚೂರು-ಚೂರುಮಾಡಿ ಮಾಂಸಖಂಡಗಳೆಲ್ಲವನ್ನೂ ಉಂಡೆಗಳನ್ನಾಗಿಮಾಡಿ ಸಮಾನವಾಗಿ ಹಂಚಿಕೊಳ್ಳೋಣ.ಹಂಚಿಕೆಯ ವಿಷಯದಲ್ಲಿ ವಿವಾದ ಉಂಟಾಗುವುದು ನನಗೆ ರುಚಿಸುವುದಿಲ್ಲ. ಇವಳ ಮಾಂಸದ ಜೊತೆಗೆ ಕುಡಿಯಲು ಮದ್ಯವನ್ನು, ವಿಧ-ವಿಧವಾದ ಲೇಹ್ಯ-ಚೋಷ್ಯಗಳನ್ನು ತಂದು ನಾವೆಲ್ಲರೂ ಔತಣವನ್ನು ಮಾಡೋಣ.॥೪೪-೪೫॥

ಆಗ ಶೂರ್ಪನಖಿ ಎಂಬ ರಕ್ಕಸಿಯು ಹೇಳುತ್ತಾಳೆ– ಸಖಿಯರೇ! ಅಜಾಮುಖಿಯು ಹೇಳುತ್ತಿರುವುದು ನನಗೂ ಸಮ್ಮತವಾಗಿದೆ. ಸರ್ವಶೋಕವನ್ನು ವಿನಾಶಗೊಳಿಸುವ ಮದ್ಯವನ್ನು ಬೇಗನೇ ತನ್ನಿರಿ. ಮದ್ಯದೊಡನೆ ಮನುಷ್ಯ ಮಾಂಸವನ್ನು ಭಕ್ಷಿಸಿ ನಿಕುಂಭಳೆಯೆಂಬ ಭದ್ರಕಾಲಿಯ ಸನ್ನಿಧಿಯಲ್ಲಿ ನರ್ತಿಸೋಣ.॥೪೬-೪೭॥

ವಿಕಾರರೂಪಿಣಿಯರಾದ ರಾಕ್ಷಸಿಯರು ದೇವಕನ್ಯೆಯಂತಿದ್ದ ಸೀತಾದೇವಿಯನ್ನು ಹೀಗೆ ಭಯಗೊಳಿಸುತ್ತಿರುವಾಗ ಸೀತೆಯು ಧೈರ್ಯವನ್ನು ಕಳಕೊಂಡು ಅಳತೊಡಗಿದಳು.॥೪೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಚತುರ್ವಿಂಶಃ ಸರ್ಗಃ ॥ ೨೪ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತನಾಲ್ಕನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತೈದನೆಯ ಸರ್ಗ

ರಾಕ್ಷಸಿಯರ ಮಾತುಗಳನ್ನು ತಿರಸ್ಕರಿಸುತ್ತಾ ಸೀತಾದೇವಿಯು ಶೋಕಸಂತಪ್ತಳಾಗಿ ವಿಲಪಿಸಿದುದು –

ತಥಾ ತಾಸಾಂ ವದಂತೀನಾಂ ಪರುಷಂ ದಾರುಣಂ ಬಹು ।
ರಾಕ್ಷಸೀನಾಮಸೌಮ್ಯಾನಾಂ ರುರೋದ ಜನಕಾತ್ಮಜಾ ॥ ೧॥

ವಿವದಮುಕ್ತಾ ತು ವೈದೇಹೀ ರಾಕ್ಷಸೀಭಿರ್ಮನಸ್ವಿನೀ ।
ಉವಾಚ ಪರಮತ್ರಸ್ತಾ ಬಾಷ್ಪಗದ್ಗದಯಾ ಗಿರಾ ॥ ೨॥

ನ ಮಾನುಷೀ ರಾಕ್ಷಸಸ್ಯ ಭಾರ್ಯಾ ಭವಿತುಮರ್ಹತಿ ।
ಕಾಮಂ ಖಾದತ ಮಾಂ ಸರ್ವಾ ನ ಕರಿಷ್ಯಾಮಿ ವೋ ವಚಃ॥ ೩॥

ಸಾ ರಾಕ್ಷಸೀಮಧ್ಯಗತಾ ಸೀತಾ ಸುರಸುತೋಪಮಾ ।
ನ ಶರ್ಮ ಲೇಭೇ ದುಃಖಾರ್ತಾ ರಾವಣೇನ ಚ ತರ್ಜಿತಾ ॥ ೪॥

ವೇಪತೇ ಸ್ಮಾಧಿಕಂ ಸೀತಾ ವಿಕಂತೀವಾಂಗಮಾತ್ಮನಃ ।
ದನೇ ಯೂಥ ಪರಿಭ್ರಷ್ಟಾ ಮೃಗೀ ಕೋಕೈರಿವಾರ್ದಿತಾ ॥ ೫॥

ಸಾ ತತ್ಶೋಕಸ್ಯ ವಿಪುಲಾಂ ಶಾಕಾಮಾಲಂಬ್ಯ ಪುಷ್ಪಿತಾಮ್ ।
ಚಿಂತಯಾಮಾಸ ಶೋಕೇನ ಭರ್ತಾರಂ ಭಗ್ನಮಾನಸಾ ॥ ೬॥

ಸಾ ಸ್ಮಾಪಯಂತೀ ವಿಪುಲೌ ಸ್ತನೌ ನೇತ್ರಜಲಸ್ರವೈಃ ।
ಚಿಂತಯಂತೀ ನ ಶೋಕಸ್ಯ ತದಾಂತಮಧಿಗಚ್ಛತಿ ॥ ೭॥

ಸಾ ವೇಪಮಾನಾ ಪತಿತಾ ಪ್ರವಾತೇ ಕದಲೀ ಯಥಾ ।
ರಾಕ್ಷಸೀನಾಂ ಭಯತ್ರಸ್ತಾ ವಿಷಣ್ಣವದನಾಭವತ್ ॥ ೮॥

ತಸ್ಯಾಃ ಸಾ ದೀರ್ಘವಿಪುಲಾ ವೇಪಂತ್ಯಾ ಸೀತಯಾ ತದಾ ।
ದದೃಶೇ ಕಂಪಿನೀ ವೇಣೀ ವ್ಯಾಲೀವ ಪರಿಸರ್ಪತೀ ॥ ೯॥

ಸಾ ನಿಶ್ವಸಂತೀ ದುಃಖಾರ್ತಾ ಶೋಕೋಪಹತಚೇತನಾ ।
ಆರ್ತಾ ವ್ಯಸೃಜದಶ್ರೂಣಿ ಮೈಥಿಲೀ ವಿಲಲಾಪ ಹ ॥ ೧೦॥

ಹಾ ರಾಮೇತಿ ಚ ದುಃಖಾರ್ತಾ ಹಾ ಪುನರ್ಲಕ್ಷ್ಮಣೇತಿ ಚ ।
ಹಾ ಶ್ವಶ್ರು ಮಮ ಕೌಸಲ್ಯೇ ಹಾ ಸುಮಿತ್ರೇತಿ ಭಾಮಿನೀ ॥ ೧೧॥

ಕ್ರೂರಸ್ವಭಾವದ ಆ ರಾಕ್ಷಸಿಯರು ಹೆಚ್ಚಾಗಿ ಭಯಪಡಿಸುವ ಕಠೋರವೂ, ದಾರುಣವೂ ಆದ ಮಾತುಗಳನ್ನು ಕೇಳಿ ಜಾನಕಿಯು ಅಳತೊಡಗಿದಳು.॥೧॥

ಭಯಗ್ರಸ್ತಳಾಗಿದ್ದರೂ ಪಾತಿವ್ರತ್ಯದಲ್ಲಿ ದೃಢಚಿತ್ತಳಾಗಿದ್ದ ಸೀತಾದೇವಿಯು ಕಣ್ಣೀರಿಡುತ್ತಾ ಗದ್ಗದವಾದ ಸ್ವರದಿಂದ ಕೂಡಿ ತಡವರಿಸುತ್ತಾ ಹೀಗೆ ಹೇಳಿದಳು– ॥೨॥ ರಾಕ್ಷಸಸ್ತ್ರೀಯರೇ! ಮನುಷ್ಯ ಸ್ತ್ರೀಯು ರಾಕ್ಷಸನ ಭಾರ್ಯೆಯಾಗಲು ಖಂಡಿತವಾಗಿ ಅರ್ಹಳಲ್ಲ; ನೀವು ಬಯಸುವಿರಾದರೆ ಎಲ್ಲರೂ ನನ್ನನ್ನು ತಿಂದು ಬಿಡಿ. ನಾನು ಮಾತ್ರ ನಿಮ್ಮ ಮಾತಿನಂತೆ ಎಂದಿಗೂ ನಡೆದು ಕೊಳ್ಳುವುದಿಲ್ಲ.॥೩॥ ರಾವಣನಿಂದ ಭಯಪಡಿಸಲ್ಪಟ್ಟು ದೇವ ಕನ್ಯೆಯಂತಿದ್ದ ಆ ಸೀತಾದೇವಿಯು ರಾಕ್ಷಸ ಸ್ತ್ರೀಯರ ಮಧ್ಯದಲ್ಲಿ ಬಿಕ್ಕಿ-ಬಿಕ್ಕಿಅಳುತ್ತಾ ದುಃಖಾರ್ತೆಯಾಗಿ ಶಾಂತಿಯನ್ನು ಕಳಕೊಂಡಿದ್ದಳು.॥೪॥ ಅರಣ್ಯದಲ್ಲಿ ಗುಂಪಿನಿಂದ ತಪ್ಪಿಸಿ ಕೊಂಡು ತೋಳಗಳ ಮಧ್ಯದಲ್ಲಿ ಸಿಕ್ಕಿ ಪೀಡಿಸಲ್ಪಡುವ ಜಿಂಕೆಯಂತೆ ಸೀತಾದೇವಿಯು ತನ್ನ ಶರೀರವನ್ನು ಮುದುಡಿಸಿ ಕೊಂಡು ಗಡ-ಗಡನೆ ನಡುಗುತ್ತಿದ್ದಳು.॥೫॥ ಶೋಕಾಭಿಭೂತೆಯಾಗಿ, ಭಗ್ನಮಾನಸಳಾದ ಸೀತಾದೇವಿಯು ಚಿನ್ನಾಗಿ ಅರಳಿದ ಹೂವುಗಳಿಂದೊಡಗೂಡಿ ಅಶೋಕ ವೃಕ್ಷದ ಒಂದು ದೊಡ್ಡ ಟೊಂಗೆಯನ್ನು ಆಧರಿಸಿ ಕೊಂಡು ಪತಿಯನ್ನೇ ಚಿಂತಿಸುತ್ತಾ ಇದ್ದಳು.॥೬॥

ಸೀತಾದೇವಿಯು ತನ್ನ ಪತಿಯನ್ನು ಸ್ಮರಿಸುತ್ತಾ, ಕಣ್ಣೀರು ಸುರಿಸುತ್ತಾ ವಿಲಪಿಸುತ್ತಿದ್ದಳು. ನಿರಂತರವಾಗಿ ಹರಿಯುವ ಕಣ್ಣೀರಧಾರೆಯಿಂದ ಅವಳ ವಕ್ಷಸ್ಥಳವು ತೊಯ್ದುಹೋಗಿತ್ತು. ಅವಳ ಶೋಕಕ್ಕೆ ಅಂತ್ಯವೇ ಇಲ್ಲದಂತಾಯಿತು.॥೭॥ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದ ಬಾಳೆಯು ನೆಲಕ್ಕುರುಳುವಂತೆ ಆ ಸೀತಾದೇವಿಯು ರಾಕ್ಷಸ ಸ್ತ್ರೀಯರ ಭಯದಿಂದ ನಡುಗುತ್ತಾ ನೆಲದಮೇಲೆ ಕುಸಿದು ಬಿದ್ದಳು. ॥೮॥ ರಾಕ್ಷಸಿಯರ ಭಯದಿಂದಾಗಿ ಅವಳ ಮುಖವು ಬಹಳ ಬಾಡಿಹೋಗಿತ್ತು. ಉದ್ದವಾಗಿಯೂ, ದಪ್ಪವಾಗಿಯೂ ಇದ್ದ ಸೀತೆಯ ಜಡೆಯು ಡೊಂಕು-ಡೊಂಕಾಗಿ ಪರಿದು ಹೋಗುತ್ತಿರುವ ಹೆಣ್ಣುಸರ್ಪ ದಂತೆ ಆಲ್ಲಾಡುತ್ತಿತ್ತು.॥೯॥ ಸೀತಾದೇವಿಯು ತನ್ನ ಪತಿಯ ಅಗಲುವಿಕೆಯಿಂದ ಹೆಚ್ಚಾಗಿ ಪರಿತಪಿಸುತ್ತಿದ್ದಳು.ಆದರಲ್ಲಿಯೂ ರಾಕ್ಷಸ ಸ್ತ್ರೀಯರ ಮಾತುಗಳು ಶೂಲದಂತೆ ಅವಳನ್ನು ಚುಚ್ಚುತ್ತಿದ್ದವು.ಆಗ ಅವಳು ನಿಟ್ಟುಸಿರು ಬಿಡುತ್ತಾ, ಕಣ್ಣೀರು ಸುರಿಸುತ್ತಾ ಹೀಗೆ ವಿಲಾಪಿಸತೊಡಗಿದಳು.॥೧೦॥ ಒಮ್ಮೆ ದುಃಖಾರ್ತಳಾಗಿ ಹಾ ರಾಮಾ! ಎನ್ನುವಳು. ಮತ್ತೊಮ್ಮೆ ಹಾ ಲಕ್ಷ್ಮಣಾ! ಎನ್ನುವಳು. ಅಯ್ಯೋ ಅತ್ತೆಯಾದ ಕೌಸಲ್ಯಾದೇವೀ! ಅಯ್ಯೋ ಸುಮಿತ್ರಾದೇವೀ! ನನ್ನ ಸ್ಥಿತಿಯು ಹೀಗಾಯಿತಲ್ಲ! ಎಂದು ಗೋಳಾಡುವಳು.॥೧೧॥

ತೋಕಸ್ಯವಾದಃ ಸತ್ಯೋಽಯಂ ಪಂಡಿತೈಃ ಸಮುದಾಹೃತಃ ।
ಆಕಾರೇ ದುರ್ಲಭೋ ಮತ್ಯುಃ ಸ್ತ್ರಿಯಾ ವಾ ಪುರುಷಸ್ಯ ವಾ ॥ ೧೨॥

ಯತ್ರಾಹಮೇವಂ ಕ್ರೂರಾಭೀ ರಾಕ್ಷಸೀಭಿರಿಹಾರ್ದಿತಾ ।
ಜೀವಾಮಿ ಹೀನಾ ರಾಮೇಣ ಮುಹೂರ್ತಮಪಿ ದುಃಖಿತಾ ॥ ೧೩॥

ವಿಶಾಲಪುಣ್ಯಾ ಕೃಪಣಾ ವಿನಶಿಷ್ಯಾಮ್ಯನಾಥವತ್ ।
ಸಮುದ್ರಮಧ್ಯೇ ನೌಃ ಪೂರ್ಣಾ ವಾಯುವೇಗೈರಿವಾಹತಾ ॥ ೧೪॥

ಭರ್ತಾರಂ ತಮಪಶ್ಯಂತೀ ರಾಕ್ಷಸೀವಶಮಾಗತಾ ।
ಸೀದಾಮಿ ಖಲು ಶೋಕೇನ ಕೂಲಂ ತೋಯಹತಂ ಯಥಾ ॥ ೧೫॥

ತಂ ಪದ್ಮದಲಪತ್ರಾಕ್ಷಂ ಸಿಂಹವಿಕ್ರಾಂತಗಾಮಿನಮ್ ।
ಧನ್ಯಾಃ ಪಶ್ಯಂತಿ ಮೇ ನಾಥಂ ಕೃತ್ಸ್ನಂ ಪ್ರಿಯವಾದಿನಮ್ ॥ ೧೬॥

ಸರ್ವಥಾ ತೇನ ಹೀನಾಯಾ ರಾಮೇಣ ವಿದಿತಾತ್ಮನಾ ।
ತೀಕ್ಷ್ಣಂ ವಿಷಮಿವಾಸ್ವಾದ್ಯ ದುರ್ಲಭಂ ಮಮ ಜೀವಿತಮ್ ॥ ೧೭॥

ಕೀದೃಶಂ ತು ಮಯಾ ಪಾಪಂ ಪುರಾ ಜನ್ಮಾಂತರೇ ಕೃತಮ್ ।
ಯೇನೇದಂ ಪ್ರಾಪ್ಯತೇ ದುಃಖಂ ಮಯಾಘೋರಂ ಸುದಾರುಣಮ್ ॥

ಜೀವಿತಂ ತ್ಯಕ್ತುಮಿಚ್ಛಾಮಿ ಶೋಕೇನ ಮಹತಾ ವೃತಾ ।
ರಾಕ್ಷಸೀಭಿರ್ಹತಂ ರಕ್ಷಂತ್ಯಾ ರಾಮೋ ನಾಸಾದ್ಯತೇ ಮಯಾ ॥ ೧೯॥

ಧಿಗಸ್ತು ಖಲು ಮಾನುಷ್ಯಂ ಧಿಗಸ್ತು ಪರವಶ್ಯತಾಮ್ ।
ನ ಶಕ್ಯಂ ಯತ್ ಪರಿತ್ಯಕ್ತುಮಾತ್ಮಚ್ಛಂದೇನ ಜೀವಿತಮ್ ॥ ೨೦॥

''ಸ್ತ್ರೀಯರಿಗಾಗಲೀ, ಪುರುಷರಿಗಾಗಲೀ, ಬಯಸಿದಾಗ ಮರಣವು ಸಂಭವಿಸುವುದಿಲ್ಲ'' ಎಂಬ ಪ್ರಾಜ್ಞರು ಉದಾಹರಿಸುವ ಹಾಗೂ ಲೋಕದ ಜನರಾಡಿಕೊಳ್ಳುವ ಮಾತು ಸತ್ಯವಾಗಿಯೇ ಇದೆ. ರಾಮನಿಂದ ಅಗಲಿದ, ಈ ವಿಧವಾಗಿ ರಾಕ್ಷಸಸ್ತ್ರೀಯರು ಬಾಧೆಪಡಿಸುತ್ತಿರುವ ನಾನು ಕ್ಷಣ ಕಾಲವಾದರೂ ಜೀವಿಸಿ ಇರಬಾರದು.ಆದರೆ ಇಷ್ಟಾದರೂ ನಾನು ಜೀವಿಸಿದ್ದೇನಲ್ಲ ಇದರಿಂದ ಪಂಡಿತರ ಮಾತು ನಿಶ್ಚಯವೆಂದೇ ಕಾಣುತ್ತದೆ. ॥೧೨-೧೭॥ ಸಾಮಗ್ರಿಗಳಿಂದ ತುಂಬಿರುವ ಹಡಗು ಸಮುದ್ರ ಮಧ್ಯದಲ್ಲಿ ಬಿರುಗಾಳಿಯ ಬಡಿತದಿಂದ ಮುಳುಗಿಹೋಗುಂತೆ, ದೀನಾವಸ್ಥೆಗೆ ಗುರಿಯಾದ ನಾನು ಕೋಕಭಾರದಿಂದ ವಿನಾಶ ಹೊಂದುವೆನು. ನಿಜವಾಗಿ ನಾನು ದುರದೃಷ್ಟವಂತೆಯೇ ಆಗಿರುವೆನು.॥೧೪॥ ರಾಕ್ಷಸಿಯರ ಅಧೀನದಲ್ಲಿರುವ ನಾನು, ಮಹಾಮಹಿಮನಾದ ಪತಿಯನ್ನು ಕಾಣದೆ, ಜಲಪ್ರವಾಹದಿಂದ ತಿಥಿಲಗೊಂಡ ದಡಗಳು ಕೊಚ್ಚಿಕೊಂಡು ಹೋಗುವಂತೆ ಈ ಪತಿವಿರಹ ಶೋಕದಿಂದಲೇ ವಿನಾಶಹೊಂದುವೆನು.॥೧೫॥ ನನ್ನ ಪತಿಯಾದ ಶ್ರೀರಾಮನು ಪದ್ಮದಳಾಯತೇತ್ಯನೂ, ಸಿಂಹದಂತೆ ಪರಾಕ್ರಮಶಾಲಿಯೂ ಹಾಗೂ ಗಂಭೀರನಡೆ ಯುಳ್ಳವನೂ, ಕೃತಜ್ಞನೂ, ಪ್ರಿಯವಾಗಿ ಮಾತಾಡುವವನೂ ಆದ ಆ ಪ್ರಭುವನ್ನು ದರ್ಶಿಸುವವರೇ ಧನ್ಯರು.॥೧೬॥ ಸದ್ಗುಣಸಂಪನ್ನನೂ, ಜಗದ್ವಿಖ್ಯಾತನೂ ಆದ ಶ್ರೀರಾಮನಿಂದ ಅಗಲಿದವಳಾದ ನಾನು- ತೀಕ್ಷ್ಣವಾದ ವಿಷವನ್ನು ಕುಡಿದವನು ಹೆಚ್ಚುಕಾಲ ಜೀವಿಸಿರಲಾರನೋ ಹಾಗೆಯೇ ಹೆಚ್ಚುಕಾಲ ಬದುಕಿರಲಾರೆನು.॥೧೭॥ ನಾನು ಪೂರ್ವಜನ್ಮದಲ್ಲಿ ಎಂತಹ ಮಹಾಪಾಪವನ್ನು ಮಾಡಿರುವೆನೋ ತಿಳಿಯದು. ಆದರಿಂದಲೇ ಈಗ ನನಗೆ ಭಯಂಕರವಾದ, ಅತಿದಾರುಣವಾದ ಇಂತಹ ಸ್ಥಿತಿಯು ಉಂಟಾಗಿದೆ.॥೧೮॥ ರಾಕ್ಷಸ ಸ್ತ್ರೀಯರ ಅಧೀನದಲ್ಲಿರುವ ನಾನು ಶ್ರೀರಾಮನನ್ನು ಸೇರಲಾರೆನು. ಆದುದರಿಂದ ಇಂತಹ ವಿರಹ ಶೋಕದಿಂದ ಸಂಕಟ ಪಡುತ್ತಿರುವ ನಾನು ಜೀವಸವನ್ನು ಮುಗಿಸುವುದೇ ಯುಕ್ತವು.॥೧೯॥

ನನ್ನ ಜೀವಿತವು ನನ್ನ ಪತಿಯಾದ ಶ್ರೀರಾಮನ ಅಧೀನವಾಗಿದೆ. ಭರ್ತೃಶರೀರವಾದ ಇದನ್ನು ಇಷ್ಟಾನುಸಾರ ವಾಗಿ ತ್ಯಜಿಸಲು ನನಗೆ ಅಧಿಕಾರವಿಲ್ಲ. ಮನುಷ್ಯತ್ವವು ಪಾಪಪುಣ್ಯ ಗಳನ್ನು ವಿಂಗಡಿಸುವಲ್ಲಿ ವಿಚಕ್ಷಣವಾದ ವಿವೇಕಯುತವಾಗಿದೆ. ಆದರಿಂದ ಈ ಜೀವಿತವನ್ನು ತ್ಯಜಿಸುವುದಕ್ಕೆ ನನಗೆ ಅವಕಾಶವಿಲ್ಲ.*॥೨೦॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಪಂಚವಿಂಶಃ ಸರ್ಗಃ ॥ ೨೫ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೈದನೆಯ ಸರ್ಗವು ಮುಗಿಯಿತು.

* * *

* ಈ ಮಾನವಜನ್ಮವನ್ನು ಕೊಟ್ಟವನು ಭಗವಂತನು. ಆದರಿಂದ ಇದು ಭಗವದಧೀನವಾಗಿದೆ. ಅಂದರೆ ಪರಾಧೀನವಾಗಿದೆ. ಇದರಿಂದ ನಮ್ಮದಲ್ಲದ ಇದನ್ನು ತ್ಯಜಿಸುವ ಅಧಿಕಾರ ಯಾವ ಮನುಷ್ಯನಿಗೂ ಇಲ್ಲ. ಆದಕ್ಕಾಗಿ ಯಾರೂ ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದು. ಆತ್ಮಹತ್ಯೆಯು ಮಹಾಪಾಪವೂ, ಭಗವದಪಚಾರವೂ ಆಗಿದೆ.

ಇಪ್ಪತ್ತಾರನೆಯ ಸರ್ಗ

ಸೀತೆಯ ವಿಲಾಪ, ಪ್ರಾಣತ್ಯಾಗಮಾಡಲು ನಿಶ್ಚಯ –

ಪ್ರಸಕ್ತಾಶ್ರುಮುಖೀ ತ್ವೇವಂ ಬ್ರುವಂತೀ ಜನಕಾತ್ಮಜಾ ।
ಅಧೋಮುಖಮುಖೀ ಬಾಲಾ ವಿಲಪ್ತುಮುಪಚಕ್ರಮೇ ॥ ೧॥

ಉನ್ಮತ್ತೇವ ಪ್ರಮತ್ತೇವ ಭ್ರಾಂತಚಿತ್ತೇವ ಶೋಚತೀ ।
ಉಪಾವೃತ್ತಾ ಕಿಶೋರೀವ ವಿವೇಷ್ಟಂತಿ ಮಹೀತಲೆ ॥ ೨॥

ರಾಘವಸ್ಯ ಪ್ರಮತ್ತಸ್ಯ ರಕ್ಷಸಾ ಕಾಮರೂಪಿಣಾ ।
ರಾವಣೇನ ಪ್ರಮಥ್ಯಾಹಮಾನೀತಾ ಕ್ರೋಶತೀ ಬಲಾತ್ ॥ ೩॥

ರಾಕ್ಷಸೀವಶಮಾಪನ್ನಾ ಭರ್ತ್ಸ್ಯಮಾನಾ ಸುದಾರುಣಮ್ ।
ಚಿಂತಯಂತೀ ಸುದುಃಖಾರ್ತಾ ನಾಹಂ ಜೀವಿತಮುತ್ಸಹೇ ॥ ೪॥

ನ ಹಿ ಮೇ ಜೀವಿತೇನಾರ್ಥೋ ನೈವಾರ್ಥೈರ್ನ ಚ ಭೂಷಣೈಃ ।
ವಸಂತ್ಯಾ ರಾಕ್ಷಸೀಮಧ್ಯೇ ವಿನಾ ರಾಮಂ ಮಹಾರಥಮ್ ॥ ೫॥

ಅಶ್ಮಸಾರಮಿದಂ ನೂನಮಥವಾಶ್ಮಜರಾಮರಮ್ ।
ಹೃದಯಂ ಮಮ ಯೇನೇದಂ ನ ದುಃಖೇನಾವದೀರ್ಯತೇ ॥ ೬॥

ವಿಜ್ಯಾಮನಾರ್ಯಾಮಸತೀಂ ಯಾಹಂ ತೇನ ವಿನಾಕೃತಾ ।
ಮುಹೂರ್ತಮಪಿ ರಕ್ಷಾಮಿ ಜೀವಿತಂ ಹಾಪಜೀವಿತಾ ॥ ೭॥

ಕಾ ಚ ಮೇ ಜೀವಿತೇ ಶ್ರದ್ಧಾ ಸುಖೇ ವಾ ತಂ ಪ್ರಿಯಂ ವಿನಾ ।
ಭರ್ತಾರಂ ಸಾಗರಾಂತಾಯಾ ವಸುಧಾಯಾಃ ಪ್ರಿಯಂವದಮ್ ॥ ೮॥

ಭಿದ್ಯತಾಂ ಭಕ್ಷ್ಯತಾಂ ವಾಪಿ ಶರೀರಂ ವಿಸೃಜಾಮ್ಯಹಮ್ ।
ನ ಚಾಖ್ಯಹಂ ಚಿರಂ ದುಃಖಂ ಸಹೇಯಂ ಪ್ರಿಯವರ್ಜಿತಾ ॥ ೯॥

ಚರತಕೇನಾಪಿ ಸತ್ಯೇನ ನ ಸ್ಪೃಶೇಯಂ ನಿಶಾಚರಮ್ ।
ರಾವಣಂ ಖಂ ಪುನರಹಂ ಕಾಮಯೇಯಂ ವಿಗರ್ಹಿತಮ್ ॥ ೧೦॥

ಕಣ್ಣೀರಿನಿಂದ ತೊಯ್ದುಹೋಗಿದ್ದ ಮುಖದಿಂದ ಕೂಡಿದ್ದು ದಯನೀಯಳಾದ ಜಾನಕಿದೇವಿಯು ಹೀಗೆ ಹೇಳಿಕೊಳ್ಳುತ್ತಾ ತಲೆಯನ್ನು ತಗ್ಗಿಸಿಕೊಂಡು ಅಳತೊಡಗಿದಳು.॥೧॥

ಕೆಲವೊಮ್ಮೆ ಉನ್ಮತ್ತಳಂತೆ, ಮತ್ತೊಮ್ಮೆ ಮತ್ತೇರಿದವಳಂತೆ, ಮಗದೊಮ್ಮೆ ಚಿತ್ತಭ್ರಮೆಗೊಂಡವಳಂತೆ ಶೋಕಿಸುತ್ತಿದ್ದಳು. ಬಳಲಿಕೆಯ ಪರಿಹಾರಕ್ಕಾಗಿ ನೆಲದಮೇಲೆ ಹೊರಳಾಡುವ ಹೆಣ್ಣುಕುದುರೆ ಮರಿಯಂತೆ ಕೆಲವೊಮ್ಮೆ ಹೊರಳಾಡುತ್ತಿದ್ದಳು. ॥೨॥ ಶ್ರೀರಾಮನು ಭಂಗಾರದ ಜಿಂಕೆಯ ಕೋರಿಕೆಯಂತೆ ದೂರ ಹೋದಾಗ, ಕಾಮರೂಪಿಯಾದ, ಮಾಯಾವಿಯಾದ ರಾವಣನು ಕೂಗಿಕೊಳ್ಳುತ್ತಿದ್ದರೂ ಬಲಾತ್ಕಾರದಿಂದ ನನ್ನಲ್ಲಿಗೆ ಸೆಳೆದು ತಂದನು.॥೩॥ ಈಗ ರಾಕ್ಷಸ ಸ್ತ್ರೀಯರು ನನ್ನನ್ನು ವಶದಲ್ಲಿರಿಸಿಕೊಂಡು ಕ್ರೂರವಾದ ರೀತಿಯಿಂದ ಬೆದರಿಸುತ್ತಿದ್ದಾರೆ. ಮಹಾ ದುಃಖಿದಲ್ಲಿ ಮುಳುಗಿರುವ ನನಗೆ ಚಿಂತಾವ್ಯಾಕುಲದಿಂದೊಡಗೊಂಡ ಈ ಜೀವಿತದ ಮೇಲೆ ಯಾವ ಆಶೆಯೂ ಇಲ್ಲ.॥೪॥ ಮಹಾರಥಿಯೂ, ಪ್ರಾಣನಾಥನೂ ಆದ ಶ್ರೀರಾಮನಿಂದ ದೂರವಾಗಿ ಈ ರಾಕ್ಷಸಿಯರ ನಡುವೆ ಸಿಕ್ಕಿಕೊಂಡಿರುವ ನನಗೆ ಸಂಪತ್ತುಗಳೇಕೆ? ಭೂಷಣಗಳೂ ಏಕೆ? ಕೊನೆಗೆ ಈ ಸ್ಥಿತಿಯಲ್ಲಿರುವ ನಾನು ಜೀವಿಸಿರುವುದು ಏತಕ್ಕಾಗಿ? ॥೫॥ ನನ್ನ ಹೃದಯವು ನಿಜವಾಗಿ ಕಬ್ಬಿಣದ್ದಾಗಿರಬೇಕು ಅಥವಾ ಮುಪ್ಪು-ಸಾವುಗಳಿಲ್ಲದ್ದಾಗಿರಬೇಕು. ಏಕೆಂದರೆ ಇಂತಹ ದಾರುಣವಾದ ದುಃಖವನ್ನು ಅನುಭವಿಸುತ್ತಿದ್ದರೂ ಸೀಳಿ ಹೊಗುತ್ತಿಲ್ಲವಲ್ಲ ॥೬॥ ಪುರುಷೋತ್ತಮನಾದ ಶ್ರೀರಾಮನಿಂದ ರಹಿತಳಾಗಿರುವ ನಾನು ಇನ್ನೂ ಜೀವಿಸಿರುವೆನಲ್ಲ! ಅನಾರ್ಯೆಯಂತೆಯೂ, ಪತಿತೆಯಂತೆಯೂ, ಪರಪುರುಷನ ಮನೆಯಲ್ಲಿರುವ ನನಗೆ ಧಿಕ್ಕಾರವಿರಲಿ! ಇದು ನಿಶ್ಚಯವಾಗಿಯೂ ಪಾಪಜೀವಿಕೆಯೇ ಸರಿ! ॥೭॥

ಸಮುದ್ರದಿಂದ ಆವೃತವಾದ ಈ ಭೂಮಂಡಲಕ್ಕೆ ಒಡೆಯನಾದ ನನ್ನ ಪತಿ ಶ್ರೀರಾಮನು. ಅವನು ಪ್ರಿಯಭಾಷಿ, ಅಂತಹ ಪ್ರಾಣಪ್ರಿಯನಿಂದ ದೂರವಿರುವ ನನಗೆ ಸುಖಗಳಲ್ಲಿ, ಜೀವಿತದಲ್ಲಿ ಆಸಕ್ತಿ ಏಕೆ? ॥೮॥ ಈ ರಾಕ್ಷಸ ಸ್ತ್ರೀಯರು ಸಾಕುವುಳ್ಳ ಈ ಶರೀರವನ್ನು ತುಂಡು-ತುಂಡು ಮಾಡಿದರೂ, ತಿಂದು ಹಾಕಿದರೂ ನನಗೆ ಸಮ್ಮತವೇ. ಇದನ್ನು ತ್ಯಜಿಸಲಿಕ್ಕಾಗಿ ನಾನು ಸಿದ್ಧಳೇ ಆಗಿದ್ದೇನೆ. ಪ್ರಿಯನಿಗೆ ದೂರವಾಗಿದ್ದು ಅಂತ್ಯವಿಲ್ಲದ ಈ ದುಃಖಿಗಳನ್ನು ಇನ್ನು ಯಾವರೀತಿಯಿಂದಲೂ ಸಹಿಸಲಾರೆನು. ॥೯॥ ನಿಕೃಷ್ಟವಾದ ಆ ನಿಶಾಚರನನ್ನು ನಾನು ಎಡಗಾಲಿನಿಂದಲೂ ಮುಟ್ಟುವುದಿಲ್ಲ. ಹೀಗಿರುವಾಗ ಆ ರಾವಣನ ಕೋರಿಕೆಗಳನ್ನು

ಪ್ರತ್ಯಾನೀಯ ಚ ಜಾನಾತಿ ನಾತ್ಮಾನಂ ನಾತ್ಮನಃ ಕುಲಮ್ ।
ಯೋ ಸ್ವಯಂಭ್ಯುಪಪನ್ನೇನ ಮಾಂ ಪ್ರಾರ್ಥಯಿತುಮಿಚ್ಛತಿ ॥ ೧೧॥

ಛಿನ್ನಾ ಛಿನ್ನಾ ಪ್ರಛಿನ್ನಾವಾ ದೀಪ್ತಾ ವಾಗ್ನೌ ಪ್ರದೀಪಿತಾ ।
ರಾವಣಂ ನೋಪಚೇಷ್ಯಾಮಿ ಕಿಂ ಪ್ರಲಾಪೇನ ವಕ್ಷ್ಯತಮ್ ॥ ೧೨॥

ಖ್ಯಾತಃ ಪ್ರಾಜ್ಞಃ ಕೃತಜ್ಞಶ್ಚ ಸಾನುಕ್ರೋಶಶ್ಚ ರಾಘವಃ ।
ಸದ್ವೃತ್ತೋ ನಿರನುಕ್ರೋಶಃ ರಂಕೇ ಮದ್ಭಾಗ್ಯಸಂಕ್ಷಯಾತ್ ॥ ೧೩॥

ರಾಕ್ಷಸಾನಾಂ ಜನಸ್ಯಾನೇ ಸಹಸ್ರಾಣಿ ಚತುರ್ದಶ ।
ಯೇನೈಕೇನ ನಿರಸ್ತಾನಿ ಸ ಮಾಂ ಕಿಂ ನಾಭಿಪದ್ಯತೇ ॥ ೧೪॥

ನಿರುದ್ವಾ ರಾವಣೇನಾಹಮಲ್ಪವೀರ್ಯೇಣ ರಕ್ಷಸಾ ।
ಸಮರ್ಥಃ ಖಲು ಮೇ ಭರ್ತಾ ರಾವಣಂ ಹಂತುಮಾಹವೇ ॥ ೧೫॥

ವಿರಾಧೋ ದಂಡಕಾರಣ್ಯೇ ಯೇನ ರಾಕ್ಷಸಪುಂಗವಃ ।
ರಣೇ ರಾಮೇಣ ನಿಹತಃ ಸ ಮಾಂ ಕಿಂ ನಾಭಿಪದ್ಯತೇ ॥ ೧೬॥

ಕಾಮಂ ಮಧ್ಯೇ ಸಮುದ್ರಸ್ಯ ಲಂಕೇಯಂ ದುರ್ಪ್ರಧರ್ಷಣಾ ।
ನ ತು ರಾಘವಬಾಣಾನಾಂ ಗತಿರೋಧೇಹ ವಿದ್ಯತೇ ॥ ೧೭॥

ಕಿಂ ನು ತತ್ ಕಾರಣಂ ಯೇನ ರಾಮೋ ದೃಢಪರಾಕ್ರಮಃ ।
ರಕ್ಷಸಾಮಪಹೃತಾಂ ಭಾರ್ಯಾಂ ಇಷ್ಟಾಂ ನಾಭ್ಯವಪದ್ಯತೇ ॥ ೧೮॥

ಇಷ್ಟಾಂ ಮಾಂ ನ ಜಾನೀತೇ ರಂಕೇ ಲಕ್ಷ್ಮಣಪೂರ್ವಜಃ ।
ಜಾನನ್ನಪಿ ಹಿ ತೇಜಸ್ವೀ ಧರ್ಷಣಾಂ ಮರ್ಷಯಿಷ್ಯತಿ ॥ ೧೯॥

ಪ್ಲವೇತಿ ಯೋಽಧಿಗತ್ಯಾ ಮಾಂ ರಾಘವಾಯ ನಿವೇದಯೇತ್ ।
ಗೃಧ್ರರಾಜೋಽಪಿ ಸ ರಕ್ಷೇ ರಾವಣೇನ ನಿಪಾತಿತಃ ॥ ೨೦॥

ಕೃತಂ ಕರ್ಮ ಮಹತ್ತೇನ ಮಾಂ ತಥಾಭ್ಯವಪದ್ಯತಾ ।
ತಿಷ್ಠತಾ ರಾವಣದ್ವಂದ್ವೇ ವೃದ್ಧೇನಾಪಿ ಜಟಾಯುಷಾ ॥ ೨೧॥

ಯದಿ ಮಾಮಿಹ ಜಾನೀಯಾದ್ಧರ್ಮಾತ್ಮಾ ಸ ರಾಘವಃ ।
ಅದ್ಯ ಬಾಣೈರಭಿಕ್ರುದ್ಧಃ ಕುರ್ಯಾತ್ಲೋಕಮರಾಕ್ಷಸಮ್ ॥ ೨೨॥

ಈಡೇರಿಸುವೆನೇ?॥೧೦॥ ಕ್ರೂರವಾದ ಸ್ವಭಾವದಿಂದ ನನ್ನನ್ನು ಪಡೆದುಕೊಳ್ಳಲು ಬಯಸಿರುವ ಆ ರಾವಣನು ತನ್ನ ಸ್ವರೂಪವನ್ನಾಗಲೀ, ಕುಲವನ್ನಾಗಲೀ, ನಾನು ಮಾಡುತ್ತಿರುವ ತಿರಸ್ಕಾರವನ್ನಾಗಲೀ ತಿಳಿಯುವುದೇ ಇಲ್ಲವಲ್ಲ॥೧೧॥

ರಾಕ್ಷಸಿಯರೇ! ನೀವು ನನ್ನನ್ನು ಚೂರು-ಚೂರಾಗಿ ಕತ್ತರಿಸಿರಿ, ಜಜ್ಜಿರಿ, ಅಥವಾ ಅಂಗಾಂಗಗಳನ್ನು ಬೇರ್ಪಡಿಸಿರಿ; ಉರಿಯುತ್ತಿರುವ ಬೆಂಕಿಯಲ್ಲಿ ಸುಟ್ಟುಬಿಡಿರಿ. ಆದರೆ ನಾನು ಮಾತ್ರ ರಾವಣನ ಬಳಿಗೆ ಸೇರೆನು.ನೀವು ಹೀಗೆ ಹಗಲು-ರಾತ್ರಿ ಗಳಹುತ್ತಿದ್ದರೂ ವ್ಯರ್ಥವೇ.॥೧೨॥

ನನಗನಿಸುತ್ತದೆ – ವಿಶ್ವವಿಖ್ಯಾತನೂ, ಜ್ಞಾನಿಯೂ, ಕೃತಜ್ಞನೂ, ಸದಾಚಾರಿಯೂ, ಪರಮ ದಯಾಳುವೂ ಆದ ಶ್ರೀರಘುನಾಥನು ನನ್ನ ಕುರಿತು ನಿಷ್ಠುರನಾಗಿರುವನಲ್ಲ! ಇದು ನನ್ನ ದುರದೃಷ್ಟವೇ ಆಗಿದೆ. ॥೧೩॥

ಶ್ರೀರಾಮನು ತಾನೊಬ್ಬನೇ ದಂಡಕಾರಣ್ಯದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರನ್ನು ಧ್ವಂಸಮಾಡಿದನು. ಅಂತಹ ಮಹಾನುಭಾವನು ನನ್ನನ್ನು ಪುನಃ ಪಡೆಯಲಾರನೇ?॥೧೪॥ ಅಲ್ಪವೀರ್ಯನಾದ, ರಾಕ್ಷಸನಾದ ರಾವಣನು ನನ್ನನ್ನು ಇಂದು ಬಂಧಿಸಿಟ್ಟಿರುವನು. ಆದರೆ ಯುದ್ಧದಲ್ಲಿ ನನ್ನ ಪತಿಯು ಇವನನ್ನು ಸಂಹರಿಸಲು ಖಂಡಿತವಾಗಿ ಸಮರ್ಥನಾಗಿದ್ದಾನೆ.॥೧೫॥ ದಂಡಕಾರಣ್ಯದಲ್ಲಿ ನಡೆದ ಯುದ್ಧದಲ್ಲಿ ನನ್ನ ಪತಿಯು ವಿರಾಧನೇ ಮೊದಲಾದ ಪ್ರಮುಖ ರಾಕ್ಷಸರನ್ನು ಸಂಹರಿಸಿದನು. ಅಂತಹ ಮಹಾವೀರನು ನನ್ನನ್ನು ರಕ್ಷಿಸಲು ಏಕೆ ಬರುವುದಿಲ್ಲ?॥೧೬॥ ಸಮುದ್ರದ ಮಧ್ಯದಲ್ಲಿರುವ ಈ ಲಂಕಾ ಪಟ್ಟಣವು ಇತರರಿಗೆ ದುರ್ಭೇದ್ಯವಾಗಿರಬಹುದು. ಆದರೆ ಶ್ರೀರಾಮನ ಬಾಣಗಳಿಗೆ ಎಲ್ಲಿಯೂ ಯಾವ ವಿಧವಾದ ಆಡೆತಡೆಯೂ ಇರುವುದಿಲ್ಲ.॥೧೭॥ ದೃಢಪರಾಕ್ರಮಿಯಾದ ಶ್ರೀರಾಮನು ರಾಕ್ಷಸನಿಂದ ಅಪಹೃತಳಾಗಿರುವ, ತನಗೆ ಇಷ್ಟವಾದ ಭಾರ್ಯೆಯಾಗಿರುವ ನನ್ನನ್ನು ಪುನಃ ಪಡೆಯಲು ಪ್ರಯತ್ನಿಸದಿರುವುದಕ್ಕೆ ಕಾರಣವಾದರೂ ಏನಿರಬಹುದು? ॥೧೮॥ ಲಕ್ಷ್ಮಣಾಗ್ರಜನು ನಾನಿಲ್ಲಿರುವುದನ್ನು ತಿಳಿಯಲಾರನೆಂದೇ ಅರಿಯುತ್ತೇನೆ. ಒಂದು ವೇಳೆ ತಿಳಿದಿದ್ದರೆ ತೇಜಸ್ವಿಯಾದ ಶ್ರೀರಾಮನು ರಾವಣನ ಈ ದುರಾಕ್ರಮಣವನ್ನು ಸಹಿಸಿಕೊಂಡಿರುವನೇ? ಎಂದಿಗೂ ಇಲ್ಲ.॥೧೯॥ ಶ್ರೀರಾಮನ ಬಳಿಗೆ ಹೋಗಿ 'ಸೀತಾದೇವಿಯನ್ನು ರಾವಣನು ಅಪಹರಿಸಿ ರುವನು'ಎಂಬ ವಾರ್ತೆಯನ್ನು ತಿಳಿಸಲು ಅವಕಾಶವುಳ್ಳವನು ಜಟಾಯುವು ಒಬ್ಬನೇ. ಆದರೆ ಅವನೂ ಕೂಡ ಯುದ್ಧದಲ್ಲಿ ರಾವಣನಿಂದ ಹತನಾದನು. ॥೨೦॥ ಜಟಾಯುವು ವೃದ್ಧನಾದರೂ ನನ್ನನ್ನು ರಕ್ಷಿಸಲಿಕ್ಕಾಗಿ ದ್ವಂದ್ವಯುದ್ಧದಲ್ಲಿ ರಾವಣನನ್ನು ಎದುರಿಸಿದನು. ಅವನು ಮಾಡಿದ ಆ ಒಂದು ಮಹತ್ಕಾರ್ಯವು ಶ್ಲಾಘನೀಯವು.॥೨೧॥

ನಾನು ಇಲ್ಲಿರುವುದನ್ನು ರಾಘವನು ಏನಾದರೂ ತಿಳಿದರೆ, ಕ್ರುದ್ಧನಾದ ಅವನು ಕ್ಷಣಮಾತ್ರದಲ್ಲಿ ತೀಕ್ಷ್ಣವಾದ ಬಾಣಗಳಿಂದ

ವಿಧಮೇಚ್ಛ ಪುರೀಂ ಲಂಕಾಂ ಕೋಪಯೇಚ್ಚ ಮಹೋದಧಿಮ್।
ರಾವಣಸ್ಯ ಚ ನೀಚಸ್ಯ ಕೀರ್ತಿಂ ನಾಮ ಚ ನಾಶಯೇತ್ ॥ ೨೩॥

ತತೋ ನಿಹತನಾಥಾನಾಂ ರಾಕ್ಷಸೀನಾಂ ಗೃಹೇ ಗೃಹೇ।
ಯಥಾಪಮೇಯಂ ರುದಿತಂ ತಥಾ ಭೂಯೋ ನ ಸಂಶಯಃ ॥ ೨೪॥

ಆನಿಶ್ಚಿತ ರಕ್ಷಸಾಂ ಲಂಕಾಂ ಕುರ್ಯಾದ್ಯಾಮಃ ಸಲಕ್ಷ್ಮಣಃ।
ನ ಹಿ ಶಾಖಾಂ ರಿಪದ್ಯಸ್ಯೇ ಮುಹೂರ್ತಮಪಿ ಜೀವತಿ ॥ ೨೫॥

ಚಿತಾಧೂಮಾಕುಲಪಥಾ ಗೃಧ್ರಮಂಡಲಸಂಕುಲಾ।
ಅಚಿರೇಣ ತು ಲಂಕೇಯಂ ಶ್ಮಶಾನಸದೃಶೀ ಭವೇತ್ ॥ ೨೬॥

ಅಚಿರೇಣೈವ ಕಾಲೇನ ಪ್ರಾಪ್ತಾಮೈಥ ಮನೋರಥಮ್।
ದುಷ್ಕೃತ್ಯಾನೋಽಯಮಾಭಾತಿ ಸರ್ವೇಷಾಂ ವೋ ವಿಹರ್ಯಯಃ ॥

ಯಾದೃಶಾನೀಹ ದೃಶ್ಯಂತೇ ಲಂಕಾಯಾಮಶುಭಾನಿ ವೈ।
ಅಚಿರೇಣೈವ ಕಾಲೇನ ಭವಿಷ್ಯತಿ ಹತಪ್ರಭಾ ॥ ೨೮॥

ನೂನಂ ಲಂಕಾ ಹತೇ ಪಾಪೇ ರಾವಣೇ ರಾಕ್ಷಸಾಧಮೇ।
ಕೋಪಂ ಯಾಸ್ಯತಿ ದುರ್ಧರ್ಷಾ ಪ್ರಮದಾ ವಿಧವಾ ಯಥಾ ॥ ೨೯॥

ಪುಣ್ಯೋತ್ಸವಸಮುತ್ಥಾ ಚ ನಷ್ಟಭರ್ತೃಕೀ ಸರಾಕ್ಷಸಿ।
ಭವಿಷ್ಯತಿ ಪುರೀ ಲಂಕಾ ನಷ್ಟಭರ್ತೃಕೀ ಯಥಾಂಗನಾ ॥ ೩೦॥

ನೂನಂ ರಾಕ್ಷಸಕನ್ಯಾನಾಂ ರುದಂತೀನಾಂ ಗೃಹೇ ಗೃಹೇ।
ಶ್ರೋಷ್ಯಾಮಿ ನಚಿರಾದೇವ ದುಃಖಾರ್ತಾನಾಮಿವ ಧ್ವನಿಮ್ ॥ ೩೧॥

ಸಾಂಧಕಾರಾ ಹತದ್ಯೋತಾ ಹತರಾಕ್ಷಸ ಪುಂಗವಾ।
ಭವಿಷ್ಯತಿ ಪುರೀ ಲಂಕಾ ನಿರ್ದಗ್ಧಾ ರಾಮಸಾಯಕೈಃ ॥ ೩೨॥

ಯದಿ ನಾಮ ನ ಶೂರೋ ಮಾಂ ರಾಮೋ ರಕ್ಷಾತಲೋಚನ ॥
ಜಾನಿಯಾದ್ವರ್ತಮಾನಾಂ ಹಿ ರಾವಣಸ್ಯ ನಿವೇಶನೇ ॥ ೩೩॥

ಅನೇನ ತು ನೃಶಂಸೇನ ರಾವಣೇನಾಧಮೇನ ಮೇ।
ಸಮಯೋ ಯಸ್ತು ನಿರ್ದಿಷ್ಟ ತಸ್ಯ ಕಾಲೋ ಽಯಮಾಗತಃ ॥ ೩೪॥

ಸ ಚ ಮೇ ವಿಹಿತೋ ಮೃತ್ಯುರಸ್ಮಿನ್ ದುಷ್ಟೇನ ವರ್ತತೇ।
ಅಕಾರ್ಯಂ ಯೇ ನ ಜಾನಂತಿ ನೈರ್ಋತಾಃ ಪಾಪಕಾರಿಣಃ ॥ ೩೫॥

ಈ ಲೋಕದಲ್ಲಿ ರಾಕ್ಷಸರಿಲ್ಲದಂತೆ ಮಾಡಿಯಾನು. ಆಷ್ಟೇ ಅಲ್ಲ ಈ ಲಂಕೆಯನ್ನು ಬೂದಿಮಾಡಿ ಬಿಡುವನು. ಈ ಮಹಾಸಮುದ್ರವನ್ನು ಇಂಗಿಸಿಬಿಡುವನು. ಈ ನೀಚ ರಾವಣನ ನಾಮ-ರೂಪಗಳು ಉಳಿಯದಂತೆ ಆಳಿಸಿಬಿಡುವನು. ॥೨೨- ೨೩॥ ಈಗ ನಾನು ಆಳುತ್ತಿರುವಂತೆ ಲಂಕೆಯ ಪ್ರತಿಯೊಂದು ಮನೆಗಳಲ್ಲಿಯೂ ಅನಾಥರಾದ ರಾಕ್ಷಸಿಯರು ಎದೆ ಬಡಿದುಕೊಂಡು ಅಳುವರು. ಇದರಲ್ಲಿ ಸಂದೇಹವೇ ಇಲ್ಲ. ॥೨೪॥

ಲಕ್ಷ್ಮಣನೊಡಗೂಡಿದ ಶ್ರೀರಾಮನು ರಾಕ್ಷಸರ ಈ ಲಂಕೆಯನ್ನು ಹುಡುಕಿ, ಶತ್ರುಗಳನ್ನು ವಧಿಸುವನು. ಅವರ ಕಣ್ಣಿಗೆ ಬಿದ್ದ ಶತ್ರುವು ಯಾರೇ ಆಗಿರಲೀ ಕ್ಷಣಕಾಲವೂ ಕೂಡ ಪ್ರಾಣ ಸಹಿತ ಉಳಿಯಲಾರನು.॥೨೫॥ ಅತ್ಯಲ್ಪಕಾಲದಲ್ಲೇ ಈ ಲಂಕಾ ಪಟ್ಟಣವು ಸ್ಮಶಾನದಂತಾಗುತ್ತದೆ. ಚಿತೆಗಳಿಂದ ಹೊರಡುವ ಹೊಗೆಯು ಲಂಕೆಯ ಎಲ್ಲೆಡೆ ತುಂಬಿಹೋಗುವುದು. ರಣಹದ್ದು ಗಳು ಗುಂಪು-ಗುಂಪಾಗಿ ಆವರಿಸಿಕೊಳ್ಳುವವು. ॥೨೬॥ ಸ್ವಲ್ಪಕಾಲದಲ್ಲೇ ನನ್ನ ಮನೋರಥವು ಈಡೇರಿಯೇ ತೀರುವುದು. ರಾಕ್ಷಸಿಯರೇ! ನಿಮ್ಮ ದುರಾಚಾರವು ನಿಮಗೆ ವಿಪರೀತವಾದ ಪರಿಣಾಮವನ್ನುಂಟು ಮಾಡುತ್ತದೆ. ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.॥೨೭॥ ಈ ಲಂಕೆಯಲ್ಲಿ ಕಂಡು ಬರುವ ಅಪಶಕುನಗಳಿಂದ ಇದು ಬಹುಬೇಗನೇ ಖಂಡಿತವಾಗಿ ಪಾಳುಬೀಳುತ್ತದೆ ಎಂಬುದು ಸೂಚಿಸುತ್ತದೆ.॥೨೮॥ ರಾಕ್ಷಸಾಧಿಪತಿಯಾದ ಪಾಪಿಷ್ಠನಾದ ರಾವಣನು ಹತನಾಗುತ್ತಲೇ ಇಷ್ಟರವರೆಗೆ ದುರ್ಭೇದ್ಯವಾಗಿದ್ದ ಈ ಲಂಕೆಯು ಗಂಡ ಸತ್ತ ವಿಧವೆಯಂತೆ ಕಳಾಹೀನವಾಗುತ್ತದೆ. ಇದು ನಿಶ್ಚಯ.॥೨೯॥ ರಾಕ್ಷಸರಿಂದ ತುಂಬಿರುವ, ಮಂಗಳೋತ್ಸವಗಳಿಂದ ಸಮೃದ್ಧವಾದ ಈ ಲಂಕಾಪಟ್ಟಣವು ಅತ್ಯಲ್ಪಕಾಲದಲ್ಲೇ ಒಡೆಯನನ್ನು ಕಳೆದು ಕೊಂಡು ಗಂಡನಿಲ್ಲದ ಹೆಂಗಸಿನಂತಾಗುತ್ತದೆ.॥೩೦॥ ಪ್ರತಿಯೊಂದು ಮನೆಯಲ್ಲೂ ಪತಿವಿಯೋಗ ದುಃಖದಿಂದ ಪೀಡಿತರಾಗಿ ರೋದಿಸುವ ರಾಕ್ಷಸಕನ್ಯೆಯರ ಆಳುವಿನ ಧ್ವನಿಯನ್ನು ನಾನು ಬಹು ಬೇಗನೇ ಕೇಳಲಿದ್ದೇನೆ. ॥೩೧॥ ರಕ್ತಾಂತಲೋಚನನಾದ ಹಾಗೂ ಶೂರನಾದ ಶ್ರೀರಾಮನು ನಾನು ರಾಕ್ಷಸನಾದ ರಾವಣನ ಮನೆಯಲ್ಲಿರುವೆನೆಂಬ ವಾರ್ತೆಯನ್ನು ತಿಳಿದನಾದರೆ, ಆವನ ನಿಶಿತವಾದ ಬಾಣಗಳಿಂದ ಈ ಲಂಕಾಪಟ್ಟಣವು ಕ್ಷಣಮಾತ್ರದಲ್ಲಿ ದಗ್ಧವಾಗಿ ಅಂಧಕಾರಮಯವಾಗುತ್ತದೆ. ಕಾಂತಿಹೀನವಾಗುತ್ತದೆ. ಲಂಕೆಯಲ್ಲಿರುವ ಎಲ್ಲ ರಾಕ್ಷಸ ಶ್ರೇಷ್ಠರು ಹತರಾಗುತ್ತಾರೆ. ॥ ೩೨- ೩೩॥ ಕ್ರೂರಿಯಾದ, ಅಧಮನಾದ ರಾವಣನು ನನ್ನನ್ನು ಸಂಹರಿಸಲು ನಿಗದಿಪಡಿಸಿದ ಕಾಲವೀಗ ಅವನಿಗೇ ಸನ್ನಿಹಿತವಾಗಿದೆ. ಆ ದುಷ್ಟನು ನನಗೆ ವಿಧಿಸಿದ ಮೃತ್ಯುವು ಅವನಿಗೇ ವರ್ತಿಸುತ್ತದೆ. ಪಾಪಕರ್ಮನಿರತರಾದ ರಾಕ್ಷಸರು ಮಾಡಲು ಹೊರಟ ಕಾರ್ಯವನ್ನು ತಿಳಿಯರು. ಹಸಿಮಾಂಸವನ್ನು ತಿನ್ನುವ ಈ ರಾಕ್ಷಸರು ಧರ್ಮವನ್ನು

ಅಧರ್ಮಾತ್ತು ಮಹೋತ್ಪಾತೋ ಭವಿಷ್ಯತಿ ಹಿ ಸಾಂಪ್ರತಮ್ ।
ನೈತೇ ಧರ್ಮಂ ವಿಜಾನಂತಿ ರಾಕ್ಷಸಾಃ ಪಿಶಿತಾಶನಾಃ ॥ ೩೬॥

ಧ್ರುವಂ ಮಾಂ ಪ್ರಾತರಾಶಾರ್ಥೇ ರಾಕ್ಷಸಃ ಕಲ್ಪಯಿಷ್ಯತಿ ।
ಸಾಹಂ ಕಥಂ ಕರಿಷ್ಯಾಮಿ ತಂ ವಿನಾ ಪ್ರಿಯದರ್ಶನಮ್ ॥ ೩೭॥

ರಾಮಂ ರಕ್ತಾಂತನಯನಮಪಶ್ಯಂತೀ ಸುದುಃಖಿತಾ ।
ಯದಿ ಕಶ್ಚಿತ್ ಪ್ರದಾತಾ ಮೇ ವಿಷಸ್ಯಾದ್ಯ ಭವೇದಿಹ ॥ ೩೮॥

ಕ್ಷಿಪ್ರಂ ವೈವಸ್ವತಂ ದೇವಂ ಪಶ್ಯೇಯಂ ಪತಿನಾ ವಿನಾ ।
ನಾಚಾನಾಜ್ಞೀವತೀಂ ರಾಮಃ ಸ ಮಾಂ ಲಕ್ಷ್ಮಣಪೂರ್ವಜಃ ॥ ೩೯॥

ಜಾನಂತೌ ತೌ ನ ಕುರ್ಯಾತಾಂ ನೋರ್ವ್ಯಾಂ ಹಿ ಮಮ ಮಾರ್ಗಣಮ್ ।
ನೂನಂ ಮನ್ಯೈವ ಶೋಕೇನ ಸ ವೀರೋ ಲಕ್ಷ್ಮಣಾಗ್ರಜಃ ॥ ೪೦॥

ದೇವಲೋಕಮಿತೋ ಯಾತಸ್ತ್ಯಕ್ತ್ವಾ ಬೇಹಂ ಮಹೀತಲೇ ।
ಧನ್ಯಾ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೪೧॥

ಮಮ ಪಶ್ಯಂತಿ ಯೇ ನಾಥಂ ರಾಮಂ ರಾಜೀವಲೋಚನಮ್ ।
ಅಥವಾ ನ ಹಿ ತಸ್ಯಾರ್ಥೋ ಧರ್ಮಕಾಮಸ್ಯ ಧೀಮತಃ ॥ ೪೨॥

ಮಯಾ ರಾಮಸ್ಯ ರಾಜರ್ಷೇರ್ಭಾರ್ಯಯಾ ಪರಮಾತ್ಮನಃ ।
ದೃಶ್ಯಮಾನೇ ಭವೇತ್ ಪ್ರೀತಿಃ ಸೌಹೃದಂ ನಾಸ್ತ್ಯಪಶ್ಯತಃ ॥ ೪೩॥

ನಾಶಯಂತಿ ಕೃತಘ್ನಾಸ್ತು ನ ರಾಮೋ ನಾಶಯಿಷ್ಯತಿ ।
ಕಿಂ ನು ಮೇ ನ ಗುಣಾಃ ಕೇಚಿತ್ ಕಿಂ ವಾ ಭಾಗ್ಯಕ್ಷಯೋ ಮಮ ॥ ೪೪॥

ಯಾಹಂ ಸೀದಾಮಿ ರಾಮೇಣ ಹೀನಾ ಮುಖ್ಯೇನ ಭಾಮಿನೀ ।
ಶ್ರೇಯೋ ಮೇ ಜೀವಿತಾನ್ಮರ್ತುಂ ವಿಹೀನಾಯಾ ಮಹಾತ್ಮನಃ ॥ ೪೫॥

ರಾಮಾದಕ್ಲಿಷ್ಟಚಾರಿತ್ರಾಚ್ಛೂರಾಚ್ಛತ್ರುನಿಬರ್ಹಣಾತ್ ।
ಅಥವಾ ನ್ಯಸ್ತಶಸ್ತ್ರೌ ತೌ ವನೇ ಮೂಲಫಲಾಶಿನೌ ॥ ೪೬॥

ಭ್ರಾತರೌ ಹಿ ನರಶ್ರೇಷ್ಠೌ ಸಂವೃತ್ತೌ ವನಗೋಚರೌ ।
ಅಥವಾ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ ॥ ೪೭॥

ಅರಿಯರು. ಪರಸ್ತ್ರೀಯ ಅಪಹರಣವೆಂಬ ಅಧರ್ಮ ಕಾರ್ಯದಿಂದಾಗಿ ಈ ಪಟ್ಟಣದಲ್ಲಿ ಬೇಗನೇ ದೊಡ್ಡದಾದ ಅನರ್ಥವೇ ಸಂಭವಿಸುತ್ತದೆ.॥೩೪- ೩೬॥

ಆ ರಾಕ್ಷಸನಾದ ರಾವಣನು ಪ್ರಾತಃಕಾಲದ ಭೋಜನಕ್ಕಾಗಿ ನನ್ನನ್ನು ವಧಿಸಿಯೇ ತೀರುವನು. ಆಗ ಪ್ರಿಯದರ್ಶನನಾದ ರಾಮನಿಲ್ಲದೆ ಅಬಲೆಯಾದ ನಾನು ಏನು ತಾನೇ ಮಾಡಲು ಸಾಧ್ಯವಾಗುತ್ತದೆ. ಅಂದವಾದ ಕಣ್ಣುಗಳುಳ್ಳ ಶ್ರೀರಾಮನ ದರ್ಶನ ಭಾಗ್ಯವು ಇಲ್ಲದೆ ದುಃಖಾರ್ತಳಾಗಿ ಪತಿವಿಯೋಗವನ್ನು ಪಡೆದಿರುವೆ. ನನಗೆ ಯಾರಾದರೂ ಸ್ವಲ್ಪ ವಿಷವನ್ನು ಕೊಡುವ ಮಹಾನುಭಾವನು ಸಿಕ್ಕಿದರೆ ಚೆನ್ನಾಗಿತ್ತು. ಆಗ ಬೇಗನೇ ನಾನು ಪತಿಯನ್ನು ನೋಡದೆ ಯಮನನ್ನು ದರ್ಶಿಸುತ್ತಿದ್ದೆ.॥೩೭-೩೮॥ ಲಕ್ಷ್ಮಣಾಗ್ರಜನಾದ ಶ್ರೀರಾಮನಿಗೆ ನಾನಿನ್ನು ಜೀವಿಸಿರುವೆನೆಂದು ಬಹುಶಃ ತಿಳಿಯಲಾರದು. ಹಾಗೇನಾದರೂ ತಿಳಿದಿದ್ದರೆ ಈ ಪೃಥ್ವಿಯಲ್ಲಿ ನನಗಾಗಿ ಹುಡುಕದೇ ಇರುತ್ತಿರಲಿಲ್ಲ. ತಪ್ಪದೆ ಹುಡುಕಿಯೇ ತೀರುವನು. ॥೩೯॥ ಲಕ್ಷ್ಮಣನಿಗೆ ಅಣ್ಣನಾದ, ವೀರನಾದ ರಾಮನು ನನ್ನ ವಿರಹ ಬಾಧೆಯಿಂದ ಮನುಷ್ಯದೇಹವನ್ನು ತ್ಯಾಗಮಾಡಿ ಖಂಡಿತವಾಗಿ ದೇವಲೋಕಕ್ಕೆ ಹೋಗಿಬಿಟ್ಟಿರಬಹುದು.॥೪೦॥ ದೇವಲೋಕದಲ್ಲಿರುವ ದೇವತೆಗಳೂ, ಗಂಧರ್ವರೂ, ಸಿದ್ಧರೂ, ಮಹರ್ಷಿಗಳೂ, ರಾಜೀವಲೋಚನನಾದ ನನ್ನ ರಾಮಚಂದ್ರಪ್ರಭುವನ್ನು ದರ್ಶಿಸಿ ಧನ್ಯರಾಗುವರು.॥೪೧॥ ಆ ರಾಮಚಂದ್ರಪ್ರಭುವು ಧರ್ಮೈಕದೃಷ್ಟಿಯುಳ್ಳವನು. ಜ್ಞಾನನಿಧಿ. ಅಷ್ಟೇ ಅಲ್ಲ ಅವನು ರಾಜರ್ಷಿ. ವಸ್ತುತಃ ಪರಮಾತ್ಮನು. ಅಂತಹ ಮಹಾನುಭಾವನಿಗೆ ಭಾರ್ಯೆಯಿಂದ ಏನಾಗಬೇಕು?॥೪೨॥ ಸಾಮಾನ್ಯವಾಗಿ ಲೋಕದಲ್ಲಿ ಜನರಿಗೆ ಕಣ್ಣೆದುರಿಗೆ ಇದ್ದರೇನೇ ಪ್ರೇಮ,ಸೌಹಾರ್ದವು ಉಳಿಯುವುದು. ಅವರು ಕಾಣದಿದ್ದರೆ ಅವರ ಮೇಲಿನ ಪ್ರೇಮವು ಮುಗಿದುಹೋಗುತ್ತದೆ. ಇದು ಕೃತಘ್ನರ ಲಕ್ಷಣವು. ಆದರೆ ಶ್ರೀರಾಮನು ಕೃತಜ್ಞನು. ಆದುದರಿಂದ ಆ ಸ್ವಾಮಿಯು ನನ್ನನ್ನು ಮರೆಯತಕ್ಕವನಲ್ಲ.॥೪೩. ಜಗನ್ನಾಥನಾದ ಶ್ರೀರಾಮನಿಗೆ ಪತ್ನಿಯಾಗಿದ್ದರೂ ನಾನು ಈ ದುರವಸ್ಥೆಗೆ ಗುರಿಯಾಗಲು ಕಾರಣವೇನು? ನನ್ನಲ್ಲಿ ಯಾವ ಸದ್ಗುಣಗಳೂ ಇಲ್ಲವೇ? ಅಥವಾ ನನ್ನ ಸೌಭಾಗ್ಯವೆಲ್ಲವೂ ನಾಶವಾಗಿಹೋಯಿತೇ?॥೪೪॥ ನನ್ನ ರಾಮನು ಉದಾತ್ತ ಚರಿತನು, ಶತ್ರುಗಳನ್ನುನಿರ್ಮೂಲನ ಗೊಳಿಸುವಲ್ಲಿ ಏಕೈಕ ವೀರನು. ಮಹಾತ್ಮನಾದ ನನ್ನ ಪ್ರಭುವಿಗೆ ದೂರವಾಗಿದ್ದು ಜೀವಿಸಿರುವುದಕ್ಕಿಂತ ಈ ತನುವನ್ನು ತ್ಯಜಿಸುವುದೇ ಮೇಲು. ॥೪೫॥ ಅಥವಾ ಮಹಾಪುರುಷರಾದ ಸೋದರರೀರ್ವರೂ, ಅಸ್ತ್ರ-ಶಸ್ತ್ರಗಳನ್ನು ಬದಿಗಿರಿಸಿ, ವನದಲ್ಲಿ ಕಂದ-ಮೂಲಗಳನ್ನು ತಿನ್ನುತ್ತಾ ಮುನಿವೃತ್ತಿಯನ್ನು ಅವಲಂಬಿಸಿರುವರೋ ಏನೋ? ॥೪೬॥ ಶೂರರೂ, ಸೋದರರೂ, ಆದ ಆ ರಾಮ-ಲಕ್ಷ್ಮಣರನ್ನು ದುರ್ಮಾರ್ಗಿಯಾದ ರಾಕ್ಷಸರಾಜನಾದ ರಾವಣನು ಕಪಟೋಪಾಯದಿಂದ ಸಂಹರಿಸಿಬಿಟ್ಟಿರ ಬಹುದೇ?("ಅತಿ ಪ್ರೇಮಃಪಾಪಶಂಕಿ" ಅಲ್ಲವೇ?) ॥೪೭॥

ಭದ್ಧನಾ ಸಾದಿತೌ ಶೂರೌ ಭ್ರಾತರೌ ರಾಮಲಕ್ಷ್ಮಣೌ ।
ಸಾಹಮೇವಂ ಗತೇ ಕಾಲೇ ಮರ್ತುಮಿಚ್ಛಾಮಿ ಸರ್ವಥಾ ॥ ೪೮॥

ನ ಚ ಮೇ ವಿಹಿತೋ ಮೃತ್ಯುರ್ಲೋಕೇ ದುಃಖೇಽಪಿ ದರ್ಶತೇ ।
ಧನ್ಯಾಃ ಖಲು ಮಹಾತ್ಮಾನೋ ಮುನಯಸ್ತ್ಯಕ್ತ ಕಿಲ್ಬಿಷಾಃ ॥ ೪೯॥

ಜಹಾತ್ಯನೋ ಮಹಾಪ್ರಾಣಾ ಯೇಽಪಾಂ ನ ಸ್ತ ಪ್ರಿಯಾಪ್ರಿಯೇ ।
ಪ್ರಿಯಾನ್ನ ಸಂಭವೇದ್ಯಸ್ಮಿನ್ನಪ್ರಿಯಾನ್ನಾಧಿಕಂ ಭಯಮ್ ।
ತಾಭ್ಯಾಂ ಹಿ ಯೇ ವಿಯುಜ್ಯಂತೇ ಸಮಸ್ತೇಭ್ಯಾಂ ಮಹಾತ್ಮಭ್ಯಾಮ್ ॥ ೫೦॥

ಸಾಹಂ ತ್ಯಕ್ತಾ ಪ್ರಿಯಾರ್ಹೇಣ ರಾಮೇಣ ವಿದಿತಾತ್ಮನಾ ।
ಪ್ರಾಣಾಂಸ್ತ್ಯಕ್ಷ್ಯಾಮಿ ಪಾಪಸ್ಯ ರಾವಣಸ್ಯ ಗತಾ ವಶಮ್ ॥ ೫೧॥

ಆತ್ಯಂತ ದುರ್ಭಾಗ್ಯಳಾಗಿರುವ ನನಗೆ ಇಂತಹ ಆಪತ್ಕಾಲದಲ್ಲಿ ಸರ್ವಥಾ ಸಾಯುವ ಇಚ್ಛೆಯೇ ಉಂಟಾಗುತ್ತದೆ. ಆದರೆ ಇಂತಹ ದುಃಖದ ಸಮಯದಲ್ಲಿಯೂ ನನಗೆ ಮರಣವು ಬರುವುದಿಲ್ಲವಲ್ಲ? ॥೪೮॥ ಮುನೀಶ್ವರರೂ, ಪುಣ್ಯಪುರುಷರೂ, ಜಿತೇಂದ್ರಿಯರೂ, ಮಹಾನುಭಾವರೂ, ಆದ ಮಹಾತ್ಮರೂ ನಿಜವಾಗಿ ಧನ್ಯರು. ಅವರಿಗೆ ''ಇದು ಪ್ರಿಯವು, ಇದು ಅಪ್ರಿಯವು'' ಎನ್ನುವ ಧ್ಯಾಸವೇ ಇರುವುದಿಲ್ಲ.*॥೪೯॥ ಸಾಮಾನ್ಯರಾದವರಿಗೆ ಪ್ರಿಯವಾದ ಕಾರ್ಯವು ನಡೆದರೆ ದುಃಖಿವಾಗದೆ ಸಂತೋಷವಾಗುತ್ತದೆ. ಅಪ್ರಿಯ ಕಾರ್ಯವು ನಡೆದರೆ ಅಧಿಕವಾದ ಭಯ ದುಃಖವೇ ಆಗುತ್ತದೆ. ಆದರೆ ಪ್ರಿಯಾಪ್ರಿಯಗಳೆರಡನ್ನೂ ಪರಿತ್ಯಜಿಸಿದವರೂ, ಪ್ರಿಯಾಪ್ರಿಯಗಳೆರಡನ್ನೂ ಸಮಾನವಾಗಿ ಕಾಣುವವರೂ ಆದ ಮಹಾತ್ಮರಿಗೆ ನನ್ನ ನಮಸ್ಕಾರವು.॥೫೦॥ ಆತ್ಮಜ್ಞಾನಿಯಾದ, ಪ್ರಿಯನಾದ, ಶ್ರೀರಾಮನನ್ನು ಅಗಲಿದ್ದು, ಪಾಪಿಷ್ಠನಾದ ರಾವಣನ ವಶಳಾಗಿರುವ ನಾನು ಖಂಡಿತ ವಾಗಿಯೂ ಪ್ರಾಣಗಳನ್ನು ಪರಿತ್ಯಜಿಸುವೆನು.॥೫೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಷಡ್ವಿಂಶಃ ಸರ್ಗಃ ॥ ೨೬ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತಾರನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತೇಳನೆಯ ಸರ್ಗ

ತ್ರಿಜಟೆಯ ಸ್ವಪ್ನ ವೃತ್ತಾಂತ–

ಆತ್ಮಾನಂ ಸೀತಯಾ ಘೋರಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ।
ಕಾಶ್ಚಿದ್ಜಗ್ಮುಸ್ತದಾಖ್ಯಾತುಂ ರಾವಣಸ್ಯ ತರಸ್ವಿನಃ ॥ ೧॥

ತತಃ ಸೀತಾಮುಪಾಗಮ್ಯ ರಾಕ್ಷಸ್ಯೋ ಘೋರದರ್ಶನಾಃ ।
ಪುನಃ ಪರುಷಮೇಕಾರ್ಥಮನರ್ಥಾರ್ಥಮಥಾಬ್ರುವನ್ ॥ ೨॥

ಅದ್ಯೇದಾನೀಂ ತವಾನಾರ್ಯೇ ಸೀತೇ ಪಾಪವಿನಿಶ್ಚಯೇ ।
ರಾಕ್ಷಸ್ಯೋ ಭಕ್ಷಯಿಷ್ಯಂತಿ ಮಾಂಸಮೇತದ್ಯಥಾಸುಖಮ್ ॥ ೩॥

ಸೀತಾದೇವಿಯು ಹೇಳಿದ ಪ್ರಾಣತ್ಯಾಗ ಮಾಡುವ ನಿಶ್ಚಯದ ಮಾತುಗಳನ್ನು ಕೇಳಿ ಘೋರರೂಪಿಯರಾದ ಕೆಲವು ರಾಕ್ಷಸಿಯರು ಕೋಪದಿಂದ ಮೈಮರೆತವರಾಗಿ, ದುರಾತ್ಮನಾದ ರಾವಣನಿಗೆ ಈ ವಿಷಯವನ್ನು ತಿಳಿಸಲು ಹೋದರು.॥೧॥ ಬಳಿಕ ಭಯಂಕರವಾಗಿ ಕಾಣುತ್ತಿದ್ದ ಕೆಲವು ರಾಕ್ಷಸಿಯರು ಪುನಃ ಸೀತೆಯಬಳಿಗೆ ಬಂದು ರಾವಣನನ್ನು ವರಿಸಬೇಕೆಂಬ ಒಂದೇ ಅಭಿಪ್ರಾಯದಿಂದ ಕೂಡಿದ್ದ, ಕ್ರೂರವಾದ ಹಾಗೂ ಅನರ್ಥಕರ ವಾದ ಮಾತನ್ನು ಹೇಳತೊಡಗಿದರು.॥೨॥

''ಮರ್ಮಾಗಿರಿಯಾದ ಎಲೈ ಸೀತೆಯೇ! ರಾವಣನನ್ನು ತಿರಸ್ಕರಿಸಿದ ನಿನ್ನ ನಿಶ್ಚಯವೂ ಅನುಚಿತವಾದುದು ಹಾಗೂ ಪಾಪಮಯವಾದುದು. ಎಲ್ಲ ರಾಕ್ಷಸಸ್ತ್ರೀಯರು ಸೇರಿ ಇಂದೇ ಈಗಲೇ ನಿನ್ನ ಶರೀರದಲ್ಲಿರುವ ಮಾಂಸವನ್ನು ತೃಪ್ತಿಯಾಗಿ, ಸುಖವಾಗಿ ತಿಂದು ಹಾಕುತ್ತೇವೆ.'' ॥೩॥

* ನ ಪ್ರಹೃಷ್ಯೇತ್ಪ್ರಿಯಂ ಪ್ರಾಪ್ಯ ನೋದ್ವಿಜೇತ್ಪ್ರಾಪ್ಯ ಚಾಪ್ರಿಯಮ್। ಸ್ಥಿರಬುದ್ಧಿರಸಮ್ಮೂಢೋ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ॥ (ಗೀತಾ ೫/೨೦) ಯಾವ ಪುರುಷನು ಪ್ರಿಯವಾದುದನ್ನು ಪಡೆದರೂ ಹರ್ಷಿತನಾಗುವುದಿಲ್ಲವೋ ಮತ್ತು ಅಪ್ರಿಯವು ದೊರೆತಾಗಲೂ ಉದ್ವಿಗ್ನವಾಗುವುದಿಲ್ಲವೋ ಆ ಸ್ಥಿರಬುದ್ಧಿಯುಳ್ಳ ಸಂಶಯರಹಿತನಾದ, ಬ್ರಹ್ಮವೇತ್ತನಾದ ಪುರುಷನು ಸಚ್ಚಿದಾನಂದ ಘನ ಪರಬ್ರಹ್ಮಪರಮಾತ್ಮನಲ್ಲಿ ಏಕೀಭಾವದಿಂದ ಸದಾ ಸ್ಥಿತನಾಗಿರುತ್ತಾನೆ.

ಸೀತಾಂ ತಾಭಿರನಾರ್ಯಾಭಿರ್ದರ್ಷ್ಯಾ ಸಂತರ್ಜಿತಾಂ ತದಾ ।
ರಾಕ್ಷಸೀ ತ್ರಿಜಟಾ ವೃದ್ಧಾ ಪ್ರಬುದ್ಧಾ ವಾಕ್ಯಮಬ್ರವೀತ್ ॥ ೪॥

ಆತ್ಮಾನಂ ಖಾದತಾನಾರ್ಯಾ ನ ಸೀತಾಂ ಭಕ್ಷಯಿಷ್ಯಥ ।
ಜನಕಸ್ಯ ಸುತಾಮಿಷ್ಟಾಂ ಸ್ನುಷಾಂ ದಶರಥಸ್ಯ ಚ ॥ ೫॥

ಸ್ವಪ್ನೋ ಹ್ಯದ್ಯ ಮಯಾ ದೃಷ್ಟೋ ದಾರುಣೋ ರೋಮಹರ್ಷಣಃ ।
ರಾಕ್ಷಸಾನಾಮಭಾವಾಯ ಭರ್ತುರಸ್ಯಾ ಜಯಾಯ ಚ ॥ ೬॥

ವಿವಮುಕ್ತಾಸ್ತ್ರಿಜಟಯಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ।
ಸರ್ವಾ ವಿಮಾಬ್ರುವನ್ ಭೀತಾಸ್ತ್ರಿಜಟಾಂ ತಾಮಿದಂ ವಚಃ ॥ ೭॥

ಕಥಯಸ್ವ ತ್ವಯಾ ದೃಷ್ಟಃ ಸ್ವಪ್ನೋಽಯಂ ಕೀದೃಶೋ ನಿಶಿ ।
ತಾಸಾಂ ತು ವಚನಂ ಶ್ರುತ್ವಾ ರಾಕ್ಷಸೀನಾಂ ಮುಖಾಚ್ಯುತಮ್ ॥ ೮॥

ಉವಾಚ ವಚನಂ ಕಾಲೇ ತ್ರಿಜಟಾ ಸ್ವಪ್ನಸಂಶ್ರಿತಮ್ ।
ಗಜದಂತಮಯೀಂ ದಿವ್ಯಾಂ ಶಿಬಿಕಾಮಂತರಿಕ್ಷಗಾಮ್ ॥ ೯॥

ಯುಕ್ತಾಂ ಹಂಸಸಹಸ್ರೇಣ ಸ್ವಯಮಾಸ್ಥಾಯ ರಾಘವಃ ।
ಶುಕ್ಲಮಾಲ್ಯಾಂಬರಧರೋ ಲಕ್ಷ್ಮಣೇನ ಸಹಾಗತಃ ॥ ೧೦॥

ಸ್ವಪ್ನೇ ಚಾದ್ಯ ಮಯಾ ದೃಷ್ಟಾ ಸೀತಾ ಶುಕ್ಲಾಂಬರಾವೃತಾ ।
ಸಾಗರೇಣ ಪರಿಕ್ಷಿಪ್ತಂ ಶ್ವೇತಂ ಪರ್ವತಮಾಸ್ಥಿತಾ ॥ ೧೧॥

ರಾಮೇಣ ಸಂಗತಾ ಸೀತಾ ಭಾಸ್ಕರೇಣ ಪ್ರಭಾ ಯಥಾ ।
ರಾಘವಸ್ಯ ಮಯಾ ದೃಷ್ಟಶ್ಚತುರ್ದಂತಃ ಮಹಾಗಜಮ್ ॥ ೧೨॥

ಆರೂಢಃ ಶೈಲಸಂಕಾಶಂ ಚಕಾಸ ಸಹಲಕ್ಷ್ಮಣಃ ।
ತತಸ್ತೌ ನರಶಾರ್ದೂಲೌ ದೀಪ್ಯಮಾನೌ ಸ್ವತೇಜಸಾ ॥ ೧೩॥

ಶುಕ್ಲಮಾಲ್ಯಾಂಬರಧರೌ ಜಾನಕೀಂ ಪರ್ಯುಪಾಸ್ತಿತೌ ।
ತತಸ್ತಸ್ಯ ನಗಾಗ್ರೇ ಹ್ಯಾಕಾಶಸ್ಥಸ್ಯ ದಂತಿನಃ ॥ ೧೪॥

ಅನಾರ್ಯೆಯರಾದ ಆ ರಕ್ಕಸಿಯರು ಸೀತೆಯನ್ನು ಹೀಗೆ ಭಯಪಡಿಸುತ್ತಿರುವುದನ್ನು ನೋಡಿ, ಆಗ ತಾನೇ ನಿದ್ದೆಯಿಂದ ಎಚ್ಚೆತ್ತ ಜ್ಞಾನವೃದ್ಧಳಾದ, ವಿಭೀಷಣನ ಮಗಳಾದ ತ್ರಿಜಟಾ ಎಂಬ ರಾಕ್ಷಸಿಯು ಹೀಗೆ ಹೇಳಿದಳು– ॥೪॥ ಎಲೈ ದುಷ್ಟ ಸ್ತ್ರೀಯರೇ! ನೀವು ನಿಮ್ಮನ್ನೇ ಭಕ್ಷಿಸುವಿರಿ. ಇವಳು ಜನಕನ ಪ್ರಿಯ ಪುತ್ರಿಯೂ, ದಶರಥನಸೊಸೆಯೂ ಆಗಿರುವಳು. ಈ ಸೀತೆಯನ್ನು ಮಾತ್ರ ಭಕ್ಷಿಸಲಾರಿರಿ.॥೫॥ ಈಗ ತಾನೇ ನಾನು ರಾಕ್ಷಸರ ಅಳಿವನ್ನೂ, ಈಕೆಯ ಪತಿಯಾದ ಶ್ರೀರಾಮನ ಅಭ್ಯುದಯವನ್ನು ಸೂಚಿಸುವ ಭಯಂಕರವಾದ ಹಾಗೂ ರೋಮಾಂಚವನ್ನು ಉಂಟುಮಾಡುವ ಕನಸೊಂದನ್ನು ಕಂಡೆನು.॥೬॥ ಕೋಪೋದ್ರಿಕ್ತರಾಗಿದ್ದ ಆ ರಕ್ಕಸಿಯರು ತ್ರಿಜಟೆಯ ಮಾತನ್ನು ಕೇಳಿ ಬಹಳ ಭಯಗೊಂಡರು. ಮತ್ತೆ ಅವರೆಲ್ಲರೂ ಹೀಗೆ ಹೇಳತೊಡಗಿದರು–॥೭॥

''ಓ ತ್ರಿಜಟಾ! ಈ ರಾತ್ರಿಯಲ್ಲಿ ನೀನು ಕಂಡ ಸ್ವಪ್ನ ಎಂತಹುದು? ಎಂಬುದನ್ನು ಹೇಳು.'' ಎಂದು ರಾಕ್ಷಸಿಯರು ನುಡಿದ ಮಾತನ್ನು ಕೇಳಿ ತ್ರಿಜಟೆಯು ಬೆಳಗಿನಜಾವದಲ್ಲಿ ತನಗೆ ಬಿದ್ದ ಸ್ವಪ್ನದ ವಿಚಾರವನ್ನು ಇಂತು ವಿವರಿಸತೊಡಗಿದಳು– ''ಆನೆಯ ದಂತದಿಂದಲೇ ನಿರ್ಮಿಸಲ್ಪಟ್ಟ, ಅಂತರಿಕ್ಷದಲ್ಲಿ ಸಂಚರಿಸಲು ಸಮರ್ಥವಾಗಿದ್ದು, ಸಾವಿರಾರು ಪರಿಸರಗಳು ಹೂಡಲ್ಪಟ್ಟ ಅಲಂಕೃತವಾದ ಪಲ್ಲಕ್ಕಿಯೊಂದನ್ನು ನೋಡಿದೆನು. ಅದರಲ್ಲಿ ಲಕ್ಷ್ಮಣನೊಡಗೂಡಿದ ಶ್ರೀರಾಮನು ಬಿಳುಪಾದ ಮಾಲೆಗಳಿಂದಲೂ, ವಸ್ತ್ರಗಳಿಂದಲೂ ಸಮಲಂಕೃತನಾಗಿ ಕುಳಿತು ಲಂಕೆಗೆ ಆಗಮಿಸಿದನು.॥೮-೧೦॥

ನಾನು ಸ್ವಪ್ನದಲ್ಲಿ ಸೀತೆಯನ್ನು ನೋಡಿದೆನು. ಆವಳು ಸಮುದ್ರದಿಂದ ಸುತ್ತುವರಿಯಲ್ಪಟ್ಟ ಶ್ವೇತಪರ್ವತದಲ್ಲಿ ಕುಳಿತಿದ್ದಳು. ಆವಳು ಬಿಳಿಯ ವಸ್ತ್ರವನ್ನು ಉಟ್ಟಿದ್ದಳು.॥೧೧॥

ಸೂರ್ಯನಿಗೂ,ಸೂರ್ಯಕಾಂತಿಗೂ ಭೇದವು ಇಲ್ಲದಂತೆ ಶ್ರೀರಾಮನನ್ನು ಈ ಸೀತಾದೇವಿಯು ಸೇರಿಕೊಂಡೇ ಇದ್ದಳು. ಮತ್ತೊಮ್ಮೆ ನಾಲ್ಕು ದಂತಗಳುಳ್ಳ ಪರ್ವತೋಪಮವಾದ ಮಹಾಗಜದ ಮೇಲೆ ಶ್ರೀರಾಮನು ಲಕ್ಷ್ಮಣನೊಡನೆ ಸಂಚರಿಸುತ್ತಿರುವುದನ್ನು ನಾನು ಕನಸಿನಲ್ಲಿ ಕಂಡೆನು.॥೧೨॥ ಬಳಿಕ ತಮ್ಮ ತೇಜಸ್ಸಿನಿಂದ ಬೆಳಗುತ್ತಿದ್ದ, ಸೂರ್ಯಸದೃಶರಾಗಿದ್ದ ಬಿಳಿಯ ಮಾಲೆಗಳನ್ನು ಧರಿಸಿದ್ದ ರಾಮ-ಲಕ್ಷ್ಮಣರು ಜಾನಕಿಯ ಬಳಿಗೆ ಬಂದರು.॥೧೩॥ ಆನಂತರ ಆ ಪರ್ವತದ ಶಿಖರದಲ್ಲಿ ಆಕಾಶದಲ್ಲಿ ಆನೆಯ ಮೇಲೆ ಕುಳಿತ್ತಿದ್ದ ಶ್ರೀರಾಮನು ಸೀತಾದೇವಿಯನ್ನು ಕೈಹಿಡಿದು ಆನೆಯಮೇಲೆ ಕುಳ್ಳರಿಸಿಕೊಂಡನು.*॥೧೪॥ ಮತ್ತೆ ಕಮಲದಂತೆ ವಿಶಾಲವಾದ ಕಣ್ಣುಗಳನ್ನು ಹೊಂದಿದ್ದ, ಪ್ರಸನ್ನಚಿತ್ತಳಾದ ಸೀತಾದೇವಿಯು ತನ್ನ ಪತಿಯ ತೊಡೆಯ ಮೇಲಿಂದ ನೆಗೆದು ಆಕಾಶದಲ್ಲಿದ್ದ

---

* ಆರೋಹಣಂ ಗೋವೃಷಕುಂಜರಾಣಾಂ ಪ್ರಸಾದ ಶೈಲಾಗ್ರ ವನಸ್ಥಲೀನಾಮ್॥ ''ಧ್ರುವಮರ್ಥಲಾಭಮ್''

ಸ್ವಪ್ನಫಲಭಾಗದಲ್ಲಿ ಹೀಗೆ ಹೇಳಿದೆ– ಗಜಾರೋಹಣ, ವೃಷಭಾರೋಹಣ, ಪರ್ವತಶಿಖರಕ್ಕೇರುವುದು, ವನಸ್ಥಳಿಗಳನ್ನು ನೋಡುವುದು ಇವೆಲ್ಲವೂ ಮುಂದೆ ನಿಶ್ಚಯವಾಗಿ ಸಂಪತ್ತುಗಳು ದೊರೆಯುತ್ತವೆ, ಎಂಬುದನ್ನು ಸೂಚಿಸುತ್ತದೆ.

ಭರ್ತ್ರಾ ಪರಿಗೃಹೀತಸ್ಯ ಜಾನಕೀ ಸ್ಕಂಧಮಾಶ್ರಿತಾ।
ಭರ್ತುರಂಕಾತ್ ಸಮುತ್ಪತ್ಯ ತತಃ ಕಮಲಲೋಚನಾ ॥ ೨೫॥

ಚಂದ್ರಸೂರ್ಯೌ ಮಯಾ ದೃಷ್ಟೌ ಪಾಣಿನಾ ಪರಿಮಾರ್ಜತೀ।
ತತಸ್ತಾಭ್ಯಾಂ ಕುಮಾರಾಭ್ಯಾಮಾಶ್ರಿತಃ ಸ ಗಜೋತ್ತಮಃ ॥ ೨೬॥

ಸೀತಯಾ ಚ ವಿಶಾಲಾಕ್ಷ್ಯಾ ಲಂಕಾಯಾ ಉಪರಿ ಸ್ಥಿತಃ।
ಪಾಂಡರರ್ಷಭಯುಕ್ತೇನ ರಥೇನಾಪ್ಯಯುಜಾ ಸ್ಥಿತಮ್ ॥ ೨೭॥

ಇತೋಽಪಯಾತಃ ಕಾಕುತ್ಸ್ಥಃ ಸೀತಯಾ ಸಹ ಭಾರ್ಯಯಾ ।
ಲಕ್ಷ್ಮಣೇನ ಸಹ ಭ್ರಾತ್ರಾ ವಿಮಾನೇ ಪುಷ್ಪಕೇ ಸ್ಥಿತಃ ॥ ೨೮॥

ಶುಕ್ಲಮಾಲ್ಯಾಂಬರಧರೋ ಲಕ್ಷ್ಮಣೇನ ಸಮಾಗತಃ।
ಅರುಜ್ಯ ಪುಷ್ಪಕಂ ದಿವ್ಯಂ ವಿಮಾನಂ ಸೂರ್ಯಸನ್ನಿಭಮ್ ॥ ೨೯॥

ಉತ್ತರಾಂ ದಿಶಮಾಲೋಕ್ಯ ಜಗಾಮ ಹ್ರುತುಚೋತ್ತಮಃ ।
ಏಷಃ ಸ್ವಪ್ನೇ ಮಯಾ ದೃಷ್ಟೋ ರಾಘಃ ವಿಷ್ಣು ಪರಾಕ್ರಮಃ ।
ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾ ಸಹ ರಾಘವಃ ॥ ೨೦॥

ನ ಹಿ ರಾಘೋ ಮಹಾತೇಜಾಃ ಶಕ್ಯೋ ಜೇತುಂ ಸುರಾಸುರೈಃ ।
ರಾಕ್ಷಸೈರ್ವಾಪಿ ಚಾನ್ಯೈರ್ವಾ ಸ್ವರ್ಗಃ ಪಾಪಜನೈರಿವ ॥ ೨೧॥

ರಾವಣಶ್ಚ ಮಯಾ ದೃಷ್ಟಃ ಕ್ಷಿತೌ ತೈಲಸಮುಕ್ಷಿತಃ ॥ ೨೨॥

ರಕ್ತವಾಸಾಃ ಪಿಬನ್ ಮತ್ತಃ ಕರವೀರಕೃತಸ್ರಜಃ।
ವಿಮಾನಾತ್ ಪುಷ್ಪಕಾದಸ್ಮ ರಾವಣಃ ಪತಿತೋ ಭುವಿ ॥ ೨೩॥

ಕೃಷ್ಯಮಾಣಃ ಸ್ತ್ರಿಯಾ ದೃಷ್ಟೋ ಮುಂಡಃ ಕೃಷ್ಣಾಂಬರಃ ಪುನಃ ।
ರಥೇನ ಖರಯುಕ್ತೇನ ರಕ್ತಮಾಲ್ಯಾನುಲೇಪನಃ ॥ ೨೪॥

ಪಿಬಂಸ್ಯೈಲಂ ಹಸನ್ನೃತ್ಯನ್ ಭ್ರಾಂತಚಿತ್ತಾತುಲೇಂದ್ರಿಯಃ ।
ಗರ್ದಭೇನ ಯಯೌ ಶೀಘ್ರಂ ದಕ್ಷಿಣಾಂ ದಿಶಮಾಸ್ಥಿತಃ ॥ ೨೫॥

ಪುನರೇವ ಮಯಾ ದೃಷ್ಟೋ ರಾವಣೋ ರಾಕ್ಷಸೇಶ್ವರಃ ।
ಪತಿತೋಽವಾಕ್ಶಿರಾ ಭೂಮೌ ಗರ್ದಭಾದ್ಭಯನೋದಿತಃ ॥ ೨೬॥

ಸೂರ್ಯ-ಚಂದ್ರರನ್ನು ಎರಡೂ ಕೈಗಳಿಂದ ಸವರುತ್ತಿದ್ದುದನ್ನು ನಾನು ಕನಸಿನಲ್ಲಿ ಕಂಡೆನು.* ॥೨೫॥ ಬಳಿಕ ದಶರಥನ ಕುಮಾರರಾದ ರಾಮ-ಲಕ್ಷ್ಮಣರನ್ನು ವಿಶಾಲಾಕ್ಷಿಯಾದ ಸೀತಾದೇವಿಯನ್ನು ಹೊತ್ತಿದ್ದ ಆ ಆನೆಯು ಲಂಕೆಯ ಮೇಲ್ಭಾಗದಲ್ಲಿ ನಿಂತಿತು.॥೨೬॥

ಬಿಳುಪಾದ ಎಂಟು ಎತ್ತುಗಳು ಹೂಡಿದ ರಥದಲ್ಲಿ ಪತ್ನಿಯಾದ ಸೀತಾದೇವಿಯೊಡನೆ ಕುಳಿತು ಕಾಕುತ್ಸ್ಥನು ಇಲ್ಲಿಗೆ ಆಗಮಿಸಿದ ಮತ್ತೊಂದು ದೃಶ್ಯವನ್ನು ನಾನು ಕನಸಿನಲ್ಲಿ ಕಂಡೆನು.॥೨೭॥ ಹೀಗೆ ನಾನು ಸ್ವಪ್ನದಲ್ಲಿ ತಮ್ಮನಾದ ಲಕ್ಷ್ಮಣನೊಡನೆಯೂ, ಪತ್ನಿಯಾದ ಜಾನಕಿಯೊಡನೆಯೂ ಇದ್ದ ಬಿಳಿಯ ಪುಷ್ಪಮಾಲೆಗಳಿಂದ ಆಲಂಕೃತನಾದ, ಸತ್ಯಪರಾಕ್ರಮಿಯಾದ ಶ್ರೀರಾಮನನ್ನು ನೋಡಿದೆನು.

ಮರಳಿ ಮಹಾಪರಾಕ್ರಮಶಾಲಿಯೂ, ಮಹಾವೀರನೂ, ಪುರುಷೋತ್ತಮನೂ ಆದ ಶ್ರೀರಾಮನು ಪತ್ನಿಯಾದ ಸೀತೆಯೊಡನೆ, ತಮ್ಮನಾದ ಲಕ್ಷ್ಮಣನೊಡನೆಗೂಡಿ ಸೂರ್ಯ ಕಾಂತಿಯಂತೆ ಬೆಳಗುತ್ತಿದ್ದ ದಿವ್ಯವಾದ ಪುಷ್ಪಕ ವಿಮಾನದಲ್ಲಿ ಕುಳಿತು ಉತ್ತರದಿಕ್ಕಿಗೆ ಪಯಣ ಬೆಳೆಸಿದನು. ಸೀತಾಲಕ್ಷ್ಮಣ ಸಮೇತನಾದ ವಿಷ್ಣುವಿನಂತೆ ಪರಾಕ್ರಮವುಳ್ಳ ಶ್ರೀರಾಮನನ್ನು ಈ ವಿಧವಾಗಿ ಸ್ವಪ್ನದಲ್ಲಿ ನಾನು ನೋಡಿದೆನು. ॥೨೮-೨೦॥

ಪಾಪಿಗಳು ಸ್ವರ್ಗವನ್ನು ಸೇರಲಾರರು. ಅಂತೆಯೇ ಮಹಾ ತೇಜಶ್ಶಾಲಿಯಾದ ಶ್ರೀರಾಮನನ್ನು ಸುರಾಸುರರಾಗಲೀ, ರಾಕ್ಷಸರಾಗಲೀ, ಬೇರೆ ಯಾರೂ ಜಯಿಸಲು ಸಮರ್ಥ ರಲ್ಲ.॥೨೧॥

ಆದೇ ಕನಸಿನಲ್ಲಿ ನಾನು – ರಾಕ್ಷಸ ರಾಜನಾದ ರಾವಣನು ಮೈಗೆಲ್ಲ ಎಣ್ಣೆಯನ್ನು ಹಚ್ಚಿಕೊಂಡಿದ್ದನು. ಕೆಂಪು ಬಟ್ಟೆಯನ್ನು ಉಟ್ಟಿದ್ದನು. ಸುರಾಪಾನದಿಂದ ಉನ್ಮತ್ತನಾಗಿದ್ದನು. ಕೆಂಪು ಕಣಗಿಲೆ ಹೂವಿನ ಹಾರವನ್ನು ಹಾಕಿಕೊಂಡಿದ್ದ ರಾವಣನು ಪುಷ್ಪಕವಿಮಾನದಿಂದ ಭೂಮಿಗೆ ಬೀಳುವುದನ್ನು ನೋಡಿದೆನು. ॥೨೨-೨೩॥ ತಲೆಯನ್ನು ಬೋಳಿಸಿಕೊಂಡಿದ್ದು, ಕಪ್ಪುಬಟ್ಟೆಯನ್ನು ಧರಿಸಿದ್ದ ಆ ರಾವಣನನ್ನು ಓರ್ವ ಹೆಂಗಸು ಅತ್ತಂದಿತ್ತ ಎಳೆದಾಡುತ್ತಿದ್ದಳು. ಮತ್ತೊಮ್ಮೆ ಕೆಂಪಾದ ಮಾಲೆಗಳನ್ನು ಧರಿಸಿ, ಕೆಂಪುಗಂಧವನ್ನು ಹಚ್ಚಿಕೊಂಡು ಕತ್ತೆಗಳು ಹೂಡಿದ ರಥದಲ್ಲಿ ಸಾಗುತ್ತಿದ್ದನು.॥೨೪॥ ಅವನು ಭ್ರಾಂತವಾದ ಮನಸ್ಸಿನಿಂದ, ಇಂದ್ರಿಯಚಾಪಲ್ಯದಿಂದ, ಎಣ್ಣೆಯನ್ನು ಕುಡಿಯುತ್ತಾ, ನಗುತ್ತಾ, ಕುಣಿಯುತ್ತಾ, ಕತ್ತೆಗಳ ರಥದಲ್ಲಿ ದಕ್ಷಿಣದಿಕ್ಕಿಗೆ ಹೋಗುತ್ತಿದ್ದನು. ॥೨೫॥ ಪುನಃ ನಾನು ಸ್ವಪ್ನದಲ್ಲಿ ರಾಕ್ಷಸೇಶ್ವರನಾದ ರಾವಣನು ಭಯವಿಹ್ವಲನಾಗಿ ಕತ್ತೆಯಮೇಲಿನಿಂದ ತಲೆಕೆಳಗಾಗಿ ನೆಲಕ್ಕೆ ಬಿದ್ದಿರುವುದನ್ನು ನೋಡಿದೆ.॥೨೬॥ ಹೀಗೆ ನೆಲಕ್ಕೆ ಬಿದ್ದ ರಾವಣನು ಭ್ರಾಂತನಾಗಿ

* ಕನಸಿನಲ್ಲಿ ಸೂರ್ಯ-ಚಂದ್ರರನ್ನು ಹಿಡಿದು ಕೊಂಡರೆ ಅವರಿಗೆ ಮಹಾರಾಜ್ಯವು ಪ್ರಾಪ್ತವಾಗುತ್ತದೆ,ಎಂದು ಸ್ವಪ್ನಫಲ ನಿರ್ಣಯದಲ್ಲಿ ಹೀಗೆ– ಆದಿತ್ಯಮಂಡಲಂ ಚಾಪಿ ಚಂದ್ರಮಂಡಲ ಮೇವವಾ। ಸ್ವಪ್ನೇಗೃಹ್ಣಾತಿ ಹಸ್ತಾಭ್ಯಾಂ ಮಹಡ್ಯಾಜ್ಯಂ ಸಮಾಪ್ನುಯಾತ್॥ (ಗೋವಿಂದರಾಜೀಯವ್ಯಾಖ್ಯಾ)

ಸಹಸೋತ್ಪಾಯ ಸಂಭ್ರಾಂತೋ ಭಯಾರ್ತೋ ಮದವಿಹ್ವಲಃ ।
ಉಸ್ಕೃತ್ತ ಇವ ದಿಗ್ದಾಹಾ ದುರ್ಗಾಕ್ಕಂ ಪ್ರಲಪನ್ ಮುಹುಃ ॥ ೨೭॥

ದುರ್ಗಂಧಂ ದುಃಸಹಂ ಘೋರಂ ತಮಿಸಂ ನರಕೋಪಮಮ್ ।
ಮಲಪಂಕಂ ಪ್ರವಿಶ್ಯಾಶು ಮಗ್ನಸ್ತತ್ರ ಸ ರಾವಣಃ ॥ ೨೮॥

ಪ್ರಸ್ಥಿತೋ ದಕ್ಷಿಣಾ ಮಾಶಾಂ ಪ್ರವಿಷ್ಟೋ ಕರ್ದಮಂ ಹ್ರದಮ್ ॥
ಕಂಠೇ ಬದ್ಧ್ವಾ ದಶಗ್ರೀವಂ ಪ್ರಮದಾ ರಕ್ತವಾಸಿನೀ ॥ ೨೯॥

ಕಾಲೀ ಕರ್ದಮಲಿಪ್ತಾಂಗೀ ದಿಶಂ ಯಾಮ್ಯಾಂ ಪ್ರಕರ್ಷತಿ ।
ಏವಂ ತತ್ರ ಮಯಾ ದೃಷ್ಟಃ ಕುಂಭಕರ್ಣೋ ನಿಶಾಚರಃ ॥ ೩೦॥

ರಾವಣಸ್ಯ ಸುತಾಃ ಸರ್ವೇ ಮುಂಡಾಸ್ತೈಲಸಮುಕ್ಷಿತಾಃ ।
ವರಾಹೇಣ ದಶಗ್ರೀವಃ ಶಿಂಶುಮಾರೇಣ ಚೇಂದ್ರಜಿತ್ ॥ ೩೧॥

ಉಷ್ಟ್ರೇಣ ಕುಂಭಕರ್ಣಸ್ತು ಪ್ರಯಾತೋ ದಕ್ಷಿಣಾಂ ದಿಶಮ್ ।
ಏಕಸ್ತತ್ರ ಮಯಾ ದೃಷ್ಟಃ ಶ್ವೇತಚ್ಛತ್ರೋ ವಿಭೀಷಣಃ ॥ ೩೨॥

ಶುಕ್ಲಮಾಲ್ಯಾಂಬರಧರಃ ಶುಕ್ಲಗಂಧಾನುಲೇಪನಃ ।
ಶಂಖಿದುಂದುಭಿನಿರ್ಘೋಷೈರ್ನೃತ್ತಗೀತೈರಲಂಕೃತಃ ॥ ೩೩॥

ಆರುಹ್ಯ ಶೈಲಸಂಕಾಶಂ ಮೇಘಸ್ತನಿತನಿಃಸ್ವನಮ್ ।
ಚತುರ್ದಂತಂ ಗಜಂ ದಿವ್ಯಮಾಸ್ತೇ ತತ್ರ ವಿಭೀಷಣಃ ॥ ೩೪॥

ಚತುರ್ಭಿಃ ಸಚಿವೈಃ ಸಾರ್ಧಂ ವೈಹಾಯಸಮುಪಸ್ಥಿತಃ ।
ಸಮಾಜಶ್ಚ ಮಯಾ ದೃಷ್ಟೋ ಗೀತವಾದಿತ್ರನಿಃಸ್ವನಃ ॥ ೩೫॥

ಪಿಟತಾಂ ರಕ್ತಮಾಲ್ಯಾನಾಂ ರಕ್ಷಸಾಂ ರಕ್ತವಾಸಸಾಮ್ ।
ಲಂಕಾ ಚೇಯಂ ಪುರೀ ರಮ್ಯಾ ಸವಾಜಿರಥಕುಂಜರಾ ॥ ೩೬॥

ಸಾಗರೇ ಪತಿತಾ ದೃಷ್ಟಾ ಭಗ್ನಗೋಪುರತೋರಣಾ ।
ಲಂಕಾ ದೃಷ್ಟಾ ಮಯಾ ಸ್ವಪ್ನೇ ರಾವಣೇನಾಭಿರಕ್ಷಿತಾ ॥ ೩೭॥

ದಗ್ಧಾ ರಾಮಸ್ಯ ದೂತೇನ ವಾನರೇಣ ತರಸ್ವಿನಾ ।
ಪೀತ್ವಾ ತೈಲಂ ಪ್ರಸೃತ್ತಾಶ್ಚ ಪ್ರಹಸಂತ್ಯೋ ಮಹಾಸ್ವನಾಃ ॥ ೩೮॥

ಲಂಕಾಯಾಂ ಭಸ್ಮರೂಕ್ಷಾಯಾಂ ಪ್ರವಿಷ್ಟಾ ರಾಕ್ಷಸಸ್ತ್ರಿಯಃ ।
ಕುಂಭಕರ್ಣಾದಯಶ್ಚೈಮೇ ಸರ್ವೇ ರಾಕ್ಷಸಪುಂಗವಾಃ ॥ ೩೯॥

ಭಯಪೀಡಿತನಾಗಿದ್ದನು. ಮದದಿಂದ ವಿಹ್ವಲನಾಗಿದ್ದನು. ಹುಚ್ಚನಂತೆ ಕಾಣುತ್ತಿದ್ದ್ದು ದಿಗಂಬರನಾಗಿದ್ದನು. ಕೆಟ್ಟಮಾತುಗಳಿಂದ ಪ್ರಲಾಪಿಸುತ್ತಿದ್ದನು.॥೨೭॥ ಸಹಿಸಲು ಅಸಾಧ್ಯವಾದ ದುರ್ಗಂಧವು ಅವನ ಶರೀರದಿಂದ ಹೊರ ಸೂಸುತ್ತಿತ್ತು. ಅವನು ಗಾಢಾಂಧಕಾರದಿಂದ ಕೂಡಿದ್ದ, ನರಕಸದೃಶವಾದ ಮಲದ ಹೊಂಡದಲ್ಲಿ ಬಿದ್ದು ಅಲ್ಲಿಯೇ ಮುಳುಗಿ ಹೋದ ಘೋರವಾದ ದೃಶ್ಯವನ್ನು ನಾನು ಕನಸಿನಲ್ಲಿ ಕಂಡೆನು.॥೨೮॥ ಅವನು ದಕ್ಷಿಣದಿಕ್ಕಿಗೆ ಹೋಗುವಾಗ ಕೆಸರಿನ ಹೊಂಡವನ್ನು ಪ್ರವೇಶಿಸಿದನು. ಆಗ ಕಪ್ಪಾದ ಒರ್ವ ಸ್ತ್ರೀಯು ಶರೀರಕ್ಕೆ ಕೆಸರನ್ನು ಮೆತ್ತಿಕೊಂಡು, ಕೆಂಪಾದ ಬಟ್ಟೆಯನ್ನುಟ್ಟು ರಾವಣನ ಕತ್ತಿಗೆ ಹಗ್ಗ ಕಟ್ಟಿ ದಕ್ಷಿಣ ದಿಕ್ಕಿಗೆ ಎಳೆದು ಕೊಂಡು ಹೋಗುತ್ತಿದ್ದಳು. ಇದೇರೀತಿ ನಾನು ಕನಸಿನಲ್ಲಿ ರಾಕ್ಷಸನಾದ ಕುಂಭಕರ್ಣನನ್ನು ನೋಡಿದೆನು.॥೨೯-೩೦॥ ರಾವಣನ ಎಲ್ಲ ಮಕ್ಕಳೂ ಬೋಳುತಲೆಗಳಾಗಿ ಎಣ್ಣೆಯಲ್ಲಿ ಮುಳುಗಿರುವ ವರನ್ನು ನೋಡಿದೆನು. ಹಂದಿಯ ಮೇಲೆ ರಾವಣನು, ಮೊಸಳೆಯಮೇಲೆ ಇಂದ್ರಜಿತುವು, ಒಂಟೆಯಮೇಲೆ ಕುಂಭಕರ್ಣನು ಕುಳಿತು ದಕ್ಷಿಣದಿಕ್ಕಿಗೆ ಪ್ರಯಾಣ ಮಾಡುತ್ತಿದ್ದರು.ಆದರೆ ವಿಭೀಷಣನು ಮಾತ್ರ ಶ್ವೇತಚ್ಛತ್ರದ ನೆರಳಿನಲ್ಲಿ ಕುಳಿತಿರುವುದನ್ನು ನೋಡಿದೆನು.॥೩೧-೩೨॥ ಅವನು ಬಿಳಿಯ ವಸ್ತ್ರವನ್ನುಟ್ಟು, ಶ್ವೇತವರ್ಣದ ಮಾಲೆಗಳನ್ನು ಧರಿಸಿದ್ದು, ಶ್ವೇತಗಂಧವನ್ನು ಪೂಸಿಕೊಂಡಿದ್ದನು. ಅವನ ಸುತ್ತಲೂ ಶಂಖದುಂದುಭಿಗಳ ಧ್ವನಿಗಳಿಂದಲೂ, ನೃತ್ಯಗೀತ ಗಳಿಂದ ಆನಂದಿತನಾಗಿದ್ದನು. ಅಂತಹ ಪರಿವಾರದಿಂದ ಸಮಲಂಕೃತನಾಗಿದ್ದ ವಿಭೀಷಣನು, ಕೈಲಾಸದಸದೃಶವಾದ ಮೇಘಗರ್ಜನೆಯಂತೆ ಘೀಳಿಡುತ್ತಿದ್ದ ನಾಲ್ಕು ದಂತಗಳುಳ್ಳ ದಿವ್ಯವಾದ ಆನೆಯ ಮೇಲೆ ಕುಳಿತು, ನಾಲ್ಕು ಮಂದಿ ಸಚಿವರೊಡನೆ ಆಕಾಶದಲ್ಲಿ ಉಪಸ್ಥಿತನಾಗಿದ್ದನು.॥೩೩-೩೫॥ ಗೀತವಾದ್ಯಗಳ ಧ್ವನಿಗಳಿಂದ ಸಮಾವೃತರಾಗಿ ಸುರಾಪಾನ ಮಾಡುತ್ತಾ ಕೆಂಪುಮಾಲೆಗಳನ್ನು ಧರಿಸಿಕೊಂಡು, ಕೆಂಪುವಸ್ತ್ರ ನ್ನುಟ್ಟಿದ್ದ ರಾಕ್ಷಸ ಸಮೂಹದನ್ನು ನಾನು ಕನಸಿನಲ್ಲಿ ಕಂಡೆನು.॥೩೬॥ ರಥಾಶ್ವ-ಗಜಗಳಿಂದ ಸಮಲಂಕೃತವಾಗಿರುವ, ರಮ್ಯವಾಗಿ ರುವ ಈ ಲಂಕಾಪಟ್ಟಣದ ಗೋಪುರಗಳೂ, ತೋರಣಗಳೂ, ಭಗ್ನವಾಗಿ ಸಮುದ್ರದಲ್ಲಿ ಬಿದ್ದು ಹೋಗುವುದನ್ನು ನಾನು ನೋಡಿದೆನು.॥೩೭॥ ಇಲ್ಲಿಯ ವರೆಗೆ ರಾವಣನಿಂದ ರಕ್ಷಿಸಲ್ಪಟ್ಟ ಈ ಲಂಕೆಯನ್ನು ಶ್ರೀರಾಮನ ದೂತನಾದ ಮಹಾಬಲಶಾಲಿ ಯಾದ ಒರ್ವ ವಾನರ ಪ್ರಮುಖನು ಭಸ್ಮಮಾಡುತ್ತಿದ್ದುದನ್ನು ನೋಡಿದೆನು.॥೩೮॥ ರಾಕ್ಷಸ ಸ್ತ್ರೀಯರು ಎಣ್ಣೆಯನ್ನು ಕುಡಿದು ಪ್ರಮತ್ತರಾಗಿ ಗಹಗಹಿಸಿ ನಗುತ್ತಾ ಗಟ್ಟಿಯಾಗಿ ಶಬ್ದಮಾಡುತ್ತಾ ಬೆಂದು ಭಸ್ಮವಾಗಿ ಹೊಗಿದ್ದ ವಿಕಾರವಾದ ಲಂಕೆಯನ್ನು ಪ್ರವೇಶಿ ಸುತ್ತಿದ್ದರು.॥೩೯॥ ಕುಂಭಕರ್ಣನೇ ಮೊದಲಾದ ರಾಕ್ಷಸಯೋಧರೆಲ್ಲರೂ ಕೆಂಪುಬಣ್ಣದ ಮಾಸಿದ ಬಟ್ಟೆಗಳನ್ನು ಧರಿಸಿಕೊಂಡು ಸೆಗಣಿಯ ಬಗ್ಗಡದಿಂದ ತುಂಬಿದ

ರಕ್ತಂ ನಿವಸನಂ ಗೃಹ್ಯ ಪ್ರವಿಷ್ಟಾ ಗೋಮಯಹ್ರದೇ ।
ಅಪಗಚ್ಛತ ನಶ್ಯದ್ವಂ ಸೀತಾಮಾಪ ಸ ರಾಘವಃ ॥ ೪೧॥

ಘಾತಯೇತ್ ಪರಮಾಮರ್ಷೀ ಸರ್ವೈಃ ಸಾರ್ಧಂ ಹಿ ರಾಕ್ಷಸೈಃ ।
ಪ್ರಿಯಾಂ ಬಹುಮತಾಂ ಭಾರ್ಯಾಂ ವನವಾಸಮನುವ್ರತಾಮ್ ॥

ಭರ್ತ್ಸಿತಾಂ ತರ್ಜಿತಾಂ ವಾಪಿ ನಾನುಮಂಸ್ಯತಿ ರಾಘವಃ ।
ತದಲಂ ಕ್ರೂರವಾಕ್ಯೈರ್ವಃ ಸಾಂತ್ವಮೇವಾಭಿಧೀಯತಾಮ್ ॥ ೪೨॥

ಅಭಿಯಾಚಾಮ ವೈದೇಹೀಮೇತದ್ಧಿ ಮಮ ರೋಚತೇ ।
ಯಸ್ಯಾಮೇವಂವಿಧಃ ಸ್ವಪ್ನೋ ದುಃಖಿತಾಯಾಂ ಪ್ರದೃಶ್ಯತೇ ॥ ೪೩॥

ಸಾ ದುಃಖೈರ್ನಿವಿದೈರ್ಮುಕ್ತಾ ಪ್ರಿಯಂ ಪ್ರಾಪ್ಸ್ಯೋತ್ಯನುತ್ತಮಮ್ ।
ಭರ್ತ್ಸಿತಾಮಪಿ ಯಾಚದ್ವಂ ರಾಕ್ಷಸ್ಯಃ ಕಿಂ ವಿವಕ್ಷಯಾ ॥ ೪೪॥

ರಾಘವಾದ್ಧಿ ಭಯಂ ಘೋರಂ ರಾಕ್ಷಸಾನಾಮುಪಸ್ಥಿತಮ್ ।
ಪ್ರಣಿಪಾತಪ್ರಸನ್ನಾ ಹಿ ಮೈಥಿಲೀ ಜನಕಾತ್ಮಜಾ ॥ ೪೫॥

ಅಲಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋ ಭಯಾತ್ ।
ಅಪಿ ಚಾಸ್ಯಾ ವಿಶಾಲಾಕ್ಷ್ಯಾ ನ ಕಿಂಚಿದುಪಲಕ್ಷಯೇ ॥ ೪೬॥

ವಿರೂಪಮಪಿ ಚಾಂಗೇಷು ಸುಸೂಕ್ಷ್ಮಮಪಿ ಲಕ್ಷಣಮ್ ।
ಛಾಯಾವೈಗುಣ್ಯಮಾತ್ರಂ ತು ಶಂಕೇ ದುಃಖಮುಪಸ್ಥಿತಮ್ ॥ ೪೭॥

ಆದುಃಖಾರ್ಹಾಮಿಮಾಂ ದೇವೀಂ ವೈಹಾಯಸಮುಪಸ್ಥಿತಾಮ್ ।
ಅರ್ಥಸಿದ್ಧಿಂ ತು ವೈದೇಹ್ಯಾಃ ಪಶ್ಯಾಮ್ಯಹಮುಪಸ್ಥಿತಾಮ್ ॥ ೪೮॥

ರಾಕ್ಷಸೇಂದ್ರವಿನಾಶಂ ಚ ವಿಜಯಂ ರಾಘವಸ್ಯ ಚ ।
ನಿಮಿತ್ತಭೂತಮೇತತ್ತು ಶ್ರೋತುಮಸ್ಯಾ ಮಹತ್ ಪ್ರಿಯಮ್ ॥ ೪೯॥

ಹೊಂಡವನ್ನು ಪ್ರವೇಶಿಸುತ್ತಿರುವುದನ್ನು ನಾನು ಕನಸಿನಲ್ಲಿ ಕಂಡೆನು.॥೪೦॥

ರಾಕ್ಷಸಿಯರೇ! ಸೀತೆಯಿಂದ ದೂರ ಸರಿಯಿರಿ. ಅವಳ ತಂಟೆಗೆ ಹೋಗಬೇಡಿರಿ. ರಾಘವನು ಸೀತೆಯನ್ನು ಪಡೆದೇ ತೀರುವನು. ಕುದ್ಧನಾದ ಶ್ರೀರಾಮನು ರಾಕ್ಷಸರೊಡನೆ ನಿಮ್ಮನ್ನು ಧ್ವಂಸಮಾಡುವನು.॥೪೧॥ ಶ್ರೀರಾಮನಿಗೆ ಸೀತೆಯು ಬಹಿಃ ಪ್ರಾಣಳು. ಅವಳು ವನವಾಸದ ಆಪತ್ಕಾಲದಲ್ಲಿಯೂ ಅವನೊಡನೆ ದೀಕ್ಷೆಪಡೆದು ಸಾಗಿದ್ದ ಸಾಧ್ವಿಯು. ಪ್ರೇಮಕ್ಕೆ ಪ್ರತಿರೂಪವಾದ ತನ್ನ ಭಾರ್ಯೆಯನ್ನು ಯಾರಾದರು ಭಯಪಡಿಸಿದರೆ, ಹಿಂಸಿಸಿದರೆ ಅವನು ಖಂಡಿತವಾಗಿ ಸಹಿಸನು.॥೪೨॥ ನೀವುಗಳು ಇವಳೊಡನೆ ಆಡುವ ಕ್ರೂರ ವಚನಗಳನ್ನು ಸಾಕು ಮಾಡಿರಿ. ಅವಳೊಡನೆ ಸಾಂತ್ವನದ ಮಾತುಗಳನ್ನೇ ಆಡಿರಿ. ನೀವೆಲ್ಲರೂ ಸೀತಾದೇವಿಗೆ ಶರಣು ಹೋಗುವುದೇ ಉಚಿತವೆಂದು ನನಗೆ ತೊರುತ್ತದೆ.॥೪೩॥ ಇವಳು ಇಂತಹ ದುಃಖದಲ್ಲಿರುವಾಗ ಇವಳ ಕುರಿತು ಈ ವಿಧವಾದ ಸ್ವಪ್ನಗಳು ನನಗೆ ಬಿದ್ದವು. ಆದರಿಂದಾಗಿ ಸೀತೆಯು ದುಃಖಗಳಿಂದ ವಿಮುಕ್ತಳಾಗಿ ಸರ್ವೋತ್ಕೃಷ್ಟನಾದ ತನ್ನ ಪತಿಯನ್ನು ಹೊಂದುವಳು.॥೪೪॥

ರಾಕ್ಷಸ ಸ್ತ್ರೀಯರೇ! ಇದುವರೆವಿಗೂ ಇವಳನ್ನು ಹೇಗೋ ಭಯಪಡಿಸಿ ಬಾಧಿಸಿದ್ದೇವೆ. ಈಗ ಇವಳು ನಮಗೆ ಕ್ಷಮಿಸುವಳೇ? ಎಂಬ ಶಂಕೆಯನ್ನು ಬಿಡಿರಿ. ಈಗ ನಾವು ಇವಳ ಕ್ಷಮೆಯನ್ನು ಯಾಚಿಸೋಣ. ರಾಘವನಿಂದ ರಾಕ್ಷಸರಿಗೆ ಅತಿಘೋರವಾದ ಭಯವು ಸನ್ನಿಹಿತವಾಗಿದೆ.॥೪೫॥

ಎಲೈ ರಕ್ಕಸಿಯರೇ! ಜನಕಸುತೆಯಾದ ಈ ಸೀತಾದೇವಿಗೆ ನಮಸ್ಕರಿಸಿದ ಮಾತ್ರದಿಂದ ಇವಳು ಪ್ರಸನ್ನಳಾಗುವಳು. ಇವಳು ದಯಾಮೂರ್ತಿಯಾಗಿದ್ದಾಳೆ. ಈ ಮಹಾಭಯದಿಂದ ನಮ್ಮನ್ನು ಹಾರು ಮಾಡಲು ಇವಳು ಸಮರ್ಥಳಾಗಿದ್ದಾಳೆ.॥೪೬॥ ವಿಶಾಲಾಕ್ಷಿಯಾದ ಈ ಸೀತಾ ದೇವಿಯ ಅವಯವಗಳಲ್ಲಿ ದುಃಖಸೂಚಕವಾದ ಯಾವ ಅವಲಕ್ಷಣಗಳು ಸೂಕ್ಷ್ಮವಾಗಿ ನೋಡಿದರೂ ಕಾಣಬರುವುದಿಲ್ಲ.॥೪೭॥ ಇಂತಹ ಶುಭಲಕ್ಷಣಗಳಿಂದ ಒಡಗೂಡಿದ ಈ ಸೀತಾದೇವಿಯು ದಿವ್ಯಸುಖಗಳಿಗೆ ಅರ್ಹಳಾಗಿದ್ದಾಳೆ. ಈಗ ಕಂಡು ಬರುವ ಈ ದುಃಖಿಗಳು ಕೇವಲ ಛಾಯಾಮಾತ್ರವಾಗಿದ್ದು ಯಥಾರ್ಥವಾಗಿ ಖಂಡಿತವಾಗಿಯೂ ಇಲ್ಲ. ಇವು ತಾತ್ಕಾಲಿಕ ವಾದುವುಗಳು. ಈ ಮಬ್ಬು ಕಳೆದು ಹೋದಾಗ ರಾಜ್ಯಲಾಭವು ಖಂಡಿತ. ಇವಳು ತನ್ನ ಪತಿಯಾದ ಶ್ರೀರಾಮನೊಡಗೂಡಿ ವಿಮಾನದಲ್ಲಿ ಕುಳಿತಂತೆ ನಾನು ಸ್ಪಷ್ಟವಾಗಿ ಕಂಡಿರುವೆನು. ಇದು ಅವಳಿಗೆ ಶುಭಸೂಚಕವು.॥೪೮॥

ನಾನು ಸ್ವಪ್ನದಲ್ಲಿ ವಿಮಾನವನ್ನು ಕಂಡಿದ್ದರ ಸೂಚನೆಯಿಂದ ಸೀತಾದೇವಿಗೆ ಕಾರ್ಯಸಿದ್ಧಿ, ಅರ್ಥಸಿದ್ಧಿ; ರಾವಣನಿಗೆ ವಿನಾಶವನ್ನೂ; ಶ್ರೀರಾಮನಿಗೆ ವಿಜಯವು ತಪ್ಪದೆ ಆಗಿಯೇ ತೀರುವುದು ಎಂದು ನನಗೆ ತೋರುತ್ತದೆ.॥೪೯॥ ಕಮಲದಂತೆ

ದೃಶ್ಯತೇ ಚ ಸ್ಫುರಚ್ಚಕ್ಷುಃ ಪದ್ಮಪತ್ರಮಿವಾಯತಮ್ ।
ಈಷಚ್ಚ ಹ್ಯಸಿತೋ ವಾಸ್ಯಾ ದಕ್ಷಿಣಾಯಾ ಹೃದಿ ಕ್ಷಣಃ ॥ ೫೧॥

ವಿಶಾಲವಾದ ಇವಳ ಎಡಗಣ್ಣು ಅದರುತ್ತಿದೆ. ಇದೂ ಶುಭಸೂಚನೆಯೇ. ಅತ್ಯಲ್ಪಕಾಲದಲ್ಲೇ ಇವಳು ಅತ್ಯಂತ ಸಂತೋಷಕರವಾದ ವಾರ್ತೆಯನ್ನು ಕೇಳಲಿರುವಳು ಎಂಬುದಕ್ಕೆ ಇದು ನಿಮಿತ್ತವಾಗಿದೆ.॥೫೧॥ ಉದಾರಹೃದಯಳಾದ ವೈದೇಹಿಯ ಎಡತೋಳು ರೋಮಾಂಚಗೊಂಡು ಸ್ಪಲ್ಪಮಟ್ಟಿಗೆ ಕಂಪಿಸುತ್ತಿದೆ. ಇದೂ ಕೂಡ ಅವಳಿಗೆ ಶುಭಸೂಚಕವೇ. ಹೆಣ್ಣಾನೆಯ ಸೊಂಡಿಲಿನಂತೆ ಶ್ರೇಷ್ಠವಾದ ಸೀತಾದೇವಿಯ ಎಡ ತೊಡೆಯೂ ಕೂಡ ಅದರುತ್ತಿದೆ. ಇದರಿಂದ ಬೇಗನೇ ಶ್ರೀರಾಮನು ಇವಳ ಮುಂದೆ ನಿಲ್ಲುವನೆಂಬುದನ್ನು ಸೂಚಿಸುತ್ತದೆ.॥೫೧॥

ಅಕಸ್ಮಾದೇವ ವೈದೇಹ್ಯಾ ಬಾಹುರೇಕಃ ಪ್ರಕಂಪತೇ ।
ಕರೇಣುಹಸ್ತಪ್ರತಿಮಃ ಸವ್ಯಶ್ಚೋರುರನುತ್ತಮಃ ।
ವೇಪಮಾನಃ ಸೂಚಯತಿ ರಾಘವಂ ಪುರತಃ ಸ್ಥಿತಮ್ ॥ ೫೧॥

ಅದೋ ಒಂದು ಪಕ್ಷಿಯು ರೆಂಬೆಯಲ್ಲಿರುವ ತನ್ನ ಗೂಡನ್ನು ಪ್ರವೇಶಿಸುತ್ತಿದೆ. ಆಗಾಗ ಮಧುರವಾಗಿ ಕೂಗುತ್ತಿದೆ. ಆ ಪಕ್ಷಿಯ ಕೂಜನವು ''ಸೀತೆ! ನೀನು ಭಯಪಡ ಬೇಡ'' ಎಂದು ಸಂಕೈಸುವಂತೆ ಅನಿಸುತ್ತದೆ. ಅದು ಶ್ರೀರಾಮನಿಗೆ ಸ್ವಾಗತವನ್ನು ಹಾಡುತ್ತಿದೆಯೋ ಎಂಬಂತಿದೆ. ಮತ್ತು ಸಂತೋಷದಿಂದ ಸೀತಾದೇವಿಗೆ ಉತ್ಸಾಹವನ್ನು ತುಂಬುತ್ತಿದೆಯೋ ಎಂದು ಕೂಗುತ್ತಿದೆ.॥೫೨॥

ಪಕ್ಷೀ ಚ ಶಾಖಾನಿಲಯಂ ಪ್ರವಿಷ್ಟಃ
ಪುನಃ ಪುನಶ್ಚೋತ್ತಮಸಾಂತ್ವವಾದೀ ।
ಸುಸ್ವಾಗತಾಂ ವಾಚಮುದೀರಯಾಣಃ
ಪುನಃ ಪುನಶ್ಚೋದಯತೀವ ಹೃಷ್ಟಃ ॥ ೫೨॥

ಬಳಿಕ ಸೀತಾದೇವಿಯು ತನ್ನ ಪತಿಗೆ ವಿಜಯವು ಸಿದ್ಧಿಸುವುದು ಎಂದರಿತು, ಸಂತಸಪಟ್ಟು ಹರ್ಷದಿಂದ ಹೀಗೆಂದಳು– ''ತ್ರಿಜಟೆಯು ಹೇಳಿದ ಸ್ವಪ್ನ ವಿಶೇಷಗಳು ನಿಜವಾದರೆ ನಿಮಗೆಲ್ಲರಿಗೂ ಅಭಯವನ್ನು ಕೊಡುತ್ತೇನೆ''॥೫೨॥

ತತಃ ಸಾ ಹ್ರೀಮತೀ ಬಾಲಾ ಭರ್ತುರ್ವಿಜಯಹರ್ಷಿತಾ ।
ಅವೋಚದ್ಧಿದಂ ತತ್ತಥ್ಯಂ ಭವೇಯಂ ಶರಣಂ ಹಿ ವಃ ॥ ೫೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಸಪ್ತವಿಂಶಃ ಸರ್ಗಃ ॥ ೨೭ ॥

ಇಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೇಳನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತೆಂಟನೆಯ ಸರ್ಗ

ಸೀತಾದೇವಿಯು ಪ್ರಾಣತೊರೆಯಲು ಸಿದ್ಧಳಾದುದು –

ಸಾ ರಾಕ್ಷಸೇಂದ್ರಸ್ಯ ವಚೋ ನಿಶಮ್ಯ
ತದ್ರಾವಣಸ್ಯಾಪ್ರಿಯಮಪ್ರಿಯಾರ್ತಾ ।
ಸೀತಾ ವಿತತ್ರಾಸ ಯಥಾ ವನಾಂತೇ
ಸಿಂಹಾಭಿಪನ್ನಾ ಗಜರಾಜಕನ್ಯಾ ॥ ೧॥

ಪತಿಯಿಂದ ಅಗಲಿ ವಿರಹಪೀಡಿತಳಾಗಿದ್ದ ಆ ಸೀತಾದೇವಿಯು ರಾಕ್ಷಸೇಂದ್ರನಾದ ರಾವಣನ ಕಠೋರ ವಚನಗಳನ್ನು ಸ್ಮರಿಸಿಕೊಂಡು ದುಃಖಿತಳಾಗಿ, ಆಡವಿಯಲ್ಲಿ ಸಿಂಹದಕೈಗೆಸಿಕ್ಕಿದ ಹೆಣ್ಣಾನೆಯಂತೆ ಭಯಗೊಂಡಳು.॥೧॥

ಸಾ ರಾಕ್ಷಸೀಮಧ್ಯಗತಾ ಚ ಭೀರು-
ರ್ವಾಗ್ಭಿರ್ಭೃಶಂ ರಾವಣತರ್ಜಿತಾ ಚ ।
ಕಾಂತಾರಮಧ್ಯೇ ವಿಜನೇ ವಿಸೃಷ್ಟಾ
ಬಾಲೇವ ಕನ್ಯಾ ವಿಲಲಾಪ ಸೀತಾ ॥ ೨॥

ಭಯಸ್ವಭಾವದ ಸೀತಾದೇವಿಯು ರಾಕ್ಷಸ್ತ್ರೀಯರ ನಡುವೆ ದಿಕ್ಕು ತೋಚದೆ ವಿಲಾಪಿಸುತ್ತಿದ್ದಳು. ರಾವಣನು ಕರ್ಣಕಠೋರವಾದ ವಾಗ್ಬಾಣಗಳಿಂದ ಅವಳನ್ನು ಘಾಸಿಗೊಳಿಸಿದ್ದನು. ಅಂತಹ ಸ್ಥಿತಿಯಲ್ಲಿ ಅವಳು ಗೊಂಡಾರಣ್ಯದಲ್ಲಿ ಬಂಧುಗಳಿಂದ ದೂರವಾಗಿ ದುಃಖಿಸುತ್ತಿರುವ ಅಮಾಯಕ ಹೆಣ್ಣುಮಗುವಿಯಂತೆ ಅಳುತ್ತಿದ್ದಳು.॥೨॥

ಸತ್ಯಂ ಬತೇದಂ ಪ್ರವದಂತಿ ಲೋಕೇ
ನಾಕಾಲಮೃತ್ಯುರ್ಭವತೀತಿ ಸಂತಃ।
ಯತ್ರಾಹಮೇವಂ ಪರಿಭರ್ತ್ಸ್ಯಮಾನಾ
ಜೀವಾಮಿ ಕಿಂಚಿತ್ ಕ್ಷಣಮಪ್ಯಪುಣ್ಯಾ ॥ ೩॥

ಸುಖಾದ್ವಿಹೀನಂ ಬಹುದುಃಖಪೂರ್ಣ
ಮಿದಂ ತು ನೂನಂ ಹೃದಯಂ ಸ್ಥಿರಂ ಮೇ।
ವಿದೀರ್ಯತೇ ಯನ್ನ ಸಹಸ್ರಧಾದ್ಯ
ವಜ್ರಾಹತಂ ಶೃಂಗಮಿವಾಚಲಸ್ಯ ॥ ೪॥

ನೈವಾಸ್ತಿ ದೋಷೋ ಮಮ ನೂನಮತ್ರ
ವಧ್ಯಾಹಮಸ್ಯಾಪ್ರಿಯದರ್ಶನಸ್ಯ ।
ಭಾವಂ ನ ಚಾಸ್ಯಾಹಮನುಪ್ರದಾತು-
ಮುಲಂ ದ್ವಿಜೋ ಮಂತ್ರಮಿವಾದ್ವಿಜಾಯ ॥ ೫॥

ನೂನಂ ಮಮಾಂಗಾನ್ಯಚಿರಾದನಾರ್ಯಃ
ಶಸ್ತ್ರೈಃ ಶಿತೈಶ್ಛೇತ್ಸ್ಯತಿ ರಾಕ್ಷಸೇಂದ್ರಃ।
ತಸ್ಮಿನ್ನನಾಗಚ್ಛತಿ ಲೋಕನಾಥೇ
ಗರ್ಭಸ್ಥ ಜಂತೋರಿವ ಶಲ್ಯಕೃಂತಃ ॥ ೬॥

ದುಃಖಿಂ ಬತೇದಂ ಮಮ ದುಃಖಿತಾಯಾ
ಮಾಸೌ ಚಿರಾಯಾಧಿಗಮಿಷ್ಯತೋ ದ್ವೌ।
ಬದ್ಧಸ್ಯ ವಧ್ಯಸ್ಯ ತಥಾ ನಿಶಾಂತೇ
ರಾಜ್ಞಾಪರಾಧಾದಿವ ತಸ್ಕರಸ್ಯ ॥ ೭॥

ಹಾ ರಾಮ ಹಾ ಲಕ್ಷ್ಮಣ ಹಾ ಸುಮಿತ್ರೇ
ಹಾ ರಾಮಮಾತಃ ಸಹ ಮೇ ಜನನ್ಯಾ।
ವಿಷಾ ವಿಷದ್ಯಾಮ್ಯಹಮಲ್ಪಭಾಗ್ಯಾ
ಮಹಾರ್ಣವೇ ನೌರಿವ ಮೂಢವಾತಾ ॥ ೮॥

ತರಸ್ವಿನೌ ಧಾರಯತಾ ಮೃಗಸ್ಯ
ಸತ್ತ್ವೇನ ರೂಪಂ ಮನುಜೇಂದ್ರಪುತ್ರೌ।
ನೂನಂ ವಿಶಸ್ತೌ ಮಮ ಕಾರಣಾತ್ತೌ
ಸಿಂಹರ್ಷಭೌ ದ್ವಾವಿವ ವೈದ್ಯುತೇನ ॥ ೯॥

ನೂನಂ ಸ ಕಾಲೋ ಮೃಗರೂಪಧಾರೀ
ಮಾಮಲ್ಪಭಾಗ್ಯಾಂ ಲುಲುಭೇ ತದಾನೀಮ್।
ಯತ್ರಾರ್ಯಪುತ್ರಂ ವಿಸಸರ್ಜ ಮೂಢಾ
ರಾಮಾನುಜಂ ಲಕ್ಷ್ಮಣಪೂರ್ವಜಂ ಚ ॥ ೧೦॥

ಹಾ ರಾಮ ಸತ್ಯವ್ರತ ದೀರ್ಘಬಾಹೋ
ಹಾ ಪೂರ್ಣಚಂದ್ರ ಪ್ರತಿಮಾನವಕ್ತ್ರ।
ಹಾ ಜೀವಲೋಕಸ್ಯ ಹಿತಃ ಪ್ರಿಯಶ್ಚ
ವಧ್ಯಾಂ ನ ಮಾಂ ವೇತ್ಸಿ ಹಿ ರಾಕ್ಷಸಾನಾಮ್ ॥ ೧೧॥

"ಜಗತ್ತಿನಲ್ಲಿ ಯಾರಿಗೂ ಅವರು ಬಯಸಿದಾಗ ಮರಣವು ಸಂಭವಿಸುವುದಿಲ್ಲ" ಎಂದು ಪ್ರಾಜ್ಞರು ಆಡಿದ ಮಾತು ತ್ರಿಕಾಲ ಸತ್ಯವಾದುದು. ರಾವಣನೂ, ಈ ರಾಕ್ಷಸಿಯರೂ ನನ್ನನ್ನು ಇಷ್ಟೊಂದು ಭಯಪಡಿಸುತ್ತಿದ್ದರೂ ಪುಣ್ಯರಹಿತಳಾದ ನಾನು ಕ್ಷಣಕಾಲವಾದರೂ, ಜೀವಿಸಿಯೇ ಇದ್ದೇನಲ್ಲ! ಇದು ಎಲ್ಲರಿಗೂ ಪ್ರಬಲವಾದ ನಿದರ್ಶನ.॥೨॥ ಸುಖದಿಂದ ವಂಚಿತಳಾದ, ದುಃಖದಲ್ಲಿ ಮುಳುಗಿದ ನನ್ನ ಹೃದಯವು ವಜ್ರಾಯುಧದಿಂದ ಹೊಡೆಯಲ್ಪಟ್ಟ ಪರ್ವತಶಿಖರದಂತೆ ಚೂರು-ಚೂರು ಆಗಬೇಕಾಗಿತ್ತು . ಆದರೆ ಅದು ಇನ್ನು ಗಟ್ಟಿಯಾಗಿರುವುದನ್ನು ನೋಡಿದರೆ, ಅದು ವಜ್ರಕ್ಕಿಂತಲೂ ಕಠಿಣವಾಗಿದೆ ಎಂದು ಭಾಸವಾಗುತ್ತದೆ.॥೪॥ ಈ ಭಯಂಕರನಾದ ರಾವಣನು ಹೇಗಾದರೂ ನನ್ನನ್ನು ವಧಿಸಿಯೇ ತೀರುವನು. ನಾನು ಆತ್ಮಹತ್ಯೆಯನ್ನು ಮಾಡಿಕೊಂಡರೆ ಯಾವುದೇ ದೋಷವಿಲ್ಲ ಇದು ನಿಜವಾದುದು. ದ್ವಿಜನಲ್ಲದವನಿಗೆ ದ್ವಿಜನು ಮಂತ್ರೋಪದೇಶ ಮಾಡದಂತೆ ನಾನು ಈ ರಾಕ್ಷಸನಿಗೆ ನನ್ನ ಮನಸ್ಸನ್ನು ಕೊಡಲಾರೆ.॥೫॥ ಲೋಕನಾಥನಾದ ಶ್ರೀರಾಮನು ಎರಡು ತಿಂಗಳ ಅವಧಿಯೊಳಗೆ ಇಲ್ಲಿಗೆ ಬಾರದಿದ್ದರೆ ಆನಾರ್ಯನಾದ ರಾಕ್ಷಸೇಂದ್ರನು ಗರ್ಭದಲ್ಲಿರುವ ಮೃತಶಿಶುವನ್ನು ವೈದ್ಯನು ಕತ್ತರಿಸಿ ಹಾಕುವಂತೆ, ನನ್ನ ಅವಯವಗಳನ್ನು ಹರಿತವಾದ ಖಡ್ಗದಿಂದ ಖಂಡಿತವಾಗಿ ಚೂರು-ಚೂರಾಗಿ ಕತ್ತರಿಸಿ ಹಾಕುವನು.॥೬॥

ಆಯ್ಯೋ! ಚಿರಕಾಲದಿಂದ ದುಃಖದಲ್ಲಿ ಮುಳುಗಿದ ನನಗೆ ರಾವಣನು ವಿಧಿಸಿರುವ ಎರಡು ತಿಂಗಳು ಅವಧಿ ಬೇಗನೇ ಮುಗಿಯುತ್ತಾ ಇದೆ. ರಾಜನಿಗೆ ಅಪರಾಧವನ್ನೆಸಗಿ ಗಲ್ಲು ಶಿಕ್ಷೆಗೆ ಗುರಿಯಾದ ಕಳ್ಳನಿಗೆ ಕ್ಷಣ-ಕ್ಷಣಕ್ಕೂ ದುಃಖವು ಹೆಚ್ಚುವಂತೆ, ನನ್ನ ಸ್ಥಿತಿಯಾಗಿದೆ.॥೭॥ ಹಾ ರಾಮಾ! ಹಾ ಲಕ್ಷ್ಮಣಾ!ಹಾ ಸುಮಿತ್ರಾದೇವಿಯೇ! ಅತ್ತೆಯಾದ ಕೌಸಲ್ಯಾದೇವಿಯೇ! ನನ್ನ ತಾಯಿಯಾದ ಸುನಯನಾ ದೇವಿಯೇ! ನೀವೆಲ್ಲ ಕೇಳಿರಿ, ಅಲ್ಪಭಾಗ್ಯಳಾದ ನಾನು ಮಹಾಸಮುದ್ರದಲ್ಲಿ ಸುಂಟರಗಾಳಿಗೆ ಗುರಿಯಾದ ನಾವೆಯಂತೆ ತೀವ್ರವಾದ ಆಪತ್ತಿನಲ್ಲಿ ಸಿಕ್ಕಿಕೊಂಡಿರುವೆನು.॥೮॥

ಬಲಶಾಲಿಗಳಾದ, ಮನುಚೇಂದ್ರನಾದ ದಶರಥನ ಪುತ್ರರಾದ ರಾಮ-ಲಕ್ಷ್ಮಣರು ಮೃಗರೂಪವನ್ನು ಧರಿಸಿದ ಒಂದು ಪ್ರಾಣಿಯಿಂದಾಗಿ (ಮಾರೀಚನಿಂದಾಗಿ) ಆಪತ್ತಿಗೆ ಒಳಗಾಗಿ, ವನ-ವನಗಳಲ್ಲಿ ಅಲೆಯುತ್ತಿರುವ ಎರಡು ಸಿಂಹಗಳಂತೆ, ನನ್ನ ಕಾರಣದಿಂದಾಗಿ ಎಂತಹ ಕಷ್ಟಗಳಿಗೆ ಗುರಿಯಾಗಿದ್ದಾರೋ!॥೯॥ ಆ ಸಮಯದಲ್ಲಿ ಕಾಲಪುರುಷನೇ ಮೃಗರೂಪದಿಂದ ಬಂದು ಅಲ್ಪಭಾಗ್ಯಳಾದ ನನ್ನನ್ನು ಪ್ರಲೋಭನಗೊಳಿಸಿದನು. ಅದರಿಂದಾಗಿ ಮೂರ್ಖಿಳಾದ ನಾನು ಮೊದಲಿಗೆ ಆರ್ಯಪುತ್ರನಾದ ಶ್ರೀರಾಮನನ್ನು ಬಳಿಕ ಲಕ್ಷ್ಮಣನನ್ನು ಕಳಿಸಿದೆ.॥೧೦॥

ಆನಸ್ಯ ದೇವತ್ವಮಿಯಂ ಕ್ಷಮಾ ಚ
ಭೂಮೌ ಚ ಶಯ್ಯಾ ನಿಯಮಶ್ಚ ಧರ್ಮೇ।
ಪತಿವ್ರತಾತ್ವಂ ವಿಫಲಂ ಮಮೇದಂ
ಕೃತಂ ಕೃತಘ್ನೇಷ್ವಿವ ಮಾನುಷಾಣಾಮ್ ॥ ೧೨॥

ಮೋಘೋ ಹಿ ಧರ್ಮಶ್ಚರಿತೋ ಮಯಾಯಂ
ತಥೈಕಪತ್ನೀತ್ವಮಿದಂ ನಿರರ್ಥಮ್।
ಯಾ ತ್ವಾಂ ನ ಪಶ್ಯಾಮಿ ಕೃತಾ ವಿವರ್ಣಾ
ಹೀನಾ ತ್ವಯಾ ಸಂಗಮನೇ ನಿರಾಶಾ ॥ ೧೩॥

ಪಿತುರ್ನಿದೇಶಂ ನಿಯಮೇನ ಕೃತ್ವಾ
ವನಾನಿವೃತ್ತಶ್ಚರಿತವ್ರತಶ್ಚ।
ಸ್ತ್ರೀಭಿಸ್ತು ಮನ್ಯೇ ವಿಪುಲೇಕ್ಷಣಾಭಿ-
ಸ್ತ್ವಂ ರಂಸ್ಯಸೇ ವೀತಭಯಃ ಕೃತಾರ್ಥಃ ॥ ೧೪॥

ಅಹಂ ತು ರಾಮ ತ್ವಯಿ ಜಾತಕಾಮಾ
ಚಿರಂ ವಿನಾಶಾಯ ನಿಬದ್ಧಭಾವಾ।
ನೋಕ್ತಂ ಚರಿತ್ವಾಥ ತಪೋವ್ರತಂ ಚ
ತ್ಯಕ್ಷ್ಯಾಮಿ ಧಿಗ್ವಿಷಿತಮಲ್ಪಭಾಗ್ಯಾ ॥ ೧೫॥

ಸಾ ಜೀವಿತಂ ಕ್ಷಿಪ್ರಮಹಂ ತ್ಯಜೇಯಂ
ವಿಷೇಣ ಶಸ್ತ್ರೇಣ ಶಿತೇನ ವಾಪಿ।
ವಿಷಸ್ಯ ದಾತಾ ನ ಹಿ ಮೇಽಸ್ತಿ ಕಶ್ಚಿ-
ಚ್ಛಸ್ತ್ರಸ್ಯ ವಾ ವೇಶ್ಮನಿ ವಾ ರಾಕ್ಷಸಸ್ಯ ॥ ೧೬॥

ಇತೀವ ದೇವೀ ಬಹುಧಾ ವಿಲಪ್ಯ
ಸರ್ವಾತ್ಮನಾ ರಾಮಮನುಸ್ಮರಂತೀ।
ಪ್ರವೇಪಮಾನಾ ಪರಿಶುಷ್ಕವಕ್ತ್ರಾ
ನಗೋತ್ತಮಂ ಪುಷ್ಪಿತಮಾಸಸಾದ ॥ ೧೭॥

ಶೋಕಾಭಿತಪ್ತಾ ಬಹುಧಾ ವಿಚಿಂತ್ಯ
ಸೀತಾಥ ವೇಣ್ಯುದ್ಗ್ರಥನಂ ಗೃಹೀತ್ವಾ।
ಉದ್ಗ್ರಥ್ಯ ವೇಣ್ಯುದ್ಗ್ರಥನೇನ ಶೀಘ್ರ-
ಮಹಂ ಗಮಿಷ್ಯಾಮಿ ಯಮಸ್ಯ ಮೂಲಮ್ ॥ ೧೮॥

ಓ ರಾಮಾ! ನೀನು ಸತ್ಯವ್ರತನೂ, ದೀರ್ಘಬಾಹುವೂ, ಪೂರ್ಣಚಂದ್ರನಂತೆ ಮುಖವುಳ್ಳವನೂ, ಸಕಲ ಪ್ರಾಣಿಗಳಿಗೂ ಹಿತವನ್ನುಂಟು ಮಾಡುವವನೂ, ಪ್ರಿಯನಾದವನೂ ಆಗಿರುವೆ. ನಿನ್ನ ಭಾರ್ಯೆಯಾದ ನನ್ನನ್ನು ರಾಕ್ಷಸರು ಸಂಹರಿಸುತ್ತಿರುವುದನ್ನು ನೀನರಿಯೆಯಾ?॥೧೧॥ ಆಸನ್ನ ಭಕ್ತಿಯಿಂದ ನಿನ್ನನ್ನೇ ಪರಮದೈವವೆಂದು ಸೇವಿಸುತ್ತಿರುವೆನು. ನಿನ್ನ ದರ್ಶನ ಭಾಗ್ಯವು ಕಣ್ಣುಗಳಿಗೆ ಉಂಟಾದೀತು ಎಂಬ ಆಶೆಯಿಂದ ರಾಕ್ಷಸರು ಕೊಡುತ್ತಿರುವ ಕಷ್ಟಪರಂಪರೆಗಳನ್ನು ಸಹಿಸುತ್ತಿದ್ದೇನೆ. ಬರೀ ನೆಲದಲ್ಲಿ ಮಲಗುತ್ತಾ, ನಿಯಮಪೂರ್ವಕವಾಗಿ ಧರ್ಮವನ್ನು ಆಚರಿಸುತ್ತಿದ್ದೇನೆ. ಪಾತಿವ್ರತ್ಯದಲ್ಲಿ ಮುಳುಗಿರುವೆನು. ಇವೆಲ್ಲವೂ ಕೃತಘ್ನರಾದ ಮಾನವರಿಗೆ ಗೈದ ಉಪಕಾರದಂತೆ ನಿಷ್ಫಲವಾದುವು.॥೧೨॥ ನಾನು ಆಚರಿಸಿದ ಧರ್ಮವು ನಿಷ್ಫಲವಾಯಿತು. ಶ್ರೀರಾಮನಿಗೆ ಏಕಪತ್ನಿಯಾಗಿದ್ದೇನೆಂಬ ಅಭಿಮಾನವು ನಿರರ್ಥಕವಾಯಿತು. ನಾನು ನಿನ್ನನ್ನು ಕಾಣದವಳಾಗಿದ್ದೇನೆ. ನಿನ್ನಿಂದ ವಿಹೀನಳಾಗಿದ್ದೇನೆ. ಈ ಕಾರಣದಿಂದಲೇ ಕೃಶಳೂ, ವಿವರ್ಣಳೂ ಆಗಿರುವೆ. ಪುನಃ ನಿನ್ನನ್ನು ಸೇರುವೆನೆಂಬ ಆಸೆಯೂ ನನಗೀಗ ಉಳಿಯಲಿಲ್ಲ. ॥೧೩॥

ಎಲೈ ರಾಮಾ! ನೀನು ತಂದೆಯ ಆಜ್ಞೆಯನ್ನು ನಿಯಮದಿಂದ ಪಾಲಿಸಿ ಕೃತಕೃತ್ಯನಾಗಿ, ವನವಾಸವನ್ನು ಪೂರ್ಣಗೈದು, ಅವಧಿ ತೀರುತ್ತಲೇ ಆಯೋಧ್ಯೆಗೆ ಹೋಗುವಿ ಎಂದು ಭಾವಿಸುತ್ತೇನೆ. ಲಬ್ಧಮನೋರಥನಾಗಿ ನಿರ್ಭಯದಿಂದ ಸುಂದರೀಮಣಿಗಳೊಂದಿಗೆ ವಿಹರಿಸಬಹುದು. ॥೧೪॥ ಓ ರಾಮಚಂದ್ರಾ! ನಾನಾದರೋ ನಿನ್ನಲ್ಲಿಯೇ ಆಸುರಕ್ತಳಾಗಿರುವವಳು. ಬಹಳ ಕಾಲದಿಂದ ನಿನ್ನಲ್ಲಿಯೇ ನನ್ನ ಪ್ರೀತಿಯು ನಿಬದ್ಧವಾಗಿದೆ. ಈ ರಾಕ್ಷಸರಿಂದ ಒದಗುವ ಸಾವನ್ನು ನಾನು ಲೆಕ್ಕಿಸುವುದಿಲ್ಲ. ನಿನ್ನನ್ನು ಸೇರಲು ನಾನು ಆಚರಿಸಿದ ಧರ್ಮಾಚರಣೆಗಳು, ನನ್ನ ತಪಸ್ಸು, ಪಾತಿವ್ರತ್ಯ ಇವೆಲ್ಲವೂ ನಿರರ್ಥಕವಾದುವು. ಅಲ್ಪ ಭಾಗ್ಯಳಾದ ನಾನು ಜೀವಿತವನ್ನೇ ತ್ಯಜಿಸಿಬಿಡುವೆನು. ಛೀ! ನಾನು ಎಂತಹ ದುರದೃಷ್ಟವಂತೆ ! ॥೧೫॥ ವಿಷಪ್ರಾಶನದಿಂದಾಗಲೀ, ಹರಿತವಾದ ಶಸ್ತ್ರದಿಂದಾಗಲೀ, ನಾನು ಬಹಳ ಬೇಗನೇ ನನ್ನ ಜೀವಿತವನ್ನು ಕೊನೆಗೊಳಿಸಿಯೇನು. ಆದರೆ ಈ ರಾಕ್ಷಸನ ಮನೆಯಲ್ಲಿ ನನಗೆ ವಿಷವನ್ನಾಗಲೀ, ತೀಕ್ಷ್ಣವಾದಶಸ್ತ್ರವನ್ನಾಗಲೀ ಕೊಡುವವರೂ ಯಾರೂ ಕಂಡು ಬರುವುದಿಲ್ಲವಲ್ಲ ! ॥೧೬॥

ಸೀತಾದೇವಿಯು ಹೀಗೆ ವಿಧ-ವಿಧ ರೀತಿಯಿಂದ ವಿಲಪಿಸುತ್ತಿದ್ದಳು. ಜೊತೆಗೆ ಸರ್ವಾತ್ಮಭಾವದಿಂದ ಶ್ರೀರಾಮನನ್ನು ಸ್ಮರಿಸುತ್ತಿದ್ದಳು. ಅವಳು ಭಯದಿಂದ ಒಣಗಿಹೋದ ಮುಖದಿಂದ ಚೆನ್ನಾಗಿ ಪುಷ್ಪಿತವಾದ ಶಿಂಶುಪಾವೃಕ್ಷವನ್ನು ಸಮೀಪಿಸಿದಳು. ॥೧೭॥

ದುಃಖದಿಂದ ಬಹಳವಾಗಿ ಪರಿತಪಿಸುತ್ತಿದ್ದ ಸೀತಾದೇವಿಯು ದೀರ್ಘವಾಗಿ ಸಮಾಲೋಚಿಸಿ ಕಡೆಗೊಂದು ನಿರ್ಧಾರಕ್ಕೆ ಬಂದು, ತಲೆಗೂದಲನ್ನು ಒಡಿದುಕೊಂಡು 'ಈ ಕೇಶಪಾಶದಿಂದಲೇ ಉರುಲು ಹಾಕಿಕೊಂಡು ಅತಿಶೀಘ್ರವಾಗಿ ಯಮಸದನಕ್ಕೆ ಹೋಗುವೆನು' ಎಂದು ನಿರ್ಧರಿಸಿದಳು. ॥೧೮॥

ಉಪಸ್ಥಿತಾ ಸಾ ಮೃದುಸರ್ವಗಾತ್ರೀ
ಶಾಖಾಂ ಗೃಹೀತ್ವಾಥ ನಗಸ್ಯ ತಸ್ಯ।
ತಸ್ಯಾಸ್ತು ರಾಮಂ ಪ್ರವಿಚಿಂತಯಂತ್ಯಾ
ರಾಮಾನುಜಂ ಸ್ವಂ ಚ ಕುಲಂ ಶುಭಾಂಗ್ಯಾಃ ॥ ೧೯॥

ಶೋಕಾನಿಮಿತ್ತಾನಿ ತಥಾ ಬಹೂನಿ
ಧೈರ್ಯಾರ್ಜಿತಾನಿ ಪ್ರವರಾಣಿ ಲೋಕೇ।
ಪ್ರಾದುರ್ನಿಮಿತ್ತಾನಿ ತದಾ ಬಭೂವುಃ
ಪುರಾಪಿ ಸಿದ್ಧಾನ್ಯುಪಲಕ್ಷಿತಾನಿ ॥ ೨೦॥

ಸುಕುಮಾರಿಯಾದ ಸೀತಾದೇವಿಯು ಆ ಮರದ ರೆಂಬೆಯನ್ನು ಹಿಡಿದು ಕೊಂಡು ನಿಂತಿದ್ದಳು. ಅವಳು ಶ್ರೀರಾಮನನ್ನು, ಲಕ್ಷ್ಮಣನನ್ನು, ತನ್ನ ವಂಶವನ್ನು ಸ್ಮರಿಸಿ ಕೊಂಡಳು. ಆಗ ಶುಭಾಂಗಿಯಾದ ಅವಳಿಗೆ ಶೋಕವು ತೊಲಗುವಂತಹ, ಧೈರ್ಯವನ್ನು ತುಂಬುವಂತಹ, ಸತ್ಫಲದಾಯಕವಾದ, ಲೋಕಪ್ರಸಿದ್ಧವಾದ ಶ್ರೀರಾಮನ ಆಗಮನವನ್ನು ಸೂಚಿಸುವಂತಹ ಹಿಂದೆ ಕಂಡುಬಂದು ಅನೇಕ ಶುಭಶಕುನಗಳು ಪುನಃ ಕಾಣಿಸಿಕೊಂಡವು.॥೧೯-೨೦॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಅಷ್ಟಾವಿಂಶಃ ಸರ್ಗಃ ॥ ೨೮ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೆಂಟನೆಯ ಸರ್ಗವು ಮುಗಿಯಿತು.

* * *

ಇಪ್ಪತ್ತೊಂಭತ್ತನೆಯ ಸರ್ಗ

ಸೀತಾದೇವಿಗೆ ಗೋಚರಿಸಿದ ಶುಭಶಕುನಗಳು –

ತಥಾಗತಾಂ ತಾಂ ವ್ಯಥಿತಾಮನಿಂದಿತಾಂ
ವ್ಯಪೇತಹರ್ಷಾಂ ಪರಿದೀನಮಾನಸಾಮ್ ।
ಶುಭಾಂ ನಿಮಿತ್ತಾನಿ ಶುಭಾನಿ ಭೇಜಿರೇ
ನರಂ ಶ್ರಿಯಾ ಜುಷ್ಟಮಿವೋಪಜೀವಿನಃ ॥ ೧॥

ತಸ್ಯಾಃ ಶುಭಂ ವಾಮಮರಾಳಪಕ್ಷ್ಮ-
ರಾಜೀವೃತಂ ಕೃಷ್ಣವಿಶಾಲಶುಕ್ಲಮ್ ।
ಪ್ರಾಸ್ಪಂದತೈಕಂ ನಯನಂ ಸುಕೇಶ್ಯಾ
ಮೀನಾಹತಂ ಪದ್ಮಮಿವಾಭಿತಾಮ್ರಮ್ ॥ ೨॥

ಭುಜಶ್ಚ ಚಾರ್ಪಂಚಿತಪೀನವೃತ್ತಃ
ಪರಾರ್ಧ್ಯಕಾಲಾಗರುಚಂದನಾರ್ಹಃ ।
ಆಸುತ್ತಮೇನಾಧ್ಯುಷಿತಃ ಪ್ರಿಯೇಣ
ಚಿರೇಣ ವಾಮಃ ಸಮವೇಹತಾಶು ॥ ೩॥

ಗಜೇಂದ್ರಹಸ್ತಪ್ರತಿಮಶ್ಚ ಪೀನ-
ಸ್ತನೋರ್ದ್ವಯೋಃ ಸಂಹತಯೋಃ ಸುಜಾತಃ ।
ಪ್ರಸ್ಪಂದಮಾನಃ ಪುನರೂರು ರಸ್ಯಾ
ರಾಮಂ ಪುರಸ್ತಾತ್ ಸ್ಥಿತಮಾಚಚಕ್ಷೇ ॥ ೪॥

ಹಾಗೇ ತಿಂಶುಪಾವೃಕ್ಷದ ರೆಂಬೆಯನ್ನು ಆಶ್ರಯಿಸಿ ನಿಂತಿದ್ದ, ಪ್ರಾಣತ್ಯಾಗಕ್ಕಾಗಿ ಸಿದ್ಧಳಾದ, ವ್ಯಥೆಪಡುತ್ತಿರುವ, ದೋಷ ರಹಿತೆಯೂ, ಸಂತೋಷವಿಲ್ಲದವಳೂ, ದೈನ್ಯದಲ್ಲಿರುವ ಆ ಶುಭಾಂಗಿ ಸೀತಾದೇವಿಗೆ ಶ್ರೀಮಂತನನ್ನು ಸೇವಕರು ಆಶ್ರಯಿಸುವಂತೆ ಶುಭಶಕುನಗಳು ಆಗ ತೊಡಗಿದವು.॥೧॥

ಕೇಶಸೌಂದರ್ಯದಿಂದ ಒಪ್ಪುತ್ತಿದ್ದ ಆ ಸೀತಾದೇವಿಯ ಕಣ್ಣುಗಳು ಡೊಂಕಾದ ಮತ್ತು ಸುಂದರವಾದ ರೆಪ್ಪೆಯ ಕೂದಲಿನ ಸಾಲಿನಿಂದ ಆವೃತವಾಗಿದ್ದವು. ಮಧ್ಯದಲ್ಲಿ ಕಪ್ಪಾಗಿಯೂ ಸುತ್ತಲೂ ಬೆಳ್ಳಗೂ, ವಿಶಾಲವಾಗಿದ್ದವು. ಅವುಗಳಲ್ಲಿನ ಎಡಗಣ್ಣು ಮೀನಿನಿಂದ ಅಲ್ಲಾಡಿಸಲ್ಪಟ್ಟ ಕೆಂದಾವರೆಯಂತೆ ಅದರುತ್ತಿತ್ತು.॥೨॥ ಸೀತಾದೇವಿಯ ಎಡಭುಜವು ಸುಂದರವಾಗಿಯೂ, ಮನೋಹರವಾಗಿಯೂ ಇದ್ದಿತು. ಅದು ದುಂಡಾಗಿಯೂ, ದಪ್ಪವಾಗಿಯೂ ಇದ್ದು, ಶ್ರೇಷ್ಠವಾದ ಆಗರು ಚಂದನಾದಿ ಸುಗಂಧ ದ್ರವ್ಯಗಳ ಆನುಲೇಪನಕ್ಕೆ ಅರ್ಹವಾಗಿದ್ದು, ಸರ್ವಶ್ರೇಷ್ಠನಾದ ಶ್ರೀರಾಮಚಂದ್ರನ ಸಂಪರ್ಕವನ್ನು ಬಹಳ ಕಾಲದಿಂದ ಹೊಂದಿದ್ದ ಆ ಭುಜವು ಕೂಡ ಅದುರ ತೊಡಗಿತು. ॥೩॥ ಸೀತೆಯ ಎರಡೂ ತೊಡೆಗಳು ಪರಸ್ಪರ ಘರ್ಷಿಸುತ್ತಿದ್ದವು. ಆದರಲ್ಲಿ ಮದಿಸಿದ ಆನೆಯ ಸೊಂಡಿಲಿನಂತಿದ್ದ, ದಪ್ಪವಾದ ಆವಳ ಎಡತೊಡೆಯು ಅದುರುತ್ತಿದ್ದು, ಅದು ಶ್ರೀರಾಮನು ತನ್ನ ಎದುರಿಗೇ ಇರುವಂತೆ ಸೂಚಿಸುತ್ತಿತ್ತು.॥೪॥ ಸುಂದರ ಗಾತ್ರಳಾದ ಆ ಸೀತಾದೇವಿಯ ನಯನಗಳು ನಿರ್ಮಲವಾಗಿದ್ದವು. ಅವಳ ದಂತಪಂಕ್ತಿಗಳು ದುಂಡಾಗಿಯೂ,

ಶುಭಂ ಪುನರ್ಹೇಮಸಮಾನವರ್ಣ-
ಮಾಷದ್ಯುತೋಧ್ವಸ್ತಮಿವಾಮಲಾರ್ಚ್ಯಃ ।
ವಾಸಃ ಸ್ಥಿತಾಯಾಃ ಶಿವರಾಗ್ರದತ್ಯಾಃ
ಕಿಂಚಿತ್ ಪರಿಶ್ಯಂಸತ ಚಾರುಗಾತ್ರ್ಯಾಃ ॥ ೫॥

ದಾಳಿಂಬೆಯ ಬೀಜದಂತೆ ಮನೋಹರವಾಗಿದ್ದವು. ಎಡಕೊಡೆಯಲ್ಲಿ ಅದರುವಿಕೆಯಿಂದಾಗಿ ಸೀತಾದೇವಿಯು ಉಟ್ಟಿದ್ದ, ಭಂಗಾರ ಬಣ್ಣದ, ಧೂಳಿನಿಂದ ಮಸಕಾದ ವಸ್ತ್ರವು ಸ್ವಲ್ಪ ಕೆಳಕ್ಕೆ ಜಾರಿತ್ತು. (ಇದು ಭರ್ತೃಸಮಾಗಮ ಸೂಚನೆಯಾಗಿದೆ.)॥೫॥

ವಿತೈರ್ನಿಮಿತ್ತೈರಪರೈಶ್ಚ ಶುಭ್ರೈಃ
ಸಂಭೋಧಿತಾ ಪ್ರಾಗಪಿ ಸಾಧು ಸಿದ್ಧೈಃ ।
ವಾತಾತಪಕ್ಲಾನ್ತಮಿವ ಪ್ರನಷ್ಟಂ
ವರ್ಷೇಣ ಬೀಜಂ ಪ್ರತಿಸಂಜಹರ್ಷ ॥ ೬॥

ಸುಂದರವಾದ ಹುಬ್ಬುಗಳಿಂದ ಕೂಡಿದ್ದ, ಸೀತಾದೇವಿಯು ಕಂಡು ಬಂದ ಶುಭಸೂಚಕ ಶಕುನಗಳಿಂದಲೂ, ಹಿಂದೆ ಸತ್ಪುರುಷರು ಹೇಳಿದ ಮಾತುಗಳಿಂದಲೂ ಪ್ರೋಕ್ಷಾಪಿತಳಾಗಿ ಗಾಳಿಯಿಂದಲೂ, ಬಿಸಿಲಿನಿಂದಲೂ, ಒಣಗಿಹೋದ ಬೀಜವು ಮಳೆಯಿಂದ ಮೊಳಕೆಯೊಡೆದು ಮೇಲಕ್ಕೆ ಬರುವಂತೆ ಅವಳು ಸಂತೋಷಗೊಂಡಳು.॥೬॥

ತಸ್ಯಾಃ ಪುನರ್ಬಿಂಬಫಲಾಧರೋಷ್ಠಂ
ಸ್ಪೃಷ್ಟಂ ಕೇಶಾಂತಮರಾಲಪಕ್ಷ್ಮ್ಯಾ ।
ವಕ್ತ್ರಂ ಬಭಾಸೇ ಸ್ಫಿತರುಕ್ಷದಂಷ್ಟ್ರಂ
ರಾಹೋರ್ಮುಖಾಚ್ಚಂದ್ರ ಇವ ಪ್ರಮುಕ್ತಃ ॥ ೭॥

ಸೀತಾದೇವಿಯ ಮುಖವು ತೊಂಡೆಹಣ್ಣಿನಂತೆ ಕೆಂಪಾದ ತುಟಿಗಳಿಂದ ಪರಿಶೋಭಿಸುತ್ತಿತ್ತು. ಸುಂದರವಾದ ಕಣ್ಣುಗಳಿಂದಲೂ, ಡೊಂಕಾದ ಹುಬ್ಬುಗಳಿಂದಲೂ, ರೆಪ್ಪೆಗಳಿಂದಲೂ, ಮುಂಗುರುಳುಗಳಿಂದಲೂ, ಶುಭ್ರವಾಗಿಯೂ ಬೆಳುಪಾಗಿಯು ಇದ್ದ ಹಲ್ಲುಗಳಿಂದಲೂ ರಾರಾಜಿಸುತ್ತಿದ್ದಿತು. ಅಂತಹ ಮುಖವು ರಾಹುವಿನಿಂದ ಬಿಡಲ್ಪಟ್ಟ ಚಂದ್ರಬಿಂಬದಂತೆ ಪ್ರಾಕಾಶಿ ಸುತ್ತಿತ್ತು.॥೭॥ ಪೂಜ್ಯಳಾದ ಸೀತಾದೇವಿಯ ಶೋಕವು ದೂರವಾಯಿತು. ಆಂದೋಳನ ತೊಲಗಿಹೋಯಿತು. ಮನಸ್ಸಿನ ಸಂತಾಪವನ್ನು ದೂರಗೊಳಿಸಿ ಶಾಂತಳಾದಳು. ಆಕೆಯ ಚಿತ್ತವೃತ್ತಿಯು ಹರ್ಷದಿಂದ ವಿಕಾಸಗೊಂಡಿತು. ಶುಕ್ಲಪಕ್ಷದಲ್ಲಿ ಉದಯಿಸಿದ ಚಂದ್ರನಿಂದ ರಾತ್ರಿಯು ಶೋಭಾಯಮಾನವಾಗಿರುವಂತೆ ಹರ್ಷಗೊಂಡ ಮುಖದಿಂದ ವೈದೇಹಿಯು ಕಂಗೊಳಿಸಿದಳು.॥೮॥

ಸಾ ವೀತಶೋಕಾ ವ್ಯಪನೀತತಂದ್ರೀ
ಶಾಂತಜ್ವರಾ ಹರ್ಷವಿವೃದ್ಧಸತ್ತ್ವಾ ।
ಅಶೋಭತಾರ್ಯಾ ವದನೇನ ಶುಕ್ಲೇ
ಶೀತಾಂಶುನಾ ರಾತ್ರಿರಿವೋದಿತೇನ ॥ ೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ವಿಕೋನತ್ರಿಂಶಃ ಸರ್ಗಃ ॥ ೨೯ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೊಂಭತ್ತನೆಯ ಸರ್ಗವು ಮುಗಿಯಿತು.

* * *

ಮೂವತ್ತನೆಯ ಸರ್ಗ

ಸೀತೆಯೊಡನೆ ಹೇಗೆ ಮಾತಾಡಬೇಕೆಂಬುದರ ಬಗೆಗೆ ಹನುಮಂತನ ವಿವೇಚನೆ –

ಹನುಮಾನಪಿ ವಿಶ್ರಾಂತಃ ಸರ್ವಂ ಶುಶ್ರಾವ ತತ್ತ್ವತಃ ।
ಸೀತಾಯಾಸ್ತ್ರಿಜಟಾಯಾಶ್ಚ ರಾಕ್ಷಸೀನಾಂ ಚ ತರ್ಜನಮ್ ॥ ೧॥

ಅಶೋಕವೃಕ್ಷದ ಮೇಲೆ ಪ್ರಶಾಂತವಾಗಿ ಕುಳಿತಿದ್ದು ಎಲ್ಲವನ್ನು ಗಮನಿಸುತ್ತಿದ್ದ ಹನುಮಂತನು - ಸೀತಾದೇವಿ ಹೇಳಿದ ಮಾತುಗಳನ್ನು, ತ್ರಿಜಟೆಯು ತಿಳಿಸಿದ ಸ್ವಪ್ನವೃತ್ತಾಂತವನ್ನು, ರಾಕ್ಷಸಿಯರು ಸೀತೆಗೆ ಭಯಪಡಿಸಿ ಹೇಳಿದ ಮಾತುಗಳನ್ನು ಯಥಾವತ್ತಾಗಿ ಕಿವಿಗೊಟ್ಟು ಕೇಳಿದನು.॥೧॥

ಅವೇಕ್ಷಮಾಣಸ್ತಾಂ ದೇವೀಂ ದೇವತಾಮಿವ ನಂದನೇ ।
ತತೋ ಬಹುವಿಧಾಂ ಚಿಂತಾಂ ಚಿಂತಯಾಮಾಸ ವಾನರಃ ॥ ೨॥

ಬಳಿಕ ವಾನರಶ್ರೇಷ್ಠನಾದ ಹನುಮಂತನು ನಂದನವನದಲ್ಲಿ ದೇವತಾಸ್ತ್ರೀಯು ಕುಳಿತಿರುವಂತೆ ಅಶೋಕವನದಲ್ಲಿ ಕುಳಿತಿದ್ದ ಸೀತಾದೇವಿಯನ್ನು ನೋಡುತ್ತಾ ಅನೇಕವಿಧವಾಗಿ ಚಿಂತಿಸತೊಡಗಿದನು.॥೨॥ ಈ ಸೀತಾದೇವಿಯನ್ನು ಹುಡುಕಲಿಕ್ಕಾಗಿ

ಯಾಂ ಕಪೀನಾಂ ಸಹಸ್ರಾಣಿ ಸುಬಹೂನ್ಯಯುತಾನಿ ಚ ।
ದಿಕ್ಷು ಸರ್ವಾಸು ಮಾರ್ಗಂತೇ ಸೇಯಮಾಸಾದಿತಾ ಮಯಾ ॥ ೩॥

ಚಾರೇಣ ತು ಸುಯುಕ್ತೇನ ಶತ್ರೋಃ ಶಕ್ತಿಮವೇಕ್ಷತಾ ।
ಗೂಢೇನ ಚರತಾ ತಾವದವೇಕ್ಷಿತಮಿದಂ ಮಯಾ ॥ ೪॥

ರಾಕ್ಷಸಾನಾಂ ವಿಶೇಷಶ್ಚ ಪುರೀ ಚೇಯಮವೇಕ್ಷಿತಾ ।
ರಾಕ್ಷಸಾಧಿಪತೇರಸ್ಯ ಪ್ರಭಾವೋ ರಾವಣಸ್ಯ ಚ ॥ ೫॥

ಯುಕ್ತಂ ತಸ್ಯಾಪ್ರಮೇಯಸ್ಯ ಸರ್ವಸತ್ತ್ವದಯಾವತಃ ।
ಸಮಾಶ್ವಾಸಯಿತುಂ ಭಾರ್ಯಾಂ ಪತಿದರ್ಶನಕಾಂಕ್ಷಿಣೀಮ್ ॥ ೬॥

ಅಹಮಾಶ್ವಾಸಯಾಮ್ಯೇನಾಂ ಪೂರ್ಣಚಂದ್ರನಿಭಾನನಾಮ್ ।
ಅದೃಷ್ಟ ದುಃಖಾಂ ದುಃಖಾರ್ತಾಂ ದುಃಖಸ್ಯಾಂತಮಗಚ್ಛತೀಮ್ ॥ ೭॥

ಯದಿ ಹ್ಯಹಮಿಮಾಂ ದೇವೀಂ ಶೋಕೋಪಹತಚೇತನಾಮ್ ।
ಅನಾಶ್ವಾಸ್ಯ ಗಮಿಷ್ಯಾಮಿ ದೋಷವದ್ಗಮನಂ ಭವೇತ್ ॥ ೮॥

ಗತೇ ಹಿ ಮಯಿ ತತ್ರೇಯಂ ರಾಜಪುತ್ರೀ ಯಶಸ್ವಿನೀ ।
ಪರಿತ್ರಾಣಮವಿಂದತೀ ಜಾನಕೀ ಜೀವಿತಂ ತ್ಯಜೇತ್ ॥ ೯॥

ಮಯಾ ಚ ಸ ಮಹಾಬಾಹುಃ ಪೂರ್ಣಚಂದ್ರ ನಿಭಾನನಃ।
ಸಮಾಶ್ವಾಸಯಿತುಂ ನ್ಯಾಯ್ಯಃ ಸೀತಾದರ್ಶನಲಾಲಸಃ ॥ ೧೦॥

ನಿಶಾಚರೀಣಾಂ ಪ್ರತ್ಯಕ್ಷಮನರ್ಹಂ ಚಾಪಿಭಾಷಣಮ್ ।
ಕಥಂ ನು ಖಲು ಕರ್ತವ್ಯಮಿದಂ ಕೃಚ್ಛ್ರಗತೋ ಹ್ಯಹಮ್ ॥ ೧೧॥

ಅನೇನ ರಾತ್ರಿಶೇಷೇಣ ಯದಿ ನಾಶ್ವಾಸ್ಯತೇ ಮಯಾ ।
ಸರ್ವಥಾ ನಾಸ್ತಿ ಸಂದೇಹಃ ಪರಿತ್ಯಕ್ಷ್ಯತಿ ಜೀವಿತಮ್ ॥ ೧೨॥

ರಾಮಶ್ಚ ಯದಿ ಪೃಚ್ಛೇನ್ಮಾಂ ಕಿಂ ಮಾಂ ಸೀತಾಬ್ರವೀದ್ವಚಃ ।
ಕಿಮಹಂ ತಂ ಪ್ರತಿಬ್ರೂಯಾಮಸಂಭಾಷ್ಯ ಸುಮಧ್ಯಮಾಮ್ ॥ ೧೩॥

ಸಾವಿರಾರು ವಾನರರು ಎಲ್ಲ ದಿಕ್ಕುಗಳಿಗೂ ತೆರಳಿ ಹುಡುಕುತ್ತಿದ್ದಾರೆ. ಆದರೆ ಇವಳ ದರ್ಶನಭಾಗ್ಯವು ನನಗೆ ದಕ್ಕಿತು.॥೩॥ ಯುಕ್ತಿಶಾಲಿಯಾದ ಸೇವಕನಿಗೆ(ಗೂಢಚಾರಿ) ಶತ್ರುವಿನ ಬಲಾಬಲಗಳನ್ನು ಚೆನ್ನಾಗಿ, ಸಮಗ್ರವಾಗಿ ತಿಳಿಯುವುದು ಆವಶ್ಯಕ. ಆ ಕಾರ್ಯಕ್ಕಾಗಿ ಬಂದಿರುವ ನಾನು ಯಾರೂ ತಿಳಿಯದಂತೆ ಸಂಚರಿಸಿ ಎಲ್ಲ ವಿಷಯಗಳನ್ನು ಪೂರ್ತಿಯಾಗಿ ತಿಳಿದು ಕೊಂಡಿರುವೆನು.॥೪॥ ರಾಕ್ಷಸರ ಎಲ್ಲ ವಿಶೇಷಗಳನ್ನು ಗಮನಿಸಿದೆ. ಈ ಲಂಕಾಪಟ್ಟಣವನ್ನು ಪೂರ್ಣವಾಗಿ ನೋಡಿದೆನು. ರಾಕ್ಷಸರಾಜನಾದ ರಾವಣನ ಪ್ರಭಾವವನ್ನು, ಅವನ ಧೋರಣೆಗಳನ್ನು ತಿಳಿದು ಕೊಂಡಿರುವೆನು.॥೫॥

ಅಪ್ರಮೇಯನೂ, ಸರ್ವ ಪ್ರಾಣಿಗಳ ಮೇಲೆ ದಯೆ ತೋರುವವನೂ, ಅಪರಿಮಿತವಾದ ಬಲಪರಾಕ್ರಮವುಳ್ಳ ಶ್ರೀರಾಮನಿಗೆ ಭಾರ್ಯೆಯಾದ ಈ ಸೀತಾದೇವಿಯು ತನ್ನ ಪತಿಯ ದರ್ಶನಕ್ಕಾಗಿ ಹಾತೊರೆಯುತ್ತಿರುವಳು. ಈಗ ಇವಳನ್ನು ಸಂತೈಸುವುದು ಯುಕ್ತವಾಗಿದೆ.॥೬॥ ಪೂರ್ಣಚಂದ್ರ ಸದೃಶವಾದ ಮುಖದಿಂದ ಕೂಡಿರುವ, ಹಿಂದೆ ದುಃಖ ವೆಂಬುದನ್ನೇ ಕಾಣದಿದ್ದು, ಈಗ ದುಃಖಾರ್ತಳಾಗಿ, ದುಃಖಗಳಿಗೆ ಕೊನೆಯೇ ಕಾಣದಿರುವ ಇವಳನ್ನು ನಾನೀಗ ಸಂತೈಸಬೇಕಾಗಿದೆ. ॥೭॥ ತೀವ್ರವಾದ ಶೋಕದಿಂದಾಗಿ ಈಕೆಯ ಮನಸ್ಸು ವ್ಯಾಕುಲವಾಗಿದೆ. ಇಂತಹ ಪರಿಸ್ಥಿತಿಯಲ್ಲಿರುವ ಪತಿವ್ರತಾ ಶಿರೋಮಣಿ ಯನ್ನು ಸಮಾಧಾನಗೊಳಸದೆ ಹೋಗಿಬಿಟ್ಟರೆ ಲಂಕೆಗೆ ಬಂದ ನನ್ನ ಪ್ರಯಾಣವು ದೋಷಯುಕ್ತವಾದೀತು. ಅರ್ಥಾತ್- ಅರ್ಥವಿಲ್ಲದಂತಾದೀತು. ॥೮॥ ಯಶಸ್ವಿನೀ ಯಾದ, ರಾಜಪುತ್ರಿ ಸೀತಾದೇವಿಯನ್ನು ಸಮಾಧಾನಪಡಿಸದೇ ನಾನು ಸುಗ್ರೀವನ ಬಳಿಗೆ ಹೊರಟು ಹೋದನಾದರೆ, ಇವಳು ರಕ್ಷಕರನ್ನೇ ಕಾಣದೆ ಪ್ರಾಣಗಳನ್ನು ತೊರೆಯಲೂ ಬಹುದು.॥೯॥ ಆಜಾನುಬಾಹುವೂ, ಚಂದ್ರನಂತೆ ಆಹ್ಲಾದಕರವಾದ ಮುಖವುಳ್ಳವನೂ, ಸೀತಾದೇವಿಯನ್ನು ನೋಡಲು ತವಕಪಡುತ್ತಿರುವವನೂ ಆದ ಶ್ರೀರಾಮನಿಗೂ ಕೂಡ ಸೀತಾಸಂದೇಶವನ್ನು ತಿಳಿಸಿ ಸಮಾಧಾನ ಪಡಿಸುವುದು ನ್ಯಾಯವೂ, ಸಮುಚಿತವೂ ಆಗಿದೆ.॥೧೦॥ ಆದರೆ ಈ ರಾಕ್ಷಸಿಯರ ಎದುರಿನಲ್ಲಿ ಇವಳೊಡನೆ ಮಾತನಾಡುವುದು ಉಚಿತವಲ್ಲ. ಈಗ ನಾನೇನು ಮಾಡಲೀ? ದೊಡ್ಡ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಿಕ್ಕಿಕೊಡಿರುವೆನಲ್ಲ! ॥೧೧॥ ಸ್ವಲ್ಪವೇ ಉಳಿದಿರುವ ಈ ರಾತ್ರಿಯ ಸಮಯದಲ್ಲೇ ನಾನು ಇವಳನ್ನು ಸಮಾಧಾನ ಪಡಿಸದಿದ್ದರೆ ಇವಳು ತನ್ನ ಜೀವಿತವನ್ನು ತ್ಯಜಿಸುವುದು ನಿಶ್ಚಯ. ಇದರಲ್ಲಿ ಸಂದೇಹವೇ ಇಲ್ಲ.॥೧೨॥ ಸುಂದರಿಯಾದ ಇವಳೊಡನೆ ನಾನು ಮಾತನಾಡದೆ ಶ್ರೀರಾಮನ ಬಳಿಗೆ ಹೋದಾಗ 'ಸೀತೆಯು ನನ್ನ ಕುರಿತು ಏನು ಹೇಳಿದಳು?' ಎಂದು ರಾಮನು ಕೇಳಿದರೆ ಏನೆಂದುತ್ತರಿಸಲೀ?॥೧೩॥ ಸೀತೆಯ ಸಂದೇಶವನ್ನು ಪಡೆಯದೆ ನಾನು

ಸೀತಾಸಂದೇಶರಹಿತಂ ಮಾಮಿತಸ್ತ್ವರಯಾ ಗತಮ್ ।
ನಿರ್ದಹೇದಪಿ ಕಾಕುತ್ಸ್ಥಃ ಕ್ರುದ್ಧಸ್ತೀವ್ರೇಣ ಚಕ್ಷುಷಾ ॥ ೧೪॥

ಯದಿ ಚೋನ್ಮೋಚಯಿಷ್ಯಾಮಿ ಭರ್ತಾರಂ ರಾಮಕಾರಣಾತ್ ।
ವ್ಯರ್ಥಮಾಗಮನಂ ತಸ್ಯ ಸಸೈನ್ಯಸ್ಯ ಭವಿಷ್ಯತಿ ॥ ೧೫॥

ಅಂತರಂ ತ್ವಪಮಾಸಾದ್ಯ ರಾಕ್ಷಸೀನಾಮಿಹ ಸ್ಥಿತಃ ।
ಶನೈರಾಶ್ವಾಸಯಿಷ್ಯಾಮಿ ಸಂತಾಪಬಹುಲಾಮಿಮಾಮ್ ॥ ೧೬॥

ಅಹಂ ತ್ವತಿತನುಶ್ಚೈವ ವಾನರಶ್ಚ ವಿಶೇಷತಃ ।
ವಾಚಂ ಚೋದಾಹರಿಷ್ಯಾಮಿ ಮಾನುಷೀಮಿಹ ಸಂಸ್ಕೃತಾಮ್ ॥ ೧೭॥

ಯದಿ ವಾಚಂ ಪ್ರದಾಸ್ಯಾಮಿ ದ್ವಿಜಾತಿರಿವ ಸಂಸ್ಕೃತಾಮ್ ।
ರಾವಣಂ ಮನ್ಯಮಾನಾ ಮಾಂ ಸೀತಾ ಭೀತಾ ಭವಿಷ್ಯತಿ ॥ ೧೮॥

ವಾನರಸ್ಯ ವಿಶೇಷೇಣ ಕಥಂ ಸ್ಯಾದಭಿಭಾಷಣಮ್ ।
ಅವಶ್ಯಮೇವ ವಕ್ತವ್ಯಂ ಮಾನುಷಂ ವಾಕ್ಯಮರ್ಥವತ್ ॥ ೧೯॥

ಮಯಾ ಸಾಂತ್ವಯಿತುಂ ಶಕ್ಯಾ ನಾನ್ಯಥೇಯಮನಿಂದಿತಾ ।
ಸೇಯಮಾಲೋಕ್ಯ ಮೇ ರೂಪಂ ವಾನರೇ ಭಾಷಿತಂ ತಥಾ ॥ ೨೦॥

ರಕ್ಷೋಭಿಸ್ತ್ರಾಸಿತಾ ಪೂರ್ವಂ ಭೂಯಸ್ತ್ರಾಸಂ ಗಮಿಷ್ಯತಿ ।
ತತೋ ಜಾತಪರಿತ್ರಾಸಾ ಶಬ್ದಂ ಕುರ್ಯಾನ್ನಸಂಶಯಮ್ ॥ ೨೧॥

ಜಾನಾನಾ ಮಾಂ ವಿಶಾಲಾಕ್ಷೀ ರಾವಣಂ ಕಾಮರೂಪಿಣಮ್ ।
ಸೀತಯಾ ಚ ಕೃತೇ ಶಬ್ದೇ ಸಹಸಾ ರಾಕ್ಷಸೀಗಣಃ ॥ ೨೨॥

ನಾನಾಪ್ರಹರಣೋ ಘೋರಃ ಸಮೇಯಾದಂತಕೋಪಮಃ ।
ತತೋ ಮಾಂ ಸಂಪರಿಕ್ಷಿಪ್ಯ ಸರ್ವತೋ ವಿಕೃತಾನನಾಃ ॥ ೨೩॥

ವಧೇ ಚ ಗ್ರಹಣೇ ಚೈವ ಕುರ್ಯುರ್ಯತ್ನಂ ಯಥಾಬಲಮ್ ।
ಗೃಹ್ಯ ಶಾಖಾಃ ಪ್ರಶಾಖಾಶ್ಚ ಕೃಂಧಾಯೋತ್ತಮಶಾಖಿನಾಮ್ ॥ ೨೪॥

ದೃಷ್ಟ್ವಾ ವಿಪರಿಧಾವಂತಂ ಭವೇಯುಃ ಭೃಯಶಂಕಿತಾಃ ।
ಮಮ ರೂಪಂ ಚ ಸಂಪ್ರೇಕ್ಷ್ಯ ವನೇ ವಿಚರತೋ ಮಹತ್ ॥ ೨೫॥

ರಾಕ್ಷಸ್ಯೋ ಭಯವಿತ್ರಸ್ತಾ ಭವೇಯುರ್ವಿಕೃತಾನನಾಃ ।
ತತಃ ಕುರ್ಯುಃ ಸಮಾಹ್ವಾನಂ ರಾಕ್ಷಸ್ಯೋ ರಕ್ಷಸಾಮಪಿ ॥ ೨೬॥

ಅವಸರದಿಂದ ಆಲ್ಲಿಗೆ ಹೊರಟು ಹೋದರೆ ಕಾಕುತ್ಸ್ಥ ನಾದ ಶ್ರೀರಾಮನು ಕ್ರುದ್ಧನಾಗಿ ತನ್ನ ತೀಕ್ಷ್ಣವಾದ ಕಣ್ಣುಗಳಿಂದ ನನ್ನನ್ನು ಸುಟ್ಟುಬಿಡಬಹುದು.॥೧೪॥ ರಾಮಕಾರ್ಯಾರ್ಥವಾಗಿ ಯುದ್ಧಕ್ಕಾಗಿ ಸುಗ್ರೀವನನ್ನು ಪ್ರಚೋದಿಸಿ, ಅವನು ಸೈನ್ಯಸಮೇತ ಇಲ್ಲಿಗೆ ಬಂದರೂ, ಅವನ ಬರುವಿಕೆಯು ವ್ಯರ್ಥವೇ ಆಗುತ್ತದೆ. ಏಕೆಂದರೆ ಆ ವೇಳೆಗೆ ಸೀತೆಯೇ ಬದುಕಿರುವುದಿಲ್ಲ.॥೧೫॥ ಅದುದರಿಂದ ನಾನು ಇಲ್ಲಿಯೇ ಕುಳಿತ್ತಿದ್ದು ರಾಕ್ಷಸಿಯರ ಲಕ್ಷ್ಯ ಬೇರೆಡೆಗೆ ಹೋದಾಗ ಅಥವಾ ಬಳಿಯಲ್ಲಿ ಇಲ್ಲದಿರುವ ಸಮಯವನ್ನು ಸಾಧಿಸಿ ಹೆಚ್ಚಾಗಿ ಸಂತಾಪಪಡುತ್ತಿರುವ ಸೀತಾದೇವಿಯನ್ನು ನಿಧಾನವಾಗಿ ಸಮಾಧಾನಗೊಳಿಸುತ್ತೇನೆ. ॥೧೬॥ ನಾನು ಪ್ರಸ್ತುತ ಸೂಕ್ಷ್ಮರೂಪವನ್ನು ಧರಿಸಿರುವೆನು. ಆದರಲ್ಲಿಯೂ ವಿಶೇಷವಾಗಿ ವಾನರನು. ಮಾನವರ ರೀತಿಯಲ್ಲಿ ನಾನು ಇವಳಲ್ಲಿ ಸರಳ ಸಂಸ್ಕೃತ ಭಾಷೆಯಲ್ಲೇ ಮಾತಾಡುತ್ತೇನೆ. ॥೧೭॥ ವಿದ್ವಾಂಸರಾಡುವ ಸಂಸ್ಕೃತದಲ್ಲಿ ನಾನು ಸಂಭಾಷಿಸಿದರೆ ವಾನರನಾದ ಈತನು ಹೀಗೆ ಸ್ವಚ್ಛವಾದ ಸಂಸ್ಕೃತದಲ್ಲಿ ಹೇಗೆ ಮಾತಾಡಬಲ್ಲನು? ಎಂದು ಸಂದೇಹಿಸಿ ಇವನು ರಾವಣನೆಂದೇ ಭಾವಿಸಿ ಭಯಪಡಬಹುದು.॥೧೮॥ ಆದರೂ ನಾನು ಇವಳೊಡನೆ ಅರ್ಥವತ್ತಾಗಿ ಸಾಮಾನ್ಯ ಮನುಷ್ಯರಂತೆ ಮಾತನ್ನಾಡುವೆನು. ಮಾನವ ಸಹಜವಾದ ಮಾತುಗಳನ್ನಾಡುವುದರಿಂದಲೇ ಅನಿಂದಿತೆಯಾದ ಇವಳನ್ನು ನಾನು ಸಮಾಧಾನಗೊಳಿಸಬಹುದು.॥೧೯॥ ಇಷ್ಟರವರೆಗೆ ರಾಕ್ಷಸಿಯರಿಂದ ಮೊದಲೇ ಇವಳು ಭಯಪಟ್ಟಿರುವಳು. ಈಗ ನನ್ನ ರೂಪವನ್ನು ನೋಡಿ ನನ್ನ ಮಾತುಗಳನ್ನು ಕೇಳಿ ಇವಳು ಇನ್ನೂ ಹೆಚ್ಚಾಗಿ ಭಯಪಡಬಹುದು.॥೨೦॥ ಬುದ್ಧಿವಂತಳೂ, ವಿಶಾಲಾಕ್ಷಿಯೂ ಆದ ಸೀತಾದೇವಿಯು ನನ್ನನ್ನು ಕಾಮರೂಪಿಯಾದ ರಾವಣನೆಂದು ಭಾವಿಸಿ ಭಯಗೊಂಡು ಆರ್ತನಾದವನ್ನು ಮಾಡಬಹುದು.॥೨೧॥ ಸೀತಾದೇವಿಯ ಆರ್ತನಾದವನ್ನು ಕೇಳಿ ಯಮಕಿಂಕರರಂತೆ ಇರುವ ರಾಕ್ಷಸಿಯರ ಗುಂಪು ಒಡನೆಯೇ ನಾನಾವಿಧವಾದ ಆಯುಧಗಳನ್ನು ಹಿಡಿದುಕೊಂಡು ನನ್ನನ್ನು ಎದುರಿಸಲೂ ಬಹುದು.॥೨೨॥ ವಿಕಾರವಾದ ಮುಖವುಳ್ಳ, ಮಹಾಬಲಶಾಲಿಯಾದ ರಕ್ಕಸಿಯರೆಲ್ಲರೂ ಎಲ್ಲಕಡೆಯಿಂದ ನನ್ನನ್ನು ಸುತ್ತುವರಿದು ವಧೆ ಮಾಡಬಹುದು ಅಥವಾ ಬಂಧಿಸಲೂ ಪ್ರಯತ್ನಿಸಬಹುದು.॥೨೩॥ ರೆಂಬೆಗಳನ್ನೂ, ಚಿಕ್ಕಕೊಂಬೆಗಳನ್ನೂ, ದಪ್ಪವಾದ ಕೊಂಬೆಗಳುಳ್ಳ ಮರಗಳನ್ನು ಹಿಡಿದುಕೊಂಡು ಓಡುತ್ತಿರುವ ನನ್ನನ್ನು ನೋಡಿ ಆ ರಕ್ಕಸಿಯರು ಭಯಸಂದೇಹಗಳನ್ನು ಹೊಂದುವರು.॥೨೪॥ ಈ ವನದಲ್ಲಿ ಅತ್ತ-ಇತ್ತ ಸಂಚರಿಸುತ್ತಿರುವ ನನ್ನ ಬೃಹದ್ರೂಪವನ್ನು ಕಂಡು ಭಯಭೀತರಾಗಿ ಅವರು ವಿಕಾರವಾದ ಧ್ವನಿಗಳಿಂದ ಕಿರಿಚಿಕೊಳ್ಳಬಹುದು.॥೨೫॥ ಬಳಿಕ ಅವರು ರಾಕ್ಷಸೇಂದ್ರನಾದ ರಾವಣನ ಭವನಕ್ಕೆ ಹೋಗಿ ರಕ್ಷಣೆಗಾಗಿ ಅವನಿಂದ ನಿಯುಕ್ತರಾದ ರಾಕ್ಷಸರನ್ನು ಆಹ್ವಾನಿಸಬಹುದು.॥೨೬॥ ಆ

ರಾಕ್ಷಸೇಂದ್ರನಿಯುಕ್ತಾನಾಂ ರಾಕ್ಷಸೇಂದ್ರನಿವೇಶನೇ ।
ತೇ ಶೂಲಶಕ್ತಿನಿಸ್ತ್ರಿಂಶವಿವಿಧಾಯುಧಪಾಣಯಃ ॥ ೨೭॥

ಆಪತೇಯುರ್ವಿಮರ್ದೇಽಸ್ಮಿನ್ ವೇಗೇನೋದ್ವೇಗಕಾರಣಾತ್ ।
ಸಂರುದ್ಧಸ್ತೈಸ್ತು ಪರಿತೋ ವಿಧಮನ್ ರಕ್ಷಸಾಂ ಬಲಮ್ ॥ ೨೮॥

ಶಕ್ಷುಯಾಂ ನ ತು ಸಂಪ್ರಾಪ್ತುಂ ಪರಂ ಪಾರಂ ಮಹೋದಧೇಃ ।
ಮಾಂ ವಾ ಗೃಹ್ಣೀಯುರಾಪ್ಲುತ್ಯ ಬಹವಃ ಶೀಘ್ರಕಾರಿಣಃ ॥ ೨೯॥

ಸ್ಯಾದಿಯಂ ಚಾಗೃಹೀತಾರ್ಥಾ ಮಮ ಚ ಗ್ರಹಣಂ ಭವೇತ್ ।
ಹಿಂಸಾಭಿರುಚಯೋ ಹಿಂಸ್ಯುರಿಮಾಂ ವಾ ಜನಕಾತ್ಮಜಾಮ್ ॥ ೩೦॥

ವಿಪನ್ನಂ ಸ್ಯಾತ್ತತಃ ಕಾರ್ಯಂ ರಾಮಸುಗ್ರೀವಯೋರಿದಮ್ ।
ಉದ್ದೇಶೇ ನಷ್ಟಮಾರ್ಗೇಽಸ್ಮಿನ್ ರಾಕ್ಷಸೈಃ ಪರಿವಾರಿತೇ ॥ ೩೧॥

ಸಾಗರೇಣ ಪರೀಕ್ಷಿಪ್ತೇ ಗುಪ್ತೇ ವಸತಿ ಜಾನಕೀ ।
ವಿಶಸ್ತೇ ವಾ ಗೃಹೀತೇ ವಾ ರಕ್ಷೋಭಿರ್ಮಯಿ ಸಂಯುಗೇ ॥ ೩೨॥

ನಾನ್ಯಂ ಪಶ್ಯಾಮಿ ರಾಮಸ್ಯ ಸಾಹಾಯ್ಯಂ ಕಾರ್ಯಸಾಧನೇ ।
ವಿಮೃಶಂಶ್ಚನ ಪಶ್ಯಾಮಿ ಯೋ ಹತೇ ಮಯಿ ವಾನರಃ ॥ ೩೩॥

ಶತಯೋಜನವಿಸ್ತೀರ್ಣಂ ಲಂಘಯೇತ ಮಹೋದಧಿಮ್ ।
ಕಾಮಂ ಹಂತುಂ ಸಮರ್ಥೋಽಸ್ಮಿ ಸಹಸ್ರಾಣ್ಯಪಿ ರಕ್ಷಸಾಮ್ ॥ ೩೪॥

ನ ತು ಶಕ್ಷ್ಯಾಮಿ ಸಂಪ್ರಾಪ್ತುಂ ಪರಂ ಪಾರಂ ಮಹೋದಧೇಃ ।
ಅಸತ್ಯಾನಿ ಚ ಯುದ್ಧಾನಿ ಸಂಶಯೋ ಮೇ ನ ರೋಚತೇ ॥ ೩೫॥

ಕಶ್ಚನಿಃಸಂಶಯಂ ಕಾರ್ಯಂ ಕುರ್ಯಾತ್ ಪ್ರಾಜ್ಞಃ ಸಸಂಶಯಮ್ ।
ಪ್ರಾಣತ್ಯಾಗಶ್ಚ ವೈದೇಹ್ಯಾ ಭವೇದನಭಿಭಾಷಣೇ ॥ ೩೬॥

ಏಷ ದೋಷೋ ಮಹಾನ್ ಹಿ ಸ್ಯಾನ್ಮಮ ಸೀತಾಭಿಭಾಷಣೇ ।
ಭೂತಾಶ್ಚಾರ್ಥಾ ವಿನಶ್ಯಂತಿ ದೇಶಕಾಲವಿರೋಧಿತಾಃ ॥ ೩೭॥

ರಾಕ್ಷಸರು ಶೂಲಗಳೂ, ಭಲ್ಲೆಗಳೂ, ಖಡ್ಗಗಳೂ ಮುಂತಾದ ಆಯುಧಗಳನ್ನು ಎತ್ತಿಕೊಂಡು ನನ್ನೊಡನೆ ಹೋರಾಡಲು ವೇಗವಾಗಿ ಇಲ್ಲಿಗೆ ಬರಬಹುದು.॥೨೭॥ ಅವರೆಲ್ಲರೂ ಒಟ್ಟಾಗಿ ಬಂದು ನನ್ನನ್ನು ಸುತ್ತುಗಟ್ಟಿ ಯುದ್ಧಕ್ಕೆ ನಿಂತರೂ ನಾನು ಆ ರಾಕ್ಷಸಸೈನ್ಯವನ್ನು ಧ್ವಂಸಮಾಡಬಲ್ಲೆ. ಆದರೆ ಕಾದಾಟದಲ್ಲಿ ಸಿಲುಕಿ ಮಹೋದಧಿಯ ಆಚೆ ದಡಕ್ಕೆ ಹೊಗಲು ನನಗೆ ಸಾಧ್ಯವಾಗದೇ ಇರಬಹುದು.॥೨೮॥ ಚುರುಕಾದ ಕೆಲವುಮಂದಿ ರಾಕ್ಷಸರು ನನ್ನನ್ನು ಸುತ್ತುವರಿದು ಬಂಧಿಸಲು ಬಹುದು. ಆ ಸ್ಥಿತಿಯಲ್ಲಿ ನಾನು ಶ್ರೀರಾಮನ ಸಂದೇಶವನ್ನು ಸೀತೆಗೆ ಮುಟ್ಟಿಸಲಾರೆನು. ನಾನು ಬಂದಿರುವ ಕಾರ್ಯವು ನೆರವೇರದು.॥೨೯॥ ಹಿಂಸಾಪ್ರವೃತ್ತಿಯವರಾದ ರಾಕ್ಷಸರು ಈ ಜಾನಕಿದೇವಿಯನ್ನು ಇನ್ನು ಹೆಚ್ಚಾಗಿ ಹಿಂಸಿಸಬಹುದು. ಅದರಿಂದಾಗಿ ರಾಮ-ಸುಗ್ರೀವರು ನನಗೆ ಒಪ್ಪಿಸಿದ ಸೀತಾನ್ವೇಷಣ ಕಾರ್ಯವು ಭಂಗವಾಗಬಹುದು.॥೩೦॥ ಜಾನಕಿದೇವಿ ಇರುವ ಈ ರಹಸ್ಯ ಸ್ಥಳಕ್ಕೆ ಬರಲು ಯಾವ ಮಾರ್ಗವೂ ಇಲ್ಲ. ಸುತ್ತಲೂ ಸಮುದ್ರವಿದೆ. ಮೇಲಾಗಿ ರಾಕ್ಷಸರು ಈ ಸ್ಥಳವನ್ನು ನಿರಂತರವಾಗಿ ಕಾವಲು ಕಾಯುತ್ತಿದ್ದಾರೆ. ॥೩೧॥ ನಾನು ಯುದ್ಧದಲ್ಲಿ ರಾಕ್ಷಸರಿಂದ ಬಂಧಿತನಾದರೆ, ಇವಳ ಸುಳಿವು ಯಾರಿಗೂ ಸಿಕ್ಕದಂತಾಗಿ ರಾಮ-ಸುಗ್ರೀವರ ಪ್ರಯತ್ನವೆಲ್ಲವೂ ನಿಷ್ಫಲವಾಗುತ್ತದೆ.॥೩೨॥ ರಾಕ್ಷಸರೊಡನೆ ಯುದ್ಧ ಮಾಡುವಾಗ ನಾನೇನಾದರೂ ಹತನಾದರೆ ಶ್ರೀರಾಮನ ಕಾರ್ಯಕ್ಕಾಗಿ ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿಕೊಂಡು ಬರಲು ಎಷ್ಟು ಆಲೋಚಿಸಿದರೂ ಸಮರ್ಥನಾದ ಬೇರೊಬ್ಬ ವಾನರನು ಕಂಡು ಬರುವುದಿಲ್ಲ.॥೩೩॥ ಸಾವಿರಾರು ರಾಕ್ಷಸರನ್ನು ಸಂಹರಿಸಲು ನಾನು ಸಮರ್ಥನಾಗಿರುವೆನು. ಆದರೆ ಈ ರಾಕ್ಷಸರೊಡನೆ ಯುದ್ಧದಲ್ಲಿ ಸಿಲುಕಿ ಅನೇಕ ದಿನಗಳು ಕಳೆದರೆ ಮಹೋದಧಿಯ ಆಚೆದಡಕ್ಕೆ ಸಕಾಲದಲ್ಲಿ ಹೋಗಲು ಸಾಧ್ಯವಾಗಲಾರದು.॥೩೪॥ ಯುದ್ಧರಂಗದಲ್ಲಿ ಜಯಾಪಜಯಗಳು ಅನಿಶ್ಚಿತವಾದುವುಗಳು. ಸಂಶಯಾತ್ಮಕ ವಾದ ಕಾರ್ಯವನ್ನು ಮಾಡುವುದು ನನಗೆ ರುಚಿಸುವುದಿಲ್ಲ. ಪ್ರಾಜ್ಞನಾದವನು ಯಾರೇ ಆಗಿರಲಿ, ಸಂಶಯಾಸ್ಪದ ಕಾರ್ಯವನ್ನು ವಿಚಾರವಿಲ್ಲದೆ ನಿಃಸಂಶಯವಾಗಿ ಹೇಗೆತಾನೇ ಮಾಡುವನು.॥೩೫॥ ಸೀತೆಯೊಡನೆ ಮಾತನಾಡುವುದರಿಂದ ಈ ಒಂದು ಮಹತ್ತರವಾದ ವಿಪತ್ತು(ಯುದ್ಧವು) ಸಂಭವಿಸುವುದು. ಆದರೆ ಈಗ ನಾನು ಇವಳೊಡನೆ ಮಾತಾಡದಿದ್ದರೆ ವೈದೇಹಿಯ ಪ್ರಾಣತ್ಯಾಗವೇ ಆಗಿತ್ತದೆ.॥೩೬॥

ನಿಶ್ಚಿತವಾಗಿ ಸಫಲವಾಗುವ ಕಾರ್ಯಗಳೂ ಕೂಡ ಅವಿವೇಕಿಯಾದ ದೂತನು ದೇಶ-ಕಾಲಗಳಿಗೆ ವಿರುದ್ಧವಾಗಿ ಕೈಗೊಂಡರೆ ಸೂರ್ಯೋದಯವಾದೊಡನೆ ಕತ್ತಲೆಯು ನಶಿಸುವಂತೆ ನಿಷ್ಫಲವಾಗುತ್ತವೆ.॥೩೭॥ ಲಾಭ-ನಷ್ಟಗಳನ್ನು ನೋಡಿ ರಾಜನು ತನ್ನ ಮಂತ್ರಿಗಳೊಂದಿಗೆ ಚರ್ಚಿಸಿ ನಿಶ್ಚಯಿಸಿದ

ವಿಕ್ಲವಂ ದೂತಮಾಸಾದ್ಯ ತಮಃ ಸೂರ್ಯೋದಯೇ ಯಥಾ ।
ಅರ್ಥಾನರ್ಥಾಂತರೇ ಬುದ್ಧಿರ್ನಿಶ್ಚಿತಾಪಿ ನ ಶೋಭತೇ ॥ ೩೮॥

ಘಾತಯಂತಿ ಹಿ ಕಾರ್ಯಾಣಿ ದೂತಾಃ ಪಂಡಿತಮಾನಿನಃ ।
ನ ವಿಸೃಷ್ಟಃ ಕಥಂ ಕಾರ್ಯಂ ವೈಕ್ಲವ್ಯಂ ನ ಕಥಂ ಭವೇತ್ ॥ ೩೯॥

ಲಂಘನಂ ಚ ಸಮುದ್ರಸ್ಯ ಕಥಂ ನು ನ ವೃಥಾ ಭವೇತ್ ।
ಕಥಂ ನು ಖಲು ವಾಕ್ಯಂ ಮೇ ಶೃಣುಯಾನ್ನೋದ್ವಿಜೇತ ವಾ ॥ ೪೦॥

ಇತಿ ಸಂಚಿಂತ್ಯ ಹನುಮಾಂಶ್ಚಕಾರ ಮತಿಮಾನ್ ಮತಿಮ್ ।
ರಾಮಮಿಕ್ಷ್ವಾಕುವರ್ಯಾಣಂ ಸ್ವಯಂಧುಮನುಕೀರ್ತಯನ್ ॥ ೪೧॥

ನೈನಾಮುದ್ವೇಜಯಿಷ್ಯಾಮಿ ತದ್ಗತಮಾನಸಾಮ್ ।
ಇಕ್ಷ್ವಾಕೂಣಾಂ ವರಿಷ್ಠಸ್ಯ ರಾಮಸ್ಯ ವಿದಿತಾತ್ಮನಃ ॥ ೪೨॥

ಶುಭಾನಿ ಧರ್ಮಯುಕ್ತಾನಿ ವಚನಾನಿ ಸಮರ್ಪಯನ್ ।
ಶ್ರಾವಯಿಷ್ಯಾಮಿ ಸರ್ವಾಣಿ ಮಧುರಾಂ ಪ್ರಜುಪನ್ ಗಿರಮ್ ।
ಶ್ರದ್ಧಾಸ್ಯತಿ ಯಥಾ ಹೀಯಂ ತಥಾ ಸರ್ವಂ ಸಮಾದಧೇ ॥ ೪೩॥

ಇತಿ ಸ ಬಹುವಿಧಂ ಮಹಾನುಭಾವೋ
ಜಗತಿಪತೇಃ ಪ್ರಮದಾಮವೇಕ್ಷಮಾಣಃ ।
ಮಧುರಮವಿತಥಂ ಜಗಾದ ವಾಕ್ಯಂ
ದ್ರುಮವಿಟಪಾಂತರಮಾಸ್ಥಿತೋ ಹನೂಮಾನ್ ॥ ೪೪॥

ಕಾರ್ಯವಾದರೂ, ಅವಿವೇಕಿಯಾದ ದೂತನಿಂದ ಅದು ಸಫಲವಾಗಲಾರದು. ಏಕೆಂದರೆ ಅಸಮರ್ಥನಾದರೂ ತಾನು ಸಮರ್ಥನೆಂಬ ಅಹಂಕಾರದಿಂದ ದೂತನು ಕಾರ್ಯಗಳನ್ನು ಹಾಳುಮಾಡುತ್ತಾನೆ.॥೩೮॥ ಶ್ರೀರಾಮನ ಕಾರ್ಯವು ಹಾಳಾಗದೆ ಸಿದ್ಧಿಸುವುದು ಹೇಗೆ? ನಾನು ಬುದ್ಧಿಹೀನನೆಂದು ಕಾಣದೆ ಇರುವುದು ಹೇಗೆ? ಸಮುದ್ರ ಲಂಘನವು ವ್ಯರ್ಥವಾಗದಿರುವುದು ಹೇಗೆ? ॥೩೯॥ ಸೀತಾದೇವಿಯು ಭಯಸಂದೇಹಗಳಲ್ಲದ ರೀತಿಯಿಂದ ಅವಳಿಗೆ ನನ್ನ ಮಾತನ್ನು ಹೇಗೆ ತಿಳಿಸಲಿ? ಮುಂತಾಗಿ ಆಲೋಚಿಸಿ ಪ್ರಾಜ್ಞನಾದ ಹನುಮಂತನು ತತ್ಕಾಲೋಚಿತವಾದ ಕರ್ತವ್ಯವನ್ನು ಮಾಡಲು ನಿಶ್ಚಯಿಸಿದನು.॥೪೦॥ ನನ್ನ ಸ್ವಾಮಿಯಾದ ಶ್ರೀರಾಮನು ಎಂತಹ ಕ್ಲಿಷ್ಟವಾದ ಕಾರ್ಯವನ್ನಾದರೂ ಲೀಲಾಮಾತ್ರದಿಂದ ನೆರವೇರಿಸುವನು. ಇವಳ ಮನಸ್ಸು ಶ್ರೀರಾಮನಲ್ಲೇ ಸಂಲಗ್ನವಾಗಿದೆ. ಆದರಿಂದ ಶ್ರೀರಾಮನನ್ನು ಕೀರ್ತಿಸಿ ಇವಳ ಭಯಸಂದೇಹಗಳನ್ನು ಇಲ್ಲವಾಗಿಸುತ್ತೇನೆ. (ನಾನು ಅವಳಿಗೆ ಕಂಡುಬಂದರೆ ಅವಳು ಉದ್ವೇಗಗೊಳ್ಳುವಳು. ಆದಕ್ಕಾಗಿ ಅವಳಿಗೆ ಕಾಣದೆ ಶ್ರೀರಾಮನ ಗುಣಕೀರ್ತನೆಯನ್ನು ಮಾಡುತ್ತಾ ಅವಳನ್ನು ಪ್ರಸನ್ನಗೊಳಿಸುತ್ತೇನೆ.)॥೪೧॥

ಇಕ್ಷ್ವಾಕುವಂಶದಲ್ಲೇ ಶ್ರೇಷ್ಠನಾದ, ಆತ್ಮವಿದನಾದ, ಪರಮಾತ್ಮಸ್ವರೂಪನಾದ, ಶ್ರೀರಾಮನಿಗೆ ಸಂಬಂಧಿಸಿದ ಶುಭಕರವೂ, ಧರ್ಮಯುಕ್ತವೂ ಆದ ಸಮಸ್ತ ವಿಷಯಗಳನ್ನು ವಿವರಿಸುತ್ತೇನೆ. ಮೃದುಮಧುರ ವಚನಗಳನ್ನು ಇವಳು ಕೇಳುವಂತೆ ನಿವೇದಿಸಿಕೊಳ್ಳುವೆನು. ಈ ವಿಧದಿಂದ ಇವಳಿಗೆ ಪೂರ್ಣವಿಶ್ವಾಸವನ್ನೂ, ಶ್ರದ್ಧೆಯನ್ನೂ, ಮನಃಶಾಂತಿಯನ್ನು ದೊರಕುವಂತೆ ಮಾಡುವೆನು.॥೪೨-೪೩॥

ಹೀಗೆ ಬಹಳವಾಗಿ ಯೋಚಿಸುತ್ತಿದ್ದ ಮಹಾನುಭಾವನಾದ ಹನುಮಂತನು ವೃಕ್ಷದಲ್ಲಿ ಕುಳಿತ್ತಿದ್ದು ಜಗತ್ಪತಿಯಾದ ಶ್ರೀರಾಮಚಂದ್ರನ ಭಾರ್ಯೆಯಾದ ಸೀತಾದೇವಿಯನ್ನು ನೋಡುತ್ತಾ ಸುಮಧುರವಾದ, ಕರ್ಣಾನಂದಕರವಾದ, ಯಥಾರ್ಥವಾದ ರಾಮಮಹಿಮೆಯನ್ನು ಹಾಡತೊಡಗಿದನು. ॥೪೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ತ್ರಿಂಶಃ ಸರ್ಗಃ ॥ ೩೦ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತನೆಯ ಸರ್ಗವು ಮುಗಿಯಿತು.

* * *

ಮೂವತ್ತೊಂದನೆಯ ಸರ್ಗ

ಹನುಮಂತನು ಸೀತಾದೇವಿಯು ಕೇಳುವಂತೆ ಶ್ರೀರಾಮಕಥೆಯನ್ನು ಸುಮಧುರವಾಗಿ ಹಾಡಿದುದು –

ಏವಂ ಬಹು ವಿಧಾಂ ಚಿಂತಾಂ ಚಿಂತಯಿತ್ವಾ ಮಹಾಕಪಿಃ ।
ಸಂಶ್ರವೇ ಮಧುರಂ ವಾಕ್ಯಂ ವೈದೇಹ್ಯಾ ವ್ಯಾಜಹಾರ ಹ ॥ ೧॥

ರಾಜಾ ದಶರಥೋ ನಾಮ ರಥಕುಂಜರವಾಜಿಮಾನ್ ।
ಪುಣ್ಯಕೀರ್ತಿರ್ಮಹಾಕೀರ್ತಿರ್ಬುಧಾಸೀನ್ಮಹಾಯಶಾಃ ॥ ೨॥

ರಾಜರ್ಷೀಣಾಂ ಗುಣೈಶ್ರೇಷ್ಠ್ಯಪ್ರಸಾ ಚರ್ಷಿಭಿಃ ಸಮಃ ।
ಚಕ್ರವರ್ತಿಕುಲೇ ಜಾತಃ ಪುರಂದರಸಮೋ ಬಲೇ ॥ ೩॥

ಅಹಿಂಸಾರತಿರಕ್ಷುದ್ರೋ ಭೃಶಂ ಸತ್ಯಪರಾಕ್ರಮಃ ।
ಮುಖ್ಯಿಕ್ಷ್ವಾಕುವಂಶಸ್ಯ ಲಕ್ಷ್ಮೀವಾನ್ ಲಕ್ಷ್ಮವರ್ಧನಃ ॥ ೪॥

ಪಾರ್ಥಿವವ್ಯಂಜನೈರ್ಯುಕ್ತಃ ಪೃಥುಶ್ರೀಃ ಪಾರ್ಥಿವರ್ಷಭಃ ।
ಪೃಥಿವ್ಯಾಂ ಚತುರಂತಾಯಾಂ ವಿಶ್ರುತಃ ಸುಖದಃ ಸುಧೀಃ ॥ ೫॥

ತಸ್ಯ ಪುತ್ರಃ ಪ್ರಿಯೋ ಜ್ಯೇಷ್ಠಸ್ತಾರಾಧಿಪನಿಭಾನನಃ ।
ರಾಮೋ ನಾಮ ವಿಶೇಷಜ್ಞಃ ಶ್ರೇಷ್ಠಃ ಸರ್ವಧನುಷ್ಮತಾಮ್ ॥ ೬॥

ರಕ್ಷಿತಾ ಸ್ವಸ್ಯ ವೃತ್ತಸ್ಯ ಸ್ವಜನಸ್ಯಾಪಿ ರಕ್ಷಿತಾ ।
ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಚ ಪರಂತಪಃ ॥ ೭॥

ತಸ್ಯ ಸತ್ಯಾಭಿಸಂಧಸ್ಯ ವೃದ್ಧಸ್ಯ ವಚನಾತ್ ಪಿತುಃ ।
ಸಭಾರ್ಯಃ ಸಹ ಚ ಭ್ರಾತ್ರಾ ವೀರಃ ಪ್ರವ್ರಾಜಿತೋ ವನಮ್ ॥ ೮॥

ತೇನ ತತ್ರ ಮಹಾರಣ್ಯೇ ಮೃಗಯಾಂ ಪರಿಧಾವತಾ ।
ರಾಕ್ಷಸಾ ನಿಹತಾಃ ಶೂರಾ ಬಹವಃ ಕಾಮರೂಪಿಣಃ ॥ ೯॥

ಜನಸ್ಥಾನವಧಂ ಶ್ರುತ್ವಾಹತೌ ಚ ಖರದೂಷಣೌ ।
ತತಸ್ತ್ವಮರ್ಷಾಪಹೃತಾ ಜಾನಕೀ ರಾವಣೇನ ತು ॥ ೧೦॥

ವಂಚಯಿತ್ವಾ ವನೇ ರಾಮಂ ಮೃಗರೂಪೇಣ ಮಾಯಯಾ ।
ಸ ಮಾರ್ಗಮಾಣಸ್ತಾಂ ದೇವೀಂ ರಾಮಃ ಸೀತಾಮನಿಂದಿತಾಮ್ ॥ ೧೧॥

ಮಹಾಮತಿಯಾದ ಹನುಮಂತನು ಹೀಗೆ ಹಲವು ವಿಧದಿಂದ ಆಲೋಚಿಸಿ ಕರ್ತವ್ಯವನ್ನು ನಿರ್ಣಯಿಸಿಕೊಂಡು, ಸೀತಾದೇವಿಗೆ ಮಾತ್ರವೇ ಚೆನ್ನಾಗಿ ಕೇಳುವಂತೆ ಸುಮಧುರವಾಗಿ ಶ್ರೀರಾಮಕಥೆಯನ್ನು ಹೇಳಲು ಉಪಕ್ರಮಿಸಿದನು–॥೧॥ "ಇಕ್ಷ್ವಾಕು ವಂಶದಲ್ಲಿ ದಶರಥನೆಂಬ ಪ್ರಸಿದ್ಧನೂ, ಪುಣ್ಯಾತ್ಮನೂ ಆದ ರಾಜನಿದ್ದನು. ಅವನು ಮಹಾಕೀರ್ತಿಶಾಲಿಯಾಗಿದ್ದು ಅವನಲ್ಲಿ ಹೇರಳವಾದ ಆನೆಗಳೂ, ಶ್ಯಾಮಕರ್ಣ ಅಶ್ವಗಳೂ, ದಿವ್ಯರಥಗಳೂ ಇದ್ದುವು. ॥೨॥ರಾಜರ್ಷಿಗಳಲ್ಲಿ ಇರುವ ಶ್ರೇಷ್ಠವಾದ ಗುಣಗಳೆಲ್ಲವೂ ಅವನಲ್ಲಿದ್ದುವು. ತಪಸ್ಸಿನಲ್ಲಿ ಋಷಿಗಳಿಗೆ ಸಮಾನವಾಗಿದ್ದನು. ಚಕ್ರವರ್ತಿಗಳ ಕುಲದಲ್ಲಿ ಹುಟ್ಟಿದ್ದ ಅವನು ಬಲದಲ್ಲಿ ಇಂದ್ರನಿಗೆ ಸಮನಾಗಿದ್ದನು.॥೩॥ ಅಹಿಂಸಾ ನಿಯಮಗಳನ್ನು ಪಾಲಿಸುವವನೂ, ಉದಾರಸ್ವಭಾವದವನೂ, ದಯಾಳುವೂ, ಸತ್ಯಸಂಧನೂ, ಐಶ್ವರ್ಯವಂತನೂ, ಸಂಪತ್ತುಗಳನ್ನು ರಕ್ಷಿಸುವುದರಲ್ಲಿ ದಕ್ಷನೂ, ಇಕ್ಷ್ವಾಕುವಂಶಕ್ಕೆ ತಿಲಕಪ್ರಾಯನಾಗಿದ್ದನು.॥೪॥ ರಾಜಶ್ರೇಷ್ಠನಾದ ಅವನು ಸಮಸ್ತ ರಾಜಚಿಹ್ನೆಗಳಿಂದಲೂ ಕೂಡಿದ್ದನು. ರಾಜಶಿರೋಮಣಿಯಾಗಿದ್ದು ಶುಭಲಕ್ಷಣ ಸಂಪನ್ನನಾಗಿದ್ದನು. ಚತುಃಸಾಗರ ಪರ್ಯಂತವಾದ ಈ ಭೂಮಂಡಲದಲ್ಲಿ ಅವನು ಪ್ರಜೆಗಳಿಗೆ ಸುಖವನ್ನುಂಟುಮಾಡುವವನೆಂದೂ, ಪರಮಸುಬಿಯೆಂದೂ, ಪ್ರಸಿದ್ಧನಾಗಿದ್ದನು.॥೫॥ಆ ದಶರಥ ಮಹಾರಾಜನಿಗೆ ಅತ್ಯಂತ ಪ್ರಿಯನಾದವನೂ, ಜ್ಯೇಷ್ಠಪುತ್ರನೂ ಆದ ಶ್ರೀರಾಮನೆಂಬುವನು ಪ್ರಸಿದ್ಧನಾಗಿದ್ದನು. ಅವನು ಚಂದ್ರನಂತೆ ಪ್ರಸನ್ನವದನನೂ, ಜ್ಞಾನಸ್ವರೂಪನೂ, ಧನುರ್ಧಾರಿಗಳಲ್ಲಿ ಅಗ್ರೇಸರನೂ ಆಗಿದ್ದನು.॥೬॥ ಶತ್ರುತಾಪಕನಾದ ಅವನು ಸ್ವಧರ್ಮವನ್ನು ಪಾಲಿಸುವವನೂ, ಆಶ್ರಿತರಿಗೆ ಕಲ್ಪವೃಕ್ಷನೂ, ಸಕಲಪ್ರಾಣಿಗಳನ್ನು, ಸಮಸ್ತಧರ್ಮಗಳನ್ನು ರಕ್ಷಿಸುವವನೂ ಆಗಿದ್ದನು.॥೭॥ ಸತ್ಯಪ್ರತಿಜ್ಞನೂ, ವೃದ್ಧನೂ, ಪಿತನೂ ಆದ ದಶರಥನ ಆಜ್ಞೆಯನ್ನು ಅನುಸರಿಸಿ, ವೀರನಾದ ಶ್ರೀರಾಮನು ತನ್ನ ಭಾರ್ಯೆಯಾದ ಸೀತಾದೇವಿ ಮತ್ತು ತಮ್ಮನಾದ ಲಕ್ಷ್ಮಣನೊಡನೆ ವನವಾಸಕ್ಕೆ ತೆರಳಿದನು.॥೮॥ ಆ ಮಹಾರಣ್ಯದಲ್ಲಿ ಬೇಟೆಯಾಡುತ್ತಾ ಸಂಚರಿಸುತ್ತಿದ್ದಾಗ ಲೀಲಾಮಾತ್ರದಿಂದ ಕಾಮರೂಪಿಗಳೂ, ಶೂರರೂ ಆದ ಅನೇಕ ರಾಕ್ಷಸರನ್ನು ಸಂಹರಿಸಿದನು.॥೯॥ ಜನಸ್ಥಾನದಲ್ಲಿದ್ದ ರಾಕ್ಷಸರ ನೆಲೆಯನ್ನು ಧ್ವಂಸಮಾಡಿ, ಖರ-ದೂಷಣರನ್ನು ಸಂಹರಿಸಿದನೆಂಬ ವಾರ್ತೆಯನ್ನು ಕೇಳಿ, ರಾಕ್ಷಸರ ಅಧಿಪತಿಯಾದ ರಾವಣನು ಕುದ್ಧನಾಗಿ, ಮಾಯಾಮೃಗರೂಪವನ್ನು ಧರಿಸಿದ ಮಾರೀಚನ ಸಹಾಯದಿಂದ ಶ್ರೀರಾಮನನ್ನು ವಂಚಿಸಿ ಅವನ ಭಾರ್ಯೆಯಾದ ಜಾನಕಿಯನ್ನು ಅಪಹರಿಸಿದನು. ಸಾಧ್ವಿಯಾದ

ಆಸಸಾದ ವನೇ ಮಿತ್ರಂ ಸುಗ್ರೀವಂ ನಾಮ ವಾನರಮ್ ।
ತತಃ ಸ ವಾಲಿನಂ ಹತ್ವಾ ರಾಮಃ ಶರಪುರಂಜಯಃ ॥ ೧೨॥

ಪ್ರಾಯಚ್ಛತ್ ಕಪಿರಾಜ್ಯಂ ತತ್ ಸುಗ್ರೀವಾಯ ಮಹಾಬಲಃ ।
ಸುಗ್ರೀವೋಽಪಿ ಸಂದಿಷ್ಟಾ ಹರಯಃ ಕಾಮರೂಪಿಣಃ ॥ ೧೩॥

ದಿಕ್ಷು ಸರ್ವಾಸು ತಾಂ ದೇವೀಂ ವಿಚಿನ್ವಂತಿ ಸಹಸ್ರಶಃ ।
ಅಹಂ ಸಂಪಾತಿವಚನಾಚ್ಛತಯೋಜನಮಾಯತಮ್ ॥ ೧೪॥

ಅಸ್ಯಾ ಹೇತೋರ್ವಿಶಾಲಾಕ್ಷ್ಯಾಃ ಸಾಗರಂ ವೇಗವಾನ್ ಪ್ಲುತಃ ।
ಯಥಾರೂಪಾಂ ಯಥಾದರ್ಶಾಂ ಯಥಾಲಕ್ಷ್ಮೀಂ ಚ ನಿಶ್ಚಿತಾಮ್ ॥

ಆಶ್ವಾಸಂ ರಾಘವಸ್ಯಾಹಂ ಸೀತಾಯಾಮಾಸಾದಿತಾ ಮಯಾ ।
ವಿರರಾಮೈವಮುಕ್ತ್ವಾಸೌ ವಾಚಂ ವಾನರಪುಂಗವಃ ॥ ೧೬॥

ಜಾನಕೀ ಚಾಪಿ ತಚ್ಛ್ರುತ್ವಾ ವಿಸ್ಮಯಂ ಪರಮಂ ಗತಾ ।
ತತಃ ಸಾ ವಕ್ತ್ರಕೇಶಾಂತಾ ಸುಕೇಶೀ ಕೇಶಸಂವೃತಮ್ ।
ಉನ್ನಮ್ಯ ವದನಂ ಭೀರುಃ ಶಿಂಶಪಾಮನ್ವವೈಕ್ಷತ ॥ ೧೭॥

ನಿಶಮ್ಯ ಸೀತಾವಚನಂ ಕಪೇಶ್ಚ
ದಿಶಶ್ಚ ಸರ್ವಾಃ ಪ್ರದಿಶಶ್ಚ ವೀಕ್ಷ್ಯ ।
ಸ್ವಯಂ ಪ್ರಹರ್ಷಂ ಪರಮಂ ಜಗಾಮ
ಸರ್ವಾತ್ಮನಾ ರಾಮಮನುಸ್ಮರಂತೀ ॥ ೧೮॥

ಸಾ ತಿರ್ಯಗೂರ್ಧ್ವಂ ಚ ತಥಾಪ್ಯಧಸ್ತಾತ್
ನಿರೀಕ್ಷಮಾಣಾ ತಮಚಿಂತ್ಯಬುದ್ಧಿಮ್ ।
ದದರ್ಶ ಪಿಂಗಾಧಿಪತೇರಮಾತ್ಮಂ
ವಾತಾತ್ಮಜಂ ಸೂರ್ಯಮಿವೋದಯಸ್ಥಮ್ ॥ ೧೯॥

ಸೀತಾದೇವಿಯನ್ನು ಶ್ರೀರಾಮನು ಕಾಡಿನಲ್ಲಿ ಹುಡುಕುತ್ತಿರುವಾಗ ಸುಗ್ರೀವನೆಂಬ ವಾನರನನ್ನು ಸಂಧಿಸಿ ಅವನನ್ನು ಮಿತ್ರನಾಗಿಸಿಕೊಂಡನು. ಆನಂತರ ಶತ್ರುಗಳನ್ನು ಜಯಿಸುವ ಮಹಾಬಲಶಾಲಿಯಾದ ಶ್ರೀರಾಮನು ವಾಲಿಯನ್ನು ಸಂಹರಿಸಿ, ಮಹಾತ್ಮನಾದ ಸುಗ್ರೀವನಿಗೆ ಕಪಿಗಳ ರಾಜ್ಯವನ್ನು ವಹಿಸಿಕೊಟ್ಟನು. ಸುಗ್ರೀವನ ಆಜ್ಞೆಯಂತೆ ಕಾಮರೂಪಿಗಳಾದ ಸಾವಿರಾರು ವಾನರರು ಎಲ್ಲ ದಿಕ್ಕುಗಳಲ್ಲಿಯೂ ಆ ಸೀತೆಯನ್ನು ಹುಡುಕುತ್ತಿದ್ದಾರೆ. ॥೧೦-೧೨॥ ಸಂಪಾತಿಯ ಸೂಚನೆಯ ಮೇರೆಗೆ ನಾನು ವಿಶಾಲಾಕ್ಷಿಯಾದ ಸೀತಾದೇವಿಯನ್ನು ಹುಡುಕುವ ಸಲುವಾಗಿ ನೂರುಯೋಜನ ವಿಸ್ತಾರವಾದ ಸಮುದ್ರವನ್ನು ವೇಗವಾಗಿ ಹಾರಿದೆನು.॥೧೪॥ ಸೀತಾದೇವಿಯ ರೂಪ ಸೌಭಾಗ್ಯಗಳನ್ನು, ತೇಜೋವಿಶೇಷತೆಯನ್ನೂ,ಚಿಹ್ನೆಗಳನ್ನು ನಾನು ಶ್ರೀರಾಮನಿಂದ ತಿಳಿದುಕೊಂಡಿರುವೆನು. ಅಂಥ ಶುಭಲಕ್ಷಣಗಳುಳ್ಳ ಸೀತಾದೇವಿಯನ್ನು ನಾನು ಇಲ್ಲಿ ನೋಡಿದೆನು.ವಾನರ ಶ್ರೇಷ್ಠನಾದ ಹನುಮಂತನು ಹೀಗೆ ನುಡಿದು ಸುಮ್ಮನಾದನು.॥೧೫-೧೬॥

ಸುಮಧುರವಾಗಿ ಆ ಮಾತುಗಳನ್ನು ಕೇಳಿ ಸೀತಾದೇವಿಯು ಅತ್ಯಂತ ವಿಸ್ಮಿತಳಾದಳು. ಗುಂಗುರು ಕೂದಲುಗಳಿಂದಲೂ, ಸುಂದರವಾದ ಕೇಶರಾಶಿಯಿಂದಲೂ ಕೂಡಿದ್ದ ಭಯ ಸ್ವಭಾವದವಳಾದ ಸೀತಾದೇವಿಯು ಕೂದಲುಗಳಿಂದ ಮುಚ್ಚಿಹೋಗಿದ್ದ ತನ್ನ ಮುಖವನ್ನು ಮೇಲೆತ್ತಿ ಶಿಂಶುಪಾವೃಕ್ಷದ ಕಡೆಗೆ ನೋಡಿದಳು.॥೧೭॥ ಎಲ್ಲ ರೀತಿಯಿಂದಲೂ ಯಾವಾಗಲೂ ಶ್ರೀರಾಮನನ್ನೇ ಸ್ಮರಿಸುತ್ತಿದ್ದ ಆವಳು ಹನುಮಂತನ ಮಾತುಗಳನ್ನು ಕೇಳಿ ಎಲ್ಲ ದಿಕ್ಕುಗಳನ್ನು ನೋಡುತ್ತಾ ಪರಮಾನಂದವನ್ನು ಹೊಂದಿದಳು. ॥ ೧೮ ॥

ಶಿಂಶುಪಾವೃಕ್ಷದ ಆಕ್ಕ-ಪಕ್ಕಗಳಲ್ಲಿಯೂ, ಮೇಲ್ಭಾಗದಲ್ಲಿಯೂ, ಕೆಳಭಾಗದಲ್ಲಿಯೂ ನೋಡುತ್ತಿದ್ದ ಸೀತಾದೇವಿಯು, ಇತರರಿಂದ ಊಹಿಸಲು ಅಸಾಧ್ಯವಾದಷ್ಟು ಮಹಾಬುದ್ಧಿವಂತನಾಗಿದ್ದ, ಕಪಿರಾಜನಾದ ಸುಗ್ರೀವನಿಗೆ ಸಚಿವನಾಗಿದ್ದ, ಉದಯಾಚಲದಲ್ಲಿರುವ ಬಾಲಭಾನುವಿನಂತೆ ತೇಜೋಮಯನಾಗಿದ್ದ, ವಾಯುಪುತ್ರನಾದ ಹನುಮಂತನನ್ನು ನೋಡಿದಳು. ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಏಕತ್ರಿಂಶಃ ಸರ್ಗಃ ॥ ೩೧ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೊಂದನೆಯ ಸರ್ಗವು ಮುಗಿಯಿತು.

* * *

ಮೂವತ್ತೆರಡನೆಯ ಸರ್ಗ

ಸೀತಾದೇವಿಯ ತರ್ಕ-ವಿತರ್ಕಗಳು –

ತತಃ ಶಾಖಾಂತರೇ ಲೀನಂ ದೃಷ್ಟ್ವಾ ಚಲಿತಮಾನಸಾ ।
ವೇಪ್ಥಿತಾರ್ದ್ರನವಸ್ರಂ ತಂ ವಿದ್ಯುತ್ಸಂಘಾತಪಿಂಗಲಮ್ ॥ ೧॥

ಸಾ ದದರ್ಶ ಕಪಿಂ ತತ್ರ ಪ್ರಸ್ಥಿತಂ ಪ್ರಿಯವಾದಿನಮ್ ।
ಪುಲ್ಲಾಶೋಕೋತ್ಕರಾಭಾಸಂ ತಪ್ತಚಾಮೀಕರೇಕ್ಷಣಮ್ ॥ ೨॥

ಮೈಥಿಲೀ ಚಿಂತಯಾಮಾಸ ವಿಸ್ಮಯಂ ಹರಮಂ ಗತಾ ।
ಅಹೋ ಭೀಮಮಿದಂ ರೂಪಂ ವಾನರಸ್ಯ ದುರಾಸದಮ್ ॥ ೩॥

ದುರ್ನಿರೀಕ್ಷ್ಯಮಿತಿ ಜ್ಞಾತ್ವಾ ಪುನರೇವ ಮುಮೋಹ ಸಾ ।
ವಿಲಲಾಪ ಭೃಶಂ ಸೀತಾ ಕರುಣಂ ಭಯಮೋಹಿತಾ ॥ ೪॥

ರಾಮ ರಾಮೇತಿ ದುಃಖಾರ್ತಾ ಲಕ್ಷ್ಮಣೇತಿ ಚ ಭಾಮಿನೀ ।
ರುರೋದ ಬಹುಧಾ ಸೀತಾ ಮಂದಂ ಮಂದಸ್ವರಾ ಸತೀ ॥ ೫॥

ಸಾ ತಂ ದೃಷ್ಟ್ವಾ ಹರಿಶ್ರೇಷ್ಠಂ ವಿನೀತವದುಪಸ್ಥಿತಮ್ ।
ಮೈಥಿಲೀ ಚಿಂತಯಾಮಾಸ ಸ್ವಪ್ನೋಯಮಿತಿ ಭಾಮಿನೀ ॥ ೬॥

ಸಾ ವೀಕ್ಷಮಾಣಾ ಪ್ಲವಗಭುಗ್ನ ವಕ್ತ್ರಂ
ಶಾಖಾಮೃಗೇಂದ್ರಸ್ಯ ಯಥೋಕ್ತಕಾರಮ್ ।
ದದರ್ಶ ಪಿಂಗಾಧಿಪತೇರಮಾತ್ಯಂ
ವಾತಾತ್ಮಜಂ ಬುದ್ಧಿಮತಾಂ ವರಿಷ್ಠಮ್ ॥ ೭॥

ಸಾ ತಂ ಸಮಿಕ್ಷ್ಯೈವ ಭೃಶಂ ವಿಸಂಜ್ಞಾ
ಗತಾಸುಕಲ್ಪೇವ ಬಭೂವ ಸೀತಾ ।
ಚಿರೇಣ ಸಂಜ್ಞಾಂ ಪ್ರತಿಲಭ್ಯ ಭೂಯೋ
ವಿಚಿಂತಯಾಮಾಸ ವಿಶಾಲನೇತ್ರಾ ॥ ೮॥

ಸ್ವಪ್ನೇ ಮಯಾಯಂ ವಿಕೃತೋಽದ್ಯ ದೃಷ್ಟಃ
ಶಾಖಾಮೃಗಃ ಶಾಸ್ತ್ರಗಣೈರ್ನಿಷಿದ್ಧಃ ।
ಸ್ವಸ್ತ್ಯಸ್ತು ರಾಮಾಯ ಸಲಕ್ಷ್ಮಣಾಯ
ತಥಾ ಪಿತುರ್ಮೇ ಜನಕಸ್ಯ ರಾಜ್ಞಃ ॥ ೯॥

ಅನಂತರ ಸೀತಾದೇವಿಯು ರೆಂಬೆಗಳ ಮಧ್ಯದಲ್ಲಿ ಅಡಗಿಕೊಂಡಿದ್ದ ಹನುಮಂತನನ್ನು ನೋಡಿದಳು. ಅವನು ಆಗ ಬೆಳುಪಾದ ವಸ್ತ್ರವನ್ನುಟ್ಟಿದ್ದನು. ಮಿಂಚಿನ ಸಮೂಹದಂತೆ ಪಿಂಗಳ ವರ್ಣದವನಾಗಿದ್ದನು. ವಿನಯಶೀಲನಾಗಿ ಪ್ರಿಯವಾದ ಮಾತುಗಳನ್ನಾಡುತ್ತಿದ್ದನು. ಪುಷ್ಪಭರಿತವಾದ ಅಶೋಕ ವೃಕ್ಷದಂತೆ ಕೋಪಾಯಮಾನವಾಗಿದ್ದನು. ಅವನ ಕಣ್ಣುಗಳು ಪುಟಕ್ಕೆ ಹಾಕಿದ ಚಿನ್ನದಂತೆ ಫಳಫಳಿಸುತ್ತಿದ್ದವು. ಅಂತಹ ಸುಂದರಕಾಯನಾದ ಹನುಮಂತನನ್ನು ನೋಡಿದೊಡನೆ ಸೀತಾದೇವಿಯ ಮನಸ್ಸಿನಲ್ಲಿ ಕುತೂಹಲ ವುಂಟಾಯಿತು. ॥೧-೨॥ ಮತ್ತೆ ಮೈಥಿಲಿಯು ಮರದ ಮೇಲೆ ವಿನಯದಿಂದ ಕುಳಿತಿರುವ ಕಪಿವರನನ್ನು ನೋಡಿ, ಹೆಚ್ಚಾದ ಆಶ್ಚರ್ಯಪಟ್ಟು ಚಿಂತಿಸತೊಡಗಿದಳು. ॥೩॥

ಆಹಾ! ಈ ವಾನರನ ರೂಪವು ಎಷ್ಟು ಆಶ್ಚರ್ಯವಾಗಿದೆ. ಇದು ಭಯಂಕರವೂ, ಬಳಿಗೆ ಹೋಗಲೂ, ನೋಡಲೂ ಅಸಾಧ್ಯವಾಗಿದೆ.ಹೀಗೆ ಭಾವಿಸಿ ಸೀತಾದೇವಿಯು ಪುನಃ ಮೋಹಿತಳಾದಳು.॥೪॥ ಭಯಮೋಹಿತಳೂ, ದುಃಖಪೀಡಿತಳೂ ಆದ ಸೀತೆಯು ಅತಿದೀನಳಾಗಿ ರಾಮಾ! ರಾಮಾ!! ಲಕ್ಷ್ಮಣಾ! ಎಂದು ವಿಲಾಪಿಸತೊಡಗಿದಳು.॥೫॥ ಸಾಧ್ವಿಯಾದ ಸೀತೆಯು ಸಣ್ಣ ಸ್ವರದಿಂದ (ರಾಕ್ಷಸಿಯರು ಕೇಳದಂತೆ) ಮೆಲ್ಲಗೆ ಬಹಳವಾಗಿ ಅತ್ತಳು. ವಿನಮ್ರಮೂರ್ತಿಯಂತಿದ್ದ ಆ ಹರಿಶ್ರೇಷ್ಠನಾದ ಹನುಮಂತನನ್ನು ನೋಡಿ 'ಇದೇನು ಸ್ವಪ್ನವಿರಬಹುದೇ'? ಎಂದು ಚಿಂತಿಸತೊಡಗಿದಳು.॥೬॥

ಅವಳು ಆಕಡೆ-ಈಕಡೆ ನೋಡಿ – ದಪ್ಪವಾಗಿದ್ದು ವಕ್ರವಾದ ಮುಖವುಳ್ಳವನೂ, ಪಿಂಗಳ ಕಣ್ಣಿನ ಸುಗ್ರೀವನಿಗೆ ಮಂತ್ರಿಯೂ, ಆಜ್ಞಾನುವರ್ತಿಯೂ, ಅತ್ಯಂತ ಶ್ಲಾಘನೀಯನೂ, ಬುದ್ಧಿವಂತರಲ್ಲಿ ಶ್ರೇಷ್ಠನೂ, ವಾಯುಪುತ್ರನೂ ಆದ ಕಪಿಶ್ರೇಷ್ಠ ಹನುಮಂತನನ್ನು ಪನಃ-ಪುನಃ ನೋಡಿದಳು.॥೭॥ ನೊಡುತ್ತಿರುವಂತೆ ರಾವಣನೇ ಕಪಿರೂಪದಿಂದ ಬಂದಿರಬಹುದೆಂದು ಭಾವಿಸಿ ಮೂರ್ಛೆಹೊಂದಿ ಮೃತಪ್ರಾಯಳಾದಳು. ಸ್ವಲ್ಪ ಹೊತ್ತಿನಲ್ಲಿ ಎಚ್ಚರಗೊಂಡು ಮರಳಿ ಚಿಂತಿಸತೊಡಗಿದಳು–॥೮॥ ನಾನು ಕನಸಿನಲ್ಲಿ ವಿಕೃತಾಕಾರದಿಂದ ಇರುವ ಒಂದು ವಾನರನನ್ನು ನೋಡಿದೆ. ''ಸ್ವಪ್ನದಲ್ಲಿ ವಾನರನನ್ನು ನೋಡುವುದು ಒಳ್ಳೆಯದಲ್ಲ'' ಎಂದು ಸ್ವಪ್ನಶಾಸ್ತ್ರದಲ್ಲಿ ಹೇಳಿದೆ. ಈ ದುಃಸ್ವಪ್ನದಿಂದ ಯಾರಿಗೆ ಆಪತ್ತು ಕಾದಿದೆಯೋ ತಿಳಿಯದು. ಶ್ರೀರಾಮನಿಗೆ, ಲಕ್ಷ್ಮಣನಿಗೆ, ನನ್ನ ತಂದೆಯಾದ ಜನಕನಿಗೆ, ನನಗೂ; ಹೀಗೆ ಯಾರಿಗೂ ಈ ಸ್ವಪ್ನ ಪ್ರಭಾವವು ತಟ್ಟದಿರಲಿ. ಎಲ್ಲರಿಗೆ ಮಂಗಳವೇ ಆಗಲೀ. ॥೯॥

ಸ್ವಪ್ನೋ ನ ಹಿ ನಾಯಂ ನ ಹಿ ಮೇಽ ಸ್ತಿ ನಿದ್ರಾ
ಶೋಕೇನ ದುಃಖೇನ ಚ ಪೀಡಿತಾಯಾಃ ।
ಸುಖಂ ಹಿ ಮೇ ನಾಸ್ತಿ ಯತೋಽ ಸ್ಮಿ ಹೀನಾ
ತೇನೇಂದುಪೂರ್ಣಪ್ರತಿಮಾನನೇನ ॥ ೧೦॥

ರಾಮೇತಿ ರಾಮೇತಿ ಸದೈವ ಬುದ್ಧ್ಯಾ
ವಿಚಿಂತ್ಯ ವಾಚಾ ಬ್ರುವತೀ ತಮೇವ ।
ತಸ್ಯಾನುರೂಪಾಂ ಚ ಕಥಾಂ ತಮರ್ಥಮ್
ಏವಂ ಪ್ರಪಶ್ಯಾಮಿ ತಥಾ ಶೃಣೋಮಿ ॥ ೧೧॥

ಅಹಂ ಹಿ ತಸ್ಯಾದ್ಯ ಮನೋಭವೇನ
ಸಂಪೀಡಿತಾ ತದ್ಗತಸರ್ವಭಾವಾ ।
ವಿಚಿಂತಯಂತೀ ಸತತಂ ತಮೇವ
ತಮೇವ ಪಶ್ಯಾಮಿ ತಥಾ ಶೃಣೋಮಿ ॥ ೧೨॥

ಮನೋರಥಃ ಸ್ಯಾದಿತಿ ಚಿಂತಯಾಮಿ
ತಥಾಪಿ ಬುದ್ಧ್ಯಾ ಚ ವಿತರ್ಕಯಾಮಿ ।
ಕಿಂ ಕಾರಣಂ ತಸ್ಯ ಹಿ ನಾಸ್ತಿ ರೂಪಂ
ಸುದುಃಖರೂಪಶ್ಚ ವದತ್ಯಯಂ ಮಾಮ್ ॥ ೧೩॥

ನಮೋಽಸ್ತು ವಾಚಸ್ಪತಯೇ ಸವಜ್ರಿಣೇ
ಸ್ವಯಂಭುವೇ ಚೈವ ಹುತಾಶನಾಯ ಚ ।
ಅನೇನ ಚೋಕ್ತಂ ಯದಿದಂ ಮಮಾಗ್ರತೋ
ವನೌಕಸಾ ತಚ್ಚ ತಥಾಸ್ತು ನಾನ್ಯಥಾ ॥ ೧೪॥

ಕ್ಷಣಕಾಲ ಯೋಚಿಸಿ ಸೀತೆಯು ಪುನಃ ಅಂದುಕೊಂಡಳು. ಇದು ಖಂಡಿತವಾಗಿ ಸ್ವಪ್ನವಲ್ಲ. ಏಕೆಂದರೆ ನಿದ್ದೆ ಬಂದರಲ್ಲವೇ ಕನಸು ಕಾಣುವುದು? ಶೋಕ-ದುಃಖಪೀಡಿತಳಾಗಿರುವ ನನಗೆ ನಿದ್ದೆ ಎಲ್ಲಿಂದ ಬಂತು? ಪೂರ್ಣಿಂದು ಸದೃಶವಾದ ಮುಖವುಳ್ಳ ಶ್ರೀರಾಮನಿಂದ ದೂರವಿರುವ ನನಗೆ ಸುಖವೂ ಇಲ್ಲ, ನಿದ್ದೆಯೂ ಇಲ್ಲ.॥೧೦॥ ನಾನು ನಿರಂತರವೂ ಮನಸ್ಸಿನಲ್ಲೇ ಶ್ರೀರಾಮನನ್ನೇ ಸ್ಮರಿಸುತ್ತಾ ರಾಮಾ! ರಾಮಾ! ಎಂದು ಹೇಳುತ್ತಿದ್ದೆನೆ. ಆ ಕಾರಣದಿಂದ ಅದಕ್ಕನುರೂಪವಾಗಿ ನನಗೆ ಅವನ ಕಥೆಯೇ ಕೇಳಿ ಬರುತ್ತಿದೆ. ಅವನ ರೂಪವನ್ನೇ ನೋಡುತ್ತಿದ್ದೇನೆ.॥೧೧॥ ನಾನು ಈಗ ಶ್ರೀರಾಮ ವಿರಹದಿಂದ ಬಾಧೆಪಡುತ್ತಿದ್ದೆನೆ. ನನ್ನ ಮನಸ್ಸಿನಲ್ಲಿ ಪೂರ್ಣವಾಗಿ ರಾಮನೇ ತುಂಬಿರುವನು. ಅನವರತವೂ ಅವನ ಕುರಿತೇ ಆಲೋಚಿಸುತ್ತಿದ್ದೇನೆ. ಅದರಿಂದಾಗಿ ''ಭ್ರಮರ ಕೀಟನ್ಯಾಯ'' ದಂತೆ ನಾನು ಅವನ ರೂಪವನ್ನೇ ನೋಡುತ್ತಿದ್ದೇನೆ. ಅವನ ಕಥೆಯನ್ನೇ ಕೇಳುತ್ತಿದ್ದೇನೆ.॥೧೨॥ ಬಹುಶಃ ಇದು ನನ್ನ ಮನೋರಥವೇ ಆಗಿರಬಹುದು. ಚೆನ್ನಾಗಿ ತರ್ಕಿಸಿ ನೋಡಿದರೆ ಇದು ಮನೋರಥವು ಆಗಲಾರದು. ಏಕೆಂದರೆ ಮನೋರಥಗಳಿಗೆ ರೂಪವೇ ಇರುವುದಿಲ್ಲವಲ್ಲ! ಈ ವಾನರನು ಸ್ಪಷ್ಟವಾದ ರೂಪದಿಂದ ನನಗೆ ಪ್ರತ್ಯಕ್ಷವಾಗಿ ಕಂಡು ಬರುತ್ತಿದ್ದಾನೆ. ಅವನೇ ಮಾತಾಡಿರಬಹುದು.॥೧೩॥

ವಜ್ರಸಹಿತನಾದ ಇಂದ್ರನಿಗೆ ವಂದನೆ. ಬೃಹಸ್ಪತಿಗೆ ನಮಸ್ಕಾರಗಳು. ಬ್ರಹ್ಮ ದೇವರಿಗೆ ವಂದನೆಗಳು. ಅಗ್ನಿದೇವರಿಗೆ ಪ್ರಣಾಮಗಳು. ವನಚರನಾದ ಈ ಕಪೀಶ್ವರನು ಈಗ ಹೇಳಿದ ಮಾತುಗಳು ಸತ್ಯವಾಗಲೀ. ಸುಳ್ಳಾಗುವುದು ಬೇಡ. (ಈ ಸಂದೇಶ ವಾಹಕನಾದ ಕಪೀಶ್ವರನು ಶ್ರೀರಾಮನ ಪಕ್ಷದವನೇ ಆಗಿರಬೇಕು. ರಾವಣನ ಪಕ್ಷದವನಲ್ಲ.)॥೧೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ದ್ವಾತ್ರಿಂಶಃ ಸರ್ಗಃ ॥ ೩೨ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೆರಡನೆಯ ಸರ್ಗವು ಮುಗಿಯಿತು.

* * *

ಮೂವತ್ತಮೂರನೆಯ ಸರ್ಗ

ಸೀತೆಯು ಹನುಮಂತನಿಗೆ ತನ್ನ ಪರಿಚಯವನ್ನು ಮಾಡಿಕೊಡುತ್ತಾ ತನ್ನ ವೃತ್ತಾಂತವನ್ನು ತಿಳಿಸಿದುದು –

ಸೋಽವತೀರ್ಯ ದ್ರುಮಾತ್ತಸ್ಮಾದ್ವಿದ್ರುಮಪ್ರತಿಮಾನನಃ ।
ವಿನೀತವೇಷಃ ಕೃಪಣಃ ಪ್ರಣಿಪತ್ಯೋಪಸೃತ್ಯ ಚ ॥ ೧॥

ಹವಳದಂತೆ ಕೆಂಪಾದ ಮುಖವುಳ್ಳವನೂ, ಸಮುಚಿತ ವೇಷವುಳ್ಳವನೂ, ಸೀತೆಯ ದುಃಖಿತಿಯನ್ನು ನೋಡಿ ದೀನನಾದ ಆ ಹನುಮಂತನು ಶಿಂಶುಪಾವೃಕ್ಷದಿಂದ ಕೆಳಗಿಳಿದು* ಅವಳನ್ನು ಸಮೀಪಿಸಿ ನಮಸ್ಕರಿಸಿದನು.॥೧॥

---

* ತ್ರಿಜಟೆಯು ಹೇಳಿದ ಸ್ವಪ್ನವೃತ್ತಾಂತವನ್ನು ಕೇಳಿ ಎಲ್ಲ ರಾಕ್ಷಸ ಸ್ತ್ರೀಯರು ಹೆದರಿಕೊಂಡು ಸೀತೆಯ ಕುರಿತು ಆದರ ಭಾವವುಂಟಾಗಿ, ಸೀತೆಗೆ ಶರಣಾಗಿ ಅಲ್ಲಲ್ಲೇ ಮಲಗಿಬಿಟ್ಟರು. ಅಂತಹ ಸಮಯವನ್ನು ನೋಡಿ ಹನುಮಂತನು ಕೆಳಗಿಳಿದು ಜಿಜ್ಞಾಸುಮನಸ್ಸಿನಿಂದ ಮಾತಾಡತೊಡಗಿದನು.

ತಾಮಬ್ರವೀನ್ಮಹಾತೇಜಾ ಹನೂಮಾನ್ ಮಾರುತಾತ್ಮಜಃ ।
ಶಿರಸ್ಯಂಜಲಿಮಾಧಾಯ ಸೀತಾಂ ಮಧುರಯಾ ಗಿರಾ ॥ ೨॥

ಕಾ ನು ಪದ್ಮಪಲಾಶಾಕ್ಷಿ ಕ್ಲಿಷ್ಟಕೌಶೇಯವಾಸಿನಿ ।
ದ್ರುಮಸ್ಯ ಶಾಖಾಮಾಲಂಬ್ಯ ತಿಷ್ಠಸಿ ತ್ವಮನಿಂದಿತೇ ॥ ೩॥

ಕಿಮರ್ಥಂ ತವ ನೇತ್ರಾಭ್ಯಾಂ ವಾರಿ ಸ್ರವತಿ ಶೋಕಜಮ್ ।
ಪುಂಡರೀಕಪಲಾಶಾಭ್ಯಾಂ ವಿಪ್ರಕೀರ್ಣ ಮಿವೋದಕಮ್ ॥ ೪॥

ಸುರಾಣಾಮಸುರಾಣಾಂ ವಾ ನಾಗಗಂದರ್ವರಕ್ಷಸಾಮ್ ।
ಯಕ್ಷಾಣಾಂ ಕಿನರಾಣಾಂ ವಾ ಕಾ ತ್ವಂ ಭವಸಿ ಶೋಭನೇ ॥ ೫॥

ಕಾ ತ್ವಂ ಭವಸಿ ರುದ್ರಾಣಾಂ ಮರುತಾಂ ವಾ ವರಾನನೇ ।
ವಸೂನಾಂ ವಾ ವರಾರೋಹೇ ದೇವತಾ ಪ್ರತಿಭಾಸಿ ಮೇ ॥ ೬॥

ಕಿಂ ನು ಚಂದ್ರಮಸಾ ಹೀನಾ ಪತಿತಾ ವಿಬುಧಾಲಯಾತ್ ।
ರೋಹಿಣೀಂ ಜ್ಯೋತಿಷಾಂ ಶ್ರೇಷ್ಠಾ ಶ್ರೇಷ್ಠಾ ಸರ್ವಗುಣಾನ್ವಿತಾ ॥ ೭॥

ಕಾ ತ್ವಂ ಭವಸಿ ಕಲ್ಯಾಣಿ ತ್ವಮನಿಂದಿತಲೋಚನೇ ।
ಕೋಽಸ್ಯಾ ಯದಿ ವಾ ಮೋಹಾದ್ಧರ್ತಾರಮಿತೇಕ್ಷಣೇ ॥ ೮॥

ವಸಿಷ್ಠಂ ಕೋಪಯಿತ್ವಾ ತ್ವಂ ವಾಸಿ ಕಲ್ಯಾಣ್ಯರುಂಧತೀ ।
ಕೋ ನು ಪುತ್ರಃ ಪಿತಾ ಭ್ರಾತಾ ಭರ್ತಾ ವಾ ತೇ ಸುಮಧ್ಯಮೇ ॥ ೯॥

ಅಸ್ಯಾಲ್ಲೋಕಾದಮುಂ ಲೋಕಂ ಗತಂ ತ್ವಮನುಶೋಚಸಿ ।
ರೋದನಾದತಿನಿಃಶ್ವಾಸಾದ್ಭೂಮಿಸಂಸ್ಪರ್ಶನಾದಪಿ ॥ ೧೦॥

ನ ತ್ವಾಂ ದೇವೀಮಹಂ ಮನ್ಯೇ ರಾಜ್ಞಃ ಸಂಜ್ಞಾವಧಾರಣಾತ್ ।
ವ್ಯಂಜನಾನಿ ಚ ತೇ ಯಾನಿ ಲಕ್ಷಣಾನಿ ಚ ಲಕ್ಷಯೇ ॥ ೧೧॥

ಮಹಿಷೀ ಭೂಮಿಪಾಲಸ್ಯ ರಾಜಕನ್ಯಾಸಿ ಮೇ ಮತಾ ।
ರಾವಣೇನ ಜನಸ್ಥಾನಾದ್ಬಲಾದಪಹೃತಾ ಯದಿ ॥ ೧೨॥

ಸೀತಾ ತ್ವಮಸಿ ಭದ್ರಂ ತೇ ತನ್ಮಮಾಚಕ್ಷ್ವ ಪೃಚ್ಛತಃ ।
ಯಥಾ ಹಿ ತವ ವೈ ದೈನ್ಯಂ ರೂಪಂ ಚಾಪ್ರತಿಮಂ ಭುವಿ ॥ ೧೩॥

ಮಹಾತೇಜಸ್ವಿಯೂ, ವಾಯುಸುತನೂ ಆದ ಮಾರುತಿಯು ಕೈಗಳನ್ನು ಜೋಡಿಸಿ, ಶಿರಸಾವಂದಿಸುತ್ತಾ ಆ ಸೀತಾದೇವಿಯ ಬಳಿ ಮಧುರ ವಚನಗಳನ್ನು ಹೇಳಿದನು– ॥೨॥

ಪದ್ಮಪತ್ರದಂತೆ ವಿಶಾಲನೇತ್ರವುಳ್ಳ ಎಲೈ ದೇವಿಯೇ! ಮಲಿನವಸ್ತ್ರವನ್ನುಟ್ಟಿರುವ ಓ ಸಾಧ್ವಿಯೇ! ವೃಕ್ಷದ ರೆಂಬೆಯನ್ನು ಹಿಡಿದು ಕೊಂಡು ನಿಂತಿರುವ ನೀನು ಯಾರು?॥೩॥ ಪದ್ಮಪತ್ರದಂತೆ ನಿನ್ನ ಕಣ್ಣುಗಳಿಂದ ದುಃಖಾಶ್ರುಗಳು ಧಾರಾಕಾರವಾಗಿ, ನಿರಂತರ ಏಕೆ ಹರಿಯುತ್ತಿವೆ?॥೪॥ ಓ ಮಂಗಳ ಪ್ರದಳೇ! ನೀನು ದಿವ್ಯ ಭೂಮಿನಿಯೋ?ಅಸುರ ಕಾಂತೆಯೋ? ನಾಗಕನ್ಯೆಯೋ? ಗಂಧರ್ವಯೋಷಿತೆಯೋ? ರಾಕ್ಷಸಸ್ತ್ರೀಯೋ? ಯಕ್ಷತರುಣಿಯೋ? ಕಿನ್ನರಸಾರಿಯೋ ನೀನುಯಾರಾಗಿರುವಿ?॥೫॥ ಸುಂದರ ಮುಖಿಯೇ! ವಿಕಾರದ ರುದ್ರರ ಪತ್ನಿಯರಲ್ಲಿ, ಸಪ್ತಮರುತ್ತರ ಪತ್ನಿಯರಲ್ಲಿ, ಅಷ್ಟವಸುಗಳ ಪತ್ನಿಯರಲ್ಲಿ ನೀನು ಯಾರಾಗಿರುವೆ? ನೀನೊಬ್ಬಳು ನನಗೆ ದೇವತೆಯಂತೆ ಭಾಸವಾಗುತ್ತಿದೆ.॥೬॥ ಶ್ರೇಷ್ಠವಾದ ಸರ್ವಗುಣಗಳಿಂದಲೂ ಕೂಡಿರುವ, ನಕ್ಷತ್ರಗಳಲ್ಲೇ ಶ್ರೇಷ್ಠಾದ ಚಂದ್ರನಿಂದ ವಿಹೀನಳಾಗಿ ಸ್ವರ್ಗದಿಂದ ಭೂಮಿಗೆ ಬಿದ್ದಿರುವ ರೋಹಿಣಿಯಾಗಿರುವೆಯಾ?॥೭॥ ಕಪ್ಪಾದ ಕಣ್ಣುಗಳುಳ್ಳ ಎಲೈ ಕಲ್ಯಾಣೀ! ಆಮ್ಮಾ ನೀನು ಯಾರು? ಕೋಪದಿಂದಲೋ, ಮೋಹದಿಂದಲೋ, ಪತಿಯಾದ ವಸಿಷ್ಠರನ್ನು ಸಿಟ್ಟಿಗೇಳಿಸಿ ಅವರಿಂದ ತಿರಸ್ಕೃತಳಾಗಿ ಬಂದಿರುವ ಮಂಗಳಮಯಿಯಾದ ಅರುಂಧತಿಯಲ್ಲ ತಾನೇ! ॥೮॥ ಎಲೈ ಸುಂದರೀ! ನೀವು ಯಾರ ಮಗಳು? ನಿಮ್ಮ ತಂದೆಯವರು ಯಾರು? ಸಹೋದರರು ಯಾರು? ಪತಿಯವರು ಯಾರು? ಪರಲೋಕಕ್ಕೆ ಹೋಗಿರುವ ಯಾರನ್ನಾದರೂ ನೆನೆಸಿಕೊಂಡು ಅಳುತ್ತಿರುವೆಯಾ?॥೯॥ ಅಳುತ್ತಿರುವುದರಿಂದಲೂ, ಬಹಳ ನಿಟ್ಟುಸಿರು ಬಿಡುವುದರಿಂದಲೂ, ನೆಲವನ್ನು ಮುಟ್ಟಿ ಕುಳಿತಿರುವುದರಿಂದಲೂ, ಮಹಾರಾಣಿಯರಲ್ಲಿರಬೇಕಾದ ರಾಜ ಚಿನ್ಹೆಗಳನ್ನು ಹೊಂದಿರುವುದರಿಂದಲೂ, ನಿನ್ನನ್ನು ದೇವತೆಯೆಂದು ನಾನು ಭಾವಿಸುವುದಿಲ್ಲ.॥೧೦॥ ಉತ್ತಮ ಸ್ತ್ರೀತ್ವವನ್ನು ಸೂಚಿಸುವ ಶುಭಲಕ್ಷಣಗಳನ್ನು ನಾನು ನಿನ್ನಲ್ಲಿ ನೋಡುತ್ತಿದ್ದೇನೆ.ಆದರಿಂದ ನೀನು ರಾಜಕನ್ಯೆಯಾಗಿದ್ದು ಭೂಪಾಲನೊಬ್ಬನ ಪಟ್ಟದರಸಿಯೆಂದೇ ನಾನು ಭಾವಿಸುತ್ತೇನೆ.॥೧೧॥ ಜನಸ್ಥಾನದಲ್ಲಿ ರಾವಣನಿಂದ ಬಲವಂತವಾಗಿ ಅಪಹರಿಸಿ ತಂದಿರುವ ಸೀತಾದೇವಿಯೇ ನೀನಾಗಿದ್ದರೆ ನಿನಗೆ ಮಂಗಳವಾಗಲೀ. 'ನನ್ನ ಪ್ರಶ್ನೆಗಳಿಗೆ ಉತ್ತರಿಸುವ ಕೃಪೆಮಾಡು.॥೧೨॥ ನಿನ್ನ ಲೋಕೋತ್ತರ ರೂಪವನ್ನು, ದೈನ್ಯಸ್ಥಿತಿಯನ್ನು, ತಾಪಸವೇಷವನ್ನು, ನೋಡಿದರೆ ನೀನು ನಿಶ್ಚಯವಾಗಿಯೂ ಶ್ರೀರಾಮನ ಪತ್ನಿಯೇ ಆಗಿರುವೆ ಎಂಬುದು ನನ್ನ ನಿಶ್ಚಯವು.॥೧೩॥

ಸೀತಾದೇವಿಯು ಹನುಮಂತನ ಮಾತುಗಳನ್ನು ಕೇಳಿ, ಶ್ರೀರಾಮನಾಮ ಸಂಕೀರ್ತನೆಯ ಶ್ರವಣದಿಂದ ಪರಮ

ತಪಸಾ ಭಾವಿತೋ ವೇಷ್ಟಂ ರಾಮಮಹೀ ಧ್ರುವಮ್ ।
ಸಾ ತಸ್ಯ ವಚನಂ ಶ್ರುತ್ವಾ ರಾಮಕೀರ್ತನಹರ್ಷಿತಾ ॥ ೧೪॥

ಉವಾಚ ವಾಕ್ಯಂ ವೈದೇಹೀ ಹನುಮಂತಂ ದುರಾಶ್ರಿತಮ್ ।
ಪೃಥಿವ್ಯಾಂ ರಾಜಸಿಂಹಾನಾಂ ಮುಖ್ಯಸ್ಯ ವಿದಿತಾತ್ಮನಃ ॥ ೧೫॥

ಸ್ನುಷಾ ದಶರಥಸ್ಯಾಹಂ ಶತ್ರುಸೈನ್ಯಪ್ರತಾಪಿನಃ ।
ದುಹಿತಾ ಜನಕಸ್ಯಾಹಂ ವೈದೇಹಸ್ಯ ಮಹಾತ್ಮನಃ ॥ ೧೬॥

ಸೀತಾ ಚ ನಾಮ ನಾಮ್ನಾಹಂ ಭಾರ್ಯಾ ರಾಮಸ್ಯ ಧೀಮತಃ ।
ಸಮಾ ದ್ವಾದಶ ತತ್ರಾಹಂ ರಾಘವಸ್ಯ ನಿವೇಶನೇ ॥ ೧೭॥

ಭುಂಜಾನಾ ಮಾನುಷಾನ್ ಭೋಗಾನ್ ಸರ್ವಕಾಮಸಮೃದ್ಧಿನೀ।
ತತಸ್ತ್ರಯೋದಶೇ ವರ್ಷೇ ರಾಜ್ಯೇ ಚೇಕ್ಷ್ವಾಕುನಂದನಮ್ ॥ ೧೮॥

ಅಭಿಷೇಚಯಿತುಂ ರಾಜಾ ಸೋಪಾಧ್ಯಾಯಃ ಪ್ರಚಕ್ರಮೇ ।
ತಸ್ಮಿನ್ ಸಂಭ್ರಿಯಮಾಣೇ ತು ರಾಘವಸ್ಯಾಭಿಷೇಚನೇ ॥ ೧೯॥

ಕೈಕೇಯೀ ನಾಮ ಭರ್ತಾರಮಿದಂ ವಚನಮಬ್ರವೀತ್ ।
ನ ಪಿಬೇಯಂ ನ ಖಾದೇಯಂ ಪ್ರತ್ಯಹಂ ಮಮ ಭೋಜನಮ್ ॥

ಏಷ ಮೇ ಜೀವಿತಸ್ಯಾಂತೋ ರಾಮೋ ಯದ್ಯಭಿಷಿಚ್ಯತೇ ।
ಯತ್ತದುಕ್ತಂ ತ್ವಯಾ ವಾಕ್ಯಂ ಪ್ರೀತ್ಯಾ ನೃಪತಿಸತ್ತಮ ॥ ೨೧॥

ತಚ್ಚೇನ್ನ ವಿತಥಂ ಕಾರ್ಯಂ ವನಂ ಗಚ್ಛತು ರಾಘವಃ ।
ಸ ರಾಜಾ ಸತ್ಯವಾಗ್ದೇವ್ಯಾ ವರದಾನಮನುಸ್ಮರನ್ ॥ ೨೨॥

ಮುಮೋಚ ವಚನಂ ಶ್ರುತ್ವಾ ಕೈಕೇಯ್ಯಾ ಕ್ರೂರಮಪ್ರಿಯಮ್ ।
ತತಸ್ತು ಸ್ತುವತೋ ರಾಜಾ ಸತ್ಯೇ ಧರ್ಮೇ ವ್ಯವಸ್ಥಿತಃ ॥ ೨೩॥

ಜ್ಯೇಷ್ಠಂ ಯಶಸ್ಕಿನಂ ಪುತ್ರಂ ರುದನ್ ರಾಜ್ಯಮಯಾಚತ ।
ಸ ಪಿತುರ್ವಚನಂ ಶ್ರೇಷ್ಠಾನ್ ಶ್ರೇಷ್ಠಾಭಿಷೇಕಾತ್ ಪರಂ ಪ್ರಿಯಮ್ ॥ ೨೪॥

ಮನಸಾ ಪೂರ್ವಮಾಸಾದ್ಯ ವಾಚಾ ಪ್ರತಿಗೃಹೀತವಾನ್ ।
ದದ್ಯಾನ್ನ ಪ್ರತಿಗೃಹ್ಣೀಯಾನ್ನ ಬ್ರೂಯಾತ್ ಕಿಂಚಿದಪ್ರಿಯಮ್ ॥ ೨೫॥

ಅಪಿ ಜೀವಿತಹೇತೋರ್ವಾ ರಾಮಃ ಸತ್ಯಪರಾಕ್ರಮಃ ।
ನ ವಿಹಾಯೋತ್ತರೀಯಾಣಿ ಮಹಾರ್ಹಾಣಿ ಮಹಾಯಶಾಃ ॥ ೨೬॥

ಹರ್ಷಿತಳಾಗಿ ಶಿಂಶುಪಾವೃಕ್ಷದ ಬುಡದಲ್ಲಿದ್ದ ಮಾರುತಿಗೆ ಹೀಗೆ ಹೇಳಿದಳು–॥೧೪॥

ಪೃಥಿವಿಯಲ್ಲಿರುವ ರಾಜಶ್ರೇಷ್ಠರಲ್ಲಿ ಅಗ್ರಗಣ್ಯರಾದ, ಸುಪ್ರಸಿದ್ಧರಾದ, ಶತ್ರುಸೈನ್ಯವನ್ನು ನಾಶಮಾಡುತ್ತಿದ್ದ ದಶರಥ ರಾಜರ ಸೊಸೆಯು ನಾನು.॥೧೫॥ ಮಹಾತ್ಮನೂ, ವಿದೇಹ ಪಟ್ಟಿಯೂ ಆದ ಜನಕನ ಮಗಳು ನಾನು. ನನ್ನನ್ನು 'ಸೀತಾ' ಎಂದು ಹೇಳುತ್ತಾರೆ. ನಾನು ಧೀಮಂತನಾದ ಶ್ರೀರಾಮನ ಭಾರ್ಯೆಯು.॥೧೬॥ ಶ್ರೀರಾಘವನ ಅರಮನೆಯಲ್ಲಿ ನಾನು ಹನ್ನೆರಡು ವರ್ಷಗಳ ಕಾಲ ಮನುಷ್ಯ ಸಂಬಂಧವಾದ ಭೋಗಗಳೆಲ್ಲವನ್ನು ಅನುಭವಿಸುತ್ತಾ ಸರ್ವಕಾಮನೆಗಳ ಸಮೃದ್ಧಿಯನ್ನು ಹೊಂದಿ ಸುಖವಾಗಿದ್ದೆನು.॥೧೭॥

ಆನಂತರ ಹದಿಮೂರನೆಯ ವರ್ಷದಲ್ಲಿ ಇಕ್ಷ್ವಾಕು ಕುಲನಂದನನಾದ ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲು ದಶರಥ ಮಹಾರಾಜನು ಕುಲಪುರೋಹಿತರೊಡನೆ ಸಿದ್ಧತೆ ನಡೆಸಿದನು. ॥೧೮॥ ಆ ಶ್ರೀರಾಮನ ಪಟ್ಟಾಭಿಷೇಕದ ಸಲುವಾಗಿ ಸಕಲ ಸಾಮಗ್ರಿಗಳನ್ನು ಸಂಗ್ರಹಿಸುತ್ತಿರುವಾಗ ಕೈಕೇಯಿಯೆಂಬ ದಶರಥನ ರಾಣಿಯು ಹೀಗೆ ಹೇಳಿದಳು.॥೧೯॥

"ಮಹಾರಾಜಾ! ನೀನು ರಾಮನಿಗೇನಾದರೂ ಪಟ್ಟಾಭಿಷೇಕ ಮಾಡಿದ್ದೇಯಾದರೆ- ಈಕ್ಷಣದಿಂದ ನಾನು ಜೀವಿಸಿ ಇರುವತನಕ ಊಟವನ್ನು ಮಾಡುವುದಿಲ್ಲ. ನೀರನ್ನು ಮುಟ್ಟುವುದಿಲ್ಲ. ನೃಪತಿಶ್ರೇಷ್ಠನೇ! ನನ್ನ ಮೇಲಿನ ಪ್ರೀತಿಯಿಂದ ಹಿಂದೆ ನೀನು ವಾಗ್ದಾನಮಾಡುರುವಿ. ಆ ವರವು ಸುಳ್ಳಾಗದಿರಬೇಕಾದರೆ ರಾಮನು ಈಗಲೇ ಕಾಡಿಗೆ ಹೋಗಲೀ."॥೨೦-೨೧॥

ಸತ್ಯವಾಕ್ಯಪರಿಪಾಲಿತನಾದ ದಶರಥ ಮಹಾರಾಜನು ಕೈಕೇಯಿಗೆ ತಾನು ಕೊಟ್ಟಿದ್ದ ವರವನ್ನು ಸ್ಮರಿಸಿಕೊಳ್ಳುತ್ತಾ ಅವಳ ಕರ್ಣಕಠೋರವೂ, ಅಪ್ರಿಯವೂ ಆದ ಮಾತನ್ನು ಕೇಳಿ ಮೂರ್ಛಿತನಾದನು.॥೨೨॥ ಸತ್ಯ-ಧರ್ಮಗಳಲ್ಲಿಯೇ ನಿರತನಾಗಿದ್ದು, ವೃದ್ಧನಾದ ಆ ರಾಜನು ಆಳುತ್ತಳುತ್ತಾ ಭರತನಿಗೆ ರಾಜ್ಯವನ್ನು ಬಿಟ್ಟುಕೊಡುವಂತೆ, ಯಶೋವಂತನಾದ ಶ್ರೀರಾಮನನ್ನು ಪ್ರಾರ್ಥಿಸಿದನು.॥೨೩॥ ಸಕಲಸದ್ಗುಣ ಸಂಪನ್ನನಾದ ಶ್ರೀರಾಮಚಂದ್ರನು ಅಭಿಷೇಕಕ್ಕಿಂತಲೂ ಪ್ರಿಯವಾದ ತಂದೆಯ ಮಾತನ್ನು ಪೂರ್ಣ ಮನಸ್ಸಿನಿಂದ ಅಂಗೀಕರಿಸಿ, ಅನಂತರ ಮಾತಿನಿಂದಲೂ ಅರಣ್ಯಕ್ಕೆ ಹೋಗುವುದಾಗಿ ಹೇಳಿದನು.॥೨೪॥ ಸತ್ಯ ಪರಾಕ್ರಮಿಯಾದ ನನ್ನ ಪತಿಯು ಯಾವಾಗಲೂ ದಾನಕೊಡತಕ್ಕವನೇ ಹೊರತು ಪಡೆಯುವವನಲ್ಲ. ಸತ್ಯವನ್ನು ಹೇಳತಕ್ಕವನೇ ಹೊರತು, ಪ್ರಾಣಗಳು ಹೋಗುವಸಂದರ್ಭ ಒದಗಿಬಂದರೂ, ಪ್ರಾಣಗಳನ್ನು ಉಳಿಸಿಕೊಳ್ಳುವ ಸಲುವಾಗಿ ಅಪ್ರಿಯವಾದ ಮಾತನ್ನು ಆಡುವವನಲ್ಲ.॥೨೫॥

ಆನಂತರ ಮಹಾಯಶಸ್ಕಿಯಾದ ಶ್ರೀರಾಮನು ಧರಿಸಿದ್ದ ಅಮೂಲ್ಯವಾದ ವಸ್ತ್ರಗಳನ್ನೂ, ಆಭರಣಗಳನ್ನೂ ಪರಿತ್ಯಜಿಸಿ, ವಲ್ಕಲಗಳನ್ನು ಧರಿಸಿ, ಮನಃಪೂರ್ವಕವಾಗಿ ರಾಜ್ಯವನ್ನು ತ್ಯಜಿಸಿ,

ವಿಸೃಜ್ಯ ಮನಸಾ ರಾಜ್ಯಂ ಜನಸ್ಯೈ ಮಾಂ ಸಮಾಧಿತ್ಸ್ ।
ಸಾಹಂ ತಸ್ಯಾಗ್ರತಸ್ತೂರ್ಣಂ ಪ್ರಸ್ಥಿತಾ ವನಚಾರಿಣೇ ॥ ೨೭॥

ನ ಹಿ ಮೇ ತೇನ ಹೀನಾಯಾ ವಾಸಃ ಸ್ವರ್ಗೇಽಪಿ ರೋಚತೇ ।
ಪ್ರಾಗೇವ ತು ಮಹಾಭಾಗಃ ಸೌಮಿತ್ರಿರ್ಮಿತ್ರನಂದನಃ ॥ ೨೮॥

ಪೂರ್ವಜಸ್ಯಾನುಯಾತ್ಯರ್ಥೇ ದ್ರುಮಚೀರೈರಲಂಕೃತಃ ।
ತೇ ವಯಂ ಭರ್ತುರಾದೇಶಂ ಬಹುಮಾನ್ಯ ದೃಢವ್ರತಾಃ ॥ ೨೯॥

ಪ್ರವಿಷ್ಟಾಃ ಸ್ಮ ಪುರಾಽದೃಷ್ಟಂ ವನಂ ಗಂಭೀರದರ್ಶನಮ್ ।
ವಸತೋ ದಂಡಕಾರಣ್ಯೇ ತಸ್ಯಾಹಮಮಿತೌಜಸಃ ॥ ೩೦॥

ರಕ್ಷಸಾಪಹೃತಾ ಭಾರ್ಯಾ ರಾವಣೇನ ದುರಾತ್ಮನಾ ।
ದ್ವೌ ಮಾಸೌ ತೇನ ಮೇ ಕಾಲೋ ಜೀವಿತಸ್ಯಾವಶೇಷಿತಃ ॥
ಊರ್ಧ್ವಂ ದ್ವಾಭ್ಯಾಂತುಮಾಸಾಭ್ಯಾಂ ತತಸ್ಯಕ್ಷ್ಯಾಮಿ ಜೀವಿತಮ್ ॥

ತನ್ನ ತಾಯಿಯಾದ ಕೌಸಲ್ಯಾದೇವಿಗೆ ನನ್ನನ್ನು ಒಪ್ಪಿಸಿದನು.॥೨೬॥ ಶ್ರೀರಾಮನ ಸಾಹಚರ್ಯವಿಲ್ಲದೆ ಸ್ವರ್ಗವಾಸವೂ ಕೂಡ ನನಗೆ ರುಚಿಸದು. ಆದರಿಂದ ಕೂಡಲೇ ವನವಾಸಕ್ಕೆ ಸಿದ್ಧಳಾಗಿ ಅವನಿಗಿಂತ ಮುಂದಾಗಿ ಅರಣ್ಯಕ್ಕೆ ಪ್ರಯಾಣ ಹೊರಟೆನು.॥೨೭॥ ಮಹಾಭಾಗ್ಯಶಾಲಿಯೂ, ಮಿತ್ರರಿಗೆ ಸಂತೋಷವನ್ನುಂಟು ಮಾಡುವವನೂ ಆದ ಲಕ್ಷ್ಮಣನೂ ಶ್ರೀರಾಮನನ್ನು ಅನುಸರಿಸಿ ಕಾಡಿಗೆ ಹೋಗಲು ಅವನಿಗಿಂತ ಮುಂದಾಗಿಯೇ ನಾರುಮಡಿಯನ್ನು ಧರಿಸಿ ಸನ್ನದ್ಧನಾದನು.॥೨೮॥

ಹೀಗೆ ದೃಢವ್ರತರಾದ ನಾವು ಮೂವರೂ ನಮ್ಮೆಲ್ಲರಿಗೂ ಸ್ವಾಮಿಯಾಗಿದ್ದ ದಶರಥ ಮಹಾರಾಜನ ಆದೇಶವನ್ನು ಗೌರವಿಸಿ, ಹಿಂದೆಂದೂ ಕಾಣದಿದ್ದ ಭಯಂಕರವಾದ ಅರಣ್ಯಕ್ಕೆ ಬಂದೆವು.॥೨೯॥ ದಂಡಕಾರಣ್ಯದಲ್ಲಿ ನಾವು ಮೂವರೂ ವಾಸಮಾಡುತ್ತಿದ್ದಾಗ ಅಮಿತ ಪರಾಕ್ರಮಿಯಾದ ಶ್ರೀರಾಮನ ಪತ್ನಿಯಾದ ಭಾರ್ಯೆಯಾದ ನನ್ನನ್ನು ದುರಾತ್ಮನಾದ ರಾವಣನು ಅಪಹರಿಸಿಕೊಂಡುಬಂದು ಇಲ್ಲಿರಿಸಿದನು.॥೩೦॥ ರಾವಣನು ನನಗೆ ಬದುಕಿರಲು ಎರಡು ತಿಂಗಳ ಅವಧಿಯನ್ನು ಕೊಟ್ಟಿರುವನು. ಆ ಅವಧಿ ಕಳೆದುಹೋದೊಡನೆಯೇ ನಾನು ಈ ದೇಹವನ್ನು ಪರಿತ್ಯಜಿಸುವೆನು.॥೩೧॥

ಅತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ತ್ರಯಸ್ತ್ರಿಂಶಃ ಸರ್ಗಃ ॥ ೩೩ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತಮೂರನೆಯ ಸರ್ಗವು ಮುಗಿಯಿತು.

* * *

ಮೂವತ್ತನಾಲ್ಕನೆಯ ಸರ್ಗ

ಸೀತಾದೇವಿಯು ಹನುಮಂತನನ್ನು ಸಂದೇಹಿಸಿದುದು, ಹನುಮಂತನು ಸಮಾಧಾನಪಡಿಸುತ್ತಾ ಶ್ರೀರಾಮನ ಗುಣಗಳನ್ನು ವರ್ಣಿಸಿದುದು –

ತಸ್ಯಾಸ್ತದ್ವಚನಂ ಶ್ರುತ್ವಾ ಹನುಮಾನ್ ಹರಿಯೂಥಪಃ ।
ದುಃಖಾದ್ದುಃಖಾಭಿಭೂತಾಯಾಃ ಸಾಂತ್ವಮುತ್ತರದಬ್ರವೀತ್ ॥ ೧॥

ಅಹಂ ರಾಮಸ್ಯ ಸಂದೇಶಾದ್ದೇವಿ ದೂತಸ್ತವಾಗತಃ ।
ವೈದೇಹಿ ಕುಶಲೀ ರಾಮಸ್ತ್ವಾಂ ಚ ಕೌಶಲಮಬ್ರವೀತ್ ॥ ೨॥

ಯೋ ಬ್ರಾಹ್ಮಸ್ಯ ವೇದಾಂಶ್ಚ ವೇದ ವೇದವಿದಾಂ ವರಃ ।
ಸ ತ್ವಾಂ ದಾಶರಥಿಃ ರಾಮೋ ದೇವಿ ಕೌಶಲಮಬ್ರವೀತ್ ॥ ೩॥

ವಾನರಶ್ರೇಷ್ಠನಾದ ಹನುಮಂತನು ದುಃಖಪರಂಪರೆಯಲ್ಲಿ ಮುಳುಗಿಹೋದ ಆ ಸೀತಾದೇವಿಯ ವಚನಗಳನ್ನು ಕೇಳಿ, ಅವಳಿಗೆ ಸಮಾಧಾನವಾಗುವಂತೆ ಹೀಗೆ ಹೇಳಿದನು.॥೧॥

ಓ ಜಾನಕಿದೇವೀ! ನಾನು ಶ್ರೀರಾಮನ ದೂತನು. ಆ ಸ್ವಾಮಿಯ ಸಂದೇಶದಿಂದ ನಾನು ಇಲ್ಲಿಗೆ ಬಂದಿರುವೆನು. ಶ್ರೀರಾಮನು ಕ್ಷೇಮವಾಗಿರುವನು. ನಿನ್ನ ಕುಶಲವನ್ನು ಕೇಳಿರುವನು.॥೨॥ ದೇವಿಯೇ! ದಶರಥನ ಕುಮಾರನಾದ ಶ್ರೀರಾಮನು ವೇದವೇತ್ತರಲ್ಲಿ ಶ್ರೇಷ್ಠನು. ಬ್ರಹ್ಮಾಸ್ತ್ರವೇ ಮೊದಲಾದ ವಿವಿಧ ಅಸ್ತ್ರಗಳಲ್ಲಿ ಪಾರಂಗತನು. ಸಕಲ ವೇದಗಳನ್ನು ಚೆನ್ನಾಗಿ ತಿಳಿದಿರುವವನು. ಅಂಥವನು ನಿನ್ನ ಕ್ಷೇಮಸಮಾಚಾರವನ್ನು ಕೇಳಿರುವನು.॥೩॥ ನಿನ್ನ ಪತಿಯಾದ

ಲಕ್ಷ್ಮಣಶ್ಚ ಮಹಾತೇಜಾ ಭರ್ತುಸ್ತೇಽನುಚರಃ ಪ್ರಿಯಃ।
ಕೃತವಾನ್ ಶೋಕಸಂತಪ್ತಃ ತರಸಾ ತೇಽಭಿವಾದನಮ್ ॥ ೪॥

ಸಾ ತಯೋಃ ಕುಶಲಂ ದೇವೀ ನಿಶಮ್ಯ ನರಸಿಂಹಯೋಃ।
ಪ್ರೀತಿಸಂಹೃಷ್ಟ ಸರ್ವಾಂಗೀ ಹನುಮಂತಮಥಾಬ್ರವೀತ್ ॥ ೫॥

ಕಲ್ಯಾಣೇ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮಾ।
ಪಿತಿ ಜೀವಂತಮಾನಂದೋ ನರಂ ವರ್ಷಶತಾದಪಿ ॥ ೬॥

ತಯಾ ಸಮಾಗತೇ ತಸ್ಮಿನ್ ಪ್ರೀತಿರುತ್ಪಾದಿತಾದ್ಭುತಾ।
ಪರಸ್ಪರೇಣ ಚಾಲಾಪಂ ವಿಶ್ವಸ್ತೌ ತೌ ಪ್ರಚಕ್ರತುಃ ॥ ೭॥

ತಸ್ಯಾಸದ್ವಚನಂ ಶ್ರುತ್ವಾ ಹನುಮಾನ್ ಹರಿಯೂಥಪಃ।
ಸೀತಾಯಾಃ ಶೋಕದೀನಾಯಾಃ ಸಮೀಪಮುಪಚಕ್ರಮೇ ॥ ೮॥

ಯಥಾ ಯಥಾ ಸಮೀಪಂ ಸ ಹನುಮಾನುಪಸರ್ಪತಿ।
ತಥಾ ತಥಾ ರಾವಣಂ ಸಾ ತಂ ಸೀತಾ ಪರಿಶಂಕತೇ ॥ ೯॥

ಅಹೋ ಧಿಕ್ ದುಃಖೃತಮಿದಂ ಕಥಿತಂ ಹಿ ಯದಸ್ಯ ಮೇ।
ರೂಪಾಂತರಮುಪಾಗಮ್ಯ ಸ ಏವಾಯಂ ಹಿ ರಾವಣಃ ॥ ೧೦॥

ತಾಮಶೋಕ್ಯ ಶಾಖಾಂ ಸಾ ವಿಮುಕ್ತಾ ಶೋಕಕರ್ಶಿತಾ।
ತಸ್ಯಾಮೇವಾನವದ್ಯಾಂಗೀ ಧರಣ್ಯಾಂ ಸಮುಪಾವಿಶತ್ ॥ ೧೧॥

ಹನುಮಾನಪಿ ದುಃಖಾರ್ತಾಂ ತಾಂ ದೃಷ್ಟ್ವಾ ಭಯಮೋಹಿತಾಮ್।
ಅವಂದತ ಮಹಾ ಬಾಹುಸ್ತತಸ್ತಾಂ ಜನಕಾತ್ಮಜಾಮ್ ॥ ೧೨॥

ಸಾ ಚೈನಂ ಭಯವಿತ್ರಸ್ತಾ ಭೂಯೋ ನೈವಾಭ್ಯುದೈಕ್ಷತ।
ತಂ ದೃಷ್ಟ್ವಾ ವಂದಮಾನಂ ತು ಸೀತಾ ಶಶಿನಿಭಾನನಾ ॥ ೧೩॥

ಅಬ್ರವೀದ್ದೀರ್ಘಮುಚ್ಛ್ವಸ್ಯ ವಾನರಂ ಮಧುರಸ್ವರಾ।
ಮಾಯಾಂ ಪ್ರವಿಷ್ಟೋ ಮಾಯಾವೀ ಯದಿ ತ್ವಂ ರಾವಣಃ ಸ್ವಯಮ್ ॥

ಉತ್ಪಾದಯಸಿ ಮೇ ಭೂಯಃ ಸಂತಾಪಂ ತನ್ನ ಶೋಭನಮ್ ।
ಸ್ವಂ ಪರಿತ್ಯಜ್ಯ ರೂಪಂ ಯಃ ಪರಿವ್ರಾಜಕರೂಪಧೃತ್ ॥ ೧೫॥

ಶ್ರೀರಾಮನಿಗೆ ಪ್ರಿಯನೂ, ಅನುಚರನೂ, ಮಹಾತೇಜಶ್ಶಾಲಿಯಾದ ಲಕ್ಷ್ಮಣನು ಕೂಡ ಶೋಕಸಂತಪ್ತನಾಗಿದ್ದು, ವಿನಯದಿಂದ ತಲೆಬಾಗಿ ನಿನಗೆ ಅಭಿವಾದನ ಮಾಡಿರುವನು.॥೪॥

ನರಶ್ರೇಷ್ಠರಾದ ರಾಮ-ಲಕ್ಷ್ಮಣರು ಕುಶಲಿಗಳಾಗಿರುವ ರೆಂಬ ವಾರ್ತೆಯನ್ನು ಕೇಳಿ ಸೀತೆಯು ಹರ್ಷದಿಂದ ಪುಳಕಿತಳಾಗಿ ಹನುಮಂತನ ಬಳಿ ಹೇಳಿದಳು–॥೫॥ ''ಬದುಕಿರುವ ಮನುಷ್ಯನಿಗೆ ನೂರು ವರ್ಷಗಳು ಕಳೆದ ಮೇಲಾದರೂ ಆನಂದವು ಲಭಿಸಿಯೇ ತೀರುತ್ತದೆ.'' ಎಂಬ ಶುಭಕರವಾದ ಲೋಕದ ಗಾದೆಯು ಸತ್ಯವೆಂದೇ ತೋರುತ್ತದೆ. ॥೬॥ ಶ್ರೀರಾಮನ ದೂತನಾಗಿ ಬಂದಿರುವ ಹನುಮಂತನ ಮೇಲೆ ಸೀತಾದೇವಿಗೆ ಪೂರ್ಣವಾದ ವಿಶ್ವಾಸವುಂಟಾಯಿತು. ಅವರಿಬ್ಬರೂ ಪರಸ್ಪರ ವಿಶ್ವಾಸವನ್ನು ಹೊಂದಿ ಪರಸ್ಪರ ಸಂಭಾಷಿಸತೊಡಗಿದರು.॥೭॥

ಸೀತೆಯು ಹೇಳಿದ ಮಾತನ್ನು ಕೇಳಿ ಅವಳಿಗೆ ತನ್ನ ಕುರಿತು ಹಾಗೂ ತನ್ನ ಮಾತುಗಳಲ್ಲಿ ಸಂಪೂರ್ಣವಾದ ವಿಶ್ವಾಸ ಉಂಟಾಗಿದೆ ಎಂದು ಭಾವಿಸಿ, ವಾಯುಪುತ್ರನಾದ ಹನುಮಂತನು ಶೋಕಸಂತಪ್ತಳಾಗಿದ್ದ ಸೀತಾದೇವಿಯ ಬಳಿಗೆ ಸಾಗಿದನು.॥೮॥ ಹನುಮಂತನು ಸೀತೆಯ ಕಡೆಗೆ ಹೆಜ್ಜೆಗಳನ್ನು ಇಡುತ್ತಿರುವಂತೆ ಅವಳಿಗೆ'ಇವನೇನಾದರೂ ರಾವಣನೇ ಆಗಿರ ಬಹುದೇ? ಎಂಬ ಸಂದೇಹವು ಉಂಟಾಯಿತು.॥೯॥ ''ಅಯ್ಯಯ್ಯೋ! ಇವನನ್ನು ಪೂರ್ತಿಯಾಗಿ ನಂಬಿ ನನ್ನ ಎಲ್ಲ ಕಥೆಯನ್ನು ಹೇಳಿಬಿಟ್ಟೆ, ಎಂತಹ ಅನುಚಿತವಾದ ಕಾರ್ಯವನ್ನು ಮಾಡಿಬಿಟ್ಟೆ! ವೇಷವನ್ನು ಮರೆಸಿಕೊಂಡು ಆ ರಾವಣನೇ ಇಲ್ಲಿಗೆ ಆಗಮಿಸಿದ್ದಾನೋ ವಿನೋ!'' ದಿವ್ಯಶರೀರದಿಂದ ಕೋಭಿತೆಯೂ, ಶೋಕಾರ್ತೆಯೂ ಆದ ಆ ಸೀತಾದೇವಿಯು ಅಲೋಕವೃಕ್ಷದ ಕೊಂಬೆಯನ್ನು ಬಿಟ್ಟು ನೆಲದಮೇಲೆ ಕುಳಿತಳು. ॥೧೦- ೧೧॥ ಮಹಾಬಾಹುವಾದ ಹನುಮಂತನು ದುಃಖಾರ್ತಳಾಗಿ ಭಯವಿಹ್ವಲಳಾಗಿದ್ದ ಆಕೆಯನ್ನು ನೋಡಿ ಸ್ವಲ್ಪ ಸಮೀಪಕ್ಕೆ ಹೋಗಿ ಆ ಜಾನಕಿಯನ್ನು ನಮಸ್ಕರಿಸಿದನು. ಆದರೆ ಇವನು ಕಪಿವೇಷಧಾರಿ ರಾವಣನೆಂದೇ ಭಾವಿಸಿ ಭಯಾಕುಲಳಾದ ಸೀತಾದೇವಿಯು ಮಾತ್ರ ಪುನಃ ಆವನಕಡೆಗೆ ತಲೆಯೆತ್ತಿ ನೋಡಲೇ ಇಲ್ಲ.॥೧೨॥

ಮತ್ತೆ ಚಂದ್ರನಂತೆ ಆಹ್ಲಾದಕರವಾದ ಮುಖವುಳ್ಳ ಸೀತಾದೇವಿಯು ತನಗೆ ನಮಸ್ಕರಿಸುತ್ತಿದ್ದ ಕಪಿವರನನ್ನು ನೋಡಿ ನಿಟ್ಟುಸಿರುಬಿಡುತ್ತಾ ಮಧುರಕಂಠದಿಂದ ಹೀಗೆ ನುಡಿದಳು– ॥೧೩॥ ನೀನು ಮಾಯಾವಿಯಾದ ರಾವಣನೇ ಆಗಿರುವುದಾದರೆ, ಮಾಯಾವೇಷದಿಂದ ನನ್ನನ್ನು ಸಂತಾಪಗೊಳಿಸುವುದರಿಂದ ನಿನಗೆ ಖಂಡಿತವಾಗಿ ಒಳಿತಾಗುವುದಿಲ್ಲ.॥೧೪॥ ನಿಜರೂಪವನ್ನು ಪರಿತ್ಯಜಿಸಿ ಪರಿವ್ರಾಜಕ ರೂಪವನ್ನು ಧರಿಸಿ ಬಂದಿದ್ದವನನ್ನು ಜನಸ್ಥಾನದಲ್ಲಿ ನಾನು ನೋಡಿದ್ದೇನೋ, ಆ ರಾವಣನೇ ನೀನೋ? ॥೧೫॥

ಜನಸ್ಥಾನೇ ಮಯಾ ದೃಷ್ಟಸ್ತ್ವಂ ಸ ಏವಾಸಿ ರಾವಣಃ ।
ಉಪವಾಸಕೃಶಾಂ ದೀನಾಂ ಕಾಮರೂಪಿಣ ನಿಶಾಚರ ॥ ೧೬॥

ಸಂತಾಪಯಸಿ ಮಾಂ ಭೂಯಃ ಸಂತಪ್ತಾಂ ತನ್ನ ಶೋಭನಮ್ ।
ಅಥವಾ ನೈತದೇವಂ ಹಿ ಯನ್ಮಯಾ ಪರಿಶಂಕಿತಮ್ ॥ ೧೭॥

ಮನಸೋ ಹಿ ಮಮ ಪ್ರೀತಿರುತ್ಪನ್ನಾ ತವ ದರ್ಶನಾತ್ ।
ಯದಿ ರಾಮಸ್ಯ ದೂತಸ್ತ್ವಮಾಗತೋ ಭದ್ರಮಸ್ತು ತೇ ॥ ೧೮॥

ಪೃಚ್ಛಾಮಿ ತ್ವಾಂ ಕಪಿಶ್ರೇಷ್ಠ ಪ್ರಿಯಾ ರಾಮಕಥಾ ಹಿ ಮೇ ।
ಗುಣಾನ್ ರಾಮಸ್ಯ ಕಥಯ ಪ್ರಿಯಸ್ಯ ಮಮ ವಾನರ ॥ ೧೯॥

ಚಿತ್ತಂ ಹರಸಿ ಮೇ ಸೌಮ್ಯ ನದೀಕೂಲಂ ಯಥಾ ರಯಃ ।
ಅಹೋ ಸ್ವಪ್ನಸ್ಯ ಸುಖಿತಾ ಯಾಹಮೇವಂ ಚಿರಾಹೃತಾ ॥ ೨೦॥

ಪ್ರೇಷಿತಂ ನಾಮ ಪಶ್ಯಾಮಿ ರಾಘವೇಣ ವನೌಕಸಮ್ ।
ಸ್ವಪ್ನೇಽಪಿ ಯದ್ಯಹಂ ವೀರಂ ರಾಘವಂ ಸಹಲಕ್ಷ್ಮಣಮ್ ॥ ೨೧॥

ಪ್ರಕೃತಿಯಂ ನಾಪಸೀದೇಯಂ ಸ್ವಪ್ನೋ ಽಪಿ ಮಮ ಮತ್ತಃ ।
ನಾಹಂ ಸ್ವಪ್ನಮಿಮಂ ಮನ್ಯೇ ಸ್ವಪ್ನೇ ದೃಷ್ಟ್ವಾ ಹಿ ವಾನರಮ್ ॥ ೨೨॥

ನ ಶಕ್ಯೋ ಽಭ್ಯುದಯಃ ಹ್ರಾಪ್ತುಂ ಹ್ರಾಪ್ತುತ್ಯಾಭ್ಯುದಯೋ ಮಮ ।
ಕಂ ನು ಸ್ಯಾಚ್ಚಿತ್ತಮೋಹೋ ಽಯಂ ಭವೇದ್ಯಾತ್ತಗತಿಸ್ತ್ವಿಯಮ್ ॥

ಉನ್ಮಾದಜೋ ವಿಕಾರೋ ವಾ ಸ್ಯಾದಿಯಂ ಮೃಗತೃಷ್ಣಿಕಾ ।
ಅಥವಾ ನಾಯಮುನ್ಮಾದೋ ಮೋಹೋ ಽಪ್ಯುನ್ಮಾದಲಕ್ಷಣಃ ॥ ೨೪॥

ಸಂಭಾವ್ಯೇ ಚಾಹಮಾತ್ಮಾನಮಿಮಂ ಚಾಪಿ ವನೌಕಸಮ್ ।
ಇತ್ಯೇವಂ ಬಹುಧಾ ಸೀತಾ ಸಂಪ್ರಧಾರ್ಯ ಬಲಾಬಲಮ್ ॥ ೨೫॥

ಕಾಮರೂಪಿಯಾದ ನಿಶಾಚರನೇ! ನಾನು ಉಪವಾಸದಿಂದ ಕೃಶಳಾಗಿರುವೆನು. ದೀನೆಯಾಗಿರುವೆನು. ಪತಿವಿರಹ ಶೋಕದಿಂದ ಸಂತಪ್ತಳಾಗಿರುವೆನು. ಇಂತಹ ನನ್ನನ್ನು ನೀನು ಪುನಃ ಸಂತಾಪಗೊಳಿಸುವುದು ನಿನಗೆ ನಿಶ್ಚಯವಾಗಿ ಒಳ್ಳೆಯದಲ್ಲ. ॥೧೬॥

ಸೀತೆಯು ಕ್ಷಣಕಾಲ ಯೋಚಿಸಿ ಹೇಳಿದಳು — ಅಥವಾ ನಾನು ಈ ರೀತಿ ಶಂಕಿಸುವುದು ಸರಿಯಿರಲಾರದು. ನೀನು ರಾವಣನಿರಲಾರೆ. ಏಕೆಂದರೆ, ನಿನ್ನ ದರ್ಶನದಿಂದ ನನ್ನ ಮನಸ್ಸಿನಲ್ಲಿ ಅನಿರ್ವಚನೀಯ ಪ್ರೀತಿಯು ಅವಿರ್ಭವಿಸಿದೆ. ॥೧೭॥ ಎಲೈ ಕಪಿಶ್ರೇಷ್ಠಾ! ನೀನು ನಿಜವಾಗಿ ರಾಮನ ದೂತನಾಗಿ ಇಲ್ಲಿಗೆ ಬಂದಿರುವೆಯಾದರೆ ನಿನಗೆ ಮಂಗಳವಾಗಲೀ. ನನಗೆ ಪ್ರಿಯವಾದ ರಾಮನ ಕಥೆಯನ್ನು ಹೇಳು.॥೧೮॥ ಹೇ ವಾನರನೇ! ಸೌಮ್ಯನೇ! ಪ್ರವಾಹದ ರಭಸವು ನದಿಯ ದಡವನ್ನು ಕೊಚ್ಚಿಕೊಂಡು ಹೋಗುವಂತೆ- ನನ್ನ ಮನಸ್ಸನ್ನು ನೀನು ಅಪಹರಿಸಿ ಬಿಟ್ಟಿರುವೆ. ಪ್ರಿಯನಾದ ನನ್ನ ರಾಮನ ಗುಣಗಳನ್ನು ವರ್ಣಿಸಿ ಹೇಳು.॥೧೯॥

ಆಹಾ! ಈ ಸ್ವಪ್ನವೂ ಅತ್ಯಂತ ಸುಖಾವಹವೇ ಆಗಿದೆ. ನನ್ನನ್ನು ಅಪಹರಿಸಿ ಬಂದು ಕುಂಬಾ ಕಾಲವಾಯಿತು. ಇಷ್ಟುದಿನಗಳ ಬಳಿಕ ಶ್ರೀರಾಮನು ಕಳಿಸಿದ ದೂತನಾದ ವಾನರನನ್ನು ಇಂದು ನಾನು ಪ್ರತ್ಯಕ್ಷವಾಗಿನೋಡುತ್ತಿದ್ದೇನೆ.॥೨೦॥ ಇದು ಸ್ವಪ್ನವೇ ಆಗಿದ್ದರೂ ಇದರಿಂದ ನನಗೆ ಸೆಮ್ಮದಿ ಉಂಟಾಗಿದೆ. ಇದೇ ಸ್ವಪ್ನದಲ್ಲಿ ನಾನು ಲಕ್ಷ್ಮಣಸಹಿತ ವೀರನಾದ ಶ್ರೀರಾಮನನ್ನು ನೋಡಿದೆನಾದರೆ ನನ್ನ ಪರಿತಾಪಗಳೆಲ್ಲ ಕಳೆದು ಹೋಗುವವು. ಆದರೆ ಸ್ವಪ್ನವೂ ನನ್ನ ವಿಷಯದಲ್ಲಿ ಮತ್ಸರಿಸುತ್ತದೆ.॥೨೧॥

ಸ್ವಪ್ನದಲ್ಲಿ ವಾನರನನ್ನು ನೋಡುವುದರಿಂದ ಶುಭವಾಗಲು ಅವಕಾಶವಿಲ್ಲ. ಆದರೆ ನನಗೆ ಶುಭವೇ ಜರಗಿದೆ. ಆದ್ದರಿಂದ ಇದನ್ನು ನಾನು ಸ್ವಪ್ನವೆಂದು ಭಾವಿಸುವುದಿಲ್ಲ. ॥೨೨॥ ಇದು ಶ್ರೀರಾಮನ ನಿರಂತರ ಚಿಂತನೆಯಿಂದ ಉಂಟಾದ ಚಿತ್ತಭ್ರಮೆಯೇ? ವಾತಪ್ರಕೋಪವೇ ? ಉನ್ಮಾದದಿಂದ ಉಂಟಾದ ವಿಕಾರವೋ ಇಲ್ಲವೇ ಮರೀಚಿಕೆಯೇ ? ॥೨೩॥ ಆದರೆ ನನಗೆ ದೇಹದ ಮೇಲೆ ಪ್ರಜ್ಞೆಯು ಚೆನ್ನಾಗಿದೆ. ನಾನು ಶ್ರೀರಾಮನ ಭಾರ್ಯೆಯಾದ ಸೀತೆಯೆಂಬುದು ಚೆನ್ನಾಗಿ ತಿಳಿಯುತ್ತಿದ್ದೇನೆ. ಇವನನ್ನು ನಾನು ವನಚರನೆಂದೂ ಗುರುತಿಸುತ್ತಿದ್ದೇನೆ. ಆದರಿಂದ ಇದು ಉನ್ಮಾದವಲ್ಲ ಉನ್ಮಾದದ ಲಕ್ಷಣವಾದ ಮೋಹವೂ ಅಲ್ಲ.॥೨೪॥ ಹೀಗೆ* ಈ ವಿಧವಾಗಿ ಸೀತಾದೇವಿಯು ಪರಿ-ಪರಿಯಾಗಿ ಬಲಾಬಲಗಳನ್ನು ಸಂಪೂರ್ಣವಾಗಿ ವಿಚಾರಮಾಡಿ, ರಾಕ್ಷಸರು ಕಾಮರೂಪಿಗಳಾದುದರಿಂದ ಇವನನ್ನು ರಾವಣನೆಂದೇ ಭಾವಿಸಿದಳು.॥೨೫॥ ಸೌಂದರ್ಯವತಿಯಾದ ಆ ಸೀತಾದೇವಿಯು ಈ ವಿಧದಿಂದ

* ರಾಕ್ಷಸರು ಮಹಾಬಲಸಂಪನ್ನರು. ಅವರೊಡನೆ ಹೋಲಿಸಿದರೆ ವಾನರರ ಬಲವು ಅತ್ಯಲ್ಪವು. ಮಹಾಸಮುದ್ರವನ್ನು ಲಂಘಿಸುವುದಾಗಲೀ, ಈ ರಾಕ್ಷಸರಿಂದ ತಪ್ಪಿಸಿಕೊಂಡು ಇಲ್ಲಿಗೆ ಬರುವುದಾಗಲೀ, ಓರ್ವ ವಾನರಮಾತ್ರನಿಗೆ ಅಸಾಧ್ಯವು.

ರಕ್ಷಸಾಂ ಕಾಮರೂಪತ್ವಾನ್ನೇನೇ ತಂ ರಾಕ್ಷಸಾಧಿಪಮ್ ।
ಏತಾಂ ಬುದ್ಧಿಂ ತದಾ ಕೃತ್ವಾ ಸೀತಾ ಸಾ ತನುಮಧ್ಯಮಾ ॥ ೨೬॥

ನ ಪ್ರತಿವ್ಯಾಜಹಾರಾಥ ವಾನರಂ ಜನಕಾತ್ಮಜಾ ।
ಸೀತಾಯಾಶ್ಚಿಂತಿತಂ ಬುದ್ಧ್ವಾ ಹನುಮಾನ್ ಮಾರುತಾತ್ಮಜಃ ॥ ೨೭॥

ಶ್ರೋತ್ರಾನುಕೂಲೈರ್ವಚನೈಸ್ತದಾ ತಾಂ ಸಂಪ್ರಹರ್ಷಯತ್ ।
ಆದಿತ್ಯ ಇವ ತೇಜಸ್ವೀ ಲೋಕಕಾಂತಃ ಶಶೀ ಯಥಾ ॥ ೨೮॥

ರಾಜಾ ಸರ್ವಸ್ಯ ಲೋಕಸ್ಯ ದೇವೋ ವೈಶ್ರವಣೋ ಯಥಾ ।
ವಿಕ್ರಮೇಣೋಪಪನ್ನಶ್ಚ ಯಥಾ ವಿಷ್ಣುರ್ಮಹಾಯಶಾಃ ॥ ೨೯॥

ಸತ್ಯವಾದೀ ಮಧುರವಾಗ್ದೇವೋ ವಾಚಸ್ಪತಿರ್ಯಥಾ ।
ರೂಪವಾನ್ ಸುಭಗಃ ಶ್ರೀಮಾನ್ ಕಂದರ್ಪ ಇವ ಮೂರ್ತಿಮಾನ್ ॥ ೩೦॥

ಸ್ಥಾನಕ್ರೋಧಃ ಪ್ರಹರ್ತಾ ಚ ಶ್ರೇಷ್ಠೋ ಲೋಕೇ ಮಹಾರಥಃ ।
ಬಾಹುಚ್ಛಾಯಾಮವಷ್ಟಬ್ಧೋ ಯಸ್ಯ ಲೋಕೋ ಮಹಾತ್ಮನಃ ॥ ೩೧॥

ಅಪಕೃಷ್ಯಾಶ್ರಮಪದಾನ್ಮೃಗರೂಪೇಣ ರಾಘವಮ್ ।
ಶೂನ್ಯೇ ಯೆನಾಪನೀತಾಸಿ ತಸ್ಯ ದ್ರಕ್ಷ್ಯಸಿ ಯತ್ ಫಲಮ್ ॥ ೩೨॥

ನಚಿರಾದ್ರಾವಣಂ ಸಂಖ್ಯೇ ಯೋ ವಧಿಷ್ಯತಿ ವೀರ್ಯವಾನ್ ।
ರೋಷಪ್ರಯುಕ್ತೈರಿಷುಭಿಃ ಜ್ವಲದ್ಭಿರಿವ ಪಾವಕೈಃ ॥ ೩೩॥

ತೇನಾಹಂ ಪ್ರೇಷಿತೋ ದೂತಸ್ತ್ವತ್ಸಕಾಶಮಿಹಾಗತಃ ।
ತ್ವದ್ವಿಯೋಗೇನ ದುಃಖಾರ್ತಃ ಸ ತ್ವಾಂ ಕೌಶಲಮಬ್ರವೀತ್ ॥ ೩೪॥

ಲಕ್ಷ್ಮಣಶ್ಚ ಮಹಾತೇಜಾಃ ಸುಮಿತ್ರಾನಂದವರ್ಧನಃ ।
ಅಭಿವಾದ್ಯ ಮಹಾಬಾಹುಃ ಸ ತ್ವಾಂ ಕೌಶಲಮಬ್ರವೀತ್ ॥ ೩೫॥

ರಾಮಸ್ಯ ಚ ಸಖಾ ದೇವಿ ಸುಗ್ರೀವೋ ನಾಮ ವಾನರಃ ।
ರಾಜಾ ವಾನರಮುಖ್ಯಾನಾಂ ಸ ತ್ವಾಂ ಕೌಶಲಮಬ್ರವೀತ್ ॥ ೩೬॥

ನಿತ್ಯಂ ಸ್ಮರತಿ ತೇ ರಾಮಃ ಸಸುಗ್ರೀವಃ ಸಲಕ್ಷ್ಮಣಃ ।
ದಿಷ್ಟ್ಯಾ ಜೀವಸಿ ವೈದೇಹಿ ರಾಕ್ಷಸೀವಶಮಾಗತಾ ॥ ೩೭॥

ನಚಿರಾದ್ದ್ರಕ್ಷ್ಯಸೇ ರಾಮಂ ಲಕ್ಷ್ಮಣಂ ಚ ಮಹಾಬಲಮ್ ।
ಮಧ್ಯೇ ವಾನರಕೋಟೀನಾಂ ಸುಗ್ರೀವಂ ಚಾಮಿತೌಜಸಮ್ ॥ ೩೮॥

ನಿಶ್ಚಯಿಸಿಕೊಂಡು ಮತ್ತೆ ಹನುಮಂತನ ಬಳಿ ಯಾವ ಮಾತನ್ನೂ ಆಡಲಿಲ್ಲ.॥೨೬॥

ವಾಯುಸುತನಾದ ಹನುಮಂತನು ಅವಳ ಮನೋಭಾವವನ್ನು ತಿಳಿದು, ಕಿವಿಗಳಿಗೆ ಇಂಪಾಗಿರುವ ಮಧುರ ವಚನಗಳಿಂದ ಸೀತಾದೇವಿಯನ್ನು ಹೆಚ್ಚಾಗಿಹರ್ಷಗೊಳಿಸಿದನು.॥೨೭॥

''ಶ್ರೀರಾಮನು ಸೂರ್ಯನಂತೆ ಮಹಾತೇಜಸ್ವಿಯೂ, ಚಂದ್ರನಂತೆ ಲೋಕಕ್ಕೆ ಆಹ್ಲಾದವನ್ನುಂಟುಮಾಡುವವನೂ, ರಾಜಾಧಿರಾಜನಾದ ಕುಬೇರನಂತೆ ಸಕಲ ಲೋಕಗಳಿಗೂ ರಾಜನಾಗಿದ್ದಾನೆ. ಶ್ರೀರಾಮನು ಮಹಾಯಶಸ್ವೀಯಾದ ವಿಷ್ಣುವಿನಂತೆ ಪರಾಕ್ರಮ ಸಂಪನ್ನನು. ಸತ್ಯವಾದಿಯು. ದೇವಗುರು ಬೃಹಸ್ಪತಿಯಂತೆ ಮಧುರವಾಗಿ ಮಾತಾಡುವವನು. ರೂಪಸಂಪನ್ನನು. ಸೌಭಾಗ್ಯಶಲಿಯು. ಶರೀರವನ್ನು ಧರಿಸಿರುವ ಮನ್ಮಥನಂತೆ ಸ್ಫುರದ್ರೂಪಿಯು. ಉಚಿತವಾದ ಸಮಯದಲ್ಲಿ ಕೋಪಗೊಳ್ಳುವವನು. ಸಮಯವರಿತು ಶತ್ರುಗಳನ್ನು ಸಂಹರಿಸುವವನು. ಲೋಕದಲ್ಲಿ ಸರ್ವಶ್ರೇಷ್ಠನಾದ ಮಹಾರಥನು. ಲೋಕವೇ ತನ್ನ ರಕ್ಷಣೆಗಾಗಿ ಮಹಾತ್ಮನಾದ ಶ್ರೀರಾಮನ ಬಾಹುಗಳ ಆಶ್ರಯವನ್ನು ಪಡೆದಿದೆ.॥೨೮-೩೧॥

ರಾಘವನನ್ನು ಮಾಯಾಮೃಗದ ಮೂಲಕ ಆಶ್ರಮದಿಂದ ಹೊರಗೆ ಹೋಗುವಂತೆ ಮಾಡಿ ಶೂನ್ಯವಾದ ಆಶ್ರಮದಲ್ಲಿದ್ದ ನಿನ್ನನ್ನು ಅಪಹರಿಸಿರುವವನ ದುಷ್ಕರ್ಮಕ್ಕೆ ಸಿಗುವ ಫಲವನ್ನು ನೀನೇ ಕಾಣಲಿರುವೆ.॥೩೨॥ಬಹು ಬೇಗನೇ ಮಹಾವೀರನಾದ ಶ್ರೀರಾಮನು ಯುದ್ಧದಲ್ಲಿ ಕೋಧಪೂರ್ವಕವಾಗಿ ಬಿಡುವ ಅಗ್ನಿಸದೃಶವಾದ ಹರಿತವಾದ ಬಾಣಗಳನ್ನು ಪ್ರಯೋಗಿಸಿ ಆ ರಾವಣನನ್ನು ವಧಿಸುವನು.॥೩೩॥ ಆ ಸ್ವಾಮಿಯು ಕಳಿಸಿದ ದೂತನಾದ ನಾನು ನಿನ್ನ ಬಳಿಗೆ ಬಂದಿರುವೆನು. ನಿನ್ನ ವಿಯೋಗದಿಂದ ಶ್ರೀರಾಮನು ದುಃಖಪೀಡಿತನಾಗಿರುವನು. ಅವನು ನಿನ್ನ ಕುಶಲವನ್ನು ವಿಚಾರಿಸಿದ್ದಾನೆ.॥೩೪॥ ಸುಮಿತ್ರಾನಂದವರ್ಧನನಾದ, ಮಹಾತೇಜಸ್ವಿಯಾದ, ಮಹಾಬಾಹುವಾದ, ಲಕ್ಷ್ಮಣನೂ ನಿನಗೆ ಅಭಿವಾದನೆ ಮಾಡಿ ನಿನ್ನ ಕುಶಲವನ್ನು ವಿಚಾರಿಸಿದ್ದಾನೆ.॥೩೫॥ ಓ ದೇವೀ! ವಾನರನಾದ ಸುಗ್ರೀವನು ಶ್ರೀರಾಮನ ಗೆಳೆಯನು. ವಾನರರಿಗೆಲ್ಲ ಒಡೆಯನಾದ ಅವನೂ ಕೂಡ ನಿನ್ನ ಕುಶಲವನ್ನು ವಿಚಾರಿಸಿದ್ದಾನೆ.॥೩೬॥ ಎಲೈ ವೈದೇಹೀ! ಆ ರಾಮಚಂದ್ರಪ್ರಭುವು, ಲಕ್ಷ್ಮಣನೂ, ಸುಗ್ರೀವನೂ, ಹೀಗೆ ಎಲ್ಲರೂ ಕ್ಷಣ-ಕ್ಷಣಕ್ಕೂ ನಿನ್ನನ್ನು ಸ್ಮರಿಸುತ್ತಿದ್ದಾರೆ. ನೀನು ರಾಕ್ಷಸಿಯರ ಮಧ್ಯದಲ್ಲಿದ್ದರೂ ಅದೃಷ್ಟ ವಿಶೇಷದಿಂದ ಇನ್ನೂ ಜೀವಿಸಿರುವೆ.॥೩೭॥ ನೀನು ಬಹಳ ಶೀಘ್ರವಾಗಿಯೇ ಮಹಾಬಲಶಾಲಿಗಳಾದ ಶ್ರೀರಾಮ- ಲಕ್ಷ್ಮಣರನ್ನು ನೋಡಲಿರುವೆ. ಕೋಟಿ-ಕೋಟಿವಾನರರ ಮಧ್ಯದಲ್ಲಿರುವ ಅಮಿತ ತೇಜಸ್ವಿಯಾದ ಸುಗ್ರೀವನನ್ನು ಕಾಣಲಿರುವೆ.॥೩೮॥ ಸುಗ್ರೀವನ ಮಂತ್ರಿಯಾದ ಹನುಮಂತ ಎಂಬ ಹೆಸರಿನ ವಾನರನು ನಾನು. ಮಹಾಸಮುದ್ರವನ್ನು ಲಂಘಿಸಿ ಈ

ಅಹಂ ಸುಗ್ರೀವಸಚಿವೋ ಹನುಮನ್ನಾಮ ವಾನರಃ ।
ಪ್ರವಿಷ್ಟೋ ನಗರೀಂ ಲಂಕಾಂ ಲಂಘಯಿತ್ವಾ ಮಹೋದಧಿಮ್ ॥ ೩೯॥
ಕೃತ್ವಾ ಮೂರ್ಧ್ನಿ ಪದನ್ಯಾಸಂ ರಾವಣಸ್ಯ ದುರಾತ್ಮನಃ ।
ತ್ವಾಂ ದ್ರಷ್ಟುಮುಪಯಾತೋಽಃ ಹಂ ಸಮಾಶ್ವಸಿಹಿ ಶೋಭನೇ ॥ ೪೦॥
ನಾಹಮಸ್ಮಿ ತಥಾ ದೇವಿ ಯಥಾ ಮಾಮವಗಚ್ಛಸಿ ।
ವಿಶಂಕಾ ತ್ಯಜ್ಯತಾಮೇಷಾ ಶೃಣ್ವತ್ಯಾ ವದತೋ ಮಮ ॥ ೪೧॥

ಲಂಕಾನಗರವನ್ನು ಪ್ರವೇಶಿದೆ.॥೩೯॥ ದುರಾತ್ಮನಾದ ರಾವಣನ ತಲೆಯನ್ನು ಮೆಟ್ಟಿ ನನ್ನಲ್ಲಿರುವ ಪರಾಕ್ರಮದ ಮೇಲೆ ಭರವಸೆಯನ್ನಿಟ್ಟು ನಿನ್ನನ್ನು ನೋಡುವ ಸಲುವಾಗಿ ಇಲ್ಲಿಗೆ ಬಂದಿರುವೆನು.॥೪೦॥ ನೀನು ಭಾವಿಸುತ್ತಿರುವಂತೆ ನಾನು ಕಾಮರೂಪಿಯಾದ ರಾವಣನಲ್ಲ. ಸಂದೇಹವನ್ನು ದೂರಮಾಡು. ನನ್ನ ಮಾತುಗಳಲ್ಲಿ ನಂಬಿಕೆಯನ್ನಿಡು.॥೪೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಚತುಸ್ತ್ರಿಂಶಃ ಸರ್ಗಃ ॥ ೩೪ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತನಾಲ್ಕನೆಯ ಸರ್ಗವು ಮುಗಿಯಿತು.

* * *

ಮೂವತ್ತೈದನೆಯ ಸರ್ಗ

ಸೀತಾದೇವಿಯ ಪ್ರಶ್ನೆಗಳಿಗೆ ಶ್ರೀರಾಮನ ಶರೀರದಲ್ಲಿದ್ದ ಶುಭಲಕ್ಷಣಗಳನ್ನು ಹನುಮಂತನು ವಿವರಿಸಿ ಹೇಳಿದುದು, ನರ-ವಾನರರ ಮೈತ್ರಿಯ ಪ್ರಸಂಗವನ್ನು ಕೇಳಿದ ನಂತರ ಸೀತಾದೇವಿಗೆ ಹನುಮಂತನ ಮೇಲೆ ವಿಶ್ವಾಸ ಹುಟ್ಟಿದುದು –

ತಾಂ ತು ರಾಮಕಥಾಂ ಶ್ರುತ್ವಾ ವೈದೇಹೀ ವಾನರರ್ಷಭಾತ್ ।
ಉವಾಚ ವಚನಂ ಸಾಂತ್ವಂ ಇದಂ ಮಧುರಯಾ ಗಿರಾ ॥ ೧॥

ಕ್ವತೇ ರಾಮೇಣ ಸಂಪರ್ಗಃ ಕಥಂ ಜ್ಞಾನಾಸಿ ಲಕ್ಷ್ಮಣಮ್ ।
ವಾನರಾಣಾಂ ನರಾಣಾಂ ಚ ಕಥಮಾಸೀತ್ ಸಮಾಗಮಃ ॥ ೨॥

ಯಾನಿ ರಾಮಸ್ಯ ಲಿಂಗಾನಿ ಲಕ್ಷ್ಮಣಸ್ಯ ಚ ವಾನರ ।
ತಾನಿ ಭೂಯಃ ಸಮಾಚಕ್ಷ್ವ ನ ಮೋ ಕೋಽಃ ಸಮಾವಿಶೇತ್ ॥ ೩॥

ಕೀದೃಶಂ ತಸ್ಯ ಸಂಸ್ಥಾನಂ ರೂಪಂ ರಾಮಸ್ಯ ಕೀದೃಶಮ್ ।
ಕಥಮೂರೂ ಕಥಂ ಬಾಹೂ ಲಕ್ಷ್ಮಣಸ್ಯ ಚ ಶಂಸ ಮೇ ॥ ೪॥

ಏವಮುಕ್ತಸ್ತು ವೈದೇಹ್ಯಾ ಹನುಮಾನ್ ಪವನಾತ್ಮಜಃ ।
ತತೋ ರಾಮಂ ಯಥಾತತ್ತ್ವಮಾಖ್ಯಾತುಮುಪಚಕ್ರಮೇ ॥ ೫॥

ಜಾನಂತಿ ಬತ ವಿಶ್ವಾಮಾಂ ವೈದೇಹಿ ಪರಿಪೃಚ್ಛಸಿ ।
ಭರ್ತುಃ ಕಮಲಪತ್ರಾಕ್ಷಿ ಸಂಸ್ಥಾನಂ ಲಕ್ಷ್ಮಣಸ್ಯ ಚ ॥ ೬॥

ಯಾನಿ ರಾಮಸ್ಯ ಚಿಹ್ನಾನಿ ಲಕ್ಷ್ಮಣಸ್ಯ ಚ ಯಾನಿ ವೈ ।
ಲಕ್ಷಿತಾನಿ ವಿಶಾಲಾಕ್ಷಿ ವದತಃ ಶೃಣು ತಾನಿ ಮೇ ॥ ೭॥

ವೈದೇಹಿಯು ವಾನರಶ್ರೇಷ್ಠನಾದ ಹನುಮಂತನಿಂದ ಶ್ರೀರಾಮನಕಥೆಯನ್ನು ಕೇಳಿದ ಬಳಿಕ ಮಧುರವಾದ ಧ್ವನಿಯಿಂದ ಸಮಾಧಾನಕರವಾದ ಮಾತನ್ನು ಹೇಳಿದಳು. ॥೧॥

ಹನುಮಂತನೇ! ನಿನಗೆ ಶ್ರೀರಾಮನೊಡನೆ ಪರಿಚಯವು ಹೇಗೆ ಏರ್ಪಟ್ಟಿತು? ಲಕ್ಷ್ಮಣನ ಪರಿಚಯ ಹೇಗಾಯಿತು? ನರ-ವಾನರರ ಸಮಾಗಮವು ಹೇಗೆ ಜರುಗಿತು? ॥ ೨ ॥

ಎಲೈ ವಾನರೋತ್ತಮಾ! ಶ್ರೀರಾಮ ಲಕ್ಷ್ಮಣರ ಶರೀರದಲ್ಲಿ ಯಾವ-ಯಾವ ಚಿಹ್ನೆಗಳಿವೆ? ನೀನು ಈ ವಿಷಯವನ್ನು ವಿವರಿಸಿ ಹೇಳಿದರೆ ನನ್ನ ಶೋಕವು ದೂರವಾಗುವುದು. ನೀನು ರಾಮನ ದೂತನೆಂಬ ಪೂರ್ಣವಿಶ್ವಾಸ ಉಂಟಾದೀತು. ॥೩॥ ರಾಮ-ಲಕ್ಷ್ಮಣರ ಶರೀರ ಸೌಷ್ಠವಗಳು ಹೇಗಿವೆ? ಅವರ ರೂಪ-ಲಕ್ಷ್ಮಣಗಳು ಹೇಗಿವೆ? ಅವರ ತೊಡೆಗಳೂ, ಕೊಳುಗಳೂ ಹೇಗಿವೆ? ಈ ಎಲ್ಲವನ್ನು ವಿವರಿಸಿ ಹೇಳು. ॥೪॥

ವೈದೇಹಿಯ ಪ್ರಶ್ನೆಗಳಿಗೆ ವಾಯುಪುತ್ರನಾದ ಹನುಮಂತನು ಶ್ರೀರಾಮನ ರೂಪ-ಲಕ್ಷ್ಮಣಗಳನ್ನು ಯಥಾವತ್ತಾಗಿ ವರ್ಣಿಸತೊಡಗಿದನು. ॥೫॥

''ಕಮಲಪತ್ರಾಕ್ಷಿಯೇ! ಎಲೈ ವೈದೇಹಿ! ಪತಿಯಾದ ಶ್ರೀರಾಮನ ಮತ್ತು ಲಕ್ಷ್ಮಣನ ಅವಯವ ಸೌಭಾಗ್ಯಗಳನ್ನು ನೀನು ತಿಳಿದಿರುವೆ. ಆದರೂ ಕೂಡ ನನ್ನನ್ನು ಕೇಳಿದುದು ನನ್ನ ಅದೃಷ್ಟವೇ, ತುಂಬಾ ಸಂತೋಷ. ॥೬॥ ವಿಶಾಲಾಕ್ಷಿಯೇ! ಶ್ರೀರಾಮನ ಶುಭ ಲಕ್ಷಣಗಳನ್ನು, ಲಕ್ಷ್ಮಣನ ಚಿನ್ಹೆಗಳನ್ನು ನನಗೆ ತಿಳಿದ ಮಟ್ಟಿಗೆ ವಿವರಿಸಿ ಹೇಳುವೆನು; ಕೇಳು. (ನೀನು

ರಾಮಃ ಕಮಲಪತ್ರಾಕ್ಷಃ ಸರ್ವಸತ್ತ್ವ ಮನೋಹರಃ ।
ರೂಪದಾಕ್ಷಿಣ್ಯಸಂಪನ್ನಃ ಪ್ರಸೂತೋ ಜನಕಾತ್ಮಜೇ ॥ ೮॥

ತೇಜಸಾಽಽದಿತ್ಯಸಂಕಾಶಃ ಕ್ಷಮಯಾ ಪೃಥಿವೀಸಮಃ ।
ಬೃಹಸ್ಪತಿಸಮೋ ಬುದ್ಧ್ಯಾ ಯಶಸಾ ವಾಸವೋಪಮಃ ॥ ೯॥

ರಕ್ಷಿತಾ ಜೀವಲೋಕಸ್ಯ ಸ್ವಜನಸ್ಯ ಚ ರಕ್ಷಿತಾ ।
ರಕ್ಷಿತಾ ಸ್ವಸ್ಯ ವೃತ್ತಸ್ಯ ಧರ್ಮಸ್ಯ ಚ ಪರಂತಪಃ ॥ ೧೦॥

ರಾಮೋ ಭಾಮಿನಿ ಲೋಕೇಽಸ್ಮಿಂಶ್ಚಾ ತುರ್ವರ್ಣ್ಯಸ್ಯ ರಕ್ಷಿತಾ ।
ಮರ್ಯಾದಾನಾಂ ಚ ಲೋಕಸ್ಯ ಕರ್ತಾ ಕಾರಯಿತಾ ಚ ಸಃ ॥ ೧೧॥

ಆರ್ಚಿಷ್ಮಾನರ್ಚಿತೋ ನಿತ್ಯಂ ಬ್ರಹ್ಮಚರ್ಯವ್ರತೇ ಸ್ಥಿತಃ ।
ಸಾಧೂನಾಮುಪಕಾರಜ್ಞಃ ಪ್ರಚಾರಜ್ಞಶ್ಚ ಕರ್ಮಣಾಮ್ ॥ ೧೨॥

ರಾಜವಿದ್ಯಾವಿನೀತಶ್ಚ ಬ್ರಾಹ್ಮಣಾನಾಮುಪಾಸಿತಾ ।
ಶ್ರುತವಾನ್ ಶೀಲಸಂಪನ್ನೋ ವಿನೀತಶ್ಚ ಪರಂತಪಃ ॥ ೧೩॥

ಯಜುರ್ವೇದವಿನೀತಶ್ಚ ವೇದವಿದ್ಭಿಃ ಸುಪೂಜಿತಃ ।
ಧನುರ್ವೇದೇ ಚ ವೇದೇಷು ವೇದಾಂಗೇಷು ಚ ನಿಷ್ಠಿತಃ ॥ ೧೪॥

ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವಃ ಶುಭಾನನಃ ।
ಗೂಢಜತ್ರುಃ ಸುತಾಮ್ರಾಕ್ಷೋ ರಾಮೋ ದೇವಿ ಜನೈಃ ಶ್ರುತಃ ॥ ೧೫॥

ದುಂದುಭಿಸ್ವನನಿರ್ಘೋಷಃ ಸ್ನಿಗ್ಧವರ್ಣಃ ಪ್ರತಾಪವಾನ್ ।
ಸಮಃ ಸಮವಿಭಕ್ತಾಂಗೋ ವರ್ಣಂ ಶ್ಯಾಮಂ ಸಮಾಶ್ರಿತಃ ॥ ೧೬॥

ತಿಳಿದುಕೊಂಡಿರುವುದನ್ನೇ ನಾನು ಯಥಾರ್ಥವಾಗಿ ಹೇಳಿದರೆ ನನ್ನ ವಿಷಯದಲ್ಲಿ ವಿಶ್ವಾಸಹುಟ್ಟುವುದು ಸಹಜ.) ॥೭॥

ಎಲೈ ಜನಕನಂದಿನಿಯೇ! ಶ್ರೀರಾಮನು ಕಮಲ ಪತ್ರದಂತೆ ಕಣ್ಣುಗಳುಳ್ಳವನು, ತನ್ನ ನಿರುಪಮ ಕಾಂತಿಯಿಂದ ಸಮಸ್ತ ಪ್ರಾಣಿಗಳಿಗೆ ಆನಂದವನ್ನು ಕೊಡುವವನು. ರೂಪಸಂಪನ್ನನು. ಸಹಜ ಸೌಜನ್ಯ ಸಂಪನ್ನನು. ॥೮॥ ಅವನು ತೇಜಸ್ಸಿನಲ್ಲಿ ಸೂರ್ಯನಂತಿರುವನು. ಸಹನೆಯಲ್ಲಿ ಭೂದೇವಿಯಂತೆಯೂ, ಬುದ್ಧಿಯಲ್ಲಿ ಬೃಹಸ್ಪತಿಯಂತೆಯೂ ಯಶಸ್ಸಿನಲ್ಲಿ ದೇವೇಂದ್ರನಿಗೆ ಸಮಾನನಾಗಿರುವನು. ॥೯॥ ಪರಂತಪನಾದ ಶ್ರೀರಾಮನು ಜೀವಲೋಕಕ್ಕೆ ರಕ್ಷಕನು. ಆಶ್ರಿತರಾದ (ಶರಣಾಗತರಾದ)ವರನ್ನು ಪರಿರಕ್ಷಿಸುವವನು. ತನ್ನ ಚಾರಿತ್ರ್ಯವನ್ನು ರಕ್ಷಿಸಿಕೊಳ್ಳುವವನು. ಅಂತೆಯೇ ಧರ್ಮದ ರಕ್ಷಣೂ ಆಗಿರುವನು. ॥೧೦॥ ಎಲೈ ಸೀತಾದೇವಿಯೇ! ಶ್ರೀರಾಮನು ಚಾತುರ್ವರ್ಣ್ಯಧರ್ಮಗಳ ರಕ್ಷಕನು. ಲೋಕಮರ್ಯಾದೆಗಳನ್ನು ತಾನು ಪಾಲಿಸುತ್ತಾ, ಪ್ರಜೆಗಳಿಂದ ಪಾಲಿಸುವಂತೆ ಪ್ರವರ್ತಿಸುವವನು. ॥೧೧॥ ಕಾಂತಿವಂತನೂ, ಸರ್ವಲೋಕಗಳಿಗೆ ಅತ್ಯಂತ ಪೂಜ್ಯನೂ, ಬ್ರಹ್ಮಚರ್ಯ ವ್ರತವನ್ನು ಪಾಲಿಸುವವನೂ, ಸತ್ಪುರುಷರು ಮಾಡಿದ ಉಪಕಾರವನ್ನು ಮರೆಯದಿರುವವನೂ, ವ್ಯವಹಾರ ಜ್ಞಾನ ಸಂಪನ್ನನೂ, ಲೋಕಕಲ್ಯಾಣಕ್ಕಾಗಿ ಕರ್ಮಗಳನ್ನು ಆಚರಿಸುವವನೂ ಆಗಿದ್ದಾನೆ. ॥೧೨॥ ರಾಜವಿದ್ಯಾ ಕುಶಲನೂ,* ಬ್ರಾಹ್ಮಣರನ್ನು ಆದರಿಸುವವನೂ, ಸರ್ವವಿದ್ಯಾ ಪಾರಂಗತನೂ, ಸದಾಚಾರ ಸಂಪನ್ನನೂ, ವಿನಯ ಶೀಲನೂ, ಶತ್ರುತಾಪಕನೂ ಆಗಿರುವನು. ॥೧೩॥ ರಾಮನು ಯಜುರ್ವೇದದಲ್ಲಿ ಪಾರಂಗತನೂ ವೇದವಿದರಿಂದ ಪೂಜಿಸಲ್ಪಡುವವನೂ, ಧರ್ಮರ್ವೇದವನ್ನು, ಋಕ್ಸಾಮಾಥರ್ವಣ ವೇದಗಳನ್ನು ತಿಳಿದವನೂ, ಶಿಕ್ಷಾ-ವ್ಯಾಕರಣಾದಿ ವೇದಾಂಗಗಳಲ್ಲಿಯೂ ನಿಷ್ಣಾತನು. ॥೧೪॥ ದೇವಿ! ರಾಮನೆಂಬ ಹೆಸರಿನಿಂದ ವಿಖ್ಯಾತನಾಗಿರುವ ನಿನ್ನ ಪತಿಯು ವಿಸ್ತಾರವಾದ ಹೆಗಲುಳ್ಳವನೂ, ಮಹಾಬಾಹು. ಶಂಖದಿಂತೆ ಕುತ್ತಿಗೆಯುಳ್ಳವನು. ಸುಂದರವಾದ ಮುಖವುಳ್ಳವನೂ, ಮುಚ್ಚಿಹೋದ ಜತ್ರು (ಶಿರಸ್ಸು-ಭುಜಗಳ ಸಂಧಿ) ವುಳ್ಳವನೂ, ಮನೋಹರವಾಗಿಯೂ, ಕೆಂಪಾಗಿಯೂ ಇರುವ ಕಣ್ಣುಗಳುಳ್ಳವನಾಗಿದ್ದಾನೆ. ॥೧೫॥ ಅವನು ದುಂದುಭಿಧ್ವನಿಯಂತೆ ಗಂಭೀರವಾದ ಕಂಠಸ್ವರವುಳ್ಳವನೂ, ಫಳಫಳಿಸುತ್ತಿರುವ ದೇಹದಕಾಂತಿಯುಳ್ಳವನೂ, ಪ್ರತಾಪಶಾಲಿಯೂ, ಹೆಚ್ಚು-ಕಡಿಮೆಗಳಿಲ್ಲದೆ ಪರಿಪುಷ್ಟವಾದ ಅವಯವಗಳುಳ್ಳವನೂ, ಮೇಘಶ್ಯಾಮವರ್ಣದಿಂದ ಶೋಭಿತನು ಆಗಿರುವನು. ॥೧೬॥

* ಆನ್ವೀಕ್ಷಕೀ ತ್ರಯೀ ವಾರ್ತಾ ದಂಡನೀತಿಶ್ಚ ಶಾಶ್ವತೀ । ವಿದ್ಯಾಶ್ಚತಸ್ರಸ್ತು ಲೋಕಸಂಸ್ಥಿತಿ ಹೇತವಃ ॥

ತ್ರಿಸ್ವಿದಸ್ತ್ರಿಪ್ರಲಂಬಶ್ಚ ತ್ರಿಸಮಸ್ತ್ರಿಷು ಚೋನ್ನತಃ ।
ತ್ರಿತಾಮ್ರಸ್ತ್ರಿಷು ಚ ಸ್ನಿಗ್ಧೋಗಂಭೀರಸ್ತ್ರಿಷು ನಿತ್ಯಶಃ ॥ ೧೭॥

ತ್ರಿವಲೀವಾನ್ತ್ರ್ಯವನತಶ್ಚತುರ್ವ್ಯಂಗಸ್ತ್ರಿ ಶೀರ್ಷವಾನ್ ।
ಚತುಷ್ಕಲಶ್ಚತುರ್ಲೇಖಶ್ಚತುಷ್ಕಿಷ್ಕುಶ್ಚತುಃಸಮಃ ॥ ೧೮॥

ಶ್ರೀರಾಮನ ಅವಯವಗಳಲ್ಲಿ ವಕ್ಷಸ್ಥಳ, ಮಣಿಕಟ್ಟು ಮತ್ತು ಮುಷ್ಟಿಗಳು ಈ ಮೂರು ಸ್ಥಾನಗಳು ಸ್ಥಿರವಾಗಿದ್ದವು[೧]. (ಇವು ರಾಜಲಕ್ಷಣಗಳು). ಹುಬ್ಬುಗಳು, ತೋಳುಗಳು, ಮುಷ್ಟಗಳು, ಇವುಗಳು ದೀರ್ಘವಾಗಿದ್ದವು[೨]. (ಇದು ಚಿರಂಜೀವಿ ಹಾಗೂ ಧನಿಕನ ಲಕ್ಷಣಗಳು) ತಲೆಗೂದಲಿನ ಅಗ್ರಭಾಗಗಳು, ವೃಷಣ ಮತ್ತು ಮೊಣಕಾಲುಗಳು ಸಮಪ್ರಮಾಣವಾಗಿದ್ದವು[೩]. (ಇವನು ಭೂಪತಿಯಾಗುತ್ತಾನೆ.) ನಾಭಿ, ಹೊಟ್ಟೆ ಮತ್ತು ಎದೆ ಉನ್ನತವಾಗಿದ್ದವು[೪]. (ಇದೂ ರಾಜಲಕ್ಷಣಗಳೇ). ನೇತ್ರಾಂತಗಳು, ಉಗುರುಗಳು ಮತ್ತು ಅಂಗೈ-ಅಂಗಾಲುಗಳು ಕೆಂಪಗಿದ್ದವು[೫]. (ಇವು ಸುಖೀಪುರುಷರ ಲಕ್ಷಣಗಳು). ಪಾದರೇಖೆಗಳು, ತಲೆಗೂದಲು, ಲಿಂಗವಣಿ ಇವು ನುಣುಪಾಗಿದ್ದವು[೬]. (ಇವು ಭಾಗ್ಯವಂತನ ಲಕ್ಷಣಗಳು) ಅವನ ಗಂಭೀರವಾದ ನಡಿಗೆ, ನಾಭಿಯು ಆಳವಾಗಿದೆ[೭]. (ಇದು ಪ್ರಶಂಸಾ ಪಾತ್ರನ ಲಕ್ಷಣಗಳು.) ॥೧೭॥

ರಾಮನ ಹೊಟ್ಟೆಯ ಮೇಲೆ ಅಥವಾ ಕುತ್ತಿಗೆಯಲ್ಲಿ ತ್ರಿವಳಿ (ಮೂರುಗೆರೆ)ಗಳಿವೆ. ಅವನ ಪಾದತಲಗಳು ತಗ್ಗಾಗಿವೆ, ಸ್ತನಗಳ ತೊಟ್ಟು ಕೆಳಮುಖವಾಗಿವೆ. ಕಾಲಿನಲ್ಲಿರುವ ರೇಖೆಗಳು ಕೆಳಮುಖವಾಗಿವೆ[೮]. (ಇವು ಧನಿಕನ ಲಕ್ಷಣಗಳು) ಕುತ್ತಿಗೆ, ಪೃಜನನ, ಪೃಷ್ಠ, ಮೊಣಕಾಲುಗಳು ಇವು ನಾಲ್ಕು ಪ್ರಸ್ವವಾಗಿವೆ[೯]. (ಇವು ಪೂಜ್ಯರ ಲಕ್ಷಣಗಳು) ತಲೆಯಲ್ಲಿ ಮೂರು ಸುಳಿಗಳಿವೆ[೧೦]. (ಇವು ಮಹಾರಾಜನ ಲಕ್ಷಣಗಳು) ಅವನ ಅಂಗುಷ್ಠದ ಮೂಲದಲ್ಲಿ ಚುತರ್ದೇದ ಪ್ರಾಪ್ತಿ ಲಕ್ಷಣವಾದ ನಾಲ್ಕುಗೆರೆಗಳಿವೆ[೧೧]. ಹಣೆಯಲ್ಲಿ ಪಾದಗಳಲ್ಲಿ ಕೈಗಳಲ್ಲಿ ನಾಲ್ಕು ಗೆರೆಗಳನ್ನು ಹೊಂದಿರುವನು[೧೨]. (ಇವು

೧. ಉರಶ್ಚ ಮಣಿಬಂಧಶ್ಚ ಮುಷ್ಟಿಶ್ಚ ಸ್ಪಶತೇ ಸ್ಥಿರಾ । ೨. ದೀರ್ಘಭ್ರೂಬಾಹು ಮುಷ್ಕತ್ತು ಚಿರಂಜೀವೀ ಧನೀ ನರಃ ।
೩. ಕೇಶಾಗ್ರಂ ವೃಷಣಂ ಜಾನು ಸಮಾ ಯಸ್ಯ ಸ ಭೂಪತಿಃ । ೪. ನಾಭ್ಯಂತಃ ಕುಕ್ಷಿ ವಕ್ಷೋಭಿರುನ್ನತೈಃ ಕ್ಷಿಪ್ತೋ ಭವೇತ್ ।
೫. ನೇತ್ರಾಂತ ನಖಿ ಪಾಣ್ಯಂ ಘ್ರಿತಲೈಸ್ತಾಮ್ರೈಸ್ತ್ರಿಭಿಃ ಸುಖೀ । ೬. ಸ್ನಿಗ್ಧಾಭವಂತಿ ವೈಯಸಾಂ ಪಾದರೇಖಾಃ ಶಿರೋರುಹಾಃ । ತಥಾ ಲಿಂಗಮಣಿ ಸ್ತೇಷಾಂ ಮಹಾಭಾಗ್ಯಂ ವಿನಿರ್ದಿಶೇತ್ ॥ ೭. ಸ್ಥಲೇಗತೌ ಚ ನಾಭೌ ಚ ಗಂಭೀರಸ್ತ್ರಿಷು ಶಸ್ಯತೇ ।

೧. "ಪೀನೋಚಿತೈರ್ನಿಮ್ನೈಃ ಕ್ಷಿಪಿತಯ ಶ್ಲೂಚುಕೈಃ ಸ್ಪಸ್ಟೈಃ ಸುಖಿನಃ । ಸ್ನಿಗ್ಧಾ ವಿಮ್ನಾ ರೇಖಾ ಧನೀನಾಂ ತದ್ವ್ಯಾತ್ಯಯೇನ ನಿಸ್ವಾನಾಮ್ ॥" ಸ್ತನಗಳು ಪುಷ್ಟವಾಗಿ ಕೆಳಗೆ ಬಾಗಿದ್ದರೆ ಇದು ರಾಜಲಕ್ಷಣವು. ಸ್ತನಾಗ್ರಗಳೂ, ಪಾದರೇಖೆಗಳೂ, ಕೆಳಮುಖವಾಗಿದ್ದರೆ ಧನಿಕ ಲಕ್ಷಣವು. ಇದಕ್ಕೆ ವಿಪರೀತವಾಗಿದ್ದರೆ ದರಿದ್ರ ಲಕ್ಷಣವು.

೨. "ಗ್ರೀವಾ ಪ್ರದನನಂ ಪೃಷ್ಠಂ ಹ್ರಸ್ವಂ ಜಂಘಾ ಚ ಪೂಜ್ಯತೇ ।" ೩. "ಆವರ್ತತ್ರಯರುಚಿರಂ ಯಸ್ಯ ಶಿರಃ ಸ ಕ್ಷಿಪ್ತಿಭೃತಾಂ ನೇತಾ ।"

೪. ಮೂಲೇಽಗುಂಷ್ಠಸ್ಯ ವೇದಾನಾಂ ಚತಸ್ರಃಸ್ಪಸ್ಟ ವಿವ ವಾ । ಏಕಾ ದ್ವೇವಾ ಯಥಾಯೋಗಂ ರೇಖಾ ಜ್ಞೇಯಾ ದ್ವಿಜಾತಿನಾಮ್ ॥" ಹೆಬ್ಬೆರಳಿನ ಮೂಲನದಲ್ಲಿ ಎಷ್ಟು ರೇಖೆಗಳವೆಯೋ ಅಷ್ಟು ವೇದಗಳಲ್ಲಿ ಪ್ರವೀಣಾನಾಗುತ್ತಾನೆ.

೫. (ಅ) "ಉಲಾಟೇ ಯಸ್ಯ ದೃಶ್ಯಂತೇ ಚತುಸ್ಪಾರ್ದ್ವ್ಯೇಕರೇಖಿಕಾಃ । ಶತದ್ವಯಂ ಶತಂ ಷಷ್ಟಿ ತಸ್ಯಾಯುರ್ನಿಂಶತಿಸ್ತಥಾ ॥"
ಹಣೆಯಲ್ಲಿ ನಾಲ್ಕು ಗೆರೆಗಳಿದ್ದರೆ ೨೦೦ ವರ್ಷ, ಮೂರು ಗೆರೆಗಳಿದ್ದರೆ ೧೦೦, ಎರಡು ಗೆರೆಗಳಿದ್ದರೆ ೬೦, ಒಂದೇ ಗೆರೆ ಇದ್ದರೆ ೩೦ ವರ್ಷಗಳು ಆಯುಃ ಪ್ರಮಾಣವು.

(ಆ) "ಯಸ್ಯ ಪಾದತಲೇ ವಜ್ರ ಧ್ವಜ ಶಂಖಾಂಕುಶೋಪಮಾಃ । ರೇಖಾ ಸಮ್ಯಕ್ಪ್ರಕಾಶಂತೇ ಮನುಜೇಂದ್ರಂ ತಮಾದಿಶೇತ್ ॥"
ಅಂಗಾಲುಗಳಲ್ಲಿ ವಜ್ರ, ಧ್ವಜ, ಶಂಖ, ಅಂಕುಶ ಈ ಆಕಾರದಿಂದ ರೇಖೆಗಳುಳ್ಳವನು ಚಕ್ರವರ್ತಿಯಾಗುತ್ತಾನೆ.

(ಇ) "ಪಾಣೌ ಚತಸ್ರೋ ರೇಖಾಶ್ಚ ಯಸ್ಯಚ್ಛಿನ್ನತ್ಯಭಂಗುರಾಃ ।"
ಅಂಗೈಯಲ್ಲಿ ಭಂಗವಿಲ್ಲದ ನಾಲ್ಕು ಗೆರೆಗಳಿದ್ದರೆ ಅವನು ಚಕ್ರವರ್ತಿಯಾಗುತ್ತಾನೆ.

ಚತುರ್ದಶಸಮದ್ವಂದ್ವಶ್ಚತುರ್ದಂಷ್ಟ್ರಶ್ಚತುರ್ಗತಿಃ ।
ಮಹೋಷ್ಠ ಪನುನಾಸಶ್ಚ ಪಂಚಸ್ನಿಗ್ಧೋಷ್ಣಪಂಚವಾನ್ ॥ ೧೯॥

ಆಯುರ್ದಾಯವು, ಮಹಾರಾಜನ ಲಕ್ಷಣಗಳು) ಎತ್ತರವಿರುವವನು[೬]. (ಅವನು ತೊಂಭತ್ತಾರು ಅಂಗುಲಗಳು ಎತ್ತರವಿರುವವನು. ಇದು ದೇವತಾ ಲಕ್ಷಣವು.) ಬಾಹುಗಳು, ಮೊಣಕಾಲುಗಳು, ತೊಡೆ, ಮಿನಖಂಡ ಇವು ನಾಲ್ಕು ಸಮವಾಗಿದ್ದು ಸುಂದರವಾಗಿದ್ದವು[೭]. ॥೧೮॥

ಶ್ರೀರಾಮನ ಹದಿನಾಲ್ಕು ಜೊತೆಗಳು ಅಂದರೆ - ಹುಬ್ಬುಗಳು, ಮೂಗುಹೊಳ್ಳೆಗಳೂ, ಕಣ್ಣುಗಳೂ, ಕಿವಿಗಳು, ತುಟಿಗಳು, ಸ್ತನಾಗ್ರಗಳು, ಮೊಣಕೈಗಳು, ಮಣಿಕಟ್ಟುಗಳು, ಮೊಣಕಾಲುಗಳು, ವೃಷಣಗಳು, ಕಟಿಗಳು, ಕೈಗಳು, ಪಾದಗಳು, ಪಿರ್ರೆಗಳ ಮೇಲಿರುವ ಎತ್ತರವಾದ ಭಾಗಗಳು ಇವುಗಳು ಸಮಪ್ರಮಾಣದಲ್ಲಿವೆ[೮]. (ಇವು ರಾಜಲಕ್ಷಣಗಳು) ನಾಲ್ಕು ಲಕ್ಷಣಗಳಿಂದ ಕೂಡಿದ ಮುಂಭಾಗವ ಹಲ್ಲುಗಳಿರುವವು[೯]. ಅವನು ಸಿಂಹ, ಶಾರ್ದೂಲ, ಗಜ, ವೃಷಭ ಇವುಗಳಂತೆ ನಾಲ್ಕು ಬಗೆಯಾದ ನಡೆಯುಳ್ಳವನು[೧೦]. ಸುಂದರವಾದ ಕೆಂಪಾದ ತುಟಿಗಳುಳ್ಳವನು. ಮಾಂಸಲವಾದ ದವಡೆಗಳುಳ್ಳವನು. ಎತ್ತರವಾದ ಹಾಗೂ ನೀಳವಾದ ಮೂಗು ಉಳ್ಳವನಾಗಿದ್ದಾನೆ[೧೧]. ಅವನ ಮಾತು, ಮುಖ, ಉಗುರು, ಕೂದಲು ಮತ್ತು ಚರ್ಮ ಈ ಐದು ಅವಯವಗಳು ಸ್ನಿಗ್ಧ (ಮೃದುವಾದ) ವಾಗಿವೆ[೧೨]. ಅವನಿಗೆ ಪೃಷ್ಠವಂಶ, ಶರೀರ, ಕೈ ಬೆರಳುಗಳು, ಕಾಲ್ಬೆರಳುಗಳು, ಕೈಗಳು, ಮೂಗೂ, ಕಣ್ಣುಗಳು, ಕಿವಿಗಳು, ಪ್ರಜನವು ಈ ಎಂಟು ಅವಯವಗಳು ವಿಸ್ತಾರವಾಗಿಯೂ, ದೀರ್ಘವಾಗಿಯೂ ಇದ್ದವು[೧೩]. ॥೧೯॥

ಶ್ರೀರಾಮನಿಗೆ ಮುಖ, ಕಣ್ಣುಗಳು, ಬಾಯಿ, ನಾಲಿಗೆ, ತುಟಿ, ದವಡೆ, ಸ್ತನಗಳು, ಉಗುರುಗಳು, ಕೈಗಳು, ಕಾಲುಗಳು ಈ ಹತ್ತು ಅವಯವಗಳು ಪದ್ಮಾಕಾರದಲ್ಲಿವೆ[೧೪]. ಅವನ ವಕ್ಷಃಸ್ಥಳ, ತಲೆ, ಕುತ್ತಿಗೆ, ತೋಳುಗಳು, ಹೆಗಲು, ನಾಭಿ, ಪಾರ್ಶ್ವಗಳು, ಪೃಷ್ಠಗಳು, ಕಿವಿಗಳು ಈ ಹತ್ತು ವಿಸ್ತಾರ (ದೊಡ್ಡ) ವಾಗಿವೆ.

೬. "ಷಣ್ಣವತ್ಯಂಗುಲೋತ್ಸೇಧೋ ಯಃ ಪುಮಾನ್ ಸ ದಿವೌಕಸಃ " ೭. "ಬಾಹೂಜಾನೂರು ಜಂಘಾಶ್ಚ ಚತ್ವಾರ್ಯಪಸಮಾನಿ ಚ । "

೮. "ಭ್ರುವೌ ನಾಸಾಪುಟೇ ನೇತ್ರೇ ಕರ್ಣಾವೋಷ್ಠೌ ಚ ಚೂಚುಕಾ । ಕೂರ್ಪರಾ ಮಣಿಬಂಧೌ ಚ ಜಾನುನೀ ವೃಷಣೌ ಕಟೀ ॥
ಕರೌ ಪಾದೌ ಸ್ಫಿಜಾ ಯಸ್ಯ ಸಮೌ ಜ್ಞೇಯಃ ಸ ಭೂಪತಿಃ ॥
೯. "ಸ್ನಿಗ್ಧಾ ಘನಾಶ್ಚ ದಶನಾಃ ಸುತೀಕ್ಷ್ಣಾ ದಂಷ್ಟ್ರಾಃ ಸಮಾಶ್ಚ ಶುಭಾಃ ।"
ಹಲ್ಲುಗಳ ನಾಲ್ಕು ಲಕ್ಷಣಗಳು ಇಂತಿವೆ - ಸುಂದರವಾಗಿಯೂ, ನುಣುವಾಗಿಯೂ, ಗಟ್ಟಿಯಾಗಿಯೂ, ತೀಕ್ಷ್ಣವಾಗಿಯೂ ಇರಬೇಕು.
೧೦. "ಗಜಸಿಂಹಗತೀ ವೀರೌ ಶಾರ್ದೂಲವೃಷಭೋಪಮೌ ।" ೧೧. "ಬಂಧೂಜೀವಕಸುಮೋಪಮೋಧರೋ ಮಾಂಸಲೋ ರುಚಿರಬಿಂಬರೂಪದೃಕ್ । ಪೂರ್ಣಮಾಂಸಲಹನುಸ್ತುಭೂಮಿಸ್ತುಂಗತುಂಡರುಚಿರಾಕೃತಿಸ್ತಥಾ ॥"
೧೨. "ಕೇಶನೇತ್ರ ದಂತತ್ವಕ್ ಪಾದತಲಾನಿ ಪಂಚಸ್ನಿಗ್ಧಾನಿ ।"
"ಚಕ್ಷು ಸ್ನೇಹೇನ ಸೌಭಾಗ್ಯಂ ದಂತಹಸ್ತೇನ ಶೋಭನಮ್ । ತ್ವಚ ಸ್ನೇಹೇನ ಶಯನಮ್ ಪಾದಸ್ನೇಹೇನ ವಾಹನಮ್॥
ಸ್ನಿಗ್ಧನಲ ಮೃದುಕುಂಚತಾಸ್ತಥಾ ಮೂರ್ಧಜಾಸ್ತುಖಿ ಕರಾಸ್ತಮಂಶಿರಃ ।"
ಮನೋಹರವಾದ ಕಣ್ಣುಗಳು ಸೌಭಾಗ್ಯವನ್ನೂ, ದಂತಗಳು ಭೋಜನ ಸೌಖ್ಯವನ್ನೂ, ಮೃದುವಾದ ಚರ್ಮವು ಶಯನ ಸೌಖ್ಯವನ್ನೂ, ಪಾದಗಳು ವಾಹನ ಸೌಖ್ಯವನ್ನು, ಕೂದಲುಗಳು ಸುಖಿಗಳನ್ನು ಕೊಡುವಂತಹವುಗಳು.
೧೩. ಪೃಷ್ಠವಂಶಃ ಶರೀರಂ ಚ ಹಸ್ತ ಪಾದಾಂಗುಲೀ ಕರೌ । ನಾಸಿಕಾ ಚಕ್ಷುಷೀ ಕರ್ಣೌ ಪ್ರಜನೋಯಸ್ಯ ಚಾಯತಾಃ ॥

೧. ಮುಖನೇತ್ರಾಸ್ಯ ಜಿಹ್ವೋಷ್ಠ ತಾಲುಸ್ತನಖಾಃ ಕರೌ । ಪಾದೌ ಚ ದಶ ಹದ್ಯಾನಿ ಪದ್ಮಾಕಾರಾಣಿ ಯಸ್ಯ ಚ ॥
೨. ಶಿರೋಲಲಾಟೇ ಶ್ರವಣೇ ಗ್ರೀವಾ ವಕ್ಷಶ್ಚ ಹೃತ್ತಥಾ । ಉದರಂ ಪಾಣಿಪಾದೌ ಚ ಪೃಷ್ಠಂ ದಶ ಭೃಷಂತಿ ಚ ।

ದಶಪದ್ಯೋ ದಶಬೃಹತ್ ತ್ರಿಭಿರ್ವ್ಯಾಪ್ತೋ ದ್ವಿಶುಕ್ಲವಾನ್ ।
ಷಡುನ್ನತೋ ನವತನುಸ್ತ್ರಿಭಿರ್ವ್ಯಾಪ್ನೋತಿ ರಾಘವಃ ॥ ೨೦॥

ಸತ್ಯಧರ್ಮಪರಃ ಶ್ರೀಮಾನ್ ಸಂಗ್ರಹಾನುಗ್ರಹೇ ರತಃ ।
ದೇಶಕಾಲವಿಭಾಗಜ್ಞಃ ಸರ್ವಲೋಕ ಪ್ರಿಯಂವದಃ ॥ ೨೧॥

ಭ್ರಾತಾ ಚ ತಸ್ಯ ದ್ವೈಮಾತ್ರಃ ಸೌಮಿತ್ರಿ ರಪರಾಜಿತಃ ।
ಅನುರಾಗೇಣ ರೂಪೇಣ ಗುಣೈಶ್ಚೈವ ತಥಾ ವಿಧಃ ॥ ೨೨॥

ಸ ಸುವರ್ಣಚೃವಿಃ ಶ್ರೀಮಾನ್ ರಾಮಃಶ್ಯಾಮೋ ಮಹಾಯಶಾಃ ।
ತಾವುಭೌ ನರಶಾರ್ದೂಲೌ ತ್ವದ್ದರ್ಶನಸಮುತ್ಸುಕೌ ॥ ೨೩॥

ವಿಚಿನ್ವಂತೌ ಮಹೀಂ ಕೃತ್ಸ್ನಾಮಸ್ಮಾಭಿರಭಿಸಂಗತೌ ।
ತ್ವಾಮೇವ ಮಾರ್ಗಮಾಣೌ ತೌ ವಿಚರಂತೌ ವಸುಂಧರಾಮ್ ॥ ೨೪॥

ದದರ್ಶತುರ್ಮೃಗಪತಿಂ ಪೂರ್ವಜೇನಾವರೋಪಿತಮ್ ।
ಋಷ್ಯಮೂಕಸ್ಯ ಪೃಷ್ಠೇ ತು ಬಹುಪಾದಪಸಂಕುಲೇ ।
ಭ್ರಾತುರ್ಭಯಾರ್ತಮಾಸೀನಂ ಸುಗ್ರೀವಂ ಪ್ರಿಯದರ್ಶನಮ್ ॥ ೨೫॥

ವಯಂ ತು ಹರಿರಾಜಂ ತಂ ಸುಗ್ರೀವಂ ಸತ್ಯಸಂಗರಮ್ ।
ಪರಿಚರ್ಯಾಮಹೇ ರಾಜ್ಯಾತ್ ಪೂರ್ವಜೇನಾವರೋಪಿತಮ್ ॥ ೨೬

ತತಸ್ತೌ ಚೀರವಸನೌ ಧನುಃ ಪ್ರವರಪಾಣಿನೌ ।
ಋಷ್ಯಮೂಕಸ್ಯ ಶೈಲಸ್ಯ ರಮ್ಯಂ ದೇಶಮುಪಾಗತೌ ॥ ೨೭॥

ಅವನಲ್ಲಿ ತೇಜಸ್ಸು, ಯಶಸ್ಸು ಸಂಪತ್ತು ಇವು ಮೂರು ವಿಸ್ತಾರವಾದುವು ಗಳು[೩]. ಬಿಳಿಯ ಬಣ್ಣದ, ಸ್ವಚ್ಛವಾದ ಹಲ್ಲು, ಕಣ್ಣುಗಳನ್ನು ಹೊಂದಿರುವವನು. ಪರಿಶುದ್ಧವಾದ, ಶುಭವಾದ ಮಾತೃವಂಶವನ್ನೂ, ಪಿತೃವಂಶವನ್ನು ಹೊಂದಿದವನು. ಅವನಿಗೆ ಕಂಕುಳು, ಹೊಟ್ಟೆ, ವಕ್ಷಃಸ್ಥಳ, ಮೂಗು, ಹೆಗಲು, ಮತ್ತು ಹಣೆ ಈ ಆರು ಎತ್ತರವಾಗಿದ್ದವು. ಇದು ಎತ್ತರವಾಗಿದ್ದರೆ ಶುಭವನ್ನುಂಟುಮಾಡುತ್ತವೆ[೪]. ಅವನಿಗೆ ತಲೆಗೂದಲು, ಗಡ್ಡ-ಮೀಸೆಗಳು, ಉಗುರು, ಮೈಗೂದಲೂ, ಚರ್ಮ, ಬೆರಳುಗಳ ಗಿಣ್ಣುಗಳು, ಲಿಂಗವು, ಬುದ್ಧಿ, ದೃಷ್ಟಿ ಹೀಗೆ ಈ ಒಂಭತ್ತು ಅವಯವಗಳು ಸೂಕ್ಷ್ಮವಾಗಿದ್ದವು. ಅವನು ಪೂರ್ವಾಹ್ನ, ಮಧ್ಯಾಹ್ನ, ಅಪರಾಹ್ನ ಎಂಬ ಈ ಮೂರೂ ಕಾಲದಲ್ಲಿ ಧರ್ಮಾರ್ಥಕಾಮಗಳನ್ನು ಆಚರಿಸುವವನಾಗಿದ್ದಾನೆ. ॥೨೦॥

ಶ್ರೀರಾಮನು ಸಕಲಲೈಶ್ಚರ್ಯ ಸಂಪನ್ನನು ಸತ್ಯಭಾಷಣದಲ್ಲಿ, ಧರ್ಮಾಚರಣೆಯಲ್ಲಿ ನಿರತನು. ಧರ್ಮಮಾರ್ಗದಲ್ಲಿ ಧನವನ್ನುಗಳಿಸಿ ಸತ್ಪಾತ್ರರಿಗೆ ದಾನಮಾಡುವವನು. ದೇಶಕಾಲಕ್ಕನುಸಾರವಾಗಿ ಪ್ರವರ್ತಿಸುವವನು. ಎಲ್ಲರೊಡನೆ ಪ್ರೀತಿಯಿಂದ ಮಾತಾಡುವವನು ಆಗಿದ್ದಾನೆ. ॥೨೧॥

ಶ್ರೀರಾಮನ ಸೋದರನಾದ ಲಕ್ಷ್ಮಣನು ಕೌಸಲ್ಯಾ-ಸುಮಿತ್ರೆಯರಿಗೆ ಪ್ರೀತಿಪಾತ್ರನು. ಅವನು ಅನುರಾಗದಿಂದ, ರೂಪ-ಗುಣಗಳಿಂದ ಶ್ರೀರಾಮನನ್ನೇ ಹೋಲುತ್ತಾನೆ. ಅವನು ಸಾಟಿಯಿಲ್ಲದ ಪರಾಕ್ರಮ ಶಾಲಿಯು. ಪ್ರಸಿದ್ಧನಾದ ಶ್ರೀರಾಮನು ಮೇಘಶ್ಯಾಮನು, ಲಕ್ಷ್ಮಣನು ಭಂಗಾರವರ್ಣದವನು. ಆ ಪುರುಷ ಶ್ರೇಷ್ಠರಿಬ್ಬರೂ ನಿನ್ನನ್ನು ನೋಡಬೇಕೆಂದು ಕುತೂಹಲಿಗಳಾಗಿದ್ದಾರೆ. ॥೨೨-೨೩॥

ನರಶ್ರೇಷ್ಠರಾದ ಆ ರಾಮ-ಲಕ್ಷ್ಮಣರಿಬ್ಬರೂ ನಿನ್ನನ್ನು ನೋಡಬೇಕೆಂಬ ಉತ್ಸುಕತೆಯಿಂದ ಸಮಗ್ರವಾದ ಭೂಮಂಡಲದಲ್ಲಿ ಹುಡುಕುತ್ತಾ ಕಡೆಗೆ ನಮ್ಮ ಬಳಿಗೆ ಬಂದರು.॥೨೪॥ ವಾನರ ರಾಜನಾದ ಸುಗ್ರೀವನು ತನ್ನ ಅಣ್ಣನಾದ ವಾಲಿಯಿಂದ ರಾಜ್ಯಭ್ರಷ್ಟನಾಗಿ, ಅವನಿಗೆ ಹೆದರಿ, ದಟ್ಟವಾದ ಮರಗಳಿಂದ ಕೂಡಿದ ಋಷ್ಯಮೂಕ ಪರ್ವತದ ಮೇಲೆ ವಾಸಿಸುತ್ತಿದ್ದನು. ಪ್ರಿಯದರ್ಶನನಾದ ಆ ಸುಗ್ರೀವನನ್ನು ರಾಮ-ಲಕ್ಷ್ಮಣರು ಅಲ್ಲಿ ನೋಡಿದರು. ॥೨೫॥ ಅಗ್ರಜನಾದ ವಾಲಿಯಿಂದ ರಾಜ್ಯದಿಂದ ಹೊರಹಾಕಲ್ಪಟ್ಟ, ಸತ್ಯಪ್ರತಿಜ್ಞನಾದ, ವಾನರಪ್ರಭುವಾದ ಸುಗ್ರೀವನ ಸೇವೆಯನ್ನು ನಾವು ಮಾಡುತ್ತಿದ್ದೆವು. ॥೨೬॥ ಅನಂತರ ನಾರುಮಡಿಯನ್ನು ಉಟ್ಟಿರುವ, ಕೈಯಲ್ಲಿ ಧನುರ್ಬಾಣಗಳನ್ನು ಧರಿಸಿಕೊಂಡಿರುವ, ನರಶ್ರೇಷ್ಠರೂ ಆದ ರಾಮ-ಲಕ್ಷ್ಮಣರು ರಮ್ಯವಾದ ಆ ಋಷ್ಯಮೂಕ ಪರ್ವತ ಪ್ರಾಂತ್ಯಕ್ಕೆ ಆಗಮಿಸಿದರು.

೩. ತ್ರಿಭಿ ರ್ವ್ಯಾಪ್ತಿ ಶ್ಚಯಸಸ್ಯಾತ್ತೇಜಸಾ ಯಶಸಾ ಶ್ರಿಯಾ । ೪. ಕಕ್ಷಃ ಕುಕ್ಷಿಶ್ಚ ವಕ್ಷಶ್ಚ ಘ್ರಾಣಂ ಸ್ಕಂಧೋ ಲಲಾಟಕಾ । ಸರ್ವಭೂತೇಷು ನಿದಿರಷ್ಟಾ ಉನ್ನತಾಂಗಾಃ ಶುಭಪ್ರದಾಃ ॥

ಸ ತೌ ದೃಷ್ಟ್ವಾ ನರವ್ಯಾಘ್ರೌ ಧನ್ವಿನೌ ವಾನರರ್ಷಭಃ ।
ಅವಪ್ಲುತೋ ಗಿರೇಸ್ತಸ್ಯ ಶಿಖಿರಂ ಭಯಮೋಹಿತಃ ॥ ೨೮॥

ತತಃ ಸ ಶಿಖಿರೇ ತಸ್ಮಿನ್ ವಾನರೇಂದ್ರೋ ವ್ಯವಸ್ಥಿತಃ ।
ತಯೋಃ ಸಮಿಪಂ ಮಾಮೇವ ಪ್ರೇಷಯಾಮಾಸ ಸತ್ವರಮ್ ॥ ೨೯॥

ತಾವಹಂ ಪುರುಷವ್ಯಾಘ್ರೌ ಸುಗ್ರೀವವಚನಾತ್ ಪ್ರಭೂ ।
ರೂಪಲಕ್ಷಣಸಂಪನ್ನೌ ಕೃತಾಂಜಲಿರುಪಸ್ಥಿತಃ ॥ ೩೦॥

ತೌ ಪರಿಜ್ಞಾತತತ್ತ್ವಾರ್ಥೌ ಮಯಾ ಪ್ರೀತಿಸಮನ್ವಿತೌ ।
ಪೃಷ್ಠಮಾರೋಪ್ಯ ತಂ ದೇಶಂ ಪ್ರಾಪಿತೌ ಪುರುಷರ್ಷಭೌ ॥ ೩೧॥

ನಿವೇದಿತೌ ಚ ತತ್ತ್ವೇನ ಸುಗ್ರೀವಾಯ ಮಹಾತ್ಮನೇ ।
ತಯೋರನ್ಯೋನ್ಯಸಂಲಾಪಾದ್ಭೃಶಂ ಪ್ರೀತಿರಜಾಯತ ॥ ೩೨॥

ತತ್ರ ತೌ ಪ್ರೀತಿಸಂಪನ್ನೌ ಹರೀಶ್ವರನರೇಶ್ವರೌ ।
ಪರಸ್ಪರಕೃತಾತ್ಥಾಸ್ತೌ ಕಥಯಾ ಪೂರ್ವವೃತ್ತಯಾ ॥ ೩೩॥

ತಂ ತತಃ ಸಾಂತ್ವಯಾಮಾಸ ಸುಗ್ರೀವಂ ಲಕ್ಷ್ಮಣಾಗ್ರಜಃ ।
ಸ್ಮಿತಹೇತೋರ್ವಾಲಿನಾ ಭ್ರಾತ್ರಾ ನಿರಸ್ತಮುರುತೇಜಸಾ ॥ ೩೪॥

ತತಸ್ತ್ವನಾಶಜಂ ಶೋಕಂ ರಾಮಸ್ಯಾಕ್ಲಿಷ್ಟ ಕರ್ಮಣಃ ।
ಲಕ್ಷ್ಮಣೋ ವಾನರೇಂದ್ರಾಯ ಸುಗ್ರೀವಾಯ ನ್ಯವೇದಯತ್ ॥ ೩೫॥

ಸ ಶ್ರುತ್ವಾ ವಾನರೇಂದ್ರಸ್ತು ಲಕ್ಷ್ಮಣೇನೇರಿತಂ ವಚಃ ।
ತದಾನಿನ್ಯುಃ ಕೃತಾರ್ಥಂ ಗ್ರಹಗ್ರಸ್ತ ಇವಾಂಶುಮಾನ್ ॥ ೩೬॥

ತತಸ್ತ್ವದ್ಭಾತ್ರ ಶೋಭೀನಿ ರಕ್ಷಸಾ ಹ್ರಿಯಮಾಣಯಾ ।
ಯಾನ್ಯಾಭರಣಜಾಲಾನಿ ಪಾತಿತಾನಿ ಮಹೀತಲೇ ॥ ೩೭॥

ತಾನಿ ಸರ್ವಾಣಿ ರಾಮಾಯ ಆನೀಯ ಹರಿಯೂಥಪಾಃ ।
ಸಂಹೃಷ್ಟಾ ದರ್ಶಯಾಮಾಸುರ್ಗತಿಂ ತು ನ ವಿದುಸ್ತವ ॥ ೩೮॥

ತಾನಿ ರಾಮಾಯ ದತ್ತಾನಿ ಮಯೈವೋಪಹೃತಾನಿ ಚ ।
ಸ್ವನವಂತ್ಯವಕೀರ್ಣಾನಿ ತಸ್ಮಿನ್ ವಿಗತಚೇತಸಿ ॥ ೩೯॥

ತಾನ್ಯಂಕೇ ದರ್ಶನೀಯಾನಿ ಕೃತ್ವಾ ಬಹುವಿಧಂ ತವ ।
ತೇನ ದೇವಪ್ರಕಾಶೇನ ದೇವೇನ ಪರಿದೇವಿತಮ್ ॥ ೪೦॥

ಪಶ್ಯತಸ್ತಾನಿ ರುದತಸ್ತಾಮ್ಯತಶ್ಚ ಪುನಃ ಪುನಃ ।
ಪ್ರಾದೀಪಯನ್ ದಾಶರಥೇಸ್ತಾನಿ ಶೋಕಮಹಾಗ್ನಿಮ್ ॥ ೪೧॥

ಶಯಿತಂ ಚ ಚಿರಂ ತೇನ ದುಃಖಾರ್ತೇನ ಮಹಾತ್ಮನಾ ।
ಮಯಾಪಿ ವಿವಿಧೈರ್ವಾಕ್ಯೈಃ ಕೃಚ್ಛ್ರಾದುತ್ಥಾಪಿತಃ ಪುನಃ ॥ ೪೨॥

ಧನುರ್ಧಾರಿಗಳಾದ ಆ ನರವೀರರನ್ನು ಆ ಕಪೀಂದ್ರನು ನೋಡಿದನು. ॥೨೭-೨೮॥ ಅವರನ್ನು ನೋಡಿದೊಡನೆ ಸುಗ್ರೀವನು ಭಯಕಂಪಿತನಾಗಿ ಒಂದೇ ನೆಗೆತಕ್ಕೆ ಪರ್ವತ ಶಿಖರವನ್ನು ಸೇರಿ ಅಲ್ಲಿ ಕುಳಿತನು. ಮತ್ತೆ ಕೂಡಲೇ ಅವರ ಬಳಿಗೆ ನನ್ನನ್ನು ಕಳಿಸಿದನು. ॥೨೯॥ ಸುಗ್ರೀವನ ಆಜ್ಞಾನುಸಾರವಾಗಿ ನಾನು ಪ್ರಭಾವಶಾಲಿಗಳಾದ, ಪುರುಷಶ್ರೇಷ್ಠರಾದ, ರೂಪ-ಲಕ್ಷಣಸಂಪನ್ನರಾದ ರಾಮ-ಲಕ್ಷ್ಮಣರನ್ನು ಸಂಧಿಸಿ, ಅಂಜಲಿಬದ್ಧನಾಗಿ ಅವರ ಸಮೀಪಕ್ಕೆ ಹೋದೆನು. ನನ್ನಿಂದ ಸುಗ್ರೀವನ ಸತ್ಯ ಸಂಗತಿಯನ್ನು ತಿಳಿದನಂತರ ಇಬ್ಬರೂ ಸುಪ್ರೀತರಾದರು. ಬಳಿಕ ನಾನು ಅವರಿಬ್ಬರನ್ನು ನನ್ನ ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ಸುಗ್ರೀವನಿದ್ದೆಡೆಗೆ ಕರೆದೊಯ್ದೆನು. ಅವರ ವಾಸ್ತವಿಕ ವಿಷಯವನ್ನು ಮಹಾತ್ಮನಾದ ಸುಗ್ರೀವನಿಗೆ ನಿವೇದಿಸಿಕೊಂಡೆನು. ॥೩೦-೩೨॥ ಪರಸ್ಪರ ಸಂಭಾಷಣೆಯಿಂದಾಗಿ ಇಬ್ಬರಲ್ಲೂ ಪ್ರೀತಿಯುಂಟಾಯಿತು. ಕೀರ್ತಿಸಂಪನ್ನರಾದ ಹರೀಶ್ವರ-ನರೇಶ್ವರರೂ ಹಿಂದಿನ ತಮ್ಮ ಕಷ್ಟ-ಸುಖಗಳ ವಿಚಾರ-ವಿನಿಮಯದಿಂದ ಅನ್ಯೋನ್ಯರಾಗಿ ವಿಶ್ವಾಸವನ್ನು ಹೊಂದಿದರು. ॥೩೩॥

ಬಳಿಕ ಪತ್ನಿಯ ಕಾರಣದಿಂದ ರಾಜ್ಯಭ್ರಷ್ಟನಾದ ಮಹಾತೇಜಸ್ವಿಯಾದ ಸುಗ್ರೀವನನ್ನು ಲಕ್ಷ್ಮಣಾಗ್ರಜನಾದ ಶ್ರೀರಾಮನು ಬಹಳವಾಗಿ ಸಂತೈಸಿದನು. ॥೩೪॥

ಮತ್ತೆ ಎಂತಹ ದುಷ್ಕರವಾದ ಕಾರ್ಯಗಳನ್ನು ಲೀಲಾಜಾಲವಾಗಿ ಸಾಧಿಸುವ ಶ್ರೀರಾಮನಿಗೆ ನಿನ್ನ ಅಪಹರಣದಿಂದ ಉಂಟಾಗಿರುವ ಶೋಕವನ್ನು ಲಕ್ಷ್ಮಣನು ವಾನರೇಂದ್ರನಾದ ಸುಗ್ರೀವನಿಗೆ ಪೂರ್ಣವಾಗಿ ವಿವರಿಸಿದನು.॥೩೫॥ ಲಕ್ಷ್ಮಣನು ತಿಳಿಸಿದ ವಿಷಯವನ್ನು ಕೇಳಿ ವಾನರೇಂದ್ರನಾದ ಸುಗ್ರೀವನು ಗ್ರಹಗ್ರಸ್ತನಾದ ಸೂರ್ಯನಂತೆ ತೇಜೋಹೀನನಾದನು. ॥೩೬॥

ರಾವಣನು ನಿನ್ನನ್ನು ಅಪಹರಿಸಿಕೊಂಡು ಹೋಗುವಾಗ ನೀನ್ನ ಶರೀರದಲ್ಲಿ ಶೋಭಿಸುತ್ತಿರುವ ಆಭರಣಗಳನ್ನು ನೀನು ಭೂಮಿಗೆ ಬೀಳಿಸಿದಿ. ಅವೆಲ್ಲವನ್ನು ವಾನರವೀರರು ತಂದು ಸಂತೋಷದಿಂದ ಶ್ರೀರಾಮನಿಗೆ ತೋರಿಸಿದರು. ಆದರೆ ರಾವಣನು ನೀನ್ನನ್ನು ಕೊಂಡುಹೋದ ಮಾರ್ಗವನ್ನು ಮಾತ್ರ ತಿಳಿಯಲಿಲ್ಲ. ॥೩೭-೩೮॥ ಆ ಆಭರಣಗಳೆಲ್ಲ ಥಳ-ಥಳಿಸುತ್ತಾ ಭೂಮಿಯ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದನ್ನು ನಾನೇ ಒಟ್ಟಾಗಿಸಿ ತಂದು ಸುಗ್ರೀವನಿಗೆ ಒಪ್ಪಿಸಿದ್ದೆ. ಆ ನಗಗಳನ್ನು ಸುಗ್ರೀವನು ಶ್ರೀರಾಮನಿಗೆ ಸಮರ್ಪಿಸಿದನು. ಒಡವೆಗಳನ್ನು ನೋಡಿದ ತತ್‌ಕ್ಷಣ ಶ್ರೀರಾಮನು ಎಚ್ಚರದಪ್ಪಿದವನಂತಾದನು. ಸುಂದರವಾದ ನಿನ್ನ ಆಭರಣಗಳನ್ನು ದಿವ್ಯ ಸ್ವರೂಪನಾದ ಶ್ರೀರಾಮನು ತನ್ನ ತೊಡೆಯಮೇಲೆ ಇಟ್ಟುಕೊಂಡು ಪರಿ-ಪರಿಯಾಗಿ ವಿಲಾಪಿಸತೊಡಗಿದನು. ರಾಮನು ಅದನ್ನು ಪದೇ-ಪದೇ ನೋಡುತ್ತಾ ಅಳುತ್ತಿದ್ದನು. ಈ ವಿಧವಾಗಿ ಅವು ಅವನ ಶೋಕಾಗ್ನಿಯನ್ನು ಪ್ರಜ್ವಲಿಸುವಂತಿತ್ತು. ॥೩೯-೪೧॥

ತಾನಿ ದೃಷ್ಟ್ವಾ ಮಹಾರ್ಹಾಣಿ ದರ್ಶಯಿತ್ವಾ ಮುಹುರ್ಮುಹುಃ ।
ರಾಘವಃ ಸಹ ಸೌಮಿತ್ರಿಃ ಸುಗ್ರೀವೇ ಸಂನ್ಯವೇದಯತ್ ॥ ೪೩॥

ಸ ತವಾದರ್ಶನಾದಾರ್ಯೇ ರಾಘವಃ ಪರಿತಪ್ಯತೇ ।
ಮಹತಾ ಜ್ವಲತಾ ನಿತ್ಯಮಗ್ನಿನೇವಾಗ್ನಿ ಪರ್ವತಃ ॥ ೪೪॥

ತ್ವದ್ಕೃತೇ ತಮನಿದ್ರಾ ಚ ಶೋಕಶ್ಚಿಂತಾ ಚ ರಾಘವಮ್ ।
ತಾಪಯಂತಿ ಮಹಾತ್ಮಾನಮಗ್ನ್ಯಗಾರಮಿವಾಗ್ನಯಃ ॥ ೪೫॥

ತವಾದರ್ಶನಶೋಕೇನ ರಾಘವಃ ಪರಿಪಾಲ್ಯತೇ ।
ಮಹತಾ ಭೂಮಿಕಂಪೇನ ಮಹಾನಿವ ಶಿಲೋಚ್ಚಯಃ ॥ ೪೬॥

ಕಾನನಾನಿ ಸುರಮ್ಯಾಣಿ ನದೀಃ ಪ್ರಸ್ರವಣಾನಿ ಚ ।
ಚರನ್ನ ರತಿಮಾಪ್ನೋತಿ ತ್ವಾಮಪಶ್ಯನ್ನಪ್ಸಾತ್ಮಜೇ ॥ ೪೭॥

ಸ ತ್ವಾಂ ಮನುಜಶಾರ್ದೂಲಃ ಕ್ಷಿಪ್ರಂ ಪ್ರಾಪ್ಸ್ಯತಿ ರಾಘವಃ ।
ಸಮಿತ್ರಬಾಂಧವಂ ಹತ್ವಾ ರಾವಣಂ ಜನಕಾತ್ಮಜೇ ॥ ೪೮॥

ಸಹಿತೌ ರಾಮಸುಗ್ರೀವಾವುಭಾವಕುರುತಾಂ ತದಾ ।
ಸಮಯಂ ವಾಲಿನಂ ಹಂತುಂ ತವ ಚಾನ್ವೇಷಣಂ ತಥಾ ॥ ೪೯॥

ತತಸ್ತಾಭ್ಯಾಂ ಕುಮಾರಾಭ್ಯಾಂ ವೀರಾಭ್ಯಾಂ ಸ ಹರೀಶ್ವರಃ ।
ಕಿಷ್ಕಿಂಧಾಂ ಸಮುಪಾಗಮ್ಯ ವಾಲೀ ಯುದ್ಧೇ ನಿಪಾತಿತಃ ॥ ೫೦॥

ತತೋ ನಿಹತ್ಯ ತರಸಾ ರಾಮೋ ವಾಲಿನಮಾಹವೇ ।
ಸರ್ವರ್ಕ್ಷಹರಿಸಂಘಾನಾಂ ಸುಗ್ರೀವಮಕರೋತ್ ಪತಿಮ್ ॥ ೫೧॥

ರಾಮಸುಗ್ರೀವಯೋರೈಕ್ಯಂ ದೇವ್ಯೇವಂ ಸಮಜಾಯತ ।
ಹನೂಮಂತಂ ಚ ಮಾಂ ವಿದ್ಧಿ ತಯೋರ್ದೂತಮಿಹಾಗತಮ್ ॥ ೫೨॥

ಸ್ವರಾಜ್ಯಂ ಪ್ರಾಪ್ಯ ಸುಗ್ರೀವಃ ಸಮಾನೀಯ ಹರೀಶ್ವರಾನ್ ।
ತ್ವದರ್ಥಂ ಪ್ರೇಷಯಾಮಾಸ ದಿಶೋ ದಶ ಮಹಾಬಲಾನ್ ॥ ೫೩॥

ದುಃಖಿತೇನಾಗಿದ್ದ ಮಹಾತ್ಮನಾದ ಶ್ರೀರಾಮನು ಶೋಕವನ್ನು ತಾಳಲಾರದೆ ಭೂಮಿಯಲ್ಲಿ ಬಿದ್ದು ಬಿಟ್ಟನು. ಆಗ ನಾನು ವಿಧ-ವಿಧವಾದ ಆಶ್ವಾಸನೆಯ ಮಾತುಗಳನ್ನು ಹೇಳಿ ಸಂತೈಸುತ್ತಾ ಅವನನ್ನು ಬಹಳ ಕಷ್ಟದಿಂದ ಹಿಡಿದೆಬ್ಬಿಸಿದೆನು.॥೪೨॥ ಸೌಮಿತ್ರಿಸಹಿತನಾದ ಮಹಾತ್ಮನಾದ ಶ್ರೀರಾಮನು ಆಭರಣಗಳನ್ನು ನೋಡುತ್ತಾ ಪುನಃ ಪುನಃ ನಮ್ಮೆಲ್ಲರಿಗೆ ತೋರಿಸುತ್ತಾ ನಿನ್ನನ್ನು ನೆನೆ-ನೆನೆದು ಬಹಳ ಹೊತ್ತು ವಿಲಪಿಸಿದನು. ಆನಂತರ ಆ ಎಲ್ಲ ಆಭರಣಗಳನ್ನು ಸುಗ್ರೀವನ ವಶಕ್ಕೆ ಒಪ್ಪಿಸಿದನು. ॥೪೪॥ ಎಲೈ ಪೂಜ್ಯಳೇ! ನಿನ್ನನ್ನು ಕಾಣದ ಇರುವುದರಿಂದ ಆ ಶ್ರೀರಾಮನು ನಿತ್ಯವು ಉರಿಯುತ್ತಿರುವ ಆಗ್ನಿಪರ್ವತದಂತೆ ತಪಿಸುತ್ತಿರುವನು. ॥ ೪೫॥

ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಗಳೆಂಬ ಮೂರು ಅಗ್ನಿಗಳು ಅಗ್ನಿಗೃಹವನ್ನು ತಾಪಗೊಳಿಸುವಂತೆ-ನಿನ್ನ ಅಗಲುವಿಕೆಯಿಂದ ನಿದ್ರಾರಾಹಿತ್ಯ, ಶೋಕ ಮತ್ತು ಚಿಂತೆಗಳು ಮಹಾತ್ಮನಾದ ಶ್ರೀರಾಮನನ್ನು ಸಂತಾಪಗೊಳಿಸುತ್ತಿವೆ. ॥೪೬॥ ನಿನ್ನನ್ನು ಕಾಣದೇ ಇರುವ ಕಾರಣದಿಂದ ಶೋಕದಲ್ಲಿ ಮುಳುಗಿದ ರಾಘವನು ದೊಡ್ಡದಾದ, ಭಯಂಕರವಾದ ಭೂಕಂಪದಿಂದ ಪರ್ವತವು ಅಲ್ಲಾಡುವಂತೆ ಕಂಪಿಸುತ್ತಿದ್ದಾನೆ. ॥೪೭॥ ಎಲೈ ರಾಜಕುಮಾರೀ! ನಿನ್ನನ್ನು ಕಾಣದಿರುವ ಶ್ರೀರಾಮನು ಸುರಮ್ಯವಾದ ವನಗಳಲ್ಲಿ, ನದೀತೀರಗಳಲ್ಲಿ, ಚಿಲುಮೆಗಳ ಸಮೀಪದಲ್ಲಿ ಸಂಚರಿಸುತ್ತಿದ್ದರೂ ಅವುಗಳ ಸೊಬಗನ್ನು ನೋಡಿ ಸಂತೋಷಪಡುವುದಿಲ್ಲ. ॥೪೮॥

ಎಲೈ ಜಾನಕೀ! ಆ ಮನುಜಶ್ರೇಷ್ಠನಾದ ಶ್ರೀರಾಮನು-ಬಂಧು ಮಿತ್ರರಿಂದ ಕೂಡಿದ ರಾವಣನನ್ನು ಸಂಹರಿಸಿ, ಶೀಘ್ರವಾಗಿ ನಿನ್ನನ್ನು ಸೇರಲಿರುವನು. (ನಿನ್ನನ್ನು ಕೊಂಡುಹೋಗುವನು) ॥೪೯॥

ರಾಮ-ಸುಗ್ರೀವರಿಬ್ಬರೂ ವಾಲಿಯನ್ನು ಸಂಹರಿಸುವುದಕ್ಕೂ ಹಾಗೂ ನಿನ್ನನ್ನು ಹುಡುಕುವುದಕ್ಕೂ ಪರಸ್ಪರ ಪ್ರತಿಜ್ಞೆಯನ್ನು ಮಾಡಿಕೊಂಡರು. ॥೫೦॥ ಕಪಿಶ್ರೇಷ್ಠನಾದ ಸುಗ್ರೀವನು ವೀರರಾಜಕುಮಾರರಾದ ರಾಮ-ಲಕ್ಷ್ಮಣರೊಡನೆ ಕಿಷ್ಕಿಂಧೆಯನ್ನು ಸಮೀಪಿಸಿದನು. ಶ್ರೀರಾಮನ ಸಹಾಯದಿಂದ ಯುದ್ಧದಲ್ಲಿ ವಾಲಿಯು ಹತನಾದನು. ॥೫೧॥ ಶ್ರೀರಾಮನು ಬಹಳ ಶೀಘ್ರವಾಗಿ ಯುದ್ಧಮಾಡುತ್ತಿದ್ದ ವಾಲಿಯನ್ನು ಸಂಹರಿಸಿ ಎಲ್ಲ ಕಪಿ-ಕರಡಿಗಳ ಸಮೂಹಕ್ಕೆ ಸುಗ್ರೀವನನ್ನು ರಾಜನನ್ನಾಗಿಸಿದನು. ಸೀತಮ್ಮಾ! ಹೀಗೆ ಶ್ರೀರಾಮ-ಸುಗ್ರೀವರಿಗೆ ಸಖ್ಯವು ಏರ್ಪಟ್ಟಿತು. ಆ ಇಬ್ಬರಿಗೂ ದೂತನಾಗಿ ನಾನು ಇಲ್ಲಿಗೆ ಬಂದಿರುವೆನು. ನನ್ನನ್ನು ಹನುಮಂತನೆಂದು ತಿಳಿ. ॥೫೨॥

ದೇವಿ! ಸುಗ್ರೀವನು ಕಿಷ್ಕಿಂಧೆಗೆ ರಾಜನಾದ ಬಳಿಕ ತನ್ನ ಅನುಯಾಯಿಗಳಾದ, ಮಹಾವೀರರಾದ ವಾನರಯೋಧರನ್ನು ಎಲ್ಲ ಕಡೆಗಳಿಂದ ಕರೆಯಿಸಿ, ನಿನ್ನನ್ನು ಹುಡುಕುವುದಕ್ಕಾಗಿ ಎಲ್ಲ ದಿಕ್ಕುಗಳಿಗೂ ಕಳಿಸಿಕೊಟ್ಟನು. ॥೫೩॥ ಮಹಾತೇಜಸ್ವಿಗಳೂ,

ಆದಿಷ್ಟಾ ವಾನರೇಂದ್ರೇಣ ಸುಗ್ರೀವೇಣ ಮಹೌಜಸಾ ।
ಅದ್ರಿರಾಜಪ್ರತೀಕಾಶಾಃ ಸರ್ವತಃ ಪ್ರಸ್ಥಿತಾ ಮಹೀಮ್ ॥ ೫೪॥

ತತಸ್ತು ಮಾರ್ಗಮಾಣಾ ವೈ ಸುಗ್ರೀವವಚನಾತುರಾಃ ।
ಚರಂತಿ ವಸುಧಾಂ ಕೃತ್ಸ್ನಾಂ ವಯಮನ್ಯೇ ಚ ವಾನರಾಃ ॥ ೫೫॥

ಅಂಗದೋ ನಾಮ ಲಕ್ಷ್ಮೀನಾನ್ ವಾಲಿಸೂನುರ್ಮಹಾಬಲಃ ।
ಪ್ರಸ್ಥಿತಂ ಕಪಿಶಾರ್ದೂಲಸ್ತ್ರಿಭಾಗಬಲಸಂವೃತಃ ॥ ೫೬॥

ತೇಷಾಂ ನೋ ವಿಪ್ರನಷ್ಟಾನಾಂ ವಿಂಧ್ಯೇ ಪರ್ವತಸತ್ತಮೇ ।
ಭೃಶಂ ಶೋಕಪರೀತಾನಾಮಹೋರಾತ್ರಗಣಾ ಗತಾಃ ॥ ೫೭॥

ತೇ ವಯಂ ಕಾರ್ಯನೈರಾಶ್ಯಾತ್ ಕಾಲಸ್ಯಾತಿಕ್ರಮೇಣ ಚ ।
ಭಯಾಚ್ಚ ಕಪಿರಾಜಸ್ಯ ಪ್ರಾಣಾಂಸ್ತ್ಯಕ್ತುಂ ವ್ಯವಸ್ಥಿತಾಃ ॥ ೫೮॥

ವಿಚಿತ್ಯ ವನದುರ್ಗಾಣಿ ಗಿರಿಪ್ರಸ್ರವಣಾನಿ ಚ ।
ಅನಾಸಾದ್ಯ ಪದಂ ದೇವ್ಯಾಃ ಪ್ರಾಣಾಂಸ್ತ್ಯಕ್ತುಂ ವ್ಯವಸ್ಥಿತಾಃ ॥ ೫೯॥

ತತಸ್ತಸ್ಯ ಗಿರೇರ್ಮೂರ್ಧ್ನಿ ವಯಂ ಪ್ರಾಯಮುಪಾಸ್ಮಹೇ ।
ದೃಷ್ಟ್ವಾ ಪ್ರಾಯೋಪವಿಷ್ಟಾಂಶ್ಚ ಸರ್ವಾನ್ ವಾನರಪುಂಗವಾನ್ ॥ ೬೦॥

ಭೃಶಂ ಶೋಕಾರ್ಣವೇ ಮಗ್ನಃ ಪರ್ಯದೇವಯದಂಗದಃ ।
ತವ ನಾಶಂ ಚ ವೈದೇಹಿ ವಾಲಿನಶ್ಚ ತಥಾ ವಧಮ್ ॥ ೬೧॥

ಪ್ರಾಯೋಪವೇಶಮಸ್ಮಾಕಂ ಮರಣಂ ಚ ಜಟಾಯುಷಃ ।
ತೇಷಾಂ ನಃ ಸ್ವಾಮಿಸಂದೇಶಾ ನ್ನಿರಾಶಾನಾಂ ಮುಮೂರ್ಷತಾಮ್ ॥

ಕಾರ್ಯಹೇತೋರಿವಾಯಾತಃ ಶಕುನಿರ್ವೀರ್ಯವಾನ್ ಮಹಾನ್ ।
ಗೃಧ್ರರಾಜಸ್ಯ ಸೋದರ್ಯಃ ಸಂಪಾತಿರ್ನಾಮ ಗೃಧ್ರರಾಟ್ ॥ ೬೩॥

ಶ್ರುತ್ವಾ ಭ್ರಾತೃವಧಂ ಕೋಪಾದಿದಂ ವಚನಮಬ್ರವೀತ್ ।
ಯವೀಯಾನ್ ಕೇನ ಮೇ ಭ್ರಾತಾ ಹತಃ ಕ್ವ ಚ ನಿಪಾತಿತಃ ॥ ೬೪॥

ಏತದಾಖ್ಯಾತುಮಿಚ್ಛಾಮಿ ಭವದ್ಭಿರ್ವಾನರೋತ್ತಮಾಃ ।
ಅಂಗದೋಽಕಥಯತ್ತಸ್ಯ ಜನಸ್ಥಾನೇ ಮಹದ್ವಧಮ್ ॥ ೬೫॥

ಪರ್ವತಸದೃಶರಾಗಿಯೂ ಇರುವ ಕಪಿವೀರರು ವಾನರೇಂದ್ರನಾದ ಸುಗ್ರೀವನಿಂದ ಅಪ್ಪಣೆಪಡೆದು ಭೂಮಿಯ ಎಲ್ಲ ಕಡೆಗಳಲ್ಲಿಯೂ ನಿನ್ನನ್ನು ಹುಡುಕಲು ಹೋಗಿರುವರು.॥೫೪॥ ಸುಗ್ರೀವನ ಕಠಿಣವಾದ ಆಜ್ಞೆಯಿಂದ ಭಯಗೊಂಡ ನಾವು ಮತ್ತು ಇತರ ಕಪಿನಾಯಕರು ನಿನ್ನನ್ನು ಹುಡುಕುತ್ತಾ ಈ ಭೂಮಂಡಲದಲ್ಲಿ ಸುತ್ತಾಡುತ್ತಿದ್ದೇವೆ. ॥೫೬॥ ಹಾಗೆ ನಾನಾ ದಿಕ್ಕುಗಳಿಗೆ ಹೊರಟವರಲ್ಲಿ ಶ್ರೀಮಂತನೂ, ಮಹಾಬಲಶಾಲಿಯೂ ಆದ ವಾಲಿಯ ಸುತನಾದ ಅಂಗದನು ಒಬ್ಬನು. ಅವನು ಸುಗ್ರೀವನ ಸೈನ್ಯದಲ್ಲಿ ಮೂರನೆಯ ಒಂದು ಭಾಗ ಸೈನ್ಯದೊಂದಿಗೆ ನಿನ್ನನ್ನು ಹುಡುಕಲು ದಕ್ಷಿಣದಿಕ್ಕಿಗೆ ಹೊರಟನು. ನಾನೂ ಅವನೊಡನೇ ಹೊರಟವನು. ॥೫೬॥ ಹೀಗೆ ಹೊರಟ ನಾವೆಲ್ಲರೂ ಶ್ರೇಷ್ಠವಾದ ವಿಂಧ್ಯಪರ್ವತದಲ್ಲಿ ಸಂಚರಿಸುತ್ತಿದ್ದಾಗ ದಾರಿತಪ್ಪಿ ಒಂದು ಬಿಲದಲ್ಲಿ ಸಿಕ್ಕಿಹಾಕಿಕೊಂಡೆವು. ಹಾಗೆ ನಾವು ಅಲ್ಲಿ ಅತ್ಯಂತ ಪೀಡಿತರಾಗಿದ್ದಾಗಲೇ ಬಹಳ ದಿನಗಳು ಕಳೆದುಹೋದವು. ॥೫೭॥ ಕಾರ್ಯಸಾಧನೆಯಾಗಲಿಲ್ಲವೆಂಬ ನಿರಾಶೆಯಿಂದಲೂ, ಸುಗ್ರೀವನು ವಿಧಿಸಿದ್ದ ಗಡುವು ತೀರಿಹೋಗಿದ್ದುದರಿಂದಲೂ, ಕಾರ್ಯಸಾಧಿಸದೆ ಹಿಂತಿರುಗಿದರೆ ಕಪಿರಾಜನು ದಂಡಿಸುವನೆಂಬ ಭಯದಿಂದಲೂ ನಾವೆಲ್ಲರೂ ಪ್ರಾಯೋಪವೇಶದ ಮೂಲಕ ಪ್ರಾಣತ್ಯಾಗಮಾಡಲು ನಿಶ್ಚಯಿಸಿದೆವು. ॥೫೮॥ ನಾವು ಗಿರಿ, ದುರ್ಗಗಳಲ್ಲಿಯೂ, ನದೀತೀರಗಳಲ್ಲೂ, ನಿನ್ನನ್ನು ಹುಡುಕಿದೆವು. ದೇವೀ! ಅಲ್ಲೆಲ್ಲಾ ನಿನ್ನ ಜಾಡನ್ನು ತಿಳಿಯದೆ ಅಸುವನ್ನೀಗಲು ನಿಶ್ಚಯಿಸಿದೆವು. ॥೫೯॥ ಅನಂತರ ಆ ಪರ್ವತದ ಮೇಲೆಯೇ ಪ್ರಾಯೋಪವೇಶವ್ರತವನ್ನು ಪ್ರಾರಂಭಿಸಿದೆವು. ನಿರಾಹಾರ ದೀಕ್ಷೆಯನ್ನು ಕೈಗೊಂಡ ವಾನರಪುಂಗವರೆಲ್ಲರನ್ನು ನೋಡಿ ಅಂಗದನು-ನಿನ್ನ ಸುಳಿವೇ ಸಿಕ್ಕದಿರುವುದನ್ನೂ, ವಾಲಿಯ ವಧೆಯನ್ನು, ಜಟಾಯುವಿನ ಮರಣವನ್ನು ಸ್ಮರಿಸುತ್ತಾ ಶೋಕಸಮುದ್ರದಲ್ಲಿ ಮುಳುಗಿ ಗೋಳಾಡುತ್ತಿದ್ದನು. ॥೬೦-೬೨॥ ರಾಜನು ನಿರ್ದೇಶಿಸಿದ್ದ ಕಾರ್ಯಸಾಧನೆಯಲ್ಲಿ ನಾವೆಲ್ಲರೂ ಸಂಪೂರ್ಣವಾಗಿ ನಿರಾಶರಾಗಿದ್ದೆವು. ಆ ಕಾರಣದಿಂದಲೇ ಅಸುನೀಗಲು ಸಿದ್ಧರಾಗಿದ್ದೆವು. ಆ ಸಮಯದಲ್ಲಿ ಅದೃಷ್ಟವಶಾತ್ ನಮ್ಮ ಕಾರ್ಯವನ್ನು ಸಾಧಿಸಿಕೊಡಲು ಆ ಸ್ಥಳಕ್ಕೆ ಮಹಾಬಲಶಾಲಿಯಾದ ಪಕ್ಷಿಯೊಂದು ಆಗಮಿಸಿತು. ಗೃಧ್ರರಾಜನಾದ ಜಟಾಯುವಿನ ಸೋದರನಾದ ಸಂಪಾತಿ ಎಂಬ ಹೆಸರಿನ ಆ ಗೃಧ್ರರಾಜನು ತನ್ನ ತಮ್ಮನು ಹತನಾದನೆಂಬ ವಾತೆಯನ್ನು ನಮ್ಮಿಂದ ಕೇಳಿ ಕೋಪಗೊಂಡು ಇಂತೆಂದನು. ॥೬೩-೬೪॥ ಎಲೈ ವಾನರೋತ್ತಮರೇ! ನನ್ನ ತಮ್ಮನಾದ ಜಟಾಯುವನ್ನು ಯಾರು, ಎಲ್ಲಿಕೊಂದರು? ಇದನ್ನು ನಿಮ್ಮಿಂದ ಕೇಳಬಯಸುತ್ತೇನೆ.॥೬೫॥

ವೈದೇಹಿ! ಸಂಪಾತಿಯು ಹೀಗೆ ಪ್ರಶ್ನಿಸಲು, ಜನಸ್ಥಾನದಲ್ಲಿ ನಿನ್ನನ್ನು ರಕ್ಷಿಸುವ ಸಲುವಾಗಿ ರಾವಣನನ್ನು ಎದುರಿಸಿನಿಂತ

ರಕ್ಷಸಾ ಭೀಮರೂಪೇಣ ತ್ವಾಮುದ್ದಿಶ್ಯ ಯಥಾತಥಮ್ ।
ಜಟಾಯುಷೋ ವಧಂ ಶ್ರುತ್ವಾ ದುಃಖಿತಃ ಸೋಽರುಣಾತ್ಮಜಃ ॥ ೬೬॥

ತ್ವಾಮಾಹ ಸ ವರಾರೋಹೇ ವಸಂತೀಂ ರಾವಣಾಲಯೇ ।
ತಸ್ಯ ತದ್ವಚನಂ ಶ್ರುತ್ವಾ ಸಂಪಾತೇಃ ಪ್ರೀತಿವರ್ಧನಮ್ ॥ ೬೭॥

ಅಂಗದ ಪ್ರಮುಖಾಃ ಸರ್ವೇ ತತಃ ಸಂಪ್ರಸ್ಥಿತಾ ವಯಮ್।
ವಿಂಧ್ಯಾದುತ್ಥಾಯ ಸಂಪ್ರಾಪ್ತಾಃ ಸಾಗರಸ್ಯಾಂತಮುತ್ತರಮ್ ॥ ೬೮॥

ತ್ವದ್ದರ್ಶನಕೃತೋತ್ಸಾಹಾ ಹೃಷ್ಟಾಸ್ತುಷ್ಟಾಃ ಪ್ಲವಂಗಮಾಃ ।
ಅಂಗದಪ್ರಮುಖಾಃ ಸರ್ವೇ ವೇಲೋಪಾಂತಮುಪಸ್ಥಿತಾಃ ॥ ೬೯॥

ಚಿಂತಾಂ ಜಗ್ಮುಃ ಪುನರ್ಭೀತಾಸ್ತ್ವದ್ದರ್ಶನಸಮುತ್ಸುಕಾಃ ।
ಅಥಾಹಂ ಹರಿಸೈನ್ಯಸ್ಯ ಸಾಗರಂ ಪ್ರೇಕ್ಷ್ಯಸೀದತಃ ॥ ೭೦॥

ವ್ಯವಧೂಯ ಭಯಂ ತೀವ್ರಂ ಯೋಜನಾನಾಂ ಶತಂ ಪ್ಲುತಃ ।
ಲಂಕಾ ಚಾಪಿ ಮಯಾ ರಾತ್ರೌ ಪ್ರವಿಷ್ಟಾ ರಾಕ್ಷಸಾಕುಲಾ ॥ ೭೧॥

ರಾವಣಶ್ಚ ಮಯಾ ದೃಷ್ಟಸ್ತ್ವಂ ಚ ಶೋಕಪರಿಪ್ಲುತಾ ।
ಏತತ್ತೇ ಸರ್ವಮಾಖ್ಯಾತಂ ಯಥಾವೃತ್ತಮನಿಂದಿತೇ ॥ ೭೨॥

ಅಭಿಭಾಷಸ್ವ ಮಾಂ ದೇವಿ ದೂತೋ ದಾಶರಥೇರಹಂ ।
ತಂ ಮಾಂ ರಾಮಕೃತೋದ್ಯೋಗಂ ತ್ವನ್ನಿಮಿತ್ತಮಿಹಾಗತಮ್ ॥ ೭೩॥

ಸುಗ್ರೀವಸಚಿವಂ ದೇವಿ ಬುಧ್ಯಸ್ವ ಪವನಾತ್ಮಜಮ್ ।
ಕುಶಲೀ ತವ ಕಾಕುತ್ಸ್ಥಃ ಸರ್ವಶಸ್ತ್ರಭೃತಾಂ ವರಃ ॥ ೭೪॥

ಗುರೋರಾರಾಧನೇ ಯುಕ್ತೋ ಲಕ್ಷ್ಮಣಶ್ಚ ಸುಲಕ್ಷಣಃ ।
ತಸ್ಯ ವೀರ್ಯವತೋ ದೇವಿ ಭರ್ತುಸ್ತವ ಹಿತೇ ರತಃ ॥ ೭೫॥

ಅಹಮೇಕಸ್ತು ಸಂಪ್ರಾಪ್ತಃ ಸುಗ್ರೀವವಚನಾದಿಹ ।
ಮಯೇಯಮಸಹಾಯೇನ ಚರತಾ ಕಾಮರೂಪಿಣಾ ॥ ೭೬॥

ದಕ್ಷಿಣಾ ದಿಗನುಕ್ರಾಂತಾ ತ್ವನ್ಮಾರ್ಗ ವಿಚಯೈಷಿಣಾ ।
ದಿಷ್ಟ್ಯಾಹಂ ಹರಿಸೈನ್ಯಾನಾಂ ತ್ವನ್ನಾಶಮನುಶೋಚತಾಮ್ ॥ ೭೭॥

ಅಪನೇಷ್ಯಾಮಿ ಸಂತಾಪಂ ತವಾಭಿಗಮಶಂಸನಾತ್ ।
ದಿಷ್ಟ್ಯಾಹಿ ಮಮ ನ ವ್ಯರ್ಥಂ ದೇವಿ ಸಾಗರಲಂಘನಮ್ ॥ ೭೮॥

ಪ್ರಾಪ್ಸ್ಯಾಮ್ಯಹಮಿದಂ ದಿಷ್ಟ್ಯಾ ತ್ವದ್ದರ್ಶನಕೃತಂ ಯಶಃ ।
ರಾಘವಶ್ಚ ಮಹಾವೀರ್ಯಃ ಕ್ಷಿಪ್ರಂ ತ್ವಾಮಭಿಪತ್ಸ್ಯತೇ ॥ ೭೯॥

ಜಟಾಯುವನ್ನು ಮಹಾಭಯಂಕರನಾದ ರಾಕ್ಷಸರಾಜನು ಸಂಹರಿಸಿದನು. ಪರೋಪಕ್ಕಾಗಿ ಪ್ರಶಂಸನೀಯ ಮೃತ್ಯುವನ್ನು ಪಡೆದ ವಿಷಯವನ್ನು ಅಂಗದನು ಸಂಪಾತಿಗೆ ತಿಳಿಸಿದನು.॥೬೬॥ ಅರುಣನ ಮಗನಾದ ಸಂಪಾತಿಯು ಜಟಾಯುವಿನ ನಿಧನ ವಾರ್ತೆಯನ್ನು ಕೇಳಿ ಅತಿದುಃಖಿತನಾಗಿ, ನೀನು ರಾವಣನ ಅಶೋಕವನದಲ್ಲಿ (ಲಂಕೆಯಲ್ಲಿ) ಇರುವ ಶುಭವಾರ್ತೆಯನ್ನು ನಮಗೆ ತಿಳಿಸಿದನು. ॥೬೭॥ ಮತ್ತೆ ಆ ಸಂಪಾತಿಯು ಹೇಳಿದ ಸಂತೋಷಕರವಾದ ಮಾತನ್ನು ಕೇಳಿ, ಅಂಗದ ಪ್ರಮುಖರಾದ ನಾವೆಲ್ಲರೂ ಅಲ್ಲಿಂದ ಹೊರಟೆವು. ॥೬೮॥

ನಿನ್ನನ್ನು ಕಾಣುವುದರಲ್ಲೇ ವಿಶೇಷವಾದ ಉತ್ಸಾಹವುಳ್ಳ ನಾವುಗಳು ಸಂತೋಷದಲ್ಲಿ ಮುಳುಗಿಹೋಗಿ, ವಿಂಧ್ಯಪರ್ವತದಿಂದ ಹೊರಟು ಶ್ರೇಷ್ಠವಾದ ಸಮುದ್ರದ ಉತ್ತರ ತೀರಕ್ಕೆ ಬಂದೆವು.॥೬೯-೭೦॥ ನಿನ್ನ ದರ್ಶನದ ಆಕಾಂಕ್ಷೆಯಿಂದ ಸಾಗರ ತಟವನ್ನು ಸೇರಿದ ಅಂಗದಾದಿ ಪ್ರಮುಖರೆಲ್ಲರೂ ಮತ್ತೊಂದು ಭಯದಿಂದ ಚಿಂತಾಗ್ರಸ್ತರಾದರು. ಅಪಾರವಾದ ಸಮುದ್ರವನ್ನು ನೋಡಿದೊಡನೆಯೇ ಕುಸಿದುಹೋದ ಆ ಕಪಿಸೈನ್ಯದ ಮಹಾಭಯವನ್ನು ದೂರಗೊಳಿಸಿ, ನಾನು ನೂರು ಯೋಜನ ವಿಸ್ತಾರವಾದ ಮಹಾಸಾಗರವನ್ನು ಹಾರಿಕೊಂಡು ಇಲ್ಲಿಗೆ ಬಂದೆನು. ಅದೇ ರಾತ್ರಿಯಲ್ಲಿ ರಾಕ್ಷಸರಿಂದ ನಿಬಿಡವಾದ ಲಂಕೆಯನ್ನು ಪ್ರವೇಶಿಸಿದೆನು. ಪೂಜ್ಯಳೇ! ನಾನು ರಾವಣನನ್ನು ನೋಡಿದೆನು. ಶೋಕಾಕುಲಳಾದ ನಿನ್ನನ್ನು ದರ್ಶಿಸಿದೆನು. ನಡೆದುದೆಲ್ಲವನ್ನು ಯಥಾವತ್ತಾಗಿ ನಿವೇದಿಸಿಕೊಂಡಿರುವೆನು.

ಎಲೈ ದೇವಿಯೇ! ನಾನು ಶ್ರೀರಾಮನ ದೂತನು. ನನ್ನಲ್ಲಿ ವಿಶ್ವಾಸವನ್ನಿಡು. ಆ ಸ್ವಾಮಿಯ ಪ್ರೋತ್ಸಾಹದಿಂದಲೇ ನಿನ್ನನ್ನು ಹುಡುಕುತ್ತಾ ಇಲ್ಲಿಗೆ ಬಂದಿರುವೆನು. ದಯಮಾಡಿ ನನ್ನೊಡನೆ ಮಾತಾಡು. ॥೭೧-೭೪॥ ಅಮ್ಮಾ! ನಾನು ವಾಯುಸುತನು. ಸುಗ್ರೀವನ ಮಂತ್ರಿಯು. ನನ್ನನ್ನು ನಂಬು. ಶಸ್ತ್ರಧಾರಿಗಳಲ್ಲಿಯೇ ಶ್ರೇಷ್ಠನಾದ ನಿನ್ನ ಪತಿಯಾದ ಶ್ರೀರಾಮನು ಕುಶಲಿಯಾಗಿದ್ದಾನೆ. ಸರ್ವಶುಭಲಕ್ಷಣಗಳಿಂದ ಕೂಡಿರುವ, ನಿನ್ನ ಪತಿಯ ಹಾಗೂ ತನ್ನ ಗುರುವಾದ ಶ್ರೀರಾಮನ ಹಿತದಲ್ಲಿಯೂ, ಸೇವೆಯಲ್ಲಿಯೂ ನಿರತನಾಗಿರುವ ವೀರ ಲಕ್ಷ್ಮಣನೂ ಕುಶಲಿಯಾಗಿದ್ದಾನೆ. ॥೭೫-೭೬॥

ಸುಗ್ರೀವನ ಆಜ್ಞೆಯನ್ನು ಅನುಸರಿಸಿ ನಾನೊಬ್ಬನೇ ಈ ಲಂಕಾನಗರವನ್ನು ಸೇರಿದೆನು.ಕಾಮರೂಪಿಯಾದ ನಾನು ನಿನ್ನನ್ನು ಹುಡುಕುತ್ತಾ ಒಬ್ಬಂಟಿಗನಾಗಿ ಸಂಚರಿಸಿ ಈ ಅಶೋಕವನಕ್ಕೆ(ದಕ್ಷಿಣ ದಿಕ್ಕಿಗೆ) ಬಂದಿರುವೆನು.॥೭೭॥ ಅಮ್ಮಾ! ನೀನು ವಿನಾಶಹೊಂದಿರುವೆಯೆಂದು ಭಾವಿಸಿ ಕಪಿನಾಯಕರೆಲ್ಲರೂ ಬಹಳ ದುಃಖಪಡುತ್ತಿದ್ದಾರೆ. ಸೌಭಾಗ್ಯವಶದಿಂದ ನಿನ್ನ ದರ್ಶನವಾದುದನ್ನು ಹೇಳುವುದರ ಮೂಲಕ ಅವರ ಸಂತಾಪವನ್ನು ಹೋಗಲಾಡಿಸುವೆನು. ದೇವೀ! ಸೌಭಾಗ್ಯವಶದಿಂದ ನಾನು ಸಮುದ್ರವನ್ನು ಲಂಘಿಸಿದುದು ವ್ಯರ್ಥವಾಗಲಿಲ್ಲ.॥೭೮-೭೯॥ ಯಾವುದೇ ವಿಘ್ನಗಳು ಎದುರಾಗದೆ

ಸಪುತ್ರಬಾಂಧವಂ ಹತ್ವಾ ರಾವಣಂ ರಾಕ್ಷಸಾಧಿಪಮ್ ।
ಮಾಲ್ಯವಾನ್ನಾಮ ವೈದೇಹಿ ಗಿರೀಣಾಮುತ್ತಮೋ ಗಿರಿಃ ॥ ೮೦॥

ತತೋ ಗಚ್ಛತಿ ಗೋಕರ್ಣಂ ಪರ್ವತಂ ಕೇಸರೀ ಹರಿಃ ।
ಸ ಚ ದೇವರ್ಷಿಭಿರ್ದಿಷ್ಟಃ ಪಿತಾ ಮಮ ಮಹಾಕಪಿಃ ॥ ೮೧॥

ತೀರ್ಥೇ ನದೀಪತೇಃ ಪುಣ್ಯೇ ಶಂಬಸಾದನಮುದ್ಧರತ್ ।
ತಸ್ಯಾಹಂ ಹರಿಣಃ ಕ್ಷೇತ್ರೇ ಜಾತೋ ವಾತೇನ ಮೈಥಿಲಿ ॥ ೮೨॥

ಹನುಮಾನಿತಿ ವಿಖ್ಯಾತೋ ಲೋಕೇ ಸ್ವೇನೈವ ಕರ್ಮಣಾ ।
ವಿಶ್ವಾಸಾರ್ಥಂ ತು ವೈದೇಹಿ ಭರ್ತುರುಕ್ತಾ ಮಯಾ ಗುಣಾಃ ॥ ೮೩॥

ಅಚಿರಾದ್ಭಾವಿನೋ ದೇವಿ ತ್ವಾಮಿತೋ ನಯಿತಾನಘೇ ।
ಏವಂ ವಿಶ್ವಾಸಿತಾ ಸೀತಾ ಹೇತುಭಿಃ ಶೋಕಕರ್ಶಿತಾ ॥ ೮೪॥

ಉಪಪನ್ನೈರಭಿಜ್ಞಾನೈರ್ದೂತಂ ತಮವಗಚ್ಛತಿ ।
ಅತುಲಂ ಚ ಗತಾ ಹರ್ಷಂ ಪ್ರಹರ್ಷೇಣ ಚ ಜಾನಕೀ ॥ ೮೫॥

ನೇತ್ರಾಭ್ಯಾಂ ವಕ್ತ್ರಜಾಭ್ಯಾಂ ಮುಮೋಚಾನಂದಜಂ ಜಲಮ್ ।
ಚಾರು ತದ್ವದನಂ ತಸ್ಯಾಸ್ತಾಮ್ರಶುಕ್ಲಾಯತೇಕ್ಷಣಮ್ ।
ಆದೋಭತ ವಿಶಾಲಾಕ್ಷ್ಯಾ ರಾಹಮುಕ್ತ ಇವೋಡುರಾಟ್ ॥ ೮೬॥

ಹನುಮಂತಂ ಕಪಿಂ ವ್ಯಕ್ತಂ ಮನ್ಯತೇ ನಾನ್ಯಥೇತಿ ಸಾ ।
ಆಥೋವಾಚ ಹನೂಮಾಂಸ್ತಾಮುತ್ತರಂ ಪ್ರಿಯದರ್ಶನಾಮ್ ॥

ಏತತ್ತೇ ಸರ್ವಮಾಖ್ಯಾತಂ ಸಮಾಶ್ವಸಿಹಿ ಮೈಥಿಲಿ ।
ಕಿಂ ಕರೋಮಿ ಕಥಂ ವಾ ತೇ ರೋಚತೇ ಪ್ರತಿಯಾಮ್ಯಹಮ್ ॥ ೮೮॥

ಎಲ್ಲರಿಗಿಂತ ಮುಂದಾಗಿ ನಿನ್ನನ್ನು ದರ್ಶಿಸಿದ ಕೀರ್ತಿಯು ನನಗೇ ದಕ್ಕಿದೆ. ಇದು ನನಗೆ ಪ್ರಾಪ್ತವಾದ ಮಹದ್ಭಾಗ್ಯವು. ಮಹಾವೀರನಾದ ರಾಘವನು ರಾಕ್ಷಸಾಧಿಪನಾದ ರಾವಣನನ್ನು, ಅತನ ಬಂಧು, ಮಿತ್ರ ಪರಿವಾರವನ್ನು, ಸಂಹರಿಸಿ ಬಹು ಬೇಗನೇ ನಿನ್ನನ್ನು ಸೇರುತ್ತಾನೆ.॥೮೦॥

ವೈದೇಹೀ! 'ಮಾಲ್ಯವಂತ' ಎಂಬ ಪರ್ವತವು ಎಲ್ಲ ಪರ್ವತಗಳಲ್ಲಿಯೂ ಶ್ರೇಷ್ಠವಾದುದು. ಅಲ್ಲಿ ವಾಸವಾಗಿದ್ದ ಕೇಸರಿ ಎಂಬ ಕಪೀಶ್ವರನು ಒಮ್ಮೆ ಗೋಕರ್ಣಪರ್ವತಕ್ಕೆ ಹೋದನು. ಪುಣ್ಯಪ್ರದವಾದ ಗೋಕರ್ಣಕ್ಷೇತ್ರದ ಸಮುದ್ರ ತೀರದಲ್ಲಿ ಯಾತ್ರಾರ್ಥಿಗಳಿಗೆ ತೊಂದರೆಯನ್ನು ಕೊಡುತ್ತಿದ್ದ ಶಂಬಸಾದನೆಂಬ ರಾಕ್ಷಸನನ್ನು ಸಂಹರಿಸುವಂತೆ ಬ್ರಹ್ಮರ್ಷಿಗಳು ಕಪಿಶ್ರೇಷ್ಠವಾದ ನನ್ನ ತಂದೆಗೆ ಆಜ್ಞೆಮಾಡಿದರು. ಅವರ ಆಜ್ಞೆಯಂತೆ ನನ್ನ ತಂದೆಯು ಆ ರಾಕ್ಷಸನನ್ನು ಸಂಹರಿಸಿದನು. ಅಂತಹ ಮಹಾಪರಾಕ್ರಮಿಯಾದ ಕೇಸರಿಯ ಭಾರ್ಯೆಯಾದ ಅಂಜನಾದೇವಿಯಲ್ಲಿ ವಾಯುದೇವರ ಅನುಗ್ರಹದಿಂದ ನಾನು ಹುಟ್ಟಿದೆನು. ನನ್ನ ಪರಾಕ್ರಮದಿಂದಲೇ ನಾನು ಲೋಕದಲ್ಲಿ 'ಹನುಮಂತ' ಎಂಬ ಹೆಸರಿನಿಂದ ಖ್ಯಾತನಾಗಿದ್ದೇನೆ. ॥೮೧-೮೩॥

ಪವಿತ್ರಳಾದ ಓ ವೈದೇಹೀ! ನಿನಗೆ ವಿಶ್ವಾಸ ಉಂಟಾಗಲೆಂದು ನಾನು ನಿನ್ನ ಪತಿಯ ಎಲ್ಲ ಗುಣಗಳನ್ನು ಹೇಳಿದ್ದೇನೆ. ದೇವೀ! ರಾಘವನು ನಿಶ್ಚಯವಾಗಿಯೂ ಬಮ ಬೇಗನೇ ನಿನ್ನನ್ನು ಇಲ್ಲಿಂದ ಕರೆದೊಯ್ಯುವನು.॥೮೪॥ ಹೀಗೆ ಹನುಮಂತನು ನಾನಾ ವಿಧವಾದ ವಿಶ್ವಾಸಾರ್ಹವಾದ ಸಂಗತಿಗಳನ್ನು ಹೇಳಿ ಕೋಕಪೀಡಿತಳಾಗಿದ್ದ ಸೀತಾದೇವಿಯಲ್ಲಿ ವಿಶ್ವಾಸವನ್ನು ಮೂಡಿಸಿದನು. ಹನುಮಂತನು ಹೇಳಿದ ಶ್ರೀರಾಮನಲ್ಲಿದ್ದ ಸಹಜವಾದ ಗುಣತುಗಳಿಂದ ಆವನು ಶ್ರೀರಾಮನ ದೂತನೆಂದೇ ಸೀತೆಯು ದೃಢಪಡಿಸಿಕೊಂಡಳು.॥೮೫॥ ಅಪಾರವಾದ ಸಂತೋಷವನ್ನು ಹೊಂದಿದ ಜಾನಕಿಯ ಸುಂದರವಾದ ಕಣ್ಣುಗಳಿಂದ ಹರ್ಷಾತಿರೇಕದ ಆನಂದ ಬಾಷ್ಪಗಳು ಸುರಿದವು. ಎಣ್ಣೆಗೆಂಪಾಗಿಯೂ, ಬಿಳುಪಾಗಿಯೂ, ವಿಶಾಲವಾಗಿಯೂ ಇದ್ದ ಕಣ್ಣುಗಳಿಂದ ಕೂಡಿದ್ದ ವಿಶಾಲಾಕ್ಷಿ ಸೀತಾದೇವಿಯ ಸುಂದರವಾದ ಮುಖಾರವಿಂದವು ರಾಹುವಿನಿಂದ ಮುಕ್ತವಾದ ಚಂದ್ರನಂತೆ ಅರಳಿತು.॥೮೬॥ ಆಗ ಆವಳು ಹನುಮಂತನನ್ನು ನಿಶ್ಚಯವಾಗಿ ವಾನರನೆಂದೇ ಭಾವಿಸಿದಳು. ಬಳಿಕ ಹನುಮಂತನು ಪ್ರಿಯದರ್ಶನಳಾದ ಸೀತಾದೇವಿಗೆ ಹೀಗೆ ಪ್ರತ್ಯುತ್ತರಗಳನ್ನು ಕೊಟ್ಟನು.॥೮೭॥

ಎಲೈ ಮೈಥಿಲೀ! ಎಲ್ಲ ವಿಷಯಗಳನ್ನು ನಿನಗೆ ಯಥಾವತ್ತಾಗಿ ಹೇಳಿರುವೆನು. ಇನ್ನಾದರೂ ನೀನು ಸಮಾಧಾನವನ್ನು ಹೊಂದು. ನಾನು ಮುಂದೇನು ಮಾಡಲೀ? ನಿನಗೆ ಸಂತೋಷವಾಗುವಂತೆ ತಿಳಿಸು. ನಿನ್ನ ಆಜ್ಞೆಯನ್ನು ಪಡೆದು ನಾನು ಶ್ರೀರಾಮನಲ್ಲಿಗೆ ಹಿಂದಿರುಗುವೆನು.॥೮೮॥

ಹತೇಽಸುರೇ ಸಂಯತಿ ಶಂಬಸಾದನೇ
ಕಪಿಪ್ರವೀರೇಣ ಮಹರ್ಷಿಚೋದನಾತ್।
ತತೋಽಸ್ಮಿ ವಾಯುಪ್ರಭವೋ ಹಿ ಮೈಥಿಲಿ
ಪ್ರಭಾವತಸ್ತ್ವತ್ಪ್ರತಿಮಸ್ಯ ವಾನರಃ ॥ ೮೯॥

ಮಹರ್ಷಿಗಳ ಪ್ರೇರಣೆಯಿಂತೆ ಕಪಿಶ್ರೇಷ್ಠನಾದ ಕೇಸರಿಯು ಶಂಬಸಾದನನ್ನು ಸಂಹರಿಸಿದನು.ವಾಯುವಿನ ಅನುಗ್ರಹದಿಂದ ನಾನು ಕೇಸರಿಯ ಪತ್ನಿಯಾದ ಅಂಜನಾದೇವಿಯಲ್ಲಿ ಜನ್ಮತಾಳಿದೆನು. ವಾನರನೂ, ವಾಯುಪುತ್ರನೂ ಆದ ನಾನು ವಾಯುವಿನಷ್ಟೇ ಬಲಿಷ್ಠನಾಗಿರುವೆನು.॥೮೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಪಂಚತ್ರಿಂಶಃ ಸರ್ಗಃ ॥ ೩೫ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೈದನೆಯ ಸರ್ಗವು ಮುಗಿಯಿತು.

* * *

ಮೂವತ್ತಾರನೆಯ ಸರ್ಗ

ಹನುಮಂತನು ಸೀತಾದೇವಿಗೆ ಮುದ್ರೆಯುಂಗುರವನ್ನು ಕೊಟ್ಟದ್ದು, ಶ್ರೀರಾಮನು ಯಾವಾಗ ತನ್ನನ್ನು ಉದ್ಧರಿಸುವನೆಂದು ಸೀತೆಯ ಉದ್ಗಾರ, ಶ್ರೀರಾಮನಿಗೆ ಸೀತೆಯಲ್ಲಿರುವ ಅನುರಾಗವನ್ನು ವರ್ಣಿಸಿ ಹೇಳಿ ಆಕೆಯನ್ನು ಸಮಾಧಾನಗೊಳಿಸಿದುದು –

ಭೂಯ ಏವ ಮಹಾತೇಜಾ ಹನುಮಾನ್ ಮಾರುತಾತ್ಮಜಃ।
ಅಬ್ರವೀತ್ ಪ್ರಶ್ರಿತಂ ವಾಕ್ಯಂ ಸೀತಾಪ್ರತ್ಯಯಕಾರಣಾತ್॥ ೧॥

ಮಹಾತೇಜಸ್ವಿಯೂ, ವಾಯುಸುತನೂ ಆದ ಹನುಮಂತನು ಸೀತಾದೇವಿಗೆ ಇನ್ನೂ ಹೆಚ್ಚಿನ ವಿಶ್ವಾಸ ಹುಟ್ಟುವಂತೆ ವಿನಯಪೂರ್ವಕವಾದ ಮಾತನ್ನು ಪುನಃ ಹೇಳತೊಡಗಿದನು ॥೧॥

ವಾನರೋಽಹಂ ಮಹಾಭಾಗೇ ದೂತೋ ರಾಮಸ್ಯ ಧೀಮತಃ।
ರಾಮನಾಮಾಂಕಿತಂ ಪಶ್ಯ ದೇವ್ಯಂಗುಲೀಯಕಮ್ ॥ ೨॥

ಎಲೈ ಭಾಗ್ಯಶಾಲಿನೀ ದೇವಿ! ವಾನರನಾದ ನಾನು ಧೀಮಂತನಾದ ಶ್ರೀರಾಮನ ದೂತನು. ರಾಮನಾಮಾಂಕಿತವಾದ, ದಿವ್ಯವಾದ ಈ ಉಂಗುರವನ್ನು ನೋಡು. ಮಹಾತ್ಮನಾದ ಶ್ರೀರಾಮನು ಕೊಟ್ಟಿರುವ ಈ ಮುದ್ರಿಕೆಯನ್ನು ನಿನಗೆ ನಂಬಿಕೆ ಹುಟ್ಟಿಸುವ ಸಲುವಾಗಿಯೇ ತಂದಿರುವೆನು. ನಿನಗೆ ಮಂಗಳವಾಗಲಿ; ಇದುವರೆಗೆ ನೀನು ಅನುಭವಿಸಿದ ದುಃಖಗಳು ತೊಲಗಿ ಹೋಗಿವೆ. ಇನ್ನು ಮುಂದೆ ಆ ದುಷ್ಟಲಗಳನ್ನು ಅನುಭವಿಸಬೇಕಾಗಿಲ್ಲ ॥೨-೩॥

ಪ್ರತ್ಯಯಾರ್ಥಂ ತವಾನೀತಂ ತೇನ ದತ್ತಂ ಮಹಾತ್ಮನಾ।
ಸಮಾಶ್ವಸಿಹಿ ಭದ್ರಂ ತೇ ಕ್ಷೀಣದುಃಖಫಲಾ ಹ್ಯಸಿ ॥ ೩॥

ಗೃಹೀತ್ವಾ ಪ್ರೇಕ್ಷಮಾಣಾ ಸಾ ಭರ್ತುಃ ಕರವಿಭೂಷಣಮ್।
ಭರ್ತಾರಮಿವ ಸಂಪ್ರಾಪ್ತಂ ಜಾನಕೀ ಮುದಿತಾಭವತ್ ॥ ೪॥

ಆಂಜನೇಯನು ಹೀಗೆ ಹೇಳಿ ಸೀತಾದೇವಿಗೆ ರಾಮನ ಮುದ್ರಿಕೆಯನ್ನು ಭಕ್ತಿಯಿಂದ ಅರ್ಪಿಸಿದನು. ಜಾನಕೀದೇವಿಯು ತನ್ನ ಪತಿಯ ಕೈಗೆ ಭೂಷಣವ್ಯಾಪ್ತಿಯಾಗಿದ್ದ ಅಂಗುಳೀಯಕವನ್ನು ಪಡೆದು ದಿಟ್ಟಿಸಿ ನೋಡುತ್ತಾ ಪತಿಯೇ ತನ್ನೆದುರಿಗೆ ಬಂದಿರುವನೆಂದು ಭಾವಿಸಿ ಆನಂದಭರಿತಳಾದಳು ॥೪॥

ಚಾರು ತದ್ವದನಂ ತಸ್ಯಾಸ್ತಾಮ್ರಶುಕ್ಲಾಯತೇಕ್ಷಣಮ್।
ಬಭೂವ ಹರ್ಷೋದಗ್ರಂ ಚ ರಾಹುಮುಕ್ತ ಇವೋದುರಾಟ್ ॥ ೫॥

ಎಣ್ಣೆಗೆಂಪಾಗಿಯೂ, ಬಿಳುಪಾಗಿಯೂ, ವಿಶಾಲವೂ ಆದ ಕಣ್ಣುಗಳಿಂದ ಕೂಡಿದ್ದ ಆಕೆಯ ಸುಂದರ ಮುಖವು ರಾಹುವಿನಿಂದ ವಿಮುಕ್ತನಾದ ಚಂದ್ರನಂತೆ ಹರ್ಷದಿಂದ ಕಂಗೊಳಿಸಿತು. ॥೫॥ ನಿರ್ಮಲ ಹೃದಯವುಳ್ಳ ಆ ಸೀತಾದೇವಿಯು ತನ್ನ ಪತಿಯ ಸಂದೇಶ ಪ್ರಾಪ್ತಿಯಿಂದ ಸಂತೋಷದಲ್ಲಿ ಮುಳುಗಿ ಹೋದಳು. ಹರ್ಷಭರಿತಳಾಗಿ ಮಹಾಕಪಿಯನ್ನು ಸಮ್ಮಾನಿಸಿ ಪ್ರಶಂಸಿಸುತ್ತಾ ಪ್ರಿಯ ವಚನಗಳನ್ನು ನುಡಿದಳು ॥೬॥

ತತಃ ಸಾ ಹ್ರೀಮತೀ ಬಾಲಾ ಭರ್ತೃಸಂದೇಶಹರ್ಷಿತಾ।
ಪರಿತುಷ್ಟಾ ಪ್ರಿಯಂ ಕೃತ್ವಾ ಪ್ರಶಶಂಸ ಮಹಾಕಪಿಮ್ ॥ ೬॥

ವಿಕ್ರಾಂತಸ್ತ್ವಂ ಸಮರ್ಥಸ್ತ್ವಂ ಪ್ರಾಪ್ತಸ್ತ್ವಂ ವಾನರೋತ್ತಮ ।
ಯೇನೇದಂ ರಾಕ್ಷಸಪದಂ ತ್ವಯೈಕೇನ ಪ್ರಧರ್ಷಿತಮ್ ॥ ೭॥

ಶತಯೋಜನವಿಸ್ತೀರ್ಣಃ ಸಾಗರೋ ಮಕರಾಲಯಃ ।
ವಿಕ್ರಮಶ್ಲಾಘನೀಯೇನ ಕ್ರಮತಾ ಗೋಷ್ಪದೀಕೃತಃ ॥ ೮॥

ನ ಹಿ ತ್ವಾಂ ಪ್ರಾಕೃತಂ ಮನ್ಯೇ ವಾನರಂ ವಾನರರ್ಷಭ ।
ಯಸ್ಯ ತೇ ನಾಸ್ತಿ ಸಂತ್ರಾಸೋ ರಾವಣಾನ್ನಾಪಿ ಸಂಭ್ರಮಃ ॥ ೯॥

ಅರ್ಹಸೇ ಚ ಕಪಿಶ್ರೇಷ್ಠ ಮಯಾ ಸಮಭಿಭಾಷಿತುಮ್ ।
ಯದ್ಯಪಿ ಪ್ರೇಷಿತಸ್ತೇನ ದಾಮೇನ ವಿದಿತಾತ್ಮನಾ ॥ ೧೦॥

ಕ್ಷೇಪಯಿಷ್ಯತಿ ದುರ್ಧರ್ಷೋ ರಾಮೋ ನ ಹ್ಯಪರೀಕ್ಷಿತಮ್ ।
ಪರಾಕ್ರಮಂ ಅವಿಜ್ಞಾಯ ಮತ್ಸಕಾಶಂ ವಿಶೇಷತಃ ॥ ೧೧॥

ವಿಜ್ಞಾಸ ಕುಶಲೀ ರಾಮೋ ಧರ್ಮಾತ್ಮಾ ಸತ್ಯಸಂಗರಃ ।
ಲಕ್ಷ್ಮಣಶ್ಚ ಮಹಾತೇಜಾಃ ಸುಮಿತ್ರಾನಂದವರ್ಧನಃ ॥ ೧೨॥

ಕುಶಲೀ ಯದಿ ಕಾಕುತ್ಸ್ಥಃ ಕಿಂ ನ ಸಾಗರಮೇಖಲಾಮ್ ।
ಮಹೀಂ ದಹತಿ ಕೋಪೇನ ಯುಗಾಂತಾಗ್ನಿರಿವೋತ್ಥಿತಃ ॥ ೧೩॥

ಅಥವಾ ಶಕ್ತಿಮಂತೌ ತೌ ಸುರಾಣಾಮಪಿ ನಿಗ್ರಹೇ ।
ಮನ್ಯೇ ತು ನ ದುಃಖಾನಾಮ್ತು ಮನ್ಯೇ ವಿಷಯಮಃ ॥ ೧೪॥

ಕಚ್ಚಿನ್ನ ವ್ಯಥಿತೋ ರಾಮಃ ಕಚ್ಚಿನ್ನ ಪರಿತಪ್ಯತೇ ।
ಉತ್ತರಾಣಿ ಚ ಕಾರ್ಯಾಣಿ ಕುರುತೇ ಪುರುಷೋತ್ತಮಃ ॥ ೧೫॥

ಕಚ್ಚಿನ್ನ ದೀನಃ ಸಂಭ್ರಾಂತಃ ಕಾರ್ಯೇಷು ಚ ನ ಮುಹ್ಯತಿ ।
ಕಚ್ಚಿತ್ ಪುರುಷಕಾರ್ಯಾಣಿ ಕುರುತೇ ನೃಪತೇಃ ಸುತಃ ॥ ೧೬॥

ತ್ರಿವಿಧಂ ತ್ರಿವಿಧೋಪಾಯಮುಪಾಯಮಪಿ ಸೇವತೇ ।
ವಿಜಿಗೀಷುಃ ಸುಹೃತ್ ಕಚ್ಚಿನ್ ಮಿತ್ರೇಷು ಚ ಪರಂತಪಃ ॥ ೧೭॥

ಕಚ್ಚಿನ್ನಿತ್ಯಾಣಿ ಲಭತೇ ಮಿತ್ರೈಶ್ಚಾನ್ಯೈರಭಿಗಮ್ಯತೇ ।
ಕಚ್ಚಿತ್ ಕಲ್ಯಾಣಮಿತ್ರಶ್ಚ ಮಿತ್ರೈಶ್ಚಾಪಿ ಪುರಸ್ಕೃತಃ ॥ ೧೮॥

'ಎಲೈ ವಾನರ ಶ್ರೇಷ್ಠನೇ! ನಿಜವಾಗಿಯೂ ನೀನು ಮಹಾಪರಾಕ್ರಮಿಯು, ಸಮರ್ಥನು, ದೇಶ-ಕಾಲೋಚಿತವಾಗಿ ಕಾರ್ಯ ಮಾಡುವವರಲ್ಲಿ ಕುಶಲನು. ರಾಕ್ಷಸರ ಈ ದುರ್ಗಮವಾದ ಲಂಕೆಯನ್ನು ಒಬ್ಬಂಟಿಗನಾಗಿ ಮೆಟ್ಟಿದೆಯಲ್ಲ! ॥೭॥ ಶ್ಲಾಘ್ಯ ವಿಕ್ರಮಿಯಾದ ನೀನು ಭಯಂಕರ ತಿಮಿಂಗಿಲ-ಮೊಸಳೆಗಳಿಗೆ ಆವಾಸವಾದ ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ಗೋಷ್ಪದವನ್ನು ದಾಟುವಷ್ಟೇ ಸುಲಭವಾಗಿ ದಾಟಿ ಬಂದಿರುವೆ ॥೮॥ ಓ ವಾನರ ಶ್ರೇಷ್ಠಾ! ನಿನಗೆ ರಾವಣನಿಂದ ಭಯವಾಗಲಿ, ವ್ಯಾಕುಲತೆಯಾಗಲೀ ಯಾವುದೂ ಇಲ್ಲ. ನೀನು ಸಾಮಾನ್ಯ ಕಪಿಯೆಂದು ನಾನು ಭಾವಿಸುವುದಿಲ್ಲ ॥೯॥ ''ಎಲೈ ಕಪಿವರಾ! ಮಹಾತ್ಮನಾದ ಶ್ರೀರಾಮಚಂದ್ರ ಪ್ರಭುವು ನಿನ್ನನ್ನು ಕಳಿಸಿರುವುದರಿಂದ ನನ್ನೊಡನೆ ಮಾತಾಡಲು ಯೋಗ್ಯನಾಗಿರುವೆ ॥೧೦॥ ಸಾಟಿಯಿಲ್ಲದ ಪರಾಕ್ರಮಿಯಾದ ಶ್ರೀರಾಮನು ನನ್ನ ಬಳಿಗೆ ಪರೀಕ್ಷಿಸದೆ ಯಾವ ದೂತನನ್ನೂ ಕಳುಹಿಸುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ಅವನ ಪರಾಕ್ರಮವನ್ನು ತಿಳಿದೇ ಕಳಿಸುತ್ತಾನೆ. ॥೧೧॥ ಸತ್ಯಪರಾಕ್ರಮಿಯೂ, ಧರ್ಮಾತ್ಮನೂ ಆದ ಶ್ರೀರಾಮನೂ, ಸುಮಿತ್ರಾನಂದವರ್ಧನನೂ, ಮಹಾತೇಜಃಶಾಲಿಯೂ ಆದ ಲಕ್ಷ್ಮಣನೂ ಕ್ಷೇಮವಾಗಿರುವುದು ನನ್ನ ಅದೃಷ್ಟ ಫಲವೇ. ॥೧೨॥ ಆದರೆ ಒಂದು ಸಂದೇಹವು ನನ್ನನ್ನು ಬಾಧಿಸುತ್ತಿದೆ. ಕಾಕುತ್ಸನು ಕುಶಲೀ, ಸಮರ್ಥನಾಗಿದ್ದಾನೆ. ತನ್ನ ಕೋಪದಿಂದ, ಪ್ರಳಯಾಗ್ನಿ ಜ್ವಾಲೆಗಳಿಂದ ಸಾಗರಗಳಿಂದ ಸುತ್ತುವರಿಯಲ್ಪಟ್ಟ ಇಡೀ ಭೂಮಂಡಲವನ್ನು ಇದುವರೆಗೆ ಏಕೆ ಸುಟ್ಟುಹಾಕಲಿಲ್ಲ? (ಪ್ರಳಯಕಾಲದಲ್ಲಿ ಸಾಗರದ ನೀರು ಶುಷ್ಕವಾಗುತ್ತದಂತೆ) ಅಂದರೆ ಜಗತ್ಪಳಯವನ್ನು ಏಕೆ ಮಾಡಲಿಲ್ಲ? ॥೧೩॥ ರಾಮ-ಲಕ್ಷ್ಮಣರು ದೇವತೆಗಳನ್ನಾದರೂ ನಿಗ್ರಹಿಸುವ ಸಾಮರ್ಥ್ಯವುಳ್ಳವರು. ಆದರೆ ಸೀತಾಪಹಾರಕ ನನ್ನು ನಿಗ್ರಹಿಸದೆ ಇರುವುದರಲ್ಲಿ ನನ್ನ ಪಾಪದ ಫಲ ಇನ್ನೂ ಕಳೆಯದೇ ಇರುವುದೇ ಕಾರಣವಿರಬಹುದು. ॥೧೪॥ ಪುರುಷಶ್ರೇಷ್ಠನಾದ ರಾಮನು ನನಗಾಗಿ ವ್ಯಥೆಪಡುತ್ತಿಲ್ಲವೇ? ಪರಿತಪಿಸುತ್ತಿಲ್ಲವೇ? ಮುಂದೆ ನನ್ನನ್ನು ಪಡೆಯಲು ಏನನ್ನಾದರೂ ಕಾರ್ಯವನ್ನು ಮಾಡುವನೇ? ॥೧೫॥ ನನ್ನ ಪತಿಯು ದುಃಖಿತನಾಗಿ, ಅನ್ಯಮನಸ್ಕನಾಗಿ, ಏನನ್ನೂ ತೋಚದೇ ಮಾಡಬೇಕಾಗಿರುವ ಕರ್ತವ್ಯದಲ್ಲಿ ಮೋಹಗೊಂಡಿಲ್ಲ ತಾನೆ? ಪ್ರಯತ್ನಶೀಲನಾಗಿ ಕಾರ್ಯವನ್ನು ಮಾಡುತ್ತಿರುವನೇ? ॥೧೬॥ ಶತ್ರುತಾಪಕನಾದ ಶ್ರೀರಾಮನು ಮಿತ್ರರ ವಿಷಯದಲ್ಲಿ ಸ್ನೇಹ-ಭಾವದಿಂದಿರುತ್ತಾ ಸಾಮ-ದಾನಗಳೆಂಬ ಎರಡು ಉಪಾಯಗಳನ್ನು ಆಶ್ರಯಿಸಿರುವನಲ್ಲ? ಶತ್ರುಗಳ ವಿಷಯದಲ್ಲಿ ವಿಜಯೋಪೇಕ್ಷಿಯಾಗಿ ದಾನ-ಭೇದ-ದಂಡಗಳೆಂಬ ಮೂರು ಉಪಾಯಗಳನ್ನು ಪ್ರಯೋಗಿಸುವನಲ್ಲವೇ? ॥೧೭॥ ಶ್ರೀರಾಮನಿಗೆ ಮಿತ್ರರು ದೊರಕಿರುವರೇ? ಉಪಕಾರವನ್ನು ಹೊಂದಿದ ಅವನ ಮಿತ್ರರು ಪ್ರತ್ಯುಪಕಾರ ಮಾಡಲು ಪುನಃ ಅವನ ಬಳಿಗೆ

ಕಚ್ಚಿದಾಶಾಸ್ತಿ ದೇವಾನಾಂ ಪ್ರಸಾದಂ ಪಾರ್ಥಿವಾತ್ಮಜಃ ।
ಕಚ್ಚಿತ್ ಪುರುಷಕಾರಂ ಚ ದೈವಂ ಚ ಪ್ರತಿಪದ್ಯತೇ ॥ ೧೯॥

ಕಚ್ಚಿನ್ನ ವಿಗತಸ್ನೇಹಃ ವಿವಾಸ್ಯಾನ್ಯಯಿ ರಾಘವಃ ।
ಕಚ್ಚಿನ್ನಾಂ ವ್ಯಸನಾದಸ್ಮಾನ್ ಮೋಕ್ತುಯಿಷ್ಯತಿ ರಾಘವಃ ॥ ೨೦॥

ಸುಖಾನಾಮುಚಿತೋ ನಿತ್ಯಮಸುಖಾನಾಮನೂಚಿತಃ ।
ದುಃಖಮುತ್ತರಮಾಸಾದ್ಯ ಕಚ್ಚಿದ್ರಾಮೋ ನ ಸೀದತಿ ॥ ೨೧॥

ಕೌಸಲ್ಯಾ ಯಾಸ್ತಥಾ ಕಚ್ಚಿತ್ ಸುಮಿತ್ರಾಯಾಸ್ತಥೈವ ಚ ।
ಅಭೀಕ್ಷ್ಣಂ ಶ್ರೂಯತೇ ಕಚ್ಚಿತ್ ಕುಶಲಂ ಭರತಸ್ಯ ಚ ॥ ೨೨॥

ಮನ್ನಿಮಿತ್ತೇನ ಮಾನಾರ್ಹಃ ಕಚ್ಚಿತ್ ಶೋಕೇನ ರಾಘವಃ ।
ಕಚ್ಚಿನ್ನಾನ್ಯಮನಾ ರಾಮಃ ಕಚ್ಚಿನ್ನಾಂ ತಾರಯಿಷ್ಯತಿ ॥ ೨೩॥

ಕಚ್ಚಿದ್ಧರ್ಕೌಹಣೀಂ ಭೀಮಾಂ ಭರತೋ ಭ್ರಾತೃವತ್ಸಲಃ ।
ಧ್ವಜಿನೀಂ ಮಂತ್ರಿಭಿರ್ಗುಪ್ತಾಂ ಪ್ರೇಷಯಿಷ್ಯತಿ ಮತ್ಕೃತೇ ॥ ೨೪॥

ವಾನರಾಧಿಪತಿಃ ಶ್ರೀಮಾನ್ ಸುಗ್ರೀವಃ ಕಚ್ಚಿದೇಷ್ಯತಿ ।
ಮತ್ಕೃತೇ ಹರಿಭಿರ್ವೀರೈರ್ವೃತೋ ದಂತನಖಾಯುಧೈಃ ॥ ೨೫॥

ಕಚ್ಚಿಚ್ಚ ಲಕ್ಷ್ಮಣಃ ಶೂರಃ ಸುಮಿತ್ರಾನಂದವರ್ಧನಃ ।
ಅಸ್ತ್ರವಿಚ್ಛರಜಾಲೇನ ರಾಕ್ಷಸಾನ್ ವಿಧಮಿಷ್ಯತಿ ॥ ೨೬॥

ರೌದ್ರೇಣ ಕಚ್ಚಿದಸ್ತ್ರೇಣ ರಾಮೇಣ ನಿಹತಂ ರಣೇ ।
ದ್ರಕ್ಷ್ಯಾಮ್ಯಲ್ಪೇನ ಕಾಲೇನ ರಾವಣಂ ಸಸುಹೃಜ್ಜನಮ್ ॥ ೨೭॥

ಕಚ್ಚಿನ್ನ ತದ್ವೇಮಸಮಾನವರ್ಣಂ
ತಸ್ಯಾನನಂ ಪದ್ಮಸಮಾನಗಂಧಿ ।
ಮಯಾ ವಿನಾ ಶುಷ್ಯತಿ ಶೋಕದೀನಂ
ಜಲಕ್ಷಯೇ ಪದ್ಮಮಿವಾತಪೇನ ॥ ೨೮॥

ಧರ್ಮಾಪದೇಶಾತ್ಪ್ರಜತಶ್ಚ ರಾಜ್ಯಂ
ಮಾಂ ಚಾಪ್ಯರಣ್ಯಂ ನಯತಃ ಪದಾತಿಮ್ ।
ನಾಪೀದ್ಯಥಾ ಯಸ್ಯ ನ ಭೇರ್ನ ಶೋಕಃ
ಕಚ್ಚಿತ್ ಸ ಧೈರ್ಯಂ ಹೃದಯೇ ಕರೋತಿ ॥ ೨೯॥

ನ ಚಾಸ್ಯ ಮಾತಾ ನ ಪಿತಾ ಚ ನಾನ್ಯಃ
ಸ್ನೇಹಾದ್ವಿಶಿಷ್ಟೋಽಸ್ತಿ ಮಯಾ ಸಮೋ ವಾ ।
ತಾವತ್ತ್ವಹಂ ದೂತ ಜಿಜೀವಿಷೇಯಂ
ಯಾವತ್ ಪ್ರವೃತ್ತಿಂ ಶ್ರುಣುಯಾಂ ಪ್ರಿಯಸ್ಯ ॥ ೩೦॥

ಬರುವರೇ? ಅವನ ಮಿತ್ರರು ಕಲ್ಯಾಣ ಗುಣಸಂಪನ್ನರಾಗಿರುವರೇ? ಮಿತ್ರರು ಅವನನ್ನು ಗೌರವಿಸುತ್ತಿದ್ದಾರೋ? ॥೧೮॥ ರಾಜಕುಮಾರನಾದ ಶ್ರೀರಾಮನು ದೇವತೆಗಳ ಅನುಗ್ರಹಕ್ಕಾಗಿ ಅವರನ್ನು ಪ್ರಾರ್ಥಿಸುತ್ತಿರುವನೋ? ಪುರುಷ ಪ್ರಯತ್ನವನ್ನು ಮಾಡಿ ಕಾರ್ಯ ಸಿದ್ಧಿಗಾಗಿ ದೈವಸಹಾಯವನ್ನು ಪಡೆಯುತ್ತಿರುವನೇ? (ಕಾರ್ಯಸಿದ್ಧಿಗಾಗಿ ಪುರುಷ ಪ್ರಯತ್ನ ಮತ್ತು ದೈವಾನುಗ್ರಹವು ಆವಶ್ಯಕವಾಗಿದೆ.) ॥೧೯॥ ಎಲೈ ವಾನರಾ! ನನ್ನ ಅಗಲುವಿಕೆಯಿಂದ ಶ್ರೀರಾಮನಿಗೆ ನನ್ನ ಮೇಲಿನ ಪ್ರೀತಿಯು ತೊಲಗಿ ಹೋಗಿಲ್ಲವಲ್ಲ? ಈ ಆಪತ್ತುಗಳಿಂದ ನನ್ನನ್ನು ಮುಕ್ತಗೊಳಿಸುತ್ತಾನಲ್ಲಾ? ॥೨೦॥ ಶ್ರೀರಾಮನು ಯಾವಾಗಲೂ ಸುಖವಾಗಿರಲು ಅರ್ಹನಾದವನು, ದುಃಖಪಡಲು ಅನರ್ಹನಾದವನು, ಅತಿಯಾದ ದುಃಖವನ್ನು ಹೊಂದಿಯೂ, ಕೃಶನೂ, ಖಿನ್ನನೂ ಆಗಿಲ್ಲವಷ್ಟೇ? ॥೨೧॥ ಕೌಸಲ್ಯಾ - ಸುಮಿತ್ರೆಯರ ಹಾಗೂ ಭರತನ ಕುಶಲವನ್ನು ಆಗಿಂದಾಗ್ಗೆ ಕೇಳಿ ತಿಳಿದುಕೊಳ್ಳುತ್ತಿರುವನಲ್ಲ ? ॥೨೨॥ ಸರ್ವಲೋಕಪೂಜ್ಯನಾದ ರಾಘವನು ನನ್ನ ಸಲುವಾಗಿ ಶೋಕಪಡುತ್ತಿರುವನೇ? ಅನ್ಯಮನಸ್ಕನಾಗಿಲ್ಲತಾನೇ? ನಿಶ್ಚಯವಾಗಿಯೂ ರಾಮನು ನನ್ನನ್ನು ಈ ದುಃಖದಿಂದ ಪಾರುಮಾಡುವನೇ? ॥೨೩॥ ಭ್ರಾತೃವತ್ಸಲನಾದ ಭರತನು ಮಂತ್ರಿಗಳಿಂದ ರಕ್ಷಿಸಲ್ಪಡುತ್ತಿರುವ ಭಯಂಕರವಾದ ಆಕ್ಷೌಹಿಣಿ ಸೈನ್ಯವನ್ನು ನನ್ನ ವಿಮುಕ್ತಿಗಾಗಿ ಕಳುಹಿಸುವನೇ? ॥೨೪॥ ಶ್ರೀಮಂತನೂ, ವಾನರಾಧಿಪತಿಯೂ ಆದ ಸುಗ್ರೀವನು ನನ್ನ ಸಲುವಾಗಿ ಹಲ್ಲು ಮತ್ತು ಉಗುರುಗಳೇ ಆಯುಧವುಳ್ಳ ಕಪಿಸೈನ್ಯದೊಂದಿಗೆ ಇಲ್ಲಿಗೆ ಆಗಮಿಸುವನೇ? ॥೨೫॥ ಸುಮಿತ್ರಾ ದೇವಿಯ ಆನಂದವರ್ಧನೂ, ಶೂರನೂ, ಸರ್ವಾಸ್ತ್ರವಿದನೂ ಆದ ಲಕ್ಷ್ಮಣನು ಬಾಣಗಳ ಸಮೂಹಗಳಿಂದ ರಾಕ್ಷಸರನ್ನು ಧ್ವಂಸ ಮಾಡುವನೇ? ॥೨೬॥ ಭಯಂಕರವಾದ ಅಗ್ನಿಯ ಮಳೆಯಂತೆ ಶರಜಾಲದಿಂದ, ಬಂಧು-ಮಿತ್ರ ಪರಿವಾರ ಸಹಿತನಾಗಿ ರಣರಂಗದಲ್ಲಿ ಹತನಾದ ರಾವಣನನ್ನು ನಾನು ಬೇಗನೇ ನೋಡುವೆನೇ? ॥೨೭॥ ಭಂಗಾರದ ಬಣ್ಣದಂತೆ, ಪದ್ಮಪರಿಮಳದಿಂದ ಆಹ್ಲಾದಕರವಾದ ಆ ಶ್ರೀರಾಮನ ಮುಖ ಕಮಲವು ನನ್ನ ಅಗಲುವಿಕೆಯ ಕಾರಣದಿಂದ, ಬಿತ್ತಿಹೋದ ಸರೋವರದಲ್ಲಿರುವ ಕಮಲದಂತೆ ಬಾಡಿಹೋಗಿಲ್ಲ ತಾನೇ? ॥೨೮॥ ಧರ್ಮಪಾಲನೆಗಾಗಿ ಸ್ವರಾಜ್ಯವನ್ನು ತ್ಯಜಿಸಿದಾಗ, ನನ್ನನ್ನು ಕಾಲ್ನಡಿಗೆಯಿಂದ ಕಾಡಿಗೆ ಕರತಂದಾಗ, ಶ್ರೀರಾಮನಿಗೆ ಕೋಕವಾಗಲಿ, ವ್ಯಥೆಯಾಗಲೀ, ಭಯವಾಗಲೀ ಇರಲಿಲ್ಲ. ಅಂತಹ ನನ್ನ ಪತಿಯು ನನ್ನ ವಿಯೋಗ ದುಃಖದಿಂದ ಈಗ ಹೃದಯದಲ್ಲಿ ಧೈರ್ಯಗುಂದಿಲ್ಲವಲ್ಲ ? ॥೨೯॥ ನಮ್ಮ ದಾಂಪತ್ಯದಲ್ಲಿ ಅನ್ಯೋನ್ಯಾನುರಾಗಗಳು ಅನನ್ಯವು. ಇದರಿಂದಲೇ ಶ್ರೀರಾಮನಿಗೆ ತಾಯಿಯಾಗಲೀ, ತಂದೆಯಾಗಲೀ, ಬೇರೆ ಯಾರೇ ಆಗಲೀ ನನ್ನಷ್ಟು ಪ್ರಿಯರೂ, ನನಗಿಂತ ಹೆಚ್ಚಿನ ಪ್ರಿಯರೂ ಆಗಿರಲಿಲ್ಲ. ಆದುದರಿಂದ ನಾನು

ಇತೀವ ದೇವೀ ವಚನಂ ಮಹಾರ್ಥಂ
ತಂ ವಾನರೇಂದ್ರಂ ಮಧುರಾರ್ಥಮುಕ್ತ್ವಾ।
ಶ್ರೋತುಂ ಪುನಸ್ತಸ್ಯ ವಚೋಽಭಿರಾಮಂ
ರಾಮಾರ್ಥಯುಕ್ತಂ ವಿರರಾಮ ರಾಮಾ ॥ ೫೧॥

ಸೀತಾಯಾ ವಚನಂ ಶ್ರುತ್ವಾ ಮಾರುತಿರ್ಗತವಿಕ್ಲವಃ।
ಶಿರಸ್ಯಂಜಲಿಮಾಧಾಯ ವಾಕ್ಯಮುತ್ತರಮಬ್ರವೀತ್ ॥ ೫೨॥

ನ ತ್ವಾಮಿಹಸ್ಥಾಂ ಜಾನೀತೇ ರಾಮಃ ಕಮಲಲೋಚನಃ।
ತೇನ ತ್ವಾಂ ನಾನಯತ್ಯಾಶು ಶಚೀಮಿವ ಪುರಂದರಃ ॥ ೫೩॥

ಶ್ರುತ್ವೈವ ತು ವಚೋ ಮಹ್ಯಂ ಕ್ಷಿಪ್ರಮೇಷ್ಯತಿ ರಾಘವಃ।
ಚಮೂಂ ಪ್ರಕರ್ಷನ್ ಮಹತೀಂ ಹರ್ಯೃಕ್ಷಗಣಸಂಕುಲಾಮ್ ॥ ೫೪॥

ನಿಷ್ಪತಿಷ್ಯಾ ಬಾಣೌಘೈರಕ್ಷೋಘ್ನಂ ವರುಣಾಲಯಮ್ ।
ಕರಿಷ್ಯತಿ ಪುರೀಂ ಲಂಕಾಂ ಕಾಕುತ್ಸ್ಥಃ ಶಾಂತರಾಕ್ಷಸಾಮ್ ॥ ೫೫॥

ತತ್ರ ಯದ್ಯಂತರಾ ಮೃತ್ಯುರ್ಯದಿ ದೇವಾಃ ಮಹಾಸುರಾಃ।
ಸ್ಥಾಸ್ಯಂತಿ ಪಥಿ ರಾಮಸ್ಯ ಸ ತಾನಪಿ ವಧಿಷ್ಯತಿ ॥ ೫೬॥

ತವಾದರ್ಶನಜೇನಾರ್ಯೇ ಶೋಕೇನ ಸ ಪರಿಪ್ಲುತಃ।
ನ ಶರ್ಮ ಲಭತೇ ರಾಮಃ ಸಿಂಹಾರ್ದಿತ ಇವ ದ್ವಿಪಃ ॥ ೫೭॥

ಮಲಯೇನ ಚ ವಿಂಧ್ಯೇನ ಮೇರುಣಾ ಮಂದರೇಣ ಚ।
ದರ್ದುರೇಣ ಚ ತೇ ದೇವೀ ಶಪೇ ಮೂಲಫಲೇನ ಚ ॥ ೫೮॥

ಯಥಾ ಸುನಯನಂ ವಲ್ಗು ಬಿಂಬೋಷ್ಠಂ ಚಾರುಕುಂಡಲಮ್ ।
ಮುಖಂ ದ್ರಕ್ಷ್ಯಸಿ ರಾಮಸ್ಯ ಪೂರ್ಣಚಂದ್ರಮಿವೋದಿತಮ್ ॥ ೫೯॥

ಶ್ರೀರಾಮನು ಕುಶಲಿಯಾಗಿರುವನೆಂಬ ವಾರ್ತೆಯನ್ನು ಕೇಳುತ್ತಿರುವವರೆಗೆ ಜೀವಿಸಿರುವೆನು'' ॥೫೦॥ ಹೀಗೆ ಸೀತಾದೇವಿಯು ವಾನರೇಂದ್ರನಾದ ಹನುಮಂತನಿಗೆ ಮಧುರವಾದ ಮತ್ತು ಮಹತ್ತಾದ ಅರ್ಥದಿಂದ ಕೂಡಿದ್ದ ಮಾತುಗಳನ್ನು ಹೇಳಿ, ಶ್ರೀರಾಮನನ್ನೇ ಮುಖ್ಯವಾಗಿ ಉದ್ದೇಶಿಸಿ ಮನೋಹರವಾಗಿ ಹೇಳುವ ಹನುಮಂತನ ಮಾತನ್ನು ಕೇಳುವ ಬಯಕೆಯಿಂದ ಸುಮ್ಮನಾದಳು. ॥೫೦॥

ಜಾನಕಿ ದೇವಿಯು ಹೇಳಿದ ಮೃದುಮಧುರ ವಚನಗಳನ್ನು ಕೇಳಿ, ಮಹಾಪರಾಕ್ರಮಿಯಾದ ಮಾರುತಿಯು ವಿನಮ್ರನಾಗಿ, ಅಂಜಲಿ ಬದ್ಧನಾಗಿ ಅವಳಲ್ಲಿ ಹೀಗೆ ಹೇಳತೊಡಗಿದನು. ॥೫೨॥ ಎಲೈ ಕಮಲಲೋಚನೇ ! ನೀನು ಈ ಲಂಕೆಯಲ್ಲಿರುವ ಸಂಗತಿ ರಾಮನು ಖಂಡಿತವಾಗಿ ತಿಳಿಯನು. ತಿಳಿದಿದ್ದರೆ ಇಂದ್ರನು ಶಚೀದೇವಿಯನ್ನು ಕರೆತರುವಂತೆ ರಾಮನು ನಿನ್ನನ್ನು ಕರೆದುಕೊಂಡು ಹೋಗುವನು.* ॥೫೩॥ ನನ್ನ ಈ ಮಾತನ್ನು ಕೇಳುತ್ತಲೇ ಶ್ರೀರಾಮನು ಶೀಘ್ರವಾಗಿ ವಾನರ-ಭಲ್ಲೂಕರ ಮಹಾ ಸೈನ್ಯದೊಂದಿಗೆ ಇಲ್ಲಿಗೆ ಹೊತ್ತುಗಳೆಯದೆ ಬರುವನು. ॥೫೪॥ ಕವಲಿಸಲು ಅವಶ್ಯವಾದ ಮಹಾ ಸಮುದ್ರವನ್ನು ಬಾಣಗಳ ಸಮೂಹಗಳಿಂದ ಸ್ತಂಭನಗೊಳಿಸಿ, ಲಂಕಾ ನಗರದಲ್ಲಿರುವ ಎಲ್ಲ ರಾಕ್ಷಸರನ್ನು ಭಸ್ಮ ಮಾಡುವನು ॥೫೫॥ ಅವನು ಲಂಕಾಪಟ್ಟಣವನ್ನು ಧ್ವಂಸಮಾಡುತ್ತಿರುವಾಗ ಅವನನ್ನು ತಡೆಯಲು, ಮೃತ್ಯುವಾಗಲಿ, ದೇವತೆಗಳಾಗಲೀ, ಮಹಾಸುರರೇ ಆಗಲಿ, ಆಗಮಿಸಿದರೂ ಅವರೆಲ್ಲರನ್ನೂ ಶ್ರೀರಾಮನು ಸಂಹರಿಸಿಬಿಡುವನು. ॥೫೬॥

ಆರ್ಯಳೇ! ನಿನ್ನನ್ನು ನೋಡದೇ ಇರುವುದರಿಂದ ಶೋಕಾಕುಲನಾದ ಶ್ರೀರಾಮನು ಸಿಂಹಪೀಡಿತವಾದ ಆನೆಯಂತೆ ದುಃಖಿಪಡುತ್ತಿದ್ದಾನೆ. ಅವನಿಗೆ ಸುಖವೆಂಬುದೇ ಇಲ್ಲವಾಗಿದೆ. ॥೫೭॥

''ಎಲೈ ದೇವಿ! ಚೆಲುವಾದ ಕಣ್ಣುಳ್ಳವನೂ, ಸುಂದರವಾಗಿಯೂ, ತೊಂಡೆಹಣ್ಣಿನಂತೆಯೂ ಇರುವ ತುಟಿಗಳುಳ್ಳವನೂ, ಸುಂದರವಾದ ಕುಂಡಲಗಳಿಂದ ವಿಭೂಷಿತನಾಗಿರುವವನೂ, ಆಗ ತಾನೇ ಉದಯಿಸಿದ ಹುಣ್ಣಿಮೆಯ ಚಂದ್ರನಂತೆ ಆಹ್ಲಾದಕರನಾಗಿರುವ ಶ್ರೀರಾಮನ ಮುಖವನ್ನು ನೀನು ಖಂಡಿತವಾಗಿ ಕಾಣಲಿರುವೆ. ಇದರ ಬಗ್ಗೆ ನಾನು ಸಂಚರಿಸುವ ಸುಂದರ ಮಲಯ, ಮೇರು, ದರ್ದುರ ಪರ್ವತಗಳ ಮೇಲೆ, ನನ್ನ ಪ್ರಾಣಾಧಾರವಾದ ಕಂದ-ಮೂಲ-ಫಲಗಳ ಮೇಲೆ ಆಣೆಯಿಟ್ಟು ಹೇಳುತ್ತೇನೆ. ॥೫೮-೫೯॥ ವೈದೇಹೀ! ಐರಾವತದ ಮೇಲೆ ಕುಳಿತಿರುವ ಇಂದ್ರನಂತೆ,

---

* ಆನುಹ್ಲಾದನೆಂಬುವನು ಇಂದ್ರಪತ್ನೀ ಶಚಿಯನ್ನು ಅಪಹರಿಸಿಕೊಂಡು ಹೋದನು. ಅವಳು ಎಲ್ಲಿದ್ದಾಳೆ ಎಂಬುದನ್ನು ತಿಳಿಯದ ಇಂದ್ರನು ಅವಳನ್ನು ಶಿಘ್ರವಾಗಿ ಕರಕೊಂಡು ಹೋಗಲು ಸಾಧ್ಯವಾಗಲಿಲ್ಲ. ಕೆಲಕಾಲದಲ್ಲೇ ಅವಳಿರುವ ಸ್ಥಳವು ತಿಳಿದಾಕ್ಷಣ ಅವನು ಅವಳನ್ನು 'ಅಮರಾವತಿ'ಗೆ ಕರೆದುಕೊಂಡು ಹೋದನು.

ಕ್ಷಿಪ್ರಂ ದ್ರಕ್ಷ್ಯಸಿ ವೈದೇಹಿ ರಾಮಂ ಪ್ರಸ್ರವಣೇ ಗಿರೌ ।
ಶತಕ್ರತುಮಿವಾಸೀನಂ ನಾಕಪೃಷ್ಠಸ್ಯ ಮೂರ್ಧನಿ ॥ ೪೦॥

ನ ಮಾಂಸಂ ರಾಘವೋ ಭುಂಕ್ತೇ ನ ಚಾಪಿ ಮಧು ಸೇವತೇ ।
ವನ್ಯಂ ಸುವಿಹಿತಂ ನಿತ್ಯಂ ಭಕ್ತಮಶ್ನಾತಿ ಪಂಚಮಮ್ ॥ ೪೧॥

ನೈವ ದಂಶಾನ್ನ ಮಶಕಾನ್ನ ಕೀಟಾನ್ನ ಸರೀಸೃಪಾನ್ ।
ರಾಘವೋಽಪನಯೇದ್ಭಾತ್ರಾ ತ್ವದ್ಗತೇನಾಂತರಾತ್ಮನಾ ॥ ೪೨॥

ನಿತ್ಯಂ ಧ್ಯಾನವರೋ ರಾಮೋ ನಿತ್ಯಂ ಶೋಕಪರಾಯಣಃ ।
ನಾನ್ಯಚ್ಚಿಂತಯತೇ ಕಿಂಚಿತ್ ಸ ತು ಕಾಮವತಂ ಗತಃ ॥ ೪೩॥

ಅನಿದ್ರಃ ಸತತಂ ರಾಮಃ ಸುಪ್ತೋಽಪಿ ಚ ನರೋತ್ತಮಃ ।
ಸೀತೇತಿ ಮಧುರಾಂ ವಾಣೀಂ ವ್ಯಾಹರನ್ ಪ್ರತಿಬುಧ್ಯತೇ ॥ ೪೪॥

ದೃಷ್ಟ್ವಾ ಫಲಂ ವಾ ಪುಷ್ಪಂ ವಾ ಯದ್ಯನ್ಯತ್ ಸುಮನೋಹರಮ್ ।
ಬಹುಶೋ ಹಾ ಪ್ರಿಯೇತ್ಯೇವಂ ಶ್ವಸಂಸ್ತ್ಯಾಮಭಿಭಾಷತೇ ॥ ೪೫॥

ಸ ದೇವಿ ನಿತ್ಯಂ ಪರಿತಪ್ಯಮಾನ
ಸ್ತ್ವಾಮೇವ ಸೀತೇತ್ಯಭಿಭಾಷಮಾಣಃ ।
ಧೃತವ್ರತೋ ರಾಜಸುತೋ ಮಹಾತ್ಮಾ
ತವೈವ ಲಾಭಾಯ ಕೃತಪ್ರಯತ್ನಃ ॥ ೪೬॥

ಸಾ ರಾಮಸಂಕೀರ್ತನವೀತಶೋಕಾ
ರಾಮಸ್ಯ ಶೋಕೇನ ಸಮಾನಶೋಕಾ ।
ಶರನ್ಮುಖೇ ಸಾಂಬುದಶೇಷಚಂದ್ರಾ
ನಿಶೇವ ವೈದೇಹಸುತಾ ಬಭೂವ ॥ ೪೭॥

ಪ್ರಸ್ರವಣ ಪರ್ವತ ಮೇಲೆ ವಿರಾಜಿಸುತ್ತಿರುವ ಶ್ರೀರಾಮನನ್ನು ನೀನು ಬಹಳ ಬೇಗನೇ ಕಾಣಲಿರುವೆ. ॥೪೦॥

ರಾಘವನು ಮಾಂಸವನ್ನು ಎಂದೂ ಮುಟ್ಟುವುದಿಲ್ಲ. ಮಧುವನ್ನು ಕುಡಿಯುತ್ತಿಲ್ಲ. ವನವಾಸಿಗಳಾದ ವಾನಪ್ರಸ್ಥರಿಗೆ* ವಿಹಿತವಾದ, ಸಾತ್ವಿಕವಾದ ವನ್ಯಫಲಗಳನ್ನು, ಕಂದಮೂಲಗಳನ್ನು ಐದುಭಾಗ ಮಾಡಿ, ಅದರಲ್ಲಿನ ಐದನೆಯ ಭಾಗವನ್ನು ಪ್ರತಿದಿನವು ಸಾಯಂಕಾಲದಲ್ಲಿ ಶರೀರ ಧಾರಣೆಗಾಗಿ ಮಾತ್ರ ತಿನ್ನುವನು. ॥೪೧॥ ಯಾವಾಗಲೂ ನಿನ್ನಲ್ಲಿಯೇ ನೆಟ್ಟಿರುವ ಮನಸ್ಸುಳ್ಳ ಶ್ರೀರಾಮನು ತನ್ನ ಮೈಮೇಲೆ ಕುಳಿತುಕೊಳ್ಳುವ ನೊಣಗಳನ್ನಾಗಲೀ, ಸೊಳ್ಳೆಗಳನ್ನಾಗಲೀ, ಹರಿದಾಡುವ ಜೀವಿಗಳನ್ನಾಗಲೀ, ಕ್ರಿಮಿ-ಕೀಟಗಳನ್ನಾಗಲೀ ಓಡಿಸಲೂ ಕೂಡ ಪ್ರಯತ್ನಿಸುವುದಿಲ್ಲ. ॥೪೨॥ ಅವನು ನಿತ್ಯವೂ ನಿನ್ನ ಯೋಚನೆಯಲ್ಲಿಯೇ ಮಗ್ನನಾಗಿರುವನು. ನಿನ್ನ ವಿರಹ ಶೋಕದಲ್ಲಿಯೇ ಮುಳುಗಿ ಹೋಗಿರುವನು. ನಿನ್ನನ್ನು ಕಾಣಬೇಕೆಂಬ ಉತ್ಕಟವಾದ ಆಸೆಗೆ ವಶನಾಗಿರುವ ಶ್ರೀರಾಮನು ನಿನ್ನನ್ನು ಬಿಟ್ಟು ಬೇರೆ ಏನನ್ನೂ ಯೋಚಿಸುವುದಿಲ್ಲ. ॥೪೩॥ ಅವನು ನಿದ್ರೆಯನ್ನೇ ಮಾಡುತ್ತಿಲ್ಲ. ಕೆಲವು ವೇಳೆ ನಿದ್ದೆಯ ಜೋಂಪು ಹಿಡಿದರೂ ''ಸೀತಾ! ಸೀತಾ!'' ಎಂದು ಮಧುರವಾದ ಧ್ವನಿಯಲ್ಲಿ ಹಂಬಲಿಸುತ್ತಾ ಎಚ್ಚರಗೊಳ್ಳುತ್ತಾನೆ. ॥೪೪॥ ಎಂದಾದರೂ ಫಲವನ್ನಾಗಲೀ, ಪುಷ್ಪವನ್ನಾಗಲೀ, ಮನೋಹರವಾದ ಬೇರೆ ವಸ್ತುವನ್ನು ನೋಡಿದರೆ ''ಪ್ರಿಯ! ಪ್ರಿಯೆ!'' ನೀನು ಇಲ್ಲಿರುವೆಯಾ? ಎಂದು ಹೇಳುತ್ತಾ ನಿಟ್ಟುಸಿರು ಬಿಡುತ್ತಿರುತ್ತಾನೆ. ॥೪೫॥ ಎಲೈ ದೇವೀ! ಮಹಾತ್ಮನಾದ ಆ ರಾಜಕುಮಾರನು ಯಾವಾಗಲೂ ಸೀತೇ! ಸೀತೇ! ಎಂದು ಪರಿಪರಿಯಾಗಿ, ನೀನು ಸಮೀಪದಲ್ಲಿರದಿದ್ದರೂ ಪರಿತಪಿಸುತ್ತಾ ಇರುತ್ತಾನೆ. ಅವನು ಕಠಿಣವಾದ ನಿಯಮಗಳನ್ನು ಆಚರಿಸುತ್ತಾ ನಿನ್ನನ್ನು ಪಡೆಯಲು ಪ್ರಯತ್ನಿಸುತ್ತಿರುತ್ತಾನೆ. ॥೪೬॥

ಶ್ರೀರಾಮನಗುಣ ಸಂಕೀರ್ತನ ಶ್ರವಣ ಪ್ರಭಾವದಿಂದ ವೈದೇಹಿಯ ಶೋಕವು ತೊಲಗಿಹೋಯಿತು. ಆದರೆ ಶ್ರೀರಾಮನು ಶೋಕಮಗ್ನನಾಗಿರುವನೆಂದು ಕೇಳಿ, ಅವಳು ಶೋಕಮಗ್ನಳಾದಳು. ಶರತ್ಕಾಲದ ಪ್ರಾರಂಭದಲ್ಲಿ ಮೇಘಗಳಿಂದ ಮುಚ್ಚಿದ ಚಂದ್ರನು ಪ್ರಕಾಶಿಸುವುದಿಲ್ಲ. ಮೇಘಗಳು ತೊಲಗಿಹೋದಾಗ ಪ್ರಕಾಶಿಸುವಂತೆ, ಸೀತಾದೇವಿಯ ಸ್ಥಿತಿಯು ಶರತ್ಕಾಲದ ರಾತ್ರಿಯಂತೆ ಕಾಣುತ್ತಿತ್ತು. ॥೪೭॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಷಟ್ಪಂಚಾಶಃ ಸರ್ಗಃ ॥ ೫೬ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತಾರನೆಯ ಸರ್ಗವು ಮುಗಿಯಿತು.

* * *

* ವಾನಪ್ರಸ್ಥರು ಆಹಾರ ಪದಾರ್ಥಗಳನ್ನು ಐದು ಭಾಗಮಾಡಿ, ಮೊದಲನೆಯ ನಾಲ್ಕು ಭಾಗಗಳನ್ನು ದೇವತೆಗಳಿಗೆ, ಪಿತೃದೇವತೆಗಳಿಗೆ, ಅತಿಥಿಗಳಿಗೆ ಮತ್ತು ಭೂತ-ಪ್ರಾಣಿಗಳಿಗೆ ಅರ್ಪಿಸಿ, ಉಳಿದ ಐದನೆಯ ಭಾಗವನ್ನು ಸ್ವೀಕರಿಸುವರು. (ಗೋವಿಂದರಾಜೀಯ ವ್ಯಾಖ್ಯಾ)

ಮೂವತ್ತೇಳನೆಯ ಸರ್ಗ

ಸೀತೆಯು ಹನುಮಂತನಿಗೆ ಶ್ರೀರಾಮನನ್ನು ಶೀಘ್ರವಾಗಿ ಕರೆತರಲು ಹೇಳಿದುದು, ಹನುಮಂತನು ಸೀತೆಯನ್ನು ತನ್ನ ಜೊತೆಯಲ್ಲೇ ಬರಲು ಹೇಳಿದುದು, ಸೀತೆಯ ಅಸಮ್ಮತಿ –

ಸೀತಾ ತದ್ವಚನಂ ಶ್ರುತ್ವಾ ಪೂರ್ಣಚಂದ್ರನಿಭಾನನಾ ।
ಹನುಮಂತಮುವಾಚೇದಂ ಧರ್ಮಾರ್ಥಸಹಿತಂ ವಚಃ ॥ ೧॥

ಅಮೃತಂ ವಿಷಸಂಸೃಷ್ಟಂ ತ್ವಯಾ ವಾನರ ಭಾಷಿತಮ್ ।
ಯಚ್ಚ ನಾನ್ಯಮನಾ ರಾಮೋ ಯಚ್ಚ ಶೋಕಪರಾಯಣಃ ॥ ೨॥

ಐಶ್ವರ್ಯೇ ವಾ ಸುವಿಸ್ತೀರ್ಣೇ ವ್ಯಸನೇ ವಾ ಸುದಾರುಣೇ ।
ರಜ್ಜ್ವೇವ ಪುರುಷಂ ಬದ್ಧ್ವಾ ಕೃತಾಂತಃ ಪರಿಕರ್ಷತಿ ॥ ೩॥

ವಿಧಿರ್ನೂನಮಸಂಹಾರ್ಯಃ ಪ್ರಾಣಿನಾಂ ಪ್ಲವಗೋತ್ತಮ ।
ಸೌಮಿತ್ರಿಂ ಮಾಂ ಚ ರಾಮಂ ಚ ವ್ಯಸನೈಃ ಪಶ್ಯ ಮೋಹಿತಾನ್ ॥ ೪॥

ಶೋಕಸ್ಯಾಸ್ಯ ಕದಾ ಪಾರಂ ರಾಘವೋಽಧಿಗಮಿಷ್ಯತಿ ।
ಪ್ಲವಮಾನಃ ಪರಿಶ್ರಾಂತೋ ಹತನೌಃ ಸಾಗರೇ ಯಥಾ ॥ ೫॥

ರಾಕ್ಷಸಾನಾಂ ವಧಂ ಕೃತ್ವಾ ಸೂದಯಿತ್ವಾ ಚ ರಾವಣಮ್ ।
ಲಂಕಾಮನ್ಮೂಲಿತಾಂ ಕೃತ್ವಾ ಕದಾ ದ್ರಕ್ಷ್ಯತಿ ಮಾಂ ಪತಿಃ ॥ ೬॥

ನ ವಾಚ್ಯಃ ಸಂತ್ವರಸ್ವೇತಿ ಯಾವದೇವ ನ ಪೂರ್ಯತೇ ।
ಅಯಂ ಸಂವತ್ಸರಃ ಕಾಲಸ್ತಾವದ್ಧಿ ಮಮ ಜೀವಿತಮ್ ॥ ೭॥

ದತ್ತಂ ತೇ ದಶಮೋ ಮಾಸೋ ದ್ವೌತು ಶೇಷೌ ಪ್ಲವಂಗಮ ।
ರಾವಣೇನ ನೃಶಂಸೇನ ಸಮ ಯೋ ಯಃ ಕೃತೋ ಮಮ ॥ ೮॥

ವಿಭೀಷಣೇನ ಚ ಭ್ರಾತ್ರಾ ಮಮ ನಿರ್ಯಾತನಂ ಪ್ರತಿ ।
ಆನುನೀತಃ ಪ್ರಯತ್ನೇನ ನ ಚ ತತ್ ಕುರುತೇ ಮತಿಮ್ ॥ ೯॥

ಮಮ ಪ್ರತಿಪ್ರದಾನಂ ಹಿ ರಾವಣಸ್ಯ ನ ರೋಚತೇ ।
ರಾವಣಂ ಮಾರ್ಗತೇ ಸಂಖ್ಯೇ ಮೃತ್ಯುಃ ಕಾಲವಶಂ ಗತಮ್ ॥ ೧೦॥

ಹನುಮಂತನಿಂದ ಶ್ರೀರಾಮಚಂದ್ರನ ಕುಶಲ ಸಮಾಚಾರಗಳನ್ನು ಕೇಳಿತಾಕ್ಷಣ ಸೀತಾದೇವಿಯ ಮುಖವು ಪೂರ್ಣಚಂದ್ರನಂತೆ ಶೋಭಿಸುತ್ತಿತ್ತು. ಅವಳು ಹನುಮಂತನಲ್ಲಿ ಧರ್ಮಾರ್ಥಯುಕ್ತವಾದ ಮಾತುಗಳನ್ನು ಹೇಳಿದಳು. ॥೧॥

''ಹೇ ವಾನರೋತ್ತಮಾ! ಶ್ರೀರಾಮನು ಆನನ್ಯ ಚಿತ್ತನಾಗಿ ಯಾವಾಗಲೂ ನಿನ್ನನ್ನೇ ಧ್ಯಾನಿಸುತ್ತಿರುವನು'' ಎಂಬ ನಿನ್ನ ಮಾತು ಅಮೃತಕ್ಕೆ ಸಮಾನವಾಗಿದೆ. 'ಅವನು ಶೋಕಮಗ್ನನಾಗಿರುವನು' ಇದು ನನಗೆ ಅತ್ಯಂತ ದುಃಖವನ್ನುಂಟುಮಾಡಿದೆ. ॥೨॥

ಆಪಾರವಾದ ಐಶ್ವರ್ಯದಲ್ಲಿ ಮುಳುಗಿರಲೀ, ಅತಿದಾರುಣವಾದ ದುಃಖದಲ್ಲಿ ಸಿಲುಕಿರಲಿ - ದೈವವು ಮನುಷ್ಯನನ್ನು ಹಗ್ಗದಿಂದ ಬಂಧಿಸುವಂತೆ ಬಂಧಿಸಿ ಸೆಳೆದಾಡುತ್ತದೆ. ॥೩॥

ಕಪಿ ಶ್ರೇಷ್ಠನೇ! ನಿಶ್ಚಯವಾಗಿಯೂ ಪ್ರಾಣಿಗಳಿಗೆ ವಿಧಿ ನಿಯಮವನ್ನು ಉಲ್ಲಂಘಿಸಲು ಸಾಧ್ಯವೇ ಇಲ್ಲ. ನಾನು ಮತ್ತು ರಾಮ-ಲಕ್ಷ್ಮಣರು ವಿಧಿಯ ಕೈಗೆ ಸಿಕ್ಕಿ ನಣ್ಣಾದಾ ಒಂದು ಕೋಡಿಕೆಯಿಂದಾಗಿ ಎಷ್ಟೊಂದು ದುಃಖಗಳನ್ನು ಅನುಭವಿಸುತ್ತಿರುವೆವು ನೋಡು. ॥೪॥

ಸಮುದ್ರದಲ್ಲಿ ನೌಕೆಯು ಭಗ್ನವಾಗಿ ನೀರಿಗೆ ಬಿದ್ದ ಮನುಷ್ಯನು ಈಜುತ್ತಾ ಆಯಾಸಗೊಂಡವನಂತೆ, ಶ್ರೀರಾಮನು ಈ ಶೋಕಸಾಗರದಿಂದ ಎಂದು ದಡ ಕಾಣುವನೋ? ತಿಳಿಯದು. ॥೫॥ ನನ್ನ ಪ್ರಭುವು ರಾಕ್ಷಸರೆಲ್ಲರನ್ನು ಸಂಹರಿಸಿ, ಲಂಕೆಯನ್ನು ಧ್ವಂಸಮಾಡಿ, ರಾವಣನನ್ನು ವಿನಾಶಗೊಳಿಸಿ ನನ್ನನ್ನು ಎಂದು ಸೇರುವನೋ ? ॥೬॥ ವಾನರ ಶ್ರೇಷ್ಠನೇ! ದುಷ್ಟರಾದ ರಾವಣನು ನನಗೆ ಒಂದು ಸಂವತ್ಸರ ಕಾಲ ಅವಧಿಯನ್ನು ಕೊಟ್ಟಿರುವನು. ಅವನು ವಿಧಿಸಿದ ಆ ಒಂದು ವರ್ಷದಲ್ಲಿ ಹತ್ತು ತಿಂಗಳು ಕಳೆದುಹೋದುವು. ಇನ್ನು ಎರಡು ಮಾಸಗಳು ಮಾತ್ರ ಉಳಿದಿರುವುದು. ಆ ಗಡುವು ಮುಗಿಯುವ ವರೆಗೆ ನಾನು ಜೀವಿಸಿರುವೆನು. ಅದರಿಂದ ನನ್ನ ವಿಮೋಚನೆಗೆ ತ್ವರೆಗೊಳ್ಳುವಂತೆ ನೀನು ರಾಮನಿಗೆ ಹೇಳಬೇಕು. ॥೭-೮॥ ನನ್ನನ್ನು ರಾಮನಿಗೆ ಒಪ್ಪಿಸುವ ವಿಷಯದಲ್ಲಿ ರಾವಣನ ತಮ್ಮನಾದ ವಿಭೀಷಣನು ಅಣ್ಣನ ಮನಸ್ಸನ್ನು ಒಲಿಸಲು ಬಹಳವಾಗಿ ಪ್ರಯತ್ನಿಸಿದನು. ಆದರೆ ರಾವಣನು ಅವನ ಮಾತಿಗೆ ಲಕ್ಷ್ಯ ಕೊಡಲಿಲ್ಲ. ॥೯॥ ಕಾಲವಶನಾಗಿ ಹೋಗಿರುವ ರಾವಣನನ್ನು ಯುದ್ಧರಂಗದಲ್ಲಿ ಮೃತ್ಯುವೇ ಹುಡುಕಾಡುತ್ತಿದೆ. ಆದುದರಿಂದ ಶ್ರೀರಾಮನಿಗೆ ನನ್ನನ್ನು ಒಪ್ಪಿಸಿಕೊಡುವ ವಿಷಯವು ರಾವಣನಿಗೆ ರುಚಿಸುತ್ತಿಲ್ಲ. ॥೧೦॥

ಜ್ಯೇಷ್ಠಾ ಕನ್ಯಾನಲಾ ನಾಮ ವಿಭೀಷಣಸುತಾ ಕಪೇ ।
ತಯಾ ಮಮೇದಮಾಖ್ಯಾತಂ ಮಾತ್ರಾ ಪ್ರಹಿತಯಾ ಸ್ವಯಮ್ ॥ ೧೧॥

ಅವಿಂಧ್ಯೋ ನಾಮ ಮೇಧಾವೀ ವಿದ್ವಾನ್ ರಾಕ್ಷಸಪುಂಗವಃ ।
ಧೃತಿಮಾನ್ ಶೀಲವಾನ್ ವೃದ್ಧೋ ರಾವಣಸ್ಯ ಸುಸಮ್ಮತಃ ॥ ೧೨॥

ರಾಮಾತ್ ಕ್ಷಯಮನುಪ್ರಾಪ್ತಂ ರಕ್ಷಸಾಮ್ ಪ್ರತ್ಯಚೋದಯತ್ ।
ನ ಚ ತಸ್ಯ ಸ ದುಷ್ಟಾತ್ಮಾ ಶಕೋತಿ ವಚನಂ ಹಿತಮ್ ॥ ೧೩॥

ಅಶಂಸೇಯಂ ಹಿತಶ್ರೇಷ್ಠ ಕ್ಷಿಪ್ರಂ ಮಾಂ ಪ್ರಾಪ್ನುತೇ ಪತಿಃ ।
ಅಂತರಾತ್ಮಾ ಹಿ ಮೇ ಶುದ್ಧಸ್ತಸ್ಮಿಂಶ್ಚ ಬಹುಯೋಗುಣಾಃ ॥ ೧೪॥

ಉತ್ಸಾಹಃ ಪೌರುಷಂ ಸತ್ತ್ವಮಾನೃಶಂಸ್ಯಂ ಕೃತಜ್ಞತಾ ।
ವಿಕ್ರಮಶ್ಚ ಪ್ರಭಾವಶ್ಚ ಸಂತಿ ವಾನರ ರಾಘವೇ ॥ ೧೫॥

ಚತುರ್ದಶ ಸಹಸ್ರಾಣಿ ರಾಕ್ಷಸಾನಾಂ ಜಘಾನ ಯಃ ।
ಜನಸ್ಥಾನೇ ವಿನಾ ಭ್ರಾತ್ರಾ ಶತ್ರುಃ ಕಸ್ಯ ನೋದ್ವಿಜೇತ್ ॥ ೧೬॥

ನ ಸ ಶಕ್ಯಸ್ತುಲಯಿತುಂ ವ್ಯಸನೈಃ ಪುರುಷರ್ಷಭಃ ।
ಅಹಂ ತಸ್ಯ ಪ್ರಭಾವಜ್ಞಾ ಶಕ್ರಸ್ಯೇವ ಪುಲೋಮಜಾ ॥ ೧೭॥

ಶರಜಾಲಾಂಶುಮಾನ್ ಶೂರಃ ಕಪೇ ರಾಮದಿವಾಕರಃ ।
ಶತ್ರುಕೋಪಮಯಂ ತೋಯಮುಪಶೋಷಂ ನಯಿಷ್ಯತಿ ॥ ೧೮॥

ಇತಿ ಸಂಜಲ್ಪಮಾನಾಂ ತಾಂ ರಾಮಾರ್ಥೇ ಕೋಕಿಲೇತಾಮ್ ।
ಅಶ್ರುಸಂಪೂರ್ಣನಯನಾಮುವಾಚ ವಚನಂ ಕಪಿಃ ॥ ೧೯॥

ಶ್ರುತ್ವೈವ ತು ವಚೋ ಮಹ್ಯಂ ಕ್ಷಿಪ್ರಮೇಷ್ಯತಿ ರಾಘವಃ ।
ಚಮೂಂ ಪ್ರಕರ್ಷನ್ ಮಹತೀಂ ಹರ್ಯೃಕ್ಷಗಣಸಂಕುಲಾಮ್ ॥ ೨೦॥

ಅಥವಾ ಮೋಚಯಿಷ್ಯಾಮಿ ತ್ವಾಮದ್ಯೈವ ವರಾನನೇ ।
ಅಸ್ಮಾದ್ದುಃಖಾದುಪಾರೋಹ ಮಮ ಪೃಷ್ಠಮನಿಂದಿತೇ ॥ ೨೧॥

ತ್ವಾಂ ತು ಪೃಷ್ಠಗತಾಂ ಕೃತ್ವಾ ಸಂತರಿಷ್ಯಾಮಿ ಸಾಗರಮ್ ।
ಶಕ್ತಸ್ತು ಹಿ ಮೇ ವೋಢುಂ ಲಂಕಾಮಪಿ ಸದಾವಕಾಮ್ ॥ ೨೨॥

ವಿಭೀಷಣನ ಹಿರಿಯ ಮಗಳು ಅನಲಾ ಎಂಬುವಳು ನನಗೆ ಈ ವಿಷಯವನ್ನು ತಿಳಿಸಿದಳು. ಅನಲೆಯ ತಾಯಿಯೇ ನನಗೆ ಈ ವಿಷಯವನ್ನು ತಿಳಿಸಲಿಕ್ಕಾಗಿ ಆಕೆಯನ್ನು ಕಳಿಸಿಕೊಟ್ಟಿದ್ದಳು. ॥೧೧॥ ಮೇಧಾವಿಯೂ, ವಿದ್ವಾಂಸನೂ, ರಾಕ್ಷಸ ಶ್ರೇಷ್ಠನೂ, ಬುದ್ಧಿವಂತನೂ, ಶೀಲವಂತನೂ, ವೃದ್ಧನೂ, ರಾವಣನಿಗೆ ಸುಸಮ್ಮತನೂ ಆದ ಅವಿಂಧ್ಯನೆಂಬ ರಾಕ್ಷಸಮಂತ್ರಿಯು - 'ರಾಕ್ಷಸರೆಲ್ಲರಿಗೂ ಶ್ರೀರಾಮನಿಂದ ವಿನಾಶವೂ ಸಂಭವಿಸಲಿದೆ' ಎಂದು ಹೇಳಿದನಂತೆ. ಆದರೆ ಅವನ ಆ ಹಿತಕರವಾದ ಮಾತನ್ನು ದುಷ್ಟನಾದ ರಾವಣನು ಲೆಕ್ಕಿಸಲಿಲ್ಲ.' ॥೧೨-೧೩॥

ಎಲೈ ಕಪೀಶ್ವರಾ! ಶ್ರೀರಾಮನಲ್ಲಿ ಅನೇಕ ಕಲ್ಯಾಣ ಗುಣಗಳಿವೆ. ನನ್ನ ಅಂತರಾತ್ಮವು ಪರಿಶುದ್ಧವಾಗಿದೆ. ಆ ನನ್ನ ಪತಿಯು ಬಹಳ ಬೇಗನೇ ನನ್ನನ್ನು ಪಡೆದುಕೊಳ್ಳುವನು. ಇದರಲ್ಲಿ ಸಂಶಯವೇ ಇಲ್ಲ. ಉತ್ಸಾಹ, ಪೌರುಷ, ಸತ್ತ್ವ, ದಯೆ, ಕೃತಜ್ಞತೆ, ಪರಾಕ್ರಮ ಮತ್ತು ಪ್ರಭಾವಗಳು ಶ್ರೀರಾಮನಲ್ಲಿ ಮೂರ್ತಿವತ್ತಾಗಿ ನೆಲೆಸಿವೆ. ॥೧೪-೧೫॥ ಜನಸ್ಥಾನದಲ್ಲಿ ತಮ್ಮನ ಸಹಾಯವಿಲ್ಲದೆ ಒಬ್ಬಂಟಿಗನಾಗಿ ಹದಿನಾಲ್ಕು ಸಾವಿರ ರಾಕ್ಷಸರನ್ನು ಸಂಹರಿಸಿದ ಶ್ರೀರಾಮನ ವಿಷಯದಲ್ಲಿ ಯಾವ ಶತ್ರುವು ಹೆದರದೇ ಇರುವನು? ॥೧೬॥ ಪುರುಷ ಶ್ರೇಷ್ಠನಾದ ಶ್ರೀರಾಮನ ಪರಾಕ್ರಮದ ಮುಂದೆ ನಮಗೆ ದುಃಖಿಕೊಡುತ್ತಿರುವ ರಾಕ್ಷಸರ ಪರಾಕ್ರಮವೂ ಎಂದೂ ಸರಿದೂಗಲಾರದು. ರಾಕ್ಷಸರಿಗೆ ಆವನ ಸಾಮರ್ಥ್ಯವು ತಿಳಿಯದು. ಶಚಿದೇವಿಯು ಇಂದ್ರನ ಪ್ರಭಾವವನ್ನು ತಿಳಿದಿರುವಂತೆ, ನಾನು ಶ್ರೀರಾಮನ ಪ್ರಭಾವವನ್ನು ಚೆನ್ನಾಗಿ ಬಲ್ಲೆನು. ॥೧೭॥ ಸೂರ್ಯನು ತನ್ನ ತೀಕ್ಷ್ಣವಾದ ಕಿರಣಗಳಿಂದ ನೀರನ್ನು ಪೂರ್ಣವಾಗಿ ಇಂಗಿಸಿಬಿಡುವಂತೆ, ಶೂರನಾದ ಶ್ರೀರಾಮನು ತನ್ನ ಬಾಣ ಪರಂಪರೆಯಿಂದ ಶತ್ರುಗಳಾದ ರಾಕ್ಷಸ ಸಮೂಹವನ್ನು ನುಚ್ಚುನೂರಾಗಿಸುವನು. ॥೧೮॥ ಶ್ರೀರಾಮನ ಆಗಲುಬಿಕೆಯ ಕೋಕದಿಂದ ಕೃತಳಾದ ಸೀತಾದೇವಿಯು ಕಣ್ಣುಗಳಿಂದ ನೀರು ಸುರಿಸುತ್ತಾ ಹೀಗೆ ಹೇಳಿದುದನ್ನು ಕೇಳಿ, ಹನುಮಂತನು ಆಕೆಯ ಬಳಿ ಈ ರೀತಿಯಾಗಿ ಹೇಳಿದನು. ॥೧೯॥

ತಾಯೇ! ದುಃಖಿಸಬೇಡ. ನನ್ನ ಮಾತನ್ನು ಕೇಳಿದೊಡನೆಯೇ ಶ್ರೀರಾಮನು ಕಪಿ-ಕರಡಿಗಳ ಮಹಾ ಸೈನ್ಯದೊಡನೆ ನಿನ್ನ ವಿಮುಕ್ತಿಗಾಗಿ ಬಹು ಬೇಗನೇ ಇಲ್ಲಿಗೆ ಬರುವನು. ॥೨೦॥ ಅಮ್ಮಾ! ನೀನು ಭಯಸುವೆಯಾದರೆ, ಈ ದುಃಖದಿಂದಲೂ, ರಾಕ್ಷಸನಿಂದಲೂ ನಿನ್ನನ್ನು ಈಗಲೇ ಮುಕ್ತಳನ್ನಾಗಿ ಮಾಡುತ್ತೇನೆ. ನನ್ನ ಬೆನ್ನಿನ ಮೇಲೆ ಕುಳಿತುಕೊ. ॥೨೧॥ ನಿನ್ನನ್ನು ನನ್ನ ಬೆನ್ನ ಮೇಲೆ ಕುಳ್ಳಿರಿಸಿಕೊಂಡು ಈ ಮಹಾಸಾಗರವನ್ನು ದಾಟುವೆನು. ನಿನ್ನನ್ನೇ ಏಕೆ! ರಾವಣ ಸಹಿತವಾಗಿ ಈ ಲಂಕೆಯನ್ನೇ ಎತ್ತಿಕೊಂಡು ಹೋಗುವ ಶಕ್ತಿಯೂ ನನಗಿದೆ. ॥೨೨॥ ಓ ಮೈಥಿಲೀ! ಯಜ್ಞೇಶ್ವರರು

ಅಹಂ ಪ್ರಸ್ರವಣಸ್ಥಾಯ ರಾಘವಾಯಾದ್ಯ ಮೈಥಿಲಿ।
ಪ್ರಾಪಯಿಷ್ಯಾಮಿ ಶಕ್ರಾಯ ಹವ್ಯಂ ಹುತಮಿವಾನಲಃ ॥ ೨೩॥

ದೃಕ್ಷ್ಯಸ್ಯದ್ಯೈವ ವೈದೇಹಿ ರಾಘವಂ ಸಹಲಕ್ಷ್ಮಣಂ।
ವ್ಯವಸಾಯಸಮಾಯುಕ್ತಂ ವಿಷ್ಣುಂ ದೈತ್ಯವಧೇ ಯಥಾ ॥ ೨೪॥

ತದ್ದರ್ಶನಕೃತೋತ್ಸಾಹಮಾಸ್ಥಮಸ್ಥಂ ಮಹಾಬಲಮ್ ।
ಪುರಂದರಮಿವಾಸೀನಂ ನಗರಾಜಸ್ಯ ಮೂರ್ಧನಿ ॥ ೨೫॥

ಪೃಷ್ಟಮಾರೋಹ ಮೇ ದೇವಿ ಮಾ ವಿಕಾಂಕ್ಷ ಕೋಚಿರೇ।
ಯೋಗಮನ್ವಿಚ್ಛ ರಾಮೇಣ ಶಶಾಂಕೇನೇವ ರೋಹಿಣೀ ॥ ೨೬॥

ಕಥಯಂತೀವ ಚಂದ್ರೇಣ ಸಂಗಮಿಷ್ಯಸಿ ರೋಹಿಣೀ।
ಮತ್ಪೃಷ್ಠಮಧಿರೋಹ ತ್ವಂ ತಕಾಕಾಶಮಪಾರ್ಣವಮ್ ॥ ೨೭॥

ನ ಹಿ ಮೇ ಸಂಪ್ರಯಾತಸ್ಯ ತ್ವಾಮಿತೋ ನಯತೋಽಂಗನೇ।
ಆನುಗಂತುಂ ಗತಿಂ ಶಕ್ತಾಃ ಸರ್ವೇ ಲಂಕಾನಿವಾಸಿನಃ ॥ ೨೮॥

ಯಥೈವಾಹಮಿಹ ಪ್ರಾಪ್ತಸ್ತಥೈವಾಹಮಸಂಶಯಮ್ ।
ಯಾಸ್ಯಾಮಿ ಪಶ್ಯ ವೈದೇಹಿ ತ್ವಾಮುದ್ಯನ್ನು ವಿಹಾಯಸಮ್ ॥ ೨೯॥

ಮೈಥಿಲೀ ತು ಹರಿಶ್ರೇಷ್ಠಾಚ್ಛ್ರುತ್ವಾ ವಚನಮದ್ಭುತಮ್ ।
ಹರ್ಷವಿಸ್ಮಿತಸರ್ವಾಂಗೀ ಹನುಮಂತಮಥಾಬ್ರವೀತ್ ॥ ೩೦॥

ಹನುಮನ್ ದೂರಮಧ್ವಾನಂ ಕಥಂ ಮಾ ಪೋಢುಮಿಚ್ಛಸಿ ।
ತದೇವ ಖಲು ತೇ ಮನ್ಯೇ ಕಪಿತ್ವಂ ಹರಿಯೂಥಪ ॥ ೩೧॥

ಕಥಂ ವಾಲ್ಪಶರೀರಸ್ತ್ವಂ ಮಾಮಿತೋ ನೇತುಮಿಚ್ಛಸಿ।
ಸಕಾಶಂ ಮಾನವೇಂದ್ರಸ್ಯ ಭರ್ತುರ್ಮೇ ಪ್ಲವಗರ್ಷಭ ॥ ೩೨॥

ಸೀತಾಯಾ ವಚನಂ ಶ್ರುತ್ವಾ ಹನುಮಾನ್ ಮಾರುತಾತ್ಮಜಃ ।
ಚಿಂತಯಾಮಾಸ ಲಕ್ಷ್ಮೀವಾನ್ನವಂ ಪರಿಭವಂ ಕೃತಮ್ ॥ ೩೩॥

ನ ಮೇ ಜಾನಾತಿ ಸತ್ತ್ವಂ ವಾ ಪ್ರಭಾವಂ ವಾಸಿತೇಕ್ಷಣಾ।
ತಸ್ಮಾತ್ ಪಶ್ಯತು ವೈದೇಹೀ ಯದ್ರೂಪಂ ಮಮ ಕಾಮತಃ ॥ ೩೪॥

ಇತಿ ಸಂಚಿಂತ್ಯ ಹನುಮಾಂಸ್ತದಾ ಪ್ಲವಗಸತ್ತಮಃ।
ದರ್ಶಯಾಮಾಸ ವೈದೇಹ್ಯಾಃ ಸ್ವ ರೂಪಮರಿಮರ್ದನಃ ॥ ೩೫॥

ತನ್ನಲ್ಲಿ ಹೋಮ ಮಾಡಿದ ಹವಿಸ್ಸನ್ನು ಇಂದ್ರನಿಗೆ ಒಪ್ಪಿಸುವಂತೆ, ಪ್ರಸ್ರವಣ ಪರ್ವತದಲ್ಲಿರುವ ರಾಘವನಿಗೆ ನಿನ್ನನ್ನು ಈಗಲೇ ಒಪ್ಪಿಸುತ್ತೇನೆ. ॥೨೩॥

ಎಲೈ ವೈದೇಹೀ! ದೈತ್ಯ ಸಂಹಾರಕ್ಕಾಗಿ ಸನ್ನದ್ಧನಾಗಿರುವ, ವಿಷ್ಣುವಿನಂತೆ, ಲಕ್ಷ್ಮಣನೊಡಗೂಡಿ ಇರುವ ಶ್ರೀರಾಮನು ರಾಕ್ಷಸರನ್ನ ವಧಿಸಲಿಕ್ಕಾಗಿ ಸಿದ್ಧನಾಗಿಯೇ ಇದ್ದಾನೆ. ಮಹಾಬಲಶಾಲಿಯೂ, ಆಶ್ರಮನಿವಾಸಿಯೂ, ನಿನ್ನನ್ನು ನೋಡಲು ಕುತೂಹಲಿಯೂ ಆದ ಶ್ರೀರಾಮನು ಇಂದ್ರನು ಐರಾವತದ ಮೇಲೆ ಕುಳಿತಿರುವಂತೆ, ಪ್ರಸ್ರವಣ ಗಿರಿಯ ಮೇಲೆ ಆಸೀನನಾಗಿದ್ದಾನೆ. ಅಂತಹ ಪ್ರಭುವನ್ನು ನೀನು ಇಂದೇ ಕಾಣಬಹುದು. ॥೨೪-೨೫॥ ಎಲೈ ಮಂಗಳದಾಯಿನೀ! ನನ್ನ ಬೆನ್ನಿನ ಮೇಲೆ ಆಸೀನರಾಗಿರಿ. ನನ್ನ ಮಾತನ್ನು ಉಪೇಕ್ಷಿಸಬೇಡ. ರೋಹಿಣಿಯು ಚಂದ್ರನೊಡನೆ ಸೇರುವಂತೆ, ಶ್ರೀರಾಮನನ್ನು ಸೇರಲು ನಿಶ್ಚಯಿಸು. ॥೨೬॥ ನೀನು ನನ್ನ ಬೆನ್ನ ಮೇಲೆ ಕುಳಿತುಕೊಂಡು ಚಂದ್ರನೊಡನೆ, ಮಹಾತೇಜಃಶಾಲಿಯಾದ ಸೂರ್ಯನೊಡನೆಯೂ ಸಂಭಾಷಿಸುವಂತೆ ಆಕಾಶ ಮಾರ್ಗದಲ್ಲಿ ಪಯಣಿಸುತ್ತಾ ಈ ಮಹಾ ಸಮುದ್ರವನ್ನು ದಾಟಿಬಿಡು. ॥೨೭॥ ದೇವಿಯೇ! ನಾನು ಇಲ್ಲಿಂದ ಆಕಾಶ ಮಾರ್ಗದಿಂದ ನಿನ್ನನ್ನು ಕೊಂಡುಹೋಗುವಾಗ ನನ್ನ ವೇಗವಾದ ಗಮನವನ್ನನುಸರಿಸಿ ಬರಲು ಈ ಲಂಕಾನಿವಾಸಿಗಳಾರಿಗೂ ಶಕ್ಯವಿಲ್ಲ. ॥೨೮॥ ಎಲೈ ವೈದೇಹೀ! ನಾನು ಇಲ್ಲಿಗೆ ಬಂದಂತೆ ನಿಃಸಂದೇಹವಾಗಿ ನಿನ್ನನ್ನು ಎತ್ತಿಕೊಂಡು ಆಕಾಶ ಮಾರ್ಗವಾಗಿ ಕೊಂಡು ಹೋಗುವುದನ್ನು ನೀನೇ ನೋಡು. ॥೨೯॥ ಸೀತಾದೇವಿಯು ಕಪಿವರನ ಪರಮಾದ್ಭುತವಾದ ಮಾತನ್ನು ಕೇಳಿ ಆನಂದಾಶ್ಚರ್ಯಗಳಿಂದ ಪುಳಕಿತಗಾತ್ರಳಾಗಿ, ಹನುಮಂತನ ಬಳಿ ಇಂತೆಂದಳು. ॥೩೦॥

ಹನುಮಂತಾ! ಇಷ್ಟು ದೂರ ನನ್ನನ್ನು ಹೇಗೆ ಹೊತ್ತುಕೊಂಡು ಹೋಗಬಹುದು? ಇದನ್ನು ನೋಡಿದರೆ ಖಂಡಿತವಾಗಿ ನಿನ್ನ ವಾನರ ಲಕ್ಷಣವು ಪ್ರಕಟವಾದಂತಾಗಿದೆ. ॥೩೧॥ ಕಪಿಶ್ರೇಷ್ಠನೇ! ನಿನ್ನ ಶರೀರವಾದರೋ ಚಿಕ್ಕದು. ಮಹಾಪುರುಷನಾದ ನನ್ನ ಸ್ವಾಮಿಯ ಬಳಿಗೆ ನನ್ನನ್ನು ಇಲ್ಲಿಂದ ಹೇಗೆ ಕೊಂಡು ಹೋಗ ಬಲ್ಲೆ? ॥೩೨॥

ಸರ್ವಶಕ್ತ ಸಂಪನ್ನನೂ, ವಾಯುಸುತನೂ ಆದ ಹನುಮಂತನು - ಸೀತಾದೇವಿಯ ಮಾತುಗಳನ್ನು ಕೇಳಿ, ತನಗೆ ಇದೊಂದು ಅಪಮಾನವೆಂದೇ ಭಾವಿಸಿದನು. ॥೩೩॥ ಅಸಿತೇಕ್ಷಣೆಯಾದ ಸೀತೆಯು ನನ್ನ ಇಚ್ಛಾನುಸಾರವಾದ ಪರ್ವತೋಪಮವಾದ ನನ್ನ ರೂಪವನ್ನು ಯಥೇಚ್ಛವಾಗಿ ನೋಡಲೀ. ॥೩೪॥ ವಾನರೋತ್ತಮನೂ, ಶತ್ರು ಸಂಹಾರಕನೂ ಆದ ಹನುಮಂತನು ಹೀಗೆ ಆಲೋಚಿಸಿ, ಸೀತಾದೇವಿಗೆ ತನ್ನ ಬೃಹದ್ರೂಪವನ್ನು ತೋರಿಸಿದನು. ॥೩೫॥ ಬುದ್ಧಿಶಾಲಿಯಾದ ಆ ಕಪಿವರನು ಆ ಮರದಿಂದ ಸ್ವಲ್ಪದೂರ

ಸ ತಸ್ಯಾತ್ ಪಾದಪಾದ್ಭೀಮಾನಾಪ್ತುತ್ಯ ಪ್ಲವಗರ್ಷಭಃ ।
ತತೋ ವರ್ಧಿತುಮಾರೇಭೇ ಸೀತಾಪ್ರತ್ಯಯಕಾರಣಾತ್ ॥ ೩೬॥

ಮೇರುಮಂದರಸಂಕಾಶೋ ಬಭೌ ದೀಪ್ತಾನಲಪ್ರಭಃ ।
ಅಗ್ರತೋ ವ್ಯವತಸ್ಥೇ ಚ ಸೀತಾಯಾ ವಾನರೋತ್ತಮಃ ॥ ೩೭॥

ಹರಿಃ ಪರ್ವತಸಂಕಾಶಸ್ತಾಮ್ರವಕ್ತ್ರೋ ಮಹಾಬಲಃ ।
ವಜ್ರದಂಷ್ಟ್ರನಖೋ ಭೀಮೋ ದೃಢದೇಹೋಮಿದಮಬ್ರವೀತ್ ॥ ೩೮॥

ಸಪರ್ವತವನೋದ್ದೇಶಾಂ ಸಾಟ್ಟಪ್ರಾಕಾರತೋರಣಾಮ್ ।
ಲಂಕಾಮಿಮಾಂ ಸನಾಥಾಂ ವಾ ನಯಿತುಂ ಶಕ್ತರುತ್ತು ಮೇ ॥ ೩೯॥

ತದವಸ್ಥಾಶ್ಚತಾಂ ಬುದ್ಧಿರಲಂ ದೇವಿ ವಿಕಾಂಕ್ಷಿಯಾ ।
ವಿಕೋಕಂ ಕುರು ವೈದೇಹಿ ರಾಘವಂ ಸಹಲಕ್ಷ್ಮಣಮ್ ॥ ೪೦॥

ತಂ ದೃಷ್ಟ್ವಾಚಲಸಂಕಾಶಮುವಾಚ ಜನಕಾತ್ಮಜಾ ।
ಪದ್ಮಪತ್ರವಿಶಾಲಾಕ್ಷೀ ಮಾರುತಸ್ಯೌರಸಂ ಸುತಮ್ ॥ ೪೧॥

ತವ ಸತ್ತ್ವಂ ಬಲಂ ಚೈವ ವಿಜಾನಾಮಿ ಮಹಾಕಪೇ ।
ವಾಯೋರಿವ ಗತಿಂ ಚಾಪಿ ತೇಜಶ್ಚಾಗ್ನೇರಿವಾದ್ಭುತಮ್ ॥ ೪೨॥

ಪ್ಲಾಕೃತೋಽನ್ಯಃ ಕಪಿಃ ಚೇಮಾಂ ಭೂಮಿಮಾಗಂತುಮರ್ಹತಿ ।
ಉದಧೇರಪ್ರಮೇಯಸ್ಯ ಹಾರಂ ವಾನರಪುಂಗವ ॥ ೪೩॥

ಜಾನಾಮಿ ಗಮನೇ ಶಕ್ತಿಂ ನಯನೇ ಚಾಪಿ ತೇ ಪ್ರಭಮ ।
ಅವಶ್ಯಂ ಸಂಪ್ರಧಾರ್ಯಾಶು ಕಾರ್ಯಸಿದ್ಧಿರ್ಮಹಾತ್ಮನಃ ॥ ೪೪॥

ಆಯುಕ್ತಂ ತು ಕಪಿಶ್ರೇಷ್ಠ ಮಮ ಗಂತುಂ ತ್ವಯಾನಘ ।
ವಾಯುವೇಗಸವೇಗಸ್ಯ ವೇಗೋ ಮಾಂ ಮೋಹಯೇತ್ತವ ॥ ೪೫॥

ಒಂದೇ ನೆಗೆತಕ್ಕೆ ಹಾರಿ, ಸೀತಾದೇವಿಗೆ ವಿಶ್ವಾಸವನ್ನು ಹುಟ್ಟಿಸುವ ಸಲುವಾಗಿ ತನ್ನ ಶರೀರವನ್ನು ಬೆಳೆಸತೊಡಗಿದನು* ॥೩೬॥

ಹನುಮಂತನು ಮೇರು, ಮಂದರ ಪರ್ವತದಂತೆ ಬೆಳೆದು, ಪ್ರಜ್ವಲಿಸುತ್ತಿರುವ ಅಗ್ನಿ ಜ್ವಾಲೆಗಳಂತೆ ಬೆಳಗುತ್ತಾ ಸೀತಾದೇವಿಯ ಸಮ್ಮುಖದಲ್ಲಿ ನಿಂತುಕೊಂಡನು. ॥೩೭॥ ಆಗ ಹನುಮಂತನು ಪರ್ವತ ಸದೃಶವಾದ ಶರೀರವುಳ್ಳವನಾಗಿದ್ದನು. ಮುಖವು ಎಣ್ಣೆಗೆಂಪಾಗಿದ್ದಿತು. ಮಹಾಬಲಿಷ್ಠನಾಗಿದ್ದನು. ವಜ್ರಸದೃಶವಾದ ಕೋರೆದಾಡೆಗಳನ್ನೂ, ಉಗುರುಗಳನ್ನೂ ಹೊಂದಿದ್ದನು. ಭಯಂಕರವಾದ ರೂಪವನ್ನು ಧರಿಸಿದ ಹರಿಪುಂಗವನು ಸೀತಾದೇವಿಯ ಬಳಿ ಇಂತೆಂದನು. ॥೩೮॥

''ದೇವೀ! ಪರ್ವತಗಳಿಂದಲೂ, ವನಪ್ರದೇಶಗಳಿಂದಲೂ, ಮಹಾಸೌಧಗಳಿಂದಲೂ, ಕೋಟೆ-ಕೊತ್ತಲಗಳಿಂದಲೂ, ಬಹಿರ್ದ್ವಾರಗಳಿಂದಲೂ ಕೂಡಿರುವ ಈ ಲಂಕೆಯನ್ನು ರಾವಣನ ಸಮೇತವಾಗಿ ಎತ್ತಿಕೊಂಡು ಹೋಗುವಷ್ಟು ಶಕ್ತಿಯು ನನಗಿದೆ. ॥೩೯॥ ದೇವೀ! ಅದುದರಿಂದ ನಾನು ನಿನ್ನನ್ನು ಒಯ್ಯಲು ಸಮರ್ಥನಾಗಿದ್ದೇನೆ ಎಂಬುದನ್ನು ನಿಶ್ಚಯಿಸಿಕೊ. ಇನ್ನಾದರೂ ನಿನ್ನಲ್ಲಿರುವ ಸಂದೇಹವನ್ನು ದೂರಮಾಡು. ನನ್ನ ಬೆನ್ನನ್ನು ಹತ್ತಿ ಕುಳಿತು, ರಾಮ-ಲಕ್ಷ್ಮಣರು ಇರುವಲ್ಲಿಗೆ ಹೋಗಿ ಅವರ ಶೋಕವನ್ನು ದೂರಮಾಡು. ॥೪೦॥

ಪದ್ಮಪದ್ಮದಂತೆ ವಿಶಾಲವಾದ ನೇತ್ರಗಳುಳ್ಳ ಆ ಜಾನಕಿಯು ಪರ್ವತೋಪಮನಾಗಿದ್ದ ಆ ವಾಯುಸುತನಾದ ಮಾರುತಿಯನ್ನು ನೋಡಿ ಆಶ್ಚರ್ಯಗೊಂಡು ಇಂತೆಂದಳು. ॥೪೧॥

ಎಲೈ ವಾನರ ಪುಂಗವ! ನಿನ್ನ ಬಲ-ಪರಾಕ್ರಮಗಳನ್ನೂ, ವಾಯುವೇಗವನ್ನೂ, ಅಗ್ನಿಜ್ವಾಲೆಗಳಂತೆ ನಿನ್ನ ಅದ್ಭುತ ತೇಜಸ್ಸನ್ನೂ ನಾನು ಅರಿತುಕೊಂಡೆನು. ॥೪೨॥ ವಾನರೋತ್ತಮನೇ! ಅಪಾರವಾದ ಸಮುದ್ರದ ಈಚಿನ ದಡದಲ್ಲಿರುವ ರಾಕ್ಷಸರ ಭೂಮಿಗೆ ನೀನಲ್ಲದೇ ಸಾಮಾನ್ಯವಾದ ಬೇರೆ ಯಾವನು ಬರಲು ಸಮರ್ಥನು? ॥೪೩॥ ನಿನ್ನ ವೇಗವನ್ನು, ನನ್ನನ್ನು ಎತ್ತಿಕೊಂಡು ಹೋಗುವ ಪರಮಾದ್ಭುತವಾದ ನಿನ್ನ ಶಕ್ತಿಯನ್ನು ನಾನು ತಿಳಿದಿರುವೆನು. ಮಹಾತ್ಮರೂ, ಬುದ್ಧಿವಂತರೂ ತಮ್ಮ ಕಾರ್ಯಸಿದ್ಧಿಗಾಗಿ ಮುಂದಾಗಿ ಚೆನ್ನಾಗಿ ಆಲೋಚಿಸುವರು. ನಾನೂ ಕೂಡ ಮೊದಲೇ ಆಗು-ಹೋಗುಗಳ ಬಗ್ಗೆ ಆಲೋಚಿಸಿ ಒಂದು ನಿರ್ಣಯಕ್ಕೆ ಬರಬೇಕಾಗಿದೆ. ॥೪೪॥

ಎಲೈ ಪುಣ್ಯಪುರುಷಾ! ಕಪಿಶ್ರೇಷ್ಠನೇ! ನಾನು ನಿನ್ನೊಡನೆ ಪಯಣಿಸುವುದು ಯುಕ್ತವಲ್ಲವೆಂದೇ ಭಾವಿಸುತ್ತೇನೆ. ವಾಯುವೇಗಕ್ಕೆ ಸಮಾನವಾದ ನಿನ್ನ ಗಮನವು ನನ್ನನ್ನು ಎಚ್ಚರದಪ್ಪಿಸಬಹುದು. ॥೪೫॥ ಸಮುದ್ರದ ಮೇಲೆ ಎಷ್ಟೋ

---

* ೩೨ನೇ ಸರ್ಗದ ಮೊದಲ ಶ್ಲೋಕದಲ್ಲಿ ಆಂಜನೇಯನು ಮರದಿಂದ ಕೆಳಗಿಳಿದು ಸೀತೆಯನ್ನು ಸಮೀಪಿಸಿದ ವಿಷಯ ಹೇಳಲಾಗಿತ್ತು. ಇಷ್ಟರವರೆಗೆ ವೃಕ್ಷದ ಬುಡದಲ್ಲಿ ನಿಂತೇ ಮಾತಾಡುತ್ತಿದ್ದನು. ಈಗ ಸೀತಾದೇವಿಗೆ ಬೃಹದಾಕಾರದ ರೂಪವನ್ನು ತೋರಲೂ ಸ್ವಲ್ಪ ದೂರಸರಿದು ನಿಂತನು ಎಂದು ಭಾವಿಸಬೇಕು.

ಅಹಮಾಕಾಶಮಾಪನ್ನಾ ಹ್ಯುಪರ್ಯುಪರಿ ಸಾಗರಮ್ ।
ಪ್ರಪತೇಯಂ ಹಿ ತೇ ಪೃಷ್ಠಾದ್ಭಯಾದ್ವೇಗೇನ ಗಚ್ಛತಃ ॥ ೪೬॥

ಪತಿತಾ ಸಾಗರೇ ಚಾಹಂ ತಿಮಿನಕ್ರಝಷಾಕುಲೇ ।
ಭವೇಯಮಾಶು ವಿವಶಾ ಯಾದಸಾಮನ್ನಮುತ್ತಮಮ್ ॥ ೪೭॥

ನ ಚ ಶಕ್ಷ್ಯೇ ತ್ವಯಾ ಸಾರ್ಧಂ ಗಂತುಂ ಶತ್ರುವಿನಾಶನ ।
ಕಲತ್ರವತಿ ಸಂದೇಹಸ್ತ್ವಯ್ಯಪಿ ಸ್ಯಾದಸಂಶಯಃ ॥ ೪೮॥

ಹ್ರಿಯಮಾಣಾಂತು ಮಾಂ ದೃಷ್ಟ್ವಾ ರಾಕ್ಷಸಾ ಭೀಮವಿಕ್ರಮಾಃ ।
ಅನುಗಚ್ಛೇಯುರಾದಿಷ್ಟಾ ರಾವಣೇನ ದುರಾತ್ಮನಾ ॥ ೪೯॥

ತೈಸ್ತ್ವಂ ಪರಿವೃತಃ ಶೂರೈಃ ಶೂಲಮುದ್ಗರಪಾಣಿಭಿಃ ।
ಭವೇಸ್ತ್ವಂ ಸಂಯುಗ ಪ್ರಾಪ್ತೋ ಮಯಾ ವೀರ ಕುತ್ರಾಸ್ ॥ ೫೦॥

ಸಾಯುಧಾ ಬಹವೋ ಘೋಮ್ಲಿ ರಾಕ್ಷಸಾಸ್ತ್ವಂ ನಿರಾಯುಧಃ ।
ಕಥಂ ಶಕ್ಷ್ಯಸಿ ಸಂಯಾತುಂ ಮಾಂ ಚೈವ ಪರಿರಕ್ಷಿತುಮ್ ॥ ೫೧॥

ಯುಧ್ಯಮಾನಸ್ಯ ರಕ್ಷೋಭಿಸ್ತವ ತೈಃ ಕ್ರೂರಕರ್ಮಭಿಃ ।
ಪ್ರಪತೇಯಂ ಹಿ ತೇ ಪೃಷ್ಠಾದ್ಭಯಾರ್ತಾ ಕಪಿಸತ್ತಮ ॥ ೫೨॥

ಅಥ ರಕ್ಷಾಂಸಿ ಭೀಮಾನಿ ಮಹಾಂತಿ ಬಲವಂತಿ ಚ ।
ಕಥಂಚಿತ್ ಸಾಂಪರಾಯೇ ತ್ವಾ ಜಯೇಯುಃ ಕಪಿಸತ್ತಮ ॥ ೫೩॥

ಅಥವಾ ಯುಧ್ಯಮಾನಸ್ಯ ಪತೇಯಂ ವಿಮುಖಸ್ಯ ತೇ ।
ಸುಖಾಂ ಚ ಗೃಹ್ಯ ಮಾಂ ನಯೇಯುಃ ಪಾಪರಾಕ್ಷಸಾಃ ॥ ೫೪॥

ಮಾಂ ವಾ ಹರೇಯುಸ್ತದ್ಗ್ರಸ್ತಾಸ್ತಿಷ್ಠೇಯುರಥಾಪಿ ವಾ ।
ಅವ್ಯವಸ್ಥೌ ಹಿ ದೃಶ್ಯೇತೇ ಯುದ್ಧೇ ಜಯಪರಾಜಯೌ ॥ ೫೫॥

ಅಹಂ ವಾಪಿ ವಿಪದ್ಯೇಯಂ ರಕ್ಷೋಭಿರಭಿತರ್ಜಿತಾ ।
ತ್ವತ್ಪ್ರಯತ್ನೋ ಹರಿಶ್ರೇಷ್ಠ ಭವೇನ್ನಿಷ್ಫಲ ಏವ ತು ॥ ೫೬॥

ಕಾಮಂ ತ್ವಮಸಿ ಪರ್ಯಾಪ್ತೋ ನಿಹಂತುಂ ಸರ್ವರಾಕ್ಷಸಾನ್ ।
ರಾಘವಸ್ಯ ಯಶೋ ಹೀಯೇತ್ತ್ವಯಾ ಶಸ್ತೈಸ್ತು ರಾಕ್ಷಸೈಃ ॥ ೫೭॥

ಎತ್ತರದಲ್ಲಿ ವಾಯುವೇಗದಿಂದ ಆಕಾಶಮಾರ್ಗದಲ್ಲಿ ಹೋಗುತ್ತಿರುವಾಗ ಭಯದಿಂದ ನಾನು ನಿನ್ನ ಬೆನ್ನ ಮೇಲಿಂದ ಕೆಳಗೆ ಬಿದ್ದುಬಿಡಬಹುದು. ॥೪೬॥ ತಿಮಿಂಗಿಲಗಳಿಂದ, ಮೊಸಳೆಗಳಿಂದ, ದೊಡ್ಡ-ದೊಡ್ಡ ಮೀನುಗಳಿಂದ ತುಂಬಿರುವ ಸಮುದ್ರದಲ್ಲಿ ನಾನು ಎಚ್ಚರದಪ್ಪಿ ಬಿದ್ದು ಬಿಟ್ಟಾಗ ಕೂಡಲೇ ಜಲಜಂತುಗಳು ನನ್ನನ್ನು ತಿಂದುಬಿಟ್ಟಾರು. ॥೪೭॥ ಶತ್ರುಸೂದನಾ! ನಿನ್ನೊಡನೆ ಪ್ರಯಾಣ ಮಾಡಲು ನನಗೆ ಧೈರ್ಯಸಾಲದು. ಏಕೆಂದರೆ, ನನ್ನನ್ನು ರಕ್ಷಿಸುವ ಪ್ರಯತ್ನದಲ್ಲಿ ನಿನ್ನ ಭದ್ರತೆಗೂ ಅಪತ್ತು ಬರಬಹುದು. ॥೪೮॥ ನೀನು ನನ್ನನ್ನು ಎತ್ತಿಕೊಂಡು ಹೋಗುತ್ತಿರುವುದನ್ನು ನೋಡಿ, ರಾವಣನಿಂದ ಆಜ್ಞಪ್ತರಾದ, ದುರಾತ್ಮರಾದ, ಭಯಂಕರ ಪರಾಕ್ರಮಿಗಳಾದ ರಾಕ್ಷಸರು ನಿನ್ನನ್ನು ಬೆನ್ನಟ್ಟಬಹುದು. ॥೪೯॥ ವೀರನೇ! ಶೂಲ-ಮುದ್ಗರಗಳೇ ಮುಂತಾದ ಆಯುಧಗಳನ್ನು ಹಿಡಿದ ಶೂರರಾದ ಆ ರಾಕ್ಷಸರು ನಿನ್ನನ್ನು ಸುತ್ತುವರಿಯಬಹುದು. ಆಗ ನನ್ನನ್ನು ರಕ್ಷಿಸುತ್ತಿರುವ ನೀನು ಸಂಕಟಕ್ಕೊಳಗಾಗ ಬಹುದು. ॥೫೦॥ ನೀನಾದರೋ ಒಬ್ಬಂಟಿಗನೂ, ನಿರಾಯುಧನೂ ಆಗಿರುವೆ. ರಾಕ್ಷಸರು ಅನೇಕರಿದ್ದು, ಆಯುಧಗಳನ್ನು ಧರಿಸಿರುವರು. ಆತಹ ಸ್ಥಿತಿಯಲ್ಲಿ, ನನ್ನನ್ನು ರಕ್ಷಿಸಿಕೊಂಡು ಮುಂದೆ ಸಾಗುವುದು ನಿನಗೆ ಹೇಗೆ ಸಾಧ್ಯವಾಗಬಹುದು? ॥೫೧॥ ಎಲೈ ಕಪಿವರಾ! ಕ್ರೂರ ಕರ್ಮಿಗಳಾದ ರಾಕ್ಷಸರಿಗೂ ನಿನಗೂ ಘೋರವಾದ ಯುದ್ಧವು ನಡೆಯುತ್ತಿರುವಾಗ, ನಾನು ಭಯಗೊಂಡು ನಿನ್ನ ಬೆನ್ನಿನಿಂದ ಕೆಳಕ್ಕೆ ಬಿದ್ದುಬಿಡಬಹುದು. ॥೫೨॥ ಪಾನರೋತ್ತಮನೇ! ಭಯಂಕರರಾದ, ಮಹಾಕಾಯರಾದ, ಮಹಾಬಲಿಷ್ಠರಾದ ರಾಕ್ಷಸರು ಹೇಗಾದರೂ ಮಾಡಿ ನಿನ್ನನ್ನು ಯುದ್ಧದಲ್ಲಿ ಜಯಿಸಬಹುದು. ॥೫೩॥ ಹಾಗಲ್ಲದೇ ರಾಕ್ಷಸರೊಡನೆ ಯುದ್ಧಮಾಡುತ್ತಾ ನನ್ನ ರಕ್ಷಣೆಯಿಂದ ವಿಮುಖನಾಗುವ ನಿನ್ನ ಬೆನ್ನಿನಿಂದ ನಾನು ಕೆಳಕ್ಕೆ ಬೀಳಬಹುದು. ಹಾಗೇ ಬೇಳುತ್ತಿರುವ ನನ್ನನ್ನು ಪಾಪಿಷ್ಠರಾದ ರಾಕ್ಷಸರು ಹಿಡಿದು ಪುನಃ ರಾವಣನಲ್ಲಿಗೆ ಒಯ್ಯಲೂ ಬಹುದು. ॥೫೪॥ ಇಲ್ಲವೇ ನಿನ್ನ ಕೈಯಿಂದ ನನ್ನನ್ನು ಅವರು ಕಸಿದುಕೊಂಡು ಹೋಗಬಹುದು. ಅಥವಾ ನನ್ನನ್ನು ತುಂಡು-ತುಂಡಾಗಿ ಕತ್ತರಿಸಲೂಬಹುದು. ಯುದ್ಧದಲ್ಲಿ ಜಯಾಪಜಯಗಳು ಅಸ್ಥಿರವೆಂದು ಎಲ್ಲರೂ ತಿಳಿದಿರುವರಲ್ಲ! ॥೫೫॥ ರಾಕ್ಷಸರಿಂದ ಭಯಗೊಳಿಸಲ್ಪಟ್ಟ ನಾನು ಪ್ರಾಣಗಳನ್ನು ತೊರೆಯಬಹುದು. ಹಾಗೇನಾದರೂ ಆದರೆ ನಿನ್ನ ಎಲ್ಲ ಪ್ರಯತ್ನಗಳೂ ಪೂರ್ಣವಾಗಿ ನಿಷ್ಫಲವಾಗಿ ಬಿಡುತ್ತವೆ. ॥೫೬॥

ಕಪೀಶ್ವರನೇ! ಎಲ್ಲ ರಾಕ್ಷಸರನ್ನು ಸಂಹರಿಸಲು ನೀನು ಸಮರ್ಥನೇ ಆಗಿರುವೆ. ರಾಕ್ಷಸ ಯೋಧರೆಲ್ಲರನ್ನು ಕೊಂದು ನನ್ನನ್ನು ಕೊಂಡು ಹೋದರೆ ರಾಘವನ ಕೀರ್ತಿಗೆ ಕಳಂಕ ಬರುವುದಲ್ಲ! ॥೫೭॥ ಅಥವಾ ರಾಕ್ಷಸರು ನಿನ್ನನ್ನು ಪರಾಜಯಗೊಳಿಸಿ ನನ್ನನ್ನು ಕೊಂಡುಹೋಗಿ,

ಅಥವಾದಾಯ ರಕ್ಷಾಂಸಿ ನ್ಯಸೇಯುಃ ಸಂಭ್ರಮೇ ಹಿ ಮಾಮ್ ।
ಯತ್ರ ತೇ ನಾಭಿಜಾನೀಯುರ್ದಶರಥೋ ನಾಪಿ ರಾಘವೌ ॥ ೫೮॥

ಆರಂಭಸ್ತು ಮದರ್ಥೋಽಯಂ ತತಸ್ತವ ನಿರರ್ಥಕಃ ।
ತ್ವಯಾ ಹಿ ಸಹ ರಾಮಸ್ಯ ಮಹಾನಾಗಮನೇ ಗುಣಃ ॥ ೫೯॥

ಮಯಿ ಜೀವಿತಮಾಯತ್ತಂ ರಾಘವಸ್ಯ ಮಹಾತ್ಮನಃ ।
ಭ್ರಾತೄಣಾಂ ಚ ಮಹಾ ಬಾಹೋ ತವ ರಾಜಕುಲಸ್ಯ ಚ ॥ ೬೦॥

ತೌ ನಿರಾಶೌ ಮದರ್ಥಂ ತು ಶೋಕಸಂತಾಪಕರ್ಶಿತೌ ।
ಸಹ ಸರ್ವರ್ಕ್ಷಹರಿಭಿಸ್ಯಕ್ತಃ ಪ್ರಾಣಸಂಗ್ರಹಮ್ ॥ ೬೧॥

ಭರ್ತುರ್ಭಕ್ತಿಂ ಪುರಸ್ಕೃತ್ಯ ರಾಮಾದನ್ಯಸ್ಯ ವಾನರ ।
ನಾಹಂ ಸ್ಪಷ್ಟುಂ ಸ್ವತೋ ಗಾತ್ರಂ ಇಚ್ಛೇಯಂ ವಾನರೋತ್ತಮ ॥

ಯದಹಂ ಗಾತ್ರ ಸಂಸ್ಪರ್ಶಂ ರಾವಣಸ್ಯ ಬಲಾದ್ಗತಾ ।
ಅನೀಶಾ ಕಿಂ ಕರಿಷ್ಯಾಮಿ ವಿನಾಥಾ ವಿದಶಾ ಸತೀ ॥ ೬೩॥

ಯದಿ ರಾಮೋ ದಶಗ್ರೀವಮಿಹ ಹತ್ವಾ ಸಬಾಂಧವಮ್ ।
ಮಾಮಿತೋ ಗೃಹ್ಯ ಗಚ್ಛೇತ ತತ್ತಸ್ಯ ಸದೃಶಂ ಭವೇತ್ ॥ ೬೪॥

ಶ್ರುತಾ ಹಿ ದೃಷ್ಟಾಶ್ಚ ಮಯಾ ಪರಾಕ್ರಮಾ
ಮಹಾತ್ಮನಸ್ತಸ್ಯ ರಣಾವಮರ್ದಿನಃ ।
ನ ದೇವಗಂಧರ್ವ ಭುಜಂಗರಾಕ್ಷಸಾ
ಭವಂತಿ ರಾಮೇಣ ಸಮಾ ಹಿ ಸಂಯುಗೇ ॥ ೬೫॥

ಸಮೀಕ್ಷ್ಯ ತಂ ಸಂಯತಿ ಚಿತ್ರಕಾರ್ಮುಕಂ
ಮಹಾಬಲಂ ವಾಸವತುಲ್ಯವಿಕ್ರಮಮ್ ।
ಸಲಕ್ಷ್ಮಣಂ ಕೋ ವಿಷಹೇತ ರಾಘವಂ
ಹುತಾಶನಂ ದೀಪ್ತಮಿವಾನಿಲೇರಿತಮ್ ॥ ೬೬॥

ಸಲಕ್ಷ್ಮಣಂ ರಾಘವಮಾಜಿಮರ್ದನಂ
ದಿಶಾಗಜಂ ಮತ್ತಮಿವ ವ್ಯವಸ್ಥಿತಮ್ ।
ಸಹೇತ ಕೋ ವಾನರಮುಖ್ಯ ಸಂಯುಗೇ
ಯುಗಾಂತಸೂರ್ಯಪ್ರತಿಮಂ ಶರಾರ್ಚಿಷಮ್ ॥ ೬೭॥

ವಾನರರಿಗಾಗಲೀ, ರಾಮ-ಲಕ್ಷ್ಮಣರಿಗಾಗಲೀ ತಿಳಿಯದಂತಹ ರಹಸ್ಯ ಪ್ರದೇಶದಲ್ಲಿ ಇರಿಸಬಹುದು. ॥೫೮॥ ಅದರಿಂದಾಗಿ ನನ್ನ ಬಿಡುಗಡೆಗಾಗಿ ನೀವು ಮಾಡುವ ಪ್ರಯತ್ನಗಳೆಲ್ಲವೂ ವ್ಯರ್ಥವಾಗುತ್ತವೆ. ಆದುದರಿಂದ ನಿನ್ನೊಡನೆ ಶ್ರೀರಾಮನು ಇಲ್ಲಿಗೆ ಬರುವುದೇ ಹೆಚ್ಚು ಸಮಂಜಸವಾಗಿದೆ. ॥೫೯॥ ಮಹಾಬಾಹುವೇ! ಮಹಾತೇಜಸ್ವಿಯಾದ ರಾಘವನ, ಅವನ ತಮ್ಮಂದಿರಾದ ಲಕ್ಷ್ಮಣ-ಭರತ-ಶತ್ರುಘ್ನರ, ನಿನ್ನ ರಾಜನಾದ ಸುಗ್ರೀವನ, ಅವನ ಪರಿವಾರವೆಲ್ಲರ ಜೀವಿತವು ನನ್ನನ್ನೇ ಆಶ್ರಯಿಸಿ ನಿಂತಿದೆಯಲ್ಲ! ॥೬೦॥ ಶೋಕ ಸಂತಾಪಗಳಿಂದ ಸಂಕಟಪಡುತ್ತಿರುವ ರಾಮ-ಲಕ್ಷ್ಮಣರೀರ್ವರೂ ನನ್ನ ವಿಷಯದಲ್ಲಿ ನಿರಾಶರಾಗಿ, ಎಲ್ಲ ಕಪಿ-ಕರಡಿಗಳ ನಾಯಕರೊಡನೆ ಪ್ರಾಣತ್ಯಾಗ ಮಾಡುವರು. ॥೬೧॥

ವಾನರ ಶ್ರೇಷ್ಠನೇ! ನಿನ್ನೊಡನೆ ಬರದಿರಲು ಮುಖ್ಯವಾದ ಮತ್ತೊಂದು ಕಾರಣವೂ ಇದೆ. ಪತಿಭಕ್ತಿಯನ್ನೇ ಶ್ರೇಷ್ಠವೆಂದು ಭಾವಿಸಿರುವ ನಾನು ಶ್ರೀರಾಮನ ಹೊರತಾಗಿ ಬೇರೆ ಯಾರೇ ಪುರುಷನ ಶರೀರವನ್ನು ನಾನಾಗಿಯೇ ಪ್ರಾಣವಿರುವ ತನಕ ಮುಟ್ಟುವುದಿಲ್ಲ. ॥೬೨॥ ರಾವಣನು ಬಲವಂತವಾಗಿ ನನ್ನನ್ನು ಅಪಹರಿಸಿಕೊಂಡು ಹೋಗುವಾಗ ಅವನ ಶರೀರ ಸ್ಪರ್ಶವೇನೋ ನನಗುಂಟಾಯಿತು. ಆಗ ಪ್ರಾಣೇಶನಿಂದ ರಹಿತಳೂ, ರಕ್ಷಕರಿಲ್ಲದವಳೂ, ಅಸ್ವತಂತ್ರಳೂ ಆಗಿದ್ದ ನಾನು ಏನು ತಾನೇ ಮಾಡಲು ಸಾಧ್ಯವಿದ್ದಿತು? ॥೬೩॥ ಆದುದರಿಂದ ಶ್ರೀರಾಮನೇ ಇಲ್ಲಿಗೆ ಬಂದು ರಾಕ್ಷಸರ ಸಹಿತ ರಾವಣನನ್ನು ಸಂಹರಿಸಿ ನನ್ನನ್ನು ಕರಕೊಂಡು ಹೋದರೆ, ಅದು ಅವನ ಶೌರ್ಯ-ಪರಾಕ್ರಮಗಳಿಗೆ ತಕ್ಕುದಾದ ಕಾರ್ಯವಾಗುತ್ತದೆ. ॥೬೪॥

ರಣರಂಗದಲ್ಲಿ ಶತ್ರುಗಳನ್ನು ಮರ್ದಿಸುವ ಮಹಾತ್ಮನಾದ ಶ್ರೀರಾಮನ ಪರಾಕ್ರಮಗಳನ್ನು ನಾನು ಬಹಳವಾಗಿ ಕೇಳಿದ್ದೇನೆ ಹಾಗೂ ಪ್ರತ್ಯಕ್ಷವಾಗಿ ನೋಡಿದ್ದೇನೆ. ಯುದ್ಧದಲ್ಲಿ ದೇವತೆಗಳಾಗಲೀ, ಗಂಧರ್ವರಾಗಲೀ, ಭುಜಂಗ-ರಾಕ್ಷಸರಾಗಲೀ ಯಾರೂ ಅವನಿಗೆ ಸಾಟಿಯಾಗಲಾರರು ॥೬೫॥ ಶ್ರೀರಾಮನು ಆದ್ಭುತವಾದ ಧನುಸ್ಸುಳ್ಳವನು. ಮಹಾಬಲಶಾಲಿಯು, ಪರಾಕ್ರಮದಲ್ಲಿ ದೇವೇಂದ್ರನಿಗಿಂತಲೂ ಮಿಗಿಲಾದವನು. ವಾಯುವಿನಿಂದಾಗಿ ದೇದಿಪ್ಯಮಾನವಾಗಿ ಪ್ರಜ್ವಲಿಸುವ ಅಗ್ನಿಯಂತೆ ಇರುವ, ಲಕ್ಷ್ಮಣ ಸಹಿತನಾದ ಆ ವೀರನನ್ನು ನೋಡಿ ಯಾರು ತಾನೇ ಸಂಗ್ರಾಮದಲ್ಲಿ ಅವನಿಗೆ ಇದಿರಾಗಿ ನಿಲ್ಲಬಲ್ಲರು? ॥೬೬॥

ವಾನರೋತ್ತಮನೇ! ಲಕ್ಷ್ಮಣನಿಂದ ಒಡಗೂಡಿರುವ, ಕದನರಂಗದಲ್ಲಿ ಶತ್ರುಗಳನ್ನು ಮರ್ದಿಸುವ, ಮದಿಸಿದ ದಿಗ್ಗಜದಂತೆ ನಿಂತಿರುವ, ಯುಗಾಂತದ ಸೂರ್ಯಕಿರಣ ಜ್ವಾಲೆಗಳಂತೆ ಬಾಣಗಳನ್ನು ಹೊಂದಿರುವ ಶ್ರೀರಾಮನ ಶರಪ್ರಹಾರವನ್ನು ಯುದ್ಧದಲ್ಲಿ ಯಾವನೂ ಸಹಿಸಲಾರನು. ॥೬೭॥

ಸ ಮೇ ಹರಿಶ್ರೇಷ್ಠ ಸಲಕ್ಷ್ಮಣಂ ಪತಿಂ
ಸಯೂಥಪಂ ಕ್ಷಿಪ್ರಮಿಹೋಪಹಾದಯ।
ಚಿರಾಯ ರಾಮಂ ಪ್ರತಿ ಶೋಕಕರ್ಶಿತಾಂ
ಕುರುಷ್ವಮಾಂ ವಾನರಮುಖ್ಯ ಹರ್ಷಿತಾಮ್ ॥ ೬೮॥

ಕಪಿಶ್ರೇಷ್ಠನೇ! ಲಕ್ಷ್ಮಣನಿಂದಲೂ, ವಾನರ ಸಮೂಹದಿಂದಲೂ ಒಡಗೂಡಿರುವ ನನ್ನ ಸ್ವಾಮಿಯನ್ನು ಬೇಗನೇ ಇಲ್ಲಿಗೆ ಕರಕೊಂಡು ಬಾ. ಬಹಳ ಕಾಲದಿಂದಲೂ ರಾಮವಿರಹ ಶೋಕದಿಂದ ಕೃಶರಾಗಿರುವೆ. ಶ್ರೀರಾಮನನ್ನು ಕರಕೊಂಡು ಬಂದು ನನಗೆ ಸಂತೋಷವನ್ನುಂಟು ಮಾಡು. ॥೬೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಸಪ್ತತ್ರಿಂಶಃ ಸರ್ಗಃ ॥ ೩೭ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೇಳನೆಯ ಸರ್ಗವು ಮುಗಿಯಿತು.

* * *

ಮೂವತ್ತೆಂಟನೆಯ ಸರ್ಗ

ಸೀತಾದೇವಿಯು ಹನುಮಂತನಿಗೆ ಗುರುತಿಗಾಗಿ ಕಾಕಾಸುರನ ವೃತ್ತಾಂತವನ್ನು ಹೇಳಿ ಚೂಡಾಮಣಿಯನ್ನು ಕೊಟ್ಟದ್ದು –

ತತಃ ಸ ಕಪಿಶಾರ್ದೂಲಸ್ತೇನ ವಾಕ್ಯೇನ ಹರ್ಷಿತಃ।
ಸೀತಾಮುವಾಚ ತಚ್ಚುತ್ವಾ ವಾಕ್ಯಂ ವಾಕ್ಯವಿಶಾರದಃ॥ ೧॥

ಯುಕ್ತರೂಪಂ ತ್ವಯಾ ದೇವಿ ಭಾಷಿತಂ ಶುಭದರ್ಶನೇ।
ಸದೃಶಂ ಸ್ತ್ರೀಸ್ವಭಾವಸ್ಯ ಸಾಧ್ವೀನಾಂ ವಿನಯಸ್ಯ ಚ ॥ ೨॥

ಸ್ತ್ರೀತ್ವಂ ನ ತು ಸಮರ್ಥಂ ಹಿ ಸಾಗರಂ ವ್ಯತಿವರ್ತಿತುಮ್।
ಮಾಮುಧಿಷ್ಯಾಯ ವಿಸ್ತೀರ್ಣಂ ಶಕಯೋಜನಮಾಯತಮ್ ॥ ೩॥

ದ್ವಿತೀಯಂ ಕಾರಣಂ ಯಚ್ಚ ಬ್ರವೀಷಿ ವಿನಯಾನ್ವಿತೇ।
ರಾಮಾದನ್ಯಸ್ಯ ನಾಹಾರ್ಮಿ ಸಂಸ್ಪರ್ಶಮಿತಿ ಜಾನಕಿ॥ ೪॥

ಏತತ್ತೇ ದೇವಿ ಸದೃಶಂ ಪತ್ನ್ಯಾಸ್ತಸ್ಯ ಮಹಾತ್ಮನಃ।
ನ ಕೃನ್ಯಾ ತ್ವಾಮೃತೇ ದೇವಿ ಬ್ರೂಯಾದ್ಯಮೀದೃಶಮ್ ॥ ೫॥

ಶ್ರೋಷ್ಯತೇ ಚೈವ ಕಾಕುತ್ಸ್ಥಃ ಸರ್ವಂ ನಿರವಶೇಷತಃ।
ಚೇಷ್ಟಿತಂ ಯತ್ತ್ವಯಾ ದೇವಿ ಭಾಷಿತಂ ಚ ಮಮಾಗ್ರತಃ॥ ೬॥

ಕಾರಣೈರ್ಬಹುಭಿರ್ದೇವಿ ರಾಮಪ್ರಿಯಚಿಕೀರ್ಷಯಾ।
ಸ್ನೇಹಪ್ರಸ್ಕನ್ನಮನಸಾ ಮಯೈತತ್ ಸಮುದೀರಿತಮ್ ॥ ೭॥

ಬಳಿಕ ಕಪಿಶ್ರೇಷ್ಠನಾದ, ವಾಕ್ಯವಿಶಾರದನಾದ ಹನುಮಂತನು ಸೀತೆಯು ಹೇಳಿದ ಯುಕ್ತಿಯುಕ್ತವಾದ ಮಾತುಗಳಿಂದ ಬಹಳವಾಗಿ ಸಂತಸಗೊಂಡು ಆಕೆಯ ಬಳಿ ಇಂತೆಂದನು. ॥೧॥ ಮಂಗಳ ಸ್ವರೂಪಳಾದ ದೇವಿಯೇ! ನೀನಾಡಿದ ಮಾತು ಹೆಚ್ಚು ಸಮೀಚೀನವಾಗಿದೆ, ಯುಕ್ತವೂ ಆಗಿದೆ. ಅವು ಸ್ತ್ರೀಯರ ಸ್ವಭಾವಕ್ಕನುಸಾರವೂ, ಪಾತಿವ್ರತ್ಯ ವ್ರತಕ್ಕೂ ತಕ್ಕುದಾಗಿವೆ. ॥೨॥ ನನ್ನ ಬೆನ್ನಿನ ಮೇಲೆ ಕುಳಿತು ನೂರು ಯೋಜನೆಗಳುಳ್ಳ ಮಹಾಸಾಗರವನ್ನು ದಾಟುವುದು ಸ್ತ್ರೀಸಹಜವಾದ ಭಯ ಸ್ವಭಾವದಿಂದಾಗಿ ಶಕ್ಯವಾಗಲಾರದು. ॥೩॥

ವಿನಯ ಸಂಪನ್ನಳಾದ ತಾಯೇ! ''ರಾಮನ ಶರೀರವನ್ನು ಬಿಟ್ಟು ಬೇರೆಯವರ ಶರೀರವನ್ನು ನಾನಾಗಿ ಮುಟ್ಟಲು ನಾನು ಇಚ್ಛಿಪಡುವುದಿಲ್ಲ'' ಎಂದು ಎರಡನೆಯ ಕಾರಣವನ್ನು ಕೊಟ್ಟಿರುವುದು ಮಹಾತ್ಮನಾದ ಶ್ರೀರಾಮನ ಪತ್ನಿಯಾದ ನಿನಗೆ ಸಮುಚಿತವಾದ ಮಾತೇ ಆಗಿದೆ. ನಿನ್ನ ಹೊರತಾಗಿ ಯಾವಳು ತಾನೇ ಇಂತಹ ಮಾತನ್ನು ಆಡಬಲ್ಲಳು? ॥೪-೫॥ ದೇವಿಯೇ! ಇಲ್ಲಿಯ ನಿನ್ನ ಚರ್ಯೆಗಳನ್ನು, ನೀನು ನುಡಿದ ಪ್ರತಿಯೊಂದು ಮಾತನ್ನೂ* ಶ್ರೀರಾಮನಿಗೆ ವಿಶ್ವಾಸ ಹುಟ್ಟುವಂತೆ ನಾನು ಪೂರ್ಣವಾಗಿ ವಿವರಿಸುತ್ತೇನೆ. ॥೬॥

ಅಮ್ಮಾ! ನಿನಗೂ ಶ್ರೀರಾಮನಿಗೂ ಪ್ರಿಯವನ್ನುಂಟುಮಾಡಬೇಕೆಂಬ ಇಚ್ಛೆಯಿಂದಲೂ, ಸ್ನೇಹದಿಂದ ಕರಗಿದ ಮನಸ್ಸಿನಿಂದಲೂ, ನನ್ನ ಬೆನ್ನಮೇಲೆ ಕುಳಿತು ಶ್ರೀರಾಮನ ಸಮೀಪಕ್ಕೆ ಬರುವಂತೆ ನಿನಗೆ ಹೇಳಿದನು. ॥೭॥ ಲಂಕೆಯನ್ನು

* ರಾವಣನು ನಿನ್ನನ್ನು ಭಯಪಡಿಸಿದ್ದು, ನೀನು ರಾವಣನನ್ನು ತೃಣೀಕರಿಸಿದ್ದು, ರಾಕ್ಷಸ ಸ್ತ್ರೀಯರು ನಿನ್ನನ್ನು ಬೆದರಿಸಿದ್ದು, ವಿರಹತಾಪವನ್ನು ತಾಳಲಾರದೆ ನೀನು ಪ್ರಾಣತ್ಯಾಗಕ್ಕೆ ಸಿದ್ಧವಾದುದನ್ನು, ನಿರಂತರ ಶ್ರೀರಾಮನನ್ನು ಧ್ಯಾನಿಸುತ್ತಿರುವುದನ್ನು, ನಿನ್ನ ಪಾತಿವ್ರತ್ಯ ಧರ್ಮಾಚರಣೆಯನ್ನು, ನೀನು ರಾಮನಿಗಾಗಿ ಹೇಳಿದ ಸಂದೇಶವನ್ನು ಮುಂತಾದ ಎಲ್ಲ ವಿಷಯಗಳನ್ನು ನಾನು ಯಥಾವತ್ತಾಗಿ ಶ್ರೀರಾಮನಿಗೆ ತಿಳಿಸುತ್ತೇನೆ.

ಲಂಕಾಯಾ ದುಷ್ಪ್ರವೇಶತ್ವಾದ್ದುಸ್ತರತ್ವಾನ್ನಹೋದಧೇಃ ।
ಸಾಮರ್ಥ್ಯಾದಾತ್ಮನಶ್ಚೈವ ಮಯ್ಯೈತತ್ ಸಮುದೀರಿತಮ್ ॥ ೮॥

ಇಚ್ಛಾಮಿ ತ್ವಾಂ ಸಮಾನೇತುಮಸ್ಮಿನ್ನೇವ ರಘುಬಂಧುನಾ ।
ಗುರುಸ್ನೇಹೇನ ಭಕ್ತ್ಯಾ ಚ ನಾನ್ಯಥೈತದುದಾಹೃತಮ್ ॥ ೯॥

ಯದಿ ನೋತ್ಸಹಸೇ ಯಾತುಂ ಮಯಾ ಸಾರ್ಧಮನಿಂದಿತೇ ।
ಅಭಿಜ್ಞಾನಂ ಪ್ರಯಚ್ಛ ತ್ವಂ ಜಾನೀಯಾದ್ರಾಘವೋ ಹಿ ಯತ್ ॥ ೧೦॥

ಏವಮುಕ್ತಾ ಹನುಮತಾ ಸೀತಾ ಸುರಸುತೋಪಮಾ ।
ಉವಾಚ ವಚನಂ ಮಂದಂ ಬಾಷ್ಪಪ್ರಗ್ರಥಿತಾಕ್ಷರಮ್ ॥ ೧೧॥

ಇದಂ ಶ್ರೇಷ್ಠಮಭಿಜ್ಞಾನಂ ಬ್ರೂಯಾಸ್ತ್ವಂ ತು ಮಮ ಪ್ರಿಯಮ್ ।
ಶೈಲಸ್ಯ ಚಿತ್ರಕೂಟಸ್ಯ ಪಾದೇ ಪೂರ್ವೋತ್ತರೇ ಪುರಾ ॥ ೧೨॥

ತಾಪಸಾಶ್ರಮವಾಸಿನ್ಯಾಃ ಪ್ರಾಮ್ಯಮೂಲಫಲೋದಕೇ ।
ತಸ್ಮಿನ್ ಸಿದ್ಧಾಶ್ರಿತೇ ದೇಶೇ ಮಂದಾಕಿನ್ಯಾ ಹ್ಯದೂರತಃ ॥ ೧೩॥

ತಸ್ಯೋಪವನಷಂಡೇಷು ನಾನಾಪುಷ್ಪಸುಗಂಧಿಷು ।
ವಿಹೃತ್ಯ ಸಲಿಲಕ್ಲಿನ್ನಾ ತವಾಂಕೇ ಸಮುಪಾವಿಶಮ್ ॥ ೧೪॥

ತತೋ ಮಾಂಸ ಸಮಾಯುಕ್ತೋ ವಾಯಸಃ ಪರ್ಯತುಂಡಯತ್ ।
ತಮಹಂ ಲೋಷ್ಟಮುದ್ಯಮ್ಯ ದಾರಯಾಮಿ ಸ್ಮ ವಾಯಸಮ್ ॥ ೧೫॥

ದಾರಯನ್ ಸ ಚ ಮಾಂ ಕಾಕಸ್ತ್ರಸ್ತೈವ ಪರಿಲೀಯತೇ ।
ನ ಚಾಪ್ಯಪಾರಮನ್ಯಾಂಸಾತ್ ಭಕ್ತಾರ್ಥೀ ಬಲಿಭೋಜನಃ॥

ಉತ್ಕರ್ಷಂತ್ಯಾಂ ಚ ರಶನಾಂ ಕ್ರುದ್ಧಾಯಾಂ ಮಯಿ ಪಕ್ಷಿಣೇ ।
ಸ್ರಸ್ಯಮಾನೇ ಚ ವಸನೇ ತತೋ ದೃಷ್ಟಾ ತ್ವಯೂ ಧೃತಮ್ ॥ ೧೭॥

ತ್ವಯಾಪಹಸಿತಾ ಚಾಹಂ ಕ್ರುದ್ಧಾ ಸಂಲಜ್ಜಿತಾ ತದಾ ।
ಭಕ್ಷಗೃದ್ಧೇನ ಕಾಕೇನ ದಾರಿದಾ ತ್ವಾಮುಪಾಗತಾ ॥ ೧೮॥

ಆಸೀನಸ್ಯ ಚ ತೇ ಶ್ರಾಂತಾ ಪುನರುತ್ಸಂಗಮಾವಿಶಮ್ ।
ಕ್ರುಧ್ಯಂತೀ ಚ ಪ್ರಹೃಷ್ಟೇನ ತ್ವಯಾಹಂ ಪರಿಸಾಂತ್ವಿತಾ ॥ ೧೯॥

ಇತರರಿಂದ ಪ್ರವೇಶಿಸಲು ದುಸ್ಸಾಧ್ಯವಾದುದರಿಂದಲೂ, ಮಹಾಸಮುದ್ರವನ್ನು ಇತರರಿಂದ ದಾಟಲು ಸಾಧ್ಯವಾಗದೇ ಇರುವುದರಿಂದ, ಪ್ರಕೃತದಲ್ಲಿ ನನ್ನ ಸಾಮರ್ಥ್ಯದ ಅರಿವಿನಿಂದಲೂ, ರಘುವಂಶೀಯರಿಗೆ ಆನಂದವನ್ನುಂಟು ಮಾಡುವ ಶ್ರೀರಾಮನ ಬಳಿಗೆ ಈಗಲೇ ನಿನ್ನನ್ನು ಕರೆದೊಯ್ಯಲು ಆಶಿಸಿದೆನು. ಅಮ್ಮಾ! ನಾನು ಹೀಗೆ ಹೇಳಲು ನನಗೆ ರಾಮನಲ್ಲಿರುವ ಅಪಾರವಾದ ಸ್ನೇಹವೂ, ಗೌರವವೂ, ಭಕ್ತಿ-ಪ್ರಪತ್ತಿಗಳೇ ಕಾರಣ ಹೊರತು ಬೇರೆಯಾವ ಕಾರಣವೂ ಇಲ್ಲ. ॥೮-೯॥ ನನ್ನ ಸಂಗಡ ಬರಲು ಸಮ್ಮತವಿಲ್ಲದಿದ್ದರೆ, ಶ್ರೀರಾಮನು ಗುರುತಿಸಬಹುದಾದ, ನಿನ್ನ ನೆನಪನ್ನುಂಟು ಮಾಡುವ ಯಾವುದಾದರೊಂದು ಅಭಿಜ್ಞಾನ (ಕುರುಹು)ವನ್ನು ಕರುಣಿಸು. ॥೧೦॥

ದೇವಕನ್ನಿಕೆಯಂತಿದ್ದ ಸೀತಾದೇವಿಯು ಹನುಮಂತನ ಮಾತುಗಳನ್ನು ಕೇಳಿ, ಬಿಕ್ಕಿ-ಬಿಕ್ಕಿ ಅಳುತ್ತಾ ಕಣ್ಣೀರು ಸುರಿಯುತ್ತಿದ್ದುದರಿಂದ ತಡೆ-ತಡೆದು ಮೆಲ್ಲಗೆ (ರಾಕ್ಷಸಿಯರು ಕೇಳದಂತೆ) ಹೀಗೆ ನುಡಿದಳು - ॥೧೧॥

ವಾಯುಪುತ್ರನೇ! ನನ್ನ ನೆನಪನ್ನು ತರುವ ಶ್ರೇಷ್ಠವಾದ ಈ ಸನ್ನಿವೇಶವನ್ನು ಶ್ರೀರಾಮನಿಗೆ ವಿವರಿಸಿ ಹೇಳು. ಚಿತ್ರಕೂಟ ಪರ್ವತದ ಈಶಾನ್ಯ ದಿಕ್ಕಿನ ತಪ್ಪಲಿನಲ್ಲಿರುವ, ಫಲ-ಮೂಲ ಜಲಗಳಿಂದ ಸಮೃದ್ಧವಾದ, ಸಿದ್ಧರಿಂದ ಆಶ್ರಯಿಸಲ್ಪಡುತ್ತಿರುವ, ಮಂದಾಕಿನೀ ನದಿಗೆ ಸಮೀಪದಲ್ಲಿರುವ ತಪಸ್ವಿಗಳ ಆಶ್ರಮದಲ್ಲಿ ವಾಸಮಾಡುತ್ತಿದ್ದಾಗ ಜರುಗಿದ ಈ ಘಟನೆಯನ್ನು ನನ್ನ ಪ್ರಿಯನಿಗೆ ಯಥಾವತ್ತಾಗಿ ಹೇಳು. ॥೧೨-೧೩॥

''ರಾಘವಾ! ನಾನಾವಿಧವಾದ ಪುಷ್ಪಗಳಿಂದ ಸುಗಂಧಿತವಾಗಿದ್ದ ಆ ಚಿತ್ರಕೂಟ ಪರ್ವತದ ಉಪವನದಲ್ಲಿ ಬಹಳ ಹೊತ್ತಿನ ವರೆಗೆ ವಿಹರಿಸಿ ಬೆವರಿನಿಂದ ಕೊಯ್ಯು ಹೋಗಿದ್ದ ನಾನು ನಿನ್ನ ತೊಡೆಯಲ್ಲಿ ಕುಳಿತುಕೊಂಡೆ. ॥೧೪॥ ಆಷ್ಟರಲ್ಲಿ ಮಾಂಸಾಪೇಕ್ಷಿಯಾದ ಕಾಗೆಯೊಂದು ನನ್ನ ಸ್ತನಾಂತರದಲ್ಲಿ ಕೊಕ್ಕಿನಿಂದ ಕುಕ್ಕಿತು. ಆಗ ನಾನು ಅದನ್ನು ಹತ್ತಿರಕ್ಕೆ ಬರದಂತೆ ತಡೆಯಲು ಮಣ್ಣುಹೆಂಟೆಯನ್ನು ಅದರ ಕಡೆಗೆ ಎಸೆಯುತ್ತಾ ದೂರ ಓಡಿಸುತ್ತಿದ್ದೆ. ॥೧೫॥ ಆದರೆ ಆ ಕಾಗೆಯು ನನ್ನನ್ನು ಪದೇ-ಪದೇ ಬಾಧಿಸುತ್ತಿತ್ತು. ನನ್ನಿಂದ ತಪ್ಪಿಸಿಕೊಂಡು ಅಲ್ಲಲ್ಲೇ ತಿರುಗುತ್ತಿತ್ತು. ಮಾಂಸಭಕ್ಷಣದಲ್ಲಿ ಆಸಕ್ತವಾದ ಆ ಕಾಗೆಯು ತನ್ನ ಪ್ರಯತ್ನವನ್ನು ಬಿಡಲೊಲ್ಲದು. ॥೧೬॥ ನಾನು ಕೋಪದಿಂದ ಆ ವಾಯಸವನ್ನು ಓಡಿಸುತ್ತಿದ್ದಾಗ, ಸಡಲಿದ ಉದ್ಯಾನವನ್ನು ಬಿಗಿಗೊಳಿಸಿದಾಗ, ಜಾರುತ್ತಿದ್ದ ಸೀರೆಯನ್ನು ಸರಿಪಡಿಸಿ ಕೊಳ್ಳುತ್ತಿರುವಾಗ ನೀನು ನನ್ನನ್ನು ನೋಡಿ ಮುಗುಳ್ನಕ್ಕೆ. ॥೧೭॥ ಅದರಿಂದ ನನಗೆ ಕೋಪವು ನಾಚಿಕೆಯೂ ಆಯಿತು. ಮಾಂಸವನ್ನು ಭಕ್ಷಿಸುವುದರಲ್ಲಿಯೇ ಆಸಕ್ತವಾಗಿದ್ದ ಆ ಕಾಗೆಯು ನನ್ನನ್ನು ಬಹಳವಾಗಿ ಗಾಯಗೊಳಿಸಿತು. ಅದನ್ನು ಓಡಿಸುತ್ತಾ ನಿನ್ನ ಬಳಿಗೆ ಬಂದೆನು. ॥೧೮॥ ಆಯಾಸಗೊಂಡಿದ್ದ ನಾನು, ಕುಳಿತಿರುವ ನಿನ್ನ ತೊಡೆಯ ಮೇಲೆ ಪುನಃ ಕುಳಿತೆನು.

ಬಾಷ್ಪ ಪೂರ್ಣಮುಖೀ ಮಂದಂ ಚಕ್ಷುಷೀ ಪರಿಮಾರ್ಜತೀ ।
ಲಕ್ಷಿತಾಹಂ ತ್ವಯಾ ನಾಥ ವಾಯಸೇನ ಪ್ರಕೋಪಿತಾ ॥ ೨೦॥

ಪರಿಶ್ರಮಾತ್ ಪ್ರಸುಪ್ತಾ ಚ ರಾಘವಾಂಕೇಽಪ್ಯಹಂ ಚಿರಮ್ ।
ಪರ್ಯಾಯೇಣ ಪ್ರಸುಪ್ತಶ್ಚ ಮಮಾಂಕೇ ಭರತಾಗ್ರಜಃ ॥ ೨೧॥

ಸ ತತ್ರ ಪುನರೇವಾಥ ವಾಯಸಃ ಸಮುಪಾಗಮತ್ ।
ತತಃ ಸುಪ್ತಪ್ರಬುದ್ಧಾಂ ಮಾಂ ರಾಘವಾಂಕಾತ್ ಸಮುತ್ಥಿತಾಮ್ ॥ ೨೨॥

ವಾಯಸಃ ಸಹಸಾಗಮ್ಯ ವಿದದಾರ ಸ್ತನಾಂತರೇ ।
ಪುನಃ ಪುನರಥೋತ್ಪತ್ಯ ವಿದದಾರ ಸ ಮಾಂ ಭೃಶಮ್ ॥ ೨೩॥

ತತಃ ಸಮುಕ್ಷಿತೋ ರಾಮೋ ಮುಕ್ತೈಃ ಶೋಣಿತಬಿಂದುಭಿಃ ।
ವಾಯಸೇನ ತತಸ್ತೇನ ಬಲವತ್ ಕ್ಲಿಶ್ಯಮಾನಯಾ ॥ ೨೪॥

ಸ ಮಯಾ ಬೋಧಿತಃ ಶ್ರೀಮಾನ್ ಸುಖಸುಪ್ತಃ ಪರಂತಪಃ ।
ಸ ಮಾಂ ದೃಷ್ಟ್ವಾ ಮಹಾಬಾಹುರ್ವಿತುನ್ನಾಂ ಸ್ತನಯೋಸ್ತದಾ ॥ ೨೫॥

ಆಶೀವಿಷ ಇವ ಕ್ರುದ್ಧಃ ಶ್ವಸನ್ ವಾಕ್ಯಮಭಾಷತ ।
ಕೇನ ತೇ ನಾಗನಾಸೋರು ವಿಕ್ಷತಂ ವೈ ಸ್ತನಾಂತರಮ್ ॥ ೨೬॥

ಕಃ ಕ್ರೀಡತಿ ಸರೋಷೇಣ ಪಂಚವಕ್ತ್ರೇಣ ಭೋಗಿನಾ ।
ವೀಕ್ಷಮಾಣಸ್ತತಸ್ತಂ ವೈ ವಾಯುಸಂ ಸಮುದೈಕ್ಷತ ॥ ೨೭॥

ನಖೈಃ ಸರುಧಿರೈಸ್ತೈಕ್ಷ್ಣೈರ್ಮಾಮೇವಾಭಿಮುಖಂ ಸ್ಥಿತಮ್ ।
ಪುತ್ರಃ ಕಿಲ ಸ ಶಕ್ರಸ್ಯ ವಾಯಸಃ ಪತತಾಂ ವರಃ ॥ ೨೮॥

ಧರಾಂ ತರಗತಃ ಶೀಘ್ರಂ ಪವನಸ್ಯ ಗತೌ ಸಮಃ ।
ತತಸ್ತಸ್ಮಿನ್ ಮಹಾಬಾಹುಃ ಕೋಪಸಂವರ್ತಿತೇಕ್ಷಣಃ ॥ ೨೯॥

ವಾಯಸೇ ಕೃತವಾನ್ ಕ್ರೂರಾಂ ಮತಿಂ ಮತಿಮತಾಂ ವರಃ ।
ಸ ದರ್ಭಂ ಸಂಸ್ತರಾದ್ಗೃಹ್ಯ ಬ್ರಾಹ್ಮೇಣಾಸ್ತ್ರೇಣ ಯೋಜಯತ್ ॥ ೩೦॥

ಸ ದೀಪ್ತ ಇವ ಕಾಲಾಗ್ನಿರ್ಜಜ್ವಾಲಾಭಿಮುಖೋ ದ್ವಿಜಮ್ ।
ಸ ತಂ ಪ್ರದೀಪ್ತಂ ಚಿಕ್ಷೇಪ ದರ್ಭಂ ತಂ ವಾಯಸಂ ಪ್ರತಿ ॥ ೩೧॥

ಕುಪಿತಳಾದ ನನ್ನನ್ನು ಮರುಕ್ಷಣದಲ್ಲೇ ನೀನು ಪ್ರಸನ್ನಗೊಳಿಸಲು ಸಂತೈಸಿದೆ. ॥೧೯॥ ಕಾಗೆಯಿಂದ ಕುಕ್ಕಿಸಿಕೊಂಡು ಕೋಪಗೊಂಡಿದ್ದ ನನ್ನ ಮುಖವೆಲ್ಲವೂ ಕಣ್ಣೀರಿನಿಂದ ತೊಯ್ದು ಹೋಗಿತ್ತು. ಕಂಬನಿಗಳನ್ನು ನಾನು ಮೆಲ್ಲನೆ ಒರೆಸಿಕೊಳ್ಳುವಾಗ ಅದನ್ನು ನೀನು ನೋಡಿದೆ. ॥೨೦॥ ಆಯಾಸದಿಂದಾಗಿ ನಾನು ಬಹಳ ಹೊತ್ತಿನವರೆಗೆ ನಿನ್ನ ತೊಡೆಯಲ್ಲೇ ಮಲಗಿದ್ದೆನು. ನಾನು ಎಚ್ಚರಗೊಂಡ ನಂತರ ಭರತಾಗ್ರಜನಾದ ನೀನು ನನ್ನ ತೊಡೆಯ ಮೇಲೆ ಮಲಗಿದೆ. ॥೨೧॥ ಅದಾದ ಬಳಿಕ ಪುನಃ ಆ ಕಾಗೆಯು ಅಲ್ಲಿಗೆ ಹಾರಿ ಬಂದು ಕುಳಿತುಕೊಂಡಿತು. ಸ್ವಲ್ಪ ಹೊತ್ತು ಶ್ರೀರಾಮನು ಮಡಿಲಲ್ಲಿ ಮಲಗಿಕೊಂಡಿದ್ದಾಗ ಆ ಕಾಗೆಯು ವೇಗವಾಗಿ ನನ್ನನ್ನು ಸಮೀಪಿಸಿ, ಕಾಲುಗುರುಗಳಿಂದ ನನ್ನ ಎದೆಯನ್ನು ಗಾಯಗೊಳಿಸಿತು. ॥೨೨॥ಅದು ಪದೇ-ಪದೇ ಹಾರಿ-ಹಾರಿ ನನ್ನನ್ನು ಕುಕ್ಕಿ ಬಾಧಿಸುತ್ತಲೇ ಇತ್ತು. ಆಗ ಶ್ರೀರಾಮನ ಮೇಲೆ ನನ್ನ ವಕ್ಷಸ್ಥಳದಿಂದ ಸ್ರವಿಸುತ್ತಿದ್ದ ರಕ್ತ ಬಿಂದುಗಳು ಬಿದ್ದುವು. ॥೨೩॥ ಆಗ ಆ ವಾಯಸದಿಂದ ಬಾಧೆಪಡುತ್ತಿದ್ದ ನಾನು ಸಕಲೈಶ್ವರ್ಯಸಂಪನ್ನನೂ, ಅರಿಸೂದನೂ ಆದ ಶ್ರೀರಾಮನನ್ನು ಗಾಢನಿದ್ದೆಯಿಂದ ಎಬ್ಬಿಸಿದೆನು. ॥೨೪॥ ಆಗ ಆ ಕಾಗೆಯಿಂದ ಸ್ತನಗಳ ಮಧ್ಯದಲ್ಲಿ ಪೀಡಿಸುತ್ತಿರುವುದನ್ನು ನೋಡಿದ ಮಹಾಬಾಹುವಾದ ರಾಮನು ರೊಚ್ಚಿಗೆದ್ದ ವಿಷಸರ್ಪವು ಬುಸುಗುಟ್ಟುವಂತೆ, ಕ್ರುದ್ಧನಾಗಿ ನಿಟ್ಟಿಸುರು ಬಿಡುತ್ತಾ ಇಂತೆಂದನು. ॥೨೫॥

ಎಲೈ ಸುಂದರಿ ಸೀತಾ! ನಿನ್ನ ಸ್ತನಗಳ ಮಧ್ಯಭಾಗದಲ್ಲಿ ಪರಚಿ ಗಾಯಗೊಳಿಸಿದವರು ಯಾರು? ಕೋಪಗೊಂಡಿರುವ ಐದು ಹೆಡೆಗಳ ಮಹಾಸರ್ಪದೊಡನೆ ಯಾವನು ಹೀಗೆ ಆಟವಾಡುತ್ತಿರುವನು? ॥೨೬॥ ಶ್ರೀರಾಮನು ಹೀಗೆ ಹೇಳಿಸುತ್ತಲೂ ಪರಿಕಿಸಿ ನೋಡುತ್ತಿರುವಾಗ, ರಕ್ತಸಿಕ್ತವಾದ ತೀಕ್ಷ್ಣವಾದ ಕಾಲುಗುರುಗಳಿರುವ ಕಾಗೆಯೊಂದು ಇದಿರ್ಗಡೆ ಕುಳಿತಿರುವು ದನ್ನು ನೋಡಿದನು. ॥೨೭॥ ಆ ಕಾಗೆಯು ಇಂದ್ರನ ಮಗನು. ವಾಯುವೇಗಕ್ಕೆ ಸಮವೇಗವುಳ್ಳ ಆ ಇಂದ್ರಪುತ್ರನು ಶ್ರೀರಾಮನನ್ನು ನೋಡಿ ತನ್ನ ರಕ್ಷಣೆಗಾಗಿ ಸ್ವಲ್ಪದೂರ ಹಾರಿಹೋಗಿ ಕುಳಿತುಕೊಂಡಿತು. ॥೨೮॥ ಬಳಿಕ ಮಹಾಬುದ್ಧಿಶಾಲಿಯೂ, ಮಹಾಬಾಹುವೂ ಆದ, ರಾಮನ ಕಣ್ಣುಗಳು ಕೋಪದಿಂದ ಗರ-ಗರನೆ ತಿರುಗುತ್ತಿವೆಯೋ ಎಂಬಂತಿದ್ದ ಅವನು ಆ ಕಾಗೆಯನ್ನು ಚೆನ್ನಾಗಿ ಶಿಕ್ಷಿಸಲು ನಿರ್ಣಯಿಸಿದನು. ॥೨೯॥ ಅಲ್ಲಿಯೇ ಹಾಸಿದ್ದ ದರ್ಭೆಯಲ್ಲಿ ಒಂದು ದರ್ಭೆಯನ್ನು ಎತ್ತಿಕೊಂಡು ಅದನ್ನು ಬ್ರಹ್ಮಾಸ್ತ್ರದಿಂದ ಅಭಿಮಂತ್ರಿಸಿದನು. ಆ ಬ್ರಹ್ಮಾಸ್ತ್ರವು ಪ್ರಳಯಾಗ್ನಿಯೋಪಾದಿಯಲ್ಲಿ ಪ್ರಜ್ವಲಿಸುತ್ತಾ ಕಾಗೆಯನ್ನು ಎದುರಿಸಿ ನಿಂತಿತು. ॥೩೦॥ ಮತ್ತೆ ರಾಮನು ಆ ಪ್ರಜ್ವಲಿಸುತ್ತಿರುವ ದರ್ಭೆಯನ್ನು (ಬ್ರಹ್ಮಾಸ್ತ್ರವನ್ನು) ಕಾಗೆಯ ಮೇಲೆ ಪ್ರಯೋಗಿಸಿದನು. ಆಗ ಆ ಇಷಿಕಾಸ್ತ್ರವು (ದರ್ಭಾಸ್ತ್ರವು) ಆಕಾಶದಲ್ಲಿ ಹಾರಿಹೋಗುತ್ತಿದ್ದ ಕಾಗೆಯನ್ನು ಎಡೆಬಿಡದೆ ಹಿಂಬಾಲಿಸಿತು. ॥೩೧॥ ಹಾಗೆ ಆ

ತತಸ್ತಂ ಮಾಯಯಾ ದಗ್ಧಃ ಸೋಽಬರೇಽನುಜಗಾಮ ಹ ।
ಅನುಸೃಷ್ಟಸ್ತದಾ ಕಾಕೋ ಜಗಾಮ ವಿವಿಧಾಂ ಗತಿಮ್ ॥ ೩೭॥

ತ್ರಾಣಕಾಮ ಇಮಂ ಲೋಕಂ ಸರ್ವಂ ವೈ ವಿಚಚಾರ ಹ ।
ಸ ಪಿತ್ರಾ ಚ ಪರಿತ್ಯಕ್ತಃ ಸುರೈಃ ಸರ್ವೈರ್ಮಹರ್ಷಿಭಿಃ ॥ ೩೩॥

ತ್ರೀನ್ ಲೋಕಾನ್ ಸಂಪರಿಕ್ರಮ್ಯ ತಮೇವ ಶರಣಂ ಗತಃ ।
ಸ ತಂ ನಿಪತಿತಂ ಭೂಮೌ ಶರಣ್ಯಃ ಶರಣಾ ಗತಮ್ ॥ ೩೪॥

ವಧಾರ್ಹಮಪಿ ಕಾಕುತ್ಸ್ಥಃ ಕೃಪಯಾ ಪರ್ಯಪಾಲಯತ್ ।
ಪರಿದ್ಯೂನಂ ವಿಷಣ್ಣಂ ಚ ಸ ತಮಾಯಾಂತಮಬ್ರವೀತ್ ॥ ೩೫॥

ಮೋಘಂ ಕರ್ತುಂ ನ ಶಕ್ಯಂ ತು ಬ್ರಾಹ್ಮಮಸ್ತ್ರಂ ತದುದ್ಯತಮ್ ।
ಹಿನಸ್ತು ದಕ್ಷಿಣಾಕ್ಷಿ ತ್ವಚ್ಛರ ಇತ್ಯಥ ಸೋಽಬ್ರವೀತ್ ॥ ೩೬॥

ತತಸ್ತಸ್ಯಾಕ್ಷಿ ಕಾಕಸ್ಯ ಹಿನಸ್ತಿ ಸ್ಮ ಸ ದಕ್ಷಿಣಮ್ ।
ದತ್ತ್ವಾಸ್ಯ ದಕ್ಷಿಣಂ ನೇತ್ರಂ ಪ್ರಾಣೇಭ್ಯಃ ಪರಿರಕ್ಷಿತಃ ॥ ೩೭॥

ಸ ರಾಮಾಯ ನಮಸ್ಕೃತ್ವಾ ರಾಜ್ಞೇ ದಶರಥಾಯ ಚ ।
ವಿಸೃಷ್ಟಸ್ತೇನ ವೀರೇಣ ಪ್ರತಿಹೇದೇ ಸ್ವಮಾಲಯಮ್ ॥ ೩೮॥

ಮತ್ಕೃತೇ ಕಾಕಮಾತ್ರೇ ತು ಬ್ರಹ್ಮಾಸ್ತ್ರಂ ಸಮುದೀರಿತಮ್ ।
ಕ್ಷಾಮ್ಯೇಃ ಮಾಽಪರಾಧ್ಯ ತ್ವಂ ಕ್ಷಮಸೇ ಕಂ ಮಹೀಪತೇ ॥ ೩೯॥

ಸ ಕುರುಷ್ವ ಮಹೋತ್ಸಾಹಃ ಕೃಪಾಂ ಮಯಿ ನರರ್ಷಭ ।
ತ್ವಯಾ ನಾಥವತೀ ನಾಥ ಹ್ಯನಾಥಾ ಇವ ದೃಶ್ಯತೇ ॥ ೪೦॥

ಆನೃಶಂಸ್ಯಂ ಪರೋ ಧರ್ಮಸ್ತ್ವತ್ತ ಏವ ಮಯಾ ಶ್ರುತಃ ।
ಜಾನಾಮಿ ತ್ವಾ ಮಹಾವೀರ್ಯಂ ಮಹೋತ್ಸಾಹಂ ಮಹಾಬಲಮ್ ॥ ೪೧॥

ಅಸ್ತ್ರವು ಹಿಂಬಾಲಿಸುತ್ತಿರುವಾಗ ಆ ಕಾಗೆಯು ಒದಗಿದ ಆಪತ್ತಿನಿಂದ ತಪ್ಪಿಸಿಕೊಳ್ಳಲು ಅನೇಕ ಕಡೆಗಳಲ್ಲಿ ಸುತ್ತಾಡಿತು. ತನ್ನನ್ನು ರಕ್ಷಿಸಿಕೊಳ್ಳಲು ಭೂಲೋಕವೇ ಮೊದಲ್ಗೊಂಡು ಸತ್ಯಲೋಕದವರೆಗಿನ ಎಲ್ಲ ಲೋಕಗಳನ್ನು ತಿರುಗಿತು. ॥೩೨॥ ತಂದೆಯಾದ ದೇವೇಂದ್ರನು, ಇತರ ದೇವತೆಗಳು, ಮಹರ್ಷಿಗಳು ಆ ಕಾಗೆಯನ್ನು ರಕ್ಷಿಸಲು ತಮ್ಮ ಅಶಕ್ತತೆಯನ್ನು ಪ್ರಕಟಪಡಿಸಿದರು. ಹಾಗೆ ಅದು ಮೂರು ಲೋಕಗಳಲ್ಲಿಯೂ ಸಂಚರಿಸಿ, ತನ್ನನ್ನು ರಕ್ಷಿಸುವವರು ಯಾರೂ ಇಲ್ಲವೆಂದು ಅರಿತು, ತಿರುಗಿ ಬಂದು ಶ್ರೀರಾಮನಿಗೆ ಶರಣಾಯಿತು. ಶರಣಾಗತ ರಕ್ಷಕನಾದ ಆ ರಾಘವನು ಶರಣಾಗತನಾಗಿ ನೆಲದ ಮೇಲೆ ಬಿದ್ದಿರುವ ಕಾಗೆಯನ್ನು ಅದು ವಧಾರ್ಹವೇ ಆಗಿದ್ದರೂ ಅದನ್ನು ರಕ್ಷಿಸಿದನು. ॥೩೩-೩೪॥

ಪಶ್ಚಾತ್ತಾಪದಿಂದ ಶಕ್ತಿಗುಂದಿ ವಿಷಣ್ಣವದನನಾಗಿ ತನಗೆ ಶರಣಾದ ಆ ಕಾಗೆಯ ಬಳಿ ಶ್ರೀರಾಮನು ಇಂತೆಂದನು- ''ನಾನು ಪ್ರಯೋಗಿಸಿದ ಬ್ರಹ್ಮಾಸ್ತ್ರವು ವ್ಯರ್ಥವಾಗದು. ಆದುದರಿಂದ ಏನು ಮಾಡಬಹುದೋ ತಿಳಿಸು.'' - ಮತ್ತೆ ಆ ಕಾಗೆಯು - ''ನಿನ್ನ ಬ್ರಹ್ಮಾಸ್ತ್ರವು ನನ್ನನ್ನು ಕೊಲ್ಲದಿರಲಿ'' ಎಂದು ನುಡಿಯಿತು. ಆಗ ಶ್ರೀರಾಮನು ಆ ಕಾಗೆಯ ಬಲಗಣ್ಣನ್ನು ಬ್ರಹ್ಮಾಸ್ತ್ರಕ್ಕೆ ಬಲಿಗೊಟ್ಟನು. ಆ ವಾಯಸವೂ ಕೂಡ ತನ್ನ ಬಲ ಕಣ್ಣನ್ನು ಒಪ್ಪಿಸಿಕೊಟ್ಟು ಪ್ರಾಣಗಳನ್ನು ಉಳಿಸಿಕೊಂಡಿತು. (ಅಂದಿನಿಂದ ಕಾಗೆಯು ಒಕ್ಕಣ್ಣನೆಂದೇ ಪ್ರಸಿದ್ಧಿ). ॥೩೫-೩೭॥

ಅನಂತರ ಆ ಕಾಕಾಸುರನು ವೀರವರನಾದ ಶ್ರೀರಾಮಚಂದ್ರ ಪ್ರಭುವಾದ ನಿನಗೆ ನಮಸ್ಕರಿಸಿದನು ಮತ್ತೆ ನಿನ್ನ ತಂದೆಯಾದ ದಶರಥ ಮಹಾರಾಜನನ್ನು ಮನಸ್ಸಿನಲ್ಲೇ ವಂದಿಸಿ, ನಿನ್ನ ಅಪ್ಪಣೆಯನ್ನು ಪಡೆದು ತನ್ನ ಭವನವಾದ ಇಂದ್ರಲೋಕಕ್ಕೆ ಹೊರಟುಹೋಯಿತು. ॥೩೮॥

ಮಹೀಪತೇ! ನನ್ನ ಸಲುವಾಗಿ ಕ್ಷುದ್ರವಾದ ಒಂದು ಕಾಗೆಯ ಮೇಲೆ ನೀನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದೆ. ಸ್ವಾಮಿ! ನನ್ನನ್ನು ಅವಹರಿಸಿದ ಈ ರಾವಣನನ್ನು ಸಂಹರಿಸಲು ಉಪೇಕ್ಷಿಸಿದುದರ ಕಾರಣವೇನು? ಇದನ್ನು ನೀನು ಹೇಗೆ ಸಹಿಸುತ್ತಿರುವೆ? ॥೩೯॥ ಓ ಪ್ರಾಣನಾಥಾ! ನೀನು ಮಹಾಪುರುಷನು. ಹೇರಾದ ಉತ್ಸಾಹ ಶಕ್ತಿಯುಳ್ಳವನು. ಇಲ್ಲಿ ನಿನ್ನ ಧರ್ಮಪತ್ನಿಯು ದಿಕ್ಕಿಲ್ಲದವಳಂತೆ ಬಿದ್ದಿರುವಳು. ನನ್ನ ಮೇಲೆ ಕೃಪೆಮೂರು. ''ದೀನರ ಮೇಲೆ ಕರುಣೆ ತೋರುವುದೇ ಪರಮ ಧರ್ಮವು'' ಎಂದು ನೀನೇ ನನಗೆ ತಿಳಿಸಿರುವೆ. ನಿನ್ನ ಪರಾಕ್ರಮ ವೈಭವಗಳನ್ನೂ, ಮಹೋತ್ಸಾಹ ಶಕ್ತಿಯನ್ನೂ, ಮಹಾಬಲ ಸಂಪನ್ನತೆಯನ್ನೂ ನಾನು ಅರಿತಿರುವೆನು. ॥೪೦॥ ನಿನ್ನ ಗುಣಗಳೂ, ಕರ್ಮಗಳೂ ದಿವ್ಯವೂ ಅನಂತವೂ ಆಗಿವೆ. ಅವು ಊಹೆಗೂ ನಿಲುಕದು. ನಿನ್ನನ್ನು ಯಾರೂ ಕ್ಷೋಭೆಗೊಳಿಸಲಾರರು. ಗಾಂಭೀರ್ಯದಲ್ಲಿ ಸಮುದ್ರದಂತೆ ಇರುವವನು. ಸಮುದ್ರಗಳಿಂದ ಆವೃತವಾದ ಭೂ ಮಂಡಲಕ್ಕೆ ಒಡೆಯನು. ಐಶ್ವರ್ಯದಲ್ಲಿ ದೇವೇಂದ್ರನಿಗೆ ಸಮಾನನು. ॥೪೧॥ ನೀನು ಅಸ್ತ್ರವಿದ್ಯೆಯನ್ನು ಅರಿತವರಲ್ಲಿ

ಅಪಾರಪಾರಮಕ್ಷೋಭ್ಯಂ ಗಾಂಭೀರ್ಯಾತ್ಸಾಗರೋಪಮಮ್ ।
ಭರ್ತಾರಂ ಸಸಮುದ್ರಾಯಾ ಧರಣ್ಯಾ ವಾಸವೋಪಮಮ್ ॥ ೪೨॥

ಏವಮಸ್ತ್ರವಿದಾಂ ಶ್ರೇಷ್ಠಃ ಸತ್ವವಾನ್ ಬಲವಾನಪಿ ।
ಕಿಮರ್ಥಮಸ್ತ್ರಂ ರಕ್ಷಸ್ಸು ನ ಯೋಜಯಸಿ ರಾಘವ ॥ ೪೩॥

ನ ನಾಗಾ ನಾಪಿ ಗಂಧರ್ವಾನಾಸುರಾ ನ ಮರುದ್ಗಣಾಃ ।
ರಾಮಸ್ಯ ಸಮರೇ ವೇಗಂ ಶಕ್ತಾಃ ಪ್ರತಿಸಮೀಹಿತುಮ್ ॥ ೪೪॥

ತಸ್ಯ ವೀರ್ಯವತಃ ಕಶ್ಚಿದ್ ಯದ್ಯಸ್ತಿ ಮಯಿ ಸಂಭ್ರಮಃ ।
ಕಿಮರ್ಥಂ ನ ಶರೈಸ್ತೀಕ್ಷ್ಣೈಃ ಕ್ಷಯಂ ನಯತಿ ರಾಕ್ಷಸಾನ್ ॥ ೪೫॥

ಭ್ರಾತುರಾದೇಶಮಾದಾಯ ಲಕ್ಷ್ಮಣೋ ವಾ ಪರಂತಪಃ ।
ಕಸ್ಯ ಹೇತೋರ್ನಮಾಂ ವೀರಃ ಪರಿತ್ರಾತಿ ಮಹಾಬಲಃ ॥ ೪೬॥

ಯದಿ ತೌ ಪುರುಷವ್ಯಾಘ್ರೌ ವಾಯ್ವಗ್ನಿಸಮತೇಜಸೌ ।
ಸುರಾಣಾಮಪಿ ದುರ್ಧರ್ಷೌ ಕಿಮರ್ಥಂ ಮಾಮುಪೇಕ್ಷತಃ ॥ ೪೭॥

ಮಮೈವ ದುಷ್ಕೃತಂ ಕಿಂಚಿನ್ಮಹದಸ್ತಿ ನ ಸಂಶಯಃ ।
ಸಮರ್ಥಾವಪಿ ತೌ ಯನ್ಮಾಂ ನಾವೇಕ್ಷೇತೇ ಪರಂತಪೌ ॥ ೪೮॥

ವೈದೇಹ್ಯಾ ವಚನಂ ಶ್ರುತ್ವಾ ಕರುಣಂ ಸಾಶ್ರುಭಾಷಿತಮ್ ।
ಅಥಾಬ್ರವೀನ್ಮಹಾತೇಜಾ ಹನುಮಾನ್ ಮಾರುತಾತ್ಮಜಃ ॥ ೪೯॥

ತ್ವಚ್ಛೋಕವಿಮುಖೋ ರಾಮೋ ದೇವಿ ಸತ್ಯೇನ ಮೇ ಶಪೇ ।
ರಾಮೇ ದುಃಖಾ ಭಿಪನ್ನೇ ಚ ಲಕ್ಷ್ಮಣಃ ಪರಿತಪ್ಯತೇ ॥ ೫೦॥

ಕಥಂಚಿದ್ಭವತೀ ದೃಷ್ಟಾ ನ ಕಾಲಃ ಪರಿಶೋಚಿತುಮ್ ।
ಇಮಂ ಮುಹೂರ್ತಂ ದುಃಖಾನಾಂ ದ್ರಕ್ಷ್ಯಸ್ಯಂತಮನಿಂದಿತೇ ॥ ೫೧॥

ತಾವುಭೌ ಪುರುಷವ್ಯಾಘ್ರೌ ರಾಜಪುತ್ರೌ ಮಹಾಬಲೌ ।
ತ್ವದ್ದರ್ಶನಕೃತೋತ್ಸಾಹೌ ಲಂಕಾಂ ಭಸ್ಮೀಕರಿಷ್ಯತಃ ॥ ೫೨॥

ಹತ್ವಾ ಚ ಸಮರೇ ಕ್ರೂರಂ ರಾವಣಂ ಸಹಬಾಂಧವಮ್ ।
ರಾಘವಸ್ತ್ವಾಂ ವಿಶಾಲಾಕ್ಷಿ ನೇಷ್ಯತಿ ಸ್ವಾಂ ಪುರೀಂ ಪ್ರತಿ ॥ ೫೩॥

ಬ್ರೂಹಿ ಯದ್ರಾಘವೋ ವಾಚ್ಯೋ ಲಕ್ಷ್ಮಣಶ್ಚ ಮಹಾಬಲಃ ।
ಸುಗ್ರೀವೋ ವಾಪಿ ತೇಜಸ್ವೀ ಹರಯೋಽಪಿ ಸಮಾಗತಾಃ ॥ ೫೪॥

ಶ್ರೇಷ್ಠನು, ಸತ್ಯಪರಾಕ್ರಮನು, ಮಹಾಬಲಶಾಲಿ, ಹೀಗೆಲ್ಲ ಆಗಿದ್ದರೂ ರಾಕ್ಷಸರ ಮೇಲೆ ಏಕೆ ಶಸ್ತ್ರ ಪ್ರಯೋಗಿಸುವುದಿಲ್ಲ? ॥೪೨॥ ನಾಗ-ಗಂಧರ್ವ - ರಾಕ್ಷಸರೇ ಆಗಲೀ, ಮರುತ್ತುಗಳೇ ಆಗಲೀ, ಯುದ್ಧದಲ್ಲಿ ಶ್ರೀರಾಮನಾದ ನಿನ್ನ ಅಸ್ತ್ರಗಳ ವೇಗವನ್ನು ತಡೆಯಲು ಶಕ್ತರಲ್ಲ. ಅಂತಹ ವಿರ್ಯವಂತನಾದ ನಿನಗೆ ನನ್ನ ಮೇಲೆ ಸ್ವಲ್ಪವಾದರೂ ಕರುಣೆ ಇದ್ದಿದ್ದರೆ, ತೀಕ್ಷ್ಣವಾದ ಬಾಣಗಳಿಂದ ನನಗೆ ಉಪಟಳವನ್ನು ಕೊಡುತ್ತಿರುವ ರಾಕ್ಷಸರನ್ನು ಏಕೆ ನಾಶ ಮಾಡುತ್ತಿಲ್ಲ? ಮಹಾಬಲಿಷ್ಠನೂ, ವೀರನೂ, ಶತ್ರುತಾಪಕನೂ ಆದ ಲಕ್ಷ್ಮಣನು ಅಣ್ಣನ ಅನುಜ್ಞೆಯನ್ನು ಪಡೆದು ನನ್ನ ರಕ್ಷಣೆಗಾಗಿ ಏಕೆ ಪ್ರಯತ್ನಿಸುವುದಿಲ್ಲ? ॥೪೩-೪೫॥ ದೇವತೆಗಳಿಂದಲೂ ಎದುರಿಸಲು ಅಸಾಧ್ಯರಾದ, ಅಗ್ನಿ-ವಾಯುಗಳ ತೇಜಸ್ಸಿಗೂ, ಬಲಸಂಪನ್ನತೆಗೂ ಸಮಾನರಾಗಿದ್ದರೂ, ಪುರುಷಸಿಂಹರಾದ ಆ ರಾಜಕುಮಾರರು ನನ್ನನ್ನೇಕೆ ಉಪೇಕ್ಷಿಸುತ್ತಿದ್ದಾರೆ? ನಾನು ಹಿಂದೆ ಮಾಡಿದ ಪಾಪಗಳು ಮಹತ್ತಾಗಿಯೇ ಇರಬೇಕು. ಇದರಲ್ಲಿ ಸಂದೇಹವೇ ಇಲ್ಲ. ಇಲ್ಲದಿದ್ದರೆ ಶತ್ರುಗಳನ್ನು ಸಂಹರಿಸಲು ಹೆಚ್ಚಿನ ಸಮರ್ಥರಾಗಿದ್ದ ಅವರು ನನ್ನ ಕಡೆಗೆ ಏಕೆ ತಿರುಗಿನೋಡುವುದಿಲ್ಲ? (ಹನುಮಂತ! ಹೀಗೆಲ್ಲಾ ನಾನು ಹೇಳಿದೆನೆಂದು ನನ್ನೊಡೆಯನಿಗೆ ಹೇಳು) ॥೪೬-೪೮॥

ವೈದೇಹಿಯು ಕಣ್ಣೀರು ಸುರಿಸುತ್ತಾ ಕರುಣಾಜನಕವಾದ ರೀತಿಯಲ್ಲಿ ಹೇಳಿದ ಮಾತುಗಳನ್ನು ಕೇಳಿ ಕಪಿನಾಯಕನಾದ ಮಹಾತೇಜಸ್ವಿಯಾದ ಹನುಮಂತನು ಇಂತೆಂದನು –

"ದೇವಿಯೇ! ನಿನ್ನ ವಿರಹಶೋಕದಿಂದಾಗಿ ಶ್ರೀರಾಮನು ಎಲ್ಲ ವಿಷಯಗಳಿಂದಲೂ ವಿಮುಖನಾಗಿದ್ದಾನೆ. ಈ ಮಾತನ್ನು ನಾನು ಆಣೆಯಿಟ್ಟು ಹೇಳುತ್ತಿದ್ದೇನೆ. ಶ್ರೀರಾಮನು ದುಃಖ ಪಡುತ್ತಿದ್ದರೆ ಲಕ್ಷ್ಮಣನೂ ಪರಿತಪಿಸುತ್ತಿರುತ್ತಾನೆ. ॥೪೯-೫೦॥ ಪೂಜ್ಯಳೇ! ಹೇಗೋ ನೀನು ಕಾಣಿಸಿಕೊಂಡಿರುವೆ. ನೀನಿರುವ ಸ್ಥಳವೂ ತಿಳಿದುಹೋಗಿದೆ. ಆದ್ದರಿಂದ ದುಃಖಿಸುವ ಸಮಯವಿದಲ್ಲ. ದುಃಖಿಸಬೇಕಾದ ಕಾಲ ಕಳೆದುಹೋಯಿತು. ಈಗಿನಿಂದಲೇ ನೀನು ನಿನ್ನ ದುಃಖಕ್ಕೆ ಕೊನೆಯನ್ನು ಕಾಣುವೆ. ನಿನ್ನನ್ನು ನೋಡುವುದಕ್ಕಾಗಿ ಹೆಚ್ಚು ಕಾತರರಾಗಿರುವ, ಮಹಾಬಲಿಷ್ಠರಾದ, ಪುರುಷಸಿಂಹರಾದ ರಾಮ-ಲಕ್ಷ್ಮಣರು ನಿನ್ನನ್ನು ಪಡೆಯುವುದಕ್ಕಾಗಿ ಲಂಕೆಯನ್ನೇ ಸುಟ್ಟು ಬೂದಿಮಾಡುವರು. ॥೫೧-೫೨॥ ರಾಘವನು ಅತ್ಯಂತ ಕ್ರೂರಿಯಾದ ರಾವಣನನ್ನು ಸಮರಾಂಗಣದಲ್ಲಿ ಸಪರಿವಾರ ಸಹಿತ ಸಂಹರಿಸಿ, ವಿಶಾಲಾಕ್ಷಿಯಾದ ನಿನ್ನನ್ನು ಅಯೋಧ್ಯೇಗೆ ಕರೆದೊಯ್ಯುತ್ತಾನೆ. ॥೫೩॥ ಒಡೆಯನಾದ ರಾಮನಿಗೆ, ಮಹಾಬಲಶಾಲಿಯಾದ ಲಕ್ಷ್ಮಣನಿಗೆ, ತೇಜಸ್ವಿಯಾದ ಸುಗ್ರೀವನಿಗೂ, ಸಮುದ್ರ ತೀರದಲ್ಲಿ ಕಾಯುತ್ತಿರುವ ವಾನರ ವೀರರಿಗೆ, ನಾನು ಹೋದಾಗ ಏನು ಹೇಳಬೇಕೆಂಬ ಸಂದೇಶವನ್ನು ತಿಳಿಸಿರಿ. ॥೫೪॥

ಇತ್ಯುಕ್ತವತೀ ತತ್ರಿಂಶ್ಚ ಸೀತಾ ಸುರಸುತೋಪಮಾ ।
ಉವಾಚ ಶೋಕಸಂತಪ್ತಾ ಹನುಮಂತಂ ಪ್ಲವಂಗಮಮ್ ॥ ೫೫॥

ಕೌಸಲ್ಯಾ ಲೋಕಭರ್ತಾರಂ ಸುಷುವೇ ಯಂ ಮಹಾವ್ರತೀ ।
ತಂ ಮಮಾರ್ಥೇ ಸುಖಂ ಪೃಚ್ಛ ಶಿರಸಾ ಚಾಭಿವಾದಯ ॥ ೫೬॥

ವಿಸೃಜ್ಯ ಸರ್ವರತ್ನಾನಿ ಪ್ರಿಯಾ ಯಾಶ್ಚ ವರಾಂಗನಾಃ ।
ಐಶ್ವರ್ಯಂ ಚ ವಿಶಾಲಾಯಾಂ ಪೃಥಿವ್ಯಾಮಪಿ ದುರ್ಲಭಮ್ ॥ ೫೭॥

ಪಿತರಂ ಮಾತರಂ ಚೈವ ಸಂಮಾನ್ಯಾಭಿಪ್ರಸಾದ್ಯ ಚ ।
ಅನುಪ್ರವ್ರಜಿತೋ ರಾಮಂ ಸುಮಿತ್ರಾ ಯೇನ ಸುಪ್ರಜಾಃ ॥ ೫೮॥

ಅನುಕೂಲ್ಯೇನ ಧರ್ಮಾತ್ಮಾ ತೃಷ್ಣಾಂ ಸುವಿಮನಸ್ತಮಮ್ ।
ಅನುಗಚ್ಛತಿ ಕಾಕುತ್ಸ್ಥಂ ಭ್ರಾತರಂ ಪಾಲಯನ್ ವನೇ ॥ ೫೯॥

ಸಿಂಹಸ್ಕಂಧೋ ಮಹಾಬಾಹುರ್ಮನಸ್ವೀ ಪ್ರಿಯದರ್ಶನಃ ।
ಪಿತೃವದ್ವರ್ತತೇ ರಾಮೇ ಮಾತೃವನ್ನಾಂ ಸಮಾಚರನ್ ॥ ೬೦॥

ಪ್ರಿಯಮಾಣಾಂ ತದಾ ವೀರೋ ನ ತು ಮಾಂ ವೇದ ಲಕ್ಷ್ಮಣಃ ।
ಧೃಷ್ಟಾಚೇವೀ ಲಕ್ಷ್ಮಿವಾನ್ ಶಕ್ತೋ ನ ಬಹುಭಾಷಿತಾ ॥ ೬೧॥

ರಾಜಪುತ್ರಃ ಪ್ರಿಯಃ ಶ್ರೇಷ್ಠಃ ಸದೃಶಃ ಶ್ವಶುರಸ್ಯ ಮೇ ।
ಮತ್ತಃ ಪ್ರಿಯತರೋ ನಿತ್ಯಂ ಭ್ರಾತಾ ರಾಮಸ್ಯ ಲಕ್ಷ್ಮಣಃ ॥ ೬೨॥

ನಿಯುಕ್ತೋ ಧುರಿ ಯಸ್ಯಾಂ ತು ತಾಮುದ್ವಹತಿ ವೀರ್ಯವಾನ್ ।
ಯಂ ದೃಷ್ಟ್ವಾ ರಾಘವೋ ನೈವ ವೃತ್ತಮಾರ್ಯಮನುಸ್ಮರೇತ್ ॥ ೬೩॥

ಸ ಮಮಾರ್ಥಾಯ ಕುಶಲಂ ವಕ್ತವ್ಯೋ ವಚನಾನ್ಮಮ ।
ಮೃದುರ್ನಿತ್ಯಂ ಶುಚಿರ್ದಕ್ಷಃ ಪ್ರಿಯೋ ರಾಮಸ್ಯ ಲಕ್ಷ್ಮಣಃ ॥ ೬೪॥

ಹನುಮಂತನು ಹೀಗೆ ಹೇಳಿದ ಬಳಿಕ ದಿವ್ಯಭಾಮಿನಿಯಂತೆ ಒಪ್ಪುತ್ತಿದ್ದು ಶೋಕಸಂತಪ್ತಳಾದ ಸೀತಾದೇವಿಯು ಆ ವಾನರ ಶ್ರೇಷ್ಠನ ಬಳಿ ಪುನಃ ಹೇಳತೊಡಗಿದಳು.

"ಮನಸ ಶೀಲಳಾದ ಕೌಸಲ್ಯೆಯು ಲೋಕಕ್ಕೆ ಒಡೆಯನಾದ ಶ್ರೀರಾಮನನ್ನು ಹಡೆದಿದ್ದಳೋ, ಅವನಿಗೆ ನನ್ನ ಪರವಾಗಿ ಕುಶಲವನ್ನು ಕೇಳು. ಹಾಗೆಯೇ ನನ್ನ ಸಲುವಾಗಿ ತಲೆಬಾಗಿ ನಮಸ್ಕರಿಸು. ॥೫೫॥

ದಿವ್ಯ ಪುಷ್ಪಮಾಲಿಕೆಗಳನ್ನೂ, ವಿವಿಧ ಭೋಗ್ಯ ವಸ್ತುಗಳನ್ನೂ, ಪ್ರೀತಿಪಾತ್ರಳಾದ ಭಾರ್ಯೆಯನ್ನೂ, ಅವಳ ಸುಖವನ್ನೂ, ವಿಶಾಲವಾದ ಭೂಮಂಡಲದಲ್ಲಿ ದುರ್ಲಭವಾದ ಐಶ್ವರ್ಯವನ್ನು ತ್ಯಜಿಸಿ, ತಂದೆ-ತಾಯಿಯರನ್ನು ಗೌರವಿಸಿ, ಅವರ ಅನುಗ್ರಹ-ಆಶೀರ್ವಾದಗಳನ್ನು ಹೊಂದಿ, ತನ್ನ ತಾಯಿಯಾದ ಸುಮಿತ್ರಾದೇವಿಗೆ ಕೀರ್ತಿಯನ್ನು ತಂದುಕೊಟ್ಟ ಲಕ್ಷ್ಮಣನು ಶ್ರೀರಾಮನನ್ನು ಅನುಸರಿಸಿ, ವನವಾಸಕ್ಕಾಗಿ ಬಂದನು. ಧರ್ಮಾತ್ಮನಾದ ಅವನು ದೊರೆತ ಸುವಿಜೀವನವನ್ನು ಪರಿತ್ಯಜಿಸಿ, ಅಣ್ಣನಾದ ಶ್ರೀರಾಮನಿಗೆ ವನದಲ್ಲಿ ಅನುಕೂಲವಾದ ಸೇವೆಗಳನ್ನು ಮಾಡುತ್ತಾ ಅವನೊಂದಿಗೆ ನಡೆದನು. ॥೫೬-೫೭॥ ಅವನು ಸಿಂಹದಂತೆ ಭುಜಬಲವುಳ್ಳವನು. ದೀರ್ಘಬಾಹುವು, ಬುದ್ಧಿವಂತನೂ, ಕಡುಚೆಲುವನೂ ಆಗಿರುವನು. ಲಕ್ಷ್ಮಣನು ಶ್ರೀರಾಮನನ್ನು ತಂದೆಯೆಂದೂ, ನನ್ನನ್ನು ತಾಯಿಯೆಂದೂ ಭಾವಿಸಿ ನಡೆದುಕೊಳ್ಳುವನು. ರಾವಣನು ನನ್ನನ್ನು ಅಪಹರಿಸಿ, ಇಲ್ಲಿಗೆ ತಂದಿರುವ ವಿಷಯವನ್ನು ತಿಳಿಯನು. ಅವನು ಹಿರಿಯರ ಸೇವೆ ಮಾಡುವವನು. ಶುಭಲಕ್ಷಣಗಳಿಂದೊಡಗೂಡಿದವನೂ, ಕೀರ್ತಿಶಾಲಿಯೂ, ಮಿತಭಾಷಿಯೂ ಆಗಿರುವನು. ಆ ರಾಜಕುಮಾರನು ಶ್ರೀರಾಮನಿಗೆ ಅತ್ಯಂತ ಪ್ರೀತಿಪಾತ್ರನು. ನನ್ನ ರಕ್ಷಣೆಯ ವಿಷಯದಲ್ಲಿ ಮಾವನವರಾದ ದಶರಥ ಮಹಾರಾಜರಂತೆ ಇರುವವನು. ವನವಾಸದ ಸಮಯದಲ್ಲಿ ಅವನು ಗೈದ ಸೇವೆಯಿಂದ ನನಗೆ ಅತ್ತೆ-ಮಾವಂದಿರ ಕೊರತೆಯೇ ಕಂಡು ಬಂದಿಲ್ಲ. ॥೫೮-೬೦॥

ಸೋದರನಾದ ಲಕ್ಷ್ಮಣನು ಶ್ರೀರಾಮನಿಗೆ ನನಗಿಂತಲೂ ಹೆಚ್ಚಾದ ಪ್ರಿಯನಾದವನು. ಒಪ್ಪಿಸಿದ ಪ್ರತಿಯೊಂದು ಕಾರ್ಯವನ್ನು ಆ ವೀರನು ಆಗಲೇ ದಕ್ಷನಾಗಿ ನೆರವೇರಿಸುವವನು. ಅವನನ್ನು ನೋಡಿ ಶ್ರೀರಾಮನು ಸ್ವರ್ಗಸ್ಥನಾದ ತನ್ನ ತಂದೆಯ ನೆನಪನ್ನೂ ಕೂಡ ಮರೆತು ಹೋಗುವನು. ಅಂತಹ ಲಕ್ಷ್ಮಣನಿಗೆ ನಾನು ಕೇಳಿದೆನೆಂದು ಕ್ಷೇಮಸಮಾಚಾರವನ್ನು ನನ್ನ ಮಾತಿನಲ್ಲೇ ತಿಳಿಸು. ॥೬೧-೬೨॥ ಎಲೈ ವಾನರಶ್ರೇಷ್ಠಾ! ಶ್ರೀರಾಮನಿಗೆ ಪ್ರಿಯನೂ, ವಿಧೇಯನೂ, ಯಾವಾಗಲೂ ಮೃದುಸ್ವಭಾವುಳ್ಳವನೂ, ಪವಿತ್ರವಾಗಿ ಇರುವವನೂ, ಸರ್ವಸಮರ್ಥನೂ ಆದ ಲಕ್ಷ್ಮಣನು ನನ್ನ ದುಃಖಗಳನ್ನು ಪರಿಹರಿಸುವುದಕ್ಕಾಗಿ, ಶ್ರೀರಾಮನು ನನ್ನನ್ನು ಇಲ್ಲಿಂದ ಕರೆದುಕೊಂಡು

ಯಥಾ ಹಿ ವಾನರಶ್ರೇಷ್ಠ ದುಃಖಕ್ಷಯಕರೋ ಭವೇತ್ ।
ತ್ವಮ್ಮಿನ್ ಕಾರ್ಯನಿರ್ಯೋಗೇ ಪ್ರಮಾಣಂ ಕಪಿಸತ್ತಮ ॥ ೬೫॥

ರಾಘವಸ್ಯಾತ್ಮಮಾರಂಭಾನ್ಯಂ ಯತ್ನಪರೋ ಭವೇತ್ ।
ಇದಂ ಬ್ರೂಯಾಶ್ಚ ಮೇ ನಾಥಂ ಶೂರಂ ರಾಮಂ ಪುನಃ ಪುನಃ ॥ ೬೬॥

ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ।
ಊರ್ಧ್ವಂ ಮಾಸಾನ್ನ ಜೀವೇಯಂ ಸತ್ಯೇನಾಹಂ ಬ್ರವೀಮಿ ತೇ ॥ ೬೭॥

ರಾವಣೇನೋಪರುದ್ಧಾಂ ಮಾಂ ನಿಕೃತ್ಯಾ ಪಾಪಕರ್ಮಣಾ ।
ತ್ರಾತುಮರ್ಹಸಿ ವೀರ ತ್ವಂ ಪಾತಾಲಾದಿವ ಕೌಶಿಕಮ್* ॥ ೬೮॥

ತತೋ ವಸ್ತ್ರಗತಂ ಮುಖ್ಯಾ ದಿವ್ಯಂ ಚೂಡಾಮಣಿಂ ಶುಭಮ್ ।
ಪ್ರದದೌ ರಾಘವಾಯೇತಿ ಸೀತಾ ಹನುಮತೇ ತದಾ ॥ ೬೯॥

ಪ್ರತಿಗೃಹ್ಯ ತತೋ ವೀರೋ ಮಣಿರತ್ನಮನುತ್ತಮಮ್ ।
ಅಂಗುಲ್ಯಾ ಯೋಜಯಾಮಾಸ ನ ಹ್ಯಸ್ಯ ಪ್ರಾಭವದ್ಬಾಹುಜಃ ॥ ೭೦॥

ಮಣಿರತ್ನಂ ಕಪಿವರಃ ಪ್ರತಿಗೃಹ್ಯಾಭಿವಾದ್ಯ ಚ ।
ಸೀತಾಂ ಪ್ರದಕ್ಷಿಣಂ ಕೃತ್ವಾ ಪ್ರಣತಃ ಪಾರ್ಶ್ವತಃ ಸ್ಥಿತಃ ॥ ೭೧॥

ಹರ್ಷೇಣ ಮಹತಾ ಯಕ್ತಃ ಸೀತಾದರ್ಶನಜೇನ ಸಃ ।
ಹೃದಯೇನ ಗತೋ ರಾಮಂ ಶರೀರೇಣ ತು ವಿಷ್ಠಿತಃ ॥ ೭೨॥

ಮಣಿವರಮುಪಗೃಹ್ಯ ತಂ ಮಹಾರ್ಹಂ
ಜನಕನೃಪಾತ್ಮಜಯಾ ಧೃತಂ ಪ್ರಭಾವಾತ್ ।
ಗಿರಿರಿವ ಪವನಾವಧೂತಮುಕ್ತಃ
ಸುಮಿತಮನಾಃ ಪ್ರತಿಪಂಕ್ರಮಂ ಪ್ರಪೇದೇ ॥ ೭೩॥

ಹೋಗುವುದಕ್ಕಾಗಿ ನೀನೇ ಪ್ರೇರೇಪಿಸಬೇಕು. ಈ ಕಾರ್ಯನಿರ್ವಹಣೆಗಾಗಿ ನೀನೇ ದಕ್ಷನಾಗಿರುವೆ. ॥೬೫-೬೬॥

ಮಹಾವೀರನೂ, ನನ್ನ ಸ್ವಾಮಿಯೂ ಆದ ಶ್ರೀರಾಮನಿಗೆ ಪದೇ-ಪದೇ ಈ ವಿಷಯಗಳನ್ನೂ ಸರಿಯಾಗಿ ತಿಳಿಸು. ದಶರಥಾತ್ಮಜನೇ! ಒಂದು ತಿಂಗಳವರೆಗೆ ನಾನು ಪ್ರಾಣಧಾರಣ ಮಾಡಿಕೊಂಡಿರುತ್ತೇನೆ. ತಿಂಗಳು ಮುಗಿದಾಕ್ಷಣ ಒಂದು ಕ್ಷಣವೂ ಕೂಡ ನಾನು ಜೀವಿಸಿರುವುದಿಲ್ಲ, ಇದು ಸತ್ಯವಾದುದು. ಕ್ರೂರಕರ್ಮಿಯಾದ ರಾವಣನು ನನ್ನನ್ನು ಹೋಸದಿಂದ ಅಪಹರಿಸಿ, ನಿರ್ಬಂಧದಲ್ಲಿ ಇಟ್ಟಿರುವನು. ಅಂತಹ ಮಹಾವೀರನೇ! ಪಾತಾಳದಲ್ಲಿದ್ದ ಇಂದ್ರನ ಐಶ್ವರ್ಯವನ್ನು ನಾರಾಯಣನು ಕಾಪಾಡಿದಂತೆ* ನನ್ನನ್ನು ರಕ್ಷಿಸಲು ನೀನೇ ಸಮರ್ಥನಾಗಿರುವೆ. ॥೬೫-೬೬॥

ಸೀತಾದೇವಿಯು ಹನುಮಂತನ ಬಳಿಯಲ್ಲಿ ಹೀಗೆ ಹೇಳಿದ ಬಳಿಕ, ಶುಭವ್ರದವಾದ, ದಿವ್ಯವಾದ ತನ್ನ ಸೀರೆಯ ಸೆರಗಿನಲ್ಲಿ ಕಟ್ಟಿಟ್ಟಿದ್ದ ಚೂಡಾಮಣಿಯನ್ನು ಹೊರತೆಗೆದು "ಶ್ರೀರಾಮನಿಗೆ ಇದನ್ನು ಆರ್ಪಿಸು" ಎಂದು ಹೇಳಿ ಆಂಜನೇಯನಿಗೆ ಕೊಟ್ಟಳು.॥೬೭॥

ಆಗ ವೀರನಾದ ಹನುಮಂತನು ಅತ್ಯುತ್ತಮವಾದ ಆ ಚೂಡಾಮಣಿಯನ್ನು ಸ್ವೀಕರಿಸಿ, ಅದನ್ನು ತನ್ನ ಕಿರಿಬೆರಳಲ್ಲಿ ಇಟ್ಟುಕೊಂಡನು. ಬಳಿಕ ಸೀತಾದೇವಿಗೆ ಪ್ರದಕ್ಷಿಣೆ ಬಂದು, ನಮಸ್ಕರಿಸಿ, ವಿನಮ್ರನಾಗಿ ಪಕ್ಕದಲ್ಲಿ ನಿಂತುಕೊಂಡನು.॥೬೮-೬೯॥

ಸೀತಾದೇವಿಯ ದರ್ಶನದಿಂದಾಗಿ ಹನುಮಂತನಿಗೆ ಅಪಾರವಾದ ಹರ್ಷವುಂಟಾಯಿತು. ಆವನ ಶರೀರ ಮಾತ್ರ ಅಲ್ಲಿದ್ದಿತು. ಮನಸ್ಸು ಆಗಲೇ ಶ್ರೀರಾಮನ ಬಳಿಗೆ ಹೋಗಿದ್ದಿತು. ॥೭೦॥

ಇಷ್ಟರವರೆಗೆ ಸೀತಾದೇವಿಯ ಶರೀರದಲ್ಲಿ ಅಲಂಕೃತವಾಗಿದ್ದ ಅಮೂಲ್ಯವಾದ ಆ ಚೂಡಾಮಣಿಯನ್ನು ಆಂಜನೇಯನು ಪಡೆದುಕೊಂಡನು. ಅದರ ಪ್ರಭಾವದಿಂದ, ಮಹಾವಾಯುವಿನಿಂದ ಕಂಪಿಸುತ್ತಿದ್ದ ಪರ್ವತವು ಮುಕ್ತವಾದಂತೆ, ಇಷ್ಟರವರೆಗೆ ಅವನಿಗೆ ಇದ್ದ ಆತಂಕಗಳನ್ನು ನೀಗಿ** ಸ್ವಸ್ಥಚಿತ್ತನಾಗಿ ಹಿಂದಿರುಗಲು ಸನ್ನದ್ಧನಾದನು. ॥೭೧-೭೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಸುಂದರಕಾಂಡೇ ಅಷ್ಟತ್ರಿಂಶಃ ಸರ್ಗಃ ॥ ೩೮ ॥

ಮಹರ್ಷಿವಾಲ್ಮೀಕಿ ವಿರಚಿತ ಆದಿಕಾವ್ಯವಾದ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೆಂಟನೆಯ ಸರ್ಗವು ಮುಗಿಯಿತು.

* * *

* ಹಿಂದೆ ವೃತ್ರಾಸುರನನ್ನು ಕೊಂದ ಕಾರಣದಿಂದ ಇಂದ್ರನು ಬ್ರಹ್ಮಹತ್ಯಾ ಪಾಪಕ್ಕೆ ಗುರಿಯಾದನು. ಆದರಿಂದಾಗಿ ಇಂದ್ರನ ಐಶ್ವರ್ಯವು ಪಾತಾಳವನ್ನು ಸೇರಿತು. ದೇವತೆಗಳೂ, ಮಹಾವಿಷ್ಣು ಸೇರಿ ವೈಷ್ಣವ ಅಶ್ವಮೇಧ ಯಾಗವನ್ನು ನಡೆಸಿ ಇಂದ್ರನನ್ನು ಪವಿತ್ರರಾಗಿಸಿದರು. ಮಹಾವಿಷ್ಣುವು ಪಾತಾಳದಲ್ಲಿದ್ದ ಇಂದ್ರನ ಸಂಪತ್ತನ್ನು ತಂದು ಅವನಿಗೆ ಒಪ್ಪಿಸಿದನು.

** ಧೈರ್ಯಶಾಲಿಯಾದ ಹನುಮಂತನಿಗೆ ಇದಿರಾದ ಆತಂಕಗಳು -
ಸಮುದ್ರ ತೀರವನ್ನು ಸೇರಿದಾಗ ಅನ್ವೇಷಣ ಅವಧಿಯು ಮುಗಿದಿದ್ದರಿಂದ ಸುಗ್ರೀವಾಜ್ಞೆಯಿಂದಾಗಿ ಮರಣಭಯ. ಸಮುದ್ರ ಲಂಘನದ ಹೊತ್ತಿನಲ್ಲಿ ಸುರಸಾ-ಸಿಂಹಿಕಾ ಇವರ ಆಡ್ಡಿಗಳು. ಲಂಕೆಯಲ್ಲಿ ಸೀತೆಯನ್ನು ಹುಡುಕುತ್ತಿರುವಾಗ ಅವಳು ಕಾಣದಿದ್ದಾಗ ದುಃಖಿತನಾಗಿ, ಪ್ರಾಣತ್ಯಾಗಕ್ಕೆ ಸಿದ್ಧನಾದುದು. ಸೀತಾದೇವಿಯ ದರ್ಶನ ಪಡೆದರೂ ಅವಳು ತನ್ನನ್ನು ರಾವಣನೆಂದು ಭಾವಿಸಿ ತನ್ನ ಜೊತೆ ಮಾತಾಡದಿದ್ದುದು- ಹೀಗೆ ಪ್ರಬಲವಾದ ಆತಂಕಗಳನ್ನು ದಾಟಿ, ಅವಳಿಗೆ ರಾಮಮುದ್ರಿಕೆಯನ್ನಿತ್ತು ಅವಳಿಂದ ಚೂಡಾಮಣಿಯನ್ನು ಪಡೆದು ಈಗ ಅವನ ಮನಸ್ಸು ಸಮಾಧಾನ ಹೊಂದಿತು.

ಮೂವತ್ತೊಂಭತ್ತನೆಯ ಸರ್ಗ

ಶ್ರೀರಾಮನಿಗೆ ಸೀತಾಸಂದೇಶ, ಆಂಜನೇಯನು ಆಕೆಯನ್ನು ಸಮಾಧಾನಪಡಿಸಿದ್ದು, ಸಮುದ್ರವನ್ನು ದಾಟಿಕೊಂಡು ಬರುವುದರಲ್ಲಿ ಸಂದೇಹಿಸಿದ ಸೀತಾದೇವಿಗೆ ಮಾರುತಿಯು ವಾನರನಾಯಕರ ಪರಾಕ್ರಮವನ್ನು ವಿವರಿಸಿ ಹೇಳಿದುದು –

ಮಣಿಂ ದತ್ತ್ವಾ ತತಃಸೀತಾ ಹನುಮಂತಮಥಾಽಬ್ರವೀತ್ ।
ಅಭಿಜ್ಞಾನಮಭಿಜ್ಞಾತಂ ಏತದ್ಧಿ ಮಮ ತತ್ತ್ವತಃ ॥ ೧ ॥

ಮಣಿಂ ದೃಷ್ಟ್ವಾ ತು ರಾಮೋ ವೈ ತ್ರ್ಯಾಣಾಂ ಸಂಸ್ಮರಿಷ್ಯತಿ ।
ವೀರೋ ಜನನ್ಯಾ ಮಮ ಚ ರಾಜ್ಞೋ ದಶರಥಸ್ಯ ಚ ॥ ೨ ॥

ಸ ಭೂಯಸ್ತ್ವಂ ಸಮುತ್ಸಾಹೆ ಚೋದಿತೋ ಹರಿಸತ್ತಮ ।
ಅಸ್ಮಿನ್ ಕಾರ್ಯಸಮಾರಂಭೇ ಪ್ರಚಿಂತಯ ಯದುತ್ತರಮ್ ॥ ೩ ॥

ತ್ವಮಸ್ಮಿನ್ ಕಾರ್ಯನಿರ್ಯೋಗೇ ಪ್ರಮಾಣಂ ಹರಿಸತ್ತಮ ।
ಹನುಮನ್ ಯತ್ನಮಾಸ್ಥಾಯ ದುಃಖಿಕ್ಷಯಕರೋ ಭವ ॥ ೪ ॥

ತಸ್ಯ ಚಿಂತಯತೋ ಯತ್ನೋ ದುಃಖಿಕ್ಷಯಕರೋ ಭವೇತ್ ।
ಸ ತಥೇತಿ ಪ್ರತಿಜ್ಞಾಯ ಮಾರುತಿರ್ಭೀಮವಿಕ್ರಮಃ ॥ ೫ ॥

ಶಿರಸಾ ವಂದ್ಯ ವೈದೇಹೀಂ ಗಮನಾಯೋಪಚಕ್ರಮೇ ।
ಜ್ಞಾತ್ವಾ ಸಂಹೃಷ್ಟಿತಂ ದೇವೀ ವಾನರಂ ಮಾರುತಾತ್ಮಜಮ್ ॥ ೬ ॥

ಬಾಷ್ಪಗದ್ಗದಯಾ ವಾಚಾ ಮೈಥಿಲೀ ವಾಕ್ಯಮಬ್ರವೀತ್ ।
ಹನುಮನ್ ಕುಶಲಂ ಬ್ರೂಯಾಃ ಸಹಿತೌ ರಾಮಲಕ್ಷ್ಮಣೌ ॥ ೭ ॥

ಸುಗ್ರೀವಂ ಚ ಸಹಾಮಾತ್ಯಂ ಸರ್ವಾನ್ ವೃದ್ಧಾಂಶ್ಚ ವಾನರಾನ್ ।
ಬ್ರೂಯಾಸ್ತ್ವಂ ವಾನರಶ್ರೇಷ್ಠ ಕುಶಲಂ ಧರ್ಮಸಂಹಿತಮ್ ॥ ೮ ॥

ಯಥಾ ಸ ಚ ಮಹಾಬಾಹುರ್ಮಾಂ ತಾರಯತಿ ರಾಘವಃ ।
ಅಸ್ಮಾದ್ದುಃಖಾಂಬುಸಂರೋಧಾತ್ತ್ವಂ ಸಮಾಧಾತುಮರ್ಹಸಿ ॥ ೯ ॥

ಜೀವಂತೀಂ ಮಾಂ ಯಥಾ ರಾಮಃ ಸಂಭಾವಯತಿ ಕೀರ್ತಿಮಾನ್ ।
ತತ್ತಥಾ ಹನುಮನ್ ವಾಚ್ಯಂ ವಾಚಾ ಧರ್ಮ ಮವಾಪ್ನುಹಿ ॥ ೧೦ ॥

ನಿತ್ಯಮುತ್ಸಾಹಯುಕ್ತಾಶ್ಚ ವಾಚಃ ಶ್ರುತ್ವಾ ತ್ವದೇರಿತಾಃ ।
ವರ್ಧಿಷ್ಯತೇ ದಾಶರಥೇಃ ಪೌರುಷಂ ಮದವಾಪ್ತಯೇ ॥ ೧೧ ॥

ಚೂಡಾಮಣಿಯನ್ನು ಕೊಟ್ಟ ಬಳಿಕ ಸೀತಾದೇವಿಯು ಹನುಮಂತನ ಬಳಿ ಹೀಗೆ ಹೇಳಿದಳು - ಮಾರುತೀ! ನಾನೀಗ ಕೊಟ್ಟರುವ ಗುರುತು ಶ್ರೀರಾಮನು ಚೆನ್ನಾಗಿ ಗುರ್ತಿಸುವನು. ॥೧॥ ಈ ಚೂಡಾಮಣಿಯನ್ನು ಕೊಟ್ಟೊಡನೆಯೇ ವೀರವರನಾದ ಶ್ರೀರಾಮನು ನನ್ನ ತಾಯಿಯನ್ನೂ, ನನ್ನ ತಂದೆಯಾದ ಜನಕಮಹಾರಾಜನನ್ನೂ, ದಶರಥಮಹಾರಾಜರನ್ನೂ ಸ್ಮರಿಸಿಕೊಳ್ಳುವನು. ಹಾಗೆಯೇ ನನ್ನನ್ನೂ ನೆನೆಸಿಕೊಳ್ಳುವನು. ॥೨॥

ಹರಿಶ್ರೇಷ್ಠನೇ! ಮರಳಿ ಉತ್ಸಾಹವನ್ನು ಪಡೆದ ನೀನು ಈ ಕಾರ್ಯಸಿದ್ಧಿಗಾಗಿ ಮುಂದೆ ಮಾಡಬೇಕಾದ ಕರ್ತವ್ಯವನ್ನು ಆಲೋಚಿಸು. ಎಲೈ ಕಪಿಶ್ರೇಷ್ಠರಾ! ಈ ಕಾರ್ಯವನ್ನು ನಿರ್ವಹಿಸಲು ನೀನೇ ಶಕ್ತವನಾದವನು. ಮಾರುತಿ! ಸೊಂಟಕಟ್ಟಿ ನನ್ನ ಬಿಡುಗಡೆಗಾಗಿ ಪ್ರಯತ್ನಶೀಲನಾಗಿ ನನ್ನ ದುಃಖಿವನ್ನು ನಿವಾರಿಸು. ॥೩-೪॥ ನೀನು ಚೆನ್ನಾಗಿ ಆಲೋಚಿಸಿ ಪ್ರಯತ್ನಿಸಿದರೆ ನಿಜವಾಗಿ ನನ್ನ ದುಃಖಿಗಳು ದೂರವಾಗುವುವು. ಸೀತೆಯ ಈ ಮಾತನ್ನು ಕೇಳಿದ ಬಳಿಕ ಭಯಂಕರ ಪರಾಕ್ರಮಿಯಾದ ಆ ಮಾರುತಿಯು ಹಾಗೇ ಮಾಡುವೆನು ಎಂದು ಪ್ರತಿಜ್ಞೆ ಮಾಡಿ ಅವಳಿಗೆ ಶಿರಬಾಗಿ ಪ್ರಣಾಮಗೈದು ಪ್ರಯಾಣಕ್ಕೆ ಸಿದ್ಧನಾದನು.

ವಾಯುಸುತನಾದ ಹನುಮಂತನು ಪ್ರಯಾಣಮಾಡಲು ಹೊರಟಿರುವುದನ್ನು ಕಂಡು ಸೀತಾದೇವಿಯು ಕಣ್ಣೀರು ಸುರಿಸುತ್ತಾ ಗದ್ಗದ ಸ್ವರದಿಂದ ಇಂತೆಂದಳು. ॥೬॥

''ಎಲೈ ವಾನರ ಶ್ರೇಷ್ಠನೇ! ಯಾವಾಗಲೂ ಜೊತೆಯಲ್ಲಿಯೇ ಇರುವ ರಾಮಲಕ್ಷ್ಮಣರಿಗೂ, ಅಮಾತ್ಯರಿಂದೊಡಗೂಡಿದ ಸುಗ್ರೀವನಿಗೂ, ನಾನು ಅವರ ಕ್ಷೇಮ ಸಮಾಚಾರವನ್ನು ಕೇಳಿದೆನೆಂದು ಹೇಳು. ಕಪಿಪುಂಗವನೇ! ಹಾಗೆಯೇ ವೃದ್ಧರಾದ ವಾನರ ಭಲ್ಲೂಕರೆಲ್ಲರಿಗೂ, ಧರ್ಮಪುರಸ್ಸರವಾಗಿ ಅವರವರ ಕುಶಲವನ್ನು ಕೇಳಿದೆನೆಂದು ಹೇಳು. ॥೭-೮॥

ಆಜಾನುಬಾಹುವಾದ ಶ್ರೀರಾಮನು ನಿನ್ನ ಮಾತನ್ನು ಕೇಳಿದೊಡನೆ ನನ್ನನ್ನು ಇಲ್ಲಿಂದ ಪಾರುಮಾಡುವಂತಾಗಬೇಕು. ನನ್ನನ್ನು ಈ ದುಃಖಿಸಾಗರದಿಂದ ಉದ್ಧರಿಸುವಂತೆ ಮಾಡಲು ನೀನೇ ಸಮರ್ಥನಾಗಿರುವೆ. ॥೯॥ ಕೀರ್ತಿವಂತನಾದ ಶ್ರೀರಾಮನು ನಾನಿನ್ನು ಜೀವಿಸಿರುವಾಗಲೇ ನನ್ನನ್ನು ಪಡೆದುಕೊಳ್ಳಲು ಸಮಾಲೋಚಿಸುವಂತೆ ಅವನಿಗೆ ಹೇಳ ಬೇಕು. ಹಾಗೆ ಮಾಡುವುದರಿಂದ ನೀನು ಪುಣ್ಯಶಾಲಿ ಯಾಗುವೆ. ॥೧೦॥ ಅನವರತನಾಗಿ ಉತ್ಸಾಹಗೊಳಿಸುವಂತಹ ಈ ನನ್ನ ಮಾತುಗಳನ್ನು ಕೇಳುವುದರಿಂದ ನನ್ನನ್ನು ಹೊಂದುವ ಸಲುವಾಗಿ ಶ್ರೀರಾಮನ ಪೌರುಷವು ವರ್ಧಿಸುತ್ತದೆ. ॥೧೧॥

ಮತ್ಸಂದೇಶಯುತಾ ವಾಚಃ ತ್ವತ್ತಃ ಶ್ರುತ್ವೈವ ರಾಘವಃ ।
ಪರಾಕ್ರಮವಿಧಿಂ ವೀರೋ ವಿಧಿವತ್ಸಂವಿಧಾಸ್ಯತಿ ॥ ೧೨ ॥

ಸೀತಾಯಾ ವಚನಂ ಶ್ರುತ್ವಾಹನುಮಾನ್ ಮಾರುತಾತ್ಮಜಃ ।
ಶಿರಸ್ಯಂಜಲಿಮಾಧಾಯ ವಾಕ್ಯಮುತ್ತರಮಬ್ರವೀತ್ ॥ ೧೩ ॥

ಕ್ಷಿಪ್ರಮೇಷ್ಯತಿ ಕಾಕುತ್ಥೋ ಹರ್ಯೃಕ್ಷಪ್ರವರೈರ್ವೃತಃ ।
ಯಸ್ತೇ ಯುಧಿ ವಿಜಿತ್ಯಾರೀನ್ ಶೋಕಂ ವ್ಯಪನಯಿಷ್ಯತಿ ॥ ೧೪ ॥

ನ ಹಿ ಪಶ್ಯಾಮಿ ಮರ್ತ್ಯೇಷು ನಾಽಸುರೇಷ್ವಸುರೇಷು ವಾ ।
ಯಸ್ತಸ್ಯ ಕ್ಷಿಪತೋ ಬಾಣಾನ್ ಸ್ಥಾತುಮುತ್ಸಹತೇಽಗ್ರತಃ ॥ ೧೫ ॥

ಅಪ್ಯರ್ಕಮಪಿ ಪರ್ಜನ್ಯಂ ಅಪಿ ವೈವಸ್ವತಂ ಯಮಮ್ ।
ಸ ಹಿ ಸೋಢುಂ ರಣೇ ಶಕ್ತಸ್ತವ ಹೇತೋರ್ವಿಶೇಷತಃ ॥ ೧೬ ॥

ಸ ಹಿ ಸಾಗರಪರ್ಯಂತಾಂ ಮಹೀಂ ಶಾಸಿತುಮೀಹತೇ ।
ತ್ವನ್ನಿಮಿತ್ತೋ ಹಿ ರಾಮಸ್ಯ ಜಯೋ ಜನಕನಂದಿನಿ ॥ ೧೭ ॥

ತಸ್ಯ ತದ್ವಚನಂ ಶ್ರುತ್ವಾ ಸಮ್ಯಕ್ ಸತ್ಯಂ ಸುಭಾಷಿತಮ್ ।
ಜಾನಕೀ ಬಹುಮೇನೇಽಥ ವಚನಂ ಚೇದಮಬ್ರವೀತ್ ॥೧೮॥

ತತಸ್ತಂ ಪ್ರಸ್ಥಿತಂ ಸೀತಾ ವೀಕ್ಷಮಾಣಾ ಪುನಃ ಪುನಃ ।
ಭರ್ತೃಸ್ನೇಹಾನ್ವಿತಂ ವಾಕ್ಯಂ ಸೌಹಾರ್ದಾದನುಮಾನಯತ್ ॥೧೯

ಯದಿ ವಾ ಮನ್ಯಸೇ ವೀರ ವಸೈಕಾಹಮರಿಂದಮ ।
ಕಸ್ಮಿನ್ ಚಿತ್ ಸಂವೃತೇ ದೇಶೇ ವಿಶ್ರಾಂತಃ ಶ್ವೋ ಗಮಿಷ್ಯಸಿ ॥

ಮಮ ಚೈವಾಲ್ಪಭಾಗ್ಯಾಯಾಃ ಸಾನ್ನಿಧ್ಯಾತ್ತವ ವಾನರ ।
ಅಸ್ಯ ಶೋಕಸ್ಯ ಮಹತೋ ಮುಹೂರ್ತಂ ಮೋಕ್ಷಣಂ ಭವೇತ್॥

ಗತೇ ಹಿ ಹರಿಶಾರ್ದೂಲ ಪುನರಾಗಮನಾಯ ತು ।
ಪ್ರಾಣಾನಾಮಪಿ ಸಂದೇಹೋ ಮಮ ಸ್ಯಾನ್ನಾತ್ರ ಸಂಶಯಃ॥೨೨

ತವಾದರ್ಶನಜಃ ಶೋಕೋ ಭೂಯೋ ಮಾಂ ಪರಿತಾಪಯೇತ್।
ದುಃಖಾದ್ದುಃಖಪರಾಮೃಷ್ಟಾಂ ದೀಪಯನ್ನಿವ ವಾನರ ॥ ೨೩ ॥

ಸಂದೇಶಯುಕ್ತವಾದ ನನ್ನ ಮಾತುಗಳನ್ನು ಕೇಳಿದೊಡನೆಯೇ ರಾಘವನು ತನ್ನ ಪರಾಕ್ರಮವನ್ನು ಪ್ರಕಟಿಸಲು ಯೋಗ್ಯವಾದ ನಿರ್ಣಯವನ್ನು ಕೈಗೊಳ್ಳುವನು. ॥೧೨॥

ಸೀತಾದೇವಿಯು ಹೇಳಿದ ಮಾತುಗಳನ್ನು ಕೇಳಿದ ವಾಯುಸುತನಾದ ಹನುಮಂತನು ವಿನಮ್ರವಾಗಿ ಜೋಡಿಸಿದ ಕೈಗಳನ್ನು ತಲೆಯ ಮೇಲಿಟ್ಟುಕೊಂಡು ಇಂತೆಂದನು - ॥೧೩॥

"ಅಮ್ಮಾ! ಕಾಕುತ್ಸ್ಥನು ವಾನರ-ಭಲ್ಲೂಕ ಯೋಧರಿಂದೊಡಗೂಡಿ ಶೀಘ್ರವಾಗಿ ಇಲ್ಲಿಗೆ ಬರುವನು. ಆ ಸ್ವಾಮಿಯು ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ ನಿನ್ನ ಶೋಕವನ್ನು ಹೋಗಲಾಡಿಸುತ್ತಾನೆ. ॥೧೪॥ ಎಡೆಬಿಡದೆ ಬಾಣಗಳನ್ನು ಪ್ರಯೋಗಿಸುವ ಶ್ರೀರಾಮನನ್ನು ಎದುರಿಸಿ ನಿಲ್ಲಲು ಇಂದಿನವರೆಗೆ ದೇವಾಸುರ ಮನುಷ್ಯರಲ್ಲಿ ಯಾರೂ ಸಮರ್ಥರಿಲ್ಲ. ಮುಂದೆಯೂ ಇರಲಾರರು. ॥೧೫॥ ಆ ಪ್ರಭುವು ರಣರಂಗದಲ್ಲಿ ತೀಕ್ಷ್ಣಕಿರಣಗಳುಳ್ಳ ಸೂರ್ಯನಿರಲೀ, ಇಂದ್ರನಿರಲೀ, ಸೂರ್ಯಪುತ್ರನಾದ ಆ ಯಮನೇ ಆಗಿರಲೀ ಅವರನ್ನು ಎದುರಿಸಲು ಸಮರ್ಥನಾಗಿದ್ದಾನೆ. ಅದರಲ್ಲಿಯೂ ನಿನಗೋಸ್ಕರವೆಂದಾದರೆ ಹೇಳುವುದೇನಿದೆ? ॥೧೬॥ ಸಾಗರಪರ್ಯಂತವಾದ ಭೂಮಂಡಲವನ್ನು ಶಾಸನ ಮಾಡಲು ಅವನು ಸಮರ್ಥನಾಗಿದ್ದಾನೆ. ನಿನ್ನ ನಿಮಿತ್ತವಾಗಿ ಶ್ರೀರಾಮನಿಗೆ ಜಯವು ಸಿದ್ಧಿಸಿಯೇ ತೀರುತ್ತದೆ. ॥೧೭॥

ಜಾನಕಿಯು ಹನುಮಂತನ ಸತ್ಯವೂ, ಸುಂದರವೂ ಆದ ನುಡಿಗಳನ್ನು ಚೆನ್ನಾಗಿ ಆಲಿಸಿ ಕೇಳಿದಳು. ಅವನಲ್ಲಿ ವಿಶೇಷವಾದ ಆದರವನ್ನು ಹೊಂದಿ, ಪತಿಯ ಸ್ನೇಹದಿಂದ ಕೂಡಿದ್ದ ಹನುಮಂತನ ಆ ಮಾತುಗಳನ್ನು ಸೀತೆಯು ಸೌಹಾರ್ದದೊಡನೆ ಪುರಸ್ಕರಿಸಿದಳು. ಪ್ರಯಾಣ ಹೊರಟಿದ್ದ ಆಂಜನೇಯನನ್ನು ಬಾರಿ-ಬಾರಿಗೆ ಅವಲೋಕಿಸುತ್ತಾ ಹೀಗೆ ಹೇಳಿದಳು. ॥೧೮-೧೯॥

ವೀರನೇ! ಉಚಿತವೆಂದು ನೀನು ಭಾವಿಸುವೆಯಾದರೆ ಯಾವುದಾದರೂ ನಿಗೂಢವಾದ ಪ್ರದೇಶದಲ್ಲಿ ಇಂದು ವಿಶ್ರಾಂತಿಯನ್ನು ಪಡೆದು ನಾಳೆಯ ದಿನ ಪ್ರಯಾಣ ಮಾಡಬಹುದು. ॥೨೦॥ ವಾನರೋತ್ತಮಾ! ನಿನ್ನ ಸಾನ್ನಿಧ್ಯದಿಂದಾಗಿ ಮಂದಭಾಗ್ಯಳಾದ ನನ್ನ ಈ ಅಪಾರವಾದ ದುಃಖವು ಮುಹೂರ್ತಕಾಲದವರೆಗಾದರೂ ಕಡಿಮೆಯಾದಂತಾಗುತ್ತದೆ. ನೀನಿಲ್ಲಿ ಇರುವವರೆಗಾದರೂ ನಾನು ಶೋಕವನ್ನು ಮರೆಯುತ್ತೇನೆ. ॥೨೧॥ ಕಪೀಶ್ವರನೇ! ನೀನು ತಿರುಗಿ ಇಲ್ಲಿಗೆ ಬರುವ ತನಕ ನನ್ನ ಪ್ರಾಣಗಳು ಉಳಿಯುವವೋ ಇಲ್ಲವೋ ಎಂಬುದು ಸಂದೇಹಾಸ್ಪದವೇ. ಇದು ಸತ್ಯವಾಗಿದೆ. ॥೨೨॥ ವಾನರೋತ್ತಮಾ! ನಿನ್ನನ್ನು ಪುನಃ ಕಾಣದೇ ಇರುವುದರಿಂದ ನನಗೆ ಉಂಟಾಗುವ ಶೋಕವು ಈ ಹಿಂದೆ ಇದ್ದ ಶೋಕಕ್ಕಿಂತಲೂ ಅಧಿಕವಾಗಿ ನನ್ನನ್ನು ದಹಿಸುತ್ತಾ ಸಂತಾಪಗೊಳಿಸೀತು. ॥೨೩॥

ಅಯಂ ಚ ವೀರ ಸಂದೇಹಸ್ತಿಷ್ಠತೀವ ಮಮಾಗ್ರತಃ ।
ಸುಮಹಾಂಸ್ತತ್ಸಹಾಯೇಷು ಹರ್ಯೃಕ್ಷೇಷು ಹರೀಶ್ವರ ॥ ೨೪ ॥

ಕಥಂ ನು ಖಲು ದುಷ್ಪಾರಂ ತರಿಷ್ಯಂತಿ ಮಹೋದಧಿಮ್ ।
ತಾನಿ ಹರ್ಯೃಕ್ಷಸೈನ್ಯಾನಿ ತೌ ವಾ ನರವರಾತ್ಮಜೌ ॥ ೨೫ ॥

ತ್ರಯಾಣಾಮೇವ ಭೂತಾನಾಂ ಸಾಗರಸ್ಯಾಸ್ಯ ಲಂಘನೇ ।
ಶಕ್ತಿಃ ಸ್ಯಾದ್ವೈನತೇಯಸ್ಯ ತವ ವಾ ಮಾರುತಸ್ಯ ವಾ ॥ ೨೬ ॥

ತದತ್ರಿನ್ ಕಾರ್ಯನಿರ್ಯೋಗೇ ವೀರೈವಂ ದುರತಿಕ್ರಮೇ ।
ಕಿಂ ಶಕ್ಯಸಿ ಸಮಾಧಾನಂ ತ್ವಂ ಹಿ ಕಾರ್ಯವಿದಾಂ ವರಃ ॥ ೨೭ ॥

ಕಾಮಮಸ್ಯ ತ್ವಮೇವೈಕಃ ಕಾರ್ಯಸ್ಯ ಪರಿಸಾಧನೇ ।
ಪರ್ಯಾಪ್ತಃ ಪರವೀರಘ್ನ ಯಶಸ್ಯಸ್ತೇ ಫಲೋದಯಃ ॥ ೨೮ ॥

ಬಲೈಃ ಸಮಗ್ರೈರ್ಯದಿ ಮಾಂ ರಾವಣಂ ಜಿತ್ಯ ಸಂಯುಗೇ ।
ವಿಜಯೀ ಸ್ವಪುರೀಂ ಯಾಯಾತ್ ತತ್ತು ಮೇ ಸ್ಯಾದ್ಯಶಸ್ಕರಮ್ ॥

ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ ।
ಮಾಂ ನಯೇದ್ಯದಿ ಕಾಕುತ್ಸ್ಥಃ ತತ್ ತಸ್ಯ ಸದೃಶಂ ಭವೇತ್ ॥ ೩೦

ತದ್ಯಥಾ ತಸ್ಯ ವಿಕ್ರಾಂತಮನುರೂಪಂ ಮಹಾತ್ಮನಃ ।
ಭವೇದಾಹವಶೂರಸ್ಯ ತಥಾ ತ್ವಮುಪಪಾದಯ ॥ ೩೧॥

ತದರ್ಥೋಪಹಿತಂ ವಾಕ್ಯಂ ಸಹಿತಂ ಹೇತುಸಂಹಿತಮ್ ।
ನಿಶಮ್ಯ ಹನುಮಾನ್ ಶೇಷಂ ವಾಕ್ಯಮುತ್ತರಮಬ್ರವೀತ್ ॥ ೩೨॥

ದೇವಿ ಹರ್ಯೃಕ್ಷಸೈನ್ಯಾನಾಮೀಶ್ವರಃ ಪ್ಲವತಾಂ ವರಃ ।
ಸುಗ್ರೀವಃ ಸತ್ತ್ವಸಂಪನ್ನಃ ತವಾರ್ಥೇ ಕೃತನಿಶ್ಚಯಃ ॥ ೩೩॥

ಸ ವಾನರಸಹಸ್ರಾಣಾಂ ಕೋಟೀಭಿರಭಸಂವೃತಃ ।
ಕ್ಷಿಪ್ರಮೇಷ್ಯತಿ ವೈದೇಹಿ ರಾಕ್ಷಸಾನಾಂ ನಿಬರ್ಹಣಃ ॥ ೩೪॥

ತಸ್ಯ ವಿಕ್ರಮಸಂಪನ್ನಾಃ ಸತ್ತ್ವವಂತೋ ಮಹಾಬಲಾಃ ।
ಮನಸ್ಸಂಕಲ್ಪಸಂಪಾತಾ ನಿದೇಶೇ ಹರಯಃ ಸ್ಥಿತಾಃ ॥ ೩೫॥

ಮಹಾವೀರನಾದ ಕಪೀಶ್ವರಾ! ನಿಮಗೆ ಸಹಾಯಕರಾದ ವಾನರ-ಭಲ್ಲೂಕರ ವಿಷಯದಲ್ಲಿ ನನಗೊಂದು ದೊಡ್ಡ ಸಂದೇಹವು ಮೊದಲಿನಿಂದಲೇ ಇತ್ತು. ॥೨೪॥ ದಾಟಲಶಕ್ಯವಾದ ಈ ಮಹಾಸಮುದ್ರವನ್ನು ಆ ವಾನರ ಭಲ್ಲೂಕರಾಗಲೀ, ಆ ರಾಜಕುಮಾರರಾಗಲೀ, ಹೇಗೆ ದಾಟಬಲ್ಲರು? ॥೨೫॥ ಈ ಸಾಗರವನ್ನು ಲಂಘಿಸಲು ಗುರುತ್ಮಂತ (ಗರುಡ)ನಿಗೆ, ನಿನಗೆ ಮತ್ತು ವಾಯುದೇವರಿಗೆ ಹೀಗೆ ಮೂವರಿಗೆ ಮಾತ್ರ ಸಾಧ್ಯವಾಗಬಹುದು. ॥೨೬॥ ನೀನಾದರೋ ಕಾರ್ಯಸಾಧನೆಯ ರಹಸ್ಯವನ್ನು ತಿಳಿದವರಲ್ಲಿ ಅಗ್ರಗಣ್ಯನು. ಅತಿಕ್ರಮಿಸಲು ದುಃಸ್ಸಾಧ್ಯವಾದ ಈ ಸಮುದ್ರವು ನಡುವಿನಲ್ಲಿರುವುದರಿಂದ ಈ ಕಾರ್ಯದ ಸಾಧನೆಗಾಗಿ ಇರುವ ಉಪಾಯವನ್ನು ನೀನೇ ಕಂಡುಕೊಳ್ಳಬೇಕು. ॥೨೭॥ ಶತ್ರುಸೂದನಾ! ನೀನೊಬ್ಬನೇ ಈ ಎಲ್ಲ ರಾಕ್ಷಸರನ್ನು ಸಂಹರಿಸಿ ನನ್ನನ್ನು ವಿಮೋಚನೆಗೊಳಿಸುವ ಕಾರ್ಯವನ್ನು ಸಾಧಿಸಲು ಸಮರ್ಥನಾಗಿರುವೆ. ಆದರೆ ಹೀಗೆ ಮಾಡುವುದರಿಂದ ವಿಜಯರೂಪವಾದ ಯಶಸ್ಸು ನಿನಗೇ ಬಂದಂತಾಗುತ್ತದೆ. ಶ್ರೀರಾಮನಿಗೆ ಲಭಿಸುವುದಿಲ್ಲ, ಹಾಗಾಗಬಾರದು. ॥೨೮॥ ಶ್ರೀರಾಮನು ಯುದ್ಧದಲ್ಲಿ ರಾವಣನನ್ನೂ, ಆತನ ಸೈನ್ಯವನ್ನು ಜಯಿಸಿ, ಜಯಪತಾಕೆಯನ್ನು ಹಾರಿಸಿ ನನ್ನನ್ನು ತನ್ನ ರಾಜ್ಯಕ್ಕೆ ಕರೆದೊಯ್ದರೆ, ಅದು ಅವನಿಗೂ, ನನಗೂ ಶ್ರೇಯಸ್ಕರವಾದ ಕಾರ್ಯವಾಗುತ್ತದೆ. ॥೨೯॥ ಶತ್ರುಬಲಮರ್ದನನಾದ ನನ್ನ ಸ್ವಾಮಿಯು ಶರಪರಂಪರೆಯಿಂದ ಲಂಕೆಯನ್ನು ತುಂಬಿ, ರಾವಣನನ್ನು ಸಂಹರಿಸಿ ನನ್ನನ್ನು ಕೊಂಡುಹೋದರೆ ಅದು ಅವನ ಪರಾಕ್ರಮಕ್ಕೆ ಅನುರೂಪವಾಗುವುದು. ॥೩೦॥ ಯದ್ದರಲ್ಲಿ ಮಹಾಶೌರ್ಯವನ್ನು ತೋರುವ ಮಹಾತ್ಮನಾದ ಶ್ರೀರಾಮನ ಪರಾಕ್ರಮವು ಪ್ರಕಟವಾಗುವಂತಹ ಕಾರ್ಯವಿಧಾನವನ್ನು ರೂಪಿಸು. ॥೩೧॥

ಅರ್ಥವತ್ತಾದ, ಸ್ನೇಹಯುಕ್ತವಾದ ಹಾಗೂ ಯುಕ್ತಿಯುಕ್ತವಾದ ಸೀತಾದೇವಿಯ ಮಾತನ್ನು ಕೇಳಿ, ಹನುಮಂತನು ಕಡೆಯದಾಗಿ ತನ್ನ ಮಾತನ್ನು ಹೀಗೆ ಹೇಳಿದನು. ॥೩೨॥

ಅಮ್ಮಾ! ಸೀತಾದೇವಿ! ವಾನರ ಭಲ್ಲೂಕಗಳ ಸೈನ್ಯಕ್ಕೆ ಒಡೆಯನೂ, ಹಾರುವುದರಲ್ಲಿ ಅಗ್ರಗಣ್ಯನೂ, ಮಹಾಬಲ ಸಂಪನ್ನನೂ ಆದ ಸುಗ್ರೀವನು ನಿನ್ನ ವಿಮೋಚನೆಗಾಗಿ ಕೃತನಿಶ್ಚಯವನ್ನು ಮಾಡಿದ್ದಾನೆ. ॥೩೩॥ ವೈದೇಹೀ! ಅವನು ಕೋಟಿ-ಕೋಟಿ ವಾನರರಿಂದ ಒಡಗೂಡಿ, ರಾಕ್ಷಸರನ್ನು ಸಂಹರಿಸಲಿಕ್ಕಾಗಿ ಬಹಳ ಬೇಗ ಇಲ್ಲಿಗೆ ಬರುತ್ತಾನೆ. ॥೩೪॥ ಪರಾಕ್ರಮ ಸಂಪನ್ನರೂ, ಶಕ್ತಿಶಾಲಿಗಳೂ, ಮಹಾಬಲಿಷ್ಠರೂ ಮನೋವೇಗದಿಂದ ಒಂದೇ ಸೆಗತಕ್ಕೆ ಎಲ್ಲಿಂದರಲ್ಲಿಗೆ ಹಾರಿಹೋಗಬಲ್ಲರೂ ಆದ ವಾನರರು ರಾಜನ ಆಜ್ಞೆಯನ್ನು ಎಲ್ಲಾ ಹೊತ್ತಿನಲ್ಲಿ ಶಿರಸಾವಹಿಸುವವರು. ॥೩೫॥ ಭೂಮಿಯಲ್ಲಾಗಲೀ, ಆಕಾಶದಲ್ಲಾಗಲೀ, ವಿವಿಧ ದಿಕ್ಕುಗಳಲ್ಲಿ ಇರಲೀ, ಅವರಿಗೆ ತಡೆ-ತಡೆಗಳೇ ಇಲ್ಲ, ಅವರು ಅಮಿತ